UNIVERSAL
LIBRARY
OU_200494
UNIVERSAL
LIBRARY

OSMANIA UNIVERSITY LIBRARY

Call No K83 Sh53A Accession No K2841

Author

Title 1944

This book should be returned on or before the date last marked below

7-5-65

8 SEP 1964

11 MAR 1977

ಎರಡನೆಯ ಪ್ರಕಟಣೆ

# ಅರಗಿನ ಮನೆ

ಶರಚ್ಚಂದ್ರರ
'ಗೃಹದಾಹ'
ಕಾದಂಬರಿಯ ಅನುವಾದ

1944

ಕನ್ನಡಿಸಿದವರು :
[illegible]

ಸಾಹಿತ್ಯ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ಹುಬ್ಬಳ್ಳಿ

ಪ್ರಕಾಶಕರು :
ಮಂಗಳೂರು ಗೋವಿಂದರಾಯರು
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

Checked 1965 Checked 1969

HECKED 1956

ಬಿಳಿ ಸಾದಾ ಪ್ರತಿ ೪-೦-೦
ಉತ್ತಮ ಪ್ರತಿ ೪-೮-೦

೧೯೪೪

ಮುದ್ರಕರು :
ಪ್ರ. ಯು. ಜಠಾರ
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ
ಧಾರವಾಡ

# ಅರಗಿನ ಮನೆ

ಮಹಿಮನ ಪರಮ ಮಿತ್ರ ಸುರೇಶ. ಜೊತೆಯಾಗಿ ಎಫ್. ಎ. ಉತ್ತೀರ್ಣರಾದ ಬಳಿಕ, ಸುರೇಶ ಮೆಡಿಕಲ್ ಕಾಲೇಜ್ ಸೇರಿದ; ಮಹಿಮ ಸಿಟಿ ಕಾಲೇಜಿನಲ್ಲಿ ಉಳಿದ. ಆಗ ಸುರೇಶ ಅಭಿಮಾನಕ್ಷುಣ್ಣ ಸ್ವರದಿಂದ ಹೇಳಿದ "ಮಹಿಮ, ನಾನು ಹಗಲೆಲ್ಲ ಹೇಳುತ್ತ ಬಂದೆ— ಬಿ. ಎ., ಎಂ. ಎ. ಆದರೆ ಏನೂ ಪ್ರಯೋಜನವಿಲ್ಲ ಎಂದು ಈಗಲಾದರೂ ಸಾಕಾಯಿತು, ಮೆಡಿಕಲ್ ಕಾಲೇಜಿಗೇ ಬಾ."

ಮಹಿಮ ನಕ್ಕು, "ಅದೇನೋ ಸರಿ ವೆಚ್ಚದ ವಿಷಯ ಯೋಚಿಸಬೇಕವೆ?" ಎಂದ

"ಅದರ ವೆಚ್ಚವೇನು ನಿನಗೆ ನೀಗದಷ್ಟೆ? ಅಲ್ಲದೆ ಸ್ಕಾಲರಶಿಪ್ಪು ಇದೆ."

ಮಹಿಮ ನಗುಮೋರೆಯಿಂದ ಸುಮ್ಮನಿದ್ದ. ಸುರೇಶ ಅಧೀರನಾಗಿ ಹೇಳಿದ: "ಅಲ್ಲ, ನಗೆಯಲ್ಲ ಮಹಿಮ ಇನ್ನು ತಡವಾದರೆ ನಡೆಯದು ನಾಳೆಯೇ ಎಡ್ಮಿಶನ್ ಪಡೆಯಬೇಕು, ಅದಕ್ಕೇ ಹೇಳಿದೆ. ವೆಚ್ಚಗಿಚ್ಚದ ಮಾತು ಆ ಮೇಲೆ ನೋಡಿದರಾದೀತು"

"ಒಳ್ಳೆಯದು!"

"ನಿನ್ನ ಒಳ್ಳೆಯದು ಎಷ್ಟು ನಿಜವೋ ಎಷ್ಟು ಸುಳ್ಳೊ! ಬೀದಿಯೊಳಗೆ ನಿನ್ನನ್ನು ಒರೆಗೆ ಹಚ್ಚುವುದು ಬೇಡ. ಕಾಲೇಜಿನ ಹೊತ್ತಾಯಿತು. ನಾಳೆ ನಡೆದದ್ದರಲ್ಲಿ ಏನಾದರೊಂದು ಪಡಕ್ಕೆ ಹಚ್ಚಿಬಿಡುವೆ. ನಾಳೆ ಬೆಳಗ್ಗೆ ಮನೆಯಲ್ಲಿರು, ನಾ ಬರುತ್ತೇನೆ," ಎಂದು ಸುರೇಶ ಲಗುಬಗೆಯಿಂದ ಕಾಲೇಜಿನ ಹಾದಿ ಹಿಡಿದ.

ಹತ್ತುದಿನೈದು ದಿನ ಹೋದವು. ಮಹಿಮ ಎಲ್ಲಿಯೋ ಮೆಡಿಕಲ್ ಕಾಲೇಜಿನಲ್ಲಿಯೊ! ಒಂದು ರವಿವಾರ ಮಧ್ಯಾಹ್ನ ಸುರೇಶ ಅವನನ್ನು ಹುಡುಕಿಕೊಂಡು ಒಂದು ಅಷ್ಟದರಿದ್ರ ಛಾತ್ರಾವಾಸಕ್ಕೆ ಹೋದ. ಒಂದು ಕತ್ತಲುಕೋಣೆಯಲ್ಲಿ ನೆಲದಮೇಲೆ ಹರಕು ಚಾಪೆ ಹಾಕಿಕೊಂಡು ಆರೇಳು ಜನ ಊಟಕ್ಕೆ ಕುಳಿತಿದ್ದರು. ಮಹಿಮ ಅಕಸ್ಮಾತ್ ಮುಖವೆತ್ತಿ ಗೆಳೆಯ ಬಂತುದನ್ನು ನೋಡಿ, "ಒಮ್ಮೆಲೆ ವಸತಿ ಬದಲಿಸಬೇಕಾಯಿತು; ನಿನಗೆ ಹೇಳಲಿಕ್ಕಾಗಲಿಲ್ಲ; ಹೇಗೆ ಹುಡುಕಿದೆ?" ಎಂದ.

ಸುರೇಶ ಅವನ ಮಾತಿಗೆ ಉತ್ತರ ಕೊಡದೆ ಹೊಸತಿಲ ಮೇಲೆ ಥಪ್ಪನೆ ಕುಕ್ಕರಿಸಿದ ಎವೆಯಿಕ್ಕದೆ ಅವರ ಊಟವನ್ನೇ ನೋಡತೊಡಗಿದ. ಥಮ್ಮಕ್ಕಿಯ ಅನ್ನ, ನಿಕ್ಕಟಿನೀರು ಸಾರು, ಸೊಪ್ಪುದೇಟು ಏನೇನೋ ಹಾಕಿ ಕುಚ್ಚಿದ ಪಲ್ಯ, ಅದರ ಬದಿಯಲ್ಲಿ ಎರಡು ಹೊತ್ತಿದ ಕುಂಬಳಕಾಯಿ ಹೋಳು! ಹಾಲಿಲ್ಲ, ಮೊಸರಿಲ್ಲ, ಯೂಪ ವಿಷ್ಟವೂ ಇಲ್ಲ! ಆ ಅಡಿಗೆಯಲ್ಲಿಯೇ ಎಲ್ಲರಿಗೂ ಒಳ್ಳೆಯ ಪರಿತೃಪ್ತಿ, ಎಷ್ಟೂ ಅಸಮಾಧಾನವಿಲ್ಲ! ನೋಡಿದ ಸುರೇಶನ ಕಣ್ಣಲ್ಲಿಯೇ ನೀರು ಬಂತು. ಮುಖ ತಿರುಗಿಸಿ ಕಂಬನಿ ಮಿಡಿದು ಎದ್ದು ನಿಂತ ಸಾಧಾರಣ ವಿಷಯಕ್ಕೂ ಹೀಗಾಗುವುದು ಸುರೇಶನಿಗೆ.

ಊಟ ಮುಗಿಸಿ ಮಹಿಮ ಗೆಳೆಯನನ್ನು ತನ್ನ ಕ್ಷುದ್ರ ಹಾಸಿಗೆಯಲ್ಲಿ ಕರೆದೊಯ್ದು ಕುಳ್ಳಿರಿಸಿದ ಸುರೇಶ ರುದ್ಧಸ್ವರದಿಂದ, "ನಿನ್ನ ಅನ್ಯಾಯ ಎಷ್ಟೆಂತ ಸಹಿಸಲಿ ಮಹಿಮ!" ಎಂದ

"ಹಾಗೆಂದರೆ?"

"ಹಾಗೆಂದರೇ?—ಇಂತಹ ಕೆಟ್ಟ ಮನೆ ಎಲ್ಲಿಯಾದರೂ ಇದ್ದಿರಬಹುದು. ಆದರೆ ಇಂತಹ ಭಯಂಕರ ಹೊಲಸು ಊಟ ಮನುಷ್ಯರು ಉಣ್ಣುವುದೆ? ಕಣ್ಣಾರೆ ಕಂಡಿರದಿದ್ದರೆ ನಾನೇನು ನಂಬುತ್ತಿರಲಿಲ್ಲ. ಅಲ್ಲ, ಈ ಸ್ಥಳ ಹೇಗೆ ಹುಡುಕಿದೆಯಪ್ಪ! ಹಳೆಯ ವಸತಿಯನ್ನು—ಅದೆಷ್ಟು ಕೆಟ್ಟದಿದ್ದರೂ ಇದಕ್ಕೆ ಸರಿಬಾರದು—ಏಕೆ ಬಿಟ್ಟೆ?"

ಮಿತ್ರ ಸ್ನೇಹ ಮಿತ್ರನನ್ನು ತಾಗಿತು ಇನ್ನು ನಿರ್ವಿಕಾರ ಗಾಂಭೀರ್ಯವನ್ನು ಕಾಯ್ದುಕೊಳ್ಳುವುದು ಮಹಿಮನಿಗಾಗಲಿಲ್ಲ. ಆರ್ದ್ರಸ್ವರದಿಂದ ಹೇಳಿದ: "ನಮ್ಮೂರ ಮನೆ ನೀ ನೋಡಿಲ್ಲ ಸುರೇಶ; ನೋಡಿದ್ದರೆ ಈ ಮನೆಯಿಂದ ನನಗೇನೂ ವ್ಯಥೆಯಿಲ್ಲವೆಂದು ತಿಳಿಯುತ್ತಿತ್ತು. ಮತ್ತೆ ಊಟ— ಮಿಕ್ಕವರೂ ಉಣ್ಣುತ್ತಾರಲ್ಲ, ನನಗೇಕೆ ಆಗದು?"

ಸುರೇಶ ಉತ್ತೇಜಿತನಾಗಿ ನುಡಿದ: "'ಏಕೆ' ಎಂಬುದು ವಿಷಯವಲ್ಲ. ಜಗತ್ತಿನಲ್ಲಿ ಚೆಲೋ ಕೆಟ್ಟ ಎರಡೂ ಇರುವವೇ. ಆದರೆ ಚೆಲೋದ್ದು ಚೆಲೋ ಹತ್ತುವುದು, ಕೆಟ್ಟುದು ಕೆಟ್ಟ ಹತ್ತುವುದು ನಿಃಸಂದೇಹ. ಇಷ್ಟು ಕಷ್ಟಬಡುವ ಅಗತ್ಯವೇನು ಎಂಬುದೇ ನನಗೆ ಬೇಕಾದುದು."

ಮಹಿಮ ಮೆಲುನಗೆ ನಗುತ್ತ ಮೌನವಾಗಿದ್ದ. ಸುರೇಶ [illegible]

"ನಿನ್ನ ಅಗತ್ಯ ನಿನಗಿರಲಿ, ನನಗೆ ತಿಳಿಯಬೇಕಾಗಿಲ್ಲ. ಆದರೆ ನಿನ್ನನ್ನು ಉದ್ಧರಿಸುವುದು ನನ್ನ ಅಗತ್ಯ. ಒಂದು ಎಕ್ಕ ತಂದು ನಿನ್ನ ಸಾಮಾನು ನಮ್ಮ ಮನೆಗೆ ಹೇರಿಸುವೆ. ನಿನ್ನನ್ನಿಲ್ಲಿ ಚೆಲ್ಲಿಕೊಟ್ಟು ಹೋದರೆ ನನಗೆ ಊಟ ಸೇರದು, ನಿದ್ದೆ ಬಾರದು. ಎಲ್ಲಿ, ಆಳನ್ನು ಕರೆ, ಎಕ್ಕ ತರಲಿ," ಎಂದು ಮಹಿಮನನ್ನು ಹಿಡಿದೆತ್ತಿ, ಹಾಸಿಗೆ ಸುತ್ತತೊಡಗಿದ. ಮಹಿಮ ಕೊಸರಲಿಲ್ಲ ತಡೆಯಲಿಲ್ಲ. ಶಾಂತಗಂಭೀರ ಸ್ವರದಿಂದ, "ಹುಚ್ಚುಚ್ಚಾರ ಮಾಡಬೇಡ ಸುರೇಶ," ಎಂದ.

"ಹುಚ್ಚುಚ್ಚಾರ ಎಂಥದು? ಬರುವುದಿಲ್ಲವೆ?"

"ಇಲ್ಲ."

"ಏಕೆ? ನಾ ನಿನಗೆ ಏನೂ ಅಲ್ಲವೆ? ನಮ್ಮನೆಗೆ ಬರಲಿಕ್ಕೆ ನಿನಗೆ ಅವಮಾನ ಎನಿಸುವುದೆ?"

"ಇಲ್ಲ."

"ಹಾಗಾದರೆ?"

"ಸುರೇಶ, ನಿನ್ನಂಥ ಗೆಳೆಯ ನನಗೆ ಮತ್ತೊಬ್ಬರಿಲ್ಲ. ಇಂಥ ವಸ್ತುವನ್ನು ಅಲ್ಪಸುಖಕ್ಕಾಗಿ ಕಳೆದುಕೊಂಡೇನೆ? ನಾನಷ್ಟು ತಿಳಿಗೇಡಿಯೆ?"

"ಗೆಳೆತನ ನಿನ್ನೊಬ್ಬನದೇ ಸೊತ್ತಲ್ಲ, ಮಹಿಮ; ನಾನೂ ಪಾಲುಗಾರ. ಅದು ಕಳೆದರೆ ಎಂತಹ ಮಹಾನಷ್ಟ, ಹೇಳಲಸಾಧ್ಯ.— ನಾನಷ್ಟು ಮೂರ್ಖನೆ? ಮತ್ತೀಪರಿ ಲೆಕ್ಕಹಾಕಿ ತೂಕದಿಂದ ನಡೆಯದೆ ಹೋದುದಕ್ಕೆ ಗೆಳೆತನ ನಷ್ಟವಾಗುವುದಾದರೆ ಆಗಲೊಲ್ಲದೇಕೆ ಮಹಿಮ! ಅದರ ಬೆಲೆ ಇಷ್ಟೇ ತಾನೆ: ಶರೀರಸುಖದ ಉಪೇಕ್ಷೆ!"

ಮಹಿಮ ನಕ್ಕು ನುಡಿದ: "ಊಂಹೂಂಹೂ! ನಾನೀಗ ಸೋತೆ. ಆದರೊಂದು ಮಾತು ಸ್ಪಷ್ಟ ಹೇಳುತ್ತೇನೆ. ಗೆಳೆತನಕ್ಕೋಸುಗ ನಾನಿಲ್ಲಿ ಕಷ್ಟಬಡುತ್ತೇನೆಂದು ನೀ ತಿಳಿದಿದ್ದೀ; ಅದು ತಪ್ಪು."

"ತಪ್ಪಾದರೆ ಒಳ್ಳೆಯದೇ. ನನಗೆ ಕಾರಣ ಬೇಕಾಗಿಲ್ಲ [illegible], ದುಡ್ಡು ಉಳಿಸುವುದೇ ಆಗಿದ್ದರೆ ನಮ್ಮ ಮನೆಯಲ್ಲಿರಲ್ಲ. ಅದರಿಂದ ನಿನ್ನ [illegible]ವೇನೂ ಹಾಳಾಗುವುದಿಲ್ಲ."

ಮ ಗೋಣುಹಾಕಿ ಸಂಕ್ಷೇಪವಾಗಿ ಹೇಳಿದ: "ಇಷ್ಟು ಸಾ[illegible]ವಾಗಿಯೂ ಕಷ್ಟ ಇದ್ದರೆ ತಿಳಿಸುವೆ."

ಮಹಿಮನ ಸಂಕಲ್ಪ ತಿರುಗಿಸುವುದು ಬ್ರಹ್ಮದೇವರ ಅಪ್ಪನಿಗೂ ಸಾಧ್ಯವಿಲ್ಲ ಅದನ್ನು ಸುರೇಶ ಬಲ್ಲ ಅವನು ಮತ್ತೆ ಹಟವಾದ ಹೂಡದೆ ಸಿಟ್ಟು ಸಿಟ್ಟಿಲಿ ಹೊರಟುಹೋದ ಆದರೂ ಗೆಳೆಯನ ಆ ಇರುವಿಕೆ, ಆ ಊಟ ಕಣ್ಣಾರೆ ಕಂಡು ಅವನ ಮನಸಿಗೆ ಸೂಜಿ ಚುಚ್ಚಿದಂತಾಗುತ್ತಿತ್ತು

ಸುರೇಶ ಶ್ರೀಮಂತರ ಹುಡುಗ ಅವನಿಗೆ ಮಹಿಮನಲ್ಲಿ ನಿಷ್ಕಪಟ ಪ್ರೀತಿ ಗೆಳೆಯನಿಗೆ ಯಾವ ರೀತಿಯಲ್ಲಾದರೂ ತಾನು ಉಪಯೋಗ ಬೀಳಬೇಕೆಂದು ಅವನ ಅಂತರಂಗದ ಆಕಾಂಕ್ಷೆ. ಆದಕ್ಕೆ ಮಹಿಮನನ್ನು ಒಮ್ಮೆಯೂ ಒಪ್ಪಿಸಲಾರದೆ ಹೋಗಿದ್ದ, ಇಂದೂ ಅದೇ ಹಾಡು.

೨

ಐದು ವರುಷಗಳ ತರುವಾಯ

" ನಿನ್ನ ಬಗ್ಗೆ ಎಷ್ಟು ಶ್ರದ್ಧೆಯಿತ್ತೆಂದೆ ಮಹಿಮ, ಹೇಳಲಾರೆ "

" ಹೇಳಬೇಕೆಂದು ನನ್ನ ಒತ್ತಾಯವಿಲ್ಲ "

" ಅದೀಗ ಉಳಿದಿಲ್ಲ "

" ಉಳಿಯದಿದ್ದರೆ ದಂಡಿಸುವೆನೆಂದು ನಾನೇನು ಬೆದರಿಸಿಲ್ಲವಲ್ಲ ! "

" ನಿನ್ನ ಮೇಲೆ ಕಪಟತನ ಆರೋಪಿಸುವುದು ಕಡುವೈರಿಗೂ ಸಾಧ್ಯವಿಲ್ಲ "

"ಶತ್ರುವಿಗೆ ಸಾಧ್ಯವಿಲ್ಲದ್ದು ಮಿತ್ರನಿಗೆ ಅಸಾಧ್ಯವೆಂದು ದರ್ಶನ ಶಾಸ್ತ್ರದ ನಿಯಮವೇನಿಲ್ಲ."

" ಛೆ ಛೆ ಅಲ್ಲ, ಕೊನೆಗೆ ಬ್ರಾಹ್ಮ ಹುಡುಗಿಯನ್ನೇ ಗಂಟುಹಾಕಿ ಕೊಳ್ಳುವೆಯಾ ? ಅವಳಲ್ಲಿ ಅಂಥದಿದೆಯಾದರೂ ಏನು ? ಮುಖ ಒಣ ಕಟ್ಟಿಗೆ ಮೋರೆಗೆ ಪುಸ್ತಕ ಹಿಡಿದುಕೊಂಡು ಕುಳಿತು ಕುಳಿತೇ ಮೈಯಲ್ಲಿ ಚಿವುಟಿದರೆ ಹನಿ ರಕ್ತವಿಲ್ಲದಂತಾಗಿರಬೇಕು. ದೇಹ, ತುಸ ತಾಗಿದರೆ ಒಂದರ್ಧ ಎಲ್ಲಿ ಕಳಚಿಬೀಳುವುದೋ ಎಂದು ಭಯವಾಗುವಂತಿದೆ ! ದನಿಯೋ, ಗೊಂಯ್ ಗೊಂಯ್, ಕೇಳುವುದಕ್ಕೇ ಜುಗುಪ್ಸೆಯಾಗುವುದು!"

" ಅದೆಲ್ಲ ನಿಜ ! "

" ನೋಡು ಮಹಿಮ, ಬ್ರಾಹ್ಮಕನ್ಯೆಯನ್ನು ನೋಡಿರದ ನಿಮ್ಮ ಹಳ್ಳಿ ಜನಕ್ಕೆ ತಮಾಷೆ ಮಾಡು. ಹೆಂಗುಸು ಇಂಗ್ಲಿಷ್ ವಿಳಾಸ ಬರೆಯುವಳೆಂದರೆ ಬೆರಗುಬೆಪ್ಪಾಗುವ ಅವರು, ಇವಳು ಹೋಗುತ್ತಿದ್ದರೆ ಆದರದಿಂದ ದೂಡ

ಸರಿದು ನಿಲ್ಲುವರು, ದೇವಿಯೆಂದು ನೆಲಮುಟ್ಟಿ ನಮಸ್ಕರಿಸುವರು ಆದರೆ ನಾವು ಹಳ್ಳಿಯವರಲ್ಲ, ಅಷ್ಟು ಸಹಜವಾಗಿ ಮರುಳಾಗುವರಲ್ಲ"

"ಆಣೆ ಮಾಡಿ ಹೇಳುವೆ ಸುರೇಶ, ನಿಮ್ಮ ಪಟ್ಟಣಿಗರನ್ನು ಬೆರಗಾಗಿಸಬೇಕೆಂಬ ದುರ್ಬುದ್ಧಿಯೇನು ನನಗಿಲ್ಲ ಅವಳನ್ನು ನಮ್ಮ ಹಳ್ಳೂರಿಗೇ ಕರೆದೊಯ್ಯುವೆ. ಎಂದರೆ ನಿನ್ನ ಅಡ್ಡಿಯಿಲ್ಲವಲ್ಲ?"

ಸುರೇಶ ರೇಗಿದ. "ಅಡ್ಡಿಯಿಲ್ಲ? ನೂರು, ಸಾವಿರ, ಲಕ್ಷ, ಕೋಟಿ ಅಡ್ಡಿಗಳಿವೆ! ನೀನು ಸಮಸ್ತ ಜಗತ್ತಿಗೇ ವರೇಣ್ಯವಾದ ಪೂಜ್ಯ ಹಿಂದೂ ಧರ್ಮದ ಪುತ್ರನಾಗಿ, ಒಬ್ಬ ರಮಣಿಯ ಮೋಹದಿಂದ ಜಾತಿಗೆಡುವೆಯಾ? ಮೋಹ! ಒಮ್ಮೆ ಅವಳ ಬೆಡಗಿನ ಉಡಿಗೆತೊಡಿಗೆ ತೆಗಿಸಿ, ಕಾಲ್ಮರೆ ಕಾಲು ಚೀಲ ಬಿಡಿಸಿ, ನಮ್ಮ ಗೃಹಲಕ್ಷ್ಮಿಯರ ಬಣ್ಣದ ಸೀರೆ ಉಡಿಸಿ ನೋಡಿಯಾದರೂ ನೋಡು, ಮೋಹ ಇಳಿಯುವುದೋ ಇಲ್ಲವೋ! ನಿರ್ಜೀವ ಕಟ್ಟಿಗೆಗೊಂಬೆಯ ರೂಪ ನೋಡಿ ಭ್ರಮೆ ಬಯಲಾಗುವುದೋ ಇಲ್ಲವೋ! ಏನಿದೆ ಅವಳಿಗೆ? ಹೊಲಿಗೆ-ಹೆಣಿಕೆ ಬೇಕೆ? ಕಲಕತ್ತಾನಗರದಲ್ಲಿ ಸಿಂಪಿಗರ ಕೊರತೆಯಿಲ್ಲ ವಿಳಾಸ ಬರೆಸುವುದಕ್ಕಾಗಿ ಬ್ರಾಹ್ಮಹುಡುಗಿಯ ಬಾಗಿಲಿಗೆ ಹೋಗುವ ಅಗತ್ಯ ನಿನಗಿಲ್ಲ ಅವಳು ಒಂದು ತುತ್ತು ಅನ್ನ ಕುಚ್ಚಿ ಹಾಕಬಲ್ಲಳೆ? ಜಡ್ಡು ಜಾಪತ್ರಿನಲ್ಲಿ ಆರೈಕೆ ಮಾಡಬಲ್ಲಳೆ? ಅವಳಿಗೇನು ಬರುವುದು? ಕೆಟ್ಟ ಕಾಲ ಬಂದಾಗ— ದೇವರು ಅಂಥ ಹೊತ್ತು ತಾರದಿರಲಿ— ಅವಳು ನಿನ್ನನ್ನು ಬಿಟ್ಟುಹೋಗದಿದ್ದರೆ, ನನ್ನ ಸುರೇಶನೆಂದು ಕರೆಯಬೇಡ," ಎಂದ

ಮಹಿಮ ಸುಮ್ಮನಿದ್ದ. ಸುರೇಶ ಮತ್ತೆ ಹೇಳತೊಡಗಿದ. "ಮಹಿಮ, ನೀನೂ ಬಲ್ಲೆ— ನಾ ನಿನ್ನ ಹಿತವನ್ನೇ ಕೋರುವೆ. ಬ್ರಾಹ್ಮ ಹುಡುಗಿಯರನ್ನು ಅನೇಕ ನೋಡಿದ್ದೇನೆ. ಒಬ್ಬರಿಬ್ಬರು ಚೆಲೋ ಮಹಿಳೆಯರನ್ನೂ ನೋಡಿದ್ದೇನೆ ಆದರೆ ನಮ್ಮ ಹಿಂದುಮಹಿಳೆಯರ ಪಾಸಟಿಯಾಗರು. ನಿನಗೆ ಮದುವೆಯ ಇಚ್ಛೆಯೇ ಇದ್ದರೆ ನನಗೆ ಹೇಳಬೇಕಿತ್ತು. ಒಳ್ಳೆಯದು. ಈಗ ಆದುದಾಯಿತು ಇನ್ನಲ್ಲಿಗೆ ಹೋಗುವ ಅಗತ್ಯವಿಲ್ಲ ಒಂದು ತಿಂಗಳೊಳಗೆ ಉತ್ತಮ ಕನ್ಯೆ ನಾ ಹುಡುಕಿಕೊಡುವೆ ಇಡೀ ಜೀವನದಲ್ಲಿ ಎಂದೂ ದುಃಖವಾಗಲಿಕ್ಕಿಲ್ಲ ನಿನಗೆ. ಇದಾಗದಿದ್ದರೆ ನೀ ನಿನ್ನ ಹಾದಿ ನೋಡುವೆಯಂತೆ, ಈಕೆಯ ಶ್ರೀಚರಣದಲ್ಲಿಯೇ ಹಣೆ ಹಿಕ್ಕುವೆ

ಕುಂತೆ! ನಾ ಬೇಡ ಎನ್ನುವುದಿಲ್ಲ. ಒಂದೇ ಒಂದು ತಿಂಗಳು ತಾಳು, ಆಶೈಶವ ಮಿತ್ರತ್ವದ ಮಾನ ಕಾಯಿ. ಏನು, ಕಾಯುವೆಯಾ?"

ಮಹಿಮ ಮತ್ತೂ ಸುಮ್ಮನಿದ್ದ. ಹೂಂ ಇಲ್ಲ, ಉಂಹೂ ಇಲ್ಲ. ಆದರೆ ಸುರೇಶ ಗೆಳೆಯನ ಶುಭಾಕಾಂಕ್ಷೆಗಾಗಿ ಮರ್ಮಾಂತಿಕ ವಿಚಲಿತನಾಗಿದ್ದಾನೆಂಬುದನ್ನು ಪೂರ ಮನಗಂಡ.

ಸುರೇಶ ನುಡಿದ. "ನೆನಪಿದೆಯೆ ಮಹಿಮ? ನೀನು ಬ್ರಾಹ್ಮ ಮಂದಿರಗಳಿಗೆ ಹೋಗತೊಡಗಿದಾಗಲೇ ಮತ್ತೆ ಮತ್ತೆ ನಾ ಬೇಡವೆನ್ನಲಿಲ್ಲವೆ? ಇಂತಹ ಮಹಾನಗರದೊಳಗೆ ನಿನಗೊಂದೂ ಹಿಂದೂಮಂದಿರ ಇರಲಿಲ್ಲವೆ? ಈ ಕಪಟತೆಯ ಅಗತ್ಯ ಏನಿತ್ತು? ಈ ತರದ ಒಂದಿಲ್ಲೊಂದು ವಿಡಂಬನೆಯಲ್ಲಿ ಕೊನೆಗೆ ನೀ ಸಿಕ್ಕುಬೀಳುವೆ ಎಂದು ನನಗಾಗಲೇ ಅನುಮಾನವಿತ್ತು."

ಈಗ ಮಹಿಮ ನಸುನಕ್ಕು ಮಾತನಾಡಿದ "ನಿನಗೇಕೆ ಅನುಮಾನವೊ? ನನಗೇನು ಇರಲಿಲ್ಲ. ಅಲ್ಲಿ ಹೋಗುವುದರಲ್ಲಿ ನನ್ನ ಕಪಟತನ ಇದ್ದಿತೆ? ಆದರೆ ಒಂದು ಮಾತು ಕೇಳುವೆ ಸುರೇಶ,— ನೀ ದೇವರನ್ನೇ ನಂಬದವ, ಹಿಂದುದೇವದೇವತೆಗಳನ್ನು ಮನ್ನಿಸುವೆಯಲ್ಲ! ನಾ ಬ್ರಾಹ್ಮ ಮಂದಿರಕ್ಕೇ ಹೋಗಲಿ, ಹಿಂದು ಮಂದಿರಕ್ಕೇ ಹೋಗಲಿ, ನಿನಗೇನು!"

ಸುರೇಶ ದೃಢತೆಯಿಂದ ಹೇಳಿದ. "ಇಲ್ಲದುದನ್ನು ನಾನು ನಂಬುವುದಿಲ್ಲ, ಒಪ್ಪುವುದಿಲ್ಲ. ಭಗವಂತ ಇಲ್ಲ, ದೇವರು ದಿಂಡರು ಸುಳ್ಳುಮಾತು. ಆದರೆ ಇದ್ದುದನ್ನು ಅಲ್ಲಗಳೆಯುವುದಿಲ್ಲ ಸಮಾಜದಲ್ಲಿ ನನಗೆ ಶ್ರದ್ಧೆಯಿದೆ. ಜನಕ್ಕೆ ಮಾನ ಕೊಡುವೆ. ಜನಸೇವೆಯೇ ಮನುಷ್ಯಜನ್ಮದ ಚರಮ ಸಾರ್ಥಕತೆ ಎಂದು ತಿಳಿಯುವೆ. ಹಿಂದುವಾಗಿ ಹುಟ್ಟಿದ ಬಳಿಕ ಹಿಂದು ಸಮಾಜದ ರಕ್ಷಣೆ ನನ್ನ ಕರ್ತವ್ಯ. ಜೀವಹೋದರೂ ಬ್ರಾಹ್ಮ ಮನೆತನದೊಡನೆ ಸಂಬಂಧ ಬೆಳೆಸಿ ಅದನ್ನು ಬೆಳೆಸಗೊಡುವುದಿಲ್ಲ ಕೇದಾರ ಮುಖುಯ್ಯರ ಹುಡುಗಿಗೆ ಮದುವೆಯ ಮಾತು ಕೊಟ್ಟಿರುವೆಯಾ?"

"ಇಲ್ಲ, ಅದ್ಯಾಪಿ ಮಾತಂತೇನೂ ಕೊಟ್ಟಿಲ್ಲ."

"ಕೊಟ್ಟಿಲ್ಲವೆ! ಚೆಲೊ! ಸುಮ್ಮನಿದ್ದುಬಿಡು. ಒಂದು ತಿಂಗಳೊಳಗೆ ನಾ ಮದುವೆ ಮಾಡುತ್ತೇನೆ."

" ನನಗೆ ಮದುವೆಯ ಹುಚ್ಚೆಂದು ಯಾರೆಂದರು? ನೀನೂ ಸುಮ್ಮ ನಿದ್ದು ಬಿಡು. ಬೇರೆಯ ಮದುವೆ ಅಸಂಭವ.''

" ಏಕೆ? ಏನು ಮಾಡಬೇಕೆನ್ನುವೆ? ಆ ಹೆಣ್ಣನ್ನೇ ಪ್ರೀತಿಸುವೆಯಾ?"

" ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಸನ್ಮಹಿಳೆಯ ಬಗ್ಗೆ ಆದರವಿಟ್ಟು ಮಾತಾಡು, ಸುರೇಶ."

" ಅದು ನನಗೆ ಗೊತ್ತು, ನೀ ಕಲಿಸಬೇಕಾಗಿಲ್ಲ. ಇರಲಿ. ಆ ಮಹಿಳೆಯ ವಯಸ್ಸೆಷ್ಟು ? "

" ಗೊತ್ತಿಲ್ಲ. "

" ಗೊತ್ತಿಲ್ಲ ? ಇಪ್ಪತ್ತು, ಇಪ್ಪತ್ತೈದು, ಮೂವತ್ತು, ನಾಲ್ವತ್ತು ಅಥವಾ ಅದಕ್ಕೂ ಹೆಚ್ಚು—ಏನೂ ಗೊತ್ತಿಲ್ಲವೆ ? "

" ಇಲ್ಲ. "

" ನಿನಗಿಂತ ಕಿರಿಯಳೋ ಹಿರಿಯಳೋ ಅದೂ ಗೊತ್ತಿಲ್ಲವೆಂದು ಕಾಣುತ್ತದೆ ! "

" ಇಲ್ಲ "

" ನಿನಗೆ ಬಲೆ ಬೀಸಿದ್ದಾಳೆಂದ ಮೇಲೆ ಕಸಕು ಇರಲಾರಳೆಂದು ಅನುಮಾನಿಸಿದರೆ ಅಸಂಗತವಾಗದು. ಏನೆಂದೆ ? "

" ಅಲ್ಲ, ನಿನಗೆ ಯಾವುದೂ ಅಸಂಗತವಲ್ಲ ಆಯ್ತು, ನನಗೀಗ ಕೆಲಸವಿದೆ, ಹೊರಗೆ ಹೋಗಬೇಕು. "

" ಒಳ್ಳೆಯದು. ನನಗೂ ಈಗ ಕೆಲಸವಿಲ್ಲ. ನಡೆ, ನಿನ್ನೊಂದಿಗೆ ಒಂದಿಷ್ಟು ಅಡ್ಡಾಡಿದರಾಯಿತು. "

ಇಬ್ಬರೂ ಹೊರಬಿದ್ದು ಬೀದಿಗೆ ಬಂದರು. ಸ್ವಲ್ಪಹೊತ್ತು ಮೌನ ವಾಗಿ ಸಾಗಿದ ಬಳಿಕ ಸುರೇಶ ನಿಧಾನವಾಗಿ ಮಾತೆತ್ತಿದ. " ನಿನಗಿಂದು ಬೇಕೆಂತಲೇ ತೊಂದರೆ ಕೊಡುತ್ತಿದ್ದೇನೆ ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲವಷ್ಟೆ ? "

" ಇಲ್ಲ "

ಸುರೇಶ ಮೃದುಸ್ವರದಿಂದ ಕೇಳಿದ: " ನಾನು ತೊಂದರೆ ಏಕೆ ಕೊಟ್ಟೆ ? "

ಮಹಿಮ ನಕ್ಕು ಹೇಳಿದ. "ಮೊದಲು ಹೇಳದಿದ್ದರೂ ತಿಳಿಯು

ತ್ರಿತ್ತಿಂದ ಮೇಲೆ ಇದನ್ನೀಗ ಹೇಳಬೇಕಾದ ಅಗತ್ಯವಿಲ್ಲ ಎಂದೆನಿಸುತ್ತದೆ ”

ಅವನ ಒಂದು ಕೈ ಸುರೇಶನ ಕೈಯಲ್ಲಿತ್ತು ಆರ್ದ್ರ ಹೃದಯದಿಂದ ಅದನ್ನು ಕೊಂಚ ಹಿಸುಕಿ ಸುರೇಶ ಎಂದ “ ಇಲ್ಲ ಮಹಿಮ, ನಿನಗೆ ಹೇಳಿನ್ನಲಿಲ್ಲ ಜಗತ್ತಿನೊಳಗೆ ತಪ್ಪು ತಿಳುವಳಿಕೆಯಾಗುವುದುಂಟು. ಆದರೆ ನನ್ನ ನೀ ತಪ್ಪು ತಿಳಿಯಲಾರೆ ಆದರೂ ಈವೊತ್ತು ಇದಿರಾ ಇದಿರು ಹೇಳುತ್ತೇನೆ,—ನನಗೆ ನಿನ್ನಲ್ಲಿ ಎಷ್ಟು ಪ್ರೀತಿ! ಅದರ ಒಂದರ್ಥವನ್ನೂ ನೀ ಹೊಂದಲಿಲ್ಲ ನೀ ಒಪ್ಪಲಿಕ್ಕಿಲ್ಲ ನಿನ್ನ ಒಂದಿಷ್ಟು ಕ್ಲೇಶವೂ ನನಗೆ ಸಹಿಸದು ಚಿಕ್ಕಂದಿನಲ್ಲಿ ಇದಕ್ಕಾಗಿಯೇ ಎಷ್ಟು ಜಗಳಾಟ ಆಗಿವೆ, ನೆನಸಿಕೋ ಈಗ ಇಷ್ಟು ದಿನಗಳ ತರುವಾಯ ಅವಳಿಗಾಗಿ ನನ್ನ ಬಿಡುತ್ತಿರುವೆ, ಆಕೆಯಿಂದ ಜೀವನ ಸುಖಮಯವಾಗುವುದೆಂದು ನಿಶ್ಚಯವಾಗಿಯೂ ತಿಳಿದಿದ್ದರೆ, ನನ್ನ ದುಃಖಗಳನ್ನೆಲ್ಲ ನಗುಮೋರೆಯಿಂದ ಸಹಿಸಿಕೊಳ್ಳುವೆ, ಪಿಟ್ಟೆನ್ನುವುದಿಲ್ಲ ”

“ ಆಕೆಯಿಂದ ಸುಖವಾಗಲಿಕ್ಕಿಲ್ಲ ಎನ್ನು, ಆದರೆ ನಿನ್ನ ಬಿಡುವೆನೆಂದು ಹೇಗೆನ್ನುತ್ತೀ ? ”

“ ನೀ ಬಿಡು, ಇಲ್ಲ ಹಿಡಿ ನಿನ್ನ ನಾ ಬಿಡುವೆ ”

“ ಏಕೆ ? ನಾನೇನೋ ನಿನ್ನೊಬ್ಬ ಬ್ರಾಹ್ಮಮಿತ್ರನಾಗಿ ಇರಬಲ್ಲೆ ”

“ ಇಲ್ಲ, ಅದು ಸಾಧ್ಯವಿಲ್ಲ ಬ್ರಾಹ್ಮರನ್ನು ನಾನು ಕಣ್ಣಿಂದಲೂ ನೋಡಲಾರೆ ಬ್ರಾಹ್ಮ ನನಗೊಬ್ಬನೂ ಮಿತ್ರನಲ್ಲ ”

“ ಏಕೆ ನೋಡುವುದಿಲ್ಲ ? ”

“ ಕಾರಣ ಅನೇಕ ಒಂದು, ನಮ್ಮ ಸಮಾಜವನ್ನು ಕೆಟ್ಟದೆಂದು ತೊರೆದುಹೋದವರನ್ನು ಉತ್ತಮರೆಂದು ಎಣಿಸಲಾರೆ. ನಮ್ಮ ಸಮಾಜದ ಬಗ್ಗೆ ನನಗೆಷ್ಟು ಅಭಿಮಾನ ಎಂಬುದು ನಿನಗೆ ಗೊತ್ತು. ಈ ಸಮಾಜವನ್ನು ಕಂಡವರೆದುರು ಸಿಕ್ಕಾಪಟ್ಟೆ ಆಡಿಕೊಳ್ಳುವವರು— ಅವರ ಉತ್ತಮಿಕೆ ಅವರಿಗಿರಲಿ— ನಮಗೆ ಶತ್ರುಗಳು.”

ಮಹಿಮನಿಗೆ ಒಳಗೊಳಗೆ ಸಹಿಸದಂತಾಯಿತು. “ ಈಗ ಏನು ಮಾಡಬೇಕೆನ್ನುತ್ತಿ ? ” ಎಂದ.

“ ಇಷ್ಟೊತ್ತನಕ ಹೇಳಿದೆನಲ್ಲ ಅದೇ ”

“ ಒಳ್ಳೆಯದು, ಇನ್ನೊಮ್ಮೆ ಹೇಳು ”

"ಹೇಗಾದರೂ ಮಾಡಿ ಈ ಯುವತಿಯ ಮೋಹ ಬಿಡಬೇಕು. ಕೊನೆಗೆ, ಒಂದು ತಿಂಗಳಾದರೂ ಅವಳನ್ನು ಕಾಣಕೂಡದು."

"ಆದರೆ ಆ ಮೋಹವೇ ಕಡಿಯದಿದ್ದರೆ? ಅಥವಾ ಮೋಹಕ್ಕಿಂತ ಹೆಚ್ಚಿನದು ಮತ್ತೇನಾದರೂ ಇದ್ದರೆ"

ಸುರೇಶ ಕ್ಷಣ ಯೋಚಿಸಿ, "ಅದೆಲ್ಲ ನನಗೆ ತಿಳಿಯದು ಮಹಿಮ; ನಿನ್ನ ಪ್ರೀತಿಸುವುದಷ್ಟು ಬಲ್ಲೆ ಇದಕ್ಕಿಂತ ಎಷ್ಟೋಪಟ್ಟು ಸಮಾಜವನ್ನು ಪ್ರೀತಿಸುವೆ ಒಂದಿಷ್ಟು ನೆನಪು ಮಾಡಿಕೋ— ಚಿಕ್ಕಂದಿನಲ್ಲಿಯ ಆ ಸಿದುಬುಬೇನೆಯ ವಿಷಯ, ಮತ್ತೆ ಮುಂಗೇರರ ಗಂಗೆಯಲ್ಲಿ ನಾವು ಮುಳುಗಿ ಇಬ್ಬರೂ ಸತ್ತೇ ಹೋಗಿದ್ದುದನ್ನು ಮರೆತು ಹೋದುದನ್ನು ನೆನಪು ಮಾಡಿದುದಕ್ಕೆ ಕ್ಷಮಿಸು ಮಹಿಮ ಇನ್ನೇನು ಹೆಚ್ಚಿಗೆ ಹೇಳುವುದಿಲ್ಲ ಹೋಗುತ್ತೇನೆ" ಎಂದು ಸುರೇಶ ಪಕ್ಕನೆ ಹಿಂದಕ್ಕೆ ಹೊರಳಿ ದ್ರುತಗತಿಯಿಂದ ಹೊರಟುಹೋದ

೩

ಸುರೇಶನ ಶರೀರ ಕಠಿನವಿದ್ದಷ್ಟೂ ಅಂತಃಕರಣ ಕೋಮಲ, ಸ್ನೇಹಶೀಲ ಗುರುತಿದ್ದವರಿರಲಿ ಇಲ್ಲದವರಿರಲಿ, ಯಾರ ಕಷ್ಟ ದುಃಖ ಕೇಳಿದರೂ ಅವನಿಗೆ ಕಂಬನಿ ಬರುವುದು ಚಿಕ್ಕವನಿದ್ದಾಗ ನೊಣ ಗುಂಗಾಡು ಕೂಡ ಹೊಡೆಯುತ್ತಿರಲಿಲ್ಲ ಸಾಲೆಬಿಟ್ಟ ಬಳಿಕ ಜೇಬಿನಲ್ಲಿ ಸಕ್ಕರೆ ತುಂಬಿಕೊಂಡು ಹೋಗಿ ಗಿಡಮರ ಅಡ್ಡಾಡಿ ಜೈನ ಮಾರವಾಡಿಗಳಂತೆ ಇರುವೆಗಳಿಗೆ ಊಟ ಮಾಡಿಸುತ್ತಿದ್ದ. ಮೀನ ಮಾಂಸ ಎಷ್ಟುಸಾರಿ ಬಿಟ್ಟುದು ಎಷ್ಟುಸಾರಿ ಹಿಡಿದುದು ಲೆಕ್ಕವಿಲ್ಲ ತನ್ನ ಪ್ರೀತಿಯುವರಿಗೆ ಯಾವ ರೀತಿ ಏನು ಮಾಡಬೇಕೆಂಬ ಯೋಚನೆಯೆ ಬಗೆಹರಿಯುತ್ತಿರಲಿಲ್ಲ ಮಹಿಮ ಸಾಲೆಯಲ್ಲಿ ಎಲ್ಲರಿಗಿಂತ ಉತ್ತಮ ಹುಡುಗ. ಆದರೆ ಅವನ ಬಟ್ಟೆಬರೆ ಕಗ್ಗ-ಕಾಡು, ಕಾಲ್ಮರೆ ಹಳತು-ಹರಕ, ಮೈ ಬಡಕಾಟ, ಮೋರೆ ಬಾಡಿದುದು. ಇದು ಸುರೇಶನ ಮನವನ್ನು ಸೆಳೆಯಿತು. ತುಸು ದಿನಗಳಲ್ಲಿಯೆ ಈ ಆಕರ್ಷಣೆ ನೆರೆ-ನೀರಿನಂತೆ ಬೆಳೆದುಬಿಟ್ಟಿತು. ಇಡೀ ವಿದ್ಯಾಲಯದ ಹುಡುಗರಿಗೆ ಇವರ ಗೆಳೆತನ ಚರ್ಚೆಯ ಒಂದು ವಿಷಯವಾಗಿ ಕೂತಿತ್ತು. ಮಹಿಮ ಛಾತ್ರವೃತ್ತಿ ಪರೀಕ್ಷೆಕೊಟ್ಟು, ವೃತ್ತಿ ಪಡೆದು, ಕಲಕತ್ತೆಯಲ್ಲಿ ತಮ್ಮೂರ ಒಬ್ಬ ವರ್ತಕನ ಅಂಗಡಿಯಲ್ಲಿದ್ದು, ಬರುವ ನಾಲ್ಕು ದುಡ್ಡಿನಲ್ಲಿ ಸಂಬಾಳಿಸಿ

ಕೊಂಡಿದ್ದ. ಈ ಗೆಳೆಯನನ್ನು ತನ್ನ ಮನೆಯಲ್ಲಿಟ್ಟುಕೊಳ್ಳಲು ಸುರೇಶ ಪರಿಪರಿಯಿಂದ ಆಗಿನಿಂದಲೂ ಯತ್ನಿಸುತ್ತಿದ್ದ. ಎಷ್ಟು ಮಾಡಿದರೂ ಅವನೊಪ್ಪಲಿಲ್ಲ. ಅಲ್ಲಿದ್ದೇ ಒಪ್ಪೊತ್ತುಂಡರೆ ಉಂಡ, ಉಪವಾಸವಿದ್ದರೆ ಇದ್ದ, ಅಂತೂ ಎಂಟ್ರೆನ್ಸ್ ದಾಟಿದ. ಹಿಂದಿನ ಪರಿಚ್ಛೇದದಲ್ಲಿ ಬಣ್ಣಿಸಿದುದು ಆ ತರುವಾಯದ ಘಟನೆ.

ಅಂದಿನಿಂದ ಒಂದು ವಾರ ಮಹಿಮನನ್ನು ಸುರೇಶ ಕಾಣಲೇ ಇಲ್ಲ. ಚಡಪಡಿಸಿ ಅವನ ನಿವಾಸಕ್ಕೆ ಹೋದ. ಅಂದು ಯಾವುದೋ ಬಿಡುವಿನ ದಿನ. ಮಹಿಮ ಮುಂಜಾನೆ ಹೋದವ ಇನ್ನೂ ಮರಳಿಲ್ಲವೆಂದು ಗೊತ್ತಾಯಿತು. ಬಿಡುವು ಕಳೆಯಲು ಪಟಲಡಾಂಗಾದ ಕೇದಾರ ಮುಖರ್ಜಿಯವರಲ್ಲಿ ಹೋಗಿದ್ದಾನೆಂಬುದರಲ್ಲಿ ಸುರೇಶನಿಗೆ ಸಂಶಯ ಉಳಿಯಲಿಲ್ಲ.

ನಿರ್ಲಜ್ಜ ಮಿತ್ರ, ಆಶ್ರಿತನ ಮೈತ್ರಿಯ ಗೌರವವನ್ನೆಲ್ಲ ಒಬ್ಬ ಸಾಮಾನ್ಯ ಹೆಂಗುಸಿನ ಮೋಹಕ್ಕೆ ನಿವಾಳಿಸಿ ಚೆಲ್ಲಿದ! ಏಳು ದಿನವೂ ತಾಳಲಿಲ್ಲ, ಧೈರ್ಯಗೆಟ್ಟ! ಕ್ಷಣಾರ್ಧದಲ್ಲಿ ಸುರೇಶನ ಹೃದಯದಲ್ಲಿ ವಿದ್ವೇಷ ಆಕಸ್ಮಿಕ ಅಗ್ನಿಅನಾಹುತದಂತೆ ಉರಿದೆದ್ದಿತು. ನಿಮಿಷವೂ ಯೋಚಿಸದೆ ಎಕ್ಕಹತ್ತಿ 'ಪಟಲ ಡಾಂಗಾಕ್ಕೆ ಹೊಡೆ' ಎಂದ ಅವನ ಮನಸು ಎನ್ನುತಿತ್ತು: “ಎಲಾ ನೀಚ! ಎಲಾ ಕೃತಘ್ನ' ನಿನ್ನ ಪ್ರಾಣ ಈ ಹೆಂಗುಸಿಗೆ ಕೊಟ್ಟು ಧನ್ಯನಾಗುವೆಯಲ್ಲ ಈವೊತ್ತು—ಈ ಪ್ರಾಣ ನಿನಗೆ ಬಂತೆಲ್ಲಿಂದ? ತನ್ನ ಪ್ರಾಣವನ್ನೂ ಲೆಕ್ಕಿಸದೆ ಎರಡು ಸಾರೆ ಯಾರು ತಿರುಗಿ ತಂದು ಕೊಟ್ಟರು? ಅವರ ಮರ್ಯಾದೆ ಒಂದಿಷ್ಟು ಉಳಿಸಲಿಲ್ಲವಲ್ಲ!”

ಕೇದಾರರ ಮನೆಯಿರುವ ಓಣಿ ಸುರೇಶನಿಗೆ ಗೊತ್ತಿತ್ತು. ಸುಮ್ಮನೆ ಒಬ್ಬಿಬ್ಬರನ್ನು ಕೇಳಿದಷ್ಟಕ್ಕೆ, ಎಕ್ಕ ಅವರ ಬಾಗಿಲಲ್ಲಿ ಹೋಗಿ ನಿಂತಿತು. ಸುರೇಶ ಇಳಿದು, ಆಳನ್ನು ವಿಚಾರಿಸಿ, ನೆಟ್ಟಗೆ ಮೇಲಿನ ಕೂಡುವ ಕೋಣೆಗೆ ಹೋದ. ವೃದ್ಧ ಸದ್ಗೃಹಸ್ಥನೊಬ್ಬ ತಕ್ಕೆಗಾತು ಕುಳಿತು ಪತ್ರಿಕೆ ಓದುತ್ತಿದ್ದ. ಆತ ಮುಖವೆತ್ತಲು ಸುರೇಶ ನಮಸ್ಕರಿಸಿ ತನ್ನ ಗುರುತು ಹೇಳಿದ: ನಾನು ಸುರೇಶಚಂದ್ರ ವಂದ್ಯೋಪಾಧ್ಯಾಯ, ಮಹಿಮನ ಪರಮ ಬಂಧು.

ಮುದುಕ ಪ್ರತಿನಮಸ್ಕಾರ ಮಾಡಿ, ಕನ್ನಡಕ ಮಡಿಚಿಟ್ಟು “ಕೂಡಿರಿ” ಅಂದ. ಸುರೇಶ ಕುಳಿತುಕೊಳ್ಳುತ್ತ, “ಮಹಿಮನ ವಾಸಕ್ಕೆ ಹೋಗಿದ್ದೆ-

ಅವನು ಇಲ್ಲಿಗೆ ಬಂದಿದ್ದಾನೆಂದು ತಿಳಿಯಿತು. ಅನಾಯಾಸ ತಮ್ಮ ಪರಿಚಯ ಆಗುವುದೆಂದು ಬಂದೆ" ಎಂದ.

"ತಾವು ಬಂದುದು ನನ್ನ ಸುದೈವವೇ ಸರಿ. ಮಹಿಮ, ಹತ್ತು ಹನ್ನೆರಡು ದಿನವಾಯಿತು, ಇತ್ತ ಬಂದೇ ಇಲ್ಲ. ನಾವು ಈವೊತ್ತು ಮುಂಜಾನೆಯೇ ಏಕೆ ಬಂದಿಲ್ಲವೋ ಎಂದು ಚಿಂತಿಸಿದೆವು"

ಸುರೇಶನಿಗೆ ಆಶ್ಚರ್ಯವಾಯಿತು. "ಅವನ ನಿವಾಸದ ಜನರೇ ಹೇಳಿದರು—"

"ಮತ್ತೆಲ್ಲಿಗೋ ಹೋಗಿರಬೇಕು ಹೋಗಲೊಲ್ಲ ನೆಟ್ಟಗಿದ್ದಾನೆಂದು ತಿಳಿದು ಸಮಾಧಾನವಾಯಿತು"

ಸುರೇಶ ದಾರಿಯಲ್ಲಿ ಮನಸಿನೊಳಗೆ ಗೊತ್ತುಮಾಡಿಕೊಂಡು ಬಂದಿದ್ದ ಉದ್ಧತ ಸಂಕಲ್ಪ ಮುದುಕನೆದುರಿಗೆ ನಿಲ್ಲಲಿಲ್ಲ ಅವರ ಶಾಂತಮುಖದ ಧೀರ ಮೃದು ಮಾತುಗಳು ಅವನ ಉತ್ಸಾಹವನ್ನು ಬಹುಮಟ್ಟಿಗೆ ತಣ್ಣಗೆ ಮಾಡಿದವು. ಆದರೆ ಆತ ತನ್ನ ಕರ್ತವ್ಯವನ್ನು ಮರೆತಿರಲಿಲ್ಲ. 'ಇವರು ಎಷ್ಟೇ ಒಳ್ಳೆಯವರಿರಲಿ, ಬ್ರಾಹ್ಮ ತಾನೆ!' ಎಂದು ಮನಸಿನೊಳಗೆ ಎಂದುಕೊಳ್ಳುತ್ತ ತನ್ನನ್ನು ಉತ್ತೇಜಿಸಿಕೊಳ್ಳುತ್ತಿದ್ದ ಇವರ ಶಿಷ್ಟಾಚಾರಗಳೆಲ್ಲ ಪೂರಾ ಕೃತ್ರಿಮ, ಹೀಗೆ ಮಾಡಿಯೇ ಭೋಳೆಜನರನ್ನು ಮರುಳುಗೊಳಿಸಿ ತಮ್ಮ ಕೆಲಸ ಸಾಧಿಸುವರು; ಈ ಬೇಟೆಗಾರರ ಎದುರಿನಲ್ಲಿ ಮೈಮರೆತು ನಡೆಯದು; ಏನಾದರೂ ಮಾಡಿ ಗೆಳೆಯನನ್ನು ಈ ಬೇಟೆಗಾರರಿಂದ ಬಿಡಿಸಲೇಬೇಕು, ಎಂಬ ಮನೋಭಾವದಿಂದ ಸುರೇಶ ಮಾತೆತ್ತಿದ "ಮಹಿಮ ನನ್ನ ಚಿಕ್ಕಂದಿನ ಗೆಳೆಯ ಇವನಂತಹ ಗೆಳೆಯ ಮತ್ತಿಲ್ಲ. ತಾವು ಒಪ್ಪುವಿರಾದರೆ ಅವನ ವಿಷಯ ತಮ್ಮೊಡನೆ ಒಂದೆರಡು ಮಾತು ಆಲೋಚಿಸಬೇಕೆನ್ನುತ್ತೇನೆ"

ಮುದುಕ ನಸುನಕ್ಕು, "ಸ್ವಚ್ಛಂದವಾಗಿ ಆಗಬಹುದು. ಅವನಿಂದ ತಮ್ಮ ಹೆಸರು ಕೇಳಿದ್ದೇವೆ," ಎಂದರು

"ಅವನೊಡನೆ ನಿಮ್ಮ ಮಗಳ ಮದುವೆ ಗೊತ್ತಾಗಿದೆಯೆ?"

"ಹಾಂ, ಅದೊಮ್ಮೆ ನಿಶ್ಚಿತವಾದಂತಾಯಿತು."

"ಆದರೆ ಮಹಿಮ ಬ್ರಾಹ್ಮಸಮಾಜಿಯಲ್ಲ. ಆದರೂ ಸಂಬಂಧ ವಾಗುವುದೆ?" ಎಂದುದಕ್ಕೆ ಮುದುಕ ಮಾತನಾಡಲಿಲ್ಲ. ಸುರೇಶ ಮುಖ

ನುಡಿದ: "ಒಳ್ಳೆಯದು ಅದಂತಿರಲಿ. ಅವನ ಸ್ಥಿತಿ ಹೇಗೆ— ಹೆಂಡಿರುಮಕ್ಕಳನ್ನು ಸಲಹಬಲ್ಲನೆ? ಹಳ್ಳಿಯಲ್ಲಿ, ವಿರೋಧೀ ಹಿಂದುಸಮಾಜ ದಲ್ಲಿ, ಮಣ್ಣುಮನೆಯೊಳಗೆ ನಿಮ್ಮ ಮಗಳು ಇರಬಹುದೇ ಹೇಗೆ? ಇರಲಾರ ಳಾದರೆ ಅವ ಏನುಪಾಯ ಮಾಡುವ? ಇದೆಲ್ಲ ಯೋಚಿಸಿದ್ದೀರಾ?"

ಮುದುಕ ಕೇದಾರಬಾಬುಗಳು ಚಟ್ಟನೆದ್ದು ನೆಟ್ಟಗೆ ಕುಳಿತರು. "ಏನು! ಇದೆಲ್ಲ ಕೇಳಿಲ್ಲ ಬಿಡಿರಿ ಮಹಿಮ ಎಂದೂ ಹೇಳಿಯೇ ಇಲ್ಲ," ಎಂದರು

ಸುರೇಶ ಹೇಳಿದ "ನಾನೆಲ್ಲ ಯೋಚನೆ ಮಾಡಿದ್ದೇನೆ ಮಹಿಮ ನಿಗೂ ಹೇಳಿದ್ದೇನೆ. ಈ ಎಲ್ಲ ಅಪ್ರಿಯ ಪ್ರಸಂಗ ತಪ್ಪಿಸುವ ಉದ್ದೇಶ ದಿಂದಲೇ ನಾನೀಗ ಬಂದುದು ನಿಮ್ಮ ಮಗಳ ಯೋಚನೆ ನೀವು ಮಾಡಿಯೇ ಮಾಡುವಿರಿ ನನ್ನ ಗೆಳೆಯ ನೀಗಲಾರದ ಹೊಣೆ ಹೊತ್ತು ಅಸಹ್ಯವಾದ ಭಾರದಿಂದ ಕಡೆತನಕ ಹೆಣದಂತಿರಬೇಕಾದೀತು— ಅದು ನಾನೆಂದೂ ಆಗಗೊಡಲಾರೆ."

ಕೇದಾರಬಾಬುಗಳ ಮೋರೆ ಇಳಿಯಿತು "ಇದೇನು ಹೇಳುವಿರಿ ಸುರೇಶಬಾಬೂ!" ಎಂದರು

"ಅಚ್ಚಾ!"

ಹದಿನೇಳು ಹದಿನೆಂಟು ವರುಷದ ಹುಡುಗಿ ಪಕ್ಕನೆ ಒಳಗೆ ಹಣಿಕಿಕ್ಕಿ, ಅಪರಿಚಿತ ಯುವಕನೊಬ್ಬ ಇರುವುದನ್ನು ಕಂಡು ನಿಂತುಬಿಟ್ಟಳು

"ಏನು ಅಚಲಾ? ಬಾರಮ್ಮ, ಕೂಡು. ನಾಚಿಕೆಯೇ— ಇವರು ನಮ್ಮ ಮಹಿಮನ ಪರಮ ಮಿತ್ರರು"

ಹುಡುಗಿ ಸ್ವಲ್ಪ ಮುಂಬರಿದು ಕೈಯೆತ್ತಿ ಸುರೇಶನಿಗೆ ನಮಸ್ಕಾರ ಮಾಡಿದಳು ಸುರೇಶ ನೋಡಿದ ಹುಡುಗಿಯದು ಉಜ್ವಲ ಶ್ಯಾಮವರ್ಣ, ಬಡಕಾಟಿ ಮೈಕಟ್ಟು, ಕೆನ್ನೆ, ಗದ್ದ, ಹಣೆ— ಇಡೀ ಮುಖದ ಮಾಟವೇ ಬಲು ಸುಂದರ, ಸುಕುಮಾರ ಕಣ್ಣಲ್ಲಿ ಸ್ಥಿರಬುದ್ಧಿಯ ಹೊಳಪು. ವಂದಿಸಿ ಅವಳು ಸನಿಯದಲ್ಲಿ ಕುಳಿತುಕೊಂಡಳು ನಿಮಿಷ ನೋಡಿಯೇ ಮುಗ್ಧ ನಾದ ಸುರೇಶ. ತಂದೆ ಎಂದರು. "ಮಹಿಮನ ವಿಷಯ ಕೇಳಿದೆಯಾಮ್ಮ? ಆತ ಏಕೋ ಬರಲಿಲ್ಲ ಎಂದು ಚಡಪಡಿಸುತ್ತಿದ್ದೆವು ಕೇಳಿಲ್ಲಿ—ಇವರು ಆತನ ಪರಮ ಮಿತ್ರರೆಂದೇ ಇಲ್ಲಿಯತನಕ ದಾವತಿಪಟ್ಟು ಬಂದಿದ್ದಾರೆ;

ಇಲ್ಲದಿದ್ದರೆ ಏಕೆ ಬರುತ್ತಿದ್ದರು, ಹೇಳು. ಅವ ಇಷ್ಟು ನಂಬಿಗೆಗೇಡಿ ಸುಳ್ಳ ಎಂದು ಯಾರಿಗೆ ಗೊತ್ತು! ಅವನ ಹಳ್ಳಿಯಲ್ಲಿ ಬರೀ ಒಂದು ಮುರಕ ಮಣ್ಣಿನ ಮನೆಯಿತ್ತು. ನಿನ್ನ ಹೊಟ್ಟೆಗೇನು ಹಾಕುತ್ತಾನೆ ಮಣ್ಣು— ತನಗೇ ಅನ್ನವಸ್ತ್ರಕ್ಕೆ ದರಿದ್ರ. ಹುಃ ಎಂಥ ಭಯಂಕರ ಮನುಷ್ಯ ! ಇಂಥವನ ಮನಸಿನೊಳಗೂ ವಿಷವೇ! ಆಂ!"

ಕೇಳಿ ಅಚಲೆಯ ಮೋರೆ ಬೆಳುಪೇರಿತು. ಸುರೇಶನ ಮುಖ ಕಪ್ಪು ಬಳಿದಂತಾಯಿತು ಕಟ್ಟಿಗೆಗೊಂಬೆಯಂತೆ ಅವಾಕ್ಕಾಗಿ ಅವಳನ್ನೆ ನೋಡುತ್ತ ಮಿಟ್ಟುಮಿಸುಕದೆ ಕುಳಿತಿದ್ದ

♥

ತನ್ನ ನಿಷ್ಠುರ ಸತ್ಯ ಅಚಲೆಯ ಹೃದಯದಲ್ಲಿ ಆಳವಾಗಿ ನಟ್ಟಿತೆಂದು ಸುರೇಶನಿಗೆ ಎನಿಸಿತು ಆದರೆ ತಂದೆಯ ಲಕ್ಷ್ಯ ಆಕಡೆಗಿಲ್ಲ ಅವರು ಅವಳ ಕುರಿತೇ ಮಾತನಾಡಿದರು "ಸುರೇಶಬಾಬೂ, ನೀವೀಗ ಗೆಳೆತನದ ಕರ್ತವ್ಯಕ್ಕಾಗಿ ಬಂದ ಬಗ್ಗೆ ನಾವು ಯಾರೂ ತಪ್ಪಿಯೂ ಅವಿಶ್ವಾಸ ಪಡುವುದಿಲ್ಲ ಅಪ್ರಿಯವಾದರೂ ಕಠೋರವಾದರೂ ಇದು ನಿಜವಾದ ಪ್ರೇಮ ಅನ್ನ ಅನ್ನ ಎಂದು ಒರಲುವ ಜಡ್ಡಿನ ಮಗುವಿಗೆ ಅನ್ನ ಕೊಡದಿರುವುದು ತಾಯಿಗೆ ಕಠೋರವಲ್ಲವೆ ? ಆದರೂ ಅವಳು ಹಾಗೆ ಮಾಡಲೇ ಬೇಕು ನಿಜವಾಗಿಯೂ ಸುರೇಶಬಾಬೂ, ಮಹಿಮ ಇಷ್ಟು ಅನ್ಯಾಯ ಮಾಡಿಯಾನೆಂದು ಕನಸಿನೊಳಗೂ ಎಣಿಸಿರಲಿಲ್ಲ ಎರಡು ವರುಷಗಳ ಹಿಂದೆ, ಸಮಾಜದಲ್ಲಿ ಅವನ ಮಾತುಗಾರಿಕೆಗೆ ಮರುಳಾಗಿ, ಅವನನ್ನು ಗೌರವದಿಂದ ಮನೆಗೆ ಕರೆತಂದು, ಅಚಲೆಯೊಡನೆ ಪರಿಚಯ ಆಗಗೊಟ್ಟೆ ಆದಕ್ಕೆ ಈ ರೀತಿ ಫಲ ಕೊಟ್ಟ ಇಂಥ ವಂಚನೆ ಹುಟ್ಟಿದ ಮೇಲೆ ಕಾಣಲಿಲ್ಲ!" ಅಂತರಂಗದ ಆವೇಗದಿಂದ ಮುದುಕ ಕೋಣೆಯಲ್ಲಿ ಎಡೆಯಾಡತೊಡಗಿದರು ಸುರೇಶ, ಅಚಲೆ ತಲೆ ತಗ್ಗಿಸಿಕೊಂಡು ನೀರವವಾಗಿ ಕುಳಿತಿದ್ದರು. ಕೇದಾರಬಾಬು ಗಕ್ಕನೆ ನಿಂತು ಮಗಳಿಗೆಂದರು: "ಬೇಡಮ್ಮಾ ಅಚಲಾ, ಇದಾಗದು, ಎಂದಿಗೂ ಆಗದು. ಸುರೇಶಬಾಬೂ, ನೀವು ಕರ್ತವ್ಯಕ್ಕೇ ಮಹತ್ವ ಕೊಟ್ಟು ಮಿತ್ರಕಾರ್ಯ ಮಾಡಬಂದಂತೆ, ನಾನಾದರೂ ಪಿತೃಕಾರ್ಯ ಮಾಡುವೆ ಅಚಲೆಯೊಡನೆ ಮಹಿಮನ ಸಂಬಂಧ ಎಷ್ಟು ಆಳವಾಗಿದೆ ಎಂಬುದನ್ನು ನೋಡುತ್ತಿರಲಿಕ್ಕೆ, ಯಾವ

ಪ್ರಮಾಣವೂ ಇಲ್ಲದೆ ಅವಳೆದುರಿಗೇ ಮನೆಬಾಗಿಲು ಮುಚ್ಚುವುದು ಸರಿಯಾಗದು. ಇದಕ್ಕೆ ಪ್ರಮಾಣ ಅಗತ್ಯ. ನಿಮ್ಮ ಮಾತಿನಲ್ಲಿ ವಿಶ್ವಾಸವಿಲ್ಲ ಎಂದು ತಿಳಿಯಬೇಡಿರಿ ಸುರೇಶಬಾಬೂ, ಅದೂ ನನ್ನ ಕರ್ತವ್ಯ ತಾನೆ. ಏನಮ್ಮಾ ಅಚಲಾ, ಪ್ರಮಾಣಿಸಿ ನೋಡುವುದು ಲೇಸಲ್ಲವೆ ? "

ಇಬ್ಬರೂ ಮೌನವ್ರತ ಬಿಡಲಿಲ್ಲ. ಕೇದಾರಬಾಬು ತುಸಹೊತ್ತು ನೋಡಿ, " ಇದನ್ನು ಪ್ರಮಾಣಿಸಿ ಕೊಡುವ ಭಾರ ನಿಮ್ಮ ಮೇಲೆ, ಸುರೇಶಬಾಬೂ ಮಹಿಮನ ಮನೆತನದ ಸ್ಥಿತಿಗತಿ ತಿಳಿಯುವುದಿರಲಿ, ಅವನ ಊರು ಕೂಡ ನಾವರಿಯೆವು, " ಎಂದರು

" ವಿಕಾಸಬಾಬು ಕೆಳಗೆ ಕಾದಿದ್ದಾರೆ, " ಎಂದು ಆಳು ಬಂದು ಎಚ್ಚರಿಸಿದ

ಕೇದಾರಬಾಬು ಶುಷ್ಕಭಾವದಿಂದೆದ್ದು ಹೇಳಿದರು " ಅವನೇನು ಈಹೊತ್ತು ಬರುವ ಲಕ್ಷಣವಿಲ್ಲ. ಒಳ್ಳೆಯದು ಮಾತಾಡುವ. ನಾ ಹೋಗುತ್ತೇನೆ, " ಎಂದು ಹೊರಟವರು ತಿರುಗಿನಿಂತು, " ಒಂದೈದು ನಿಮಿಷದ ಮಟ್ಟಿಗೆ ನನ್ನ ಕ್ಷಮಿಸಿರಿ. ಅವರನ್ನು ಕಳಿಸಿ ಬರುತ್ತೇನೆ. ಬಂದಿದ್ದಾರೆಂದ ಬಳಿಕ ಕಾಣದಿರುವುದು ತರವಲ್ಲ. ಅಮ್ಮಾ ಅಚಲಾ, ಸುರೇಶಬಾಬು ನಮ್ಮ ಪರಮಮಿತ್ರರೆಂದು ತಿಳಿ. ತಿಳಿದುಕೊಳ್ಳಬೇಕಾದುದನ್ನು ಇವರಿಂದ ಕೇಳಿಕೋ, " ಎಂದು ಕೆಳಗಿಳಿದು ಹೋದರು

ಆಗ ಕ್ಷಣ ಇಬ್ಬರ ದೃಷ್ಟಿಗಳೂ ಕೂಡಿದವು. ಪುನಃ ಇಬ್ಬರೂ ಮೋರೆ ತಗ್ಗಿಸಿದರು. ತುಸು ಹೊತ್ತು ಸುಮ್ಮನಿದ್ದು ಸುರೇಶ ಮೆಲ್ಲನೆ ಮಾತೆತ್ತಿದ : "ನಾವಿಬ್ಬರೂ ಲಂಗೋಟಿ ಗೆಳೆಯರು. ಆದರೆ ಅವನ ನಡತೆಗಾಗಿ ನಾ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ "

ಅಚಲೆ ಮೃದುಕಂಠದಿಂದ ಉತ್ತರವಿತ್ತಳು: " ನೀವೇನು ನಾಚಿಕೊಳ್ಳುವ ಕಾರಣವಿಲ್ಲ. "

" ಎಂಥ ಮಾತು ! ಅವನ ಕಪಟತನಕ್ಕಾಗಿ, ಹೇಯತೆಗಾಗಿ ಗೆಳೆಯನಾದ ನಾನು ನಾಚದೆ ಇನ್ನಾರು ? ನನ್ನಿಂದೆಲ್ಲವನ್ನೂ ಮುಚ್ಚಿಡುತ್ತಿದ್ದಾನೆಂದ ಬಳಿಕ ಅದರಲ್ಲಿ ಏನೋ ದೊಡ್ಡ ದೋಷವಿದೆಯೆಂದು ಆಗಲೇ ತಿಳಿದುಕೊಳ್ಳಬೇಕಿತ್ತು. "

" ನಾವು ಬ್ರಾಹ್ಮರು, ನೀವು ನಮ್ಮ ಸಮಾಜದ ಯಾರೊಡನೆಯೂ

ಯಾವ ಸಂಬಂಧವನ್ನೂ ಇಡಲೊಪ್ಪದವರು. ಅಂತೆಯೆ ನಿಮ್ಮ ಮುಂದೆ ಆಡಿರಲಿಕ್ಕಿಲ್ಲ"

ಸುರೇಶನಿಗೆ ಈ ಮಾತು ಸರಿಬರಲಿಲ್ಲ ಮಹಿಮನ ತಪ್ಪು ಒಪ್ಪವಿಟ್ಟುಕೊಳ್ಳಲು ಅವಳು ತನ್ನೆದುರೇ ಪ್ರಯತ್ನಿಸುವಳೆಂದು ಸುರೇಶ ಬಗೆದಿರಲಿಲ್ಲ. ಅವನು ಶುಷ್ಕಸ್ವರದಿಂದ ಕೇಳಿದ. "ಈ ವಿಷಯ ಮಹಿಮನಿಂದಲೇ ನಿಮಗೆ ತಿಳಿದಿದೆ ಕಾಣುತ್ತದೆ?"

"ಹಾಂ, ಅವರೇ ಒಂದಿನ ಹೇಳಿದ್ದರು"

ಅಚಲೆ ಮ್ಲಾನಭಾವದಿಂದ ನಸುನಕ್ಕು ಎಂದಳು: "ಇದೇನು ದೋಷವೇ? ಎಲ್ಲರ ಪ್ರವೃತ್ತಿ ಒಂದೇ ಇರುವುದಿಲ್ಲ. ಯಾರು ತಮ್ಮ ಸಂಬಂಧ ಬಿಟ್ಟು ಹೋಗುವರೋ ಅವರ ಸಂಬಂಧವೇ ಬೇಡವೆಂದರೆ ನಮಗೇನು ತಪ್ಪು ಕಾಣುವುದಿಲ್ಲ."

ಈ ಉತ್ತರ ಸುರೇಶನ ಮನೋಗತದಂತೆಯೇ ಇತ್ತು ಇದನ್ನು ಮತ್ತೊಬ್ಬರಾಡಿದ್ದರೆ ನಕ್ಕುಬಿಡುತ್ತಿದ್ದ. ಸಂಯತವಾದಿನಿಯಾದ ಬ್ರಾಹ್ಮತರುಣಿಯ ಬಾಯಿಂದ ಈ ಮಾತು ಹೊರಟುದು ಅವನಿಗೆಷ್ಟೂ ಸೊಗಸಲಿಲ್ಲ. ವಾಸ್ತವವಾಗಿ, ಈ ಪ್ರತಿವಾದ ಕೇಳಬೇಕೆಂದು ಅವನು ಮಾತನಾಡಿರಲಿಲ್ಲ. ಆದರೂ ತನ್ನ ಮಹಾತ್ಮಾವ ಸದ್ಗುಣಗಳು ಮಹಿಮನಿಂದ ಈಕೆಗೆ ತಿಳಿದಿವೆಯೆಂಬುದನ್ನು ತಿಳಿಯಲಿಚ್ಛಿಸಿದ್ದ ಈ ಪ್ರಶ್ನೆಯ ಅಭಿಲಾಷೆಯನ್ನು ಅಚಲೆ ಅನುಮಾನಿಸದೆ ಹೋದಳು ಅಂತೆಯೇ ಅವಳು ಪ್ರಶ್ನೆಗೆ ಸರಳ ಉತ್ತರ ಕೊಟ್ಟು ಸುಮ್ಮನಾದಳು.

ಸುರೇಶ ಕ್ಷುಣ್ಣನಾಗಿ, "ನಿಮ್ಮ ವಿಷಯದಲ್ಲಿ ನನಗೆ ಸಾಮಾಜಿಕ ವಿದ್ವೇಷವಿದೆಯೋ ಇಲ್ಲವೋ ಎಂಬುದನ್ನು ಮಹಿಮ ಚರ್ಚಿಸಿಕೊಳ್ಳಲಿ. ಆದರೆ ಅವನ ಬಗ್ಗೆ ನನಗೆ ಲೇಶಮಾತ್ರವೂ ವಿದ್ವೇಷವಿಲ್ಲೆಂದು ಹೇಳಿದರೆ ನೀವು ನಂಬುವಿರಿ. ಆದರೂ ನಾನು ಅವನ ಪ್ರಾಪಂಚಿಕ ವಿಷಯವನ್ನು ಕೇಳಲು ಬಹುಶಃ ಇಲ್ಲಿಗೆ ಬರುತ್ತಿರಲಿಲ್ಲ—ಅವನು ಅಂದು ಈ ಸತ್ಯವನ್ನು ಒಪ್ಪಿಕೊಳ್ಳದಿದ್ದರೆ—"

ಅಚಲೆ ಸುರೇಶನ ಮುಖವನ್ನು ದಿಟ್ಟಿಸುತ್ತ ಅವಿಚಲಿತ ಸ್ವರದಿಂದ ನುಡಿದಳು: "ಆದರೆ ಅವರೆಂದೂ ಸುಳ್ಳು ಹೇಳಿಲ್ಲವಲ್ಲ!"

ಸುರೇಶ ಆಶ್ಚರ್ಯದಿಂದ ಮುಂಗಾಣದಾದ. ಹೆಂಗುಸು [illegible]

ವಾಗಿ ದೃಢವಾಗಿ ಉತ್ತರ ಕೊಡಬಹುದೆಂಬುದನ್ನು ತಕ್ಷಣ ನಂಬದಾದ. ಅದು ಕ್ಷಣ ಮಾತ್ರ ಅವನಿಗೆ ಹುಟ್ಟಾ ಸಂಯಮದ ಅಭ್ಯಾಸವೇ ಇಲ್ಲ. ಅಂತೆಯೆ ಮರುಕ್ಷಣವೆ ಸ್ಟ್ರೈಮರೆತು ವಾಚಾಳನಾಡಿದ. "ನನ್ನನ್ನು ಕ್ಷಮಿಸಿರಿ. ಅವನು ನನ್ನ ಬಾಲ್ಯ ಸ್ನೇಹಿತ ಅವನ ಪರಿಚಯ ನಿಮಗಿಂತ ನನಗೇನು ಕಡಿಮೆಯಿಲ್ಲ ಇಲ್ಲಿ ತನ್ನನ್ನು ಬಂಧಿಸಿಕೊಂಡು, ಸ್ಪಷ್ಟವಾಗಿ ಇಲ್ಲವೆಂಬು ದೇನು ಸತ್ಯವಾದಿತ್ವ ಅಲ್ಲ"

ಅಚಲೆ ಅಪೇ ಶಾಂತವಪ್ಪದು ಸ್ವರದಿಂದ, "ಅವರು ತಮ್ಮನ್ನು ಇಲ್ಲಿ ಬಂಧಿಸಿಕೊಂಡಿಲ್ಲವಲ್ಲ'' ಎಂದಳು

"ನಿಮ್ಮ ತಂದೆಯೇ ಹೇಳಿದರು. ಹೋಗಲಿ, ನಿಮ್ಮೆದುರು ತನ್ನ ಹೀನಸ್ಥಿತಿ ಬಚ್ಚಿಡುವುದೇ ಸತ್ಯಪ್ರಿಯತೆಯೆ? ಹೆಂಡಿರುಮಕ್ಕಳನ್ನು ಪೋಷಣೆಮಾಡುವ ಅಸಮರ್ಥತೆಯನ್ನು ಮತ್ತೊಬ್ಬರ ಮುಂದೆ ಬಿಡಲಿ— ನಿಮ್ಮ ಮುಂದಾದರೂ ನಿಷ್ಕಪಟವಾಗಿ ತಿಳಿಸಿದ್ದರೆ ಉಚಿತವಾಗುತ್ತಿತ್ತು" ಅಚಲೆ ನೀರವವಾಗಿದ್ದಳು ಸುರೇಶ ಮುಂಬರಿಸಿದ "ನೀವೇನೋ ಅವನ ತಪ್ಪು ಮುಚ್ಚಿಕೊಳ್ಳುತ್ತಿರುವಿರಿ ಆದರೆ ಯೋಚಿಸಿ ನೋಡಿರಿ, ಈ ವಿಷಯ ಮೊದಲೇ ಗೊತ್ತಾಗಿದ್ದರೆ ಅವನಿಗಿಷ್ಟು ಆಶ್ರಯ ಕೊಡುತ್ತಿದ್ದಿರಾ?" ಅಚಲೆ ಮತ್ತೂ ಸುಮ್ಮನಿದ್ದಳು ಅದರಿಂದ ಸುರೇಶ ಇನ್ನಷ್ಟು ಉತ್ತೇಜನಗೊಂಡು ಪುನಃ ಹೇಳತೊಡಗಿದ "ನನ್ನೆದುರು ಅವನೇ ಒಪ್ಪಿದ್ದಾನೆ, ನಿಮ್ಮನ್ನು ಕಲಕತ್ತೆಯಲ್ಲಿ ಸಲಹುವುದು ತನಗೆ ಸಾಧ್ಯವೂ ಅಲ್ಲ ಆ ವಿಚಾರವೂ ಇಲ್ಲ ಎಂದು ತಮ್ಮ ಹಾಳುಕೊಂಪೆ ಗ್ರಾಮದಲ್ಲಿ, ಅತ್ಯಂತ ವಿರುದ್ಧವಾದ ಹಿಂದೂ ಸಮಾಜದ ಸೆರೆಹೊರೆ ಯಲ್ಲಿ, ಮುರುಕ ಮಣ್ಣುಮನೆಯಲ್ಲಿ ನಿಮ್ಮನ್ನು ಒಯ್ದಿಡುವನಂತೆ ಇದನ್ನು ನಿಮಗವ ತಿಳಿಸಬಾರದೊ? ಇಷ್ಟು ಕಷ್ಟ ನಿಮಗೆ ಸಹನವಾಗು ವುದೋ ಹೇಗೆಂಬುದನ್ನು ಯೋಚಿಸಬೇಡವೆ?'' ಎಂದು ಅವನು ಉತ್ತರಾ ಪೇಕ್ಷೆಯಿಂದ ಮುಖವೆತ್ತಿ ನೋಡಿದ. ಅಚಲೆ ಮೋರೆ ಕೆಳಗೆ ಹಾಕಿಕೊಂಡು ಚಿಂತಾಮಗ್ನಳಾಗಿ ಕುಳಿತಿದ್ದಳು ಉತ್ತರವಿಲ್ಲದಿದ್ದರೂ ಕೆಲಸ ಕೈಗೂಡಿ ತೆಂದುಕೊಂಡ "ನೋಡಿರಿ, ನಾನೇನು ನಿಮಗೆ ಸುಳ್ಳು ಹೇಳುವುದಿಲ್ಲ. ನಾನಿಂದು ಬಂದುದು ಗೆಳೆಯನನ್ನು ಉಳಿಸಲಿಕ್ಕೆಂದೇ ಅವನು ವಿಪತ್ತಿನಲ್ಲಿ ಸಿಕ್ಕಬಾರದೆಂದೇ ನನ್ನ ಉದ್ದೇಶ. ಅಲ್ಲದೆ ನಿಮ್ಮನ್ನುಳಿಸುವುದೂ ಅವಕ್ಕಿಂತ

ಹೆಚ್ಚಿನ ಕರ್ತವ್ಯ. ಏಕೆಂದರೆ ಅವನ ವಿಪತ್ತು ಬೇಕೆಂತ ತಂದುಕೊಂಡುದ ನೀವು ಮಾತ್ರ ಕತ್ತಲಲ್ಲಿ ಧುಮುಕುತ್ತಿರುವಿರಿ ನಿಮ್ಮ ತಂದೆ ಪ್ರಮಾಣ ದೊರಕಿಸುವ ಭಾರ ನನಗೊಪ್ಪಿಸಿದಾಗ, ಗೆಳೆಯನ ವಿರುದ್ಧ ಈ ಹೊಣೆ ಹೊರಬಾರದೆನಿಸಿತ್ತು. ಆದರೆ ಈಗ ಈ ಕೆಲಸ ನಾ ಮಾಡಲೇಬೇಕೆಂದು ಎನಿಸುತ್ತಿದೆ—ಇಲ್ಲದಿದ್ದರೆ ಮಹಾ ಅನ್ಯಾಯವಾಗುವುದು !"

"ಅವರಿಗೆ ತಿಳಿದರೆ ದುಃಖವಾಗಲಿಕ್ಕಿಲ್ಲವೆ ?" ಎಂದಳು ಅಚಲೆ

"ಅದಕ್ಕುಪಾಯವಿಲ್ಲ ಪಾಷಂಡರಂತೆ ನಿಮ್ಮನ್ನು ವಂಚಿಸುತ್ತಿದ್ದಾನಲ್ಲ—ಗೆಳೆಯನಾದರೂ ಅವನ ಸುಖದುಃಖ ಯೋಚಿಸಬೇಕಾದುದಿಲ್ಲ ಆದರೊಂದು ತೊಂದರೆ, ಅವನ ಊರ ಹೆಸರೇ ನನಗೆ ಗೊತ್ತಿಲ್ಲ ಹಂಚಿಕೆಯಿಂದ ಸಂಜೆಯೊಳಗೆ ಅದನ್ನು ತಿಳಿದುಕೊಂಡೆನೆಂದರೆ, ನಾಳೆ ಬೆಳಗ್ಗೇ ಅಲ್ಲಿಗೆ ಹೋಗುತ್ತೇನೆ. ಎಲ್ಲ ಪ್ರಮಾಣಗಳನ್ನೂ ಕಲೆಹಾಕಿ ತಂದು ನಿಮ್ಮ ತಂದೆಯ ಮುಂದಿಟ್ಟು ಗೆಳೆಯನ ಪಾಪಕ್ಕೆ ಪ್ರಾಯಶ್ಚಿತ್ತ ಕೊಡಿಸುವೆ"

"ಅಲ್ಲ, ನೀವೇತಕ್ಕೆ ಇಷ್ಟು ಕಷ್ಟಪಡುವಿರಿ? ತಂದೆಗೇ ಹೇಳಿರಿ, ನಂಬಿಗೆಯ ಆಳನ್ನು ಅಟ್ಟಿ ಎಲ್ಲ ಸಂಪಾದಿಸುವರು ಚಬ್ಬಿಶ ಪರಗಣೆಯ ರಾಜಪುರಗ್ರಾಮ ಅಷ್ಟೇನು ದೂರವಿಲ್ಲ"

ಸುರೇಶನಿಗೆ ಆಶ್ಚರ್ಯವಾಯಿತು "ರಾಜಪುರ! ಊರು ನಿಮಗೆ ಗೊತ್ತಿದೆಯಲ್ಲ! ಇನ್ನೂ ಏನೇನು ಗೊತ್ತಾಗಿದೆ?" ಎಂದ

ಅಚಲೆ ಸಹಜ ಭಾವದಿಂದ ನುಡಿದಳು "ನೀವು ಹೇಳಿದಷ್ಟೂ ಬಲ್ಲೆ ರಾಜಪುರದ ಉತ್ತರ ಉಕ್ಕಡದಲ್ಲಿ ಒಂದು ಮಣ್ಣಮನೆ ಇದೆ. ಒಳಗೆ ಮೂರುನಾಲ್ಕು ಕೋಣೆಗಳು, ಹೊರಗೆ ಚಂಡೀಮಂಟಪ, ಅಲ್ಲಿಯೇ ಊರ ಪಾಠಶಾಲೆ"

"ಮಹಿಮನ ಮನೆತನದ ಸ್ಥಿತಿ?"

"ಅದೂ ನೀವು ಹೇಳಿದಿರಲ್ಲ ಹಾಗೆಯೇ ಸಾಧಾರಣ ಒಂದಿಷ್ಟು ಆಸ್ತಿಯಿದೆ—ಹೇಗಾದರೂ ಕಷ್ಟದಿಂದ ಹೊಟ್ಟೆ ಬಟ್ಟೆ ಸಾಗೀತು"

"ನಿಮಗೆ ಎಲ್ಲ ತಿಳಿದ ಹಾಗಿದೆ!"

"ಇಷ್ಟು ಮಾತ್ರ ಬಲ್ಲೆ ಏಕೆಂದರೆ ಅವರಿಂದ ಒಂದಿನ ಕೇಳಿಕೊಂಡಿದ್ದೆ ನಿಮಗೂ ಗೊತ್ತಾಯಿತಲ್ಲ, ಅವರೇನು ಸುಳ್ಳು ಹೇಳಿಲ್ಲವೆಂದು."

ಸುರೇಶನ ಮುಖ ಕಾಲೀವರ್ಣವಾಯಿತು. "ಎಲ್ಲವೂ ಗೊತ್ತಿದೆ

ಯೆಂದ ಮೇಲೆ, ನಿಮ್ಮನ್ನು ಸಾವಧಾನಗೊಳಿಸುವ ನನ್ನ ಕೆಲಸ ಬಹು ಮಟ್ಟಿಗೆ ಆದಂತಾಯಿತು ನಿಮ್ಮನ್ನು ಅವ ಟಿಕ್ಕಿಸಲಾರ," ಎಂದ

" ನಾ ಅಲ್ಪ ಸ್ವಲ್ಪ ಬಲ್ಲೆ. ನನಗೆ ತಿಳಿಸುವುದು ನಿಮ್ಮ ಉದ್ದೇಶ ವಿರಲಾರದು ಯಾರಿಗೆ ತಿಳಿಯಬೇಕೆಂದಿರುವಿರೊ ಅವರಿಗೆ ಇನ್ನೂ ಏನೂ ಗೊತ್ತಿಲ್ಲ ನನಗೆ ತಿಳಿದಷ್ಟು ಬೇಕಾದರೆ ತಂದೆಗೆ ತಿಳಿಸುತ್ತೇನೆ "

ಸುರೇಶ ಉದಾಸೀನಸ್ವರದಿಂದ, " ನಿಮ್ಮಿಚ್ಛೆ ಆದರೆ ನಾನು ಹೋಗಿ ಮಹಿಮನಿಗೆ ಎಲ್ಲ ಹೇಳಿ ಕ್ಷಮೆ ಬೇಡಬೇಕಾಗಿದೆ ಆಗ ನನಗೆ ಸಮಾಧಾನ," ಎಂದ

" ಅದೇನು ಅಗತ್ಯ ? "

ಸುರೇಶ ಮತ್ತೆ ಉತ್ತೇಜಿತನಾಗಿ, " ಅಗತ್ಯವಿಲ್ಲವೆ ? ಅವನ ಮೇಲೆ ಇಷ್ಟೊಂದು ಮಿಥ್ಯಾರೋಪ ಹೊರಿಸಿದ್ದೇನೆ, ಇದು ಸಾಮಾನ್ಯ ಅಪರಾಧವೆ? ಹಾಗೆ ನಿಮಗೆನಿಸುವುದಿಲ್ಲವೆ ? ಕಪಟ, ಸುಳ್ಳು ಏನೆನ್ನುವುದನ್ನೂ ಉಳಿಸ ಲಿಲ್ಲ ಇದನ್ನೆಲ್ಲ ಅವನೆದುರು ಒಪ್ಪಿಕೊಳ್ಳದೆ ನನಗೆ ರಕ್ಷಣೆಯೆಲ್ಲಿ?" ಎಂದ.

ಅಚಲೆ ತುಸಹೊತ್ತು ಸುಮ್ಮನಿದ್ದು ಮೆಲ್ಲಮೆಲ್ಲನೆ ನುಡಿದಳು: " ಆದರೂ ಅದೇನು ಅಗತ್ಯವಿಲ್ಲ ಎಂದು ನಾನೆನ್ನುತ್ತೇನೆ, ಸುರೇಶಬಾಬೂ! ಮನಸಿನೊಳಗೆ ಕ್ಷಮೆ ಕೋರುವುದಕ್ಕಿಂತ ಪ್ರಕಟವಾಗಿ ಬೇಡುವುದು ಯಾವಾಗಲೂ ಮೇಲಾದುದೆಂದು ನನಗೆನಿಸುವುದಿಲ್ಲ ಕೇಳಿದರೆ ಅವರಿಗೆ ದುಃಖವಾಗುವುದು. ಇಂಥದರಲ್ಲಿ ಹೇಳಬಹುದೆ ? ತಂದೆಗೂ ನಾ ತಿಳಿಸು ತ್ತೇನೆ— ನೀವಾಡಿದುದು ಅವನಿಗೆ ಹೇಳಬಾರದೆಂದು "

" ಒಳ್ಳೆಯದು, " ಎಂದು ಸುರೇಶ ಕೊಂಚ ಹೊತ್ತು ಅಚಲೆಯ ಮುಖ ನಿಶ್ಶಬ್ದವಾಗಿ ನೋಡುತ್ತಿದ್ದು ಬಳಿಕೆಂದ " ಒಂದು ವಿಷಯ ಚೆನ್ನಾಗಿ ನನ್ನ ಗಮನಕ್ಕೆ ಬಂದಿದೆ— ಮಹಿಮನಿಗೆ ಎಷ್ಟೂ ವ್ಯಥೆಯಾಗ ಬಾರದೆಂದು ನೀವು ಜತನಪಡುತ್ತಿದ್ದೀರಿ ಸರಿ, ಹಾಗೇ ಆಗಲಿ ಅವನಿಗೆ ಇದಾವುದೂ ಹೇಳುವುದಿಲ್ಲ ಇಂದವನ ಬಗ್ಗೆ ನನ್ನ ಮನಸಿನಲ್ಲೇಳುವ ಯಾವ ಭಾವನೆಯನ್ನೂ ತಿಳಿಸುವುದಿಲ್ಲ ಆದರೆ ನಿಮಗೊಂದು ಮಾತು ಕೇಳದೆ ಹೊರಡುವುದಾಗದು "

ಅಚಲೆ ಸ್ನಿಗ್ಧನೇತ್ರಗಳನ್ನು ಮೇಲೆತ್ತಿ, " ಒಳ್ಳೆಯದು, ಕೇಳಿರಿ, " ಎಂದಳು

"ಅವನ ಹತ್ತಿರ ಕ್ಷಮೆ ಬೇಡುವುದಿಲ್ಲ, ನಿಮ್ಮ ಹತ್ತಿರ ಬೇಡುತ್ತೇನೆ ನನ್ನ ತಪ್ಪು ಮನ್ನಿಸಿರಿ," ಎಂದು ಸುರೇಶ ಪಕ್ಕನೆ ಕೈಜೋಡಿಸಿದ

"ಛೆ ಛೆ, ಇದೇನು ಮಾಡುವಿರಿ!" ಎಂದು ಅಚಲೆ ತಟ್ಟನೆ ಅವನ ಕೈಗಳೆರಡನ್ನೂ ಹಿಡಿದು ಕೆಳಗೆ ಮಾಡಿ, ಸರಕ್ಕನೆ ಬಿಟ್ಟು ಎಂದಳು: "ಇದೇನು ಮಹಾ ಅನ್ಯಾಯ—" ಮಾತಾಡುತ್ತಿದ್ದಂತೆ ಅವಳ ಮೋರೆ ನಾಚಿಕೆಯಿಂದ ಕೆಂಪಾಯಿತು ಸುರೇಶನ ಸರ್ವಾಂಗವೂ ರೋಮಾಂಚಿತ ವಾಯಿತು ಆ ಆಶ್ಚರ್ಯಸ್ಪರ್ಶ, ಆ ಸಲಜ್ಜಮುಖದ ಅಪರೂಪ ರಕ್ತಿಮ ದೀಪ್ತಿ ಅವನನ್ನು ಒಮ್ಮೆಲೆ ಪರಿವೆದಪ್ಪಿಸಿತು ಕೊಂಚ ಸಮಯ ಅವಳ ಆನತ ಮುಖವನ್ನೇ ನೋಡುತ್ತ ಸ್ತಬ್ಧವಾಗಿದ್ದ ಕೊನೆಗೆ ಸಾವರಿಸಿ ಕೊಂಡು ಮಾತನಾಡಿದ "ಅಲ್ಲ, ನನ್ನದೇನು ಅನ್ಯಾಯವಲ್ಲ ನನ್ನ ಸಾವಿರ ಕೋಟಿ ಅನ್ಯಾಯಗಳ ನಡುವೆ ಒಂದೊಳ್ಳೆಯ ಕೆಲಸವೆಂದರೆ ಇದು. ನೀವು ಕ್ಷಮಿಸಿದಾಗಳೇ ನನ್ನ ಮನಸಿನ ಸಮಸ್ತ ಕ್ಷೋಭ ತೊಳೆದು ಹೋಗುವುದು"

ಅಚಲೆ ಕಾತರಳಾಗಿ, "ನೀವು ಅಂಥದೇನೂ ಮಾತಾಡಲಿಲ್ಲ ಎರ ಡೆರಡು ಬಾರಿ ವ್ಯತ್ಯಗ್ರಾಸದಿಂದ ಹಿಂದಿರುಗಿಸಿದ—"

"ಇದೂ ತಿಳಿದಿದೆಯೆ?"

"ತಿಳಿದಿದೆ ನಿಮ್ಮಂತಹ ಗೆಳೆಯರು ಅವರಿಗಿದ್ದಾರೆ ಯಾರು?"

"ಇಲ್ಲ, ನನಗೆನಿಸುತ್ತಿದೆ, ನಿಮ್ಮಹೊರತಿಲ್ಲ ಮತ್ತದೇ ಸಂಬಂಧದಲ್ಲಿ ನಾವಿಬ್ಬರೂ—"

ಅಚಲೆಯ ಮುಖದಲ್ಲಿ ಮತ್ತೆ ಕೆಂಪು ತೋರಿತು. "ಹಾಂ, ಮಿತ್ರರೇ, ನೀವು ಅವರನ್ನು ಸಾವಿನ ದವಡೆಯಿಂದ ಬಿಡಿಸಿರುವಿರೆಂದೇ, ಅವರಿಗೆ ಅನ್ಯಾಯ ಮಾಡುವಿರೆಂದು ನನಗೇನು ಎನಿಸುವುದಿಲ್ಲ ಮನಸಿಗೇನೂ ಕ್ಷೋಭ ಲಜ್ಜೆ ಹಚ್ಚಿಕೊಳ್ಳಬೇಡಿರಿ ಬಾಯಿಂದ 'ಕ್ಷಮೆ' ಎಂದ ಮಾತ್ರ ದಿಂದಲೇ ನಿಮಗೆ ತೃಪ್ತಿಯಾಗುತ್ತಿದ್ದರೆ, ಅದನ್ನೂ ಆಡಲು ಸಿದ್ಧಳಿದ್ದೆ— ಗಂಟಲಲ್ಲಿ ತಡೆಯದಿದ್ದರೆ"

"ಸರಿ ಅಗತ್ಯವಿಲ್ಲ!" ಎಂದು ಎದ್ದುನಿಂತು "ನಿಮ್ಮ ತಂದೆಯನ್ನು ಮತ್ತೆ ಕಾಣಲಾಗಲಿಲ್ಲ ಅವರು ಕೆಲಸದಲ್ಲಿರಬಹುದು. ಮಹಿಮನೊಂದಿಗೆ ಮತ್ತೆ ಯಾವಾಗಲಾದರೂ ಬರುತ್ತೇನೆ, ನಮಸ್ಕಾರ," ಎಂದ ಸುರೇಶ.

ಅಚಲೆ ನಸುನಗೆಯೊಡನೆ ಎಂದಳು "ಅವರೊಂದಿಗೇ ಬರಬೇಕೆಂದೇನೂ ನಿಯಮವಿಲ್ಲ"

"ನಿಜವಾಗಿ?"

"ನಿಜವಾಗಿ"

"ನನ್ನ ಸುದೈವ," ಎಂದು ಸುರೇಶ ಮತ್ತೆ ವಂದಿಸಿ ಹೊರಹೊರಟ

ಹೊರಗೆ ಬರುತ್ತಲೆ ಸುರೇಶನ ತನುಮನ ಎರಡೂ ಕುಡಕರಂತೆ ಡೋಲಾಯಮಾನವಾದವು ಆಗ ಕಡುಬಿಸಿಲು ಕಳೆಗುಂದಿತ್ತು ಎಕ್ಕಕ್ಕೆ ಅಪ್ಪಣೆಕೊಟ್ಟು ನಡೆದುಕೊಂಡು ಹೊರಟ ಕಿಕ್ಕಿರಿದು ಗಜಬಜಿಸುವ ರಾಜಮಾರ್ಗದಲ್ಲಿ ಪೂರ್ಣ ತನ್ಮಯನಾಗಿ ನೋಡಬೇಕೆಂದು ಅವನಿಚ್ಛೆ ಆದರೆ ಅಚಲೆಯ ಮುಖ, ನಡೆನುಡಿ ಎಲ್ಲವೂ ಪುನಃ ಪುನಃ ಮನಸಿನಲ್ಲಿ ಸುಳಿದು ಅವನಿಗೆ 'ತಾನು ಕಿರುಕುಳ' ಎಂದೆನಿಸತೊಡಗಿತು

ಮುಖದಲ್ಲಿ ಅಲೌಕಿಕ ಸೌಂದರ್ಯವಿಲ್ಲ ಮಾತಿನೊಳಗೆ, ನಡತೆಯೊಳಗೆ ವಿದ್ಯಾಬುದ್ಧಿಗಳ ಅಪರೂಪತೆ ಕಾಣಿಸಲಿಲ್ಲ ಆದರೂ ಎಂತಹ ಅಗಾಧವಸ್ತು! ಇಂಥದನ್ನು ತಾನೆಂದೂ ಈ ವರೆಗೆ ಕಾಣಲಿಲ್ಲ ಎಂದೇಕೋ ಎನಿಸುತ್ತಿತ್ತು ಅವನಿಗೆ! ಈ ಅಗಾಧತ ಏತರದು? ತನ್ನನ್ನಿಷ್ಟು ಬೆರಗಾಗಿಸಿದುದು ಏತರಿಂದ? ಎಂದು ತನ್ನ ತಾನೇ ಕೇಳಿಕೊಂಡ ಈ ರಮಣಿಯಲ್ಲಿ ಅಂಥದೇನು ಕಂಡೆ? ತನ್ನ ಮನಸು ಏತರಲ್ಲಿ ತಲ್ಲೀನವಾಗಿ ಅಜ್ಞಾತ ಸಾರ್ಥಕತೆಯಿಂದ ವ್ಯಾಕುಲವಾಗಿದೆ? ಆ ಹುಡುಗಿಯ ಪರಿಚಯ ಈ ವರೆಗೂ ತನ್ನ ಭಾಗ್ಯದಲ್ಲಿ ಘಟಿಸಲಿಲ್ಲ ನಿಜ. ಆದರೂ ಅದನ್ನು ಹೊಂದುವುದು ಯಾವ ಪುರುಷನಿಗೂ ದುರ್ಭಾಗ್ಯವಲ್ಲವೆಂದು ತನಗೇಕೆ ಒಮ್ಮೆಯೂ ಎನಿಸದೆ ಹೋಯಿತೊ? ವಿಚಾರ ಮಾಡುಮಾಡುತ್ತಿದ್ದಂತೆ ಹಠಾತ್ತಾಗಿ ವಿಚಾರಧಾರೆ ತಕ್ಕಸ್ಥಳದಲ್ಲಿ ಆಘಾತಿಸಿತು 'ಈ ಹುಡುಗಿ ಜ್ಞಾನದಲ್ಲಿ, ಶಿಕ್ಷಣದಲ್ಲಿ, ವಯಸ್ಸಿನಲ್ಲಿ ಎಲ್ಲದರಲ್ಲಿಯೂ ತನಗಿಂತ ಕಿರಿಯಳಾದರೂ ನಾಲ್ಕಾರು ಮಾತುಗಳಲ್ಲಿಯೇ ತನ್ನನ್ನು ಸೋಲಿಸಿದುದು ಸಂಯಮದಿಂದ' ಎಂದು ಅವನಿಗೆನಿಸಿತು ಶಾಂತಳಿದ್ದಷ್ಟೂ ದೃಢ, ಇಷ್ಟು ಗೊತ್ತಿದ್ದೂ ಮೌನ! ಮಹಿಮನ ಬಗ್ಗೆ ತಾನು ಪ್ರಗಲ್ಭನಂತೆ ತಿರಪಿಲ್ಲದೆ ಬಡಬಡಿಸಿದರೂ ತಲೆತಗ್ಗಿಸಿಕೊಂಡು ಕೇಳುತ್ತಿದ್ದಳು, ಎಂಥ ತಾಳ್ಮೆ! ಚಂಚಲಳಾಗಿ ಇಲ್ಲ

ದುದು ತಿಳಿದುಕೊಂಡು ಜಗಳವಾಡಿ? ಕೇಳುತನ ತೋರಲಿಲ್ಲ ಮಹಿಮ ನನ್ನು ತಾನೆಷ್ಟು ಪ್ರೀತಿಸುವಳೆಂಬುದನ್ನು ತೋರ್ಪಡಿಸಲಿಲ್ಲ ನಿಜ, ಆದರೆ ತನ್ನ ಶ್ರದ್ಧೆ ಎಳ್ಳಷ್ಟೂ ಕುಗ್ಗಲಿಲ್ಲವೆಂಬುದನ್ನು ಸಂಕ್ಷೇಪದಲ್ಲಿ ತಿಳಿಸಿದಳು.

ಈ ವಿದ್ಯೆ ಮಹಿಮನಿಂದಲೇ ಕಲಿತಿದ್ದಾಳೆ, ಚೆನ್ನಾಗಿಯೆ ಕಲಿತಿದ್ದಾಳೆ, ಎಂದು ಅನೇಕ ಸಲ ಮನಸಿನೊಳಗೆ ಎಂದುಕೊಂಡ ತನ್ನಲ್ಲಿ ಹುಟ್ಟಾ ಸಂಯಮದ ಅಭಾವವಿದೆಯಾಗಿ, ಅದು ಮತ್ತೊಬ್ಬರಲ್ಲಿ ಧಾರಾಳವಾಗಿದ್ದುದನ್ನು ಕಂಡು ಸುರೇಶನ ಸುಸಂಸ್ಕೃತ ಸಭ್ಯ ಅಂತಃಕರಣ ಆ ಗೌರವಮಯಿಯ ಪದತಲದಲ್ಲಿ ತಂತಾನೇ ಬಾಗಿ ಧನ್ಯ ಎಂದುಕೊಂಡಿತು

ಎಷ್ಟೋ ಓಣಿ ಕೇರಿ ತಿರುಗಿ ದಣಿದು ಸಂಜೆಗೆ ಮನೆಸೇರಿದ ಕೂಡುವ ಕೋಣೆಯಲ್ಲಿ ಹಣಿಕಿಕ್ಕುತ್ತಲೇ ಅಚ್ಚರಿಗೊಂಡ ಮಹಿಮ ಕೈಯಿಂದ ಕಣ್ಣುಮುಚ್ಚಿಕೊಂಡು ಕೋಚಿನ ಮೇಲೆ ಬಿದ್ದುಕೊಂಡಿದ್ದವನು ಎದ್ದು ಕುಳಿತು, "ಬಾ, ಸುರೇಶ," ಎಂದ

"ಸರಿ, ಬಂದಿದ್ದೀಯಾ ?" ಎನ್ನುತ್ತ ಚೌಕಿಯೊಂದನ್ನೆಳೆದುಕೊಂಡು ಅವನ ಹತ್ತಿರ ಕುಳಿತ ಮಹಿಮ ಅವರ ಮನೆಗೆ ಆಗಾಗ ಹೋಗುತ್ತಲಿದ್ದ. ಆಗ ಸುರೇಶ ಅತ್ಯಾನಂದದಿಂದ ಸ್ವಾಗತಿಸುವ ರೀತಿ ಕೊಂಚ ಉಗ್ರವಾಗಿಯೆ ಇರುತ್ತಿತ್ತು ಆದರಿಂದು ಹೆಚ್ಚಿನ ಶಬ್ದಕೂಡ ಹೊರಡಲಿಲ್ಲ ಮಹಿಮನಿಗೆ ಅಚ್ಚರಿಯಾಯಿತು "ನಿವಾಸಕ್ಕೆ ತಿರುಗಿ ಬಂದಾಗ ನೀನು ಬಂದಿದ್ದೆ ಎಂದು ತಿಳಿಯಿತು ಆದರಿಂದ ನಾನೆಂದುಕೊಂಡೆ— "

"ದಯವಿಟ್ಟು ಒಮ್ಮೆ ಮೋರೆ ತೋರಿಸಿದೆ ಅಲ್ಲ, ಬರದೆ ಎಷ್ಟು ದಿನವಾಯಿತು ಗೊತ್ತೆ ?"

"ಹೌದು ಸಮಯವೇ ಸಿಕ್ಕಲಿಲ್ಲ," ಎಂದು ಮಹಿಮ ಸುರೇಶನನ್ನು ದಿಟ್ಟಿಸಿದ ಅವನ ಮುಖ ಕಳೆಗುಂದಿ ಕರಿನವಾಗಿತ್ತು ಅವನನ್ನು ನಗಿಸುಗೊಳಿಸುವ ಅಭಿಲಾಷೆಯಿಂದ ಮತ್ತೆ ನುಡಿದ "ನಿನಗೆ ಸಿಟ್ಟು ಬರುವುದೆಂದು ನಾ ಸಾವಿರ ಸಲ ಒಪ್ಪುವೆ, ಸುರೇಶ ನನಗೆ ನಿಜವಾಗಿಯೂ ಪುರಸತ್ತಾಗಲಿಲ್ಲ ಈಗ ಓದಿಕೊಳ್ಳುವುದೂ ಇದೆ, ಅಲ್ಲದೆ ಮುಂಜಾನೆ ಹ್ಞಂದೆರಡು ಟಿಲುಶನ್— "

"ಈಗ ಟಿಲುಶನ್ ಹಿಡಿದಿದ್ದೀಯಾ ?"

ಮಹಿಮ ಉತ್ತರದ ಗೊಡವೆ ಬಿಟ್ಟು,"ನನ್ನ ಹುಡುಕಿದ್ದೀಯಾದೀತು.

ಏನಾದರೂ ವಿಶೇಷವಿತ್ತೇ ?" ಎಂದ

"ಹೂಂ, ನೀ ಬರದಿದ್ದರೆ ಮುಂಜಾನೆ ನಾ ಮತ್ತೆ ಬರುತ್ತಿದ್ದೆ"

ಮಹಿಮ ಪ್ರಶ್ನಾರ್ಥಕ ದೃಷ್ಟಿಯಿಂದ ನೋಡತೊಡಗಿದ ಬಹಳ ಹೊತ್ತು ಸುರೇಶ ಸುಮ್ಮನೆ ಪಾದರಕ್ಷೆಯ ಕಡೆಗೇ ನೋಡುತ್ತಿದ್ದು, "ಇಷ್ಟು ದಿವಸಗಳಲ್ಲಿ ಕೇದಾರರ ಮನೆಗೆ ನೀ ಹೋಗಿಲ್ಲ ಕಾಣುತ್ತದೆ ?" ಎಂದ

"ಇಲ್ಲ"

"ಏಕೆ ? ನನಗೋಸುಗವೆ ? ಒಳ್ಳೆಯದು, ಈಕ್ಷಣ ಆ ಅಡ್ಡಗೆರೆ ಅಳಿಸಿಬಿಟ್ಟಿದ್ದೇನೆ ಇನ್ನು ಬೇಕಾದಹಾಗೆ ಹೋಗಬಹುದು."

"ಹೋಗಬಾರದೆಂದು ಪ್ರತಿಜ್ಞೆ ಮಾಡಿಲ್ಲವಲ್ಲ"

"ಮಾಡದಿದ್ದರೆ ಸರಿಯೆ ಆದರೂ ನಾ ಮಾತ್ರ ನನ್ನ ಅಡ್ಡಿ, ಹಿಂತೆಗೆದಿದ್ದೇನೆ"

"ಇದೇನು ಅನುಗ್ರಹವೊ ನಿಗ್ರಹವೋ ಸುರೇಶ ?"

"ನಿನಗೇನು ಎನಿಸುತ್ತದೆ ?"

"ಯಾವಾಗಲೂ ಎನಿಸುತ್ತಿದ್ದಂತೆ"

"ಎಂದರೆ ? ಬೇಡವೆಂದುದು ಬರೀ ಹುಚ್ಚಾಟ ಎಂದಲ್ಲವೆ ? ನೀ ಬೇಕಾದುದು ತಿಳಿದುಕೋ. ನಾ ಮಾತ್ರ ನನ್ನ ತಡೆ ತೆಗೆದಿರುವೆ"

"ಅದಕ್ಕೆ ಕಾರಣ ಹೇಳಬಹುದೆ ?"

"ಹುರುಳಿಲ್ಲದ ಹುಚ್ಚಾಟಕ್ಕೆ ಕಾರಣವೂ ಉಂಟೆ ? ಅದನ್ನು ಹೇಳಲೂ ಬೇಕೆ ?"

ಮಹಿಮ ಕ್ಷಣ ಮೌನವಾಗಿದ್ದು ಗಂಭೀರನಾಗಿ, "ನಿನ್ನ ಹುಚ್ಚಾಟಕ್ಕನುಸಾರವಾಗಿ ಜಗತ್ತಿನಲ್ಲಿ ತಡೆ ಉಂಟಾಗುವುದು, ಮತ್ತೆ ದೂರಾಗುವುದು, ಅದೇನೋ ಸರಿಯೆ ಆದರೆ ವಾಸ್ತವವಾಗಿ ಹಾಗಿಲ್ಲ ಯಾವುದಕ್ಕೆ ನಿನಗೆ ಅಡ್ಡಿಯಿಲ್ಲವೋ ಅದಕ್ಕೆ ನನಗೆ ಅಡ್ಡಿಯುಂಟು," ಎಂದ

"ಹೇಗೆಂದರೆ ?"

"ಹೇಗೆಂದರೇ ?—ನೀನಂದು ಬ್ರಾಹ್ಮ ಮಹಿಳೆಯರ ಬಗ್ಗೆ ಹೇಳಿದುದೆಲ್ಲ ವಿಚಾರಮಾಡಿದೆ ಒಂದು ತಿಂಗಳೊಳಗೆ ನನಗೆ ಕನ್ನೆ ಗೊತ್ತು ಮಾಡುವೆ ಎಂದಿದ್ದೆಯಲ್ಲ, ಅದೇನಾಯಿತು ?"

ಸುರೇಶ ಮೋರೆ ಎತ್ತಿ ನೋಡಿದ ಮಹಿಮ ಗಾಂಭೀರ್ಯದ

ಮುಸುಕಿನೊಳಗೆ ತೀವ್ರ ಪರಿಹಾಸ ನಡೆಸಿದ್ದ ಅವನೂ ಗಂಭೀರವಾಗಿಯೇ ಉತ್ತರವಿತ್ತ "ನಾನೂ ವಿಚಾರ ಮಾಡಿದೆ ಮಹಿಮ, ಬ್ರಹ್ಮಘಟನೆ ಮಾಡಿಸುವುದು ನನ್ನ ಉದ್ಯೋಗವಲ್ಲ" ಎಂದು ನಕ್ಕು ನುಡಿದ "ಚೇಷ್ಟೆ ಸಾಕು ಈ ಕೆಲದಿನ ನನ್ನ ಮಾನ ಕಾಯ್ದೆ, ನಿನಗೆ ಧನ್ಯವಾದ ಈಗ ನನ್ನ ಮಾತು ನಡೆಸುವವನಾದರೆ, ನಾಳೆ ಬೆಳಗ್ಗೆ ಅಲ್ಲಿಗೆ ಹೋಗುವೆಯಷ್ಟೆ ?"

"ಇಲ್ಲ ನಾಳೆ ಬೆಳಗ್ಗೆ ನಮ್ಮೂರಿಗೆ ಹೋಗುವೆ"

"ಯಾವಾಗ ಮರಳುವೆ ?"

"ಹದಿನೈದು ದಿನಕ್ಕೆ ತಿಂಗಳೊಪ್ಪೊತ್ತಾದರೂ ಆದೀತು"

"ತಿಂಗಳೊಪ್ಪೊತ್ತು ! ಬೇಡ, ಹಾಗೆ ಮಾಡಬೇಡ ಮಹಿಮ," ಎಂದು ಸುರೇಶ ಸಾಗರಬಿದ್ದು ಮಹಿಮನ ಬಲಗೈ ತನ್ನ ಕೈಯಲ್ಲಿ ಹಿಡಿದುಕೊಂಡು, "ಮತ್ತೆ ನನ್ನ ಅಪರಾಧ ಹೆಚ್ಚಿಸಬೇಡ ಮಹಿಮ, ನಾಳೆ ಬೆಳಗ್ಗೇ ಅಲ್ಲಿಗೆ ಹೋಗಿ ಬಾ 'ಅವರು' ನಿನ್ನ ಹಾದಿ ಕಾಯುತ್ತಿರುವರು" ಎಂದು ಹೇಳುತ್ತಿದ್ದಂತೆ ಅವನ ದನಿ ನಡುಗಿತು

ಮಹಿಮನ ವಿಸ್ಮಯಕ್ಕೆ ಎಲ್ಲೆಯಿಲ್ಲದಾಯಿತು ಸುರೇಶನ ಆ ಆಕಸ್ಮಿಕ ಆವೇಗ ಕಂಪಿತ ಸ್ವರ, ಆ ಒತ್ತಾಯದ ಪ್ರಚೋದನೆ, ಹೆಚ್ಚಾಗಿ ಬ್ರಾಹ್ಮ ಮಹಿಳೆಯ ವಿಷಯವಾಗಿ ಗೌರವದ ಸಂಬೋಧನೆ ಇವುಗಳಿಂದ ಅವನು ವ್ಯಾಕುಲನಾದ ಕೆಲಹೊತ್ತು ಗೆಳೆಯನ ಮುಖವನ್ನೇ ಎವೆಯಿಕ್ಕದೆ ನೋಡುತ್ತಿದ್ದು ಹೇಳಿದ "ಯಾರು ನನ್ನ ಹಾದಿ ನೋಡುವರು, ಸುರೇಶ ? ಕೇದಾರಬಾಬುಗಳ ಮಗಳೆ ?"

ಸುರೇಶ ತನ್ನ ತಾ ಸಂಬಾಳಿಸಿಕೊಂಡು, "ಹಾಂ, ಅನ್ನು"

ಮಹಿಮ ಮತ್ತೂ ಕೆಲಹೊತ್ತು ಅವನ ಮೋರೆ ನೋಡುತ್ತಲಿದ್ದ. ಅವನಿಷ್ಟರೊಳಗೆ ಬ್ರಾಹ್ಮರ ಮನೆಗೆ ಹೋಗಿ ಅನಾಹೂತ ಪರಿಚಯ ಮಾಡಿಕೊಂಡು ಬಂದಿರಬಹುದೆಂದು ಅವನಿಗೇನು ಎನಿಸಲಿಲ್ಲ ತುಸ ಸಮಯ ಸುಮ್ಮನಿದ್ದು, "ಅಲ್ಲ, ಸುರೇಶ, ನಾ ಸೋತೆ— ನಿನ್ನಿಂದಿನ ಪ್ರವೃತ್ತಿಯೆ ನನ್ನ ಬುದ್ಧಿಗೆ ಎಟಕದಾಗಿದೆ ಬ್ರಾಹ್ಮ ಪುತ್ರಿ ಹಾದಿ ನೋಡುತ್ತಿರುವ ಸುದ್ದಿ ನಿನ್ನ ಬಾಯಿಂದ ತಿಳಿಯುವುದು ಅಸಂಭವ."

"ಆಗಲಿ, ಇದನ್ನೊಮ್ಮೆ ನಿಜಮಾಡಿ ಕೊಡುವೆ ಹೇಳು, ನಾಳೆ ಮುಂಜಾನೆ ಹೋಗಿಬರುವೆಯಾ ?"

" ಇಲ್ಲ ನಾಳೆ ಆಗದು ಬೆಳಗಿನ ಗಾಡಿಗೇ ಹೊರಡಬೇಕು "

" ಒಂದೆರಡು ನಿಮಿಷ ? "

" ಇಲ್ಲ, ಅಷ್ಟೂ ಆಗುವುದಿಲ್ಲ ಅಲ್ಲ, ನಿನಗೇನಾಗಿದೆ ಸುರೇಶ ? "

" ಅದನ್ನು ಮತ್ತೊಂದಾದರೂ ಹೇಳೇನಂತೆ ಒಳ್ಳೆಯದು, ಹಾಗಾದರೆ ನಾನೇ ಹೋಗಿ ನಿನ್ನ ವಿಷಯ ತಿಳಿಸಿ ಬರಲಾ ? "

ಮಹಿಮನಿಗೆ ಮತ್ತಷ್ಟು ಆಚ್ಚರಿ " ತಿಳಿಸಿ ಬಾ ಆದರೆ, ಅದರ ಅಗತ್ಯ ಕಾಣುವುದಿಲ್ಲ " ಎಂದ

" ಅಗತ್ಯವಿಲ್ಲದಿದ್ದರಿಲ್ಲ ಎಲ್ಲವೂ ಅಗತ್ಯವಾದದ್ದೇ ಇರುವುದಿಲ್ಲ. ನನ್ನ ಹೆಸರು ಹೇಳಿದರೆ ಅವರು ಗುರುತಿಸಬಹುದೆ ? "

" ಗುರುತಿಸದೇನು ? "

" ನಿನ್ನ ಗೆಳೆಯನೆಂದು ಗುರುತಿಸುವರಷ್ಟೆ ? "

" ಹಾಂ "

ಸುರೇಶ ನಗಲು ಹವಣಿಸುತ್ತ ಎಂದ " ಅಥವಾ, ಘೋರತರ ಬ್ರಾಹ್ಮವಿದ್ವೇಷಿಯಾದ ನಿನ್ನೊಬ್ಬ ಹಿಂದೂ ಮಿತ್ರನೆಂದು ಗುರುತಿಸುವರು, ಅಲ್ಲವೆ ? "

" ಆದರೆ ಅದೇ ನಿನಗೆ ಹೆಚ್ಚಿನ ಹೆಮ್ಮೆಯ ಮಾತಲ್ಲವೆ ? "

" ಹೌದು, " ಎಂದು ಸುರೇಶ ಕೊಂಚಹೊತ್ತು ಸುಮ್ಮನೆ ನೆಲ ನೋಡುತ್ತಲಿದ್ದು, ಪಕ್ಕನೆ ಎದ್ದು ನಿಂತು, " ಇಂದು ನನಗೆ ಬಹಳ ನಿದ್ದೆ ಬಂದಿದೆ ಮಲಗಿಕೊಳ್ಳುವೆ " ಎಂದು ಅನ್ಯಮನಸ್ಕನಂತೆ ನಿಧಾನವಾಗಿ ಹೊರಟುಹೋದ

೬

ತನ್ನ ಮಾತಿಗೆ ಮಹಿಮ ಎಷ್ಟೇ ಹಾರಿಸಿಕೊಂಡು ಮಾತನಾಡಲಿ, ತನ್ನ ಮಾತು ಮೀರಲಾರದೆಯೇ ಇಷ್ಟು ದಿನ ಅವನು ಅಚಲೆಯನ್ನು ಕಂಡಿಲ್ಲ ಎಂಬುದು ಸುರೇಶನ ಮನಸಿಗೆ ಖಚಿತವಾಯಿತು ಅವಳಲ್ಲಿ ಅವನಿಗೆ ಎಷ್ಟು ಪ್ರೀತಿಯಿದ್ದರೂ ಬ್ರಾಹ್ಮ ಮಹಿಲೆಯೆದುರು ತನ್ನ ಬಾಲ್ಯ ಸ್ನೇಹಿತನನ್ನು ಕಿರುಕುಳ ಮಾಡಿಲ್ಲ ಎಂಬುದು ನಿನ್ನೆಯೇ ಗೊತ್ತಾಗಿದ್ದರೆ ಸುರೇಶ ಹೆಮ್ಮೆಯಿಂದ ಹತ್ತು ಮೊಳ ಉಬ್ಬುತ್ತಿದ್ದ ಆದರಿಂದು ಈ ವಿಚಾರ ಏಕಾಂತಶಯನದಲ್ಲಿ ಎಷ್ಟೂ ನೊಗಸಲಿಲ್ಲ. ಇಂದಿಲ್ಲ ನಾಳೆ ಮಾತು

ಮಾತಾಡುತ್ತ ನಗೆಚಾಟಿಕೆಯಲ್ಲಿ ತನ್ನ ವಿಷಯವೆಲ್ಲ ಅಚಲೆಯ ಕಿವಿಗೆ ಮುಟ್ಟುವುದೇ ಎಂದು ಅವನಿಗೆ ಮತ್ತೆ ಮತ್ತೆ ಎನಿಸತೊಡಗಿತು ಆಗ ಸುಖದ ಮಡಿಲಲ್ಲಿ ಕುಳಿತ ಅವಳಿಗೆ ತನ್ನ ಗಂಡನ ಯಃಕಶ್ಚಿತ ಮಿತ್ರನ ನಿಷ್ಫಲ ಈರ್ಷೆಯ ಅರ್ಥವೇ ಆಗಲಿಕ್ಕಿಲ್ಲ ಆದರೂ ಆ ಅಲ್ಪಭಾಷಿಣಿ ವಿನೋದಕ್ಕಾಗಿ ಕೂಡ ಅವನನ್ನು ಏನೊಂದೂ ಪ್ರಶ್ನಿಸಳು ಮನಸಿನೊಳಗೇ ನಕ್ಕು, ಈ ಮನುಷ್ಯ ಗೆಳೆತನದ ಅಭಿಮಾನದಿಂದ ಎಷ್ಟು ವ್ಯರ್ಥ ತೊಳಲಿದ್ದಾನೊ, ವ್ಯರ್ಥ ಆಕ್ರೋಶದಿಂದ ಒಳಗೊಳಗೆ ಎಷ್ಟು ಬೆಂದಿದ್ದಾನೋ ಎಂದು ಎಂದುಕೊಳ್ಳಬಹುದು

ರಾತ್ರಿ ಅವನಿಗೆ ಚೆನ್ನಾಗಿ ನಿದ್ದೆ ಹತ್ತಲಿಲ್ಲ ನಿದ್ದೆ ಮುರಿದಾಗೆಲ್ಲ, ಕಟುವಿಚಾರಗಳೇ, ಎರಡನೆಯವರಿಗಾಗಿ ತಲೆನೋವು ಮಾಡಿಕೊಳ್ಳುವುದು ನಿನಗೆಂದು ತಪ್ಪುವುದು ಸುರೇಶ? ಎಂದು ಅವನನ್ನು ಧಿಕ್ಕರಿಸುತ್ತಿದ್ದವು.

ಮುಂಜಾನೆ ಎದ್ದ ಬಳಿಕ ದಿನದ ಯಾವ ಕೆಲಸಕ್ಕೂ ಮನಸು ಒಗ್ಗಲಿಲ್ಲ ಹೊತ್ತು ಏರೇರುವುದರೊಳಗೆ ಎಕ್ಕ ಮಾಡಿಕೊಂಡು ಕೇದಾರ ಬಾಬುಗಳ ಮನೆಗೆ ಹೋದ ಅವರು ಆಲಿಪುರ ಕೋರ್ಟಿಗೆ ಹೋಗಿದ್ದಾರೆ, ಬರಲಿಕ್ಕೆ ಮೂರು ನಾಲ್ಕು ಗಂಟೆ ಬೇಕು ಎಂದು ಆಳಿನಿಂದ ತಿಳಿಯಿತು ಸುರೇಶ ಹೊರಡಲುದ್ಯುಕ್ತನಾಗಿ ಕೇಳಿದ "ಇಬ್ಬರೂ?"

ಆಳಿಗೆ ಗೊತ್ತಾಗಲಿಲ್ಲ "ಅದೇನೋ ನಾನರಿಯೆ" ಎಂದ

ಸುರೇಶ ತೊಡಕಿನಲ್ಲಿ ಬಿದ್ದ ಹಿರಿಯರಿಲ್ಲದಾಗ ಹರಯದ ಹುಡುಗಿಯ ಬಗ್ಗೆ ಕೇಳುವುದು ಬ್ರಾಹ್ಮಪರಿವಾರದಲ್ಲಿ ಶಿಷ್ಟಾಚಾರಕ್ಕೆ ಒಪ್ಪುತ್ತದೋ ಇಲ್ಲವೋ ಅವನಿಗೆ ತಿಳಿಯದೆ ಹೋಯಿತು ಆದರೆ ಅವಳೇ ಅವನಿಗೆ ಬೇಕಾದುದು "ನಿಮ್ಮ ಬಾಬುಗಳು ತಿರುಗಿ ಬರುವುದಕ್ಕೆ ಅಷ್ಟೇನು ತಡವಾಗಲಿಕ್ಕಿಲ್ಲ, ಗಂಟೆ ಅರ್ಧ ಗಂಟೆ ಕಾಯುವೆ," ಎಂದ

ಆಳು ಸುರೇಶನನ್ನು ಕುಳ್ಳಿರುವ ಕೋಣೆಯೊಳಗೆ ಕುಳ್ಳಿರಿಸಿ, "ಅಕ್ಕಾಜಿ ಒಳಗಿದ್ದಾರ, ತಿಳಿಸಲೋ?" ಎಂದ ಅಚಲ ಈ ಗೃಹಸ್ಥನೆದುರಿಗೆ ಒರುತ್ತಾಳೆಂಬುದನ್ನು ಅವ ನಿನ್ನೆಯೆ ನೋಡಿದ್ದ ಸುರೇಶ ಒಳಗಿನ ಆತುರತೆಯನ್ನು ಕಷ್ಟದಿಂದ ತಡೆದು ನಿರಿಚ್ಛೆಯಿಂದ "ಅವರನ್ನು ಬರಹೇಳುವೆಯಾ? ಹೂಂ, ಹೇಳು ಅವರ ಸಂಗಡಲೇ ಎರಡು ಮಾತನಾಡುತ್ತೇನೆ" ಎಂದ.

ಆಳು ಹೋದ ತುಸುಹೊತ್ತಿನಲ್ಲಿ ಪಕ್ಕದ ಬಾಗಿಲ ತೆರೆಯನ್ನು

ಸರಿಸಿ ಅಚಲೆ ಪ್ರವೇಶಿಸಿದಳು ಸುರೇಶ ಎದ್ದು ನಿಂತು ನುಡಿದ. "ಮಹಿಮ ಊರಿಗೆ ಹೊರಟುಹೋದ ನಾನೆಷ್ಟು ಹೇಳಿದೆ— ನಿಮ್ಮನ್ನು ಒಮ್ಮೆಯಾದರೂ ಕಂಡು ಹೋಗು ಎಂದು,— ಕೇಳಲಿಲ್ಲ. ಹೀಗೆ— "

ಅಚಲೆಯ ಮುಖ ಕ್ಷಣ ಬಿಳಿಚಿಗೊಂಡಿತು ನಮಸ್ಕರಿಸಿ ತಾನೊಂದು ಚೌಕಿ ಗ್ರಹಣಮಾಡಿ ಎಂದಳು "ಅಷ್ಟು ಅಗತ್ಯವಿದ್ದೀತು —ಮನೆಯಲ್ಲಿ ಯಾರಿಗೂ ಜಡ್ಡು ಜಾಪತ್ತು ಇಲ್ಲ ತಾನೆ?"

ಅವಳು ನಮಸ್ಕರಿಸಿದುದನ್ನು ಕಂಡು ಸುರೇಶ ಅಪ್ರತಿಭನಾಗಿ ಪ್ರತಿನಮಸ್ಕಾರ ಮಾಡಿದ ತನ್ನ ಅನಾವಶ್ಯಕ ಉತ್ತೇಜನವನ್ನೂ ಅಚಲೆಯ ಶಾಂತಧೀರ ಮಾತನ್ನೂ ತೂಗಿ ನೋಡಿ ಅತಿಶಯ ಲಜ್ಜಿತನಾದ, ಕುಂಠಿತನಾದ ದನಿಯಲ್ಲಿ ಸಾಧ್ಯವಿದ್ದ ಮಟ್ಟಿಗೂ ಸಹಜತೆ ತಂದುಕೊಂಡು ಮಾತನಾಡಿದ "ಅಗತ್ಯವಿದ್ದೀತು—ಆದರೆ ಒಂದೆರಡು ಮಿನಿಟು ಬಂದು ನಿಮಗೆ ಹೇಳಿ ಹೋಗಲಾರದಂತಹದು ಏನಿದ್ದೀತು! ಮೇಲಾಗಿ ತಿರುಗುವುದು ಯಾವಾಗೆಂಬುದೂ ನಿಶ್ಚಿತವಿಲ್ಲವಂತೆ! ನೀವೇ ಹೇಳಿರಿ–ಮನೆಯಲ್ಲಿ ಅವನಿಗೆ ಯಾರಿದ್ದಾರೆ?—ಯಾರು ಜಡ್ಡುಬಿದ್ದಾರೆಂದು ಹೋಗುತ್ತಾನೆ? ನಾನು ಸತ್ತರೂ ಹೀಗೆ ಮಾಡಲಾರೆ"

ಅಚಲೆಯ ಮುಖದಲ್ಲಿ ಲಜ್ಜಾಯುಕ್ತ ಸ್ನಿಗ್ಧ ಹಾಸ್ಯವೊಂದು ಮೂಡಿತು "ನಿಮಗಿನ್ನೂ ಯಾರೂ ಇಲ್ಲವೆಂದೇ ಹೀಗೆನ್ನುವಿರಿ ಇದ್ದಿದ್ದರೆ ತದ್ರೂಪ ಹೀಗೆಯೇ ಮಾಡುತ್ತಿದ್ದಿರಿ," ಎಂದಳು

ಸುರೇಶ ತನ್ನ ಚೌಕಿಯ ತೋಳು ಬಡಿದು, "ಇಲ್ಲ, ಎಂದೂ ಇಲ್ಲ. ನನ್ನನ್ನು ನೀವರಿಯಿರಿ ಅಂತೆಯೆ ಹೀಗಾಡುವಿರಿ," ಎಂದ

"ಸರಿ, ಈ ಪ್ರೊತ್ತಿನಿಂದ ಅರಿತಿರುವೆ—ಮತ್ತೆ, ಯಾರಾದರೂ ಇದ್ದರೆ ಆಗ ತಿಳಿದೇ ಬಿಡುವುದು ಏನೆಂದಿರಿ?"

"ನಿಶ್ಚಯವಾಗಿ! ನೂರುಬಾರಿ ಸತ್ಯ! ಅಲ್ಲದೆ ಮಹಿಮನಂತೆ ನಾನೇನನ್ನೂ ಗೆಳೆಯನೆದುರು ಬಚ್ಚಿಡುವುದಿಲ್ಲ, ನನಗೆ ಅದೇನು ಸರಿ ಕಾಣುವುದಿಲ್ಲ" ಎಂದು ಸುರೇಶ ಒಮ್ಮಿಗಲೆ ಉತ್ತೇಜಿತನಾಗಿ ನುಡಿದ "ಇದ್ದರೆ ತಿಳಿಯುವುದು ಎಂದೆನ್ನುವಿರಿ ನೀವು ಆದರೆ ನಾನೆನ್ನುವೆ— ನಿಮಗೆ ತಿಳಿಯದೆ, ನಿಮ್ಮ ಮತವಿಲ್ಲದೆ ಇದು ಆಗಿರಲಾರದು ನೀವು ಬೇರೆ ಮಹಿಮ ಬೇರೆ ಎಂದು ನಾ ಬಗೆಯುವುದಿಲ್ಲ,– ಇಬ್ಬರೂ ಒಂದು"

ಅಚಲೆಯ ಮುಖ ನಾಚಿಕೆಗೂಡಿತು "ಒಳ್ಳೆಯದು. ಅದನ್ನು ಹಿಂದುಗಡೆ ನೋಡುವ ಆದರೆ ನಿಮ್ಮ ಪರೀಕ್ಷೆಯ ಶುಭ ದಿನದವರೆಗೂ ನಿಮ್ಮ ಮಿತ್ರ ದೋಷಿಯೆಂದು ಎಣಿಸಲಾರೆ, ಸುರೇಶಬಾಬೂ," ಎಂದಳು

ಸುರೇಶ ಒಮ್ಮೆಲೆ ಗಂಭೀರನಾದ "ನಿಮ್ಮಿಚ್ಛೆ ಆದರೆ ನನ್ನ ಪರೀಕ್ಷೆಯ ಶುಭದಿನ ಈ ಜನ್ಮದಲ್ಲುಂಟೋ ಇಲ್ಲವೊ! ಅದಿರಲಿ ಬೆಳಗ್ಗೆದ್ದೊಡನೆ ನಾ ಬಂದುದೇಕೆ ಗೊತ್ತೆ? ನಿನ್ನೆ ರಾತ್ರಿ ನನಗೆ ನಿದ್ದೆಯೇ ಹತ್ತಲಿಲ್ಲ, ಬರುವುದು ಬಿಟ್ಟರೆ ಇಂದೂ ಹತ್ತುವುದಿಲ್ಲ ಎಂದು ಗೊತ್ತು ನಾ ಅನೇಕ ಅಪರಾಧ ಮಾಡಿದ್ದೇನೆ, ಅವನ್ನೆಲ್ಲ ಒಂದೊಂದಾಗಿ ತಮ್ಮಲ್ಲಿ ಒಪ್ಪಿಕೊಳ್ಳಲೆಂದೇ ಬಂದೆ," ಎಂದ

ಅವನ ಪ್ರಬಲ ವಿರೋಧ ಅಚಲೆಗೆ ಅರಿಯದುದಲ್ಲ ಅಂತೆಯೇ ಸಾಶಂಕ ಮುಖದಿಂದ ಅವನ ಮೋರೆ ನೋಡತೊಡಗಿದಳು ಅವನು ಹೇಳತೊಡಗಿದ "ನಿನ್ನೆ ಸಂಜೆಗೆ ನಾ ಮನೆಗೆ ಹೋದಾಗ ಮಹಿಮ ಬಂದು ಕುಳಿತಿದ್ದ ಹಾಂ, ನೀವು ಬಲ್ಲಿರಿ ನಾನು ಬ್ರಾಹ್ಮರ ಕಣ್ಣಿಗೆ— ಅರ್ಥಾತ್ ಏನಿಲ್ಲ, ಬ್ರಾಹ್ಮಸಮಾಜವನ್ನು ನಾನೇನು ಅಷ್ಟು ಉತ್ತಮವೆಂದು ಎಣಿಸುವುದಿಲ್ಲ"

"ಹೂಂ, ನನಗೆ ಗೊತ್ತಿದೆ"

"ಗೊತ್ತಿಲ್ಲದೇನು? ಆದರೆ ಆಗ ನನಗೆ ನಿಮ್ಮ ಗುರುತಿರಲಿಲ್ಲವೆಂಬುದನ್ನು ಮರೆಯಬೇಡಿರಿ ಅಂತೆಯೇ ಮಹಿಮನನ್ನು ಒಂದು ತಿಂಗಳು ಇಲ್ಲಿಗೆ ಬರದಂತೆ ತಡೆದಿದ್ದೆ ಏಕೆ ಗೊತ್ತೇ?"

"ಇಲ್ಲ ಗಂಡುಸರಿಗೆ ಮರೆಯುವುದಕ್ಕೆ ಒಂದು ತಿಂಗಳು ಸಾಕು— ಹೆಚ್ಚು ಬೇಡ, ಎಂದು ನೀವು ಎಣಿಸಿದಂತೆ ತೋರುತ್ತದೆ"

ಈ ಏಟನ್ನು ವಿನಯದಿಂದ ಸೈರಿಸಿಕೊಂಡು ಸುರೇಶ ನುಡಿದ. "ಯಾವಾಗಲೂ ನನ್ನ ಬುದ್ಧಿಯೇ ಹಾಗೆ, ಏನೋ ವಿಚಾರದಿಂದ ಏನೇನೋ ಮಾಡಿಕೊಂಡು ಕೂಡುತ್ತೇನೆ ಅಲ್ಲದೆ, ನಿಮ್ಮ ವಿರುದ್ಧ ನನ್ನ ಕಾರಸ್ಥಾನವೂ ಇತ್ತು— ಒಂದು ತಿಂಗಳೊಳಗೆ ಬೇರೆ ಹುಡುಗಿ ನೋಡಿ ಮಹಿಮನ ಮದುವೆ ಮಾಡುವ ವಿಚಾರವಿತ್ತು ಅಂತೆಯೇ ಅವನನ್ನು ನಿಗ್ರಹಿಸಿದುದು ನನ್ನ ಗೆಳೆಯನಾಗಿ, ಒಬ್ಬ ಹೆಂಗುಸಿನ ಮೋಹದಲ್ಲಿ ಸಿಕ್ಕಿ ತನ್ನ ಸಮಾಜ ಬಿಡುವನಲ್ಲ— ಹಾಗಾಗಬಾರದೆಂದು"

ನಿಃಶ್ವಾಸವನ್ನು ತಡೆದು ಬಿಟ್ಟು ಅಚಲೆ ಎಂದಳು "ಮುಂದೆ?"

ಅವಳ ಧೂಸರ ಮುಖದ ಕಡೆ ನೋಡಿ ಸುರೇಶ ನಸುನಕ್ಕ "ಮುಂದೇನು ಭಯವಿಲ್ಲ ಈ ಕೆಟ್ಟ ವಿಚಾರ ಬಿಟ್ಟುಬಿಟ್ಟಿರುವೆ ನಿಮ್ಮನ್ನು ಕಾಣಲೇಬೇಕೆಂದು ನಿನ್ನೆ ರಾತ್ರಿ ಅವನನ್ನು ಪರಿಪರಿಯಿಂದ ನಿರ್ಬಂಧಿಸಿದೆ. ಆ ಅನ್ಯಾಯದ ನಿರ್ಬಂಧ ಪಾಲಿಸಿದ, ಇದನ್ನು ಪಾಲಿಸಲಿಲ್ಲ,— ಹಾಗೆಯೇ ಹೋಗಿಬಿಟ್ಟ" ಎಂದ

"ಕಾರಣ ಹೇಳಿದರೆ?"

"ಇಲ್ಲ ಅಗತ್ಯವಿದೆ ಎಂಬ ಮಾತ್ರ"

ಅಚಲ ಮತ್ತೆ ಉಸಿರ್ಗರೆದಳು ಅಗತ್ಯ! ಅಗತ್ಯ! ಯಾವಾಗಲೂ ಅವನ ಬಾಯಲ್ಲಿ ಇದೇ ಮಾತು, ಇದೇ ನಡತೆ, ಅಗತ್ಯವೇ ಅವನ ಸರ್ವಸ್ವ! ಎಂದುಕೊಂಡಳು

"ಚೀಟಿ ಕಳಿಸಿಯಾದರೂ ತಿಳಿಸಬಹುದಿತ್ತು"

ಅಚಲ ಸಾವಕಾಶ ಗೋಣುಹಾಕಿ, "ಚೀಟಿಯೂ ಇಲ್ಲ" ಎಂದಳು.

ಸುರೇಶ ಕ್ಷಣ ಸುಮ್ಮನಿದ್ದು ಮುಖವೆತ್ತಿ ನೋಡಿ ಎಂದ. "ಏನು ಅಗತ್ಯವೆಂಬುವನ್ನೂ ಹೇಳಿಲ್ಲ ಅವನ ಸುಖದುಃಖ ಒಳಿತು ಕೆಡಕು ಎಲ್ಲವೂ ಅವನೊಬ್ಬನದೇ! ಸ್ವಾರ್ಥಿ! ಯಾರಿಗೂ ಪಾಲು ಕೊಡುವುದಿಲ್ಲ ಇದೇ ರೀತಿ ಚಿಕ್ಕಂದಿನಿಂದಲೂ ಕಾಡಿದ್ದಾನೆ ನಿಷ್ಠುರ! ದಿನದಿನವೂ ನಿಃಶಬ್ದವಾಗಿ ಉಪವಾಸಮಾಡುತ್ತ, ದಿನಾಲು ನನ್ನ ಅನ್ನ ಅರುಚಿ-ವಿಷ ಮಾಡಿದ್ದಾನೆ ನನ್ನ ಮೋರೆ ನೋಡಿಯಾದರೂ ಎಂದೂ ನಾ ಕೊಡುವುದನ್ನು ತೆಗೆದುಕೊಳ್ಳಲಿಲ್ಲ ಈ ಪಾಷಾಣನಿಂದ ನನಗೆ ಸುಖವಾಗಲಿಲ್ಲ, ನೀವೇನು ಸುಖ ಸುರಿಯುವಿರೋ ಎಂದು ಭಯವಾಗುತ್ತಿದೆ" ಮಾತಾಡುತ್ತಾಡುತ್ತ ಆವನೆರಡು ಕಣ್ಣುಗಳೂ ಕಂಬನಿಯಿಂದ ಮಿನುಗಿದವು ಲಗುಬಗೆಯಿಂದ ಒರಸಿಕೊಂಡು ಗಟ್ಟಿಯಾಗಿ ನಕ್ಕು ನುಡಿದ "ನೋಡಿರಿ, ನನ್ನ ಹೊರಗು ಒರಟಾಗಿದ್ದರೂ ಒಳಗು ಮಿದುವಾಗಿದೆ ಮಹಿಮನದು ಇದಕ್ಕೆ ತೀರ ವಿಪರೀತ ಆದರೂ ನಮ್ಮಿಬ್ಬರ ಗೆಳೆತನದಂತಹ ಗೆಳೆತನ ಅಪರೂಪ, ಎಂದೆನಿಸುತ್ತದೆ"

ಅಚಲೆ ತಲೆ ತಗ್ಗಿಸಿಕೊಂಡು ಮೃದುಕಂಠದಿಂದ, "ಅದನ್ನು ನಾ ಬಲ್ಲೆ ಸುರೇಶಬಾಬೂ ಅಲ್ಲದೆ ಆ ಗೆಳೆತನ ಇಂದಿಗೂ ಅಕ್ಷಯವಾಗಿಯೇ ಇದೆ.

ಎಳೆತನದ ನೆನಪುಗಳೆಲ್ಲವೂ ಸುರೇಶನ ಅಂತರಂಗದಲ್ಲಿ ಮೂಡಿದವು. ಅಶ್ರುರುದ್ಧ ಸ್ವರದಿಂದ ಅವನೆಂದ “ಹಾಗೆ ನೀವು ತಿಳಿದಿರುವಿರಾದರೆ, ನನಗೊಂದು ಭಿಕ್ಷೆ ನೀಡಿರಿ ನಿಮ್ಮ ಮೇಲೆ ಅಜ್ಞಾನದಿಂದ ಹಗೆತನ ಮಾಡಿದೆನಲ್ಲ, ಆ ಅಪರಾಧ ನನ್ನ ಹೃದಯವನ್ನು ಚುಚ್ಚದಂತೆ ಮಾಡಿರಿ!” ಮತ್ತೆ ಆವೇಗದಿಂದ ಅವನ ಕೊರಳು ಬಿಗ್ಗಿಯಿತು ಈ ವ್ಯಾಕುಲತೆ ಅಚಲೆಯ ಅಂತರ್ಯವನ್ನೂ ಕಲಕಿತು ಅವಳು ಕಂಬನಿಯನ್ನು ಮರೆ ಮಾಚಲು ಮುಖ ತಿರುಗಿಸಿದಳು ಬಾಗಿಲಲ್ಲಿ ತಂದೆ ನಿಂತಿದ್ದರು “ಓ, ಸುರೇಶಬಾಬುಗಳೇ” ಎಂದು ಸಂತಸದಿಂದ ಉದ್ಗರಿಸಿದರು ಸುರೇಶ ಎದ್ದು ನಿಂತು ನಮಸ್ಕಾರ ಮಾಡಿದ

“ಮಹಿಮನ ಸುದ್ದಿ ಏನು,—ಅವನನ್ನು ಕಂಡೇ ಇಲ್ಲ?” ಎಂದು ಕೇದಾರಬಾಬುಗಳು ನಿಂತುಕೊಂಡೇ ಕೇಳಿದರು

“ಮಹಿಮ ಅಗತ್ಯದ ಕೆಲಸವಿದೆಯೆಂದು ಹೇಳಿ ಬೆಳಗಿನ ಗಾಡಿಗೇ ಊರಿಗೆ ಹೋಗಿದ್ದಾನೆ—ಅದನ್ನೇ ಹೇಳಬಂದೆ”

ಅವರು ವಿಸ್ಮಯಗೊಂಡರು “ಊರಿಗೆ ಹೋದನೆ?” ಎಂದು ಒಮ್ಮೆಲೆ ಕಿಡಿಕಿಡಿಯಾಗಿ, ‘ಹೋಗಲಿ, ಇರಲಿ, ಅದೇನು ನಮಗೆ ಸಂಬಂಧ ವಿಲ್ಲ ಆದರೆ ನೀವು ಮಾತ್ರ ಪುರಸತ್ತಿದ್ದಾಗ ಆಗಾಗ ಬಂದು ಹೋಗಿ ಮಾಡಿರಿ ಅದು ನನಗೆ ಬಹಳ ಸಂತೋಷ ಆ ಮಿಥ್ಯಾಚಾರಿ—ನಿಮ್ಮ ಮಿತ್ರ—ನಮ್ಮ ಮನೆಗೆ ಮೋರೆ ತೋರಿಸುವುದೂ ಬೇಡ ತೋರಿಸಿದರೆ ಅವನಂತಹ ನಾಚಿಕೆಗೇಡಿ ಅವನೇ ಏನಿಲ್ಲದಿದ್ದರೂ ಅವಮಾನದ ಭಯ ವಾದರೂ ಇರಲಿ” ಎಂದರು

ಸುರೇಶ ಮುಖ ತಗ್ಗಿಸಿಕೊಂಡೇ ಇದ್ದ ಅವನ ಮನೋಭಾವ ತಿಳಿಯಲು ಪ್ರಯತ್ನಿಸಿ ಕೇದಾರ ಬಾಬು ನುಡಿದರು- “ಇಲ್ಲ ಇಲ್ಲ, ಇದರೊಳಗೆ ನೀವು ನಾಚಿಕೆಪಟ್ಟುಕೊಳ್ಳುವ ಕಾರಣವಿಲ್ಲ, ಸುರೇಶ ಬಾಬೂ. ಕರ್ತವ್ಯ ಮಾಡಿದ ಗೌರವ ನಿಮಗಿದೆ —ನೀವು ನಮ್ಮನ್ನು ವಿಪತ್ತಿನಿಂದ ಪಾರುಮಾಡಿದಿರಿ ನಾವು ತುಂಬ ಉಪಕೃತರಾಗಿದ್ದೇವೆ” ಮಗಳ ಕಡೆ ನೋಡಿ, “ಆ ಪ್ರಾಣಿ ಸುರೇಶನಂತಹ ಹುಡುಗನೊಡನೆ ಹೇಗೆ ಗೆಳೆತನ ಮಾಡಿದ,—ಮತ್ತಿಷ್ಟು ದಿನ ಅದನ್ನು ಹೇಗೆ ಉಳಿಸಿಕೊಂಡ, ಎಂಬುದು ನನಗೆ ದೊಡ್ಡ ಆಶ್ಚರ್ಯವಾಗಿ ಕಾಣುತ್ತಿದೆ,” ಎಂದು ಸ್ವಲ್ಪ ತಡೆದು.

ಮತ್ತೊಂದರು " ಇದು ಸಾಧ್ಯವಿದ್ದವನಿಗೆ ನಮ್ಮಂತಹ ಭೋಳೆ ಜನರನ್ನು ವಂಚಿಸುವುದು ದೊಡ್ಡ ಮಾತಲ್ಲ, ನಿಜ, ಆದರೂ ನನ್ನಂತಹ ಅನುಭವಿಕನಿಗೆ ಇವ ಯಾರು, ಎಂಥವ ಎಂಬುದನ್ನು ಗೊತ್ತುಮಾಡಿಕೊಳ್ಳುವ ಬುದ್ಧಿ ಹುಟ್ಟದಿದ್ದುದೂ ಆಶ್ಚರ್ಯವೇ!"

ಸುರೇಶ ಮಾತನಾಡಲಿಲ್ಲ ಕೇದಾರಬಾಬುಗಳ ಕಡೆ ಕಣ್ಣೆತ್ತಿ ನೋಡುವುದೂ ಆಗಲಿಲ್ಲ ಅವನಿಗೆ ಅವರು ಉತ್ತರಕ್ಕಾಗಿ ತುಸ ಕಾದರು ಆವರ ಲಕ್ಷ್ಯ ತಮ್ಮ ಉಡುಪಿನ ಕಡೆ ಹೋಯಿತು "ಬಹಳ ಮಾತಾಡುವುದಿದೆ ಸ್ವಲ್ಪ ಕುಳಿತಿರ್ರಿ ಈಗ ಬಟ್ಟೆ ತೆಗೆದಿಟ್ಟು ಬರುತ್ತೇನೆ" ಎಂದು ಹೊರಡಲುದ್ಯುಕ್ತರಾದರು

"ನನಗೆ ಹೊತ್ತಾಗಿದೆ, ಮತ್ತೊಂದು ದಿನ ಬರುತ್ತೇನೆ" ಎಂದು ಸುರೇಶ ಅತ್ಯಂತ ವ್ಯಸ್ತನಾಗಿಯೇ ಎದ್ದುನಿಂತ ಹೇಗೆ ಹೇಗೋ ನಮಸ್ಕಾರದ ಶಾಸ್ತ್ರಮಾಡಿ ಅವರ ಜೊತೆಜೊತೆಯಲ್ಲಿಯೇ ಹೊರಟುಹೋದ.

ಆದರೆ ಮರುದಿನ ಬೆಳಗ್ಗೇ ಅವನು ಬಂದ ಅದರ ಮರುದಿನವೂ ಅವನ ಬಂಡಿಯು ಸದ್ದು ಕೇಳಿತು ಆದರಂದು ಸ್ವಲ್ಪ ಹೊತ್ತೇರಿತ್ತು ಅಚಲೆ ಸ್ನಾನಾಹಾರಕ್ಕಾಗಿ ತಂದೆಯನ್ನು ಎಬ್ಬಿಸುತ್ತಿದ್ದಳು ಅವರು ಏಳಲಿಲ್ಲ. ಸುರೇಶನನ್ನು ಸಾನಂದದಿಂದ ಬರಮಾಡಿಕೊಂಡು ಮಾತಿಗೆ ಕುಳಿತರು. ಸುರೇಶ ಇದನ್ನು ಲಕ್ಷಿಸಿದ ಅದುದರಿಂದ ಶಿಷ್ಟಾಚಾರದ ನಾಲ್ಕು ಮಾತಾಡಿ ಎದ್ದುನಿಂತ ಆಗವನ ಬಾಡಿಬತ್ತಿದ ಮೋರೆ ನೋಡಿ ಕೇದಾರಬಾಬುಗಳು ವ್ಯಸ್ತರಾದರು "ಇನ್ನೂ ಸ್ನಾನ ಊಟ ಆಗಿಲ್ಲವೇ ಸುರೇಶಬಾಬು?" ಎಂದು ಕೇಳಿದರು "ನನ್ನ ಸ್ನಾನ ಊಟ ಒಂದಿಷ್ಟು ತಡವೇ" ಎಂದ ಸುರೇಶ ಆ ಕಡೆ ಲಕ್ಷ್ಯವಿಲ್ಲದೆ ಕೇದಾರಬಾಬುಗಳು ಮತ್ತಷ್ಟು ವ್ಯಸ್ತರಾದರು "ಆಂ, ಇನ್ನೂ ಜಳಕ ಊಟ ಏನೂ ಇಲ್ಲವೇ? ನಮ್ಮಲ್ಲೇನೂ ತಡವಿಲ್ಲ, ಇಲ್ಲಿಯೇ ಸ್ನಾನಮಾಡಿರಿ, ಇಬ್ಬರೂ ಕೂಡಿಯೆ ಉಣ್ಣುವ. ತಂಗೀ ಅಚಲಾ, ಒಂದಿಷ್ಟು ತ್ವರೆಮಾಡು, ಹೊತ್ತು ಹನ್ನೆರಡಾಗಿಬಿಟ್ಟಿದೆ! ಬೇಹಾರಾ—" ಇತ್ಯಾದಿ ಉಚ್ಚಕಂಠದಿಂದ ಕೂಗುತ್ತ ಅವರು ತಾವೇ ಹೊರಗೆ ಹೋದರು.

ಅಚಲೆ ಇಷ್ಟೊತ್ತು ಅಚಲೆಯಾಗಿ ನಿಂತಿದ್ದಳು ತಂದೆ ಹೋದ ಬಳಿಕ ನಿದಾನವಾಗಿ ಮಾತೆತ್ತಿದಳು. "ನೀವು ನಮ್ಮಲ್ಲಿ ಉಣ್ಣುವಿರೇನು?"

ಸುರೇಶ ಮುಖವೆತ್ತಿ ಅವಳ ಕಡೆ ನೋಡಿ, " ಏನೆಂದಿರಿ ? " ಎಂದ.

" ಬ್ರಾಹ್ಮರ ಮನೆಯಲ್ಲಿ ನೀವು ಉಣ್ಣುವುದಿಲ್ಲವಲ್ಲವೆ ? "

" ಇಲ್ಲ, ಈ ವರೆಗೆ ಉಂಡಿಲ್ಲ ಇಂದು ನೀವು ಹಾಕಿದರೆ ಉಣ್ಣುತ್ತೇನೆ " ಎಂದು ಸುರೇಶ ಸ್ವಲ್ಪ ತಡೆದು, " ಸುಮ್ಮನೆ ಚೇಷ್ಟೆ ಮಾಡುತ್ತಿದ್ದೇನೆಂದು ನೀವು ಭಾವಿಸಬಹುದು ಇಲ್ಲ ನೀವು ಮಾಡಿ ಹಾಕಿದರ ಸತ್ಯವಾಗಿ ಉಣ್ಣುವೆ " ಎಂದು ನೋಡತೊಡಗಿದ ಅಚಲೆ ಮುಖ ತಗ್ಗಿಸಿ ನಗೆ ಮರಸಿಕೊಂಡಳು " ನಿಜವಾಗಿಯೂ ಚೇಷ್ಟೆಯೆಂದೇ ನನಗೆನಿಸುತ್ತದೆ. ಯಾರಲ್ಲಿ ಉಣ್ಣುವುದು ನಿನ್ನೆಯ ವರೆಗೂ ಹೇಯವಾಗಿತ್ತೋ ಅವರಲ್ಲಿ ಉಣ್ಣುವ ಪ್ರವೃತ್ತಿ ಈಗೇಕಾಗುತ್ತದೆಯೋ ತಿಳಿಯಲೊಲ್ಲದು, ಸುರೇಶ ಬಾಬೂ ! " ಎಂದಳು

ಮ್ಲಾನಮುಖದಿಂದ ವ್ಯಥಿತ ಸ್ವರದಿಂದ ಸುರೇಶ ನುಡಿದ " ಆದರೆ ನಿಮ್ಮ ಕೈಲಿ ಉಣ್ಣುವುದೂ ನನಗೆ ಹೇಯವೆಂದು ಬಗೆಯುವಿರಾ ? "

" ಹಾಗೆ ಬಗೆಯುವುದು ಸಹಜ ನಿಮ್ಮಂತಹ ಉಚ್ಚಶಿಕ್ಷಿತ ಸದ್ಗೃಹಸ್ಥರ ಬಹುದಿನದಿಂದ ಬೇರೂರಿದ ಸಂಸ್ಕಾರ ಒಂದು ದಿನದೊಳಗೆ ಒಮ್ಮೆಲೆ ಅಕಾರಣವಾಗಿ ಬಿಟ್ಟುಹೋಗುವುದು ಸ್ವಾಭಾವಿಕವೇ ? "

" ಸ್ವಾಭಾವಿಕವಲ್ಲ ನಿಜ ಆದರೆ ಅಕಾರಣವೆಂದು ಹೇಗೆನ್ನುವುದು ? ಕಾರಣ ಇರಲೇಬೇಕು, " ಎಂದು ಸುರೇಶ ಸುಮ್ಮನೆ ನೋಡುತ್ತಲಿದ್ದ ಉತ್ತರ ಕೊಡಹೋದ ಅಚಲೆ ಒಮ್ಮೆಲೆ ವಿಸ್ಮಿತೆಯಾದಳು ತನ್ನ ಮಾತು ಅವನಿಗೆ ತಾಗಿತೆಂದು ಆ ಮುಖವೇ ತಿಳಿಸಿತು, ಒಂದು ಬಗೆಯ ಹಿಂಸ್ರ ಆನಂದಾನುಭವವೂ ಅವಳಿಗಾಯಿತು ಆದರೆ ಆ ವೇದನೆ ಕ್ಷಣದೊಳಗೇ ಅವನ ಮೋರೆಯನ್ನು ಒಣಬೂದಿ ಮಾಡುವುದೆಂದು ಅವಳೆಣಿಸಿರಲಿಲ್ಲ. ಅಂತೆಯೇ ಅವಳಿಗೂ ವ್ಯಥೆಯಾಯಿತು. ಪ್ರಸಂಗವನ್ನು ನಗೆಚಾಟಗೆಗೆ ತಿರುಗಿಸುವುದಕ್ಕಾಗಿ ಬಲುಮೆಯ ನಗೆ ನಕ್ಕು ಅವಳೆಂದಳು " ವಿಚಾರ ಮಾಡಿ ನೋಡಿರಿ, ನಿಮ್ಮಂತಹ ಕಠೋರ ಪ್ರತಿಜ್ಞರಾದ ಜನ— "

ಸುರೇಶನೆಂದ. " ಹಾಂ, ವಿಚಾರಮಾಡುವ ! " ಅವನ ದನಿ ನಡುಗತೊಡಗಿತು ಮಾತು ಮುಂದುವರಿಸಿದ. " ಒಂದು ದಿನದೊಳಗೆ ಎನ್ನುವಿರಿ ಒಂದಿನ ಎಂದರೆ ಕಡಿಮೆಯಲ್ಲ ಒಂದು ಗಳಿಗೆಯ ಭೂಕಂಪದಿಂದ ಅರ್ಧ ಜಗತ್ತೇ ಹುಗಿದುಹೋಗುವುದು," ಎಂದು ಪುನಃ ಎವೆ

ಯಿಕ್ಕದೆ ನೋಡತೊಡಗಿದ ಅಚಲೆ ಬೆಚ್ಚಿದಳು ಸುರೇನ ಮುಖ ಬಿಳಿಚಿಗೊಂಡಿದೆ. ಹಣೆಯ ಮೇಲೆರಡು ನರಗಳು ಕೆಂಪಗೆದ್ದಿವೆ, ಕಣ್ಣುಗಳೆರಡು ಉಜ್ವಲಿಸುತ್ತಿವೆ!— ಹಾರಿ ಹಿಡಿಯಲು ಹೊಂಚುಹಾಕಿರುವನೋ ಏನೋ!

ಬಿಸಿಲ ಬೇಗೆಯೊಂದು, ಮೇಲೆ ಇಷ್ಟೊತ್ತಾದರೂ ಸ್ನಾನ ಊಟ ಇಲ್ಲ, ಹಿಂದಿನ ರಾತ್ರಿ ನಿದ್ದೆಯಿಲ್ಲ ಅವನ ಕಾಲಕೆಳಗಿನ ನೆಲ ಹೊಯ್ದಾಡಿದಂತಾಯಿತು ಕೆಂಗಣ್ಣು ಕೆಕ್ಕರಿಸಿ ನುಡಿದ "ಬ್ರಾಹ್ಮರನ್ನು ಕೀಳು ಬಗೆಯುವೆನೋ ಇಲ್ಲವೋ ಅವರಿಗೇ ಹೇಳುವೆ ನೀವು ಮಾತ್ರ ಅವರಿಗಿಂತ ಬಹಳ, ಬಹಳ ಮೇಲು—"

ಅವನ ಉನ್ಮಾದಭಂಗಿಗೆ ಅಚಲೆ ಬೆದರಿ ಮುದುರಿಹೋದಳು ಈ ಪ್ರಸಂಗ ತಪ್ಪಿಸುವುದಕ್ಕಾಗಿ ಕೂಗಿದಳು "ಬೇಹಾರಾ—" ಆದರೆ ಅವಳ ಮೃದುಸ್ವರ ಸುರೇಶನ ಉಚ್ಚಸ್ವರದ ಮೇಲೇಳಲಿಲ್ಲ ಅವನದೇ ತೀವ್ರಸ್ವರದಲ್ಲಿ ಮಾತನಾಡತೊಡಗಿದ "ಎರಡೇ ದಿನದ ಗುರುತು! ಹೌದು! ಆದರೆ ದಿನ, ಗಂಟೆ, ನಿಮಿಷ ಎಂದು ಮಹಿಮನನ್ನು ಅಳೆಯಬಹುದು ಸುರೇಶನನ್ನು ಅಳೆಯಲಾಗದು ಅವನು ದೇಶಕಾಲಾತೀತ! ಪೃಥ್ವಿಯನ್ನು ನುಂಗುವ ಭೂಕಂಪವನ್ನು ನೋಡಿರುವೆಯಾ ಅಚಲಾ?—"

ಅಚಲೆ ಬೇಡಗಂಜಿದ ಜಿಂಕೆಯಂತೆ ಚಟ್ಟನೆದ್ದು ನಿಂತು, "ನಿಮ್ಮ ಸ್ನಾನದ ಏರ್ಪಾಡು—" ಎನ್ನುತ್ತ ಮುಂದಡಿಯಿಟ್ಟಳು ಸುರೇಶ ಒಮ್ಮೆಲೆ ಸಾಗರಬಿದ್ದು ಅವಳ ಬಲಗೈ ಹಿಡಿದು ಜಗ್ಗಿದ ಆಕಸ್ಮಿಕವಾದ ಉನ್ಮತ್ತ ಸೆಳೆತವನ್ನು ಸಹಿಸುವುದು ಸ್ತ್ರೀಯರಿಗೆ ಸಾಧ್ಯವಿಲ್ಲ ಅವಳು ಅವನ ಮೈಮೇಲೆ ಬಿದ್ದುಬಿಟ್ಟಳು ಭಯವಿಸ್ಮಯಗಳನ್ನು ಅತಿಕ್ರಮಿಸಿ, ಆರ್ತಕಾರದ 'ಅಮ್ಮಯ್ಯಾ!' ಎಂಬ ಅಸ್ಫುಟವಾದ ಕೂಗು ಅವಳ ಅದಿರುದುಟಿಗಳಿಂದ ಹೊರಬೀಳುವುದರೊಳಗೇ ಸುರೇಶ ಅವಳೆರಡು ಕೈಗಳನ್ನೂ ಎದೆಗಿಟ್ಟುಕೊಂಡು "ಅಚಲಾ!" ಎಂದ

ಅಚಲೆ ಮಾಯಾಮುಗ್ಧಳಂತಾಗಿ ಕಣ್ಬಿಟ್ಟುಕೊಂಡು ನೋಡುತ್ತಲಿದ್ದಳು ಸುರೇಶನೂ ಕ್ಷಣಹೊತ್ತು ಏನೂ ಮಾತಾಡಲಾರದೆ ಹೋದ ಅವನ ಪಿಪಾಸಾದಗ್ಧ ಓಷ್ಠಾಧರದಿಂದ ತೀವ್ರಜ್ವಾಲೆಯೊಂದು ಸ್ತಬ್ಧವಾಗಿ ಚಾಚುತ್ತಿತ್ತು ಈ ಸ್ಥಿತಿಯಲ್ಲಿ ಕೆಲಹೊತ್ತು ಕಳೆದ ಬಳಿಕ ಸುರೇಶ ಮತ್ತೆ ಅವಳ ಕೈಗಳನ್ನು ಎದೆಗೊತ್ತಿಕೊಂಡು ಉಸಿರ್ಗರೆದ. "ಅಚಲಾ,

ಭೂಮಿಕಂಪದ ಈ ಪ್ರಚಂಡ ಹೃತ್ಸ್ಪಂದನವನ್ನೂ ನೋಡು! ಇಲ್ಲಿ ಭೀಷಣ ತಾಂಡವದ ಅಲ್ಲೋಲಕಲ್ಲೋಲ ನಡೆದಿದೆ। ಇದು ಯಾವ ಭೂಕಂಪಕ್ಕೆ ಕಡಿಮೆ ಹೇಳು ಅಚಲಾ! ಈ ವಿಪ್ಲವದಲ್ಲಿ ರಸಾತಳಕ್ಕಿಳಿದು ಹೋಗದ ಜಾತಿ, ಮತ, ಧರ್ಮ ಯಾವುದುಂಟು ? ''

'' ಬಿಡಿರಿ, ತಂದೆ ಬಂದರು '' ಎಂದು ಅಚಲೆ ಬಲವಂತದಿಂದ ಬಿಡಿಸಿ ಕೊಂಡು ತನ್ನ ಚೌಕಿಯಲ್ಲಿ ಶಾಂತವಾಗಿ ಕುಳಿತಳು ಪರಕ್ಷಣದಲ್ಲಿಯೆ ಕೇದಾರಬಾಬುಗಳು ವ್ಯಗ್ರರಾಗಿ ಬಂದು ಹಣಿಕಿಹಾಕಿ ಎಂದರು "ಅಲ್ಲಾ, ಹೊತ್ತು ಆಗಿಹೋಯಿತು— ಮತ್ತೀ ಬೇಹಾರ ಇದ್ದಕಿದ್ದಪ ಎಲ್ಲಿ ಹೋದನೋ ಏನೋ— ಅಮ್ಮಾ ಅಚಲಾ,— ಇದೇನೇ, ಮೈಯಲ್ಲಿ ಸ್ವಾಸ್ಥ್ಯ ಇಲ್ಲವೆ ? ಮುಖ ಬಾಡಿದೆಯಲ್ಲ !—"

ಅಚಲೆ ಎಂತೆಂತೋ ನಗಲು ಯತ್ನಿಸುತ್ತ, "ಜಡ್ಡು ಎಲ್ಲಿಯದಪ್ಪ?" ಎಂದಳು

'' ಅಲ್ಲ, ತಲೆಸೂಲೆ ಗಿಲೆಸೂಲೆ ಏನಾದರೂ ? ಎಂತಹ ಸೆಕೆ ಕುಚ್ಚುತ್ತಿದೆ—''

" ಇಲ್ಲಪ್ಪ ಏನೂ ಆಗಿಲ್ಲ "

"ಸರಿ, ಚಿಂತಿಲ್ಲ ಮೋರೆ ನೋಡಿ ಅಂಜಿದ್ದೆ [illegible] ಹೋಗಿ ಸ್ವಲ್ಪ ನೋಡು—''

''ಹೂಂ, ಒಂದು ಮಿನಿಟಿನೊಳಗೆ ಎಲ್ಲ ಏರ್ಪಡಿಸುವೆ ಅಲ್ಲಾ, ನಾನಿದನ್ನೇ ಸುರೇಶಬಾಬುಗಳನ್ನು ವಿಚಾರಿಸುತ್ತಿದ್ದೆ — ನಮ್ಮಲ್ಲಿ ಸ್ನಾನ ಊಟಕ್ಕೆ ಅಡ್ಡಿಯಿಲ್ಲವಷ್ಟೆ ? ''

ಕೇದಾರ ಬಾಬುಗಳು ಅಚ್ಚರಿಗೊಂಡು ಕೇಳಿದರು ''ಅಡ್ಡಿ ಏತರದು? ಇಲ್ಲ ಇಲ್ಲ ಸುರೇಶಬಾಬೂ, ಒಂದು ದಿನದೊಳಗೇ ನೀವು ನಮ್ಮ ಮನೆ ಹುಡುಗರೆಂದೇ ತಿಳಿದುಬಿಟ್ಟಿದ್ದೇನೆ ಎಂದು ಹೇಳಲಿಲ್ಲವೆ ? ಈ ಮನೆಯೇ ನಿಮ್ಮದು '' ಎಂದು ಮಗಳ ಕಡೆ ನೋಡಿ ಹೆಮ್ಮೆಯಿಂದ, " ಇಲ್ಲವಾದರೆ ನಮ್ಮ ಉದ್ಧಾರಕ್ಕಾಗಿ ದೇವರು ಇವರನ್ನು ಕಳಿಸಬೇಕೇತಕ್ಕೆ ? ಏಳಿರಿ, ತಡಮಾಡಬೇಡಿರಿ, ನನ್ನ ಸಂಗಡ ಬರ್ರಿ, ಬಚ್ಚಲುಮನೆ ತೋರಿಸುವೆ—'' ಎಂದರು ಆದರೆ ಸುರೇಶನಿಗೆ, ಕೇದಾರರು ಬಂದಾಗ ತಗ್ಗಿಸಿದ ಮುಖ ಇನ್ನೂ ಎತ್ತಲಾರದಾಗಿತ್ತು

"ಹೆಚ್ಚು ಒತ್ತಾಯ ಏಕಪ್ಪ? ಬ್ರಾಹ್ಮರ ಮನೆಯಲ್ಲಿ ಉಣ್ಣುವುದಕ್ಕೆ ಅಡ್ಡಿಯಿದ್ದಿರಬಹುದು ಅಲ್ಲದೆ, ಹಸಿವೆಯಿಲ್ಲದೆ ಉಂಡರೆ ಹಿತವೂ ಅಲ್ಲ"

ಕೇದಾರಬಾಬುಗಳಿಗೆ ಒಮ್ಮೆಲೆ ನಿರಾಶೆಯಾಯಿತು ಸುರೇಶ ದೊಡ್ಡವರ ಹುಡುಗ– ಸ್ವತಂತ್ರ ಮನೆಯ ಗಾಡಿಯಿಟ್ಟು ಅಡ್ಡಾಡುವವ. ಅವನನ್ನು ಊಟ ಉಪಚಾರಗಳಿಂದ ತಮ್ಮವನನ್ನಾಗಿ ಮಾಡಿಕೊಳ್ಳ ಬೇಕೆಂದು ಅವರ ಅಪೇಕ್ಷೆ ಅಕಸ್ಮಾತ್ ಅವನ ಬಾಗಿದ ಮುಖದಮೇಲೆ ಅವರ ದೃಷ್ಟಿಬಿದ್ದಿತು— ಬತ್ತಿ ಕಪ್ಪಿಟ್ಟಿದೆ! ಅವರು ವಿಸ್ಮಯಚಕಿತರಾದರು. "ಏನಾಗಿದೆ ಸುರೇಶಬಾಬೂ? ಏಳಿರೇಳಿ ತಡ ಬೇಡ" ಎಂದೆನ್ನುತ್ತ ಕೈಹಿಡಿದು ಎಳೆದುಕೊಂಡು ನಡೆದರು

೭

ಊಟವಾದಬಳಿಕ ಆ ಉರಿಬಿಸಿಲೊಳಗೆ ಕೇದಾರಬಾಬುಗಳು ಸುರೇಶನನ್ನು ಬಿಡಲಿಲ್ಲ ವಿರಾಮದ ಹೆಸರಿನಿಂದ ಒಂದು ಕೋಣೆಯೊಳಗೆ ಇಡೀ ಮಧ್ಯಾಹ್ನ ಸೆರೆಹಾಕಿದರು ಅವನು ಕೋಚಿನ ಮೇಲೆ ಕಣ್ಣು ಮುಚ್ಚಿ ಬಿದ್ದುಕೊಂಡಿದ್ದ ಹೊರಗೆ ನಡುಹಗಲ ಮಾರ್ತಂಡ ಉರಿಯು ತ್ತಿದ್ದ ಒಳಗೆ ಅಸಂಯಮದ ಆತ್ಮಗ್ಲಾನಿ ಅದಕ್ಕೂ ಹೆಚ್ಚಾಗಿ ಉರಿಯು ತ್ತಿತ್ತು ಹೀಗೆ ಒಳಗಿಂದ ಹೊರಗಿಂದ ಬೆಂದು ಸಾಕುಸಾಕಾಗಿ ಎದ್ದು ಕುಳಿತು ಕಿಡಿಕಿಯಲ್ಲಿ ನೋಡಿದಾಗ ಹೊತ್ತು ಇಳಿದಿತ್ತು ಕೇದಾರಬಾಬು ಗಳು ಪ್ರಸನ್ನಮುಖದಿಂದ ಪ್ರವೇಶಿಸುತ್ತ, "ಅಬ್ಬಾ! ಏನು ಸೆಕೆ ಸುರೇಶಬಾಬೂ! ನನಗೆ ತಿಳಿದಂತೆ ಇಂಥ ಸೆಕೆ ಎಂದೂ ಕಂಡಿಲ್ಲ ನಿದ್ದೆಗಿದ್ದೆ ಸ್ವಲ್ಪ ಆಯಿತೇನು?" ಎಂದು ಕೇಳಿದರು

"ಇಲ್ಲ ಹಗಲು ನನಗೆ ನಿದ್ದೆ ಬರುವುದಿಲ್ಲ"

"ಅದು ಚೆಲೋದೂ ಅಲ್ಲ ಬಹಳ ಕೆಟ್ಟ ನಾನು ಮೂರು ನಾಲ್ಕು ಸಲ ಬಂದು ನೋಡಿದೆ ಬೀಸಣಿಕೆ ಜಗ್ಗುವವ ಜಗ್ಗುತ್ತಿದ್ದಾನೋ ಮಲಗಿ– ಬಿಟ್ಟಿದ್ದಾನೋ ಎಂದು ಆ ದೆವ್ವಸೂಳೇಮಕ್ಕಳು, ನೀವು ಸ್ವಲ್ಪ ಕಣ್ಣು ಮುಚ್ಚಿದರೆ ತೀರಿತು, ತಾವೂ ಕಣ್ಮುಚ್ಚುತ್ತಾರೆ —ಈಗ ಸ್ವಲ್ಪ ಆರಾಮ ವಾಗಿದೆಯೆ? ನೀವು ಆ ಬಿಸಿಲಿನಲ್ಲಿ ಹೊರಬಿದ್ದಿದ್ದರೆ, ಏನು ಹೇಳಲಿ!"

ಸುರೇಶ ಸುಮ್ಮನಿದ್ದ ಕೇದಾರಬಾಬುಗಳು ಎಲ್ಲ ಕಿಡಿಕಿಗಳನ್ನೂ ತೆರೆದು ಒಂದು ಚೌಕಿ ಎಳೆದುಕೊಂಡರು. "ನನಗೆನಿಸುತ್ತದೆ ಸುರೇಶ

ಬಾಬೂ, ಇನ್ನು ಆಲಸ್ಯ ಪ್ರಯೋಜನವಿಲ್ಲ, ಮಹಿಮನಿಗೆ ಎಲ್ಲ ಸ್ಪಷ್ಟವಾಗಿ ಬರೆದು ತಿಳಿಸಬೇಕು ಏನೆಂದಿರಿ ?" ಎಂದರು

ಪ್ರಶ್ನೆಯಿಂದ ಸುರೇಶನ ಬೆನ್ನಿಗೆ ಚೆಲೋ ಬಾರುಕೋಲಿನೇಟು ಬಿದ್ದಂತಾಯಿತು ಅವನು ತಬ್ಬಿಬ್ಬಾದುದನ್ನು ಕಂಡು ಕೇದಾರಬಾಬು ಗಳೇ ನುಡಿದರು "ಎಷ್ಟು ನಿಷ್ಠುರವಾದರೂ ಕರ್ತವ್ಯ ಮಾಡಲೇ ಬೇಕೆಂದು ಇಷ್ಟು ವಯಸ್ಸಾದ ಬಳಿಕ ನಿಮ್ಮಿಂದಲೇ ನಾ ಕಲಿತೆ ಈಗ ನೀವು ಹಿಂಜರಿಯಬಾರದು "

"ಅದೇನೋ ಸರಿ" ಎಂದು ಅವನು ಸ್ವಲ್ಪ ಮೌನವಾಗಿದ್ದು, "ನಿಮ್ಮ ಮಗಳನ್ನೂ ಕೇಳಬೇಕೆನಿಸುತ್ತದೆ" ಎಂದ

ಕೇದಾರಬಾಬುಗಳು ನಸುನಕ್ಕು ಎಂದರು "ಕೇಳಿದೆ "

"ಸ್ಪಷ್ಟವಾಗಿ ಪತ್ರ ಬರೆಯಿರೆಂದಳೋ ?"

"ಸುಮಾರು ಹಾಗೆಯೇ ಹೇಳಿದಳು. ಈ ವಿಷಯ ಇದಿರಾಇದಿರು ಪ್ರಶ್ನೋತ್ತರ ನಡೆಸುವುದು ಎಲ್ಲರಿಗೂ ಬಿರಿಯೆ ಅವಳೂ ದೊಡ್ಡಾಕೆ ಯಾಗಿದ್ದಾಳೆ, ಕಲಿತವಳು, ಅವನ ಹುಚ್ಚುಚ್ಚಾರ ಹೀಗೆಯೇ ನಡೆಯ ಗೊಟ್ಟರೆ ಎಲ್ಲಿಗೆ ಮುಟ್ಟೀತೆಂಬುದು ಅವಳಿಗ ತಿಳಿಯುತ್ತದೆ ಅದಕ್ಕೇ ಇಂದು ರಾತ್ರಿಯೇ ಈ ವಿಷಯ ನಿರ್ಣಯಿಸಬೇಕೆನ್ನುತ್ತೇನೆ "

ಸುರೇಶ ಮ್ಲಾನನಾಗಿ ನುಡಿದ "ಇಷ್ಟೇಕೆ ಗಡಿಬಿಡಿ ? ಎರಡು ದಿನ ಯೋಚಿಸುವುದು ಒಳ್ಳೆಯದು "

"ಇದರೊಳಗೇನು ಯೋಚನೆ ಮಾಡುವುದು ಮತ್ತೆ ? ಮಗಳನ್ನು ಖಂಡಿತ ಅವನಿಗೆ ಕೊಡಲಾರೆ ಈ ಅಶುಭ ವಿಷಯವನ್ನು ಬೇಗ ಮುಗಿಸಿದಷ್ಟು ಒಳ್ಳೆಯದು "

"ನನ್ನ ಹೆಸರು ಉಲ್ಲೇಖಿಸುವುದೂ ಅಗತ್ಯವೆ ?' ಎಂದು ಸುರೇಶ ಕೇಳಿದ

ಕೇದಾರಬಾಬುಗಳು ನಕ್ಕರು "ಮುದುಕನಾಗಿದ್ದೇನೆ, ನನಗಿಷ್ಟು ತಿಳಿಯುವುದಿಲ್ಲವೆ? ನಿಮ್ಮ ಹೆಸರೆಂದೂ ಎತ್ತುವುದಿಲ್ಲ " ಎಂದರು

ಸುರೇಶ ಸಮಾಧಾನದ ಉಸಿರು ಬಿಟ್ಟ, ಮಾತನಾಡಲಿಲ್ಲ. ಕೇದಾರ ಬಾಬುಗಳು ಅದನ್ನು ಗಮನಿಸದಿರಲಿಲ್ಲ ಸುರೇಶನ ಇತರ ಕೆಲ ಚಲನ ವಲನಗಳನ್ನೂ ಕಂಡು ಮನಸಿನೊಳಗೇ ಏನೋ ಕಾಯಾಸ ಕಟ್ಟುತ್ತ

ಲಿದ್ದರು ಅದು ಸಟಿಯೋ ದಿಟವೋ ನೋಡುವುದಕ್ಕಾಗಿ ಕತ್ತಲಲ್ಲಿ ತಗಣಿ ಬಿಟ್ಟರು “ನೀವು ನಮ್ಮ ಮೇಲೆ ದೊಡ್ಡ ಉಪಕಾರ ಮಾಡಿದ್ದೀರಿ; ಆದರ ಇದಕ್ಕೂ ಹೆಚ್ಚಿನ ಉಪಕಾರ ಮಾಡುವಿರೆಂದು ಆಶಿಸುತ್ತಿದ್ದೇವೆ. ನಾವೇನೋ ಬ್ರಾಹ್ಮರು ಹೌದು ಆದರೆ ಹಾಗೇನೂ ಇಲ್ಲ ನಮ್ಮ ಹುಡುಗಿಯಂತೂ ತಾಯಿಯ ಹಾಗೆ ಮನಸಾ ಹಿಂದುವೇ ಬ್ರಾಹ್ಮರ ರೀತಿ ನೀತಿ ಅವಳಿಗೆ ಒಪ್ಪಿಗೆಯಿಲ್ಲ ” ಎಂದರು

ಸುರೇಶ ವಿಸ್ಮಯದಿಂದ ಮುಖವೆತ್ತಿ ನೋಡಿದ ಅವನಾ ನೀರವ ಔತ್ಸುಕ್ಯವನ್ನು ಸರಿಯಾಗಿ ಲಕ್ಷಿಸಿ ಕೇದಾರಬಾಬು ಮಾತನಾಡತೊಡಗಿದರು “ಅದಕ್ಕೇ ಹೆಚ್ಚುದಿನ ಇವಳ ಮದುವೆ ಬಿಡಲಾರೆ ಈ ವಿಷಯದಲ್ಲಿ ನಾನೂ ಹಿಂದುವೇ ಒಂದು ಸಂಬಂಧ ನಿಮ್ಮಿಂದ ಬಿಟ್ಟುಹೋಯಿತು; ಇನ್ನೊಂದು ಒಳ್ಳೆಯ ಸಂಬಂಧ ನೀವೇ ಕಟ್ಟಬೇಕು ”

“ಆಗಲಿ ತುಂಬಾ ಯತ್ನಿಸುತ್ತೇನೆ ”

ಅವನ ಮುಖದ ಮೇಲಿನ ಭಾವವನ್ನು ಓದಿಕೊಳ್ಳುತ್ತ ಸಂದಿಗ್ಧ ಸ್ವರದಲ್ಲಿ ಕೇದಾರಬಾಬುಗಳೆಂದರು “ಈ ವಿಷಯವಾಗಿ ಸಮಾಜದಲ್ಲಿ ಬಹಳ ಗಡಿಬಿಡಿಯಾಗುವುದೆಂದು ಖಂಡಿತ ಬಲ್ಲೆ ಆದುದರಿಂದ ಆದಷ್ಟು ಶೀಘ್ರವೇ ಮದುವೆಮಾಡಿ ಈ ಎಲ್ಲ ಚಿಂತೆ ತಪ್ಪಿಸಬೇಕೆನ್ನುತ್ತೇನೆ ಆದರೆ ಒಂದು ತೊಂದರೆ—” ಎಂದು ಬಾಗಿಲಕಡೆಗೊಮ್ಮೆ ನೋಡಿ ಇನ್ನಷ್ಟು ಹತ್ತಿರಕ್ಕೆ ಸರಿದು ದನಿ ತಗ್ಗಿಸಿ, “ರೂಪದಿಂದ ಗುಣದಿಂದ ಉತ್ತಮ ವರ ಸಿಕ್ಕರೂ ಹಿಂದೂಪದ್ಧತಿಯಂತೆ ಮದುವೆಯಾಗುವುದೇ ಕಠಿನ ಕಾಣುತ್ತಿದೆ ಹುಡುಗಿ ದೊಡ್ಡವಳು ಶಿಕ್ಷಣಸಂಸ್ಕಾರವುಳ್ಳವಳು ಅವಳ ವಿಚಾರ ಕೇಳದೆ ಏನೂ ಮಾಡಬರುವಂತಿಲ್ಲ ಆದರೆ ಅವಳೇನೂ ತನ್ನ ವಿಚಾರ—ಇಬ್ಬರಲ್ಲಿಯೂ ಒಂದಿಷ್ಟು— ತಿಳಿಯಿತಿಲ್ಲವೋ ಸುರೇಶಬಾಬೂ!” ಎಂದರು.

ಸುರೇಶ ವಿಮನಸ್ಕನಾಗಿದ್ದನೇನೋ ಈ ಪ್ರಣಯಸಂಕೇತ ಬೇರೆ ಹಾಗಿ ಅಚೇತನನೇ ಆದ ಮಧ್ಯಾಹ್ನದಲ್ಲಿಯ ಉಚ್ಛೃಂಖಲ ಪ್ರಣಯದ ಬೀಭತ್ಸ ಆಚರಣೆ ನೆನಪಾಗಿ ಲಜ್ಜೆಯಿಂದ ಅವನ ಮುಖ ಕಂಪೇರದೆ ಕಪ್ಪಿಟ್ಟಿತು ಅವನು ಕಾಲಬಳಿ ಬಿದ್ದಿದ್ದ ಪತ್ರಿಕೆಯನ್ನೆತ್ತಿಕೊಂಡು ಜಾಹಿರಾತು ನೋಡುತ್ತ ಕುಳಿತ

ಕೇದಾರಬಾಬು ಇದನ್ನು ಗಮನಿಸಿದರು ಆ ಆಕಸ್ಮಿಕ ಪರಿವರ್ತನೆಗೆ

ಬೇರೆ ಅರ್ಥ ಕಲ್ಪಿಸಿ ಒಳಗೊಳಗೆ ಪುಲಕಿತರಾದರು ಸಮಯ ಸಿಕ್ಕಿತೆಂದು ಮಾತು ಒಗೆದರು "ನನಗೊಳ್ಳೆಯ ಆಶ್ಚರ್ಯವಾಗಿ ಕಾಣುತ್ತಿದೆ ಸುರೇಶಬಾಬೂ- ಏಕೋ ಏನೋ, ಒಬ್ಬನಲ್ಲಿ ಬಹುದಿನ ಹತ್ತಿರವಿದ್ದರೂ ಸ್ವಲ್ಪವೂ ವಿಶ್ವಾಸಹುಟ್ಟಲಿಲ್ಲ, ಮತ್ತೊಬ್ಬನಲ್ಲಿ ಎರಡು ಗಂಟೆಗಳ ಸಂಬಂಧ ದಿಂದಲೇ ಜೀವ ಕೂಡ ಒಪ್ಪಿಸಬಹುದು ಎನ್ನಿಸುತ್ತಿದೆ ಎರಡು ಗಂಟೆಯ ದಲ್ಲ, ಜನ್ಮಜನ್ಮಾಂತರದ ಜೀವಪ್ರಾಣ ಸಂಬಂಧವೋ ಏನೋ!- ನಮ್ಮ ನಿಮ್ಮ ಪರಿಚಯ ಎಷ್ಟುಹೊತ್ತಿನದು ಹೇಳಿರಿ ನೋಡುವಾ"

ಆ ಹೊತ್ತಿಗೆ ಸರಿಯಾಗಿ ಅಚಲೆ ಪ್ರವೇಶಿಸಿದಳು ಸುರೇಶ ಕಣ್ಣೆತ್ತಿ ನೋಡಿ ಪುನಃ ಪತ್ರಿಕೆ ನೋಡತೊಡಗಿದ

"ಅಪ್ಪಾ, ನೀವೀಗ ಚಾ ಕುಡಿಯುತ್ತೀರೋ ಕೋಕೋನೊ?"

"ಕೋಕೋನೇ ಕುಡಿಯುತ್ತೇನಮ್ಮ"

"ಸುರೇಶಬಾಬೂ, ನೀವು ಚಾ ಕುಡಿಯುತ್ತೀರಿ ತಾನೆ?"

ಸುರೇಶ ಕಾಗದ ನೋಡುತ್ತಿದ್ದಂತಯೇ "ನನಗೆ ಚಾನೇ ಕೊಡಿರಿ," ಎಂದ

ಅಚಲೆ ಹೊರಟು ಹೋದಳು ಹಿಂದಿನ ಪ್ರಸಂಗದ ಹರಿದ ಎಳೆ ಗಳನ್ನು ಜೋಡಿಸಿಕೊಂಡು ಕೇದಾರಬಾಬು ನುಡಿದರು "ಇಲ್ಲಿ ನೋಡಿರಿ ಸುರೇಶಬಾಬೂ, ಈ ಹುಡುಗಿಯ ದೆಸೆಯಿಂದ ನನಗೆ ಮುಪ್ಪಿನಲ್ಲಿ ಎಷ್ಟು ಕಷ್ಟವಾಗುತ್ತಿದೆಯೆಂಬುದನ್ನು ನಿಮ್ಮೆದುರು ಬಚ್ಚಿಡಲಾಗಲಲ್ಲ ತಮ್ಮ ದುರ್ದಶೆ-ದುರವಸ್ಥೆಗಳನ್ನು ಹರವರ ಮುಂದೆ ಯಾರು ಹೇಳುತ್ತಾರೆ! ಇಷ್ಟು ಬಂಧುಬಳಗ ಇದ್ದೂ ಹೇಳಬಾರದ ವಿಷಯ ನಿಮ್ಮೆದುರು ಹೇಳುವುದಕ್ಕೆ ಏಕೆ ಸಂಕೋಚವಾಗುವುದಿಲ್ಲ? ಇದಕ್ಕೆ ಗೂಢ ಕಾರಣ ಇಲ್ಲವೆಂದು ಬಗೆ ಯುವಿರಾ?" ಸುರೇಶ ಮುಖವೆತ್ತಿ ವಿಸ್ಮಯದಿಂದ ನೋಡತೊಡಗಿದ ಕೇದಾರಬಾಬುಗಳು "ಇದು ದೇವರ ನಿರ್ದೇಶ, ತಪ್ಪಿಸಲಾದೀತೆ! ಹೇಳಲೇ ಬೇಕು" ಎಂದು ಚೌಕಿಯ ತೋಳನ್ನು ಗಟ್ಟಿಯಾಗಿ ಬಡಿದರು

ಇಷ್ಟು ವಿಸ್ತೃತ ಭೂಮಿಕೆಯಿಂದಲೂ ಮಗಳಿಂದ ಅವರಿಗೆ ಎಷ್ಟು ದುರ್ದಶೆ ಉಂಟಾಗಿದೆಯೆಂಬುದು ಸುರೇಶನಿಗೇನೂ ಹೊಳೆಯಲಿಲ್ಲ ಕೇದಾರ ಬಾಬು ಮತ್ತೂ ವಿವರಿಸಿದರು ತಮ್ಮ ಆರ್ಡರ್ ಸಪ್ಲೈ ವ್ಯವಸಾಯ ವಂಚನೆ ಕೃತಘ್ನತೆಗಳಿಂದ ಹಾಳಾದುದು, ಸಾಲ ಉತ್ತರೋತ್ತರ ಹೆಚ್ಚಾ

ದುದು, ಆದರೂ ಏಕಮಾತ್ರ ಪುತ್ರಿಯ ಶಿಕ್ಷಣಕ್ಕಾಗಿ ಸಂಕೋಚವಿಲ್ಲದೆ ವೆಚ್ಚಮಾಡಿದುದು, ಐದಾರು ಡಿಕ್ರಿಜಾರಿಯ ಭಯದಿಂದ ತಮಗೆ ಊಟ-ತಿನಿಸು ವಿಷಪ್ರಾಯವಾದುದು, ಕಿರುಕುಳ ಸಾಲಗಳ ಕೀಟಲೆಯಿಂದ ಜೀವನ ಬೇಸರವಾದುದು, ಇಷ್ಟಾದರೂ ತಾವು ಯಾರ ಮುಂದೂ ಬಾಯಿಬಿಟ್ಟು ಆಡದಿದ್ದುದು— ಅರ್ಥಾತ್ ಹೇಳಿದರೆ ಸಾಕು, ಹೇರಳ ಹಣವನ್ನು ಬೀಸಾಡುವ ಮಿತ್ರರು ಕಲಿಕಾತೆಯಲ್ಲಿ ಅವರಿಗೆ ಬೇಕಾದಷ್ಟು ಜನರಿದ್ದರು— ಎಲ್ಲ ಹೇಳಿದರು ಸ್ವಲ್ಪ ಯೋಚಿಸಿ, "ಆದರೆ ನಿಮಗೆ ಹೇಳುತ್ತಿದ್ದೇನೆ, ಎಳ್ಳಷ್ಟೂ ಸಂಶಯ ಸಂಕೋಚವಿಲ್ಲದೆ ಇದು ದೇವರ ಆದೇಶವಲ್ಲದೆ ಏನು?" ಎಂದು ಭಕ್ತಿಭರದಿಂದ ಕೈಜೋಡಿಸಿ ಹಣೆಗೆ ಹಚ್ಚಿ ನಮಸ್ಕರಿಸಿದರು

ಸುರೇಶನಿಗೆ ದೇವರಲ್ಲಿ ನಂಬುಗೆಯಿರಲಿಲ್ಲ, ಅವರ ಉದ್ಗಾರವನ್ನವನು ಅನುಮೋದಿಸಲಿಲ್ಲ ಆದರೂ ಅವನ ಮನಸು ಮಾತ್ರ ಇಷ್ಟಾಯಿತು "ನಿಮ್ಮ ಸಾಲವೆಷ್ಟು?" ಎಂದು ಧೀರ ಭಾವದಿಂದ ಪ್ರಶ್ನಿಸಿದ

'ಸಾಲವೆ?—ನಮ್ಮ ವ್ಯವಸಾಯ ನಡೆದಿದ್ದರೆ ಅದೊಂದು ಸಾಲವೆ?—ಬಹಳವೆಂದರೆ ಮೂರು ನಾಲ್ಕು ಸಾವಿರ" ಅವರಿನ್ನೂ ಏನೇನು ಹೇಳುತ್ತಿದ್ದರೋ ಬೇಹಾರನ ಕೈಯಲ್ಲಿ ಚಾದ ಸರಂಜಾಮು ಹಿಡಿಸಿಕೊಂಡು, ತಾನು ತಾಲಿಗಳನ್ನು ಹಿಡಿದುಕೊಂಡು ಅಚಲೆ ಬಂದಳು

ಕೇದಾರರು ಬಟ್ಟಲತುಂಬ ಬಿಸಿ ಕೋಕೋ ಒಂದೇ ಗುಟುಕಿನಲ್ಲಿ ಕುಡಿದು ಹರ್ಷಸೂಚಕ ಧ್ವನಿ ಮಾಡುತ್ತ ಬಟ್ಟಲು ಮೇಜಿನಮೇಲಿಟ್ಟು ನುಡಿದರು "ನೋಡಿರಿ ಸುರೇಶಬಾಬೂ, ನಮ್ಮ ಮೇಲೆ ದೇವರ ಅಗಾಧ ದಯೆಯಿದೆ— ನಾನು ನೋಡುತ್ತಿದ್ದೇನಲ್ಲ, ಅವನು ಎಂದೂ ನಮ್ಮ ಅಭಿಮಾನ ಭಂಗ ಮಾಡಿಲ್ಲ ಈ ವಿಷಯ ಮಹಿಮನಿಗೆ ಹೇಳಬೇಕು ಹೇಳಬೇಕೆಂದರೂ ಆಗುತ್ತಿರಲಿಲ್ಲ, ಆತನೇ ಬಾಯಿ ಕಟ್ಟಿರುತ್ತಿದ್ದನೇನೋ, ಅದು ಈಗ ತಿಳಿಯಿತು" ಎಂದು ಭಗವಂತನ ಅಸೀಮ ದಯೆಗಾಗಿ ಮತ್ತೆ ಕೈಜೋಡಿಸಿದರು

ಸುರೇಶ ತನ್ನ ಚಾ ಬಟ್ಟಲನ್ನು ದಿಟ್ಟಿಸುತ್ತ ಕೇಳಿದ. "ನಿಮಗೆ ಹಣದ ಅಗತ್ಯ ಯಾವಾಗಿದೆ?"

ಕೇದಾರ ಬಾಬು ತಮ್ಮ ಕೋಕೋಬಟ್ಟಲನ್ನು ಮತ್ತೆ ಕೆಳಗಿಟ್ಟು, "ನಮಗೇನದರ ಅಗತ್ಯ ಸುರೇಶಬಾಬೂ, ಅದು ನಿಮಗೆ," ಎಂದು

ಗಟ್ಟಿಯಾಗಿ ನಕ್ಕರು ಈ ಒಡಪ ಸುರೇಶನಿಗೆ ಒಡೆಯಲಿಲ್ಲ ಬಟ್ಟಲಿಂದ ಮುಖವೆತ್ತಿ ನೋಡಿದ ಅಚಲೆ ಜಿಜ್ಞಾಸುದೃಷ್ಟಿಯಿಂದ ತಂದೆಯ ಮುಖ ನೋಡುತ್ತಿದ್ದಳು ಅವರು ಒಮ್ಮೆ ಮಗಳ ಮುಖ, ಒಮ್ಮೆ ಸುರೇಶನ ಮುಖ ನೋಡಿ "ಇದರರ್ಥ ತಿಳಿಯುವುದೇನು ಕಠಿನವಲ್ಲ ಮನೆಯನ್ನೇನು ನಾ ಸಂಗಡ ಒಯ್ಯುವುದಿಲ್ಲ ಹೋದರೆ ನಿಮ್ಮಿಬ್ಬರದು ಹೋಗುವುದು, ಉಳಿದರೆ ನಿಮ್ಮಿಬ್ಬರದು ಉಳಿಯುವುದು," ಎಂದು ಮಂದಹಾಸ ಬೀರಿದರು

ಇಬ್ಬರ ದೃಷ್ಟಿಸಂಗವುವಾಯಿತು. ನಿಮಿಷಾರ್ಧದಲ್ಲಿ ಇಬ್ಬರ ಕೆಂಪೇರಿದ ಮುಖಗಳೂ ತಗ್ಗಿದವು

ಎರಡು ಬಟ್ಟಲು ಕೋಕೋ ನಿಶ್ಶೇಷಗೊಳಿಸಿದ ಮೇಲೆ ಕೇದಾರ ಬಾಬುಗಳಿಗೆ ಅಗತ್ಯದ ಪತ್ರ ಬರೆಯುವ ಅರಿವಾಯಿತು ಚಟ್ಟನೆದ್ದು ನಿಂತು, "ಇಂದು ನಿಮ್ಮ ಊಟ ಯದ್ವಾತದ್ವಾ ಆಯಿತು, ನಾಳೆ ಮಧ್ಯಾಹ್ನ ಇಲ್ಲಿಗೇ ಊಟಕ್ಕೆ ಬರ್ರಿ" ಎಂದು ತಮ್ಮ ಕೋಣೆಗೆ ಹೊರಟುಹೋದರು

ತೆರೆದ ಬಾಗಿಲಿಂದ ಮುಳುಗುತ್ತಿರುವ ಸೂರ್ಯನ ಹೊಂಬೆಳಕು ಸುರೇಶನ ಮುಖದ ಮೇಲೆ ಬಿದ್ದಿತು ಅವನು ತಿರುಗಿ ನೋಡಿದ ಅಚಲೆ ಏಕದೃಷ್ಟಿಯಿಂದ ಅವನನ್ನೇ ನೋಡುತ್ತಿದ್ದವಳು ಮುಖ ಕೆಳಗೆ ಹಾಕಿದಳು. ದೊಡ್ಡ ಗಡಿಯಾರದ ಕಟ್ ಕಟ್ ಶಬ್ದದ ಹೊರತು ಕೋಣೆಯೆಲ್ಲ ನಿಃಶಬ್ದವಾಗಿತ್ತು

೮

ಸುರೇಶನೇ ನೀರವತೆಯನ್ನು ಮುರಿದ "ಒಮ್ಮೆಲೆ ಚೆಲೋ ಒಂದು ಕಾಂಡವನ್ನೇ ಮಾಡಿಬಿಟ್ಟೆ" ಎಂದ ಅಚಲೆ ಮಾತನಾಡಲಿಲ್ಲ ಅವನೆಂದ. "ನೀವು ನಿಜವಾಗಿಯೂ ನನ್ನನ್ನು ರಾಕ್ಷಸ ಎಂದು ಬಗೆದಿರಬಹುದು ನೀವು ಒಬ್ಬರೇ ಇರಲಿಕ್ಕೆ ಅಂಜುತ್ತಿರಬಹುದು ಅಲ್ಲವೆ?" ಎಂದು ಬಾರದ ನಗೆಯನ್ನು ಎಳೆತಂದು ನಕ್ಕ ಅಚಲೆ ಈಗಲೂ ಮುಖವೆತ್ತಲಿಲ್ಲ ಎತ್ತಿದ್ದರೆ, ಯತ್ನಪೂರ್ವಕವಾಗಿ ನಕ್ಕ ಆ ನಗೆ, ಅವನ ಮುಖವನ್ನು ಅವಮಾನ ಲಜ್ಜೆಗಳಿಂದ ವಿಕಾರಗೊಳಿಸಿದುದನ್ನು ಕಾಣಬಹುದಿತ್ತು

ಕೋಣೆಯೆಲ್ಲ ಮತ್ತೆ ನಿಸ್ತಬ್ಧವಾಯಿತು ಗಡಿಯಾರ ಮಾತ್ರ ಕಟ್ ಕಟ್ ಎಂದು ಆ ಸ್ತಬ್ಧತೆಯನ್ನು ಅಳೆಯುತ್ತಲಿತ್ತು ಸ್ವಲ್ಪ ಹೊತ್ತಿನಲ್ಲಿ ಕಠಿನ ನೀರವತೆ ಸುರೇಶನಿಗೆ ಅಸಹ್ಯವಾಯಿತು ಅವನು

ವ್ಯ ಸಾವರಿಸಿಕೊಂಡು ಸೀಟಾಗಿ ಕುಳಿತುಕೊಂಡು ನುಡಿದ "ನೋಡಿರಿ, ಆಗುವುದು ಆಗಿಹೋಗಿದೆ ನೀವು ನನ್ನೊಳಗೆ ಚಕ್ಷುಲಜ್ಜೆ ಏಕೆ?—ಹೊತ್ತು ಮುಳುಗಿತು ನಾನು ಹೊರಡುವ ಮೊದಲು ಒಂದು ಮಾತು ಕೇಳಬೇಕೆನ್ನುತ್ತೇನೆ, ಹೇಳುವಿರಾ?"

ಅಚಲೆ ಮುಖ ಎತ್ತಿದಳು ಕಣ್ಣೆರಡರಲ್ಲಿಯೂ ವ್ಯಥೆ ತುಂಬಿತ್ತು "ಕೇಳಿರಿ" ಎಂದಳು

"ನಾಳೆ ನಾಡದಿನೊಳಗೆ ನಿಮ್ಮ ತಂದೆಯ ಸಾಲ ತೀರಿಸಲೋಸುಗ ಬರುವೆ ಆಗ ನಿಮ್ಮನ್ನು ಕಾಣುವ ಅಗತ್ಯ ಬೀಳಲಿಕ್ಕಿಲ್ಲ ನಮ್ಮಿಬ್ಬರ ಬಗ್ಗೆ ಅವರ ಅಭಿಪ್ರಾಯವೇನೆಂಬುದು ನನಗೆ ಬೇಕಾಗಿತ್ತು ನೀವು ಬಲ್ಲಿರಾ?"

"ನನಗೆ ಅವರು ಸ್ಪಷ್ಟ ಏನೂ ಹೇಳಿಲ್ಲ"

"ನನಗೂ ಹೇಳಿಲ್ಲ ಆದರೂ ನನಗನಿಸುತ್ತಿದೆ ಅವರು ನನ್ನನ್ನೇ—ಅವರಿಗೆ ಒಪ್ಪಿಗೆ. ನೀವು ಒಪ್ಪಲಿಕ್ಕಿಲ್ಲ"

"ಇಲ್ಲ"

"ಎಂದೂ ಇಲ್ಲವೆ?"

ಅಚಲೆ ನೋಟ ತಗ್ಗಿಸಿ ನುಡಿದಳು "ಇಲ್ಲ"

"ಮಹಿಮನ ಆಶೆ ಇಲ್ಲದಿದ್ದರೆ?"

ಅಚಲೆ ದೃಢಸ್ವರದಿಂದ "ಆ ಆಶೆ ಇಲ್ಲವೇ ಇಲ್ಲ," ಎಂದಳು

"ಹಾಗಾದರೂ ಒಪ್ಪುವುದಿಲ್ಲ ಎಂದೆ, ಇದರರ್ಥ?"

ಅಚಲೆ ಮಿಡಿಯುತ್ತಿದ್ದರೂ ಶಾಂತನಿಶ್ಚಲಸ್ವರದಿಂದ "ಹೌದು" ಎಂದಳು

ಸುರೇಶ ಕೊಂಚ ಬೆನ್ನಿಗೆ ಬಿದ್ದು ಉಸಿರೆಳೆದು ಎಂದ "ಸರಿ, ಒಂದು ಕಡೆಯಿಂದಾದರೂ ನಿಶ್ಚಲವಾದಂತಾಯಿತು ಜೀವದಲ್ಲಿ ಜೀವ ಬಂತು" ಎಂದ ಸ್ವಲ್ಪ ತಡೆದು ಸೀಟಾಗಿ ಕುಳಿತು, "ನಿಮ್ಮ ತಂದೆಯ ಸಾಲ ಹೇಗೆ ಹರಿದೀತೋ ಎಂಬುದೇ ಘನ ಚಿಂತೆ" ಎಂದ

ಅಚಲೆ ಅಂಜುತ್ತ ಕಿಂಚಿತ್ ಮುಖವೆತ್ತಿ ಸಂಕೋಚದಿಂದ, "ಏಕೆ, ನೀವು ಕೊಡುವುದಿಲ್ಲವೆ?" ಎಂದಳು

"ಕೊಡುವುದಿಲ್ಲ? ಏಕೆ?" ಎಂದು ಸುರೇಶ ತೀಕ್ಷ್ಣ ವ್ಯಗ್ರಸ್ವರದಿಂದ ನುಡಿದ ಆದಕ್ಕೆ ಅವಳ ಮುಖ ಕೆಂಪಾಯಿತು. ಉತ್ತರಕ್ಕಾಗಿ

ತುಸ ಕಾಲ ಸುರೇಶ ನಕ್ಕ. ನಗೆಯಲ್ಲಿ ಆನಂದವಿರಲಿಲ್ಲ, ಕೃತ್ರಿಮತೆಯೂ ಇರಲಿಲ್ಲ. "ನನ್ನ ಪರಿಚಯವಾಗುವತನಕ ನನ್ನ ಯಾವ ನಡತೆಯೂ ಸಭ್ಯವೆನಿಸಲಿಕ್ಕಿಲ್ಲ, ಅದನ್ನು ನಾ ಬಲ್ಲೆ. ನಾ ಅಷ್ಟು ಕೀಳನಲ್ಲ. ನಿಮ್ಮ ತಂದೆಗೆ ಲಂಚವೆಂದು ಹಣ ಕೊಡುವುದಿಲ್ಲ, ಹೊತ್ತಿನಲ್ಲಿ ನೆರವಾಗಲೆಂದು. ಅದು ನಿಮ್ಮ ಮತಾಮತವನ್ನು ಸುತರಾಂ ಅವಲಂಬಿಸಿಲ್ಲ. ಅವರು ಸ್ವೀಕರಿಸುವರೋ ಹೇಗೆ ಎಂಬುದೇ ಪ್ರಶ್ನೆ. ಹೇಗಾದರೆ ಸ್ವೀಕರಿಸಿಯಾರು ಎಂಬುದನ್ನೇ ಯೋಚಿಸುತ್ತಿದ್ದೇನೆ. ಬನ್ನಿ, ಇದನ್ನು ಒಂದಿಷ್ಟು ವಿಚಾರ ಮಾಡುವ" ಎಂದ.

"ಹೂಂ, ಆಗಲಿ."

"ಅದೃಷ್ಟದಿಂದ ನನ್ನಲ್ಲಿ ತುಂಬ ಧನವಿದೆ. ಅದರೆ ಅದರ ಮೇಲೆ ನನಗೆ ಮಮತೆ ಯಾವಾಗಲೂ ಇಲ್ಲ. ನಾಲ್ಕಾರು ಸಾವಿರ ಸರಾಗವಾಗಿ ಕೊಡಬಲ್ಲೆ. ನಿಮ್ಮ ಹಿತಕ್ಕಾಗಿಯೆಂದರೆ ಹೆಚ್ಚಾದರೂ ಆಗಬಹುದು. ಆದರಲ್ಲಿ ವಿಷಯ ಇದು: ಈ ಹಣ ತಿರುಗಿ ಕೊಡುವ ಅಗತ್ಯಬೀಳದು. ಒಂದು ರೀತಿಯಿಂದ ಮುಟ್ಟಿದಂತೆಯೇ ಆಗಿದೆ ಎಂದು ನಿಮ್ಮ ತಂದೆ ಭಾವಿಸಿದ್ದಾರೆ! ತಿಳಿಯಿತಲ್ಲವೆ?"

"ಹಾಂ."

"ಸ್ಪಷ್ಟ ಮಾತಾಡುವುದನ್ನು ಅನ್ಯಥಾ ತಿಳಿಯಬೇಡಿರಿ. ಹಣ ಅವರಿಗೆ ಬೇಕು, ಅದರ ತಿರುಗಿ ಮುಟ್ಟಿಸುವ ಶಕ್ತಿ ಅವರಿಗಿಲ್ಲ. ನನಗೂ ಅದು ಬೇಕಾಗಿಲ್ಲವೆನ್ನಿರಿ. ಆದರೆ— ಸರಿ. ಇದು ಸಹಜವಾಗಿಯೇ ಆಗುವುದು, ನಾಳದಿನಸೋಗೆ ನೀವು ನಿಮ್ಮ ಮನೋಗತ ಅವರಿಗೆ ತಿಳಿಸಿದರೆ ಯಾವ ತೊಡಕೂ ಉಳಿಯದು. ಹೇಗೆ? ತಿಳಿಸುವಿರಾ?" ಅಚಲೆ ತಲೆ ತಗ್ಗಿಸಿ ಸುಮ್ಮನೆ ಕುಳಿತಿದ್ದಳು. ಸುರೇಶ ಮುಂದುವರಿದ: "ಹಣದಾಸೆಯಿಂದ ನೀವು ಅಭಿಪ್ರಾಯ ಕೊಡಲಿಲ್ಲ. ಇದರಿಂದ ನಿಮ್ಮಲ್ಲಿ ನನ್ನ ಶ್ರದ್ಧೆ ಹೆಚ್ಚಿದೆ. ಅದರ ನೀವು ಅಭಿಪ್ರಾಯ ಕೊಟ್ಟಿದ್ದರೆ ಕೊನೆಗೆ ನಾನೇ ಅಂಜಿ ಹಿಂಜರಿಯುತ್ತಿದ್ದೆ. ನನಗೆ ಯಾವುದೂ ಅಸಂಭವವಿಲ್ಲ" ಎಂದು ಎದ್ದು ನಿಂತು ನಕ್ಕು ನುಡಿದ: "ಹೊರಡುವ ಮುಂದೆ ಒಂದು ಪ್ರಾರ್ಥನೆ. ನನಗೆ ಹೆಚ್ಚು ಮಾತಾಡಲು ಬರಲಿಲ್ಲ. ನನ್ನ ತಪ್ಪು ತಿಳಿ ಮರೆಯಿರಿ." ಸ್ವಲ್ಪ ತಡವರಿಸಿ "ನಮಸ್ಕಾರ" ಕುಕರ್ನಿಡದ ಹುಡುಗು ತುಂಬಿಕೊಂಡು

ಬೇಳ್ಕೊಳ್ಳುತ್ತಿದ್ದೇನೆ ಆದರೆ ವಾಸ್ತವವಾಗಿ ನಾನೇನು ಪಿಶಾಚನಲ್ಲ. ಹೋಗಲಿ ವಿಶ್ವಾಸ ಹುಟ್ಟುವುದಕ್ಕೆ ಹಾದಿಯನ್ನೇ ಇಟ್ಟುಕೊಂಡಿಲ್ಲವೆಂದ ಮೇಲೆ ಎಷ್ಟು ಹೇಳಿದರೂ ವ್ಯರ್ಥ " ಎಂದು ಬಿರಬಿರನೆ ಹೊರಟ

ಕೆಲಹೊತ್ತಿನಲ್ಲಿ ಕೇದಾರಬಾಬು "ಸುರೇಶಬಾಬೂ" ಎಂದು ಕೂಗಿ ಕೊಂಡು ಬಂದರು ಅಚಲೆ ಸರಕ್ಕನೆ ಕಂಬನಿ ಒರಸಿಕೊಂಡು, "ಇನ್ನೂ ಇದೇ ಹೋದರು" ಎಂದಳು

"ಇದೇನು, ನನ್ನನ್ನು ಕಾಣದೆ ಹೋಗಿಬಿಟ್ಟರು ! ನಾಳೆ ಊಟಕ್ಕೆ ಬರಬೇಕೆಂದು ನೆನೆಪುಗೊಟ್ಟೆಯಷ್ಟೆ ?"

ಅಚಲೆ ಅಪ್ರತಿಭಳಾಗಿ, "ಮರೆತೇ ಹೋಯಿತು" ಎಂದಳು

"ನೆಟ್ಟಗಾಯಿತು !" ಎಂದು ಕೇದಾರಬಾಬು ನಿಶ್ಚೇಷ್ಟರಾದಂತೆ ಅ ಲ್ಲಿ ಕುಳಿತರು ಮಗಳ ಬಿಗಿದ ದನಿಯಿಂದ ಅವರ ಮನಸಿನಲ್ಲಿ ಭಯಸೂಚನೆಯೇನೋ ತೋರಿತು ಮಬ್ಬುಗತ್ತಲಲ್ಲಿ ಅವಳ ಮುಖ ಕಾಣದುದರಿಂದ ಅದು ನಿಲ್ಲಲಿಲ್ಲ "ಮುಪ್ಪಿನಲ್ಲಿ ಮಾಡುವುದಕ್ಕೆ ನೋಡು ವುದಕ್ಕೆ ಆಗದಂತಾಗಿದೆ ಅದರಿಂದ ಒಂದಿಲ್ಲೊಂದು ತಪ್ಪು ಆಗೇ ಆಗುವುದು. ಆಗಲಿ, ಚೀಟಿ ಕಳಿಸುವೆ ಅವರ ಮನೆಯೆಲ್ಲಿ ?" ಎಂದರು

"ನನಗೆ ಗೊತ್ತಿಲ್ಲ"

"ಅದೂ ಗೊತ್ತಿಲ್ಲವೆ ? ಸರಿಹೋಯ್ತು !" ಎಂದು ಕೇದಾರಬಾಬು ಗಳು ಏಳತೊಡಗಿದವರು ದಪ್ಪನೆ ಕುಳಿತರು ರುಕ್ಷಸ್ವರದಿಂದ ನುಡಿದರು: "ನಿಮ್ಮ ಕೈಕಾಲು ನೀವೇ ಬೇಕಾದರೆ ಕಡಿದುಕೊಳ್ಳಿರಿ, ನನ್ನದೇನು ಅಡ್ಡಿ ಯಿಲ್ಲ ಅಲ್ಲ, ಒಂದೇ ಮಾತಿಗೆ ಇಷ್ಟು ಹಣ ಕೊಡಲೊಪ್ಪಿದ ಮನುಷ್ಯ ಸಾಮಾನ್ಯನೇ ? ಅವನ ಮನೆ ಕೂಡ ಕೇಳಿಕೊಳ್ಳಬಾರದೇ ? ದೊಡ್ಡವ ಳಾದಾದ ಹಾಗೆ ಹೀಗೇಕಾಗುತ್ತಿದ್ದೀ ಅಚಲಾ ?" ಎಂದು ನಿಟ್ಟುಸಿರು ಬಿಟ್ಟರು

ಸಾಲದ ಜಾಲದಿಂದ ಬಿಗಿಯಲ್ಪಟ್ಟ ತಂದೆ, ಯಾವ ತೆರದ ಅಸತ್ಯ- ಹೇಯ ಮಾರ್ಗದಿಂದ ಆತ್ಮರಕ್ಷಣೆಗೆ ಪ್ರಯತ್ನಿಸುತ್ತಿರುವನೆಂಬುದನ್ನು ಅವಳು ನೋಡುತ್ತ ಬಂದಿದ್ದಳು, ಅದೆಲ್ಲ ಅವಳಿಗೆ ಮರ್ಮಭೇದಕವಾಗಿತ್ತು, ಆದರೂ ನೀರವವಾಗಿ ಸಹಿಸುತ್ತಲಿದ್ದಳು ಇಂದೂ ಮಾತನಾಡಿ ಅವರ ಅಕಾರಣ ನೈರಾಶ್ಯವನ್ನು ಅನುಮೋದಿಸಲಿಲ್ಲ ಆದರೆ ಅವಳು ಒಳಗೊಳಗೆ

ಲಜ್ಜಿತಳಾಗಿರುವುದನ್ನು, ಪಶ್ಚಾತ್ತಾಪ ಪಡುತ್ತಿರುವುದನ್ನು ಕಂಡು ಕೇದಾರ ಬಾಬು ಪ್ರಸನ್ನರಾದರು.

ಆಳು ದೀಪಹಚ್ಚಿ ಹೋದ ಕೇದಾರಬಾಬು ಸಸ್ನೇಹ ತಿರಸ್ಕಾರದಿಂದ ನುಡಿದರು “ ಮಹಿಮನ ಬಗ್ಗೆಯೂ ನೀನೊಂದೂ ವಿಷಯ ತಿಳಿದು ಕೊಳ್ಳಲಿಲ್ಲ ಅದು ಒಳ್ಳೆಯದೇ ಆಯಿತೆನ್ನು ದೇವರು ಒಳ್ಳೆಯದನ್ನೇ ಮಾಡುವ ಆದರೆ ಆ ರೀತಿ ಸುರೇಶಬಾಬುಗಳಿಗೆ ಅನ್ವಯಿಸುವುದಿಲ್ಲ. ದೇವರಾಗಿಯೇ ಅವರನ್ನು ಕರೆತಂದಿದ್ದಾನೆ ! ”

“ ಅವರಿಂದ ಸಾಲ ಕೊಳ್ಳುವಿರಾ ? ”

ಕೇಳಿ ಕೇದಾರಬಾಬುಗಳ ಭಗವದ್ಭಕ್ತಿ ಭಗ್ನವಾಯಿತು ಮಗಳ ಕಡೆ ನೋಡಿ, “ ಹಾಂ,— ಇಲ್ಲ, ಸಾಲ ಎಂದರೆ ಸಾಲವೇನಲ್ಲ ನೀನರಿಯೆ, ಅವರೆಷ್ಟು ಉತ್ತಮ ಹುಡುಗ ! ಇಂಥವರು ಈ ಕಾಲದಲ್ಲಿ ಲಕ್ಷಕ್ಕೊಬ್ಬರು ಸಾಲಕ್ಕಾಗಿ ಮನೆ ಹೋಗಬಾರದು ಎಂದವರ ಇಚ್ಛೆ , ಉಳಿದರ ನಿಮ್ಮಿಬ್ಬರಿ ಗಾಗುವುದು — ನಾ ಇನ್ನೆಷ್ಟು ದಿನದವ ?— ತಿಳಿಯಿತೇ ಮಗೂ ? ” ಎಂದರು ಅಚಲೆ ಸುಮ್ಮನಿದ್ದಳು ಅವರು ಉತ್ಸಾಹಗೊಂಡು ಮುಂದು ವರಿಸಿದರು “ ನೀ ಬಲ್ಲೆ ನನಗೆ ಯಾವಾಗಲೂ ಸ್ಪಷ್ಟಮಾತು ಸೇರುತ್ತದೆ, ಒಳಗೊಂದು ಹೊರಗೊಂದು ಇಲ್ಲ ಸ್ವಚ್ಛ ಹೇಳುವೆ ಎಲ್ಲಾ ತಿಳಿದ ಮೇಲೂ ಮಹಿಮನಿಗೆ ಮಗಳನ್ನು ಕೊಡುವುದಕ್ಕಿಂತ ಕೆರೆಬಾವಿ ನೂಕು ವುದು ಲೇಸು ಸುರೇಶನ ಅಭಿಪ್ರಾಯವೂ ಇದೇ ಆಗಿರುವಾಗ, ಅವನ ಮಿತ್ರನಿಗೆ ಕೊಟ್ಟು ಮದುವೆಮಾಡುವ ಮಾತು ಬಹುದೂರ ಮುಂದುವರಿ ದಿದೆ, ಜನಕ್ಕೆಲ್ಲ ಗೊತ್ತಾಗಿದೆ, ಈ ಪರಿಸ್ಥಿತಿಯಲ್ಲಿ ಆ ಸಂಬಂಧ ತಪ್ಪಿಸಿ ದರೆ ಮಾತ್ರ ಆಗದು, ಶೀಘ್ರವೇ ಮತ್ತೊಂದು ಕಡೆ ಗೊತ್ತುಮಾಡ ಬೇಕು, ಇಲ್ಲವಾದರೆ ಸಮಾಜದಲ್ಲಿ ತಲೆಯೆತ್ತಿ ನಡೆಯುವಂತಿಲ್ಲ ಎಂದು ಹೇಳಲೇಬೇಕಾಯಿತು ಏನೇ ಎನ್ನು, ಭಂಗಾರದಂಥ ಹುಡುಗ ಸುರೇಶ ! ಇದಕ್ಕಾಗಿ ಆ ಮಂಗಲಮಯನಿಗೆ ವಂದನೆ ”

ತಂದೆಯ ನಮಸ್ಕಾರ ಸಮಾಧಿ ನಿರ್ವಿಘ್ನವಾಗಿ ಮುಗಿದ ಬಳಿಕ ಅಚಲೆ ನಿದಾನವಾಗಿ ಕೇಳಿದಳು “ ಅವರಿಂದ ಅಷ್ಟು ಹಣ ತೆಗೆದುಕೊಳ್ಳ ದಿದ್ದರೆ ನಡೆಯದೆ ? ”

ಸಂದೇಹದಿಂದ ಬೆಚ್ಚಿ ಅವರೆಂದರು “ಎಂದರೆ ? ”

"ಕೊನೆಗೆ ತಿರುಗಿ ಕೊಡುವುದಾದರೂ ಆಗಲಿಕ್ಕಿಲ್ಲವೆ ?"

"ಸುರೇಶಬಾಬು ತಿರುಗಿಕೊಡುವ ವಿಷಯವಾಗಿ—" ಸಂಶಯದಿಂದ ಉದ್ವಿಗ್ನರಾದ ಕೇದಾರಬಾಬುಗಳಿಂದ ಮಾತು ಪೂರಯಿಸುವುದಾಗಲಿಲ್ಲ. ಅವರ ಮುಖ ಬಿಳಿಚಿಕೊಂಡುದನ್ನು ಕಂಡು ಅಚಲೆಗೆ ವ್ಯಥೆಯಾಯಿತು ತಟ್ಟನೆ "ನಾಡದು ಹಣ ಕೊಡುತ್ತೇನೆಂದು ಎನ್ನುತ್ತಿದ್ದರು," ಎಂದಳು

"ತಿರುಗಿ ಕೊಡುವ ಮಾತು —"

"ಅದನ್ನೇನು ಅವರಾಡಲಿಲ್ಲ"

"ಕಾಗದ ಪತ್ರ"

"ಊಂ ಹೂ ಆ ವಿಚಾರವೇ ಅವರಿಗಿದ್ದಂತೆ ಕಾಣಲಿಲ್ಲ"

"ಹಾಂ, ಅದೇ ಎಂದೆ" ಎಂದು ಕೇದಾರಬಾಬು ತಡೆದ ಉಸಿರನ್ನು ಘಸ್ಸನೆ ಬಿಟ್ಟರು ಚೇಯಾರಿನಲ್ಲಿ ದೊಪ್ಪನೆ ಬಿದ್ದುಕೊಂಡು, ಕಣ್ಣು ಮುಚ್ಚಿ ಮೇಜಿನ ಮೇಲೆ ಕಾಲು ಚಾಚಿದರು ತೃಪ್ತಿಯಿಂದ ಹಾಯೆನಿಸಿ ಅವರ ಸರ್ವಾಂಗವೂ ಶಿಥಿಲವಾಗಿರಬೇಕು ಸ್ವಲ್ಪ ಹೊತ್ತು ಹಾಗಿದ್ದು ಕಾಲು ಮುದುರಿಕೊಂಡು ಉದ್ದೀಪ್ತಸ್ವರದಲ್ಲಿ ನುಡಿದರು "ಸ್ವಲ್ಪ ವಿಚಾರ ಮಾಡು ಮಗೂ, ಎಲ್ಲಿಯದೆಲ್ಲಿಗೆ ಬಂತು ನೋಡು ಇದರಲ್ಲಿ ಆ ಸರ್ವಶಕ್ತಿಮಂತನ ಕೈಯುಂಟೆಂದು ಸ್ಪಷ್ಟವಾಗುವುದಿಲ್ಲವೆ ?" ಎಂದು ಉತ್ತರವನ್ನಪೇಕ್ಷಿಸದೆ ಮತ್ತೆ ಮಾತನಾಡತೊಡಗಿದರು "ಇದೆಲ್ಲ ಶಿವನ ಕೃಪೆಯಿಂದೇ ನಿಚ್ಚಳವಾಗಿ ಕಾಣುತ್ತಿದೆ ನನಗೆ ನಿನಗೆ ಹೇಳುತ್ತೇನೆ—ಈ ಎರಡು ವರ್ಷ ಒಂದಿನವೂ ಸರಿಯಾಗಿ ನಿದ್ದೆ ಮಾಡಿಲ್ಲ, ಅವನನ್ನೇ ಕರೆಯುತ್ತಿದ್ದೇನೆ ಸುರೇಶಬಾಬುವನ್ನು ನೋಡಿದ ಕೂಡಲೆ ಹಿಂದಿನ ಜನ್ಮದಲ್ಲಿ ಮಗನಾಗಿದ್ದನೋ ಎನಿಸುತ್ತಿದೆ"

ಅಚಲೆ ಸುಮ್ಮನೆ ಕುಳಿತಿದ್ದಳು ತಂದೆಯ ಆರ್ಥಿಕ ಸ್ಥಿತಿ ಅವಳಿಗೆ ಗೊತ್ತಿತ್ತು ಆದರೆ ಒಳಗಿಂದೊಳಗೆ ಇಷ್ಟಕ್ಕೆ ಬಂದಿರಬಹುದೆಂದು ಬಗೆದಿರಲಿಲ್ಲ ಎರಡು ವರ್ಷಗಳ ಏಕಾಗ್ರ ಆರಾಧನೆಯಿಂದ ಮಂಗಲಮಯನ ಕೃಪೆಯಿಂದ ಈಗ ಅವರ ದುಃಖಭಾರ ಹಗುರಾಗಿದ್ದೀತು ಆದರೆ ಅವಳಿಗೆ ತನ್ನ ಸಮಸ್ಯೆ ಒಮ್ಮಿಗಿಲೆ ಭಯಂಕರ ಜಟಿಲವಾಗಿ ಇದಿರು ನಿಂತಿತು ಸುರೇಶನಿಂದ ಹಣ ಪಡೆಯುವ ವಿಷಯದಲ್ಲಿ ಅವಳು ತನ್ನ ವಿಚಾರವನ್ನು ಬಿಡಬೇಕಾಯಿತು ಅದಕ್ಕೆ ಸ್ವಲ್ಪವೂ ವಿರೋಧ ತೋರಿಸಲಾರದಾದಳು.

ಸಂಧ್ಯಾಹ್ನಿಕಕ್ಕೆ ಕೇದಾರಬಾಬು ಎದ್ದು ಹೋದರು. ಎಲ್ಲವನ್ನೂ ಆದಿ ಮೊದಲಾಗಿ ಭಾವಿಸಿಕೊಳ್ಳಲು ಅಚಲೆ ಸ್ತಬ್ಧಳಾಗಿ ಕುಳಿತಳು.

ಅವಳ ಜೀವನದ ಸಂಧಿಸ್ಥಳದಲ್ಲಿ ಇಬ್ಬರು ಗೆಳೆಯರು ಅಕ್ಕಪಕ್ಕದಲ್ಲಿ ಕುಳಿತಿದ್ದಾರೆ. ಒಬ್ಬನನ್ನು ಬೀಳ್ಕೊಡಲೇಬೇಕಾಗಿದೆ. ಯಾರನ್ನು? ಮಹಿಮ: ಅಸಂದಿಗ್ಧ ವಿಶ್ವಾಸದಿಂದ— ಯಾವ ಕಾರ್ಯದ, ಆಕರ್ಷಣೆಯಿಂದಲೋ ಯಾರಿಗೆ ಗೊತ್ತು?— ನಿಶ್ಚಿಂತವಾಗಿ ನಿರುದ್ವಿಗ್ನವಾಗಿ ಕುಳಿತಿದ್ದಾನೆ. ಅವನ ಶಾಂತಸ್ಥಿರ ಮುಖಭಾವವನ್ನು ಕಂಡು ಅವಳ ಕಣ್ಣಲ್ಲಿ ನೀರು ಸೂಸಿತು. ಅವನೆಂದೂ ಯಾವ ತಪ್ಪೂ ಮಾಡಿಲ್ಲ, ಆದರ ಹೊರಡೆಂದೊಡನೆ ನಿಃಶಬ್ದವಾಗಿ ಹೊರಟುಬಿಡುತ್ತಾನೆ! ಜೀವನದಲ್ಲೆಂದೂ ಯಾವ ನೆಪದಿಂದಲೂ ಅವಳ ಹಾದಿಗೆ ಬರುವುದಿಲ್ಲ! ಅವಳಿಗೆ ನಿಚ್ಚಳವಾಗಿ ಕಾಣತೊಡಗಿತು: ಕನಸುಮನಸಿನಲ್ಲಿಲ್ಲದ ಚಿರವಾಗಿ ಬೀಳ್ಕೊಳ್ಳುವ ಕಾಲದಲ್ಲಿಯೂ ಅವನ ಗಾಂಭೀರ್ಯ ಅಚ್ಚಳಿಯುವುದಿಲ್ಲ, ಅವನು ಯಾರನ್ನೂ ದೂರುವುದಿಲ್ಲ; ಕಾರಣವನ್ನೂ ತಿಳಿಯ ಬಯಸುವುದಿಲ್ಲ! ನಿಗೂಢ ವಿಸ್ಮಯದ ತೀವ್ರ ವೇದನೆಯ ಅಸ್ಪಷ್ಟ ರೇಖೆಯೊಂದು ಅವನ ಮುಖದಲ್ಲಿ ಮೂಡಬಹುದು, ಆದರೆ ಅದು ಅವಳಿಗಲ್ಲದೆ ಮತ್ತಾರಿಗೂ ಕಾಣದು. ಆ ಬಳಿಕೊಂದು ದಿನ ಸುರೇಶನೊಡನೆ ಮದುವೆಯ ಪ್ರಸ್ತಾಪ. ಆ ಅಕಲ್ಪಿತ ಸಮಯದಲ್ಲಿ ಅವಳು ನಿಟ್ಟುಸಿರಿಡುವಳು ಅಥವಾ ನಸುನಕ್ಕು ತನ್ನ ಕಲಸದಲ್ಲಿ ತೊಡಗುವಳು! ನಿರ್ಜನವಾದ ಕೋಣೆಯೊಳಗೆ ಕಲ್ಪನಾಮಾತ್ರದಿಂದಲೇ ಅವಳ ಮುಖ ನಾಚಿಕೆ ತಿರಸ್ಕಾರಗಳಿಂದ ಕೆಂಪಾಯಿತು.

೯

ಹತ್ತು ಹನ್ನೆರಡು ದಿನಗಳು ಕಳೆದವು. ಕೇದಾರಬಾಬುಗಳಿಗೆ ಒಳ್ಳೆಯ ಹರಯದೊಳಗಾದರೂ ಇತ್ತೋ ಇಲ್ಲವೋ ಅಷ್ಟು ಉತ್ಸಾಹ. ಒಂದಿನ ಬಾಯ್‌ಸ್ಕೋಪ್ ನೋಡಿಕೊಂಡು ಮರಳಿದ್ದರು. ಗೋಲದಿಗ್ಗಿಯ ಹತ್ತಿರಹತ್ತಿರ ಬರುತ್ತಲೇ ಅವರು ಒಮ್ಮೆಲೆ ಬಂಡಿಯಿಂದಿಳಿದು "ಸುರೇಶ ಬಾಬೂ, ನಾ ಸಮಾಜಕ್ಕೆ ಹೋಗುವೆ, ನೀವು ಮನೆಗೆ ಹೋಗಿರಿ," ಎಂದು ಬಡಿಗೆ ತಿರುವುತ್ತ ಲಗುಬಗನೆ ಹೊರಟುಹೋದರು. "ನಿಮ್ಮ ತಂದೆಯ ಪ್ರಕೃತಿ ಇತ್ತೀಚೆ ಚೆಲೋ ಸುಧಾರಿಸಿದಂತೆ ಕಾಣುತ್ತದೆ," ಎಂದ ಸುರೇಶ. ಅಚಲೆ ಆ ಕಡೆಗೇ ನೋಡುತ್ತಿದ್ದವಳು "ಹೌದು, ನಿಮ್ಮದೇ ಕೃಪೆ" ಎಂದಳು.

ಬಂಡಿ ಮುರುವಿನಲ್ಲಿ ಹೊರಳಿ ಅವರು ಮರೆಯಾದ ಬಳಿಕ ಸುರೇಶ ಅಚಲೆಯ ಕೈ ಹಿಡಿದು, "ಈ ಮಾತು ನನಗೆಷ್ಟು ಚುಚ್ಚುವುದೆಂಬುದನ್ನು ನೀ ಬಲ್ಲೆ ಅದಕ್ಕೇ ಬಾರಿಬಾರಿಗೂ ಹೀಗಾಡುತ್ತೀಯಾ ಅಚಲಾ?" ಎಂದ.

ಅಚಲೆ ಮ್ಲಾನಹಾಸದೊಡನೆ "ಅದಕ್ಕೇನಲ್ಲ ನಿಮ್ಮ ಇಷ್ಟು ದೊಡ್ಡ ಉಪಕಾರ ಮರೆಯತೇನೆಂದು ಮತ್ತೆ ಮತ್ತೆ ನೆನೆಯುತ್ತೇನೆ" ಎಂದಳು.

ಸುರೇಶ ಅವಳ ಕೈಯನ್ನು ಸ್ವಲ್ಪ ಹಿಸುಕಿ, "ಇದಕ್ಕಾದರೆ ನನ್ನೆದೆ ಮತ್ತಷ್ಟು ನೋಯುವುದು," ಎಂದ

"ಏಕೆ?"

"ಈ ದಯೆಯ ಸ್ಮರಣೆಯಿಂದಲೇ ನೀನು ಉತ್ಸಾಹಗೊಳ್ಳುವೆ ಯೆಂದು, ಬೇರ ಬಂಡವಾಳ ನನ್ನಲ್ಲಿಲ್ಲವೆಂದು ತೋರುತ್ತದೆ ಹೌದೋ ಅಲ್ಲವೋ ಹೇಳು"

"ಹೇಳದಿದ್ದರೆ?"

"ಇಚ್ಛೆಯಿಲ್ಲದಿದ್ದರೆ ಹೇಳಬೇಡ ಅವರೆ ನನ್ನನ್ನು 'ನೀನು' ಎಂದು ಸಂಬೋಧಿಸಲಾರೆಯಾ?"

ಅವಳು ಮ್ಲಾನವಾದ ಮುಖ ತಗ್ಗಿಸಿಕೊಂಡೇ ನುಡಿದಳು "ಒಂದಿನ ಹಾಗೆನ್ನಲೇಬೇಕಾಗುವುದು"

ಆಕೆಯ ಮ್ಲಾನಮುಖ ನೋಡಿ ಅವನೆಂದ. "ಹಾಗಿದ್ದರೆ ಎರಡು ದಿನ ಮುಂಚೆಯೇ ಎಂದರೇನು ತಪ್ಪು?"

ಅಚಲೆ ಮಾತನಾಡಲಿಲ್ಲ ಅನ್ಯಮನಸ್ಕಳಂತೆ ಬೀದಿಯ ಕಡೆ ನೋಡುತ್ತ ಕುಳಿತಳು ಒಂದೆರಡು ನಿಮಿಷ ಸುರೇಶನೂ ಸುಮ್ಮನಿದ್ದು ಪಕ್ಕನೆ ನುಡಿದ "ಮಹಿಮನಿಗೆ ಎಲ್ಲ ತಿಳಿದಿದೆ, ಕಾಣುತ್ತದೆ!"

ಅಚಲೆ ಚಕಿತಳಾಗಿ ಕೈ ಕೊಸರಿಕೊಂಡು, "ನಿಮಗೆ ಹೇಗೆ ಗೊತ್ತಾಯಿತು?" ಎಂದಳು

ಅವಳ ವ್ಯಗ್ರಸ್ವರ ಸುರೇಶನ ಕಿವಿಯಲ್ಲಿ ಕರಕ್ಕೆಂದಿತು "ಇಲ್ಲದಿದ್ದರೆ ಆತ ಇಷ್ಟರಲ್ಲಿ ಬರುತ್ತಿದ್ದ ಹೋಗಿಯಾಗಲೇ ಹದಿನೈದು ಹದಿನಾರು ದಿನಗಳಾದವು," ಎಂದ.

"ಈವೊತ್ತಿಗೆ ಹತ್ತೊಂಬತ್ತು ದಿನ ಆಯಿತು. ಇರಲಿ. ಅಪ್ಪ ಆತನಿಗೆ ಪತ್ರಗಿತ್ರ ಬರೆದುದು ನಿಮಗೇನಾದರೂ ಗೊತ್ತೆ?"

"ಇಲ್ಲ, ಗೊತ್ತಿಲ್ಲ"

"ಅವನು ಊರಿಂದ ತಿರುಗಿ ಬರುವುದೇನಾದರೂ?"

"ಅದೂ ಗೊತ್ತಿಲ್ಲ"

"ಬರೆದಿರದಿದ್ದರೆ ಬರೆದು ಎಲ್ಲ ತಿಳಿಸುವುದು ಉಚಿತ ಪಕ್ಕನೆ ಒಂದಿನ ಬಂದು ಕೂತಾನು!"

ಸ್ವಲ್ಪ ಹೊತ್ತು ಇಬ್ಬರೂ ನೀರವ ಸುರೇಶ ಅವಳ ಶಿಥಿಲ ಕರವನ್ನು ಮತ್ತೆ ಹಿಡಿದು ಮೆಲ್ಲಮೆಲ್ಲನೆ ಎಂದ "ನೀನು ನನ್ನನ್ನು ಎಂದೂ ನಂಬಲಾರೆ ಎಂದು ನೆನೆದು ನನಗೆ ಬಹಳ ದುಃಖವಾಗುವುದು ನಾ ನಿನ್ನನ್ನು ಕೇವಲ ಹಣದ ಕಸುವಿನಿಂದಲೇ ಸೆಳೆದಿದ್ದೇನೆಂಬ ಭಾವನೆ ನಿನಗೆ ಕಡೆತನಕ ಹೋಗುವುದಿಲ್ಲ ನನ್ನ ತಪ್ಪು—"

"ಇಂಥ ಮಾತು ನೀವಾಡಬಾರದು ನಾನೆಂದೂ ನಿಮಗೆ ಅಪವಾದ ಕೊಡುವುದಿಲ್ಲ," ಎಂದು ತುಸ ತಡೆದು ಅಚಲೆಯೆಂದಳು "ಜಗತ್ತಿನಲ್ಲಿ ಎಲ್ಲೆಲ್ಲೂ ಧನದ ಪ್ರಭಾವ ನಡೆಯುತ್ತಿದೆ ಇದಂತೂ ತಿಳಿದ ಮಾತೇ. ಆದರೆ ನೀವೇನೂ ಆ ಪ್ರಭಾವ ಪ್ರಯೋಗಿಸಿಲ್ಲ ಅಪ್ಪನಿಗೊಂದ ವೇಳೆ ಗೊತ್ತಿರಲಿಕ್ಕಿಲ್ಲ ಆದರೆ ಗೊತ್ತಿದ್ದ ನಾನು ಅವಿಶ್ವಾಸಪಟ್ಟರೆ ನನಗೆ ನರಕದಲ್ಲಿಯೂ ಇಂಬು ಸಿಕ್ಕಲಿಕ್ಕಿಲ್ಲ"

ಸಾಮಾನ್ಯ ಕರುಣ ಕಥೆಗೇ ವಿಚಲಿತನಾಗುವವ ಸುರೇಶ ಅಚಲೆಯ ಈ ಪ್ರಿಯವಚನದಿಂದ ಅವನ ಕಣ್ಣಲ್ಲಿ ನೀರು ಬಂತು ಅದನ್ನವಳ ಕೈಯಿಂದಲೇ ಒರಸಿಕೊಂಡು, "ಈ ಅನ್ಯಾಯ ಈ ಅಪರಾಧ ಎಷ್ಟು ಘೋರ ಎಂಬುದು ನನಗೆ ತಿಳಿಯಲಿಲ್ಲ ಎಂದುಕೊಳ್ಳಬೇಡ ನಾ ದುರ್ಬಲ, ಅತೀವ ದುರ್ಬಲ ಇಂತಹ ಆಘಾತ ಮಹಿಮ ಸೈರಿಸಬಹುದು, ನನ್ನ ಹೃದಯ ಒಡೆದುಹೋಗುವುದು!" ಎನ್ನುತ್ತಿದ್ದಂತೆಯೇ ಏನೋ ಕಠಿನ ಆಘಾತವನ್ನು ಸಂಬಾಳಿಸಿಕೊಂಡು ರುದ್ಧ ಸ್ವರದಿಂದ ಎಂದ "ನೀ ನನ್ನವಳಲ್ಲ, ಇನ್ನೊಬ್ಬನವಳು ಎಂದು ಯೋಚಿಸಲಾರೆ ಕೂಡ ನಿನ್ನನ್ನು ಪಡೆಯಲಾರೆ ಎಂದನಿಸಿದಾಕ್ಷಣ ಕಾಲಕೆಳಗಿನ ನೆಲವೇ ಸರಿದಂತಾಗುವುದು!"

ಬೀದಿಯ ವಿದ್ಯುದ್ದೀಪಗಳು ಆದೇ ಬೆಳಗತೊಡಗಿದ್ದವು ಒಂದಿ ಮನೆಸಂದಿಗೆ ಹೊರಳುತ್ತಲೇ ಉಜ್ವಲ ಪ್ರಕಾಶ ಸುರೇಶನ ಮೋರೆಯ ಮೇಲೆ ಬಿದ್ದಿತು ಕಂಬನಿ ಮಿನುಗಿದವು. ಕಂಡು ಅಚಲೆ ವಿಹ್ವಲೆಯಾಗಿ

ಎಂದೂ ಮಾಡದಿದ್ದುದನ್ನು ಮಾಡಿಬಿಟ್ಟಳು ಬಾಗಿ ಅವನ ಕಣ್ಣು ಒರಸಿ "ತಂದೆಗೆ ನಾ ಹೊರತಲ್ಲ ಅವರು ನನ್ನ ನಿಮಗೊಪ್ಪಿಸಿದ್ದಾರೆ" ಎಂದಳು

ಸುರೇಶ ಅವಳಾ ಕೈಯನ್ನು ತುಟಿಗೊತ್ತಿಕೊಂಡು ಪುನಃಪುನಃ ಮುದ್ದಿಸಿದ "ಇದೇ ನನಗೆ ದೊಡ್ಡ ಪುರಸ್ಕಾರ, ಹೆಚ್ಚಿನದೇನು ಬೇಕಿಲ್ಲ, ಇದರಿಂದ ನನ್ನನ್ನು ವಂಚಿಸಬೇಡ ಕಂದೆಯಾ!" ಎಂದ

ಬಂಡಿ ಮನೆಯ ಮುಂದೆ ನಿಂತಿತು ಆಳು ಬಾಗಿಲು ತೆರೆದ ಸುರೇಶ ಇಳಿದು, ಜತನವಾಗಿ ಸಾವಧಾನವಾಗಿ ಅಚಲೆಯನ್ನು ಕೈಹಿಡಿದಿಳಿಸಿ, ಇಬ್ಬರೂ ಜೊತೆಯಾಗಿ ಹೋಗುತ್ತಲೆ—ಇದಿರಿಗೆ ಮಹಿಮ! ಕಾಣುತ್ತಲೆ ಇಬ್ಬರೂ ಕಲ್ಲಾಗಿಬಿಟ್ಟರು! ಇನ್ನೊಂದು ಕ್ಷಣದಲ್ಲಿ ಅಚಲೆ ಏನೋ ಅವ್ಯಕ್ತ ಆರ್ತಧ್ವನಿಗೈದು ಕೈಕೊಸರಿಕೊಂಡು ಸರಿದು ನಿಂತಳು

ಮಹಿಮ ವಿಸ್ಮಯದಿಂದ ಮುಂಗಾಣದಾದ "ಸುರೇಶ, ನೀ ಇಲ್ಲಿ?" ಎಂದ

ಸುರೇಶನಿಗೆ ಮಾತೇ ಹೊರಡಲಿಲ್ಲ ಉಗುಳು ನುಂಗಿ, ಹಾಳು ಮೋರೆಯಲ್ಲಿ ಒಣನಗೆ ಎಳೆದು ತಂದು, "ಓ, ಮಹಿಮ! ನೋಡಲೇ ಇಲ್ಲ ಯಾವಾಗ ಬಂದೆ? ಏನು ಸಮಾಚಾರ? ನಡೆ ನಡೆ, ಮೇಲೆ ನಡೆ," ಎಂದು ನುಡಿದು ಹತ್ತಿರ ಹೋಗಿ ಅವನ ಕೈ ಕುಲುಕಿ, "ಚೆಲೋ ತಮಾಷೆ ಮಾಡಿಬಿಟ್ಟರು ಇವರ ತಂದೆ ತಾವು ಹೋದರು ಸಮಾಜಕ್ಕೆ. ಮನೆಗೆ ಮುಟ್ಟಿಸುವ ಭಾರಬಿತ್ತು ಬಡಪನ ಮೇಲೆ ಹೂಂ, ಅದೂ ಒಳ್ಳೆಯದೇ ಆಯಿತು ಇಲ್ಲದಿದ್ದರೆ ಮಹಿಮನ ಬೆಟ್ಟಿಯಾಗುತ್ತಿರಲಿಲ್ಲ. ಊರಲ್ಲಿ ಇಷ್ಟುದಿನ ಏನು ಮಾಡಿದೆಯೊ?" ಎಂದ

"ಕೆಲಸವಿತ್ತು"

ಸುರೇಶ ಅವನ ಬೆನ್ನುಚಪ್ಪರಿಸಿ, "ಚೆಲೋ ಮನುಷ್ಯ! ಸತ್ತ ಎಂದು ತಿಳಿದಿದ್ದೆವು ಒಂದು ಕಾಗದ ಹಾಕಬಾರದೇ? ಸಿಂತೆಯಲ್ಲ, ಮೇಲೆ ನಡೆ," ಎಂದು ಬಲಾತ್ಕಾರದಿಂದ ತಳ್ಳಿಕೊಂಡು ನಡೆದ ಕೂಡುವ ಕೋಣೆಗೆ ಹೋಗಿ ಎಲ್ಲರೂ ಕುಳಿತುಕೊಂಡಾಗ ಅವನ ಅಸ್ವಾಭಾವಿಕ ಪ್ರಗಲ್ಭತೆ ತಣ್ಣಗಾಗಿತ್ತು ವಿದ್ಯುದ್ದೀಪದ ಬೆಳಕಿನಲ್ಲಿ ಅವನ ಮುಖ ಕಾಲೀವರ್ಣವಾಗಿ ಕಂಡಿತು ಎರಡು ಮೂರು ನಿಮಿಷ ನಿಃಶಬ್ದವಾಗಿ ಕಳೆಯಿತು. ಕೊನೆಗೆ ಮಹಿಮ ಗೆಳೆಯನನ್ನೊಮ್ಮೆ ಅಚಲೆಯನ್ನೊಮ್ಮೆ

ಶೂನ್ಯದೃಷ್ಟಿಯಿಂದ ನೋಡಿ ಶುಷ್ಕಕಂಠದಿಂದ ಅವಳನ್ನು "ಏನೆಲ್ಲ ನೆಟ್ಟಗೇ ?" ಎಂದು ಪ್ರಶ್ನಿಸಿದ ಅಚಲೆ ತಲೆತೂಗಿ ಉತ್ತರ ಕೊಟ್ಟಳು, ಕಣ್ಣೆತ್ತಿ ನೋಡಲಿಲ್ಲ. ಮಹಿಮ "ನನಗೆ ಭಯಂಕರ ಆಶ್ಚರ್ಯ—ಸುರೇಶನದೂ ನಿನ್ನದೂ ಪರಿಚಯ ಹೇಗಾಯಿತು ?" ಎಂದ

ಅಚಲೆ ಮೊಗವೆತ್ತಿ ಅಂಗೈಯಲ್ಲಿ ಜೀವ ಹಿಡಿದುಕೊಂಡು ಎಂದಳು : "ಇವರು ಅಪ್ಪನ ನಾಲ್ಕುಸಾವಿರ ಸಾಲ ತೀರಿಸಿದರು"

ಅವಳ ಮುಖಭಾವ ನೋಡಿದ ಮಹಿಮನ ಬಾಯಿಂದ "ಆಮೇಲೆ!" ಎಂದಿಷ್ಟೇ ಹೊರಟಿತು

"ಆ ಮೇಲಿನದು ಅಪ್ಪನನ್ನು ಕೇಳು" ಎಂದು ಅಚಲೆ ಎದ್ದು ಹೊರಟುಹೋದಳು ಮಹಿಮ ಕೆಲಹೊತ್ತು ಮುಂಗಾಣದ ಕುಳಿತಿದ್ದು, "ಏನು ಸಮಾಚಾರ ಸುರೇಶ ?" ಎಂದ

ಸುರೇಶ ಉದ್ಧತನಾಗಿ ಉತ್ತರವಿತ್ತ "ನಿನ್ನಂತೆ ನನಗೆ ದುಡ್ಡೇ ಪ್ರಾಣವಲ್ಲ ಸಜ್ಜನರು, ವಿಪತ್ತಿನಲ್ಲಿ ಸಹಾಯ ಕೋರಿದರು, ಕೊಟ್ಟೆ, ಇಷ್ಟೆ ಅವರಿಂದ ತಿರುಗಿ ಕೊಡುವುದಾಗದಿದ್ದರೆ ನನ್ನದೇನು ತಪ್ಪು ? ಇಷ್ಟುವಿಚಾರ ನನ್ನದು ತಪ್ಪೆಂದು ನೀ ಎಂದರೆ ಸಾವಿರ ಸಲ ಎನ್ನು, ನನ್ನ ಅಡ್ಡಿಯೇನಿಲ್ಲ"

ಈ ಅಸಂಬದ್ಧ ಹೇಳಿಕೆ, ಹೇಳುವ ಅಪರೂಪ ಭಂಗಿ ಮಹಿಮನನ್ನು ಮತ್ತಷ್ಟು ದಿಙ್ಮೂಢಗೊಳಿಸಿದವು "ಒಮ್ಮೆಂದೊಮ್ಮೆಲೆ ನಿನಗೇಕೆ ದೋಷ ಕೊಡಲಿ ? ನನಗೇನೂ ತಿಳಿಯುಲೊಲ್ಲದು ಬಿಚ್ಚಿ ಹೇಳಬಾರದೆ ?" ಎಂದ.

ಸುರೇಶ ಅದೇ ರುಕ್ಷಸ್ವರದಿಂದ, "ಬಿಚ್ಚೇನು ಹೇಳುವುದು ಮತ್ತೆ ! ಹೇಳುವುದಕ್ಕಿದೆಯೇನು ?"

"ಇವೆ ನಾ ಹೋಗುವಾಗ ನಿನಗಿವರ ಗುರುತಿರಲಿಲ್ಲ ಇಷ್ಟರೊಳಗೇ ಇಷ್ಟು ಘನಿಷ್ಠ ಪರಿಚಯ ಹೇಗಾಯಿತು ? ಬ್ರಾಹ್ಮಕುಟುಂಬಕ್ಕೆ ನಾಲ್ಕು ಸಾವಿರ ಸಹಾಯಮಾಡುವ ಔದಾರ್ಯ ನಿನಗೆ ಬಂದಿತು ಹೇಗೆ ? ಅದಷ್ಟು ತಿಳಿದರೆ ಕೃತಾರ್ಥನಾಗುವೆ"

"ಆದರಾಗಬಹುದು ಆದರೆ ನನಗೆ ಹರಟೆಗೆ ಸಮಯವಿಲ್ಲ ಈ ಕ್ಷಣ ಹೋಗಬೇಕಾಗಿದೆ. ಕೇದಾರಬಾಬುಗಳನ್ನೇ ಕೇಳಲ್ಲ ಅವರಲ್ಲವನ್ನೂ ಹೇಳಬೇಕೆಂದಿರುವರು."

" ಅದೇ ಒಳ್ಳೆಯದು, " ಎಂದು ಮಹಿಮ ಎದ್ದು ನಿಂತ " ಕೇಳುವ ಕುತೂಹಲವೇನೋ ಬಹಳವಿದೆ, ಅವರನ್ನು ಕಾದಿರಲು ಪುರಸತ್ತಿಲ್ಲ "

ಸುರೇಶ ಮಾಟ್ಬುಮಿಸುಕಲಿಲ್ಲ ಮಹಿಮ ಹೊರಹೊರಟ ಇದಿರಿನ ಶೀಲಿಙ್ ಹಿಡಿದು ಈ ಕಡೆಗೇ ನೋಡುತ್ತ ಅಚಲೆ ಕತ್ತಲಲ್ಲಿ ನಿಂತಿದ್ದಳು. ಆದರೆ ಹತ್ತಿರ ಬರುವ ಇಲ್ಲವೆ ಮಾತನಾಡುವ ಪ್ರವೃತ್ತಿ ತೋರಿಸಲಿಲ್ಲ. ಮಹಿಮನೂ ನೀರವವಾಗಿ ಸಾವಕಾಶವಾಗಿ ಮೆಟ್ಟಿಲಿಳಿದು ಹೋಗಿಬಿಟ್ಟ.

೧೦

ಮಹಿಮ ಏನೋ ಔಷಧ ಒಯ್ಯಲು ಕಲಿಕಾತೆಗೆ ಬಂದಿದ್ದ ರಾತ್ರಿ ಗಾಡಿಗೇ ತಿರುಗಿದ ಸುರೇಶ ವಿಚಾರಿಸಲಾಗಿ, ಅವನು ತನ್ನ ಕೋಣೆಗೂ ಹೋಗಿರಲಿಲ್ಲವೆಂದು ತಿಳಿಯಿತು ನಾಲ್ಕೈದು ದಿನಗಳ ತರುವಾಯ ಇಳಿಹೊತ್ತಿನಲ್ಲಿ ಕೇದಾರಬಾಬುಗಳ ಮನೆಯಲ್ಲಿ ಇದೇ ವಿಷಯ ಹೊರಟಿತ್ತೆಂದು ತೋರುತ್ತದೆ ಕೇದಾರಬಾಬುಗಳಿಗೆ ಹೊಸದಾಗಿ ಬಾಯಸ್ಕೋಪಿನ ನಾದ ಹತ್ತಿತ್ತು ಚಾ ಆದಬಳಿಕ ಅವೊತ್ತೂ ಹೋಗುವವರು—ಕೆಳಗೆ ಸುರೇಶನ ಬಂಡಿ ನಿಂತಿತ್ತು ಅದೇ ಹೊತ್ತಿಗೆ ಶನಿ ಬಾಗಿಲಲ್ಲಿ ಬಂದು ನಿಂತ. ಮಹಿಮ ! ಎಲ್ಲರ ಮುಖದ ಬಣ್ಣವೇ ಬದಲಾಯಿತು

ವಿರಸಮುಖದಿಂದ ಪೊಳ್ಳನೆ ನಕ್ಕು ಕೇದಾರಬಾಬು ಸ್ವಾಗತಿಸಿದರು: " ಬಾ ಮಹಿಮ ಎಲ್ಲ ನೆಟ್ಟಗೇ ? "

ಮಹಿಮ ಒಳಗೆ ಬಂದು ಕುಳಿತ ಊರಿಂದ ಬರಲು ತಡವೇಕಾಯಿತೆಂದುದಕ್ಕೆ " ವಿಶೇಷವಿತ್ತು " ಎಂದಿಷ್ಟೇ ಹೇಳಿದ ಸುರೇಶ ಪತ್ರಿಕೆ ಓದತೊಡಗಿದ. ಅಚಲೆ ಕಸೂತಿ ಕೆಲಸ ತೆಗೆದುಕೊಂಡು ಕುಳಿತಳು. ಮಾತುಕತೆಗೆ ಕೇದಾರಬಾಬು ಒಬ್ಬರೇ

ಅಚಲೆ ಸರಕ್ಕನೆದ್ದು ಹೋಗಿ ಬಂದು ಕುಳಿತಳು ಮರುಕ್ಷಣದಲ್ಲಿ ಬೀಸಣಿಕೆ ಬೀಸತೊಡಗಿದಳು ಅಕಸ್ಮಾತ್ ಗಾಳಿ ಸೋಕಿ ಕೇದಾರಬಾಬು ಹರುಷಗೊಂಡರು " ಇಷ್ಟು ಹೊತ್ತಿನ ಮೇಲಾದರೂ ಆಳಿಗೆ ದಯ ಬಂತಲ್ಲ " ಎಂದರು

ಸುರೇಶ ತೀಕ್ಷ್ಣ ವಕ್ರದೃಷ್ಟಿಯಿಂದ ನೋಡಿದ ಮಹಿಮನ ಹಣೆಯ ಮೇಲೆ ಬೆವರ ಹನಿ ಮೂಡಿದ್ದವು ಅಚಲೆ ಚಟ್ಟನೆದ್ದು ಹೋದುದೇಕೆ, ಬೀಸಣಿಕೆ ಬೀಸತೊಡಗಿದ್ದೇಕೆ ಎಲ್ಲ ಅವನಿಗೆ ತಟ್ಟನೆ ಹೊಳೆಯಿತು ಆ

ಗಾಳಿಯಿಂದ ಅವನ ಮೈ ಉರಿಯಿತು ಪಕ್ಕನೆ ಗಡಿಯಾಳ ತೆಗೆದು ನೋಡಿ, "ಐದಾಗಿ ಹೋಯಿತು ಕೇದಾರಬಾಬೂ'' ಎಂದ

ಅವರು ಮಾತು ಮುಗಿಸಿ ಚಾ ತರಲು ಕೂಗಿದರು ಅದು ಬಂತು. ಕಸೂತಿ ಕೆಲಸ ಬಿಟ್ಟು ಅಚಲೆ ಎರಡು ಬಟ್ಟಲು ಚಾ ಸಿದ್ಧಗೊಳಿಸಿ, ಸುರೇಶನ ಮುಂದೆ ತಂದೆಯ ಮುಂದೆ ಸರಿಸಿದಳು "ನೀ ಕುಡಿಯುವುದಿಲ್ಲ ವೇನವ್ವಾ?" ಎಂದು ಕೇದಾರಬಾಬು ಕೇಳಿದರು

"ಇಲ್ಲಪ್ಪ, ಬಲು ಉಮರು"

ಬಾಬುಗಳ ದೃಷ್ಟಿ ಅಕಸ್ಮಾತ್ ಮಹಿಮನ ಕಡೆಗೆ ಹೋಗಲು, "ಇದೇನು, ಮಹಿಮನಿಗೆ ಕೊಡಲೇ ಇಲ್ಲ! ನೀ ಚಾ ತೆಗೆದುಕೊಳ್ಳುವುದಿಲ್ಲವೇ ಮಹಿಮ?" ಎಂದರು

ಅವನೇನು ಉತ್ತರ ಕೊಡುತ್ತಿದ್ದನೋ ಅಚಲೆ ಅವನ ಕಡೆ ತಿರುಗಿ ಸ್ವಾಭಾವಿಕ ಮೃದುಕಂಠದಿಂದ ನುಡಿದಳು "ಬೇಡ, ಇಂತಹ ಸೆಕೆಯೊಳಗೆ ಕುಡಿಯಬೇಡ ಈ ವೇಳೆಯಲ್ಲಿ ನಿನಗೆ ತಡೆಯುವುದಿಲ್ಲ"

ಎದೆಯ ಮೇಲಿನ ಬೆಟ್ಟವನ್ನು ಮಾಟದಿಂದ ಉರುಳಿಸಿಬಿಟ್ಟಂತಾಯಿತು ಮಹಿಮನಿಗೆ ಅವನ ಬಾಯಿಂದ ಮಾತು ಹೊರಡಲಿಲ್ಲ ಅವ್ಯಕ್ತ ವಿಸ್ಮಯದಿಂದ ಎವೆಯಿಕ್ಕದೆ ನೋಡುತ್ತಲಿದ್ದ ಅಚಲೆ "ತಾಳು, ಲಾಯಮ್ ಜೂಸ್‌ನಿಂದ ಪಾನಕಮಾಡಿ ತರುತ್ತೇನೆ" ಎಂದು ಹೊರಟು ಹೋದಳು ಸುರೇಶ ಮುಖ ಬೇರೆಕಡೆ ತಿರುಗಿಸಿಕೊಂಡು ಚಾ ಕುಡಿಯುತ್ತಲಿದ್ದ- ಕೆಟ್ಟ ಕಹಿಜಾತು

ಕೇದಾರಬಾಬು ಚಾಪಾನ ತೀರಿಸಿ ಉಡುಪು ಧರಿಸಿ ಬಂದು ನೋಡಿದರು ಅಚಲೆ ಮತ್ತೆ ಕಸೂತಿ ತೆಗೆದುಕೊಂಡು ಕುಳಿತಿದ್ದಳು. "ಇನ್ನೂ ಕಸೂತಿಹಾಕುತ್ತಿದ್ದೀಯಲ್ಲ, ಅಣಿಯಾಗಬಾರದೆ?" ಎಂದರು.

ಅಚಲೆ ಶ್ರಾಂತಳಂತೆ ಉತ್ತರವಿತ್ತಳು "ನಾ ಇವೊತ್ತೊಲ್ಲೆ. ನೀವು ಹೋಗಿರಿ"

"ನೀ ಒಲ್ಲೆ? ಇದೇನು?"

"ನನಗೇಕೋ ಸೊಗಸೆನಿಸಲೊಲ್ಲದು

"ನಡೆಯಿರಿ ಕೇದಾರಬಾಬು, ನಾವಿಬ್ಬರೇ ಹೋಗುವ ಅವಳಿಗೆ ಮೈಯಲ್ಲಿ ಚೆನ್ನಾಗಿಲ್ಲವಂತೆ, ಏಕೆ ಒತ್ತಾಯ" ಎಂದ ಸುರೇಶ

ಮಾತಿನ ಒಳಮುನಿಸನ್ನು ಕೇದಾರಬಾಬು ಅರಿತರು "ಏನು, ಜಡ್ಡು?" ಎಂದು ಮಗಳನ್ನು ಕೇಳಿದರು

"ಜಡ್ಡೇನಿಲ್ಲ"

ಸುರೇಶ ಮಹಿಮನ ಕಡೆ ಬೆನ್ನು ಮಾಡಿ ನಿಂತಿದ್ದ ಅವನ ಮುಖಭಾವ ಕಾಣಲಿಲ್ಲ "ಬರ್ರಿ ಕೇದಾರಬಾಬು, ಅವಳಿಗೆ ಮನೆಯಲ್ಲಿರುವುದು ಅಗತ್ಯವಿದ್ದೀತು ಏಕೆ ಪೀಡಿಸುವುದು?" ಎಂದ

ಕೇದಾರಬಾಬು ಕಠೋರ ಸ್ವರದಿಂದ, "ನಿನಗೆ ಮನೆಯಲ್ಲಿ ಕೆಲಸವಿದೆಯೆ?" ಎಂದರು

"ಇಲ್ಲ"

ಕೇದಾರಬಾಬು ಗದರಿಸಿದರು "ನಡೆ ಹಾಗಾದರೆ ಹೇಳಿದಷ್ಟು ಕೇಳುವುದಿಲ್ಲವೆ?"

ಅಚಲೆಯ ಕೈಯೊಳಗಿನ ಬಟ್ಟೆ ಜಗುಳಿ ಬಿತ್ತು ಆಕೆ ತಬ್ಬಿಬ್ಬಾಗಿ ಕಣ್ಣು ಹಿಗ್ಗಿಸಿ ತಂದೆಯ ಕಡೆಗೊಮ್ಮೆ ಸುರೇಶನ ಕಡೆಗೊಮ್ಮೆ ನೋಡಿ, ಸರಕ್ಕನೆ ತಿರುಗಿ ಭರಭರನೆ ಹೊರಟಳು ಸುರೇಶ ಮೋರೆಗಂಟಿಕ್ಕಿ ನುಡಿದ: "ಎಲ್ಲದಕ್ಕೂ ಜುಲುಮೆ ನಿಮ್ಮದು ಆದರೆ ನಾನಿನ್ನು ನಿಂದಿರಲಾರೆ ಅಪ್ಪಣೆ ಕೊಡಿರಿ"

ಕೇದಾರಬಾಬು ತಮ್ಮ ಅಸಭ್ಯ ವರ್ತನೆಗಾಗಿ ಒಳಗೊಳಗೆ ನಾಚಿಕೊಂಡರು ಸುರೇಶನ ಮಾತಿಗೆ ರೇಗಿದರು ಆದರೆ ಆ ಸಿಟ್ಟು ಎರಗಿತು ಮಹಿಮನ ಮೇಲೆ! ಅವನು ಅತ್ಯಂತ ವ್ಯಥಿತನಾಗಿ ಕ್ಷುಬ್ಧನಾಗಿ ಏಳುವುದರಲ್ಲಿದ್ದ "ಏನಾದರೂ ಕೆಲಸವಿತ್ತೆ ಮಹಿಮ?" ಎಂದು ಕೇದಾರಬಾಬುಗಳು ಕೇಳಿದರು

ಮಹಿಮ ಸಾವರಿಸಿಕೊಂಡು ಎದ್ದು ನಿಂತು "ಇಲ್ಲ" ಎಂದ

ಕೇದಾರಬಾಬು ಹೊರಹೊರಡುತ್ತ, "ಹಾಗಾದರೆ ನಾವಿಂದು ಸ್ವಲ್ಪ ಗಡಿಬಿಡಿಯಲ್ಲಿದ್ದೇವೆ ಮತ್ತೊಂದು ದಿನ ಬಾ" ಎಂದರು

"ಹಾಗೇ ಆಗಲಿ. ಆದರೆ ಬರುವುದು ವಿಶೇಷ ಅಗತ್ಯವುಂಟೋ?"

"ನನಗೇನು ಅಗತ್ಯವಿಲ್ಲ ನಿನಗೆ ಬೇಕಾದರೆ ಬಾ, ಒಂದೆರಡು ಮಾತು ಆಡುವುದಿದೆ."

ಮೂವರೂ ಹೊರಬಿದ್ದರು. ಮಹಿಮನಿರುವುದನ್ನು ಗಮನಿಸದೆ

ಸುರೇಶ ಕೇದಾರರೊಂದಿಗೆ ಬಂಡಿ ಏರಿದ ಕೋಚವ್ಯಾನ್ ಬಂಡಿ ಬಿಟ್ಟಿ.

ಮಹಿಮ ತುಸು ಮುಂದುವರಿದಿದ್ದ, ಹಿಂದಿನಿಂದ ಯಾರೋ ಕೂಗಿದರು, ತಿರುಗಿನಿಂತ ಕೇದಾರಬಾಬುಗಳ ಬೇಹಾರ ತೇಕುತ್ತ ತೇಕುತ್ತ ಓಡಿ ಬಂದು ತುಂಡು ಕಾಗದ ಕೊಟ್ಟ ಪೆನ್ಸಿಲಿನಿಂದ ಬರೆದಿತ್ತು— ' ಅಚಲಾ '' " ಸ್ವಲ್ಪ ಕರೆಯುತ್ತಾರೆ " ಎಂದು ಬೇಹಾರ ಹೇಳಿದ • ಮಹಿಮ ತಿರುಗಿದ. ಪಾವಟಿಗೆಯ ಮೂಲದಲ್ಲಿಯೆ ಅಚಲೆ ನಿಂತಿದ್ದಳು ಕೆಂಪಾದ ಕಣ್ಣುಗಳ ಹಸಿ ಇನ್ನೂ ಆರಿರಲಿಲ್ಲ ಮಹಿಮ ಬಳಿಸಾರುತ್ತಲೆ, " ನಿನ್ನ ಕಟುಕ ಮಿತ್ರನ ಪಾಲಾಗಲೆಂದೇ ನನ್ನನ್ನು ಬಿಟ್ಟುಹೊರಟೆಯಾ ? ನಿನಗೆ ದ್ರೋಹ ಬಗೆಯುವವನ ಕೈಯಲ್ಲಿ ನನ್ನನ್ನೇಕೆ ಒಪ್ಪಿಸುವೆ ! " ಎಂದು ಝುರಝುರ ಅತ್ತುಬಿಟ್ಟಳು

ಮಹಿಮ ಸ್ತಬ್ಧನಾಗಿ ನಿಂತ ಅಚಲೆ ಕಣ್ಣೊರಸಿಕೊಂಡು, "ನಾಚಿಕೆ ಪಡಲು ನನಗಿನ್ನು ಅವಕಾಶವಿಲ್ಲ, ಎಲ್ಲಿ, ನಿನ್ನ ಬಲಗೈ, " ಎಂದು ಅವನ ಬಲಗೈ ತೆಗೆದುಕೊಂಡು ತನ್ನ ಹೊನ್ನುಂಗುರ ಅವನ ಬೆರಳಿಗಿಟ್ಟಳು " ನನಗೇನೂ ಹೆಚ್ಚಿಗೆ ತಿಳಿಯದು ನೀ ಏನು ಮಾಡುವೆಯೊ ಮಾಡು " ಎಂದು ಮೊಂದೆಯೂರಿ ನಮಸ್ಕಾರ ಮಾಡಿ ಮೆಲ್ಲಮೆಲ್ಲನೆ ಕೋಣೆಯೊಳಗೆ ಹೊರಟು ಹೋದಳು ಮಹಿಮ ಕೆಲಹೊತ್ತು ಸುಮ್ಮನೆ ನಿಂತಿದ್ದು ಮೆಲ್ಲ ಮೆಲ್ಲನೆ ಮನೆಯಿಂದ ಹೊರಬಿದ್ದ

೧೧

ಸಂಜೆಯ ಹೊತ್ತಿನಲ್ಲಿ ತಲೆತಗ್ಗಿಸಿಕೊಂಡು ಸಾವಕಾಶವಾಗಿ ಮನೆಯ ಹಾದಿ ಹಿಡಿದಿದ್ದ ಮಹಿಮ ಆಗವನ ಮುಖ ನೋಡಿದವರಿಗಾರಿಗೂ ಅವನ ಸಂಕಟಬಡುತ್ತಿದ್ದ ಪ್ರಾಣ ಹೊರಬೀಳಲು ಹೃದಯದ ಗೋಡೆಗೆ ಕನ್ನ ಕೊರೆಯುತ್ತಿತ್ತೆಂದು ಹೇಳುವುದು ಸಾಧ್ಯವಲ್ಲ ಸುರೇಶ ಇಲ್ಲಿ ಹೇಗೆ ಬಂದ, ಸಂಬಂಧ ಇಷ್ಟು ಹೇಗೆ ಬೆಳೆಯಿತು ಎಂಬುದು ತಿಳಿಯದಿದ್ದರೂ ಮುಖ್ಯ ವಿಷಯ ತಿಳಿಯದಿರಲಿಲ್ಲ ದುಷ್ಟಿನ ಗಂಧ ಎಲ್ಲಿ ಬಡಿಯುವುದೋ ಅಲ್ಲಿಂದವರು ಏನು ಮಾಡಿದರೂ ಮುಖ ತಿರುಗಿಸರು ಎಂಬುದು ಅವನಿಗೆ ನಿಸ್ಸಂದೇಹ ಅವನು ಸುರೇಶನನ್ನು ಚಿಕ್ಕಂದಿನಿಂದ ನಾನಾ ರೂಪಗಳಲ್ಲಿ ನೋಡುತ್ತ ಬಂದಿದ್ದಾನೆ ತನಗೆ ಪ್ರಿಯವಾದುವನ್ನು ಪಡೆಯಲು ಅವನು ಏನು ಕೊಟ್ಟಾನು ಏನು ಕೊಡಲಿಕ್ಕಿಲ್ಲ ಎಂಬುದನ್ನು ಕಲ್ಪಿಸಿಕೊಳ್ಳುವುದು

ಕಠಿನವಲ್ಲ ದುಡ್ಡೆಂದರೆ ಅವನಿಗೆ ಕಃಪದಾರ್ಥ ಹಿಂದಕ್ಕೆ ಮಹಿಮನನ್ನು ಗಂಗಾನದಿಯಲ್ಲಿ ಬದುಕಿಸುವುದಕ್ಕಾಗಿ ಅವನು ತನ್ನ ಪ್ರಾಣವನ್ನೂ ಲೆಕ್ಕಿಸಲಿಲ್ಲ ಅದೇ ಅವನು ಒಬ್ಬಳ ಮೋಹದಲ್ಲಿ ಮಹಿಮನನ್ನು ಕಣ್ಣೆತ್ತಿ ನೋಡದಿದ್ದರೆ, ಅವನ ಮೇಲೆ ಹೇಗೆ ದೋಷ ಹೊರಿಸುವುದು ? ಇದೊಂದು ಮರ್ಮಾಂತಿಕ ದುರ್ಘಟನೆ ಎಂದು ಭಾವಿಸುವುದರ ಹೊರತು ಮಹಿಮ ಯಾರಿಗೂ ದೋಷ ಕೊಡಲಿಲ್ಲ ಒಮ್ಮಿಂದೊಮ್ಮೆಲೆ ಜಾಗೃತವಾದ ಪ್ರಚಂಡ ವಿರೋಧ ಶಕ್ತಿಯನ್ನು ನಿವಾರಿಸಿ ಅಚಲೆ ತನ್ನ ಕಡೆ ಬರುವಳೆಂದೂ ಅವನು ನಂಬಲಿಲ್ಲ ಅವಳ ಕೊನೆಯ ಮಾತು, ಕೊನೆಯ ನಡತೆ ಅವನನ್ನು ಕ್ಷಣಮಾತ್ರ ಚಂಚಲಗೊಳಿಸಿತೇ ವಿನಾ ಸತ್ಯದ ಭರವಸೆ ಕೊಡಲಿಲ್ಲ ಬಾರಿಬಾರಿಗೆ ಉಂಗುರ ನೋಡಿಕೊಂಡ ಅದು ಸಂತೈಸಲಿಲ್ಲ ಈಗ ಕೊನೆಯ ನಿರ್ಣಯ ಅಗತ್ಯ ಇನ್ನೊಂದು ಗಳಿಗೆಯೂ ತನ್ನನ್ನು ಮೋಸಗೊಳಿಸಿಕೊಳ್ಳಲಾಗದು ಏನಾಗುವುದು ಆಗಲಿ, ಕೊನೆಯ ನಿಷ್ಕರ್ಷೆ ಮಾಡಲೇಬೇಕು ಎಂದು ಸಂಕಲ್ಪಿಸಿಕೊಂಡೇ ಮಹಿಮ ತನ್ನ ದೀನ ದರಿದ್ರ ವಿದ್ಯಾರ್ಥಿನಿಲಯಕ್ಕೆ ಬಂದ

ಮರುದಿನ ಅಪರಾಹ್ನದಲ್ಲಿ ಕೇದಾರರ ಮನೆಗೆ ಮಹಿಮ ಹೋದ ಅವರು ಹೊರಗೆ ಹೋಗಿದ್ದರು ಅದರ ಮರುದಿನವೂ ಬೆಟ್ಟಿಯಾಗಲಿಲ್ಲ. ಎಲ್ಲರೂ ಬಾಯಸ್ಕೋಪಿಗೆ ಹೋಗಿದ್ದರೆಂದು ಆಳು ತಿಳಿಸಿದ ಅಪಮಾನ-ಅಭಿಮಾನ ಎಷ್ಟೇ ದೊಡ್ಡದಿರಲಿ, ಅವನಂತಹ ಪ್ರಕೃತಿಯವರಿಗೆ ಸತತ ಎರಡುದಿನ ಎಡತಾಕಿದುದೇ ಸಾಕಾಗುತಿತ್ತು ಆದರೆ ಕೈಯೊಳಗಿನ ಉಂಗುರ ಅವನನ್ನು ಮರುದಿನವೂ ಅಟ್ಟಿತು ಬಾಬುಗಳು ಮನೆಯೊಳಗಿದ್ದರು ಮೇಲಿನ ಕೋಣೆಯಲ್ಲಿ ಚಾ ನಡೆದಿತ್ತು ಅವರು ಗಂಭೀರ ಸ್ವರದಲ್ಲಿ “ಬಾ ಮಹಿಮ,” ಎಂದರು

ದೂರದ ತೆರೆದ ಕಿಡಿಕಿಯ ಹತ್ತಿರ ಸೋಫಾದ ಮೇಲೆ ಅಕ್ಕಪಕ್ಕದಲ್ಲಿ ಕುಳಿತಿದ್ದರು, ಅಚಲೆ ಮತ್ತು ಸುರೇಶ ಅಚಲೆಯ ತೊಡೆಯ ಮೇಲೆ ದೊಡ್ಡದೊಂದು ಚಿತ್ರದ ಪುಸ್ತಕ. ಇಬ್ಬರೂ ನೋಡುತ್ತಿದ್ದರು ಸುರೇಶ ಕಿಂಚಿತ್ ಕಣ್ಣೆತ್ತಿ ಪುನಃ ಚಿತ್ರ ನೋಡತೊಡಗಿದ ಅಚಲೆ ಕಣ್ಣೆತ್ತಿಯೂ ನೋಡಲಿಲ್ಲ ತಂದೆಯ ದನಿಯಾಗಲಿ ಆಗಂತುಕನ ಕಾಲ ಸದ್ದಾಗಲಿ ಅವಳಿಗೆ ಕೇಳಿಸಿರಲಿಕ್ಕೂ ಇಲ್ಲ

ಮಹಿಮ ಹೋಗಿ ಒಂದು ಕುರ್ಚಿ ಎಳೆದುಕೊಂಡು ಕುಳಿತ. ಕೇದಾರಬಾಬು ಎಷ್ಟೋ ಹೊತ್ತು ಮಾತನಾಡಲಿಲ್ಲ ಗುಟುಕು ಗುಟುಕು ಚಾ ಕುಡಿಯುತ್ತಿದ್ದರು ಬಟ್ಟಲು ಬರಿದಾದ ಬಳಿಕ ಸುಮ್ಮನೆ ಕುಳಿತಿರುವುದು ಅಸಹ್ಯವಾಗಲು, "ಈಗೇನು ಮಾಡುತ್ತೀ? ನಿನ್ನ ಪರೀಕ್ಷೆಯ ಪರಿಣಾಮ ತಿಳಿಯಲು ತಿಂಗಳೊಪ್ಪತ್ತು ಬೇಕು ಕಾಣುತ್ತದೆ?" ಎಂದರು.

"ಹೂಂ"

"ಪಾಸಾದೆ ಎಂದು ತಿಳಿ– ಪಾಸಾಗಿಯೇ ಆಗುವೆ, ಸಂದೇಹವಿಲ್ಲ— ಮುಂದೆ ಕೆಲ ದಿನ ಪ್ರಾಕ್ಟಿಸ್ ಮಾಡಿ ಕೈಯೊಳಗೆ ಸ್ವಲ್ಪ ದುಡ್ಡು ಆಗುವ ತನಕ ಬೇರೆಕಡೆ ಮನಸು ಹಾಕಲಿಕ್ಕಾಗುವುದಿಲ್ಲ ಏಕೆ ಸುರೇಶಬಾಬೂ– ಮಹಿಮನ ಮನೆತನದ ಸ್ಥಿತಿ ಚೆನ್ನಾಗಿಲ್ಲ ಎಂದು ಕೇಳಿದ್ದೇನೆ"

ಸುರೇಶ ಮಾತನಾಡಲಿಲ್ಲ ಮಹಿಮ ನಸುನಕ್ಕು, "ಪ್ರಾಕ್ಟಿಸ್ ಮಾಡಿದರೂ ಕೈಯೊಳಗೆ ದುಡ್ಡಾದೀತೆಂದು ಹೇಳಬರುವುದಿಲ್ಲ" ಎಂದ.

"ಇಲ್ಲ, ಹಾಗೇನಿಲ್ಲ ಆದರೆ ದೇವರ ದಯೆಯಿರಲು ಪ್ರಯತ್ನಕ್ಕೆ ಯಾವುದೂ ಅಸಾಧ್ಯವಲ್ಲ ನಮ್ಮ ಶಾಸ್ತ್ರಕಾರರು 'ಪುರುಷಸಿಂಹ' ಎಂದು ಹೇಳಿದ್ದಾರೆ— ನೀನು ಆ ಪುರುಷಸಿಂಹ ಆಗಬೇಕು ಬೇರೆ ಕಡೆ ಮನಸು ಹಾಕಕೂಡದು— ಉನ್ನತಿ, ಉನ್ನತಿ ಆ ಮೇಲೆ ಸಂಸಾರ. ಇಲ್ಲದೆ ಹೋದರೆ ಅದು ಮಹಾಪಾಪ" ಎಂದು ಕೇದಾರಬಾಬು ಸುರೇಶನ ಕಡೆ ನೋಡಿ, "ಇದಕ್ಕೆ ನೀನೇನೆನ್ನುವೆ ಸುರೇಶ' ಅಂಥವರು ಹೊಟ್ಟೆ ತುಂಬಿಕೊಳ್ಳಲಾರರು, ಮಕ್ಕಳನ್ನು ಓದಿಸಲಾರರು ಹೀಗಾಗಿಯೇ ಹಿಂದುಗಳು ಅಧೋಗತಿಗಿಳಿದದ್ದು ನಾವು—ಬ್ರಾಹ್ಮಸಮಾಜಿಗಳಾದರೂ ಒಳ್ಳೆಯ ಮಾದರಿಯಾಗದಿದ್ದರೆ, ಸತ್ಯ ಜಗತ್ತಿನಲ್ಲಿ ಮುಖ ತೋರಿಸದಂತಾಗುವುದು ಹೌದೆನ್ನುವೆಯೋ ಅಲ್ಲೆನ್ನುವೆಯೋ, ಏನು ಸುರೇಶಬಾಬೂ?"

ಸುರೇಶ ಈಗಲೂ ಮೌನವಾಗಿದ್ದ ಮಹಿಮನಿಗೆ ಒಳಗೊಳಗೆ ಸಹಿಸದಂತಾಯಿತು "ನಿಮ್ಮ ಉಪದೇಶ ನಾನು ಸ್ಮರಿಸುವೆ ಆದರೆ ಇದನ್ನು ಹೇಳಲಿಕ್ಕೇ ನನಗೆ ಬರಹೇಳಿದ್ದಿರೇನು?" ಎಂದ

"ಇಲ್ಲ, ಇಷ್ಟೇ ಅಲ್ಲ ಇನ್ನೊಂದು ಮಾತಿದೆ," ಎಂದು ಕೇದಾರಬಾಬು ಸೋಫಾದ ಕಡೆ ನೋಡಿದರು ಸುರೇಶ ಎದ್ದುನಿಂತು "ನಾವು ಹಾಗಾದರೆ ಆ ಕೋಣೆಯೊಳಗೆ ಕೂಡ್ರುತ್ತೇವೆ" ಎಂದು ಅಚಲೆಯ

ತೊಡೆಯ ಮೇಲಿನ ಪುಸ್ತಕ ಎತ್ತಿಕೊಂಡ ಆದರವನ ಈ ಸನ್ನೆ ನಿಷ್ಫಲ ವಾಯಿತು ಆವಳು ಏಳುವ ಹವಣಿಕೆ ತೋರಲಿಲ್ಲ ಕೇದಾರಬಾಬು “ನೀವಿಷ್ಟು ಆ ಕೋಣೆಯೊಳಗೆ ಕುಳಿತುಕೊಳ್ಳುವಿರಾ‌ಅಮ್ಮ ಮಹಿಮ ನೊಡನೆ ಒಂದೆರಡು ಮಾತಾಡುವುದಿದೆ,” ಎಂದರು

ಅಚಲೆ ತಂದೆಯ ಕಡೆ ನೋಡಿ, “ನಾ ಇಲ್ಲಿಯೇ ಇರುತ್ತೇನೆ,” ಎಂದಳು

“ಸರಿ, ನಾನೇ ಹೋಗುವೆ,” ಎಂದು ಸುರೇಶ ಸಿಟ್ಟುಸಿಟ್ಟಲೆ ಪುಸ್ತಕ ವನ್ನು ಅಚಲೆಯ ತೊಡೆಯ ಮೇಲೆ ಎಸೆದು ಧಡಧಡ ಹೊರಟುಹೋದ

ಮಗಳ ಉದ್ಧಟತನ ಕೇದಾರಬಾಬುಗಳ ಮನಸಿಗೆ ಬರಲಿಲ್ಲ. ಆದರೂ ಅವರಾ ಬಗ್ಗೆ ಹಟ ಹಿಡಿಯಲಿಲ್ಲ ಕೆಲಹೊತ್ತು ಬಿಮ್ಮನೆ ಕುಳಿತಿದ್ದು, “ಮಹಿಮ, ನಿನ್ನ ಬಗ್ಗೆ ನಾವು ನಿರಾಶರಾಗಿದ್ದೇವೆಂದು ಭಾವಿಸ ಬೇಡ ನಿನ್ನಲ್ಲಿ ತುಂಬ ವಿಶ್ವಾಸವಿದೆ ಅಂತೆಯೇ ಗೆಳೆಯನಂತೆ ಉಪದೇಶಿ ಸಿದ್ದು ಈಗ ನೀನು ಯಾವುದೇ ಹೊಣೆ ಹೊತ್ತು ಅಕರ್ಮಣ್ಯನಾಗಿದ್ದರೆ ನೀಗಲಾರದು ಮೊದಲು ನಿನ್ನ ಉನ್ನತಿ ಮಾಡಿಕೋ, ಸಮರ್ಥನಾಗು, ಮುಂದೆ ಹೊಣೆಹೊರಲು ಬೇಕಾದಷ್ಟು ಸಮಯವಿದೆ” ಎಂದರು

ಮಹಿಮ ಅಚಲೆಯ ಕಡೆ ನೋಡಿದ ಅವಳು ತಕ್ಷಣ ಮುಖ ತಗ್ಗಿಸಿದಳು ಆಗ ಬಾಬುಗಳ ಕಡೆ ನೋಡಿ ಎಂದ “ನಿಮ್ಮ ಅಪ್ಪಣೆ ಶಿರೋಧಾರ್ಯ, ಆದರೆ ನಿಮ್ಮ ಮಗಳದೂ ಇದೇ ಇಚ್ಛೆಯೋ?”

“ಖಂಡಿತವಾಗಿ! ಖಂಡಿತವಾಗಿ!” ಎಂದು ತುಸ ತಡೆದು ಕೇದಾರ ಬಾಬು ಮತ್ತೆಂದರು “ಕೊನೆಗೆ ಇಷ್ಟಂತೂ ಖಂಡಿತ— ತಿಳಿದೂ ತಿಳಿದೂ ನಿನಗೆ ನಾನು ಮಗಳನ್ನು ಕೊಡಲಾರೆ”

ಶಾಂತಸ್ವರದಿಂದ ಮಹಿಮ ಕೇಳಿದ “ಇಂಥ ಪರಿಸ್ಥಿತಿಯಲ್ಲಿ ಒಬ್ಬರಿಗಾಗಿ ಒಬ್ಬರು ಕಾದಿರುವ ರೂಢಿ ಇಂಗ್ಲಿಷರಲ್ಲಿ ಉಂಟು ನಿಮ್ಮ ಅಭಿಪ್ರಾಯವೂ ಅದೇ ಎಂದು ತಿಳಿಯಲೋ?”

ಕೇದಾರಬಾಬು ಸಿಟ್ಟುಬೆಂಕಿಯಾದರು “ನೋಡು ಮಹಿಮ, ವಚನಕೊಡಲಿಕ್ಕೆಂದು ನಿನ್ನನ್ನು ಕರೆದಿಲ್ಲ ನನ್ನೊಡನೆ ನೀನು ಮಾಡಿದ ವ್ಯವಹಾರಕ್ಕೆ ಮತ್ತೊಬ್ಬ ತಂದೆಯಾಗಿದ್ದರೆ— ಕುರುಕ್ಷೇತ್ರಕಾಂಡವೇ ಆಗುತ್ತಿತ್ತು ಆದರೆ ನಾನು ಶಾಂತಿಪ್ರಿಯ ಮನುಷ್ಯ ಶಕ್ಯವಿದ್ದಷ್ಟು

ಪವಿಮಾತಿನಿಂದ ನನ್ನ ಮನೋಗತ ತಿಳಿಸಿದ್ದೇನೆ. ಇಷ್ಟರಮೇಲೂ ನೀನು ಪ್ರತೀಕ್ಷಿಸಿಕೊಂಡಿರುವೆಯೋ ಇಲ್ಲವೊ, ಸಾಹೇಬರ ರೂಢಿ ಏನಿದೆಯೋ ಏನಿಲ್ಲವೋ ಅದರ ಪಂಚೇತಿ ನನಗೆ ಬೇಕಾಗಿಲ್ಲ ಅಲ್ಲದೆ ನಾವು ಸಾಹೇಬರಲ್ಲ, ಬಂಗಾಲಿ ಹುಡುಗಿ ದೊಡ್ಡವಳಾದಳೆಂದರೆ ತಂದೆಮಕ್ಕಳಿಗಿಬ್ಬರಿಗೂ ನಿದ್ದೆ ಹತ್ತುವುದಿಲ್ಲ, ಅನ್ನ ರುಚಿಸುವುದಿಲ್ಲ, ಎಂಬುದು ನಿನಗೇನು ತಿಳಿಯದ್ದೇ?" ಎಂದರು

ಮಹಿಮನ ಮುಖ ಕ್ಷಣ ಆರಕ್ತವಾಯಿತು ಸಾವರಿಸಿಕೊಂಡು ಗಂಭೀರವಾಗಿ ನುಡಿದ "ನಾ ಮಾಡಿದ್ದೇನು, ನೀವಲ್ಲದೆ ಮತ್ತೊಬ್ಬರಾಗಿದ್ದರೆ ಏಕೆ ಮಹಾಕಾಂಡವಾಗುತ್ತಿತ್ತು ಎಂದೇನೂ ಕೇಳುವುದಿಲ್ಲ. ನಿಮ್ಮ ಮಗಳದೂ ಇದೇ ಅಭಿಪ್ರಾಯವೋ ಎಂದು ಅವಳಿಂದಲೇ ತಿಳಿಯ ಬಯಸುತ್ತೇನೆ," ಎಂದು ಎದ್ದುಹೋಗಿ ಅಚಲೆಯ ಮುಂದೆ ನಿಂತು, "ನಿನ್ನದೂ ಇದೇ ಅಭಿಪ್ರಾಯವೊ?" ಎಂದು ಕೇಳಿದ.

ಅಚಲೆ ಮೋರೆಯೆತ್ತಲಿಲ್ಲ, ಮಾತನಾಡಲಿಲ್ಲ ಉಕ್ಕಿ ಬರುವ ಬಾಷ್ಪಗಳನ್ನು ಪ್ರಯತ್ನದಿಂದ ತಡೆದು ಮಹಿಮ ಮತ್ತೆ ಕೇಳಿದ "ನಿನ್ನ ಅಂತರಂಗವನ್ನು ಏಕಾಂತದಲ್ಲಿ ತಿಳಿಯುವುದಕ್ಕಾಗಲಿ, ಕೇಳದೆ ತಿಳಿಯುವುದಕ್ಕಾಗಲಿ ನನಗೆ ಅವಕಾಶ ಸಿಕ್ಕಲಿಲ್ಲ ಕ್ಷಮಿಸು ಮೊನ್ನೆ ಸಂಜೆಯ ಮುಂದೆ ನೀನು ಆವೇಶದಲ್ಲಿ ಮಾಡಿದ ಕೃತಿಯಂತೆ ನಡೆಯಬೇಕೆಂದೂ ನಾನು ವಾದಿಸುವುದಿಲ್ಲ ಈ ಉಂಗುರವನ್ನು ತಿರುಗಿ ಕೊಡಲೋ ಹೇಗೆ ಎಂಬುದನ್ನು ಹೇಳು, ಅಷ್ಟೆ '

ಸುರೇಶ ಬಿರುಗಾಳಿಯಂತೆ ಕೋಣೆಯೊಳಗೆ ಬಂದು, "ನನ್ನನ್ನು ಕ್ಷಮಿಸಿರಿ ಕೇದಾರಬಾಬೂ, ನನಗಿನ್ನು ಕಾದಿರಲು ಸಮಯವಿಲ್ಲ," ಎಂದ.

"ಏಕೆ?"

"ಇಲ್ಲ ಇಲ್ಲ ನನ್ನಿಂದ ಅಕ್ಷಮ್ಯ ಅಪರಾಧವಾಗಿ ಬಿಟ್ಟಿದೆ ನನ್ನ ಅಂತರಂಗ ಮಿತ್ರ ಪ್ಲೇಗುಬಂದು ಸಾಯುತ್ತಲಿದ್ದಾನೆ ನಾ ಮರೆತು ಇಲ್ಲಿ ಹೊತ್ತುಗಳೆಯುತ್ತಲಿದ್ದೇನೆ"

"ಏನು! ಪ್ಲೇಗೆ! ಅಲ್ಲಿಗೆ ಹೋಗಬೇಕೇ ಸುರೇಶಬಾಬೂ?"

"ಅಗತ್ಯವಾಗಿ ಯಾವಾಗಲೋ ಹೋಗಬೇಕಾಗಿತ್ತು"

"ಪ್ಲೇಗಿನ ಸ್ಥಳಕ್ಕೇ! ಅವರು ನಿನಗೆಷ್ಟು ಆತ್ಮೀಯರು?"

"ಆತ್ಮೀಯರಿಗಿಂತ ಹೆಚ್ಚು" ಎಂದು ಸುರೇಶ ಮಹಿಮನ ಕಡೆ ಕಟಾಕ್ಷ ಬೀರಿ, "ಮಹಿಮ, ನಮ್ಮ ನಿಶೀಥನಿಗೆ ನಿನ್ನೆ ರಾತ್ರಿ ಪ್ಲೇಗು ಬಂದಿದೆ. ಬದುಕುವ ಆಶೆಯಿಲ್ಲ. ನೋಡಬರುವೆಯಾ?" ಎಂದ.

"ಯಾವ ನಿಶೀಥ?"

"ಯಾವ ನಿಶೀಥ! ಇಷ್ಟರೊಳಗೇ ಮರೆತೆಯಾ? ಅವನೊಡನೆ ಇಡೀ ಸೆಕೆಂಡ್ ಇಯರ್ ಓದಿದ್ದೀಯಲ್ಲ. ಇಂಥ ಹೊತ್ತಿನಲ್ಲಿ ನೆನಪಾಗಬಾರದೇ?" ಎಂದು ಸುರೇಶ ಕತ್ತು ಹೊರಳಿಸಿ ಅಚಲೆಯ ಕಡೆ ನೋಡಿ ಶ್ಲೇಷಸ್ವರದಲ್ಲಿ ನುಡಿದ. "ನೆನಪಾಗಲೊಲ್ಲದೇನೋ! ಪ್ಲೇಗಲ್ಲವೇ!"

ಈ ಇರಿತವನ್ನು ಮೌನವಾಗಿ ಸಹಿಸಿಕೊಂಡು ಮಹಿಮ ಕೇಳಿದ: "ಭವಾನೀಪುರದಿಂದ ಬರುತ್ತಿದ್ದನಲ್ಲ, ಅವನೇ?"

ಸುರೇಶ ವ್ಯಂಗ್ಯವಾಗಿ ಉತ್ತರವಿತ್ತ "ಹಾಂ ಹಾಂ. ಆದರೆ ಇಷ್ಟೊತ್ತು ನೆನಪಾಗದಿರಲಿಕ್ಕೆ ನಿಶೀಥರೇನು ಮೂರು ನಾಲ್ಕು ಮಂದಿ ಇದ್ದಿಲ್ಲ. ಬರುತ್ತೀಯೇನು?"

"ನಿಶೀಥ ಈಗ ಎಲ್ಲಿರುತ್ತಾನೆ?"

"ಮತ್ತೆಲ್ಲಿ? ತಮ್ಮೂರೊಳಗ, ಭವಾನೀಪುರದೊಳಗೆ. ಈ ಸಮಯದಲ್ಲಿ ಅವನನ್ನು ಕಾಣುವುದು ಉಚಿತವಲ್ಲವೇ? ಡಾಕ್ಟರ, ನಾನಂತೂ ಹೋಗಲೇ ಬೇಕು. ಗೆಳೆತನ ಮರೆತಿಲ್ಲವಾದರೆ ನೀನೂ ಬರಬಲ್ಲೆ. ಕೇದಾರಬಾಬೂ, ನಿಮ್ಮ ಮಾತು ಬಹುಶಃ ಮುಗಿದಿರಬಹುದು. ಕೊನೆಗೆ, ಕೆಲಹೊತ್ತಾದರೂ ಇವನನ್ನು ಬಿಡಬಹುದೆಂದು ಆಶಿಸುತ್ತೇನೆ."

ಈ ಕಟಾಕ್ಷ ಯಾರ ಮೇಲೆಂಬುದು ಬಾಬುಗಳಿಗೆ ಸರಿಯಾಗಿ ತಿಳಿಯಲಿಲ್ಲ. ಒಮ್ಮೆ ಮಹಿಮನನ್ನು ಒಮ್ಮೆ ಮಗಳನ್ನು ನೋಡತೊಡಗಿದರು. ಭಾವೀ ಅಳಿಯ ಮಹಾಶಯನ ಅಭಿಮಾನ ಏತರಿಂದ ಕಲಕುವುದೆಂಬುದು ಅವರಿಗೆ ಈವರೆಗೂ ತಿಳಿದಿರಲಿಲ್ಲ. ಅವರ ಬಾಯಿಂದ ಮಾತು ಹೊರಡಲಿಲ್ಲ. ಮಹಿಮನಿಗೂ ಏನೂ ತೋಚಲಿಲ್ಲ. ನೋಡುನೋಡುತ್ತಿದ್ದಂತೆ ಅಚಲೆಯ ಮುಖ ಕೆಂಪೇರಿತು. ನಿದಾನವಾಗಿ ಎದ್ದು ಬಂದು ಪುಸ್ತಕ ಮೇಜಿನ ಮೇಲಿಟ್ಟು ಎಂದಳು: "ನೀವು ಡಾಕ್ಟರು, ನೀವು ಹೋಗುವುದಗತ್ಯ. ಇವನ ಒಕಾಲತ್ತಿನದು ಏನಗತ್ಯ ಅಲ್ಲಿ?"

ಈ ಅಕಲ್ಪಿತ ಉತ್ತರದಿಂದ ಸುರೇಶ ಅವಾಕ್ಕಾದ "ನಾನಲ್ಲಿ

ಡಾಕ್ತಾರಿ ಮಾಡುವುದಕ್ಕೆ ಹೋಗುವುದಿಲ್ಲ ಗೆಳೆಯನ ಸೇವೆಗೆ ಹೋಗುವೆ. ನನಗೆ ಗೆಳೆತನ ಪ್ರಾಣಕ್ಕಿಂತ ಹೆಚ್ಚು," ಎಂದ

ಅಚಲೆಯ ಓಷ್ಠಾಧರದಲ್ಲಿ ನಿಷ್ಠುರ ಹಾಸ್ಯದ ಆಭಾಸ ಕಾಣಿಸಿಕೊಂಡಿತು "ಎಲ್ಲರೂ ನಿಮ್ಮ ಹಾಗೆ ಇರಬೇಕಲ್ಲ! ಇಷ್ಟೊಂದು ಮಿತ್ರತ್ವ ಬುದ್ಧಿ ಇಲ್ಲದಿದ್ದರೆ ಲಾಂಛನಾಸ್ಪದವೆಂಪೇನೂ ನನಗೆನಿಸುವುದಿಲ್ಲ. ಅದೇನೇ ಇರಲಿ, ಇವನು ಬರಲಾರ," ಎಂದಳು

ಸುರೇಶನ ಮೋರೆ ಕಪ್ಪಿಟ್ಟಿತು ಕೇದಾರಬಾಬು ಅಂಜಿದರು. "ಇದನ್ನೆಲ್ಲ ನೀನೇಕೆ ಹೇಳುವೆ ಅಚಲಾ? ಸುರೇಶನಂಥ-ಸತ್ಯವಾಗಿಯೂ-ನಿಶೀಥನಂಥ—"

ಅಚಲೆ ನಡುವೇ ಮಾತನಾಡಿದಳು "ಇವನಿಗೆ ನಿಶೀಥಬಾಬುಗಳ ಗುರುತು ಕೂಡ ಇಲ್ಲ ಮೇಲಾಗಿ, ಇವರು ಡಾಕ್ಟರು, ಹೋಗಬೇಕು. ಸುಮ್ಮನೆ ಮತ್ತೊಬ್ಬರನ್ನು ಅಪಾಯದಲ್ಲಿ ಎಳೆಯುವುದೇತಕ್ಕೆ?"

ಆಘಾತವಾಯಿತೆಂದರೆ ಸುರೇಶನ ತಲೆಯೇ ತಾಳ ತಪ್ಪುವುದು. ಮೇಜನ್ನು ಗುದ್ದಿ ಬಾಯಿಗೆ ಬಂದುದನ್ನು ಆಡತೊಡಗಿದ "ನಾ ಅಂಜುವವನಲ್ಲ, ನನಗೆ ಪ್ರಾಣಭಯವಿಲ್ಲ— ಈ ಕೃತಘ್ನನನ್ನೇ ಕೇಳು, ಇವನನ್ನು ನಾ ಸತ್ತು ಸತ್ತು ಉಳಿಸಿದೆನೋ ಇಲ್ಲವೊ?"

"ಇವನು ಕೃತಘ್ನನೋ? ಇದ್ದೀತು! ಆದರೆ ಒಂದು ಕಾಲದಲ್ಲಿ ಉಳಿಸಿದವನನ್ನು ಇನ್ನೊಂದು ಕಾಲದಲ್ಲಿ ಕೊಲ್ಲಬಹುದೋ?"

ಕೇದಾರಬಾಬು ಹತಬುದ್ಧರಾದರು "ಸುಮ್ಮನಿರು ಅಚಲಾ, ಹೋಗಲಿ ಬಿಡು ಸುರೇಶ ಇದೇನಿದು ಅಕಾಂಡತಾಂಡ!" ಎಂದರು

ಸುರೇಶ ಕಣ್ಣಿಂದ ಕೆಂಡಕಾರುತ್ತ, "ಪ್ಲೇಗಿನಲ್ಲಿ ನಾ ಹೋಗಬಹುದು, ಇವ ಹೋಗಬಾರದು ಇವನ ಜೀವವೇ ಜೀವ, ನನ್ನದೇನಲ್ಲ! ನೋಡಿದಿರಾ ನೀವೇ!"

ಲಜ್ಜೆಯಿಂದ ಕ್ಷೋಭದಿಂದ ಅಚಲೆಗೆ ಅಳುಬಂದಿತು ರುದ್ಧಸ್ವರದಿಂದ, "ಪ್ರಾಣ ಕೊಡಬಲ್ಲವರಿವರು ಕೊಡಬಹುದು, ನನ್ನದೇನಡ್ಡಿಯಿಲ್ಲ. ಆದರೆ ಎಲ್ಲಿ ತಡೆಯುವ ಅಧಿಕಾರ ನನಗುಂಟೋ ಅಲ್ಲಿ ತಡೆಯದಿರಲಾರೆ; ಇವನನ್ನು ನಾ ಹೋಗಗೊಡುವುದಿಲ್ಲ"ಎಂದು ಅವಳು ಹೋಗಲುಪಕ್ರಮಿಸಿದಳು ಕೇದಾರಬಾಬು ಕೂಗಿಕೊಂಡರು—"ಎಲ್ಲಿ ಹೊರಟೆ ಅಚಲಾ?"

"ಇಲ್ಲಪ್ಪಾ, ದಿನಬೆಳಗಾದರೆ ಇಂಥ ಕ್ಲೇಶ ನಾ ಸಹಿಸಲಾರೆ ಎಂದೂ ಆಗಲಾರದ, ಪ್ರಾಣ ಹೋದರೂ ನಾ ಒಪ್ಪಲಾರದ ವಿಷಯಕ್ಕಾಗಿ ನನ್ನನ್ನು ಹಗಲಿರುಳೂ ಚುಚ್ಚಿ ನೀವು—" ಎನ್ನುತ್ತ ಉಕ್ಕಿಬರುವ ಅಳುವನ್ನು ಹತ್ತಿಟ್ಟುಕೊಳ್ಳುತ್ತ ದ್ರುತಗತಿಯಿಂದ ಹೊರಟುಹೋದಳು

೧೨

ಕಲ ತಿಂಗಳು ಕಳೆದವು ಕೇದಾರಬಾಬು ಒಪ್ಪಿದ್ದಾರೆ ಬರುವ ರವಿವಾರ ಅಚಲೆಯ ಮದುವೆ ಮಹಿಮನೊಡನೆ ಸುರೇಶನ ಅಂದಿನ ಕಾಂಡ ನಿಜವಾಗಿಯೂ ಅವರ ಹೃದಯದಲ್ಲಿ ನಾಟಿತ್ತು ಆದರೆ ಆ ಅಪಮಾನದ ಮೂಲಕವೇ ಅವರು ಮಹಿಮನಿಗೆ ಒಲಿದರೆಂದಲ್ಲ ಈವರೆಗೆ ಸುರೇಶನೇ ಕಾಣೆಯಾಗಿದ್ದಾನೆ ಅಂದೇ ರಾತ್ರಿ ಪಶ್ಚಿಮಕ್ಕೆ ಹೊರಟು ಹೋಗಿದ್ದಾನೆ, ಬರುವ ಸುದ್ದಿಯೇ ಇಲ್ಲ ಎಂದು ಗೊತ್ತಾಗಿದೆ

ಅಂದು ಅಳು ಹತ್ತಿಡಲು ಅಚಲೆ ಹೊರಟುಹೋದ ಮೇಲೆ ಮೂವರೂ ಕಪ್ಪುಮೋರೆ ಮಾಡಿಕೊಂಡು ಎಷ್ಟೋ ಹೊತ್ತು ಕುಳಿತಿದ್ದರು. ಮೊದಲು ಮಾತಾಡಿದ್ದು ಸುರೇಶ "ಅಡ್ಡಿಯಿಲ್ಲವಾದರೆ, ನಿಮ್ಮೆದುರಿಗೇ ನಿಮ್ಮ ಮಗಳೊಡನೆ ನಾಲ್ಕು ಮಾತಾಡುವೆ" ಎಂದ, "ನೀನು ಮಾತಾಡುವುದಕ್ಕೆ ಅಡ್ಡಿ ಎಂದರೇನು?" ಎಂದು ಕೇದಾರಬಾಬು ಎಂದರು, "ಹಾಗಾದರೆ ಸ್ವಲ್ಪ ಕರಸಿರಿ" ಎಂದ, ಅವನ ಮುಖದ ಮಾತಿನ ಅಸ್ವಾಭಾವಿಕ ಗಾಂಭೀರ್ಯದಿಂದ ಗಾಬರಿಯಾದ ಅವರು, "ಹುಡುಗ ಬುದ್ಧಿ – ಏನೋ ಆಯಿತು—ಸುಧಾರಿಸಿಕೊಳ್ಳಲಿ ಸ್ವಲ್ಪ— ಎಷ್ಟೆಂದರೂ ಹೆಣ್ಣುಹೆಂಗಸು—" ಇತ್ಯಾದಿ ಎಂದರು, ಸಮರ್ಥನ ಕೇಳಿಕೊಳ್ಳುವ ಸ್ಥಿತಿಯಲ್ಲಿ ಅವನಿರಲಿಲ್ಲ, ಅಧೀರನಾಗಿ "ನನಗೆ ಪುರಸತ್ತಿಲ್ಲ" ಎಂದ, "ಹಾಂ ಹಾಂ ಸರಿಸರಿ, ಯಾರೋ ಅಲ್ಲಿ?" ಎಂದು ಕೇದಾರಬಾಬು ಮಹಿಮನನ್ನು ವಕ್ರದೃಷ್ಟಿಯಿಂದ ನೋಡಿದರು, ಮಹಿಮ ಎದ್ದು ಹೋದ ಕೇದಾರಬಾಬು ಮಗಳನ್ನು ಕರದುಕೊಂಡು ಬಂದರು, "ನೀನು ಹೇಳಿ ಹೋದೆಯಲ್ಲ, ಅದೇ ನಿಜವೋ?" ಎಂದು ಸುರೇಶ ಗಂಭೀರವಾಗಿ ಅವಳನ್ನು ಪ್ರಶ್ನಿಸಿದ, ಅವಳು "ಹಾಂ" ಎಂದಳು, "ಬದಲಾವಣೆ ಅಶಕ್ಯವೋ?" ಎಂದವನು ಕೇಳಿದ, ಅವಳು "ಅಶಕ್ಯ" ಎಂದಳು, "ನನ್ನ ಪ್ರಾಣಕ್ಕೇ ಬೆಲೆಯಿಲ್ಲವೆಂದಾಗಲೇ ನಾನೆಲ್ಲ ತಿಳಿದುಕೊಂಡೆ" ಎಂದು ಅವನೆಂದ;

ಆಗ ಅವನ ಹೃದಯದಲ್ಲಿ ಕಿಚ್ಚು ಉರಿಯುತ್ತಿತ್ತು, "ನಾನೇ ಮೊದಲ ಬೇಟೆಯೋ ಏನು ಇನ್ನೂ ಅನೇಕರು ಈ ಬಲೆಯಲ್ಲಿ ಬಿದ್ದು ಸತ್ತಿದ್ದಾರೋ?" ಎಂದ, ಅಸಹ್ಯವಿಸ್ಮಯದಿಂದ ಅಚಲೆ ಕಣ್ಣು ಕೆಕ್ಕರಿಸಿ ನೋಡಿದಳು; ಅವನು ಕೇದಾರಬಾಬುಗಳ ಕಡೆ ತಿರುಗಿ, "ತಂದೆ-ಮಗಳು ಕೂಡಿ ಹೊಂಚುಹಾಕಿ ಬೇಟೆ ಹೊಡೆಯುವ ವ್ಯವಸ್ಥಾಯ ವಿಲಾಯತಿಯಲ್ಲಿ ನಡೆಯುತ್ತದಂತೆ ಆದರೆ ಈ ಕುಕರ್ಮಕ್ಕಾಗಿ ನೀವೊಂದುದಿನ ಸೆರೆಮನೆ ಸೇರುವುದು ಖಂಡಿತ" ಎಂದ, "ಇದೇನು ಸುರೇಶಬಾಬು?" ಎಂದರವರು, "ಸಾಕು ಸುಮ್ಮನಿರಿ ಈ ನಾಟಕಕ್ಕೆ ನಾನಿನ್ನು ಬಲಿಬೀಳಲಾರೆ, ನನ್ನ ದುಡ್ಡು ಹೋದುದು ಹೋಯಿತು, ಪ್ರತಿಯಾಗಿ ಸಾಕಷ್ಟು ಬುದ್ಧಿಯೂ ಬಂತು, ಈ ಪ್ರಕರಣ ಇಲ್ಲಿಗೆ ಮುಗಿಯಲಿ" ಎಂದು ಅವನೆಂದ ಅಚಲೆ ಅಳುತ್ತ "ಅಪ್ಪಾ, ಇವರ ಹಣ ಏಕೆ ತೆಗೆದುಕೊಂಡಿರಿ?" ಎಂದಳು, ಕೇದಾರಬಾಬು ಹುಚ್ಚರಂತೆ ತುಂಡು ಕಾಗದ ಹುಡುಕಾಡಿ, ಕೊನೆಗೆ ಹಳೆಯ ಪತ್ರಿಕೆಯ ಚೂರೊಂದನ್ನು ಹಿರಿದುಕೊಂಡು, "ಈಗಿಂದೀಗ ಹ್ಯಾಂಡ್‌ನೋಟ್ ಬರೆದು ಕೊಡುತ್ತೇನೆ" ಎಂದರು, "ಇರಲಿರಲಿ ಕಾಗದದ ಅಗತ್ಯವೇನಿಲ್ಲ ನೀವು ಮುಳುಗಿಸುವುದಿಲ್ಲವೆಂದು ಒಲ್ಲೆ ಕ್ಷುಲ್ಲಕ ಹಣಕ್ಕಾಗಿ ನಾನು ಕೋರ್ಟಿಗೆ ಎಡತಾಕುವುದಿಲ್ಲ," ಎಂದು ಅವನು ಹೇಳಿದ, ಅವನು ಅಚಲೆಯ ಕಡೆ ಹೊರಳಿ ನೋಡಿದ, ಅವಳ ಕಣ್ಣೀರು, ಖಿನ್ನಮುಖ ಅವನ ಕರುಳು ಕರಗಿಸಲಿಲ್ಲ, ಅದೇಕೆ, ಅವನ ಒಳಉರಿ ನೂರ್ಮಡಿಯೇ ಆಯಿತು, "ನಿನ್ನಲ್ಲಿ ಹೆಮ್ಮೆಪಡುವಂತಹದೇನಿದೆ ಅಚಲಾ? ಏನು ಹಾಳು ಮೋರೆ, ಏನು ಕಟ್ಟಿಗೆಯಂಥ ಶರೀರ, ಏನು ಬಣ್ಣ! ಆದರೂ ನಾನು ಮರುಳಾದದ್ದು ನಿನ್ನ ರೂಪಕ್ಕೆ ಎಂದುಕೊಳ್ಳಬೇಡ!" ಎಂದ, ಅಚಲೆ ನಿರ್ಲಜ್ಜ ಅವಮಾನದ ದುಃಖದಿಂದ, ತಿರಸ್ಕಾರದಿಂದ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು, ಕೋಚಿನಮೇಲೆ ಡಬ್ಬ ಬಿದ್ದಳು; ಸುರೇಶ ಎದ್ದುನಿಂತು "ಬ್ರಾಹ್ಮರ ನೆರಳು ಕಂಡರೂ ಆಗದವನು ನಾನು, ಆಜನ್ಮ ಸಂಸ್ಕಾರ, ಚಿರದಿನದ ವಿದ್ವೇಷ ಈ ಮನೆಯೊಳಗೆ ಕಾಲಿಡುತ್ತಲೆ ಮಣ್ಣುಗೂಡಿದವಲ್ಲ, ಆಗಲೇ ಇದು ಮಾಟ ಎಂದು ನನಗೆ ಸಂಶಯ ಬರಬೇಕಾಗಿತ್ತು ನನಗೆ ಆದುದಾಗಲೊಲ್ಲದೇಕೆ ನಿಮಗೆ ಮಾತ್ರ ಸಾವಿರ ಧನ್ಯವಾದ ಅಚಲಾ!" ಎಂದ, "ಅಪ್ಪಾ, ಇವರನ್ನು ಸುಮ್ಮನಿರಿಸು ಮನೆ

ಹೋಗಲೊಲ್ಲದೇಕೆ, ಇವರ ಹಣ ತಿರುಗಿ ಕೊಟ್ಟುಬಿಡು, ಮರದಡಿಯಲ್ಲಾದರೂ ಇರೋಣವಂತೆ," ಎಂದಳು ಅಚಲೆ, "ಹಾಗೂ ಒಂದಿನ ಆದೀತು. ಅವಾಗ ನನ್ನನ್ನು ನೆನೆಯಿರಿ ಮಾತ್ರ" ಎಂದು ಸುರೇಶ ಭರ್ರನೆ ಹೊರಟು ಹೋದ ಆ ಬಳಿಕ ಕೇದಾರಬಾಬು ಎಷ್ಟೋ ಹೊತ್ತು ಸುಮ್ಮನೆ ಕುಳಿತಿದ್ದು, ಉಸಿರ್ಗರೆದು "ಏನು ಭಯಂಕರ ಮನುಷ್ಯ ! ಹೀಗೆಂದು ತಿಳಿದಿದ್ದರ ಮನೆಯೊಳಗೆ ಕಾಲಿಡಗೊಡುತ್ತಿದ್ದೆನೇ ?" ಎಂದರು ಅವರ ಮಾತು ಬಿದ್ದರೂ ಅಚಲೆ ಮಾತನಾಡದೆ ಮನವಾರೆ ಅಳುತ್ತ ಡಬ್ಬಬಿದ್ದುಕೊಂಡಿದ್ದಳು, ಕೇದಾರಬಾಬು ನೋಡುತ್ತಿದ್ದರೂ ಸಂತಯಿಸಲಿಲ್ಲ, ಆಳು ಬಂದು ದೀಪ ಹಚ್ಚಿದಾಗ ಅವಳೆದ್ದು ನೀರವವಾಗಿ ತನ್ನ ಕೋಣೆಗೆ ಹೊರಟುಹೋದಳು

ಮಹಿಮನಿಗೆ ಇದಾವುದೂ ಗೊತ್ತಾಗಲಿಲ್ಲ ಕೇದಾರಬಾಬು ತನಗೆ ಮಗಳನ್ನು ಕೊಡಲು ಸಹಜ ಸರಳತೆಯಿಂದ ಒಪ್ಪಿಕೊಂಡಾಗ ಮಾತ್ರ ಅವನು ವಿಹ್ವಲನಂತೆ ಅವರ ಮೋರೆ ನೋಡುತ್ತಿದ್ದ ಅನೇಕ ತರದ ತರ್ಕ ಸಂಶಯಗಳು ಅವನಲ್ಲಿದ್ದವು, ಆದರೆ ತನ್ನೀ ಸೌಭಾಗ್ಯಕ್ಕ ಸುರೇಶನೇ ಮೂಲ ಕಾರಣನೆಂದು ಅವನಿಗ ದೂರದ ಕಲ್ಪನೆಯಲ್ಲಿಯೂ ಹೊಳೆಯಲಿಲ್ಲ. ಅವನ ಹೃದಯದಲ್ಲಿ ಅಚಲೆಯ ಬಗ್ಗೆ ಸ್ನೇಹಪ್ರೇಮ ಕೃತಜ್ಞತೆಗಳು ಉಕ್ಕಿದವು ಆದರೆ ಅವನು ಹುಟ್ಟಾ ನೀರವ ಪ್ರಕೃತಿಯ ಪ್ರಾಣಿ, ಆವೇಗ ಉದ್ವೇಗಗಳನ್ನು ಪ್ರಕಟಿಸುವವನಲ್ಲ ಅಂದೂ ಅವನು ಬರಿ ಕೇದಾರಬಾಬುಗಳೊಡನೆ ಮಾತು ಮುಗಿಸಿದನೆ ಏನಾ, ಹೋಗುವಾಗ ಶಿಷ್ಟಾಚಾರವೆಂದು ಕೂಡ ಅಚಲಯನ್ನು ಕಂಡು ನಮಸ್ಕಾರ ಮಾಡಲಿಲ್ಲ ನಿಶ್ಚಯ ಕಾರ್ಯ, ಮುಹೂರ್ತ ಗೊತ್ತುಮಾಡುವುದು ಎಲ್ಲವನ್ನೂ ಕೇದಾರಬಾಬು ಒಬ್ಬರೇ ಮಾಡಿದರು ಎಲ್ಲವನ್ನೂ ವಿಧಿಯಿಲ್ಲವೆ ಮಾಡಿದರೇನೋ—ಅವರ ಮುಖದಲ್ಲಿ ಸ್ಫೂರ್ತಿ-ಉತ್ಸಾಹ ಲೇಶವೂ ಇರಲಿಲ್ಲ ಆದರೂ ದಿನಗಳು ಉರುಳುತ್ತಿದ್ದವು, ಕ್ರಮಶಃ ಮದುವೆಯ ದಿನ ಸಮೀಪಿಸತೊಡಗಿತು

ನಾಡದು ಮದುವೆ ಆದರೆ ಆಡಂಬರವಿಲ್ಲದೆ ಮದುವೆ ಮಾಡಬೇಕೆಂಬ ನಿರ್ಣಯದಿಂದ ಎಲ್ಲ ಸಿದ್ಧತೆ ಗದ್ದಲವಿಲ್ಲದೆ ನಡೆದಿತ್ತು. ಇಂಹೊತ್ತಿನಲ್ಲಿ ಯಥಾರೀತಿಯಾಗಿ ಕೇದಾರಬಾಬು ಚಾ ಪಾನಕ್ಕೆ ಕುಳಿತಿದ್ದರು ಅಚಲೆ ಅನತಿ ದೂರದಲ್ಲಿ ಕೋಚಿನ ಮೇಲೆ ಕುಳಿತು ಕಸೂತಿ

ಹಾಕುತ್ತಿದ್ದಳು. ಈಗ ಕೆಲದಿನಗಳಿಂದ ಅವಳ ಮನಸಿಗೆ ಒಂದಿಷ್ಟು ಸಮಾಧಾನವುಂಟಾಗಿತ್ತು, ಅವಳ ಬಿಳಿಮೊಗ ಮ್ಲಾನ ಚಂದ್ರಿಕೆಯಂತೆ— ಸ್ನಿಗ್ಧವಾಗಿ ತೋರುತ್ತಿತ್ತು ಚಾ ಕುಡಿಕುಡಿಯುತ್ತ ಕೇದಾರಬಾಬು ಅದನ್ನೇ ನಿಟ್ಟಿಸುತ್ತಿದ್ದರು ಸುರೇಶ ಜಗಳ ಮಾಡಿ ಹೋದಾಗಿನಿಂದ ವಿರಸವಾಗಿಯೇ ದಿನಗಳೆಯುತ್ತಲಿದ್ದರು ಅವನು ತಿರುಗಿ ಬಂದು ಏನು ಮಾಡುವನೋ ಎಂಬುದೊಂದು ಚಿಂತೆ ಈ ಪ್ರಸಂಗದಲ್ಲಿ ತಾವೇನು ಮಾಡುವುದು? ಹ್ಯಾಂಡ್‌ನೋಟ್ ಬರೆದುಕೊಡುವುದೇ, ಎಲ್ಲಿಯಾದರೂ ಸಾಲಮಾಡಿ ಹಣ ಮರಳಿಸುವುದೇ, ಅಥವಾ ಆ ಮನೆ ಮಹಿಮನಿಗೆ ಬಿಟ್ಟುಕೊಡುವುದೇ— ಎಷ್ಟು ಯೋಚಿಸಿದರೂ ದಡಕ್ಕೆ ಹತ್ತಲಿಲ್ಲ. ಸುರೇಶ ಕಾಣೆಯಾಗಿರುವನೆಂದು ಮೈಮರೆಯುವುದಾಗಲಿ, ಮಗಳಂತೆ ತಮ್ಮ ಲಹರಿಯಲ್ಲಿ ತಾವಿರುವುದಾಗಲಿ ಕೆಲಸದ್ದಲ್ಲ ಎಂದು ಅವರು ಬಲ್ಲರು. ಭಗ್ನಪ್ರೇಮಿ ಒಂದಿಲ್ಲೊಂದು ದಿನ ನೆಟ್ಟಗಾಗಿ ಬರುವನು, ಬಂದು ಎಲ್ಲವನ್ನು ನಾಲ್ಕು ಕಡೆ ಹರಲಿ ಮಾಡಿ ಗೊಂದಲವೆಬ್ಬಿಸುವನು ಸಾಲಕ್ಕೆ ಕಾಗದ ಪತ್ರ ಇಲ್ಲ, ಆದರೂ ಚಕ್ಕನಿಂದ ಕೊಟ್ಟುದರಿಂದ ನ್ಯಾಯವಾಗಿ ಹಾರಿಸಲಿಕ್ಕೆ ಬರಲಾರದು— ಇದೆಲ್ಲ ವಿಷಯ ಅವರಿಗೆ ನಿಸ್ಸಂಶಯವಾಗಿತ್ತು ಇದನ್ನು ಮಗಳೊಡನೆ ಯೋಚಿಸಲು ಆಸ್ಪದವಿರಲಿಲ್ಲ. ಸುರೇಶನ ಹೆಸರುಗೊಂಡರೆ ಆಕೆ ನಡುಗುತ್ತಿದ್ದಳು ಈಗ, ಅವಳ ಶಾಂತ ಮುಖ ನೋಡುತ್ತಿದ್ದಂತೆ, ಎಲ್ಲ ದುಃಖಕ್ಕೆ ಇವಳೇ ಮೂಲ ಎಂಬ ವಿಚಾರ ಅವರಿಗೆ ಬರತೊಡಗಿತು ಹಾಗೆ ನೋಡಿದರೆ ಎಂತಹ ಒಳ್ಳೆಯ ಏರ್ಪಾಡು ತಾವು ಮಾಡಿದ್ದರು! ಸ್ವಲ್ಪ ದಿನಗಳಲ್ಲಿಯೇ ಏನೇನಾಗುತ್ತಿತ್ತೋ ಯಾರು ಕಂಡಿದ್ದರು! ತಾವು ಎಷ್ಟು ಬೇಡವೆಂದರೂ ಅವಳು ತನ್ನ ಸುಖಕ್ಕೆ ಕಲ್ಲುಹಾಕಿಕೊಂಡಳು 'ಇದರ ಫಲ ಮುಂದೆ ಉಣ್ಣುವಳು, ಆಗ, ಅಪ್ಪಾ, ನಿನ್ನ ಮಾತು ಕೇಳದುದಕ್ಕೆ ನನಗೆ ಪ್ರಾಯಶ್ಚಿತ್ತವಾಯಿತು ಎಂದು ಅಳುವಳು' ಎಂದು ಮತ್ತೆ ಮತ್ತೆ ಅವರಿಗೆನಿಸುತ್ತಿತ್ತು ಸುರೇಶ ಮಹಿಮನಿಗಿಂತ ಸಾವಿರಪಟ್ಟು ಚೆಲೋ ವರ ಎಂಬ ತಿಳಿವಳಿಕೆ ಅವರಲ್ಲಿ ಬದ್ಧಮೂಲವಾಗಿತ್ತು ಮನಸಿನಲ್ಲಿ ಅವನ ಬಗ್ಗೆ ಅವರಿಗೆ ಸಿಟ್ಟಿರಲಿಲ್ಲ ಇಷ್ಟು ಪ್ರಕಾಂಡವಾದಮೇಲೂ ಅವನನ್ನು ಪಡೆಯುವುದು ಸಾಧ್ಯವಿದ್ದರೆ ಈಗಲೂ ಈ ಸಂಬಂಧ ಮುರಿಯಬಹುದಿತ್ತು ಆದರೆ ಉಪಾಯವಿಲ್ಲ!

“ಅಪ್ಪಾ, ಸುರೇಶಬಾಬುಗಳ ಸುದ್ದಿ ಓದಿದಿರಾ?” ಎಂದು ಅಚಲೆ ಕೇಳಿದಳು

ಅಚಲೆಯ ಮುಖದಿಂದ ಸುರೇಶನ ಹೆಸರು! ಕೇದಾರಬಾಬುಗಳು ತಮ್ಮ ಕಿವಿಯನ್ನೂ ನಂಬದಾದರು “ಯಾವ ಸುರೇಶ?” ಎಂದರು

ಪತ್ರಿಕೆಯಲ್ಲಿ ಆ ಸುದ್ದಿ ಹುಡುಕುತ್ತ ಅಚಲೆ, “ಬಹುಶಃ ನಮ್ಮ ಸುರೇಶಬಾಬುಗಳೇ” ಎಂದಳು

“ನಮ್ಮ ಸುರೇಶಬಾಬೂ? ಎಲ್ಲಿದ್ದಾನೆ? ಏನು ಮಾಡಿದ?”

“ಇದೋ, ಓದಿ ನೋಡು” ಎಂದು ಅಚಲೆ ಆ ಸುದ್ದಿ ತೋರಿಸಿದಳು.

ಕನ್ನಡಕಕ್ಕಾಗಿ ಜೇಬು ಸವರುತ್ತ ಅವರೆಂದರು “ಕನ್ನಡಕ ಕೋಣೆಯೊಳಗೇ ಬಿಟ್ಟುಬಂದಹಾಗಿದೆ, ನೀನೇ ಓದಿ ಹೇಳವ್ವ”

ಅವಳು ಓದಿದಳು ಫಯಜಾಬಾದಿನ ಸುದ್ದಿಗಾರ ಬರೆದಿದ್ದಾನೆ: ಇಂದು ಮುಂಜಾನೆ ನಗರದ ಬಡವರ ವಸತಿಯಲ್ಲಿ ಭಯಂಕರ ಅಗ್ನಿಕಾಂಡ ವಾಯಿತು ಪ್ಲೇಗೊಂದು, ಮೇಲೆ ಈ ಅನಾಹುತ ಬಡವರ ದುಃಖಕ್ಕೆ ಎಲ್ಲೆ ಕಟ್ಟು ಇಲ್ಲ ಈಗ ಕೆಲದಿನಗಳಿಂದ ಸುರೇಶನೆಂಬೊಬ್ಬ ಸಜ್ಜನ ಯುವಕ ಇಲ್ಲಿ ಬಂದಿದ್ದು ಹಣದಿಂದ, ಔಷಧದಿಂದ, ಶುಶ್ರೂಷೆಯಿಂದ ಅವರಿಗೆ ನೆರವಾಗುತ್ತಿದ್ದಾನೆ ಅವನು ಅನಾಹುತಸ್ಥಳಕ್ಕೆ ಹೋದಾಗ, ಹಾಸಿಗೆ ಹಿಡಿದಿದ್ದ ಹೆಂಗುಸೊಬ್ಬಳು ಉರಿಯುತ್ತಿರುವ ಮನೆಯೊಳಗೆ ಸಿಕ್ಕು ಬಿದ್ದಿದ್ದಾಳೆ ಎಂದು ಕೇಳಿದ,— ಅವಳನ್ನು ಉಳಿಸಲು ಯಾರೂ ಮುಂದೆ ಹೋಗುತ್ತಿರಲಿಲ್ಲ,— ಈ ಅಸಮಸಾಹಸಿ ಬಂಗಾಲೀಯುವಕ ಅಗ್ನಿರಾಶಿಯಲ್ಲಿ ಹೊಕ್ಕು ಇತ್ಯಾದಿ

ಕೇದಾರಬಾಬು ಕೆಲಹೊತ್ತು ನೀರವವಾಗಿ ಕುಳಿತಿದ್ದು ನಿಟ್ಟುಸಿರಿಟ್ಟು, “ಅವನು ನಮ್ಮ ಸುರೇಶಬಾಬುವೇ ಎಂದು ಎನಿಸುವುದೇನು?” ಎಂದರು.

“ಹೂಂ ಅವರು ನಮ್ಮ ಸುರೇಶಬಾಬುಗಳೇ”

ಗೊತ್ತಿಲ್ಲದಂತೆಯೋ ಇಲ್ಲವೆ ನಿಶ್ಚಿತಾರ್ಥ ಸೂಚಿಸುವುದಕ್ಕೋ ‘ನಮ್ಮ’ ಎಂಬುದು ಒತ್ತಿಬಂತು ಕೇದಾರಬಾಬು ಚಕಿತರಾದರು. ಅವರ ಹೃದಯದಲ್ಲಿ ಅದು ಬೇರೆ ತೆರನಾಗಿಯೇ ಪಡಿನುಡಿಗೊಟ್ಟಿತು ಆಗದ ಆಶೆಯ ಬಾಗಿಲು ತೆರೆದಂತೆ ಅವರಿಗೆನಿಸಿತು. ಅವರ ಮುಖ ಅರಳಿತು.

“ಒಳ್ಳೆಯದವ್ವಾ, ನಿನಗೆ—”

ಅವರು ನಡುವೆಯೆ ತಡೆದುದನ್ನು ಕಂಡು ಅವಳು "ಏನು?" ಎಂದು ಕೇಳಿದಳು

"ನಿನಗೆನಿಸುವುದಿಲ್ಲವೇ, ಸುರೇಶಬಾಬು ನಮ್ಮೊಂದಿಗೆ ಮಾಡಿದ ವ್ಯವಹಾರಕ್ಕಾಗಿ ಅನುತಪ್ತನಾಗಿದ್ದಾನೆಂದು?"

"ನಿಶ್ಚಯವಾಗಿ ಹಾಗೆನಿಸುತ್ತಿದೆ"

"ನಿಶ್ಚಯ, ಶತಶಃ ನಿಶ್ಚಯ! ಇಲ್ಲದಿದ್ದರೆ ಹೀಗೆ ಓಡಿಹೋಗುತ್ತಿರಲಿಲ್ಲ, ಯಾವಳೋ ಕ್ಷುದ್ರ ಸ್ತ್ರೀಯ ರಕ್ಷಣೆಗಾಗಿ ಉರಿಯೊಳಗೆ ಧುಮುಕುತ್ತಿರಲಿಲ್ಲ ಅವನು ಪ್ರಾಣದಾಶೆ ಬಿಟ್ಟಂತಿದೆ ಹೌದೊ ಅಲ್ಲವೊ?"

ಅಚಲೆ ಇದಕ್ಕೆ ಉತ್ತರ ಕೊಡುವುದು ತಪ್ಪಿಸಿ, "ಒಬ್ಬರನ್ನುಳಿಸುವುದಕ್ಕಾಗಿ ಅವರು ತಮ್ಮ ಪ್ರಾಣವನ್ನು ಸಂಕಟದಲ್ಲಿ ನೂಕಿದ ಉದಾಹರಣೆ ಇನ್ನೂ ಒಂದೆರಡು ಕೇಳಿದ್ದೇನೆ" ಎಂದಳು

ಈ ಮಾತು ತಂದೆಗೆ ಅಷ್ಟೊಂದು ರುಚಿಸಲಿಲ್ಲ "ಆ ಮಾತು ಬೇರೆ ಅಚಲಾ! ಬೆಂಕಿಯಲ್ಲಿ ಹಾರಿಕೊಳ್ಳುವುದೆಂದರೆ ಸಾವನ್ನೇ ಅಪ್ಪಿದಂತೆ! ಅದಕ್ಕೂ ಇದಕ್ಕೂ ಭೇದವಿಲ್ಲವೆ?" ಎಂದರು

"ಇರದೆ ಏನು? ದೊಡ್ಡವರೆಂದರೆ ಹೀಗೆಯೆ, ಪರರ ವಿಪತ್ತಿನಲ್ಲಿ ತಮ್ಮ ವಿಪತ್ತು ಎಣಿಸುವುದಿಲ್ಲ."

ಕೇದಾರಬಾಬು ಉಬ್ಬಿದರು ದನಿ ಎತ್ತರಿಸಿ ಎಂದರು "ಹಾಂ ಹಾಂ, ನಾನೂ ಅದನ್ನೇ ಹೇಳುತ್ತಿರುವುದು ಅವನು ದೊಡ್ಡವ. ಅವನ ಸರಿ ಯಾರಿದ್ದಾರೆ? ಇದ್ದಿದ್ದಾರು— ಆದರೆ ಯಾರು ಯಾರಿಗೆ ಐದೈದು ಸಾವಿರ ರೂಪಾಯಿ ಒಂದೇ ಮಾತಿಗೆ ಕೊಡುತ್ತಾರೆ ಹೇಳು. ಅವನು ಏನೇ ಏಕೆ ಮಾಡಿರಲೊಲ್ಲ, ಅತಿ ಸಂತ್ರಸ್ತನಾಗಿಯೇ ಮಾಡಿದ್ದಾನೆಂದು ನಾನು ಆಣೆಮಾಡಿ ಹೇಳಬಲ್ಲೆ"

ನಿಜವಾಗಿ ನೋಡಿದರೆ ಆಣೆಚೂರಿಯ ಅಗತ್ಯವಿರಲಿಲ್ಲ, ಈ ವಿಷಯ ಅವಳಿಗೆ ತಿಳಿದುದರ ಶತಾಂಶವೂ ಅವರಿಗೆ ತಿಳಿದಿರಲಿಲ್ಲ ಅವಳು ಮಾತನಾಡಲಿಲ್ಲ ಮುಖದ ಮೇಲಿನ ಲಜ್ಜೆ ಕಂಡೀತೆಂದು ತಲೆ ತಗ್ಗಿಸಿದಳು ಆದರೆ ಮುದುಕನ ಸತೃಷ್ಣದೃಷ್ಟಿಯಿಂದ ಅದು ತಪ್ಪಿಸಿಕೊಳ್ಳಲಿಲ್ಲ. ಅವರ ಚಿತ್ತ ಪುಲಕಿತವಾಯಿತು. "ಮನುಷ್ಯನೇನು ದೇವನಲ್ಲ, ಮನುಷ್ಯನೇ. ಅವನಲ್ಲಿ ಗುಣ-ದೋಷ ಎರಡೂ ಇರುವವೇ. ಅವನ ದುರ್ಬಲ ಅವಸ್ಥೆಯ

ಉತ್ತೇಜನವಷ್ಟೇ ಸ್ವಭಾವ ಎಂದು ಎಣಿಸಲು ಬಾರದು ಮುಂದಿ ಏನು ಬೇಕಾದರೆನ್ನಲಿ, ಆದರೆ ನಾವೇ ಇಷ್ಟನ್ನು ಅವನ ತಪ್ಪೆಂದು ಹಿಡಿದರೆ, ಮುಂದಿಗೂ ನಮಗೂ ಭೇದವೇನು ? ದೊಡ್ಡವರು ಬಹಳ ಜನ ಇರಬಹುದು, ಆದರೆ ಇಂತಹ ಉದಾರರು ವಿರಳ — ಏನು ಬರೆದಿದೆ, ಮತ್ತೊಮ್ಮೆ ಓದಮ್ಮ, ಅವಳನ್ನು ಕಿಚ್ಚಿನಿಂದ ಹೊರತೆಗೆದು ಉಳಿಸಿದನೇ ? ಓಃ, ಏನು ಮಹಾನುಭಾವ ! ದೇವರೆನ್ನುವುದು ಮತ್ತಾರಿಗೆ !" ಎಂದರು

ಅಚಲೆ ಹಾಗೆಯೇ ಅಧೋಮುಖಿಯಾಗಿ ಮೌನವಾಗಿ ಕುಳಿತಿದ್ದಳು ಕೇದಾರಬಾಬು ಮತ್ತೆಂದರು "ತಂತಿಕೊಟ್ಟು ಅವರ ಸಮಾಚಾರ ತರಿಸುವುದು ಉಚಿತವಲ್ಲವೆ ? ಇಂಥ ಸಮಯದಲ್ಲಿಯೂ ನಾವು ಅಭಿಮಾನ ಹಿಡಿಯುವುದೇ ?

"ಆದರೆ ಅವರ ವಿಳಾಸ ಗೊತ್ತಿಲ್ಲವಲ್ಲ" ಎಂದಳವಳು

"ವಿಳಾಸ ! ಫಯಜಾಬಾದ ನಗರದಲ್ಲಿ ನಮ್ಮ ಸುರೇಶಬಾಬುವನ್ನು ಅರಿಯದವರು ಇದ್ದಿದ್ದಾರೇನು? ಕೂಡಲೆ ಒಂದು ತಂತಿ ಬರೆದು ಕಳಿಸಮ್ಮ; ನನಗೆ ಬಲು ಚಡಪಡಿಕೆಯಾಗಿದೆ "

"ಈಗಲೇ ಕಳಿಸುತ್ತೇನೆ" ಎಂದವಳು ಕಾಗದಕ್ಕಾಗಿ ಹೊರಬರುತ್ತಲೆ ಇದಿರಿಗೇ ಸುರೇಶ !

ಅಂತರಂಗದ ಗಭೀರ ದುಃಖ ಕಲವೇ ದಿನಗಳಲ್ಲಿ ಮುಖವನ್ನು ಎಷ್ಟು ಒಣಗಿಸಬಹುದು, ಎಷ್ಟು ಕಳೆಗುಂದಿಸಬಹುದು ಎಂಬುದನ್ನು ಅವಳು ಕಂಡಳು ಇಂದೇ ಬೆರಗಾಗಿ ನಿಂತಳು ಎಷ್ಟೋಹೊತ್ತು ಯಾರಿಂದಲೂ ಮಾತು ಹೊರಡಲಿಲ್ಲ ಕೊನೆಗೆ ಅವಳೇ ಮಾತನಾಡಿದಳು "ಅಪ್ಪ ಕುಳಿತಿದ್ದಾರೆ ಬನ್ನಿ ಒಳಗೆ ಬನ್ನಿ ಫಯಜಾಬಾದಿನಿಂದ ಯಾವಾಗ ಬಂದಿರಿ ?"

"ನಾ ಅಲ್ಲಿದ್ದುದು ನಿಮಗೇನು ಗೊತ್ತು ?"

"ಇದೇ ಈಗ ಪತ್ರಿಕೆಯಲ್ಲಿ ನಿಮ್ಮ ಸುದ್ದಿ ಓದಿ, ಅಪ್ಪ ನಿಮಗೆ ತಂತಿಕೊಡಲು ಹೇಳಿದರು ನಿಮಗಾಗಿ ಅವರು ಬಹಳ ಚಡಪಡಿಸುತ್ತಿದ್ದಾರೆ ಬನ್ನಿ, ಅವರನ್ನು ಕಾಣಿರಿ" ಎಂದು ಅಚಲೆ ಹಿಂದಿರುಗುತ್ತಲಿದ್ದಳು "ನನ್ನನ್ನು ಅವರು ಕ್ಷಮಿಸಿರಬಹುದು, ನೀನೆಂತು ಕ್ಷಮಿಸಿದೆ !" ಎಂದ ಸುರೇಶ

ಅಚಲೆಯ ತುಟಿಗಳಲ್ಲಿ ನಸುನಗೆ ಮಿನುಗಿತು "ನನಗದರ ಅಗತ್ಯವೇ ಬೀಳಲಿಲ್ಲ— ನಾನೆಂದೂ ನಿಮ್ಮ ಮೇಲೆ ಸಿಟ್ಟಾಗಿಲ್ಲ ಬನ್ರಿ, ಒಳಗೆ ಬನ್ರಿ"

೧೩

ಮಹಿಮನ ಪತ್ರದಿಂದ ಮದುವೆಯ ಸುದ್ದಿ ತಿಳಿದಕೂಡಲೆ ಸುರೇಶ ಹೊರಟುಬಂದಿದ್ದ ಇದನ್ನು ಕೇಳಿ ಕೇದಾರಬಾಬು ಲಜ್ಜಿತರಾದರು ಅಚಲೆಯ ಮುಖದಲ್ಲಿ ಮಾತ್ರ ಯಾವ ಭಾವವೂ ತೋರಲಿಲ್ಲ

"ಮಹಿಮನ ಮದುವೆಗೆ ನಾ ತಪ್ಪಿಸುವಂತಿರಲಿಲ್ಲ, ಇಲ್ಲದಿದ್ದರೆ ಹಾಸಪಾತಾಲನಲ್ಲಿ ಇನ್ನೂ ಕಲ ದಿನ ಇರಬೇಕಾಗಿತ್ತು" ಎಂದ ಸುರೇಶ

"ಹಾಸಪಾತಾಲಿನಲ್ಲಿ? ಏಕೆ ಸುರೇಶಬಾಬು?" ಎಂದು ಕೇದಾರಬಾಬು ಉತ್ಕಂಠೆಯಿಂದ ಕೇಳಿದರು

"ಅಂತಹದೇನಿಲ್ಲ ಮೈಯೊಳಗೆ ಸೆಟ್ಟಗಿದ್ದಿಲ್ಲ ಅಷ್ಟೆ"

"ಅದಕ್ಕೇ ಎಂದೆ ಪತ್ರಿಕೆಯಲ್ಲಿ ನಿಮ್ಮ ಅಲೌಕಿಕ ಕಥೆ ಓದಿದಾಗ, ನಾ ಏನು ಹೇಳಲಿ, ಆನಂದದಿಂದ ಹೆಮ್ಮೆಯಿಂದ ನನಗೆ ಕಣ್ಣಲ್ಲಿ ನೀರೇ ಬಂತು ಇಂಥವರಿಗೆ ಗೆಳೆಯನಾದುದಕ್ಕೆ ಮಹಿಮನೇ ಧನ್ಯ, ಎಂದುಕೊಂಡೆ" ಎಂದು ಸ್ವಲ್ಪ ತಡೆದು ಕೇದಾರಬಾಬು ಮತ್ತೆಂದರು "ಆದರೆ ಒಂದು ಮಾತು ತಿಳಿಸದಿರಲಾರೆ ನೀವು ಮತ್ತೆ ಮತ್ತೆ ಹೀಗೆ ಸಂಕಟದಲ್ಲಿ ಬೀಳುವುದುಚಿತವೇ? ಒಂದು ಸಾಮಾನ್ಯ ಜೀವ ಉಳಿಸುವುದರೊಳಗೇ ಈ ಮಹಾನ್ ಜೀವ— ಪ್ರಪಂಚಕ್ಕೆ ದೊಡ್ಡ ಹಾನಿಯಲ್ಲವೆ?"

"ಹಾನಿ ಎಂತಹದು?" ಎಂದೆನ್ನುತ್ತ ಸಲಜ್ಜಹಾಸ್ಯದಿಂದ ಮುಖ ತಿರುಗಿಸಿದ ಸುರೇಶ ಆತನಕ ಅವನನ್ನೇ ಎವೆಯಿಕ್ಕದೆ ನೋಡುತ್ತಿದ್ದ ಅಚಲೆ ತಕ್ಷಣ ಮುಖ ಕೆಳಗೆ ಹಾಕಿದಳು

"ಇಂಥ ಮಾತು ಬಾಯಿಂದ ಬರಬಾರದು ಕೂಡ ಇದರಿಂದ ಸ್ವಜನಕ್ಕೆ ಎಷ್ಟು ವ್ಯಥೆ!" ಎಂದು ಕೇದಾರಬಾಬು ಎಂದರು

ಸುರೇಶ ನಕ್ಕ "ನನಗೆ ಸ್ವಜನರಿಲ್ಲ ಕೇದಾರಬಾಬೂ. ಇದ್ದವಳೆಂದರೆ ಅತ್ತೆಯೊಬ್ಬಳೇ ನಾ ಹೋಗಿಬಿಟ್ಟರೆ ಜಗತ್ತಿನಲ್ಲಿ ಅವಳಿಗೆ ಮಾತ್ರ ಒಂದಿಷ್ಟು ದುಃಖವಾಗುವುದು" ಎಂದ

ಅವನ ಬಾಯಿಂದ ಸ್ವಜನರಾರೂ ಇಲ್ಲವೆಂಬುದನ್ನು ಕೇಳಿ ಬಾಬು

ಗಳಿಗೆ ಕಣ್ಣೊಳಗೆ ನೀರು ಬಂದವು "ಅತ್ತೆಮ್ಮಗೊಬ್ಬಳಿಗೇ ದುಃಖವಾಗುವುದೇ ಸುರೇಶಬಾಬೂ ? ಹಾಗೆನ್ನಬೇಡ, ಈ ಮುದುಕನಿಗೇನು ಕಡಿಮೆ ದುಃಖವಾಗುವುದಿಲ್ಲ ನಾ ಬದುಕಿದ್ದಷ್ಟು ದಿನ ನಿನ್ನ ಶರೀರ ಜತನವಾಗಿಟ್ಟುಕೊ, ಇದೇ ನನ್ನ ಬಯಕೆ" ಎಂದರು

ಹತ್ತು ಬಾರಿಸಿತು ರಾತ್ರಿಯಾಯಿತೆಂದು ಸುರೇಶ ಹೊರಡಲುದ್ಯುಕ್ತನಾಗಿ ಕೈಜೋಡಿಸಿ, "ಒಂದು ಬೇಡಿಕೆ ಕೇದಾರಬಾಬೂ· ಮಹಿಮನ ಮದುವೆ ನಮ್ಮಲ್ಲಿಯೇ ಆಗುವುದು ಗೊತ್ತಾಗಿದೆ ಅದು ನಾಡದು ನಾಳೆ ಸಂಜೆಗೆ ಈ ಅಧಮನ ಮನೆಯಲ್ಲಿ ತಮ್ಮ ಪಾದಧೂಳಿ ಬೀಳಲಿ ಇಲ್ಲದಿದ್ದರೆ ತಾವು ನನ್ನನ್ನು ಕ್ಷಮಿಸಿರುವಿರೆಂದು ಭರವಸೆಯಾಗದು ಈ ಭಿಕ್ಷೆ ನೀಡುವಿರಾ ?" ಎಂದು ನಮಸ್ಕರಿಸಲು ಬಾಗಿದ

ಬಾಬುಗಳು ಬಹುಶಃ ಅವನನ್ನು ತಡೆಯುವುದಕ್ಕೆ ಬಾಗಿದ್ದವರು, ಅವನ ನರಳಿಕೆಯಿಂದ ಬೆಚ್ಚಿಬಿದ್ದರು ಬೆನ್ನಲ್ಲಿ ಸುಟ್ಟ ಗಾಯಕ್ಕೆ ಬ್ಯಾಂಡೇಜು ಕಟ್ಟಿತ್ತು, ಈವರೆಗೆ ಸುರೇಶ ಅದನ್ನು ಶಾಲಿನಿಂದ ಮುಚ್ಚಿಕೊಂಡಿದ್ದ ಅವರು ಗೊತ್ತಾಗದೆ ಬ್ಯಾಂಡೇಜನ್ನು ಸರಿಸಿಬಿಟ್ಟಿದ್ದರು. ಗಾಯ ಕಾಣಿಸಿತು ಅವರು ಗಾಬರಿಯಿಂದ ಚೀರಿಕೊಂಡರು ಅಚಲೆ ಚಟ್ಟನೆದ್ದು ಬಂದು, ಸುರೇಶನನ್ನು ಸೋಫಾದ ಮೇಲೆ ಕೂಡಿಸಿ, ಜತನವಾಗಿ ಬ್ಯಾಂಡೇಜು ಕಟ್ಟತೊಡಗಿದಳು

ಕೇದಾರಬಾಬು ಚೌಕಿಯಲ್ಲಿ ದೊಪ್ಪನೆ ಕುಸಿದು ನೀರವವಾದರು. ಬ್ಯಾಂಡೇಜ ಕಟ್ಟುತ್ತಿದ್ದಂತೆ ಅಚಲೆಯ ಕಣ್ಣು ಕಂಬನಿದುಂಬಿದವು; ತುಸಹೊತ್ತಿನಲ್ಲಿ ಹನಿಯೊಡೆಯಿತು ಅವಳು ಹಿಂದಿದ್ದಳು— ಸುರೇಶನಿಗದು ಕಾಣಲಿಲ್ಲ, ಆಕಡೆ ಲಕ್ಷ್ಯವೂ ಇರಲಿಲ್ಲ, ಅವನು ಅವಳ ಕೋಮಲ ಕರಸ್ಪರ್ಶವನ್ನು ಅನುಭವಿಸುತ್ತಲಿದ್ದ

"ನನ್ನ ಮುಂದೆ ನೀವೊಂದು ಆಣೆಮಾಡಬೇಕು" ಎಂದಳು ಅಚಲೆ.

ಅವನ ಧ್ಯಾನ ಭಗ್ನವಾಯಿತು "ಏನು ?" ಎಂದು ಕೇಳಿದ

"ಹೀಗೆ ನಿಮ್ಮ ಜೀವ ಇನ್ನೆಂದೂ ಸಂಕಟದಲ್ಲಿ ಹಾಕಲಾಗದು"

"ಆದರೆ ನಾನು ಬೇಕೆಂತ ಜೀವ ಸಂಕಟದಲ್ಲಿ ಹಾಕಲಿಲ್ಲ ಅಂಥ ಹೊತ್ತಿನಲ್ಲಿ ನನ್ನ ಪರಿವೆಯೇ ನನಗಿರುವುದಿಲ್ಲ"

ಅಚಲೆ ನಿಟ್ಟುಸಿರನ್ನು ಹತ್ತಿಟ್ಟುಕೊಂಡಳು ಅದು ಸುರೇಶನಿಗೆ

ಸೊತ್ತಾಗದಿರಲಿಲ್ಲ ಕಟ್ಟುವುದು ಮುಗಿಯಿತು ಅವನು ಮೆಲ್ಲನೆದ್ದು ನಿಂತು, "ನಾಳೆ ದೀನನ ಮನೆಯಲ್ಲಿ ಪಾದಧೂಳಿ ಚೆಲ್ಲಬೇಕು" ಎಂದ ಅವನ ಕಣ್ಣುಗಳೆರಡೂ ನೆರೆದುಂಬಿದವು ಅಚಲೆ ಮುಖ ತಗ್ಗಿಸಿಕೊಂಡೇ ಗೋಣುಹಾಕಿ, "ಒಳ್ಳೆಯದು," ಎಂದಳು ಅವನು ಹೊರಟುಹೋದ.

ಮರುದಿನ ಯಥಾಸಮಯಕ್ಕೆ ಸುರೇಶನ ಬಂಡಿ ಬಂದು ಮನೆಮುಂದೆ ನಿಂತಿತು ಕೇದಾರಬಾಬು ಅಣಿಯಾಗಿಯೇ ಇದ್ದರು ಮಗಳೊಂದಿಗೆ ಹೊರಟರು ಸುರೇಶ ದೊಡ್ಡ ಮನುಷ್ಯನೆಂದು ಅವರು ತಿಳಿದೇ ಇದ್ದರು ಆದರೆ ಅದೆಷ್ಟು ಎಂಬುದು ಅವರ ಅನುಮಾನಕ್ಕೆ ಸಿಕ್ಕಿರಲಿಲ್ಲ ಅವನ ಮನೆಯಲ್ಲಿ ಕಾಲಿಡುತ್ತಲೇ ಅದನ್ನು ಕಣ್ಣಾರೆ ಕಂಡು ಅವಾಕ್ಕಾದರು ಸುರೇಶ ಇಬ್ಬರನ್ನೂ ಆದರದಿಂದ ಬರಮಾಡಿಕೊಂಡ

"ಮಹಿಮನ ಹಟ ಇಂದೂ ಬಿಡಿಸಲಾಗಲಿಲ್ಲ, ಕೇದಾರಬಾಬೂ. ನಾಳೆ ಮಧ್ಯಾಹ್ನದೊಳಗೆ ಇಲ್ಲಿಗೆ ಬರಲು ಅವನೊಪ್ಪಲಿಲ್ಲ"

ಮೂವರೂ ಕೂಡುವ ಕೋಣೆ ಪ್ರವೇಶಿಸಿದರು ಪ್ರೌಢ ರಮಣಿಯೊಬ್ಬಳು ಬಾಗಿಲ ಮರೆಯಿಂದ ಬಂದು ಅಚಲೆಯನ್ನು ಕೈಹಿಡಿದು ಒಳಗೆ ಕರೆದೊಯ್ದಳು ಆಕೆಯ ಕೋಣೆಯಲ್ಲಿ ನಡುವೆ ಕಾರ್ಪೆಟ್ ಹಾಸಿತ್ತು. ಅಲ್ಲಿ ಅಚಲೆಯನ್ನು ಕೂಡ್ರಿಸಿ ಅವಳು ತನ್ನ ಪರಿಚಯ ಮಾಡಿಕೊಟ್ಟಳು: "ವಾವಿಯಿಂದ ನಾ ನಿನಗೆ ಅತ್ತೆಯಾಗಬೇಕು, ಸೊಸಮುದ್ದೀ ನಾ ಮಹಿಮನ ಸೋದರತ್ತೆ"

ಅಚಲೆ ನಮಸ್ಕರಿಸಿ ಪಾದಧೂಳಿ ಕೊಂಡು ವಿಸ್ಮಯದಿಂದ ಅವಳ ಮೋರೆ ನೋಡುತ್ತ, "ನೀವಿಲ್ಲಿಗೆ ಎಂದು ಬಂದಿರಿ?" ಎಂದು ಕೇಳಿದಳು

ಪ್ರೌಢೆ ಅಚಲೆಯ ವಿಸ್ಮಯದ ಕಾರಣವನ್ನು ಊಹಿಸಿ ನಕ್ಕು ವಿವರಿಸಿದಳು "ನಾನಿಲ್ಲಿಯೆ ಇರುವೆನಮ್ಮ, ನಾನು ಸುರೇಶನ ಸೋದರತ್ತೆ ಎಂದರೆ ಮಹಿಮನಿಗೂ ಸೋದರತ್ತೆ"

ಅವಳ ಸ್ವಭಾವ ಕೋಮಲ ಸ್ವರದಲ್ಲಿ ಸ್ನೇಹ ಅಂತಃಕರಣ ಧ್ವನಿತವಾದವು ಕ್ಷಣದೊಳಗೇ ಅಚಲೆಯ ಹೃದಯ ಆಲೋಡಿತವಾಯಿತು ಅವಳು ತಾಯಿಯಿಲ್ಲದ ತಬ್ಬಲಿ ಈ ಕೊರತೆ ಪೂರೈಸುವ ಆಪ್ತಸ್ತ್ರೀ ಮನೆಯೊಳಗೆ ಯಾರೂ ಇರಲಿಲ್ಲ ಅವಳಿಗೆ ತಿಳಿಯತೊಡಗಿದಾಗಿನಿಂದ ಈ ವರೆಗೆ ತಂದೆಯ ಅಕ್ಕರತೆಯಲ್ಲಿಯೇ ಬೆಳೆದಿದ್ದಾಳೆ ಆದರೆ ಆ ಅಕ್ಕರತೆ

ಅವಳ ಹೃದಯದಲ್ಲಿ ಒಂದಿಷ್ಟು ತೆರವು ಬಿಟ್ಟಿತ್ತು ಅದಿಂದು ನಿಚ್ಚಳವಾಗಿ ಕಂಡಿತು ಇಂದು ಅನ್ಯರ ಮನೆಯಲ್ಲಿ ಅನ್ಯರ ಅತ್ತೆವ್ವ "ಸೊಸೆಮುದ್ದೇ" ಎಂದು ಕಕಲಾತಿಯಿಂದ ಹತ್ತಿರ ಕುಳ್ಳಿರಿಸಿಕೊಂಡಳು ಈ ಸಂಬೋಧನೆ ಮೊದಲವಳನ್ನು ಸ್ವಲ್ಪ ನಾಚಿಸಿತು ಆದರೆ ಆದರ ಮಾಧುರ್ಯ, ಗೌರವ ಅವಳ ಹೃದಯದ ಗಭೀರ ಅಂತಸ್ಥಳದಲ್ಲಿ ಬಹಳ ಹೊತ್ತು ನಿನದಿಸುತ್ತಿದ್ದವು ನಿಮಿಷದೊಳಗೇ ಇಬ್ಬರಲ್ಲಿಯೂ ಮಾತಿಗೆ ಮೊದಲಾಯಿತು

"ಅಲ್ಲ ಅತ್ತೆವ್ವ, ನೀವು ನನ್ನನ್ನು ಹತ್ತಿರ ಕುಳ್ಳಿರಿಸಿಕೊಂಡು ಮಾತನಾಡುವಿರಿ ಏಕೆ, ಬ್ರಾಹ್ಮಹುಡುಗಿಯೆಂದು ತಿರಸ್ಕಾರ ಇಲ್ಲವೆ?"

ಅತ್ತೆವ್ವ ತಟ್ಟನೆ ಕುಡಿಬೆರಳಿಂದ ಅಚಲೆಯ ಚುಂಬನ ತೆಗೆದುಕೊಂಡು, "ನಿನ್ನ ಕಂಡರೆ ಏಕವ್ವಾ ತಿರಸ್ಕಾರ?" ಎಂದು ನಸುನಕ್ಕು ನುಡಿದಳು "ಧರ್ಮಮತ ಬೇರೆಯಾದ ಮಾತ್ರಕ್ಕೆ ನಿನ್ನಂಥ ಹುಡುಗಿಯನ್ನು ಹತ್ತಿರ ಕುಳ್ಳಿರಿಸಿಕೊಳ್ಳದಿರುವಷ್ಟು ನಾವು—ಹಿಂದೂ ಹೆಣ್ಣು-ಮಕ್ಕಳು—ಮೂರ್ಖರೇ ಕ್ಷುದ್ರರೇ? ತಿರಸ್ಕಾರವಂತೂ ಎಲ್ಲಿಯದು?"

ಅಚಲೆ ನಾಚಿಕೊಂಡಳು "ಕ್ಷಮಿಸಿರಿ ಅತ್ತೆವ್ವಾ ನನಗೆ ಗೊತ್ತಿರಲಿಲ್ಲ ಇತರ ಸಮಾಜದ ಹೆಂಗುಸರೊಡನೆ ಬೆರೆಯುವ ಯೋಗವೇ ನನಗೆ ದೊರೆತಿರಲಿಲ್ಲ ಅವರು ನಮ್ಮನ್ನು ಬಲು ಹೀಗಳೆಯುವರೆಂದು—ಜೊತೆಯಲ್ಲಿ ಕುಳಿತರೆ ನಿಂತರೆ ಅವರು ಜಳಕ ಮಾಡುತ್ತಾರೆಂದು—ಕೇಳಿದ್ದೆನಷ್ಟೆ" ಎಂದಳು

"ಅದು ತಿರಸ್ಕಾರವಲ್ಲವಮ್ಮಾ, ಒಂದು ಆಚಾರ ನಮ್ಮ ಬಾಹ್ಯಾಚಾರದಿಂದ ನಿಮಗೆ ಹಾಗೆನಿಸುತ್ತಿದ್ದೀತು ನಿಜವಾಗಿ ನಾವು ಯಾರನ್ನೂ ಹೀಗಳೆಯುವುದಿಲ್ಲ ನಮ್ಮೂರೊಳಗೆ ಮನೆಯಲ್ಲಿ ಬಾಗದೀ ಜಾತಿಯ ಕಕ್ಕಿ ಇದ್ದಾಳೆ ಆಕೆಯಲ್ಲಿ ನನಗೆಷ್ಟು ಪ್ರೀತಿಯೆಂದು ಹೇಳಲಸಾಧ್ಯ," ಎಂದು ಸ್ವಲ್ಪ ತಡೆದು ಅತ್ತೆವ್ವ ನುಡಿದಳು "ಅಲ್ಲ, ನಿನಗೀ ವಿಚಾರ ಏಕೆ ಬಂತು? ಸುರೇಶನ ಬಾಯಿಂದ ಕೇಳಿಯೋ ಅಥವಾ ಈವೊತ್ತು ನನ್ನನ್ನು ಕಂಡೋ?"

ಸುರೇಶನ ಹೆಸರು ಕೇಳಿ ಅಚಲೆ ಒಳಗೊಳಗೆ ಲಜ್ಜಿತಳಾದಳು. "ಬಹಳ ದಿವಸದ ಹಿಂದೆ ಅವರೇ ಒಮ್ಮೆ ಎಂದಿದ್ದರು" ಎಂದಳು

"ಅವನ ಸ್ವಭಾವವೇ ಹಾಗೆ ಏನಾದರೂ ಮನಸಿನೊಳಗೆ

ಹೊಕ್ಕಿತಿಲ್ಲವೋ ನಾಲ್ಕು ಕಡೆ ಹೇಳುತ್ತ ತಿರುಗುವ ಅವನೆಂದೂ ಬ್ರಾಹ್ಮರೊಡನೆ ಸೇರುವುದಿಲ್ಲವೆಂದೇ ಅವರೆಂದರೆ ಅವನಿಗಾಗುವುದಿಲ್ಲ ಎಂದು ಜನ ತಿಳಿಯುತ್ತಾರೆ ಈ ಬಗ್ಗೆಯೇ ಎಷ್ಟೋ ಸಲ ಮಹಿಮು ನೊಡನೆ ತಿಕ್ಕಾಟವಾದದ್ದುಂಟು ಆದರೆ ಅವನನ್ನು ಚಿಕ್ಕಂದಿನಿಂದಲೂ ನಾನೇ ಒಂದು ರೀತಿಯಿಂದ ಸಾಕಿ ಸಲಹಿದವಳು ; ಅವನನ್ನು ನಾ ಪೂರಾ ಬಲ್ಲೆ , ಅವನಿಗೆ ಯಾರ ಬಗ್ಗೆಯೂ ತಿರಸ್ಕಾರವಿಲ್ಲ ಇಲ್ಲೇ ನೋಡು, ಅವನು ನಿಮ್ಮನ್ನು ನೋಡಿದಂದಿನಿಂದ— ”

ಅಚಲೆಯ ಮುಖ ನೋಡಿ ಅತ್ತೆಮ್ಮ ಮಾತು ಒಮ್ಮೆಲೆ ನಿಲ್ಲಿಸಿ ಬಿಟ್ಟಳು ತಮ್ಮ ವಿಷಯ ಕೆಲವಂತೂ ಅತ್ತೆಮ್ಮನಿಗೆ ಗೊತ್ತಾಗಿದೆ ಎಂದು ಅಚಲೆ ಭಾವಿಸಿದಳು ಕೆಲ ಹೊತ್ತು ಇಬ್ಬರೂ ಮೌನವಾಗಿದ್ದರು ಲಜ್ಜೆ ಯನ್ನು ಸಂಯಮಿಸಿಕೊಂಡು ಅಚಲೆ ಮಾತು ತಿರುಗಿಸಿದಳು “ ನೀ ನೇ ಸುರೇಶ ಬಾಬುಗಳನ್ನು ಸಾಕಿ ಸಲಹಿದಿರೋ, ಅತ್ತೆಮ್ಮ ? ”

“ ಹಾಂ, ನಾನೇ ಅವನನ್ನು ದೊಡ್ಡವನನ್ನು ಮಾಡಿದೆ ತಾಯಿ- ತಂದೆ ತೀರಿದಾಗ ಆರೇ ವರುಷದವನಿದ್ದ ನನ್ನ ತಲೆಯಮೇಲಿನ ಭಾರ ಇನ್ನೂ ಪೂರಾ ಇಳಿದಿಲ್ಲ ಪರರ ದುಃಖ ಕಷ್ಟ ಇವನಿಗೆ ಎಷ್ಟು ಸಹಿಸು ವುದಿಲ್ಲ , ತನ್ನ ಪರಿವೆಯೂ ಇಲ್ಲದೆ ಅವರ ವಿಪತ್ತಿನಲ್ಲಿ ಧುಮುಕುತ್ತಾನೆ ; ಹಗಲು ರಾತ್ರಿ ನಾನು ಹೇಗೆ ಅಂಜುತಂಜುತ ಕಳೆಯುತ್ತೇನೆಂದ— ಹೇಳಲು ಸಾಧ್ಯವಿಲ್ಲ ”

ಅಚಲೆ ಮೆಲ್ಲನೆ ಪ್ರಶ್ನಿಸಿದಳು “ ಫಯುಜಾಬಾದಿನ ಸಂಗತಿ ಕೇಳಿದಿರಾ ? ”

“ ಕೇಳಿದೆನಮ್ಮಾ ! ‘ ದೇವರೇ, ನಾ ಬದುಕಿರುವ ವರೆಗೂ ಅಂತಹ ದೇನೂ ಆಗದಿರಲಿ ಕಂಡೆಯಾ— ನನ್ನನ್ನು ಜೀವಂತವಾಗಿ ರಸಾತಲಕ್ಕೆ ಮೆಟ್ಟಬಾರದು ಕಂಡೆಯಾ ? ’ ಎಂದು ಭಗವಂತನನ್ನು ಬೇಡಿಕೊಳ್ಳುವೆ ” ಅತ್ತೆಮ್ಮನ ಕೊರಳು ಬಿಗಿಯಿತು ತಾಯಿಗರುಳಿನ ಆ ಪ್ರಾರ್ಥನೆ ಅಚಲೆಯ ಕಣ್ಣಿನಲ್ಲಿಯೂ ನೀರು ತರಿಸಿತು “ ನೀವೇಕೆ ಬೇಡ ಎನ್ನುವುದಿಲ್ಲ ಅತ್ತೆಮ್ಮ ? ” ಎಂದು ಕಳವಳದಿಂದ ಕೇಳಿದಳು

“ ಬೇಡವೆನ್ನುವುದೇ ! ನನ್ನ ಮಾತಿನಿಂದೇನಾದೀತಮ್ಮ ? ಯಾರ ಮಾತು ಖಂಡಿತ ನಾಟುವುದೋ ಅವಳನ್ನು ಎಷ್ಟೋ ವರುಷಗಳಿಂದ

ಹುಡುಕುತ್ತಿದ್ದೇನೆ ಆದರೆ ಅದು ಅಂತಿಂತಹ ಹುಡುಗಿಯರ ಕೆಲಸವಲ್ಲ. ಇವನನ್ನು ಕಟ್ಟಿಹಾಕುವಂತಹ ಹುಡುಗಿಯನ್ನು ದೇವರೇ ಹುಟ್ಟಿಸಿರದಿದ್ದರೆ ನಾನೆಲ್ಲಿಂದ ತರಲಿ ?" ಎಂದು ಅತ್ತೆವ್ವ ನಸುನಕ್ಕು ನುಡಿದಳು

ಕೆಲಹೊತ್ತು ಸುಮ್ಮನೆ ಕುಳಿತಿದ್ದು ಅಚಲೆ "ನಿಮ್ಮ ಮನಸಿನ ತಕ್ಕ ಹುಡುಗಿ ಎಲ್ಲಿಯೂ ಸಿಕ್ಕಲೊಲ್ಲಳೊ ?" ಎಂದು ಕೇಳಿದಳು

"ಅದಕ್ಕೇ ನಾ ಹೇಳಿದ್ದು, ದೇವರೇ ಕೊಡದಿದ್ದರೆ ಯಾರಿಗೆಲ್ಲಿ ಸಿಕ್ಕುವಳೆಂದು ಈ ವಿಷಯಕ್ಕೆ ಎಂದೂ ಗಮನವನ್ನೇ ಕೊಡದಿದ್ದ ಸುರೇಶ, ಒಂದಿನ ತಾನಾಗಿಯೇ 'ಅತ್ತೆವ್ವ, ನಿನಗೊಬ್ಬ ಕೈಯಾಳು ತರುವೆ' ಎಂದು ಹೇಳಿದಾಗ ನನಗೆ ಹಿಡಿಸಲಾರದಷ್ಟು ಹಿಗ್ಗಾಯಿತು. 'ನಿನ್ನ ಮುಖದ ಮೇಲೆ ಹೂ, ಚಂದನ ಸುರಿಯಲಿ, ನಿನ್ನ ಮಾತು ನಿಜವಾಗಲಿ !' ಎಂದು ಮನಸಿನೊಳಗೇ ಹರಕೆಹೊತ್ತೆ 'ನನ್ನನ್ನೊಮ್ಮೆ ಕರೆದುಕೊಂಡು ಹೋಗಿ ತೋರಿಸು' ಎಂದೆಷ್ಟು ಹೇಳಿದೆ ನಗುನಗುತ್ತ, 'ಆಶೀರ್ವಾದದ ದಿನ ಇಬ್ಬರೂ ಹೋಗಿ, ಮುಹೂರ್ತ ಗೊತ್ತು ಮಾಡಿ ಕೊಂಡು ಬರುವಾ ಅತ್ತೆವ್ವ,' ಎಂದ ಆ ಮೇಲೊಂದು ದಿನ ಪಕ್ಕನೆ ಹೇಳಿದ 'ಹೊಂದಿಕೆಯಾಗಲಿಲ್ಲ, ಅತ್ತೆವ್ವ, ನಾ ರಾತ್ರಿಯ ಗಾಡಿಯಿಂದ ಪಶ್ಚಿಮಕ್ಕೆ ಹೋಗುವೆ' ಯಾರೊಡನೆ ಹೊಂದಿಕೆ ಬಿಚ್ಚಿ ಹೇಳೆಂತ ನಾನೆಷ್ಟು ಕಾಲುವರಿದೆ, ಹೇಳಲಿಲ್ಲ ಅಂದೇ ರಾತ್ರಿ ಹೊರಟುಹೋದ ಬರೀ ನಮ್ಮ ಹುಡುಗನ ಇಚ್ಛೆ ಸಾಲದು, ಹುಡುಗಿಯ ಜನ್ಮಜನ್ಮಾಂತರದ ತಪಸ್ಯೆಯೂ ಬೇಕು ಎಂದು ನಾನೆಂದುಕೊಂಡೆ ಹೌದೋ ಅಲ್ಲವೊ ?"

ಆ ಹುಡುಗಿ ಯಾರೆಂಬುದು ಆಕೆಗೆ ತಿಳಿದಿಲ್ಲವೆಂದು ಅಚಲೆಗೆ ಮನ ವರಿಕೆಯಾಯಿತು ಎದೆಯ ಮೇಲಿನ ಕಲ್ಲು ಇಳಿದಂತೆ ಎನಿಸಿತು ನಿಜ. ಆದರೆ ಆ ಕಲ್ಲು ಸುಮ್ಮನೆ ಹೋಗಿಲ್ಲ, ಹೃದಯವನ್ನು ಜಜ್ಜಿ ಹೋಗಿದೆ ಎಂಬುದು ಮರುಕ್ಷಣವೇ ಅವಳ ಅನುಭವಕ್ಕೆ ಬಂದಿತು

ಊಟದ ಏರ್ಪಾಡು ಆಯಿತು ಅತ್ತೆವ್ವ ಅಚಲೆಯನ್ನು ಬೇರೆಯಾಗಿ ಕೂಡಿಸಿ ಉಣಬಡಿಸಿದಳು ಊಟವಾದಮೇಲೆ ಎಲ್ಲ ಮನೆಯನ್ನು ತೋರಿಸಿದಳು "ದೇವರ ದಯೆಯಿಂದ ಏತಕ್ಕೂ ಕೊರತೆಯಿಲ್ಲ ಆದ ರೇನು! ಲಕ್ಷ್ಮೀಹೀನ ವೈಕುಂಠ!" ಎಂದಳು ನಮಸ್ಕಾರ ಮಾಡಿ ಹೊರಡು ವಾಗ ಅತ್ತೆವ್ವ ಅಚಲೆಯ ಕೈ ಹಿಡಿದು ಸಂಕೋಚಪಡುತ್ತ "ನೀನೇನೂ

ಎಂದುಕೊಳ್ಳುವುದಿಲ್ಲವಾದರೆ ಒಂದು ಕೇಳುವೆ ಅಚಲಾ, ” ಎಂದಳು.

ಅಚಲೆ ಅವಳ ಕಡೆ ನೋಡಿ ನಸುನಕ್ಕಳು ಮಾತ್ರ ಅತ್ತೆಮ್ಮ ಎಂದಳು “ ಸುರೇಶನಿಂದ ನಿನ್ನ ಹಾಗೂ ಮಹಿಮನ ವಿಷಯ ಎಲ್ಲ ಕೇಳಿದ್ದೇನಮ್ಮಾ! ಅವನು ಬಡವನೆಂದು ನಿಮ್ಮ ತಂದೆಯ ಮನಸಿರಲಿಲ್ಲ ವಂತೆ ಕೇವಲ ನಿನಗೋಸುಗ—”

ಅಚಲೆ ಮುಖ ತಗ್ಗಿಸಿ “ ಹೂಂ ” ಎಂದಳು

“ ಇದೇ ಲೇಸಮ್ಮ ಪ್ರೇಮದ ಮುಂದೆ ಹಣ ಕಾಸು ಯಾವ ತೊಪ್ಪಲು! ಮನಸಿಗೇನು ಕಿಂಕರ ಮಾಡಿಕೊಳ್ಳಬೇಡಮ್ಮಾ ಮಹಿಮ ನನ್ನು ನಾನು ಚೆನ್ನಾಗಿ ಬಲ್ಲೆ ಇಂಥ ಉಚ್ಚಪ್ರೇಮವನ್ನು ಅವನೆಂದೂ ಅನಾದರಿಸಲಾರ ನಿನಗೆಷ್ಟೇ ಕಷ್ಟವಾಗಲೊಲ್ಲದೇಕೆ, ದೇವರನುಗ್ರಹದಿಂದ ಒಂದಿನ ಎಲ್ಲ ಸಾರ್ಥಕವಾಗುವುದು ”

ಅಚಲೆ ಬಾಗಿ ಮತ್ತೊಮ್ಮೆ ಅವಳ ಪಾದಧೂಳಿ ಕೊಂಡಳು ಅವಳು ಅಚಲೆಯ ಗದ್ದ ಹಿಡಿದು ಮುದ್ದಿಸಿ ವೃದುಕಂಠದಿಂದ, “ ಆಹಾ, ನನಗೂ ಇಂಥ ಒಬ್ಬ ಸೊಸೆ ಸಿಕ್ಕರೆ! ” ಎಂದಳು.

ಸುರೇಶ ತಂದೆ ಮಗಳಿಬ್ಬರನ್ನೂ ಬಂಡಿ ಹತ್ತಿಸಿ ನಿಶ್ಶಬ್ದವಾಗಿ ತಿರುಗಿದ ಲಾಟೀನಿನ ಬೆಳಕಿನಲ್ಲಿ ಅವನ ಮುಖ ನಿಮಿಷಮಾತ್ರ ಅಚಲೆಯ ನೋಟವನ್ನು ಸೆಳೆಯಿತು ಅಲ್ಲಿ ಅದೇನಿತ್ತೋ—ಅದವ್ಯಾವಾದ ಬಾಷ್ಪೋಚ್ಛ್ವಾಸ ಅವಳ ಕೊರಳತನಕ ಉಕ್ಕಿ ಬಂತು ಬೀದಿಯೊಳಗೆ ಜನಸಂದಣಿ ಕಡಿಮೆಯಾಗಿತ್ತು ಆ ಕಡೆ ನೋಡುತ್ತಿದ್ದ ಅವಳಿಗೆ ಈವರೆಗೆ ಕಂಡುದೇನು ಕನಸೋ ಎಂಬಂತಾಯಿತು ಕನಸು ಸುಖದ್ದೋ ದುಃಖದ್ದೋ ಹೇಳು ವುದು ಅಶಕ್ಯ ಕೇದಾರಬಾಬುಗಳ ತಲೆಯೊಳಗೆ ಸುರೇಶನ ವೈಭವವೇ ತುಂಬಿತ್ತೇನೋ ಎಷ್ಟೋ ಹೊತ್ತು ಸುಮ್ಮನಿದ್ದವರು ಒಮ್ಮೆಲೆ ಉಸಿರ್ಗ ರೆದು. “ ಭಾರಿ ದೊಡ್ಡ ಮನುಷ್ಯ! ” ಎಂದರು ಮಗಳಿಂದ ಏನೂ ಉತ್ತರ ಸಿಕ್ಕದುದಕ್ಕೆ ನಿರುತ್ಸಾಹರಾಗಿ ಅವರು ಉಳಿದ ಹಾದಿಯನ್ನು ಮೌನವಾಗಿಯೇ ಕಳೆದರು

## ೧೪

ಅಚಲೆಯ ಮದುವೆಯಿಂದು ವಿವಾಹ ಮಂಟಪದ ಹಾದಿಯಲ್ಲಿ ಸುರೇಶನನ್ನು ಒಂದು ಕ್ಷಣ ಕಂಡುದೇ ಮುಂದೆಲ್ಲಿ ಅಂತರ್ಧಾನನಾದನೋ

ಗೊತ್ತೇ ಇಲ್ಲ

ಮದುವೆಯಾಯಿತು ಒಂದೆರಡು ದಿನ ಅಚಲೆಯ ಮನಸಿನೊಳಗೆ ವಿಪ್ಲವ ನಡೆದಿತ್ತು, ಅಂದಿನ ಅತ್ತಿಮ್ಮನ ಮಾತುಗಳು ಏನು ಮಾಡಿದರೂ ಮರೆಯದಾಗಿತ್ತು ಇಂದು ಅದರಿಂದ ಬಿಡುಗಡೆಯಾದಂತಾಯಿತು

ಮಹಿಮನ ಅಚಲ ಗಾಂಭೀರ್ಯ ಇಂದೂ ಅಚಲವೆ ಆನಂದ-ನಿರಾನಂದಗಳ ಯಾವ ಚಿಹ್ನವೂ ಅವನ ಮುಖದ ಮೇಲಿರಲಿಲ್ಲ ಆದರೂ ಶುಭದೃಷ್ಟಿ ಸಮಯದಲ್ಲಿ ಆ ಮುಖವನ್ನು ನೋಡಿ ಅಚಲೆಯ ಹೃದಯವೆಲ್ಲ ಸವಿಸೊಗಸುಗಳಿಂದ ತುಂಬಿತ್ತು ಅಂತರಂಗದಲ್ಲಿಯೇ ಪತಿಯ ಅಡಿಗೆರಗಿ, "ಪ್ರಭೂ, ನನಗಿನ್ನು ಭಯವಿಲ್ಲ ನಿನ್ನೊಡನೆ ಎಲ್ಲಿದ್ದರೂ ಹೇಗಿದ್ದರೂ ನನಗದು ಸ್ವರ್ಗ ನಿನ್ನ ಗುಡಿಸಲೇ ನನಗೆ ಅರಮನೆ' ಎಂದುಕೊಂಡಳು.

ಅತ್ತೆಮನೆಗೆ ಹೋಗುವ ದಿನ ತಂದೆ ಅಂಗಿತೋಳಿನಿಂದ ಕಣ್ಣೊರಸಿಕೊಳ್ಳುತ್ತ "ತಂಗೀ, ಪತಿಯೊಡನೆ ದುಃಖದಾರಿದ್ರ್ಯಗಳನ್ನು ಅಂಗೀಕರಿಸಿ, ಜೀವನ ಪಥದಲ್ಲಿ ನಿರ್ವಿಘ್ನವಾಗಿ ಮುಂದೆ ಸಾಗು, ದೇವರು ನಿನಗೆ ಕಲ್ಯಾಣ ಮಾಡುವನು" ಎಂದು ಹರಸಿ ಕಣ್ಣೊರಸಿಕೊಳ್ಳುತ್ತಲೇ ಪಕ್ಕದ ಕೋಣೆಯೊಳಗೆ ಹೋದರು.

ಶ್ರಾವಣದ ಒಂದಿನ ಹೊತ್ತು ತಿರುಗಿದ ಮೇಲೆ ಅಚಲೆ ಪಲ್ಲಕ್ಕಿಯಲ್ಲಿ ಪಯಣಮಾಡಿದಳು ಮೇಲ ಗಡೆ ಮಳೆಗರೆಯುವ ಮೋಡಮುಚ್ಚಿದ ಆಕಾಶ, ಕೆಳಗೆ ಕಿರಿದಾದ ಕೆಸರು ಕೊಳಚೆಯ ಕಾಡುಹಾದಿ ಈ ಹಾದಿಯೊಳಗೇ ಬಹುಶಃ ಅಚಲೆಯ ನವವಿವಾಹದ ಅರ್ಧಮರ್ಧ ಸೌಂದರ್ಯ ನಶಿಸಿ ಹೋಗಿರಬೇಕು

ಅಚ್ಚಿನ ಅಕ್ಷರಗಳಿಂದಲೇ ಅವಳಿಗೆ ಹಳ್ಳಿಯ ಜ್ಞಾನ ಆ ಪರಿಚಯದಲ್ಲಿ ದುಃಖ ದಾರಿದ್ರ್ಯಗಳ ಸಹಸ್ರ ಸಂಕೇತಗಳಿದ್ದರೂ ಸಾಲುಸಾಲಿಗೂ ಕಾವ್ಯವಿತ್ತು, ಸೌಂದರ್ಯವಿತ್ತು ಪಲ್ಲಕ್ಕಿಯಿಳಿದು ಮನೆಯೊಳಗೆ ಹೋಗಿ ನಾಲ್ಕೂ ನಿಟ್ಟಿಗೆ ನೋಡಿದಳು—ಎಲ್ಲಿಯೂ ಕವಿತ್ವ ಸೌಂದರ್ಯ ಗೋಚರಿಸಲಿಲ್ಲ ತನ್ನ ಕಲ್ಪನಾಸೃಷ್ಟಿಯೊಳಗಿನ ಹಳ್ಳಿ ಸಾಕ್ಷಾತ್ ಸೃಷ್ಟಿಯಲ್ಲಿ ಇಷ್ಟೊಂದು ನಿರಾನಂದವಿದ್ದೀತು, ನಿರ್ಜನವಿದ್ದೀತು, ಅಲ್ಲಿಯ ಮಣ್ಣುಮನೆಗಳು ತೀವ ಬಸಿಯುತ್ತಿದ್ದಾವು, ಕೋಣೆಗಳು ಕತ್ತಲುಗವಿಯಾಗಿದ್ದಾವು, ಕಿಡಿಕಿಗಳು ಕಿರಿದಾಗಿ ಅಂಪಗೇಡಿಯಾಗಿದ್ದಾವು, ಬಿದಿರಿನ ಚಪ್ಪರ

ಅಸಡ್ಡಾಳ ಸುರಿಯುತ್ತಿದ್ದಾವು— ಎಂದು ಅವಳು ಕನಸಿನಲ್ಲಿಯೂ ಕಂಡಿರಲಿಲ್ಲ ಇಂತಹ ಕೀಳ್ಮನೆಯೊಳಗೆ ಅವಳು ಬಾಳುವೆ ಮಾಡಬೇಕು! ಅವಳೆದೆ ಝಲ್ಲೆಂದಂತಾಯಿತು ಪತಿ ಸೌಖ್ಯ, ವಿವಾಹದ ಆನಂದ ಬಿಸಿಲ್ಗುದುರೆಯಂತೆ ಕ್ಷಣದೊಳಗೆ ಬಯಲಾಯಿತು ಮನೆಯೊಳಗೆ ಅತ್ತೆ ಮಾವ, ಅತ್ತಿಗೆನಾದಿನಿ ಯಾರೂ ಇಲ್ಲ ದೂರಸಂಬಂಧದ ಅಜ್ಜಿಯೊಬ್ಬಳು ಮದುಮಕ್ಕಳನ್ನು ಗೃಹಪ್ರವೇಶ ಮಾಡಿಸಲು ಸ್ವಯಂಪ್ರೇರಣೆಯಿಂದ ಬಂದಿದ್ದಳು ತಾನು ಹುಟ್ಟಿದಾರಭ್ಯ ನೋಡುತ್ತ ಬಂದ ವಿವಾಹಲಕ್ಷಣ ವೊಂದನ್ನೂ ಕಾಣದೆ ಅವ್ಯಕ್ತ ವಿಸ್ಮಯದಿಂದ ಸುಮ್ಮನೆ ನಿಂತುಬಿಟ್ಟಳು. ಬಳಿಕ ವಧುವಿನ ಕೈಹಿಡಿದು ಒಳಗೆ ಕರದೊಯ್ದು ಕುಳ್ಳಿರಿಸಿದಳು. ವಧುವನ್ನು ನೋಡಬಂದ ಹಳ್ಳಿ ಹೆಂಗುಸರು ಅಚಲೆಯ ವಯಸ್ಸನ್ನು ಅನುಮಾನಿಸಿ ಒಬ್ಬರೊಬ್ಬರ ಮೋರೆ ನೋಡಿ, ಮೈಕೈ ತಿವಿದಾಡಿದರು. ಅವರು ಹೋಗುವಾಗ ಪಿಸುಗುಟ್ಟಿದ 'ಬೇಹ್ಮ' 'ಮೇಲಚ್ಚ' ಇತ್ಯಾದಿ ಸವಿನುಡಿಗಳು ಅಚಲೆಯ ಕಿವಿಗೆ ಬಿದ್ದವು ತಡವಿಲ್ಲದೆ ಊರ ತುಂಬ ಸುದ್ದಿ ಹರಡಿತು ಹೌದು, ಮಹಿಮ ನಿಜವಾಗಿಯೂ ಮ್ಲೇಚ್ಛಳನ್ನು ಮದುವೆಯಾಗಿದ್ದಾನೆ ಎಂದು

ಮನೆಗೆ ಬಂದವರು ಹೊರಟುಹೋದರು ಅಜ್ಜಿ, "ವಧೂ, ನಾನಿನ್ನು ಬರುವೆನಕ್ಕಾ ಬಹಳ ದೂರ ಹೋಗಬೇಕು, ಬಿಟ್ಟರ ನಡಿಯು ವಂತಿಲ್ಲ" ಎಂದು ಒಪ್ಪಿಗೆಗಿಪ್ಪಿಗೆಗೆ ಅವಕಾಶವನ್ನೇ ಕೊಡದ ಹೊರಟು ಹೋದಳು ಮಹಿಮ ಬ್ರಾಹ್ಮಳನ್ನು ಮದುವೆಯಾಗುವನೆಂಬ ಗುಜು ಗುಜು ಯಥಾರ್ಥವಾಗುವುದೆಂದು ಅವಳೆಣಿಸಿರಲಿಲ್ಲ ಹಾಗಿದ್ದರ ಅವಳು ಈ ಕಡೆ ಒಡಹಾಯುತ್ತಲೇ ಇರಲಿಲ್ಲ

ಮನೆಯಾಳು ಯದು, ಉಡಿಯಾ ಬ್ರಾಹ್ಮಣ (ಅಡಿಗೆಯವ), ಅಚಲೆಯೊಡನೆ ಬಂದಿದ್ದ ದಾಸಿ ಹರಿಯ ತಾಯಿ ಇಷ್ಟೇ ಜನ — ಮನೆ ಭಣಭಣ ಸುರಿಯುತ್ತಿತ್ತು ನಿಂತಿದ್ದ ಮಳೆ ಮತ್ತೆ ಧೋ ಧೋ ಸುರಿಯ ತೊಡಗಿತು ಹರಿಯ ತಾಯಿ ಮೆಲ್ಲನೆ ನುಡಿದಳು "ಇಂಥ ಮನೆಯನ್ನು ಎಲ್ಲಿಯೂ ನೋಡಲಿಲ್ಲ ಬಿಡು ಮನೆಯೊಳಗೆ ಯಾರೊಬ್ಬರೂ ಇಲ್ಲ!" ಅಚಲೆ ಮುಖ ತಗ್ಗಿಸಿಕೊಂಡು ಸ್ತಬ್ಧವಾಗಿ ನಿಂತಿದ್ದಳು ಅನ್ಯಮನಸ್ಕಳಂತೆ "ಹೂಂ" ಎಂದಿಷ್ಟೇ ಎಂದಳು ಹರಿಯ ತಾಯಿ ಎಂದಳು "ಅಳಿಯ

ದೇವರಾದರೂ ಎಲ್ಲಿ? ಬಂದೊಡನೊಮ್ಮೆ ಕಂಡಿದ್ದವರು ಈಗೆಲ್ಲಿ ಹೋದರೋ!"

ಅಚಲೆ ಉತ್ತರ ಕೊಡಲಿಲ್ಲ ಆ ವನಕಾನನಪರಿವೃತ ಶೂನ್ಯಪುರಿಯಲ್ಲಿ ಹರಿಯ ತಾಯಿಯ ಮನಸು ಎಷ್ಟು ಉದ್ಭ್ರಾಂತವಾಗಿದ್ದರೂ ಅಚಲೆಗೆ ಒಂದಿಷ್ಟು ಹುರುಪುಗೊಡಲೆಂದು, "ಭಯವೇನಮ್ಮಾ, ಕೆರೆ ಬಾವಿಯಲ್ಲಿ ಬೇರೆ ಬಿದ್ದಿಲ್ಲ! ಅಳಿಯದೇವರು ಬಂದೊಡನೆ ಎಲ್ಲ ಸರಿ ಹೋಗುವುದು, ಅಲ್ಲಿಯತನಕ ಬಟ್ಟೆಬಿಡು, ನಾನು ತೂರಂಕ ತೆರೆದು ಬಟ್ಟೆಬರಿ ತೆಗೆಯುವೆ," ಎಂದಳು

"ಈಗಿರಲೊಲ್ಲದೇಕೆ ಬಿಡು" ಎಂದು ಅಚಲೆ ಹಾಗೆಯೇ ಮುಖ ಕೆಳಗೆಹಾಕಿಕೊಂಡು ಕುಳಿತಳು ಅವಳ ಜೀವನದ ಸವಿಕಂಪು ಎಲ್ಲವೂ ಲಯವಾಗುತ್ತಲಿತ್ತು

ಮಳೆ ಒತ್ತರಿಸಿ ಬಂತು ಆ ರಭಸದ ಸುರಿಮಳೆಯಲ್ಲಿ ಹಗಲ ಕೊನೆಯ ಮಸಕುಬೆಳಕು ಯಾವಾಗ ಮಾಯವಾಯಿತು, ದಟ್ಟವಾಗಿ ಮೋಡಗವಿದ ಆಕಾಶವನ್ನು ಭೇದಿಸಿಕೊಂಡು ಹಳ್ಳಿಯ ಹೊಲಸು ಮನೆಯಲ್ಲಿ ಸಂಜೆ ಯಾವಾಗ ಇಳಿದು ಬಂದಿತು ಯಾವುದೂ ಗೊತ್ತಾಗಲಿಲ್ಲ ಯದು ಬಂದು ಹರಿಕೇನ ಲಂದನ ನಡುವೆ ಇಟ್ಟ ಹರಿಯ ತಾಯಿ ಕೇಳಿದಳು "ಅಳಿಯದೇವರು ಎಲ್ಲಿದ್ದಾರೆ?"

"ಯಾರಿಗೆ ಗೊತ್ತು!" ಎಂದು ಅವನು ಹೋಗತೊಡಗಿದ. "ಯಾರಿಗೆ ಗೊತ್ತೆಂದರೇನೋ? ಹೊರಗಿಲ್ಲವೇ ಅವರು?" ಎಂದು ಹರಿಯ ತಾಯಿ ಕೇಳಿದಳು "ಇಲ್ಲ" ಎಂದು ಯದು ಹೊರಟುಹೋದ ಬಂದವರ ಬಗ್ಗೆ ಅವನಿಗೆ ಸೇರಿಕೆಯಿಲ್ಲ ಎಂಬುದು ಚೆನ್ನಾಗಿಯೇ ವ್ಯಕ್ತವಾಯಿತು ಅವಳು ಅಚಲೆಯೊಡನೆ ಭಯಶಂಕೆಗಳಿಂದ ಮೆಲ್ಲನೆ ನುಡಿದಳು "ನನಗೇನೋ ಲಕ್ಷಣ ಚೆಲೋ ಕಾಣಲೊಲ್ಲದು ಬಾಗಿಲ ಚಿಲಕ ಹಾಕಲೇ?"

ಅಚಲೆ ಅಚ್ಚರಿಯಿಂದ "ಏಕೆ?" ಎಂದಳು

ಹರಿಯ ತಾಯಿ ಚಿಕ್ಕಂದಿನಲ್ಲಿಯೇ ಊರುಬಿಟ್ಟು ಕಲಿಕಾತೆಗೆ ಬಂದವಳು, ತಿರುಗಿ ಹೋಗಿಲ್ಲ ಹಳ್ಳೂರಿನ ಕಳ್ಳರುಕಾಕರು ರಕ್ಕರು ಮೊದಲಾದವರ ಕತೆಗಳ ಹೊರತು ಉಳಿದಾವುದೂ ಸ್ಪಷ್ಟವಾಗಿ ನೆನಪಿನಲ್ಲಿಲ್ಲ ಅವಳು ಹೊರಗಿನ ಕತ್ತಲೆಯ ಕಡೆ ಚಕಿತದೃಷ್ಟಿಯಿಂದ ನೋಡಿ,

ಅಚಲೆಯ ಮೈಗೆಹತ್ತಿ ಸರಿದು "ಹಾಳು ಹಳ್ಳಿ— ಏನೂ ಹೇಳಲಿಕ್ಕೆ ಬರುವುದಿಲ್ಲ-" ಎಂದಳು ಅಷ್ಟೊತ್ತಿಗೆ "ಅಜ್ಜಿ ಎಲ್ಲಿದ್ದಾಳೆ?" ಎಂಬ ಕೂಗು ಒಳಂಗಳದಿಂದ ಕೇಳಿಸಿತು

ಇಪ್ಪತ್ತಿಪ್ಪತ್ತೈದು ವರ್ಷದ ಬಡಕಾಟ ಹುಡುಗಿಯೊಬ್ಬಳು ತೋಯಿಸಿಕೊಂಡು ಬಂದು ಬಾಗಿಲ ಬಳಿ ನಿಂತಳು "ಮೊದಲು ನಮಸ್ಕಾರ ಮಾಡಿ ಬಟ್ಟೆ ಬಿಡುವೆನಕ್ಕಾ" ಎಂದು ಅಚಲೆಯ ಪಾದದ ಬಳಿ ಹಣೆಯಿಟ್ಟು ನಮಸ್ಕರಿಸಿದಳು ಲಂರನ ಎತ್ತಿ ಅಚಲೆಯ ಮೋರೆಯ ಹತ್ತಿರ ಹಿಡಿದು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿ ಚೀರಿದಳು "ಅಜ್ಜಯ್ಯ, ಏ ಅಜ್ಜಯ್ಯ—"

ಮಹಿಮ ಬಂದೊಡನೆ ಈ ಹುಡುಗಿಯನ್ನು ಕರೆಯುವುದಕ್ಕೇ ಹೋಗಿದ್ದ. ಆ ಕೋಣೆಯಿಂದ "ಏನಮ್ಮಾ ಮೃಣಾಲ?" ಎಂದ

"ಇಲ್ಲಿ ಬಾಯಿಲ್ಲಿ, ಹೇಳುತ್ತೇನೆ—"

ಮಹಿಮ ಬಾಗಿಲಹತ್ತಿರ ಬಂದು ಕೇಳಿದ "ಏನು?"

ಮೃಣಾಲ ಲಂರನಿನ ಬೆಳಕಿನಲ್ಲಿ ಅಚಲೆಯ ಮುಖವನ್ನು ಮತ್ತೊಮ್ಮೆ ಚೆನ್ನಾಗಿ ನೋಡಿ, "ನೀನು ಅಖಂಡಾಯುಷಿಯಾಗಜ್ಜಯ್ಯ! ನನ್ನನ್ನು ಮಾಡಿಕೊಂಡಿದ್ದರೆ ಮೋಸಹೋಗುತ್ತಿದ್ದೆ!" ಎಂದಳು

ಮಹಿಮ ಗದರಿಸಿ ಹೇಳಿದ "ನೀನು ನಾ ಹೇಳಿದ್ದು ಕೇಳುವುದಿಲ್ಲವೇ ಮೃಣಾಲ? ಇನ್ನೂ ಈ ಚೇಷ್ಟೆಯೆ?"

"ಭಲೆ, ಚೇಷ್ಟೆಯೇನು!" ಎಂದು ಅಚಲೆಯ ಕಡೆ ನೋಡಿ ಮುಗುಳುನಗೆ ನಕ್ಕು ಮೃಣಾಲಳೆಂದಳು "ನಿಜವಾಗಿ ಅಜ್ಜಿ—ಚೇಷ್ಟೆಯಲ್ಲ ನಿನ್ನ ನಲ್ಲನನ್ನೇ ಕೇಳು—ಒಂದು ಕಾಲದಲ್ಲಿ ಅವನು ನನಗೆ ಮೆಚ್ಚಿದ್ದನೋ ಇಲ್ಲವೊ?"

ಮಹಿಮನೆಂದ: "ಹಾಗಾದರೆ ನೀ ಬಡಬಡಿಸಿಕೋ, ನಾ ಹೋಗುವೆ."

"ಹೋಗಲ್ಲ. ನಿನ್ನನ್ನು ಯಾರು ಕಟ್ಟಿಹಾಕಿದ್ದಾರೆ?" ಎಂದು ಮೃಣಾಲ ಅಚಲೆಯ ಗದ್ದ ಹಿಡಿದು ಅಲುಗಾಡಿಸಿ ಎಂದಳು "ಒಳ್ಳೆಯದು ನೀನೇ ಹೇಳು ಅಜ್ಜಿ—ಈ ಮನೆಗೆ ನಾನೇ ಗೃಹಿಣಿಯಾಗತಕ್ಕವಳು; ಆದರೆ ನಮ್ಮ ಸುಟ್ಟಮೋರೆ ಅವ್ವ ಇವನ ಕಿವಿಯಲ್ಲಿ ಏನು ಊದಿದಳೋ, ಪಾಪಿವನ ಕಣ್ಣಿಗೆ ವಿಷವಾದೆ ಮನಸಿಗೆ ತಾಪವಾಗಲಿಕ್ಕಿಲ್ಲವೆ?. ಏನೋ ಇರುದು, ಘೋಷಾಲ ಮಹಾಶಯರು ಎಲ್ಲಿ ಹೋದರು?"

"ಕೈಕಾಲು ತೊಳೆಯಲಿಕ್ಕೆ ಕೆರೆಗೆ ಹೋಗಿದ್ದಾರೆ"

"ಆಂ, ಈ ಕತ್ತಲೆಯಲ್ಲಿ ಕೆರೆಗೇ?"

ಮೃಣಾಲಿಳ ನಗುಮೊಗ ಮುಹೂರ್ತದಲ್ಲಿ ದುಶ್ಚಿಂತೆಯಿಂದ ಮ್ಲಾನವಾಯಿತು ವ್ಯಗ್ರಳಾಗಿ ಹೇಳಿದಳು "ಯದೂ, ಹೋಗಪ್ಪ, ಕೆರೆಗೊಂದಿಷ್ಟು ದೀಪ ತೆಗೆದುಕೊಂಡು ಹೋಗು ಮುದುಕ ಜನ ಹೇಳಿ ಕೇಳಿ, ಈ ಕತ್ತಲೆಯೊಳಗೆಲ್ಲಿಯಾದರೂ ಕಾಲುಗೀಲು ಜಾರಿದರೆ ಕೈಕಾಲು ಮುರಿದುಕೊಂಡಾರು" ಎಂದು ಕೆಲಹೊತ್ತಿನ ಮೇಲೆ ಅಚಲೆಯ ಕಡೆ ನೋಡಿ ನಕ್ಕು ನುಡಿದಳು "ಏನು ಕಟ್ಟಿ ಹಣೆಬರಹವೋ ನನ್ನದು! ಐವತ್ತೆರಡು ವರ್ಷದ ಮುದುಕನನ್ನು ಹುಡುಕಿ ತಂದು ನನಗೆ ಗಂಟು ಹಾಕಿದಾರೆ ಅವರ ಸೇವೆ ಮಾಡಿ ಮಾಡಿ, ಅವರನ್ನು ಸಂಬಾಳಿಸಿ ಸಂಬಾಳಿಸಿ ನನ್ನ ಜೀವ ಹಣ್ಣಾಯಿತು ಇರಲಿ, ಆ ಕೋಣೆಗೆ ಹೋಗಿ ಒದ್ದೆಬಟ್ಟೆ ಬಿಟ್ಟು ಬರುತ್ತೇನೆ, ಆಮೇಲೆ ಮಾತನಾಡುವಾ ಸವತಿಯಾದರೇನಾಯಿತು, ನನ್ನ ಮೇಲ ಸಿಟ್ಟಿಗೇಳುವುದಿಲ್ಲವಾದರ ಒಂದು ಮಾತು—ನನ್ನ ಮುದುಕನಲ್ಲಿ ನಿನಗೂ ಬೇಕಾದರ ಪಾಲು ಕೊಡುತ್ತೇನೆ—" ಎನ್ನುತ್ತ ಗಹಗಹಿಸಿ ನಗುತ್ತ ಭರಭರ ಹೋಗಿಬಿಟ್ಟಳು

ಈ ತೆರನ ನಗೆ ಚೇಷ್ಟೆಗಳನ್ನು ಅಚಲೆ ಎಂದೂ ಅರಿಯಳು ಇದೆಲ್ಲ ಅವಳಿಗೆ ಹೇಸಿಕೆಯೆನಿಸಿ ಲಜ್ಜೆಯಿಂದ ಕುಗ್ಗಿಹೋದಳು ಇಂತಹ ನಿರ್ಲಜ್ಜ ಪ್ರಗಲ್ಭತೆ ಯಾವ ಸ್ತ್ರೀಯಲ್ಲಿಯಾದರೂ ಇದ್ದೀತೆಂದೂ ಅವಳು ಭಾವಿಸಲಾರಳು ಆದರೂ ಅವಳ ಆಗಮನದಿಂದ ತನ್ನ ವೇದನೆ ಎಷ್ಟೋ ಹಗುರಾದಂತೆ ಅವಳಿಗನಿಸಿತು ಈಕೆ ಯಾರು, ಎಲ್ಲಿಯವಳು, ತನಗೇನಾಗಬೇಕು ಎಲ್ಲವನ್ನೂ ತಿಳಿದುಕೊಳ್ಳಲು ಅಚಲೆ ಹಾತೊರೆದಳು

ಹರಿಯ ತಾಯಿ "ಇವಳು ಯಾರು ತಂಗೀ! ಒಳ್ಳೇ ಉಲ್ಲಾಸದವಳಾಗಿ ಕಾಣುತ್ತಾಳೆ!" ಎಂದಳು ಅಚಲೆ ಗೋಣು ಹಾಕಿ 'ಹಾಂ' ಎಂದು ಮಾತ್ರ ನುಡಿದಳು.

ಮೃಣಾಲ ಬಟ್ಟೆ ಬದಲಿಸಿ ಬಂದಳು "ಬರೀ ಹುಡುಗಾಟಿಕೆ ಮಾಡಿ ಹೋದೆ ನನ್ನ ಪರಿಚಯವನ್ನೇ ಮಾಡಿ ಕೊಡಲಿಲ್ಲ ಪರಿಚಯ ಎನ್ನಲಿಕ್ಕೆ ಇದೆಯಾದರೂ ಏನು? ನಿಮ್ಮ ವರನಿದ್ದಾನಲ್ಲ, ಈತ ನನ್ನ ತಾಯಿಗೆ ತಂದೆಯಾಗಬೇಕು ಆದುದರಿಂದ ಚಿಕ್ಕಂದಿನಿಂದಲೂ ಈತನನ್ನು

ಅಜ್ಜಯ್ಯ ಎಂದು ಕರೆಯುತ್ತಿದ್ದೇನೆ" ಎಂದು ಸ್ವಲ್ಪ ತಡೆದು ಮೃಣಾಲ ಮುಂದೆಂದಳು "ನಮ್ಮಪ್ಪನಿಗೂ ನಿಮ್ಮ ಮಾವನಿಗೂ ಬಹಳ ಸ್ನೇಹ ಬಂಡಿ ಹಾಯ್ದುದರಿಂದ ಅಪ್ಪನ ಕೈ ಮುರಿಯಿತು, ಕೆಲಸ ಹೋಯಿತು ಅಂದಿನಿಂದ ನಿಮ್ಮ ಮಾವ ನಮ್ಮೆಲ್ಲರನ್ನು ತಮ್ಮಲ್ಲಿಯೇ ತಂದಿಟ್ಟು ಕೊಂಡರು ಆಮೇಲೆಷ್ಟೋ ದಿವಸಕ್ಕೆ ನಾ ಹುಟ್ಟಿದೆ ಅಣ್ಣಾ ಆಗೆಂಟು ವರುಷದವ ಇವ ಹುಟ್ಟಿದಾಗಲೇ ಇವನ ತಾಯಿ ತೀರಿಕೊಂಡಿದ್ದಳು. ಇವನ ಅಣ್ಣಂದಿರಿಬ್ಬರು ಡಿಫಥಿರಿಯಾದಿಂದ ಮೊದಲೇ ಸತ್ತಿದ್ದರು ಆದುದರಿಂದ ನಮ್ಮ ತಾಯಿ ಬರುತ್ತಲೇ ಈ ಮನೆಯ ಯಜಮಾನಿಯಾದಳು. ನಮ್ಮ ತಂದೆ ತೀರಿಕೊಂಡ ಮೇಲೆಯೂ ನಾವಿಲ್ಲಿಯೇ ಇದ್ದುಬಿಟ್ಟೆವು. ಮುಂದೆ ಬಹುದಿನಕ್ಕೆ ನಿಮ್ಮ ಮಾವ ಸ್ವರ್ಗಸ್ಥರಾದರು ಆ ಮೇಲೂ ನಾವಿಲ್ಲಿಯೇ ಉಳಿದೆವು ಈಗ ಐದು ವರುಷವಾಯಿತು— ಪಲಾಶಿಯ ಘೋಷಾಲರ ಮನೆಗೆ ನನ್ನನ್ನು ಕೊಟ್ಟು ಅಣ್ಣಯ್ಯ ದೂರಗೊಳಿಸಿದ್ದಾನೆ ಅಪ್ಪ ಬದುಕಿದ್ದರೆ ಒಂದಿಷ್ಟು ಬಲವಾದರೂ ಇರುತ್ತಿತ್ತು"

"ಹಿರೇಸೊಸೆ ಇಲ್ಲಿದ್ದಾಳೇನು?" ಎಂದೆನ್ನುತ್ತ ಮುದಿಪ್ರಾಯದ ಗೌರವರ್ಣದ ಗಿಡ್ಡ ಸದ್ಗೃಹಸ್ಥನೊಬ್ಬ ಬಾಗಿಲಬಳಿ ಬಂದು ನಿಂತ

ಮೃಣಾಲ, "ಬನ್ನಿ ಬನ್ನಿ" ಎಂದು ಅಚಲೆಯ ಕಡೆ ನೋಡಿ ಮೂಗು ಮುರಿದು ನಕ್ಕು ನುಡಿದಳು "ಇವರೇ ನನ್ನ ಕರ್ತಾ ಅಜ್ಜ. ಒಳ್ಳೆಯದು ನೀನೇ ಹೇಳು, ಈ ಐವತ್ತೆರಡರ ಮುದುಕರು ಒಪ್ಪುವರೆ? ನನ್ನ ಈ ಜನ್ಮದ ರೂಪ ಯೌವನ ಎಲ್ಲ ಮಣ್ಣುಪಾಲಾಗಲಿಲ್ಲವೆ?"

ಅಚಲೆ ಇದಕ್ಕೇನು ಹೇಳಬೇಕು? ಲಜ್ಜೆಯಿಂದ ಮೋರೆತಗ್ಗಿಸಿದಳು.

ಆ ಸದ್ಗೃಹಸ್ಥ ಭವಾನೀ ಘೋಷಾಲ ಆತ ನಕ್ಕು ನುಡಿದ "ಇವಳ ಮಾತನ್ನು ನಂಬಬೇಡಿರಿ ಅತ್ತಿಗೆ ಎಲ್ಲಾ ಸುಳ್ಳು ಕಂತೆ ನನ್ನನ್ನು ಕೀಳ್ಮಾಡಬೇಕೆಂದು ಇವಳ ಪ್ರಯತ್ನ. ಹಾಗೆ ನೋಡಿದರೆ ನನ್ನ ವಯಸ್ಸೇನಿನ್ನೂ ಐವತ್ತೆರಡು—"

ಮೃಣಾಲ ಎಂದಳು "ಸಾಕು ಸಾಕು –ಅಜ್ಜಯ್ಯ ನನ್ನ ಹಳುಜನ್ಮದ ವೈರಿಯೋ ಏನೋ ದೇವರೇ ಬಲ್ಲ, ನನ್ನನ್ನು ಎಲ್ಲ ತೆರದಿಂದಲೂ ಅರವಿ ಪಾಲು ಮಾಡಿದ ಈ ಮುದುಕರಿಗೆ ಕೊಡುವುದಕ್ಕಿಂತ ನನ್ನನ್ನ ಕೈಕಾಲು ಕಟ್ಟಿ ಬಾವಿಯಲ್ಲಿ ಹಾಕಿದ್ದರೆ ಒಳಿತಾಗುತ್ತಿದ್ದಿಲ್ಲವೇ ಅಜ್ಜ? ನಿಜ ಹೇಳು."

ಅಚಲೆ ಮೊದಲಿನಂತೆಯೇ ಸುಮ್ಮನಿದ್ದಳು ಘೋಷಾಲ ಮೆಲ್ಲ ಮೆಲ್ಲಗೆ ಕೋಣೆಯೊಳಗೆ ಬಂದು, ಕೆಲ ಹೊತ್ತು ಅಚಲೆಯ ನಾಚಿಕೆಯಿಂದ ಬಾಗಿದ ಮೋರೆ ನೋಡಿ, ಒಮ್ಮೆಲೆ ಅತ್ಯಂತ ಸಮಾಧಾನದ ಉಸಿರ್ಗರೆದು, "ಬದುಕಿದೆ ಅತ್ತಿಗೆ, ಈಗಲಾದರೂ ಈ ಹುಡುಗಿಯ ಅಹಂಕಾರ ಮುರಿಯಿತು ರೂಪಮದದಿಂದ ಇವಳ ಕಣ್ಣು ನೆತ್ತಿಗೇರಿದ್ದವು!" ಎಂದು, ಹೆಂಡತಿಯನ್ನು ಲಕ್ಷಿಸಿ ಎಂದ "ಏಕೆ? ಈಗ ಹೇಗಾಯಿತು? ಇಷ್ಟು ದಿನ ಕಾಡಿಗೆ ನರಿಯೇ ದೊರೆಯಾಗಿತ್ತು ಈಗ ಕಣ್ಣು ತೆರೆದು ನೋಡು– ನಗರದ ರೂಪ ಎಂದರೆ ಏನೆಂದು!"

"ಇರಲಿ ಬಿಡಿ! ನನಗೆ ಅಹಂಕಾರ ಇದ್ದುದಾದರೆ ಅದನ್ನಾರು ಮುರಿಯುವವರು?" ಎಂದು ಮೃಣಾಲ ಗಂಡನ ಕಡೆ ಗುಪ್ತಕಟಾಕ್ಷ ಬೀರಿದಳು ಅದನ್ನು ಅಚಲೆ ಕಂಡಳು.

ಘೋಷಾಲ ನಗುತ್ತ ಎಂದ "ಕೇಳದಿರಲ್ಲೊ ಅತ್ತಿಗೆ! — ಸ್ವಲ್ಪ ಜೋಕೆಯಿಂದಿರಬೇಕು. ಇಬ್ಬರಲ್ಲಿಯೂ ಎಷ್ಟು ಮೇಳವಿದೆ, ಎಷ್ಟು ಸಂಬಂಧವಿದೆ ಹೇಳುವುದು ಶಕ್ಯವಿಲ್ಲ ನಾನಂತೂ ಐವತ್ತೆರಡರ ಮುದುಕ; ನಡುವೆ ಇದ್ದರೇನು ಇಲ್ಲದಿದ್ದರೇನು! ನಿಮ್ಮ ಒಡನೆ ನೀವು ಜತನ–ಇಷ್ಟೆ!"

"ಮೃಣಾಲ, ನೀವು ಬೆಳತನಕ ಇದೇ ನಡೆಸುವಿರೇನು?" ಎಂದು ಮಹಿಮ ಬಂದು ಕೇಳಿದ

"ಏನು ಮಾಡಲಜ್ಜಯ್ಯ?"

"ಒಂದಿಷ್ಟು ಅಡಿಗೆಯ ಮನೆಯ ಕಡೆ ಹೋಗಬಾರದೆ?"

ಮೃಣಾಲಳಿಗೆ ಈಗ ಎಚ್ಚರು ಬಂತು "ಮರೆತೇ ಹೋಗಿತ್ತು. ಅಜ್ಜಯ್ಯ ಉಡಿಯ ಬ್ರಾಹ್ಮಣನನ್ನು ಮೊದಲೇ ನೋಡಿಬರಬೇಕಿತ್ತು. ಆಗಲಿ, ನೀವು ಹೊರಗೆ ಹೋಗಿರಿ; ನಾವೂ ಎದ್ದೆವು"

"'ನಾವು' ಯಾರು?"

"ನಾನು ಅಜ್ಜ— ನಾ ಬಂದಿರುವೆನೆಂದ ಮೇಲೆ ಇವಳಿಗೆ ಒಗೆತನ ಎಲ್ಲ ಸರಿಪಡಿಸಿಕೊಟ್ಟು ಹೋಗುವೆ"

ಮಹಿಮ, ಭವಾನಿ ಹೊರಗೆ ಹೋದರು ಮೃಣಾಲ "ನಾ ಎರಡು ದಿನ ಮುಂಚೆಯೇ ಬಂದಿದ್ದರೆ ನೆಟ್ಟಗಿತ್ತು. ಅತ್ತೆಯವರಿಗೆ ದಮ್ಮು, ಮನೆಬಿಟ್ಟು ಹೊರಡಲಿಕ್ಕಾಗಲಿಲ್ಲ. ಇರಲಿ, ನೀ ಬಟ್ಟೆ ಬದಲಿಸಿ ಸಿದ್ಧಳಾಗು,

ನಾ ಈಗ ಬಂದು ಕರೆದುಕೊಂಡು ಹೋಗುವೆ," ಎಂದು ಮೃಣಾಲ ಅಡುಗೆ ಮನೆಗೆ ಹೋದಳು.

ಅಲ್ಲಿ ಮಾಡಬೇಕಾದುದನ್ನು ಮಾಡಿ ಬಂದು, ಅಚಲೆಯ ಹತ್ತಿರ ಕುಳಿತು ಕೈ ಹಿಡಿದು ಮೃಣಾಲ ನುಡಿದಳು "ಅಜ್ಜಿ ಎನ್ನುವುದಕ್ಕಿಂತ ಅತ್ತಿಗೆ ಎನ್ನುವುದು ಸರಿಯಲ್ಲವೆ?"

"ಹಾಂ"

"ವಾವಿಯಿಂದ ನೀ ದೊಡ್ಡವಳಾದರೂ ವಯಸ್ಸಿನಿಂದ ನಾ ದೊಡ್ಡವಳು ಅದಕ್ಕೆ ನೀನೂ ನನ್ನನ್ನು ಮೃಣಾಲಕ್ಕ ಎಂದು ಕರೆಯಬೇಕೆನಿಸುತ್ತದೆ ಹೇಗೆ?"

"ಒಳ್ಳೆಯದು"

"ಈವೊತ್ತು ಅಡುಗೆಮನೆ ತೋರಿಸುವೆ, ನಾಳೆ ಭಂಡಾರದ ಕೀಲಿಕೈ ನಿನ್ನ ಸೆರಗಿಗೆ ಕಟ್ಟಿಬಿಡುವೆ. ಏನೆಂದೆ?"

"ಕೀಲಿ ಕೈ ನನಗೆ ಅಗತ್ಯವಿಲ್ಲವಕ್ಕ"

ಮೃಣಾಲ ನಕ್ಕಳು "ಅಗತ್ಯವಿಲ್ಲ? ಅವ್ವಯ್ಯಾ! ಭಂಡಾರದ ಕೀಲಿಕೈ ಬೇಕಿಲ್ಲವೆಂದರೇನು— ಅದಷ್ಟು ತುಚ್ಛವೇ? ಗೃಹಿಣಿಯ ಅರಸುತನಕ್ಕೆ ಅದೇ ರಾಜಧಾನಿಯವ್ವ" ಎಂದಳು

"ಇರಲಿ ಹುದು ರಾಜಧಾನಿ. ಅದರಾಸೆ ನನಗಿಲ್ಲ ನಿನ್ನ ಮೇಲೇ ನನಗೆ ಹೆಚ್ಚು ಲೋಭ ನಿನ್ನನ್ನು ಬೇಗನೆ ಬಿಡುವುದಿಲ್ಲ ಮೃಣಾಲಕ್ಕ"

ಮೃಣಾಲ ಅವಳನ್ನು ತಬ್ಬಿಕೊಂಡಳು "ಸವತಿಯನ್ನು ಪೊರಕೆಯಿಂದ ಹೊಡೆದೋಡಿಸುವುದು ಬಿಟ್ಟು, ಇಟ್ಟುಕೊಳ್ಳಬೇಕೆನ್ನುವೆಯಲ್ಲ, ಇದೇನು ಬುದ್ಧಿ ನಿನ್ನದು ಅತ್ತಿಗೆ?" ಎಂದಳು.

"ನಿನ್ನೀ ನಗೆಚಾಟಿಕೆ ನನಗೇನು ಸೇರುವುದಿಲ್ಲ ಬಿಡಕ್ಕ ಇರಲಿ. ಈ ಕಡೆಯ ಜನ ಎಲ್ಲ ಹೀಗೆಯೇ ನಗೆಚಾಟಿಕೆ ಮಾಡುವರೆ?"

ಖಿಲಖಿಲ ನಕ್ಕು ಮೃಣಾಲ ನುಡಿದಳು: "ಇಲ್ಲವ್ಮಾ ಇಲ್ಲ; ನಾನೊಬ್ಬಳೇ ಮಾಡುವುದು ಎಲ್ಲರಿಗೂ ಇಂಥ ವಸ್ತು ಸಿಕ್ಕಬೇಕಲ್ಲಿ?"

"ಸಿಕ್ಕರೂ ನನ್ನಿಂದಾಗಲಿಕ್ಕಿಲ್ಲ ಬಿಡು. ನಮ್ಮ ಕಲ್ಕತ್ತಾ ಸಮಾಜದಲ್ಲಿ ಅನೇಕರಿಗೆ, ಸಭ್ಯ ಮಹಿಳೆ ಇಂಥ ಮಾತು ಆಡಿಯಾಳೆಂಬ ಕಲ್ಪನೆ ಕೂಡ ಇಲ್ಲ"

ಮೃಣಾಲಳಿಗೆ ಎಷ್ಟೂ ಕಚ್ಚೆನಿಸಲಿಲ್ಲ ಅಚಲೆಯನ್ನು ಮತ್ತೊಮ್ಮೆ ಬಿಗಿದಪ್ಪಿಕೊಂಡು, "ನಿಮ್ಮ ನಗರದ ಸಭ್ಯ ಮಹಿಳೆಯರು ಎಷ್ಟು ಜನ ಹೀಗೆ ತಬ್ಬಿಕೊಳ್ಳಬಲ್ಲರು, ಹೇಳತ್ತಿಗೆ? ಎಲ್ಲರಿಗೂ ಎಲ್ಲ ಬರುತ್ತದೆಯೇ? ಇಲ್ಲಿಯೇ ನೋಡು—ನನ್ನ ನಿನ್ನ ಭೆಟ್ಟಿ ಎಷ್ಟು ಹೊತ್ತಿನದು? ಇಷ್ಟರೊಳಗೇ 'ನನಗೆ ಸೋದರಿಯರಿದ್ದಿಲ್ಲ, ಒಬ್ಬ ಸೋದರಿ ಸಿಕ್ಕಿದಳು' ಎಂದೆನಿಸಿದೆ ಇದು ಹಾಳುಹರಟೆಯಲ್ಲ ಆಜನ್ಮವೂ ನಾನಿದನ್ನು ರುಜುವಾತು ಪಡಿಸುತ್ತಿರುವೆ, ನೆನಪಿರಲಿ ಇದರೊಳಗೆ ಹಾಸ್ಯ ಚೇಷ್ಟೆ ನಡೆಯದು" ಎಂದಳು.

ಅಚಲೆ ಕಲಿತ ಹುಡುಗಿ ಹಳ್ಳೂರಿನ ಸಮಾಜದಲ್ಲಿ ಹೇಗೆ ಜೀವನ ನಡೆಸುವುದೆಂಬುದನ್ನು ಆಗಲೇ ಅರಿತಿದ್ದಳು ಈ ಸಂಧಿಯನ್ನು ಅವಳು ಸುಮ್ಮನೆ ಹೋಗಗೊಡಲಿಲ್ಲ ಪರಿಹಾಸವನ್ನು ಗಾಂಭೀರ್ಯದಲ್ಲಿ ಪರಿವರ್ತಿಸಿಕೊಂಡು, "ಮೃಣಾಲಕ್ಕ, ನಿಜವಾಗಿ ನೀನು ಆಜನ್ಮವೂ ಇದನ್ನು ರುಜುವಮಾತು ಪಡಿಸುತ್ತೀಯಾ?" ಎಂದು ಕೇಳಿದಳು

"ನಾವೇನು ನಗರದ ಹೆಂಗುಸರಲ್ಲಕ್ಕ, ರುಜುವಾತುಪಡಿಸಲೇಬೇಕಾಗುವುದು ನಿನ್ನನ್ನು ಮುಟ್ಟಿ ಹೇಳಿದ್ದು ಪ್ರತಿಜ್ಞೆಯೆಂದೇ ತಿಳಿ. ಅದೆಂದೂ ಬದಲಾಗದು"

ಅಚಲೆ ಈ ವಿಷಯವನ್ನು ಹೆಚ್ಚು ಜಗ್ಗಾಡಲಿಲ್ಲ ಬೇರೆ ಮಾತು ತೆಗೆದಳು "ಬೇಗನೆ ಹೊರಟು ಹೋಗುವುದಿಲ್ಲವೆಂಬುದನ್ನು ಹೀಗೆಯೇ ಹೇಳಿಬಿಡು," ಎಂದು ನಗುತ್ತ ನುಡಿದಳು

ಮೃಣಾಲ ನಗುತ್ತ ಎಂದಳು "ಭೋಳೆ ಸಿಕ್ಕಿದ್ದಾಳೆಂದು ಎಷ್ಟೆ ಹಾಕಬೇಕೆನ್ನುವೆಯಾ? ಅದನ್ನು ಮೊದಲೇ ಹೇಳಿದ್ದೇನೆ— ಪೂರಾ ಚಾರ್ಜ್ ಒಪ್ಪಿಸದೆ ನಾನೇನು ಹೋಗುವುದಿಲ್ಲ"

"ಚಾರ್ಜ್ ತೆಗೆದುಕೊಳ್ಳುವ ಆಗ್ರಹ ನನಗೆಳ್ಳಷ್ಟೂ ಇಲ್ಲ"

"ನಾನಂತೂ ಅಷ್ಟು ಮಾಡಿ ಹೋಗಲೇ ಬೇಕು ಹೆಚ್ಚುದಿನ ಮನೆಬಿಟ್ಟು ಇರಲಿಕ್ಕಾಗುವುದಿಲ್ಲ. ಅಕ್ಕಾ, ಎಂಥ ದೊಡ್ಡ ಸಂಸಾರ ನನ್ನ ತಲೆಮೇಲಿದೆ ಬಲ್ಲೆಯಾ?"

"ಇಲ್ಲ"

ಮೃಣಾಲ ಅಚ್ಚರಿಗೊಂಡಳು. "ಅಣ್ಣ ಈ ಮೊದಲೇ ಹೇಳಿಲ್ಲವೇ ನನ್ನ ವಿಷಯ?" ಎಂದು ಕೇಳಿದಳು.

" ಇಲ್ಲ. ತಮ್ಮ ಮನೆಮಾರಿನ ವಿಷಯ ಎಲ್ಲ ತಿಳಿಸಿದ್ದಾರೆ ಆದರೆ ಯಾವುದು ಮುಂಚೆ ತಿಳಿಸತಕ್ಕದ್ದೋ ಅದನ್ನೇ ಹೇಳಿಲ್ಲ ! "

ಮೃಣಾಲ ಅನ್ಯಮನಸ್ಕಳಂತೆ, " ಹೀಗೋ, ಸರಿ " ಎಂದಳು. ಅಚಲೆ ಕೆಲಹೊತ್ತು ಸುಮ್ಮನಿದ್ದು ಮೆಲುನಗೆಯೊಡನೆ ಪ್ರಶ್ನಿಸಿದಳು : " ಮೊದಲು ಅವರಿಗೆ ನಿನ್ನನ್ನು ಕೊಡುವುದು ಗೊತ್ತಾಗಿತ್ತು ಕಾಣುತ್ತದೆ?"

ಮೃಣಾಲ ಏನೋ ವಿಚಾರಮಾಡುತ್ತಿದ್ದಂತೆಯೆ " ಹಾಂ " ಎಂದಳು.

" ಆದರೆ ಆಗಲಿಲ್ಲವೇಕೆ ? ಆಗಿದ್ದರೆ ಚೆನ್ನಾಗಿತ್ತು "

ಮಾತು ಮೃಣಾಲಳ ಕಿವಿಯೊಳಗೆ ಈಗ ನಾಟಿತು. ಅವಳು ಅಚಲೆಯ ಕಡೆ ನೋಡಿ, " ಆಗಬೇಕೆಂದಿದ್ದಿಲ್ಲ ಅದಕ್ಕೇ ಆಗಲಿಲ್ಲ, " ಎಂದಳು.

" ಅದಕ್ಕೆ ಅಡ್ಡಿ ಏನಿತ್ತು ? ನೀನವರಿಗೆ ಸಗೋತ್ರ ಸಂಬಂಧಿಕಳಲ್ಲ ತಾನೆ ? ಅಲ್ಲದೆ ಚಿಕ್ಕಂದಿನಿಂದ ಇದ್ದ ಪ್ರೇಮವನ್ನು ಉಪೇಕ್ಷಿಸುವುದು ಉಚಿತವಲ್ಲ ತಾನೇ ? "

ಅವಳ ಪ್ರಶ್ನೆಯ ರೀತಿಗೆ ಮೃಣಾಲ ಬೆಚ್ಚಿಬಿದ್ದಳು ಕ್ಷಣಹೊತ್ತು ಅಚಲೆಯ ಮೋರೆ ನೋಡುತ್ತಿದ್ದು ನುಡಿದಳು " ಇದನ್ನೆಲ್ಲ ಏಕೆ ಕೆದರುತ್ತೀ ಅತ್ತಿಗೆ ? ಚಿಕ್ಕಂದಿನ ಪ್ರೇಮಕ್ಕೆ ಯಾವಾಗಲೂ ಇದೇ ಕೊನೆಯೆ ? ಅಥವಾ ಮನುಷ್ಯನಿಗೆ ಮದವೆಯಾಗಲು ಮಾಡಿಸಲು ಅಧಿಕಾರವುಂಟೇ ? ಬರೀ ಈ ಜನ್ಮದ್ದಲ್ಲ, ಅತ್ತಿಗೆ, ಜನ್ಮಜನ್ಮಾಂತರದ ಸಂಬಂಧವದು ನಾವು ಯಾರಿಗೆ ಚಿರಕಾಲದ ದಾಸಿಯೋ ಅವರಿಗೆ ಅದೃಷ್ಟ ನನ್ನನ್ನೊಪ್ಪಿಸಿದೆ. ಮನುಷ್ಯನ ಇಚ್ಛೆ ಅನಿಚ್ಛೆಗಳಿಂದ ಏನಾಗುವುದು ! "

" ಅದೇನೋ ನಿಜ ಮೃಣಾಲಕ್ಕ, ಅದಕ್ಕೇ ನಾ ಕೇಳು— "

ಅಚಲೆಗೆ ಮಾತು ಮುಗಿಸುವುದಾಗಲಿಲ್ಲ ಲಜ್ಜೆಯಿಂದ ಅವಳ ಮುಖ ಆರಕ್ತವಾದುದು ಮೃಣಾಲಳಿಗೆ ಕಾಣದಿಗಲಿಲ್ಲ ಅಚಲೆಯ ಕೈಯನ್ನು ಸ್ನೇಹದಿಂದ ಹಿಡಿದು, ' ಅತ್ತಿಗೆ, ನೀನಿನ್ನೂ ಈವೊತ್ತು ಮದುವೆಯಾಗಿದ್ದೀ , ನಾನಾದರೋ ಐದು ವರ್ಷದಿಂದ ಪತಿಸೇವೆ ಮಾಡುತ್ತಿದ್ದೇನೆ ನನ್ನದೊಂದು ಮಾತು ಕೇಳು ಗಂಡನ ವಿಷಯವನ್ನು ಬುದ್ಧಿಬಲದಿಂದ ಆವಿಷ್ಕಾರ ಮಾಡಿಕೊಳ್ಳಲು ಯತ್ನಿಸಬೇಡ ಅದರಿಂದ ವಂಚಿತವಾಗಿರುವುದೇ ಲೇಸು, " ಎಂದಳು

"ಅಕ್ಕಾ, ಬಾಬುಗಳಿಗೆ ಊಟದ ಏರ್ಪಾಟು ಆಗಿದೆ," ಹೊರಗಿನಿಂದ

ಯದು ಹೇಳಿದ

"ಒಳ್ಳೆಯದು, ನಡೆ, ಬಂದೆ" ಎಂದು ಮೃಣಾಲ ಅಚಲೆಯ ಮುಖವನ್ನು ಹತ್ತಿರ ಸೆಳೆದುಕೊಂಡು ಒಂದು ಚುಂಬನ ತೆಗೆದುಕೊಂಡು ದ್ರುತಗತಿಯಿಂದ ಹೊರಟುಹೋದಳು

೧೫

"ಓ, ಅತ್ತಿಗೆ!"

ಅಚಲೆ ಪಕ್ಕದ ಕೋಣೆಯಿಂದ ಆ ಕೋಣೆಗೆ ಹೋದಳು ಮೃಣಾಲ ಸೆರಗು ಟೊಂಕಕ್ಕೆ ಕಟ್ಟಿಕೊಂಡು, ಸಣ್ಣದೊಂದು ಡ್ರಾವ್‌ಕೇಸನ್ನು ಒಬ್ಬಳೇ ಸರಿಸಿಡುತ್ತಿದ್ದಳು ಅಚಲೆಯನ್ನು ಕಾಣುತ್ತಲೇ ಒದರಿಕೊಂಡಳು "ಏನೇ ಸುಡುಗಾಡ ಹುಡುಗಿ, ನೀ ಮಹಾರಾಣಿಯಂತೆ ಕಾಲುಚಾಚಿ ಕೊಂಡು ಕೂತಿರು, ನಿಮ್ಮ ಮಲಗುವ ಕೋಣೆಯನ್ನು ನಾ ಸ್ವಚ್ಛಮಾಡಿ ಕೊಡುತ್ತೇನೆ ಆ ಪೊರಕೆ ತಕ್ಕೋ, ಆ ಮೂಲೆಯೊಳಗಿನ ಕಸ ಅನ್ನು ಎಂದೆ" ಎಂದು ನಗೆಯನ್ನು ತಡೆಹಿಡಿಯಲಾರದೆ ಗಹಗಹನೆ ನಕ್ಕುಬಿಟ್ಟಳು

ಕ್ಕೂಗಾಟ ಕೇಳಿ ಹರಿಯ ತಾಯಿಯೂ ಹಿಂದೆ ಹಿಂದೆ ಬಂದಿದ್ದಳು "ಇದನ್ನೇನು ಮಾಡುತ್ತಿದ್ದೀಯಕ್ಕಾ, ಮನೆಯೊಳಗೆ ಇಷ್ಟು ಜನ ಆಳು ಕೂತ್ತು ಇರುತಿರಲಿಕ್ಕೆ! ನಮ್ಮ ಅಕ್ಕಣ್ಣಿಗೆ ಎಂದೂ ಪೊರಕೆ ಹಿಡಿದು ಗೊತ್ತಿಲ್ಲ ಹಳ್ಳಿಗಾಡು ಹೆಂಗುಸರಂತೆ ಕಸ ಉಡುಗುವುದೆಂದರೇನು? ಬಿಡು ನಾ ಉಡುಗುತ್ತೇನೆ" ಎಂದು ಅವಳು ಪೊರಕೆ ತೆಗೆದುಕೊಳ್ಳಲು ಹೋಗುತ್ತಲೇ ಮೃಣಾಲ ಕೃತ್ರಿಮಕ್ರೋಧದಿಂದ ಜಡಿದು ನುಡಿದಳು· "ಇರಲಿ ಬಿಡು ತಾಟಗಿತ್ತೀ ಅಕ್ಕಣ್ಣಿಯನ್ನು ನನಗಿಂತ ಶ್ರೇಷ್ಠಮಾಡಿ ಪಂಚೇತಿಗೆ ಬಂದೆಯಾ?" ಎಂದು ಪೊರಕೆಯನ್ನು ಅಚಲೆಯ ಕೈಯಲ್ಲಿ ಸಿಕ್ಕಿಸಿ ನಗುತ್ತ ನುಡಿದಳು. "ಏನೇ, ನಿಮ್ಮಕ್ಕಣ್ಣಿ ಮನಸುಬಂದರೆ ಹಳ್ಳಿಗಾಡಿನವರು ಮಾಡಬಂಥ ಕೆಲಸವನ್ನೂ ಮಾಡಬಲ್ಲಳು — ತಗೋ ಅತ್ತಿಗೆ, ಲಗುನೆ ಆ ಮೂಲೆಯನ್ನು ಉಡುಗಿಬಿಡು."

ಅಚಲೆ ಕಸಗೂಡಿಸಲುದ್ಯುಕ್ತಳಾಗಿ, "ಮೃಣಾಲಕ್ಕಾ, ನೀ ಜಾದು ಗಾರಿಕೆ ಬಲ್ಲೆ, ಅಲ್ಲವೆ?" ಎಂದಳು.

"ಅದೇಕೆ?"

" ಇಲ್ಲದಿದ್ದರೆ, ನಾ ಕೈಯೊಳಗೆ ಪೊರಕೆ ಹಿಡಿಯುವುದೆಂದರೆ ಜಾದು ಅಲ್ಲದೆ ಏನು ? "

" ನೀ ಹಿಡಿಯದೆ ಯಾರು ಹಿಡಿಯಬೇಕು ? ನಿಮ್ಮ ಮನೆ ಸ್ವಚ್ಛ ಮಾಡಲಿಕ್ಕ ಆ ಕೇರಿಯಿಂದ ಪದಿಯ ಅಬಚಿ ಬರಬೇಕೇನು ? ಹೂಂ, ಗುಡಿಸು, ಮಾತಿನಲ್ಲಿ ಹೊತ್ತುಗಳೆಯಬೇಡ, ಸಂಜೆಯಾಯಿತು "

ಅಚಲೆ ಕೆಲಸ ಮಾಡುತ್ತ ಮಾಡುತ್ತ ನಗುತ್ತೆಂದಳು " ನೀನೂ ಸ್ವಲ್ಪ ಕೂಡುವುದಿಲ್ಲ, ನನ್ನನ್ನೂ ದುಡಿಸಿ ದುಡಿಸಿ ಕೊಲ್ಲುತ್ತೀ ಈ ಐದಾರು ದಿನ ನೀ ನನ್ನ ದುಡಿಸಿಕೊಂಡಷ್ಟು ಚಾ ತೋಟದ ಒಡೆಯರೂ ಆಳುಗಳನ್ನು ದುಡಿಸಿಕೊಂಡಿರಲಿಕ್ಕಿಲ್ಲ, ಮೃಣಾಲಕ್ಕಾ "

ಮೃಣಾಲ ಬೆರಳಿಂದ ಅವಳ ಗದ್ದ ಬಡಿದು ನುಡಿದಳು " ಎಂದರೇ ಮನೆ ನೋಡಿದರೆ ಒಳಗೆ 'ಲಕ್ಷ್ಮಿ' ಬಂದಿದ್ದಾಳೆ ಎಂದೆನಿಸುವುದು. ದುಡಿತ ಎನ್ನುತ್ತೀ,— ಅಮ್ಮಾ ಅತ್ತಿಗೆ, ಗಂಡ ಮಕ್ಕಳು, ಮನೆ-ಮಾರು ನೋಡಿಕೊಳ್ಳುವುದರಲ್ಲಿ ಸ್ನಾನಕ್ಕೆ ಊಟಕ್ಕೆ ಕೂಡದಂತಾದಾಗಲೇ ಹೆಣ್ಣು ಹುಟ್ಟಿದ್ದಕ್ಕೆ ಸಾರ್ಥಕ ! ಆದಿನ ನಿನಗೆ ಬೇಗ ಬರಲಿ ಎಂದೇ ದೇವರನ್ನು ಬೇಡಿಕೊಳ್ಳುವೆ ಈಗಿನದು ಏತರ ದುಡಿತ ? "ಎಂದವಳು ನಗಬ್ಬೇಕೆಂದಳು ಆದರ—

ಹರಿಯ ತಾಯಿ ಕಣ್ಣೊರಸಿಕೊಳ್ಳುತ್ತ ಭ್ಯಾಕ್ ಎಂದಳುತ್ತ ಮಾತನಾಡಿದಳು " ಇದೇ ಹರಸಕ್ಕಾ, ಬರೀ ಇಷ್ಟೇ ಹರಸು ! "

ಮೃಣಾಲ ಗದ್ದರಿಸಿದಳು " ಮಾತುಮಾತಿಗೆ ಅಳುತ್ತೀಯಲ್ಲೇ ಛೋಕಾರಿ ! ಅಳಲಿಕ್ಕೇನಾಯಿತೀಗ ? "

ಕಣ್ಣೊರಸಿಕೊಂಡು ಅವಳೆಂದಳು " ಬೇಕೆಂತ ಅಳುವೆನೇನೆ ? ನಿನ್ನ ಮಾತು ಕೇಳಿ ಏನು ಮಾಡಿದರೂ ದುಃಖ ನಿಲ್ಲಲೊಲ್ಲದು ಆದರೆ, ನೀ ಬರದಿದ್ದರೆ, ಈ ಮನೆಯಲ್ಲಿ ಒಂದು ರಾತ್ರಿಯನ್ನಾದರೂ ಹೇಗೆ ಕಳೆಯುತ್ತಿದ್ದೆನೊ ತಿಳಿಯದು "

ಮೃಣಾಲ ಬಂದು ಆರು ದಿನಗಳಾದವು ಬಂದಾಗಿನಿಂದಲೂ ಮನೆ ಮಾರು ಮೊದಲುಗೊಂಡು ಮನುಷ್ಯರ ವರೆಗೂ ಎಲ್ಲರ ಸ್ವರೂಪ ಬದಲಿಸುವುದರಲ್ಲಿಯೇ ತೊಡಗಿದ್ದಾಳೆ ಆದರೆ ಅವಳೆಲ್ಲ ನಡೆನುಡಿಗಳಲ್ಲಿ ವಿನೋದಚೇಷ್ಟೆಗಳಲ್ಲಿ ಪ್ರಕಟವಾಗುತ್ತಿದ್ದ 'ಹೋಗುತ್ತೇನೆ'ಂಬ ಸೂಚು

ಅಚಲೆಯನ್ನು ಪೀಡಿಸುತ್ತಿತ್ತು ಮೃಣಾಲಳ ಕೆಲಸದಲ್ಲಿ ನಡೆನುಡಿಯಲ್ಲಿ ಸಹಜಸ್ವಾಭಾವಿಕ ವಿಸ್ಮೃತಿಯಿತ್ತು ಅದರ ಮರೆಯಲ್ಲಿ ನಿಂತು ತನ್ನ ನವಜೀವನದ ಅಪರಿಚಿತ ಸಂಸಾರವನ್ನು ಕಳ್ಳನೋಟದಿಂದ ನೋಡಲು ಅವಳಿಗೆ ಅವಕಾಶವಿತ್ತು ಆದರೆ ಅದಕ್ಕಿಂತಲೂ ಮಹತ್ವದ ವಸ್ತುವೊಂದನ್ನು ಚೆನ್ನಾಗಿ ತಿಳಿದುಕೊಳ್ಳುವ ಕುತೂಹಲ ಅವಳಿಗಿದ್ದಿತು— ಆ ವಸ್ತು ಮೃಣಾಲ. ಅವಳು ಮನೆತನದಿಂದೇನು ನೆಟ್ಟಗಿಲ್ಲ ಎಂಬುದನ್ನು ಅವಳ ಬರಿಗೈಗಳೇ ಹೇಳುತ್ತಿದ್ದವು ಅಲ್ಲದೆ ಕೊಳಕ ಮುದುಕ ಗಂಡ ಅವಳಿಗೆಷ್ಟು ಮಾತ್ರವೂ ತಕ್ಕವನಲ್ಲ ಎಂದು ಅಚಲೆಗೆನಿಸುತ್ತಿತ್ತು ಇಷ್ಟು ಸಾಲದೆ ಮನೆಯಲ್ಲಿ ಎಲ್ಲೆಯಿಲ್ಲದ ದುಡಿತ ಹಣ್ಣು ಹಣ್ಣು ಮುದುಕ ಅತ್ತೆ ಸಾಯಲಿಕ್ಕಾಗಿ ಹಗಲಿರುಳೂ ಭಾರವಾಗಿ ಕುಳಿತಿದ್ದಾಳೆ- ಹೌದಾದುದಕ್ಕೂ ಅಲ್ಲವಾದುದಕ್ಕೂ ಸಿಡುಕುಸಿಡವು ಅಷ್ಟಿಷ್ಟಲ್ಲ – ಇಷ್ಟಾಗಿಯೂ ಯಾವ ಪ್ರತಿಕೂಲತೆಯೂ ಅವಳನ್ನು ಕೈಕಾಲುಗೆಡಿಸಿಲ್ಲ; ಈ ಹಳ್ಳಿಗಾಡಿನ ಮೂರ್ಖರಮಣಿಗೆ ಹೃದಯದ ಆನಂದನಿರಾನಂದಗಳ ಹೊರತು ಮತ್ತಾವುದೂ ಇಲ್ಲವೇ ಇಲ್ಲವೇನೋ, ಕಮಲ ಕೆಸರಲ್ಲಿದ್ದು ಕೆಸರು ತಗಲದಿರುವಂತೆ ಈ ಅಶಿಕ್ಷಿತ ದರಿದ್ರ ಕುಗ್ರಾಮ ಲಕ್ಷ್ಮಿ ಎಲ್ಲ ಬಗೆಯ ಸಾಂಸಾರಿಕ ದುಃಖಗಳ ಮಡುವಿನಲ್ಲಿಯೇ ಇರುತ್ತಿದ್ದರೂ ವೇದನೆಯಾತನೆಗಳ ಮೇಲೆ ತೇಲುತ್ತಿದ್ದಾಳೆಂಬುದನ್ನು ಅಚಲೆ ಅರಿತಿದ್ದಾಳೆ ಅವಳ ದೇಹಕ್ಕೆ ದಣಿವಿಲ್ಲ, ಮುಖದಲ್ಲಿ ಬೇಸರವಿಲ್ಲ ಅಂತೆಯೇ ಅಚಲೆಯನ್ನೂ ಅಭ್ಯಾಸವಿಲ್ಲದ ಕೆಲಸಗಳಲ್ಲಿ ತೆರವುಗೊಡದೆ ಎಳೆದೊಯ್ಯುತ್ತಿರಬೇಕು ಬಹುಶಃ. ಇವೆಲ್ಲ ತನಗೆ ಒಗ್ಗದವಾದರೂ ಒಲ್ಲೆನೆನ್ನುವುದು ನಾಚಿಕೆಗೇಡೆಂದು ಅಚಲೆಗೆನಿಸುತ್ತಿತ್ತು. ತನ್ನ ದೈವವನ್ನೇ ಬಯ್ಯುತ್ತ ಒಂದು ಗಳಿಗೆ ಕುಳಿತು ಅಳಬೇಕೆಂದರೂ ಈ ಆರು ದಿನ ಅವಳಿಗೆ ಫುರಸತ್ತು ಸಿಕ್ಕಲಿಲ್ಲ ಎಲ್ಲ ಸಮಯ ಕೆಲಸಬೊಗಸೆ, ಹಾಸ್ಯಚೇಷ್ಟೆಗಳಲ್ಲಿಯೇ ಹೋಯಿತು ಅಂತೆಯೇ ಮೃಣಾಲ ಹೋಗುವಳೆಂಬ ಸೂಚನೆಮಾತ್ರದಿಂದಲೇ, ಇಡೀ ಮನೆ ಇಸ್ಪೇಟಿನ ಮನೆಯಂತೆ ಉರುಳಿಬೀಳಬಹುದೆಂದು ಅಚಲೆಗೆನಿಸುತ್ತಿತ್ತು ಅವಳು ಹೊರಟುಹೋದಳೆಂದರೆ ತಾನಿಲ್ಲಿ ಒಂದು ಕ್ಷಣವಾದರೂ ಇರಲಿ ಹೇಗೆ?

ಒಮ್ಮೆ ಸಂಜೆಯ ಮುಂದೆ ಅಚಲೆ ಎಂದಳು: "ಹೋಗುತ್ತೇನೆ.

ಹೋಗುತ್ತೇನೆಂದು ಹಚ್ಚಿದ್ದೀ ಮೃಣಾಲಕ್ಕ. ತವರುಮನೆಗೆ ಬಂದು ಇಷ್ಟು ಬೇಗ ಯಾರು ಹೋಗುತ್ತಾರೆ ಹೇಳು ಅದೆಂದೂ ಆಗದು. ನಾ ಕಲಕತ್ತೆಗೆ ಹೋಗುವತನಕ ನೀ ಇಲ್ಲಿಯೇ ಇರಬೇಕು "

"ಏನು ಮಾಡಲತ್ತೆಗೆ? ಮುದಿಕೆ ತಾನೂ ಸಾಯುವುದಿಲ್ಲ, ನನ್ನನ್ನೂ ಬಿಡುವುದಿಲ್ಲ 'ಮುದುಕೀ ಸಾಯಬಾರದೇ, ನಿನ್ನ ಮಗನಿಗೂ ೬೦ಕ್ಕೆ ಬಂತು; ಅವರನ್ನು ಕಳಿಸಿಯೇ ಹೋಗುವೆಯಾ?' ಎಂದುಕೊಳ್ಳುತ್ತೇನೆ ನಾನು ಹಗಲೂ ರಾತ್ರಿ ಇಷ್ಟು ಕೆಮ್ಮುತ್ತದೆ. ಒಮ್ಮೆಯೂ ದಮ್ಮು ಅಟೆದು ಸಾಯುವುದಿಲ್ಲ!"

ಅಚಲೆ ನಕ್ಕು ನುಡಿದಳು "ಅವರು ನಿನ್ನ ನೋಡಲಾರರು ಕಾಣುತ್ತದೆ!"

"ಹಾಂ."

"ಮತ್ತೆ ನೀನು?"

"ನಾನೂ ನೋಡಲಾರೆ ಮುದುಕಿಯು ಗಂಗಾಯಾತ್ರೆಯಾದರೆ ಸಿರನೀ ಹಂಚುವುದಕ್ಕೆ ಒಂದೂಕಾಲು ರೂಪಾಯಿ ಮುಡುಪಿಟ್ಟಿದ್ದೇನೆ"

"ನಾನೇನು ನಂಬಲಾರೆ ಮೃಣಾಲಕ್ಕ ನಿನ್ನ ಮಾತಿನಿಂದ ನಿನಗೆ ಯಾರಾಗುವುದಿಲ್ಲ ಯಾರಾಗುತ್ತಾರೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಆ ಮುದುಕಿಯನ್ನೇ ಎಲ್ಲಕ್ಕಿಂತ ಹೆಚ್ಚು ಪ್ರೀತಿಸುತ್ತಿರಬಹುದು ಕೂಡ"

ಮೃಣಾಲ ನಗುದನಿಯಿಂದ, "ಎಲ್ಲಕ್ಕಿಂತ ಹೆಚ್ಚು ಪ್ರೀತಿ! ಇದ್ದರೂ ಇದ್ದೀತು" ಎಂದು ಅಚಲೆಯ ಗಲ್ಲಚಪ್ಪರಿಸಿ ಏತಕ್ಕೋ ಹೊರಟು ಹೋದಳು

ಹೋಗುತ್ತೇನೆ ಹೋಗುತ್ತೇನೆ ಎನ್ನುತ್ತಲೇ ಕೆಲದಿನ ಕಳೆದವು. ಮೃಣಾಲಳಿಗೆ ಹೋಗುವ ಅವಸರ ಮಾತಿನಲ್ಲಿರುವಷ್ಟು ಕೃತಿಯಲ್ಲಿಲ್ಲವೆಂದು ಅಚಲೆ ಅರಿತಳು ನಿಜವಾಗಿಯೂ ಮೃಣಾಲ ಹೋಗಲು ಅಷ್ಟು ಉತ್ಸುಕ ಳಾಗಿರಲಿಲ್ಲ ಅಚಲೆ ಇಷ್ಟು ದಿನ ಅವಳಂತರಾಳದಲ್ಲಿ ನಿಂತು ಜಗತ್ತನ್ನು ನೋಡುತ್ತಿದ್ದಳು ಈಗ ಅಲ್ಲಿಂದ ಹೊರಕ್ಕೆ ಬಂದು ನೋಡಿದಾಗ ಜಗತ್ತಿನ ರೂಪ ಬದಲಾಗಿತ್ತು. ತನ್ನ ಗಂಡನೊಡನೆ ಮೃಣಾಲ ನಗುವುದು ಕೆಲೆಯುವುದನ್ನು ಕಂಡು ಆಗ ಅಚಲೆಯ ಹೃದಯಕ್ಕೆ ಚುರುಕು ಹತ್ತುತ್ತಿತ್ತು ಈಗ ಸೂಜಿ ಚುಚ್ಚಿದಂತಾಗತೊಡಗಿತು 'ಇದರೊಳಗೇನೂ

ಇಲ್ಲ, ಹಾಸ್ಯವಿನೋದದ ಹೊರತು ಬೇರೆಯಿಲ್ಲ, ಮನಸು ಕಿಂಕರ ಮಾಡಿಕೊಳ್ಳುವ ಕಾರಣವಿಲ್ಲ, ತನ್ನ ಮನಸೇ ಕೆಟ್ಟದು' ಎಂದು ತನ್ನನ್ನು ತಾನು ಸಂತಯಿಸಿಕೊಳ್ಳುತ್ತಿದ್ದಳು ಆದರೂ ಬೇಡವೆಂದರೂ ಸಂಶಯದ ವಿಪರೀತ ತರ್ಕಗಳು ತಲೆಯೆತ್ತಿ ಅವಳನ್ನು ಅಣಕಿಸುತ್ತಿದ್ದವು ಇಲ್ಲಿ ಬಂದ ಬಳಿಕ ಮಹಿಮನ ಸ್ವಾಭಾವಿಕ ಗಾಂಭೀರ್ಯ ಹೆಚ್ಚಿದಂತೆ ಕಾಣುತ್ತಿತ್ತು. ಒಳಗೇನೂ ಇಲ್ಲದಿದ್ದರೆ ಅವನಿಗೆ ನಗೆಯಿಂದ ಉತ್ತರ ಕೊಡುವುದರಲ್ಲಿ ತಪ್ಪೇನು? ಎಂದು ಅವಳೆಂದುಕೊಳ್ಳುವಳು ನಗೆಚಾಟಿಕೆಯ ಉತ್ತರ ಕೊಡಲಾರದವರು ಕನಿಷ್ಠಪಕ್ಷ ಹಸನ್ಮುಖದಿಂದ ಅದರ ರಸಾನುಭವ ಹೊಂದಬಹುದು ಆದರೆ, ಮೃಣಾಲ ನಗೆಚಾಟಿಕೆಯ ಮಾತು ಆರಂಭಿಸುತ್ತಲೇ ಮಹಿಮ ಲಜ್ಜಿತನಾಗಿ ಅಲ್ಲಿಂದ ಕಾಲ್ತೆಗೆದು ಉಳಿದುಕೊಳ್ಳುತ್ತಾನೆಂಬುದು ಅಚಲೆಗೀಗ ನಿಚ್ಚಳವಾಗಿ ಕಾಣುತ್ತಿತ್ತು ಆದುದರಿಂದಲೇ ಇಲ್ಲೇನೋ ಪ್ರಚ್ಛನ್ನ ಅನ್ಯಾಯವಿದೆ ಎಂಬ ಯೋಚನೆ ಎಷ್ಟು ಮಾಡಿದರೂ ಅವಳ ಮನಸಿನಿಂದ ಹೋಗದಾಯಿತು ಅಚಲೆ ಮೃಣಾಲಳೊಡನೆ ಕೂಡಿ ಕೆಲಸ ಮಾಡುತ್ತಿದ್ದಳು ಈಗ ದಿನಕ್ಕೆ ಹತ್ತೆಂಟು ಬಾರಿ ಅವಳಿಗೆನಿಸುತ್ತಿತ್ತು—'ತಾನು ಹೆಣ್ಣು ಹೆಂಗಸಾಗಿಯೂ ಹೃದಯದಲ್ಲಿ ಗುಪ್ತ ಈರ್ಷೆ ತುಂಬಿದ್ದರೂ ಇವಳನ್ನು ತನಗೆ ಬಿಡಲಿಕ್ಕಾಗಲೊಲ್ಲದು— ಇಷ್ಟು ದಿನ ಒತ್ತಟ್ಟಿಗೇ ಇದ್ದ ಯಾವ ಪುರುಷ ಈ ಹೆಣ್ಣನ್ನು ಪ್ರೀತಿಸದಿರಬಲ್ಲ?'

ಮೃಣಾಲ ಬಂದೊಡನೆ ಉಡಿಯ ಬ್ರಾಹ್ಮಣ ಅಡುಗೆಮನೆಯಿಂದ ಬಿಡುಗಡೆ ಹೊಂದುವುದು ವಾಡಿಕೆಯಾಗುತ್ತೆಂಬುದು ಅಚಲೆಗೆ ಗೊತ್ತಿಲ್ಲ ಈಗಲೂ ಅವನು ಬಿಡುವುಹೊಂದಿ ತಿರುಗಾಡುತ್ತಿದ್ದ ತಾನೇ ಅಡುಗೆ ಮಾಡಿ ಮಹಿಮನಿಗೆ ಬಡಿಸುವುದೆಂದರೆ ಮೃಣಾಲಳಿಗೆ ಇಷ್ಟೇಕೆ ಇಷ್ಟ ಎಂದು ಅವಳು ಯೋಚಿಸುವಳು ಇಂದು ಬೆಳಗ್ಗೆ ಹೇಳಿದಳು "ಮೃಣಾಲಕ್ಕ, ನಿನಗಿಂದು ಬಿಡುವು"

ಇದೇನೆಂದರಿಯದೆ ಮೃಣಾಲ ಕೇಳಿದಳು "ಏತಕ್ಕಕ್ಕ ಬಿಡುವು?"

"ಅಡಿಗೆಗೆ, ಈವೊತ್ತು ನಾನೇ ಮಾಡುವೆ."

"ಹಣೇಬರಹ! ನೀ ಅಡಿಗೆ ಮಾಡುವೆಯಾ!"

"ಭಲೆ! ನನಗೆ ಬರುವುದಿಲ್ಲವೆ? ಮನೆಯೊಳಗೆ ನಾನೆಷ್ಟೋ ದಿನ ಮಾಡಿದ್ದೇನೆ. ಅದೇನಿಲ್ಲ, ಈವೊತ್ತು ನನ್ನದೇ ಅಡಿಗೆ."

ಅವಳ ಆಗ್ರಹ ಕಂಡು ಮೃಣಾಲ ಒಮ್ಮೆಲೆ ಇಳಿದುಹೋದಳು. "ನಾ ಇರಲಿಕ್ಕೇ ನೀನೇಕೆ ಹೊಗೆಯೊಳಗೆ ಸಾಯುವೆಯಕ್ಕ?" ಎಂದಳು.

ಅವಳ ಮುಖಭಾವ ಕಂಡು ಅಚಲೆ ಹಟಕ್ಕೆ ಬಿದ್ದಳು "ಹಾಗಾದರೆ ಬ್ರಾಹ್ಮಣ ಇದ್ದೂ ನೀನೇಕೆ ತೊಳಲಾಡುತ್ತೀ? ಉಂಹು' ಈವೊತ್ತು ನಾನೇ ಅಡಿಗೆ ಮಾಡುವವಳು!" ಎಂದಳು

ಇವಳೇಕೆ ಇಷ್ಟು ಹಟ ಹಿಡಿದಿದ್ದಾಳೆಂಬುದು ಮೃಣಾಲಳಿಗೆ ತಿಳಿಯಲಿಲ್ಲ ನಗೆಯನ್ನು ಹತ್ತಿಟ್ಟು ಕೃತ್ರಿಮ ಕ್ರೋಧದಿಂದ ನುಡಿದಳು "ಭಪ್ಪರೆ ಹೆಣ್ಣೆ! ಒಂದೊಂದಾಗಿ ನನ್ನೆಲ್ಲವನ್ನೂ ಅಪಹರಿಸಬೇಕೆನ್ನುವೆಯಾ? ಎಲ್ಲಾ ಕಸಿದುಕೊಂಡೆ, ಒಂದೆರಡು ದಿನ ಅಡಿಗೆಮಾಡಿ ಬಡಿಸುತ್ತೇನಲ್ಲ— ಅದೂ ಸಹನವಿಲ್ಲವೆ? ಈವೊತ್ತಿನಿಂದ ಸವತಿ ಮತ್ಸರಕ್ಕೆ ಮೊದಲಾಯಿತಲ್ಲವೆ?"

ಅಚಲೆಯ ಅಂತರಂಗದಲ್ಲಿ ಚುರಕ್ ಎಂದಿತು ಕೊನೆಯ ಮಾತು ಅವಳ ಈರ್ಷೆಯ ಹುಣ್ಣಿಗೆ ಬರೆಕೊಟ್ಟಿತು ಅವಳು ಗಂಭೀರವಾಗಿ ಹೇಳಿದಳು "ಇಲ್ಲ, ಈವೊತ್ತು ನನ್ನದೇ ಅಡಿಗೆ"

ಅಚಲೆಗೆ ಸಿಟ್ಟುಬಂದಿದೆ ಎಂದು ಮೃಣಾಲ ಈಗ ಅರಿತಳು ಸ್ವಲ್ಪ ಹೊತ್ತು ಸುಮ್ಮನಿದ್ದು, "ಒಳ್ಳೆಯದು ನೀನೆ ಅಡು ನಡೆ, ಎಲ್ಲಿ ಏನಿದೆ ತೋರಿಸುತ್ತೇನೆ" ಎಂದಳು

ಮಹಿಮ ಮನೆಯಲ್ಲಿಯೇ ಇದ್ದನೆಂಬುದು ಯಾರಿಗೂ ಗೊತ್ತಿರಲಿಲ್ಲ. ಅವನು ಎದುರಿಗೇ ನಿಂತುದನ್ನು ಕಂಡು ಇಬ್ಬರೂ ಕಕ್ಕಾವಿಕ್ಕಿಯಾದರು ಅಚಲೆಯನ್ನುದ್ದೇಶಿಸಿ, "ಮೃಣಾಲ ಇರುವ ತನಕ ಅವಳೇ ಅಡಿಗೆ ಮಾಡಲೊಲ್ಲಳೇಕೆ" ಎಂದು ಅವನೆಂದ

ಅವಳ ಆಗ್ರಹದ ಕಾರಣ ಅವನಿಗೆ ಗೊತ್ತು ಆದರೆ ಬಿಚ್ಚಿ ಆಡುವಂತಿರಲಿಲ್ಲ

ಅಚಲೆ ಮತ್ತಷ್ಟು ಕಿಡಿಕಿಡಿಯಾದಳು ಸಿಟ್ಟು ಹತ್ತಿಟ್ಟು, "ಇಲ್ಲ, ನಾನೇ ಅಡಿಗೆಗೆ ಹೋಗುತ್ತೇನೆ" ಎಂದಿಷ್ಟೇ ನುಡಿದು ಬಡಬಡನೆ ಹೋಗಿಬಿಟ್ಟಳು

ಅಚಲೆ ಹಟದಿಂದ ಅಡುಗೆಗೆ ಹೋದಳು ಅಡುಗೆಯಲ್ಲಿ ಅವಳು ಯಾರಿಗೇನು ಕಡಿಮೆಯಿಲ್ಲ. ಆದರೆ ಅದರಲ್ಲಿ ಇಂದವಳ ಮನಸೇ ಹಿಡಿಯು

ಲಿಲ್ಲ ಖಟ್‌ಖಟ್ ಬಡಿಯುತ್ತ ಬೇಯಿಸುತ್ತಿದ್ದಳಷ್ಟೇ ಮಹಿಮ ತನ್ನನ್ನೆಂದೂ ಅಷ್ಟೊಂದು ಪ್ರೀತಿಸಲಿಲ್ಲವೆಂದು ಅವಳಿಗೆನಿಸತೊಡಗಿತು ಮದುವೆಗೆ ಕೆಲ ದಿನ ಹಿಂದೆ ಸುರೇಶನೊಡನಾದ ಘರ್ಷಣೆಯ ಸಂಗತಿಗಳೊಡನೆ ಅವೆಲ್ಲವನ್ನೂ ತುಲನೆ ಮಾಡಿದಳು ತನ್ನ ಬಗ್ಗೆ ಮಹಿಮ ಯಾವಾಗಲೂ ಉದಾಶೀನನೇ ಎಂದೂ ಕಾಣತೊಡಗಿತು ತಂದೆಯಿಂದ ಸಂಬಂಧ ಬಿಡುಗಡೆಗೆ ಬಂದಾಗಲೂ ಮಹಿಮ ರವಷ್ಟೂ ವಿಚಲಿತನಾಗಿದ್ದುದನ್ನು ನೆನೆದಾಗ ಅವಳಿಗೆ ಅದರೊಳಗೆಷ್ಟೂ ಸಂಶಯವುಳಿಯಲಿಲ್ಲ

ಇಲ್ಲಿಗೆ ಬಂದಂದಿನಿಂದ ಮೃಣಾಲ–ಅಚಲೆ ಕೂಡಿಯೇ ಊಟಕ್ಕೆ ಕೂಡ್ರುತ್ತಿದ್ದರು ಇಂದು ಮೃಣಾಲಳನ್ನು ಕರೆಯ ಹೋದ ಹರಿಯ ತಾಯಿ ಬಂದು, "ಮೃಣಾಲಕ್ಕಗೆ ಜ್ವರ ಬಂದಂತಾಗಿದೆ, ಆಕೆ ಉಣ್ಣುವುದಿಲ್ಲ" ಎಂದು ಹೇಳಿದಳು ಅಚಲೆ ಏನೂ ಮಾತನಾಡದೆ ಎದ್ದು ಹೋಗಿ "ಊಟಕ್ಕೆ ಬಾ ಮೃಣಾಲಕ್ಕ," ಎಂದು ಕರೆದಳು

ಮೃಣಾಲ ಕಣ್ಣು ಮುಚ್ಚಿಕೊಂಡು ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು ಕಣ್ದೆರೆದು ನಸುನಕ್ಕು, "ನೀ ಉಂಡುಬಿಡು ಅತ್ತಿಗೆ ನನ್ನ ಮೈಯೊಳಗೆ ನೆಟ್ಟಗಿಲ್ಲ" ಎಂದಳು

"ಏನಾಗಿದೆ ? ಜ್ವರವೆ ?"

"ಹಾಗೇ ಕಾಣುತ್ತದೆ ಈವೊತ್ತು ಉಪವಾಸ ಮಾಡಿದರೆ ನೆಟ್ಟಗಾಗುವುದು."

ಅಚಲೆ ಅವಳ ಹಣೆಮುಟ್ಟಿ ನೋಡಿದಳು "ನಾನಷ್ಟು ತಿಳಿಗೇಡಿಯಲ್ಲ. ಮೃಣಾಲಕ್ಕ, ನಡೆ, ಉಣ್ಣು ನಡೆ"

"ದೇವರಾಣೆ ಅತ್ತಿಗೆ, ನನಗೆ ಉಣ್ಣಲಾಗುವುದಿಲ್ಲ ನೀನೇಕೆ ನೊಂದುಕೊಂಡು ಕರಯುಬಂದೆಯಕ್ಕ ? ಬೇಕಾದರೆ ನಡೆ, ನಾನೂ ಬಂದು ನಿನ್ನೆದುರಿಗೆ ಕುಳಿತುಕೊಳ್ಳುತ್ತೇನೆ"

"ಹಸಿದ ಗೆಳತಿಯನ್ನು ಮುಂದೆ ಕುಳ್ಳಿರಿಸಿಕೊಂಡು ಉಣ್ಣುವುದು ಗೊತ್ತಿಲ್ಲ ನಮಗೆ," ಎಂದು ಅಚಲೆ ಕಠೋರವಾಗಿ ನುಡಿದಳು

"ಗೆಳತಿಗೆ ಊಟದ ಅಗತ್ಯವಿಲ್ಲದಿದ್ದರೆ ?"

"ಏಕೆ ಅಗತ್ಯವಿಲ್ಲ, ಒಂದಿಷ್ಟು ಹೇಳಬಾರದೆ ? ನಿನಗೆ ಜ್ವರವಿಲ್ಲ, ಪಿಟ್ಟು. ನೀನೂ ಉಣ್ಣದೆ ನನ್ನನ್ನೂ ಕೊರಗಿಸಬೇಕೆಂದಿದ್ದರೆ ಹಾಗೆ ಸ್ವಚ್ಛ

ವಾಗಿ ಹೇಳಿಬಿಡು— ನಾನಿನ್ನು ಪೀಡಿಸುವುದಿಲ್ಲ ”

ಮೃಣಾಲ ಸರಕ್ಕನೆ ಎದ್ದು ಕುಳಿತಳು “ ಗಂಡನಾಣೆ ಅತ್ತಿಗೆ, ನನಗೆಷ್ಟೂ ಸಿಟ್ಟಿಲ್ಲ ಆದರೆ ನನಗೆ ಉಣ್ಣಲಿಕ್ಕಾಗುವುದಿಲ್ಲ ನಡೆ ಅಕ್ಕಾ, ನಿನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಉಣಿಸುವೆ ” ಎಂದಳು.

“ ಎಂದರೆ ಜ್ವರ ಇಲ್ಲ ತಾನೆ ? ಅದು ಶುದ್ಧ ಭೂರಿ ? ”

ಮೃಣಾಲ ಸುಮ್ಮನಿದ್ದಳು ಅಚಲೆಯೂ ಕೆಲಹೊತ್ತು ಸುಮ್ಮನಿದ್ದು ಉಸಿರ್ಗರೆದು ಮೆಲ್ಲಮೆಲ್ಲನೆ ಮಾತಿಗೆ ಮೊದಲುಮಾಡಿದಳು “ ಈಗ ತಿಳಿಯಿತು ಮೊದಲೇ ನೀ ಬಾಯಿಬಿಚ್ಚಿ ಹೇಳಿದ್ದರೆ ನಾ ನಿನಗೆ ಹೀಗೆ ಅನ್ಯಾಯವಾಗಿ ತೊಂದರೆ ಕೊಡುತ್ತಿರಲಿಲ್ಲ ದಾಸದಾಸಿಯರೆದುರು ನಾಚಿಕೊಳ್ಳುವ ಪ್ರಸಂಗ ನನಗೆ ಬರುತ್ತಲೂ ಇರಲಿಲ್ಲ ಚಿಂತಿಲ್ಲ, ಹೋಗಲಿ, ನನ್ನನ್ನು ಕ್ಷಮಿಸಿಬಿಡಕ್ಕ. ಹಾಲಿಗೆ ಮೈಲಿಗೆಯಿಲ್ಲವೆಂದು ಕೇಳಿದ್ದೇನೆ, ಅದನ್ನೇ ಒಂದು ಬಟ್ಟಲು ತಂದುಕೊಡುವೆ ಯದು ಹೋಗಿ ಪೇಟೆಯಿಂದ ಬಂದಿಷ್ಟು ಸಂದೇಶ ತರುವ ಏನು ಹೇಳು ”

ಮೃಣಾಲ ಮೊದಲು ಹತಬುದ್ಧಳಾಗಿ ಸುಮ್ಮನಿದ್ದಳು ಸ್ವಲ್ಪ ಹೊತ್ತಿನಲ್ಲಿ ಆ ಸ್ಥಿತಿ ತೊಲಗಿದರೂ ಅವಳು ಮಾತನಾಡಲಿಲ್ಲ “ ಏನೆಂದೆ ? ” ಎಂದು ಅಚಲೆ ಮತ್ತೆ ಕೇಳಿದಳು ಮೃಣಾಲ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ ಮೆಲುದನಿಯಿಂದ ನುಡಿದಳು “ ಈಗಿರಲೊಲ್ಲದೇಕೆ ” ಅಚಲೆ ಕೆಲ ನಿಮಿಷ ಸುಮ್ಮನೆ ನಿಂತಿದ್ದು ನಿದಾನವಾಗಿ ಹೊರಟುಹೋದಳು.

ಮೃಣಾಲ ಮುಖವೆತ್ತಲಿಲ್ಲ, ಮಾತನಾಡಲಿಲ್ಲ ಮುದುಕ ಅತ್ತೆಗೆ ತಾನೇ ಮಾಡಿ ಹಾಕುವವಳು ಅವರು ಅತ್ಯಂತ ಮಡಿವಂತ ಜನ; ಇದನ್ನೆಲ್ಲಿಯಾದರೂ ಕೇಳಿಬಿಟ್ಟರೆ ತನ್ನ ಕೈಯ ನೀರನ್ನೂ ಮುಟ್ಟಲಾರರು ಅಚಲೆಯ ಮುಂದೆ ಇದನ್ನೆಲ್ಲ ನಿದಾರುಣ ಅಭಿಮಾನದಿಂದ ತೋರಗೊಡಲಾಗಲಿಲ್ಲ

ಅಚಲೆ ಅಡುಗೆಮನೆಯ ಕೆಲಸ ಮುಗಿಸಿ ಕೈತೊಳೆದುಕೊಂಡು ಬಂದು ತನ್ನ ಕೋಣೆಯೊಳಗೆ ಮಲಗಿಬಿಟ್ಟಳು ಮತ್ತಾವ ಕಾರಣವಾದರೂ ಇರಬೇಕು, ಬರೀ ತುಚ್ಛತೆಯಿಂದಲೇ ತನ್ನ ಕೈಯಡಿಗೆಯನ್ನು ಮೃಣಾಲ ಮುಟ್ಟಲಿಲ್ಲವೆಂಬುದು ಸುಳ್ಳು ಎಂದು ಆಕೆ ಅರಿತಿದ್ದಳು. ಇದರ ನಿಜ ಅರಿತಿದ್ದರೆ ಈ ವಿಷಯವಾಗಿ ಅವಳು ಒಂದು ಮಾತೂ ಆಡುತ್ತಿರಲಿಲ್ಲ.

ಕಲಹದಿಂದಲೇ ಆರಂಭವಾದ ಈ ದಿನದ ಮಧ್ಯಾಹ್ನ ಅಟ್ಟಡಿಗೆ ಉಣ್ಣುವು ದನ್ನು ಭಗವಂತ ಯಾರ ಅದೃಷ್ಟದಲ್ಲಿಯೂ ಬರೆದಿಲ್ಲವೆಂಬುದನ್ನು ಇಬ್ಬರೂ ಬಲ್ಲರು

ಅಪರಾಹ್ನದಲ್ಲ ಎತ್ತಿನ ಬಂಡಿಯೊಂದು ಮನೆಯೆದುರಿಗೆ ಬಂದು ನಿಂತಿತು. ಮೃಣಾಲ ಅಚಲೆಯ ಕೋಣೆಗೆ ಬಂದು ಹೇಳಿದಳು "ನಮಸ್ಕಾರ ಮಾಡಲಿಕ್ಕೆ ಬಂದೆ ಅತ್ತಿಗೆ, ಹೋಗಿಬರುತ್ತೇನೆ. ಬೇಕಾದಾಗ ಕರೆಸು, ಆಗತ್ಯ ಬರುತ್ತೇನೆ," ಎಂದು ಸ್ವಲ್ಪ ತಡೆದು, "ಹೋಗುವಾಗ ಒಂದು ಮಾತೂ ಆಡುವುದಿಲ್ಲವೇ ಅಕ್ಕಾ?" ಎಂದು ಕ್ಷಣಹೊತ್ತು ಆತುರ ದೃಷ್ಟಿಯಿಂದ ನೋಡುತ್ತ ನಿಂತಳು

ಅಚಲೆ ಮಾತನಾಡಲಿಲ್ಲ ಕುಳಿತಂತೆಯೇ ತಲೆತಗ್ಗಿಸಿ ಕುಳಿತಿದ್ದಳು. ಮೃಣಾಲ ಅಲ್ಲಿಂದ ಹೊರಬೀಳುವ ಹೊತ್ತಿಗೆ ಮಹಿಮ ಬಂದ "ಸ್ವಲ್ಪ ನಿಲ್ಲಣ್ಣಾ, ನಮಸ್ಕಾರ ಮಾಡುವೆ," ಎಂದಳು ಮೃಣಾಲ

"ಉಪವಾಸವೇ ಊರಿಗ ಹೋಗುವೆಯಾ, ಮೃಣಾಲ? ನಾಳೆ ಮುಂಜಾನೆ ಹೋದರಾಗದೆ?" ಎಂದು ಕೇಳಿದ ಮಹಿಮ

ಮೃಣಾಲ ನಸುನಗೆಯೊಡನೆ ಗೋಣು ಹಾಕಿ ಹೇಳಿದಳು "ಇಲ್ಲಣ್ಣ, ಯದು ಬಂಡಿ ತಂದಿದ್ದಾನ ಈಗ ಹೋಗುವೆ. ಮತ್ತೆ ಕರೆಸಿದಾಗ ಬಂದೇ ಬರುತ್ತೇನೆ" ಎಂದು ಕೊರಳೊಳಗೆ ಸೆರಗು ಹಾಕಿಕೊಂಡು ನಮಸ್ಕರಿಸಿ ಪಾದಧೂಳಿಗೊಂಡು, "ಕೊರಳಾಣೆ ಅಣ್ಣ, ಮತ್ತೆ ಕರೆಸಲು ಮರೆಯಬೇಡ," ಎಂದಳು

ಮಹಿಮ ಈಹೊತ್ತು ನಕ್ಕ "ಸುಟ್ಟಿತು, ನೀ ನಿನ್ನ ಸ್ವಭಾವ ಎಂದಾದರೂ ಬಿಟ್ಟೀಯಾ?" ಎಂದ.

"ಸತ್ತರೆ ಹೋಗುವುದು, ಅಲ್ಲಿಯತನಕ ಇಲ್ಲ," ಎಂದು ನಗುತ್ತ ನುಡಿದು ಮೃಣಾಲ ಹೋಗಿ ಬಂಡಿ ಹತ್ತಿದಳು

ಈಹೊತ್ತೇ—ಇಷ್ಟು ತಟ್ಟನೆ—ಮೃಣಾಲ ಹೊರಟುಹೋಗುವಳೆಂದು ಅಚಲೆ ಭಾವಿಸಿರಲಿಲ್ಲ ಅವಳು ತಾನೂ ಉಣ್ಣಲಿಲ್ಲ ಪನ್ನನ್ನೂ ಉಣ್ಣಗೊಡಲಿಲ್ಲ, ಈ ಅಪರಾಧಕ್ಕಾಗಿ ಮೃಣಾಲಳಿಗೆ ಯಾವ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂಬುದನ್ನೇ ಅಚಲೆ ಇಷ್ಟೊತ್ತಿನತನಕ ಯೋಚಿಸುತ್ತಲಿದ್ದಳು. ಪ್ರೀತಿಸುವವರನ್ನು ತಿರಸ್ಕರಿಸುವರೆಂಬ ಅರೋಪಕ್ಕೆ ಗುರಿಮಾಡುವುದಕ್ಕಿಂತ

ಗುರುತರವಾದ ಶಿಕ್ಷೆ ಮತ್ತೊಂದಿಲ್ಲವೆಂದು ಪ್ರೇಮವೇ ಹೇಳುತ್ತಿದೆ ಈ ಗುರುದಂಡವನ್ನೇ ಮೃಣಾಲಳ ಮೇಲೆ ಪ್ರಯೋಗಿಸಲು ಅಚಲೆ ಯೋಚಿಸುತ್ತಿದ್ದಳು ಮೃಣಾಲಕ್ಕ ತನ್ನನ್ನು ಬ್ರಾಹ್ಮ ಸ್ತ್ರೀಯೆಂದು ತುಚ್ಛೀಕರಿಸುತ್ತಿರುವುದಕ್ಕೆ, ಅವಳನ್ನಿದೇ ಅಸ್ತ್ರದಿಂದ ಕೂತರೆ ನಿಂತರೆ ತಿವಿಯಬೇಕೆಂದು ನಿಶ್ಚಯಿಸಿಕೊಂಡಿದ್ದಳು ಈಗೆಲ್ಲ ವ್ಯರ್ಥವಾಗಿಬಿಟ್ಟಿತು

ಮೃಣಾಲ ಉಪವಾಸ ಬೀಳ್ಕೊಂಡುದಕ್ಕೆ ಅಚಲೆಯ ಕಣ್ಣುಗಳೂ ಕಂಬನಿದುಂಬಿದ್ದವು ಆದರೆ ಹೊರಗಡೆಯಿಂದ ಅವಳ ನಗೆಮಾತು ಕಿವಿಗೆ ಬೀಳುತ್ತಲೇ ತಪ್ತ ಮರುಭೂಮಿಯಂತೆ ಕಂಬನಿಯನ್ನು ಇಂಗಿಸಿಬಿಟ್ಟಿತು ಬಾಗಿಲ ಮರೆಯಲ್ಲಿ ನಿಂತು ಅವರಿಬ್ಬರ ಬೀಳ್ಕೊಡುವ ಕೊಳ್ಳುವ ವಿಧಾನವನ್ನು ನೋಡಿ ಅಚಲೆ ಸಿಡಿಲೆರಗಿದ ಮರದಂತೆ ಉರಿಯುತ್ತ ನಿಂತಳು

ಕೆಲ ಹೊತ್ತಿನ ತರುವಾಯ ಮಹಿಮ ಕೋಣೆಯೊಳಗೆ ಬಂದಾಗ ಅವಳ ಸ್ವಾಭಾವಿಕ ಸ್ಥೈರ್ಯ ಸಮೂಲ ನಷ್ಟವಾಗಿತ್ತು ಆದರೂ ಅವಳ ಆಜನ್ಮ ಶಿಕ್ಷಣ–ಸಂಸ್ಕಾರಗಳು ಅವಳನ್ನು ಬೀಳದಂತೆ ಹಿಡಿದವು ಅವಳು ಸಾವರಿಸಿಕೊಂಡು ಮಾತನಾಡಿದಳು "ನಿಜವಾಗಿಯೂ ಪಟ್ಟಣಿಗರಿಗೆ ಹಳ್ಳಿವಾಸಕ್ಕಿಂತ ಹೆಚ್ಚಿನ ವಿಡಂಬನೆ ಮತ್ತೊಂದಿರಲಿಕ್ಕಿಲ್ಲ, ಅಲ್ಲವೆ?"

ತುಸ ಹೊತ್ತು ಹೆಂಡತಿಯ ಮುಖವನ್ನೇ ನೋಡುತ್ತಿದ್ದು ಮಹಿಮನೆಂದ "ನಿನ್ನ ವಿಷಯವನ್ನೇ ಮಾತನಾಡುತ್ತಿರುವೆಯಲ್ಲವೆ" ಮೊದಮೊದಲು ಸ್ವಲ್ಪ ಕಷ್ಟವಾಗುತ್ತಿರಬಹುದು ಆದರೆ ಮೃಣಾಲಳೊಡನೆ ನಿನಗೆ ಕೂಡಿ ನಡೆಯಲಿಕ್ಕಿಲ್ಲವೆಂದು ನಾ ಕೊಂಚವೂ ಎಣಿಸಿರಲಿಲ್ಲ ಅವಳೊಡನೆ ಯಾರದೂ ಎಂದೂ ಜಗಳವಾಗಿರಲಿಲ್ಲ."

"ನನ್ನೊಡನೆ ಮಾತ್ರ ಎಲ್ಲರದೂ ಅಸರಂತ ಜಗಳವಾಗುತ್ತಿದೆಯೇನೋ!"

ಮಹಿಮ ಮೆಲ್ಲಮೆಲ್ಲನೆ ಹೇಳಿದ "ನಿನಗೆ ದಿನಪಿಡೀ ಊಟವಿಲ್ಲ— ಹೋಗಲಿ ಈ ಮಾತು ಈಗ ಬೇಡ"

ಅಚಲೆ ಮತ್ತಷ್ಟು ಉರಿದೆದ್ದು ನುಡಿದಳು "ಮೃಣಾಲಕ್ಕನೂ ಊಟವಿಲ್ಲದೆ ಊರಿಗೆ ಹೋದಳು ಅವಳೊಡನೆ ನಗುನಗುತ್ತ ಮಾತನಾಡಲು ಮಾತ್ರ ನಿಮಗೇನೂ ಆಗಲಿಲ್ಲ!"

"ಇದೇನೆನ್ನುತ್ತೀ ಅಚಲಾ!" ಮಹಿಮ ಆಶ್ಚರ್ಯದಿಂದ ನುಡಿದ.

"ನಾ ಎನ್ನುವುದಿಷ್ಟೇ—ನನ್ನನ್ನು ಈ ತೆರದ ಅಪಮಾನಕ್ಕೀಡು ಮಾಡಲಿಕ್ಕೆ ನಾ ಏನಂಥ ಅಪರಾಧ ಮಾಡಿದ್ದು?"

ಮಹಿಮ ವಿಹ್ವಲನಾದ "ನಾ ನಿನ್ನನ್ನು ಅವಮಾನಿಸಿದೆನೆ?" ಎಂದು ಕೇಳಿದ

"ಹಾಂ, ನೀವು"

"ಸುಳ್ಳು"

ಕೊಂಚ ತಡೆದು ದನಿಯನ್ನು ಮಿದುಗೊಳಿಸಿಕೊಂಡು ಅಚಲೆ ಹೇಳಿದಳು "ನಾನೆಂದೂ ಸುಳ್ಳಾಡುವುದಿಲ್ಲ ಆದರೆ ಅದಿರಲಿ, ನಿಮಗೆ ನೀವು ಸತ್ಯವಂತರೆಂಬ ಹೆಮ್ಮೆಯಿದ್ದರೆ, ಸತ್ಯವಾಗಿ ಉತ್ತರ ಕೊಡುವಿರಾ?"

ಮಹಿಮ ಉತ್ಸುಕ ದೃಷ್ಟಿಯಿಂದ ನೋಡಿದ ಮಾತ್ರ

"ಮೃಣಾಲಕ್ಕ ಇಂದು ಮಾಡಿ ಹೋದಳಲ್ಲ, ಅದಕ್ಕೆ ನಿಮ್ಮ ಹಳ್ಳಿ ಸಮಾಜದಲ್ಲಿ ಅಪಮಾನ ಎನ್ನುವುದಿಲ್ಲವೆ?" ಅಚಲೆ ಕೇಳಿದಳು.

"ಆದರೆ ಅದರೊಳಗೆ ನನ್ನನ್ನೇಕೆ ತೊಡಕಿಸುತ್ತೀ?"

"ಅವನ್ನು ಹೇಳುತ್ತೇನೆ ಮೊದಲು ನನ್ನ ಮಾತಿಗೆ ಉತ್ತರ ಕೊಡಿರಿ"

"ಒಳ್ಳೆಯದು, ಎನ್ನುತ್ತಾರೆ ಎಂದು ತಿಳಿ—"

"ತಿಳಿಗಿಳಿ ಬೇಡ ಸ್ಪಷ್ಟ ಹೇಳಿರಿ"

"ಹೂಂ, ಅಪಮಾನ ಎನ್ನುವರು"

"ಎನ್ನುವರೆ? ಹಾಗಾದರೆ ನೀವು ಗೊತ್ತಿದ್ದೂ ಅಪಮಾನ ಮಾಡಿಸಿದ್ದೀರಿ ಅವಳು ನನ್ನ ಕೈಲಿ ಉಣ್ಣುವುದಿಲ್ಲವೆಂಬುದು ನೀವು ಖಂಡಿತ ಬಲ್ಲಿರಿ, ಅಲ್ಲವೆ?" ಎಂದು ಅಚಲೆ ಮಹಿಮನ ಹೃದಯಾಂತರಾಳದವರೆಗೂ ಉರಿನೋಟವನ್ನು ಚಾಚುವಳೆಂಬಂತೆ ಕಣ್ಣು ಕೆಕ್ಕರಿಸಿ ನೋಡಿದಳು. ಮಹಿಮ ಸ್ತಂಭಿತನಾಗಿ ನೋಡುತ್ತ ನಿಂತ

ಅದೇ ಸಮಯಕ್ಕೆ ಹೊರಗೆ ಸುರೇಶನ ಕೂಗು. "ಮಹಿಮ, ಎಲ್ಲಿದ್ದೀ?"

೧೬

"ಇದೇನು ಸುರೇಶ! ಬಾ ಬಾ, ಒಳಗೆ ಬಾ ಕ್ಷೇಮವೆ?"

ಮಹಿಮನ ಸ್ವಾಗತ ಸಂಭಾಷಣ ಮುಗಿಯುವುದರೊಳಗೆ ಸುರೇಶ ಎದುರಿಗೆ ಬಂದು ನಿಂತ ಬ್ಯಾಗ್ ಕೆಳಗಿಟ್ಟು ಅವನೆಂದ "ಕ್ಷೋಮ,

ಕ್ಷೇಮ ಇದೇನು ಒಬ್ಬನೇ ನಿಂತಿರುವೆಯಲ್ಲ! ಅಚಲೆ—ಹೊಸಮೊದಲ ಗಿತ್ತಿ—ಒಂದು ಗಳಿಗೆಯೊಳಗೇ ಸಚಲೆಯಾಗಿ ಅಂತರ್ಧಾನವಾದಳು ಹೇಗೆ? ಇದೇ ಈಗ ನಾ ಬೀದಿಯ ಮುರುವಿನಲ್ಲಿರುವಾಗಲೇ ಅವಳ ಗಡುಸುದನಿ ನಿಮ್ಮ ಮನೆಯ ಗುರುತು ಕೊಟ್ಟಿತು"

ವಾಸ್ತವವಾಗಿ, ಅಚಲೆಯ ಕೊನೆಯ ವ್ಯಾಖ್ಯೆ ಸಿಟ್ಟಿನ ಭರದಲ್ಲಿ ಕೊಂಚ ಗಟ್ಟಿಯಾಗಿಯೇ ಹೊರಟಿತ್ತೇನೋ ಹೌದು. ಆದರೆ ಸುರೇಶ ಅದನ್ನು ಕೇಳಿದುದು ಬಾಗಿಲಲ್ಲಿ

"ನೋಡಿದೆಯಾ ಮಹಿಮ, ಕಲಿತ ಹೆಣ್ಣು ಮಾಡಿಕೊಳ್ಳುವುದು ಎಷ್ಟು ಲಾಭ? ಬಂದು ಎಷ್ಟು ದಿನವಾಗಿದೆ?—ಇಷ್ಟರೊಳಗೇ ಹಳ್ಳಿಯ ಊರಿನ ಪ್ರೇಮಾಲಾಪದ ರೀತಿಯನ್ನು ಎಷ್ಟು ವೈಗೂಡಿಸಿಕೊಂಡಿದ್ದಾಳೆ! ಇದರೊಳಗೆ ಹಳ್ಳಿ ಹೆಂಗುಸಿಗೂ ಕಸರು ಸಿಕ್ಕಲಿಕ್ಕಿಲ್ಲ!"

ಮಹಿಮನ ಮೋರೆ ಲಜ್ಜೆಯಿಂದ ಕೆಂಜಿಗವಾಯಿತು ಸುರೇಶ ಕೋಣೆಯ ಕಡೆ ನೋಡಿ ಅಚಲೆಯನ್ನುದ್ದೇಶಿಸಿ ಎಂದ "ಅಕಾಲದಲ್ಲಿ ಬಂದು ರಸಭಂಗಮಾಡಿದೆ ಅತ್ತಿಗೆ, ಕ್ಷಮಿಸು"- "ಮಹಿಮ, ನಿಂತುಬಿಟ್ಟೆ? ಕೂಡ್ರುವುದಕ್ಕೇನಾದರೂ ಇದ್ದರೆ, ನಡೆ, ಕೂಡ್ರುವ ನಡೆನಡೆದು ಕಾಲಸಂದು ಕಳಚುವಂತಾಗಿದೆ ಚೆಲೋ ಸ್ಥಳದೊಳಗೆ ಮನೆಮಾಡಿದ್ದೀಯಪ್ಪ! ನಡೆ ನಡೆ, ಕಲಕತ್ತೆಗೆ ನಡೆ"

ಇಬ್ಬರೂ ಹೊರಗಿನ ಕುಳಿತುಕೊಳ್ಳುವ ಕೋಣೆಗೆ ಹೋದರು.

"ಅತ್ತಿಗೆಯೇನು ನನ್ನೆದುರಿಗೆ ಹೊರಗೆ ಬರಲಿಕ್ಕಿಲ್ಲ ಘೋಷೆಯೊಳಗೊ?" ಎಂದು ಸುರೇಶ ಕೇಳಿದ

ಮಹಿಮ ಉತ್ತರ ಕೊಡುವ ಮುನ್ನವೇ ಪಕ್ಕದ ಬಾಗಿಲನ್ನು ತೆರೆದು ಅಚಲೆ ಬಂದಳು ಅವಳ ಮೋರೆಯ ಮೇಲೆ ಜಗಳದ ಗುರುತು ಕೂಡ ಇರಲಿಲ್ಲ "ಏನಿದು ಅಕಲ್ಪಿತ ಸೌಭಾಗ್ಯ! ಏನು ಅಕಸ್ಮಾತ್ತಿದು?" ಎಂದಳು ನಮಸ್ಕರಿಸಿ ಪ್ರಸನ್ನವದನದಿಂದ.

ಅವಳ ಅರಳಿದ ನಗುಮೊಗದಲ್ಲಿ ಸುಖಸೌಭಾಗ್ಯದ ಪ್ರಸನ್ನವಿಕಾಸವನ್ನು ಕಂಡು ಸುರೇಶನ ಅಂತರಂಗ ಈರ್ಷೆಯಿಂದ ಉರಿಯಿತು ಪ್ರತಿನಮಿಸಿ ಅವನೆಂದ: "ಈಗೆನಿಸುತ್ತಿದೆ- ಹೀಗೆ ಅಕಸ್ಮಾತ್ ಬರಬಾರದಾಗಿತ್ತೆಂದು. ಏನು ಪ್ರಕರಣ ನಡೆದಿತ್ತು? Their first difference ಓ,

ಬಂದಾಗಿನಿಂದಲೂ ಹೀಗೇಯೋ ? ”

ಅಚಲೆ ನಗುಮೊಗದಿಂದಲೇ ಎಂದಳು “ ನಿಮಗೆ ಯಾವುದನ್ನು ಕೇಳಿದರೆ ಹೆಚ್ಚು ಆನಂದವಾಗುವುದು ? ಕೊನೆಯದನ್ನೊ ? ಹಾಗಾದರೆ ಹಾಗೆ ಹೇಳುವುದುಚಿತ– ಅತಿಥಿಗಳ ಮನವನ್ನು ನೋಯಿಸಲಾಗದು ”

ಸುರೇಶನ ಮುಖಭಾವ ಗಂಭೀರವಾಯಿತು “ ನೋಯಿಸಬಾರ ದೆಂದು ಯಾರು ಹೇಳಿದರು ? ಆದರೆ ಮನೆಯ ಗೃಹಿಣಿಯ ಕರ್ತವ್ಯವೇ ಅದು–ಅದೇ ಅವಳ ಲಕ್ಷಣ ”

ಅಚಲೆ ನಗುತ್ತ ಹೇಳಿದಳು “ ಮನೆಯೇ ಅಲ್ಲ, ಅದಕ್ಕೆ ಗೃಹಿಣಿ ಯಂತೆ ಮತ್ತೆ! ಈ ಬಡವರ ಗುಡಿಸಲಲ್ಲಿ ಇಂದು ರಾತ್ರಿ ಹೇಗೆ ಕಳೆದೀರೋ ಎಂಬುದೇ ನನ್ನ ಚಿಂತೆ. ಆದರೆ ನಿಮಗೆ ಧನ್ಯವಾದ— ತಿಳಿದೂ ತಿಳಿದೂ ಈ ತೊಂದರೆ ಅನುಭವಿಸಲು ಬಂದಿದ್ದೀರಿ ! ”

ಗಂಡನ 'ಕಡ ನೋಡಿ ಎಂದಳು “ಅಲ್ಲಾ, ನಯನಬಾಬುಗಳಿಗೆ ಹೇಳಿದರೆ ಚಂದ್ರಬಾಬುಗಳ ಮನೆಯಲ್ಲಿ ಇಂದೊಂದು ರಾತ್ರಿ ಇವರಿಗೆ ಮಲಗಲು ಏರ್ಪಾಡಾಗಲಿಕ್ಕಿಲ್ಲವೆ ? ಅವರದು ಪಕ್ಕಾಮನೆ—ಕೂಡ್ರಲಿಕ್ಕೆ ನಿಲ್ಲಲಿಕ್ಕೆ ಆರಾಮವಾಗಿದೆ ಅಲ್ಲಿವರಿಗೆ ತೊಂದರೆಯಾಗಲಿಕ್ಕಿಲ್ಲ ”

ಸೌಜನ್ಯದ ಮುಸುಕಿನಲ್ಲಿ ಇಬ್ಬರೂ ಶ್ಲೇಷಾರ್ಥದಲ್ಲಿ ನಡೆಸಿದ ಈ ಘಾತಪ್ರತಿಘಾತಗಳಿಂದ ಮಹಿಮ ಒಳಗೊಳಗೆ ಅಧೀರನಾದ ಅದನ್ನು ಹೇಗೆ ನಿಲ್ಲಿಸಬೇಕೆಂಬುದನ್ನರಿಯದಾಗಿದ್ದ ಅಷ್ಟರೊಳಗೆ ಸುರೇಶನೇ ಅದಕ್ಕೆ ಪತಿಕಾರ ಮಾಡಿದ. ಅವನು ಕೈಜೋಡಿಸಿ ನುಡಿದ. “ನನ್ನದೇ ತಪ್ಪಾಯಿತು ಅತ್ತಿಗೆ ..ಒಂದಿಷ್ಟು ಚಹಾಗಿಹಾ ಕೊಡು ಮೈಯೊಳಗೆ ಸ್ವಲ್ಪ ಹುರುಪು ಬರಲಿ. ಆ ಮೇಲೆ ನಯನಬಾಬುಗಳಿಗಾದರೂ ಹೇಳು, ಶ್ರವಣಬಾಬುಗಳಿಗಾದರೂ ಹೇಳು, ಚಂದ್ರಬಾಬುಗಳ ಮನೆಯಲ್ಲಿ ವ್ಯವಸ್ಥೆ ಮಾಡು ಆದರೆ ಏನೇ ಹೇಳು ಮಹಿಮ, ಈ ಮನೆಯ ಕಡೆ ಇಷ್ಟು ಸೆಳೆತ ನಿಜವಾಗಿಯೂ ಇದ್ದರೆ ಸಂತೋಷದ ಮಾತೇ ಸರಿ. ”

ಮಹಿಮನ ಪರವಾಗಿ ಅಚಲೆಯೇ ಉತ್ತರವಿತ್ತಳು : “ ಸಂತೋಷ ಆಗುವುದು ಬಿಡುವುದು ಮನುಷ್ಯನ ಕೈಯೊಳಗಿನ ಮಾತು ಆದರೆ ಇದು ನನ್ನ ಅತ್ತೆಮನೆ. ಇದರ ಬಗ್ಗೆ ಆಕರ್ಷಣವಿರದೆ ಲಾಟಸಾಹೇಬರ ಮನೆಯ ಬಗ್ಗೆ ಇರುವುದು ಅಸಂಭವ. ಇರಲಿ, ಮೊದಲು ಸ್ವಲ್ಪ ಆರಾಮ ತೆಗೆದು

ಕೊಳ್ಳಿರಿ ಚಹಕ್ಕೆ ಎಸರಿಡಲು ಹೇಳಿಬಂದಿದ್ದೇನೆ ಐದು ನಿಮಿಷದೊಳಗೆ ತರುವೆ ಅಲ್ಲಿಯ ತನಕ ಬಾಯಿಮುಚ್ಚಿಕೊಂಡು ವಿಶ್ರಮಿಸಿರಿ" ಎಂದು ನಗುತ್ತ ಹೊರಟುಹೋದಳು

ಅವಳು ಹೋಗುತ್ತಲೆ ಸುರೇಶನ ಹೃದಯದ ಬೇಗೆ ಹೆಚ್ಚಿತೇನೋ. ತಾನು ಹುಟ್ಟಾ ದುರ್ಬಲ, ಅಸ್ಥಿರ ಎಂಬುದನ್ನು ಅವನು ಅರಿತ್ತಿದ್ದ. ಹಾಗೆಂದರೆ ಅವನಿಗೆ ನಾಚಿಕೆ ಎನಿಸುತ್ತಿರಲಿಲ್ಲ, ಸಿಟ್ಟೂ ಬರುತ್ತಿರಲಿಲ್ಲ ಚಿಕ್ಕಂದಿನಲ್ಲಿ ಅಪ್ತೇಷ್ಟರು ಇವನನ್ನು ಮಹಿಮನೊಂದಿಗೆ ಹೋಲಿಸಿ, ಭಾವನಾಪ್ರಧಾನ, ಲಹರಿಯುವ ಎನ್ನುತ್ತಿದ್ದರು ಅದವನಿಗೆ ಆನಂದವೇ. 'ಅದೇನು ಕೆಟ್ಟುದಲ್ಲ ತನ್ನ ಸಂಕಲ್ಪ ದೃಢವಲ್ಲ, ತಾನು ಪ್ರವೃತ್ತಿಯು ಅಧೀನ ಇರಬಹುದು. ಆದರೆ ತನ್ನ ಹೃದಯ ಪ್ರಶಸ್ತವಾದುದು, ಅದೆಂದೂ ಹೀನ ಕೆಲಸ ಮಾಡದು ತಾನು ಆಯ ನೋಡಿ ವ್ಯಯ ಮಾಡುವವನಲ್ಲ, ಪಾತ್ರಾಪಾತ್ರ ವಿಮರ್ಶಿಸಿ ದಾನಮಾಡುವವನಲ್ಲ,– ಇರಬಹುದು , ಆದರೆ ಮನಸು ಕರಗಿತೋ ತೀರಿತು, ಮೈಮೇಲಿನ ಬಟ್ಟೆಕೂಡ ತೆಗೆದು ಕೊಡಲು ಹಿಂದುಮುಂದು ನೋಡುವವನಲ್ಲ,' ಎಂದವನೆಂದುಕೊಳ್ಳುವ ಬೇಕಾದವರು ಬೇಕಾದುದೆನ್ನಲಿ, ಸುರೇಶ ಇಂತಹರನ್ನು ದ್ವೇಷಿಸುತ್ತಾನೆ, ಸ್ವಾರ್ಥಕ್ಕಾಗಿ ಮಾಡಬಾರದ್ದು ಮಾಡುತ್ತಾನೆ ಎಂದಾರೂ ಹೇಳಲಾರರು. ಹುಟ್ಟಾ ದುರ್ಬಲ ಹೃದಯನೆಂದು ಹೆಸರಾದ— ಹಾಗೆ ತಾನೂ ನಂಬಿದ— ಸುರೇಶನೇ ಅಚಲೆಯ ಸಂಬಂಧ ಕೊನೆಗಂಡಾಗ, ಕಠೋರ ಸಂಯಮದ ಅಜ್ಞಾತಶಕ್ತಿಯನ್ನು ಕಂಡ ಆಗವನ ಹೃದಯ ಗರ್ವದಿಂದ ಉಬ್ಬಿತು. ಅಚಲೆಯ ವಿವಾಹವಾದ ಎರಡು ದಿನ, 'ತಾನು ದುರ್ಬಲನಲ್ಲ, ಅಕ್ಷಮನಲ್ಲ, ಪ್ರವೃತ್ತಿಯ ದಾಸನಲ್ಲ, ಅಗತ್ಯವಿದ್ದಾಗ ಪ್ರವೃತ್ತಿಗಳನ್ನೆಲ್ಲ ಹೃದಯದಿಂದ ಬೇರು ಸಹಿತ ಕಿತ್ತೊಗೆಯಬಲ್ಲೆ, ಗೆಳೆತನ ಎಂದರೇನು, ಗೆಳೆಯನಿಗಾಗಿ ಗೆಳೆಯ ಎಂತಹ ದೊಡ್ಡ ತ್ಯಾಗ ಮಾಡಬಲ್ಲ ಎಂಬುದನ್ನೀಗ ಗೆಳೆಯನೂ ಅವನ ಹೆಂಡತಿಯೂ ತಿಳಿದರು' ಎಂದು ತನಗೆ ತಾನು ಹೇಳಿಕೊಳ್ಳುತ್ತಲಿದ್ದ

ಆದರ ಸುಳ್ಳಿನಿಂದ ಪೊಳ್ಳು ಇಲ್ಲವೆ ತೂತು ಹೆಚ್ಚು ಹೊತ್ತು ಮುಚ್ಚುತ್ತವಿಲ್ಲ. ಸುರೇಶನ ಸಂಯಮ ಸತ್ಯವಸ್ತುವಲ್ಲ, ಆತ್ಮವಂಚನೆ ವಾರ ತಿರುಗುವುದರೊಳಗೇ ಆ ಸುಳ್ಳುಸಂಯಮದ ಮೋಹ ಅವನ ಹಿಗ್ಗಿದೆ

ಹೃದಯದಿಂದ ಮೆಲ್ಲಮೆಲ್ಲನೆ ಜಾರಿಹೋಗಿ ಅದು ಸಂಕುಚಿತವಾಯಿತು. 'ಈ ತ್ಯಾಗದಿಂದ ತನಗೆ ಬಂದುದೇನು ? ತನಗಿನ್ನು ನಿಲ್ಲಲು ಆಧಾರ ವೇನು ?' ಎಂಬ ವಿಚಾರ ತಿರುತಿರುಗಿ ಸುಳಿಯತೊಡಗಿತು

ಅತ್ತೆಮ್ಮ ಹೇಳಿದಳು. "ನೀನೂ ಇನ್ನು ಮದುವೆಯಾಗಪ್ಪಾ; ಮುದ್ದು ಸೊಸೆಯೊಡನೆ ನಾ ಬಾಳುವೆ ಮಾಡುವೆ"

ಒಂದಿನ ಕೇದಾರಬಾಬು ಬೆಟ್ಟಿಯಾಗಿದ್ದರು ತಾವು ಮಾಡಿದುದು ಸರಿಯಾಗಲಿಲ್ಲ, ಮಹಿಮನಿಗೆ ಮಗಳನ್ನು ಕೊಡುವುದು ತಮ್ಮ ಮನಸಿನಲ್ಲಿರ ಲಿಲ್ಲ, ನೀ ಸುಮ್ಮನಿದ್ದುದಕ್ಕೇ ಉಪಾಯವಿಲ್ಲದೆ ಒಪ್ಪಬೇಕಾಯಿತು ಎಂದು ಅವರು ಹೇಳಿದರು ಮನೆಗೆ ಬಂದಾಗ ಸುರೇಶನಲ್ಲಿ ಹೊಟ್ಟೆಕಿಚ್ಚೇ ಹೊತ್ತಿತು 'ಈ ಮದುವೆಯಿಂದ ಯಾರಿಗೂ ಸುಖವಾಗಬೇಡ, ತನ್ನ ಸ್ಥಿತಿಯನ್ನುಲ್ಲಂಘಿಸಿದ್ದಕ್ಕೆ ಮಿತ್ರ ಪಶ್ಚಾತ್ತಾಪ ಪಡಲಿ, ಅಚಲೆಯೂ ತನ್ನ ತಪ್ಪನ್ನರಿತು ಆತ್ಮಗ್ಲಾನಿಯಿಂದ ಬೇಯಲಿ' ಎಂಬ ಭಾವನೆ ಎಚ್ಚತ್ತಿತು. ಅವನ ಮನಸ್ಸೇನು ಅಷ್ಟು ಕಿರುಕುಳವೆಂತಲ್ಲ ಈ ಭಾವನೆಯನ್ನು ನಿಗ್ರ ಹಿಸಲು ಅವನು ಬಹುಪ್ರಕಾರದಿಂದ ಯತ್ನಿಸಿದ ಆದರೇನು ಮಾಡಿದರೂ ವಂಚಿತ ಪೀಡಿತ ಹೃದಯ ಅವನ ಹಿಡಿತದಲ್ಲಿ ಬರಲಿಲ್ಲ ಕೆಟ್ಟ ಹಟಮಾರಿ ಹುಡುಗನಂತೆ ಅದು ಮತ್ತೆ ಮತ್ತೆ ಅದನ್ನೇ ನೆನೆಯತೊಡಗಿತು ಈ ಅವಸ್ಥೆಯಲ್ಲಿ ಹೇಗೆ ಹೇಗೋ ತಿಂಗಳೊಪ್ಪತ್ತು ಕಳೆದು, ಕುತೂಹಲವನ್ನು ಹತ್ತಿಡಲಾರದೆ ಮಹಿಮನ ಮನೆಗೆ ಬಂದುಬಿಟ್ಟಿದ್ದ

"ಈಗ ಕಂಡೆಯಾ ಮಹಿಮ, ನನ್ನ ಮಾತು ಎಷ್ಟು ನಿಜ ಎಂಬು ದನ್ನು ?" ಎಂದು ಸುರೇಶ ಕೇಳಿದ

"ಯಾವ ಮಾತು ?" ಮಹಿಮ ಕೇಳಿದ

"ನಾ ಗ್ರಾಮವಾಸಿಯಲ್ಲವಾದರೂ ಇಲ್ಲಿಯದೆಲ್ಲ ನನಗೆ ಗೊತ್ತು. ಎಂತಲೇ ಎಚ್ಚರಿಸಿರಲಿಲ್ಲವೇ, ಹಳ್ಳಿಸಮಾಜದ ವಿರೋಧ ಕಟ್ಟಿಕೊಳ್ಳ ಬೇಕಾಗುವುದೆಂದು ?"

"ಎಲ್ಲಿಯದು ? ಅಂಥ ವಿರೋಧವೇನೂ ಇಲ್ಲ" ಮಹಿಮ ಸ್ವಾಭಾ ವಿಕವಾಗಿ ಹೇಳಿದ

"ವಿರೋಧ ಎಂದರೆ ಮತ್ತೇನು ? ನಿಮ್ಮ ಮನೆಯೊಳಗೆ ಯಾರಾ ದರೂ ಉಂಡರೇ ತಿಂದರೇ ? ಇಷ್ಟು ಕ್ಲೇಶ ಇಷ್ಟು ಅಪಮಾನ ಸಾಲದೆ ?"

“ ನಾನೇನು ಯಾರನ್ನೂ ಊಟಕ್ಕೆ ಕರೆದಿಲ್ಲವಲ್ಲ. ”

“ ಕರೆಯಲಿಲ್ಲ ? ಸರಿ ‘ ಬಲುಭಾತಿ ’ಗೆ ನನ್ನನ್ನು ಕರೆಯಲೇ ಇಲ್ಲವಲ್ಲ ? ”

“ ಅದು ಆಗಲೇ ಇಲ್ಲ, ಅದಕ್ಕೆ ಕರೆಯಲಿಲ್ಲ ”,

ಸುರೇಶ ವಿಸ್ಮಯದಿಂದ ನುಡಿದ “ ಬಲುಭಾತ ಆಗಲಿಲ್ಲವೆ ? ಓಃ, ಈ ರೀತಿ ಉಪದ್ರವಗಳನ್ನು ಎಷ್ಟೆಂದು ದಾಟುವೆ ಮಹಿಮ ? ಮಕ್ಕಳು ಮರಿಯು ವ್ರತಕಾರ್ಯಗಳುಂಟು, ಅನುವು ಆಪತ್ತುಗಳುಂಟು—ಸಂಸಾರ ವೆಂದ ಮೇಲೆ ನಾನ್ನೆವುದೆಂದರೆ— ”

ಯದುವಿನ ಕೈಯಲ್ಲಿ ಚಹಾದ ಸರಂಜಾಮು ಹಿಡಿಸಿಕೊಂಡು, ತಾನು ತಿಂಡಿಯ ತಟ್ಟೆ ತೆಗೆದುಕೊಂಡು ಅಚಲೆ ಬಂದಳು ಸುರೇಶನ ಕೊನೆಯ ಮಾತು ಅವಳ ಕಿವಿಗೆ ಬಿದ್ದಿತ್ತು ಆದರೆ ಮುಖದಲ್ಲಿ ಅದನ್ನು ತೋರಗೊಡಲಿಲ್ಲ ಚಹಾಪಾನ ಮುಗಿಸಿ ಮಹಿಮ ಶಾಲುಹೊದೆದುಕೊಂಡು ಎದ್ದುನಿಂತ ಮುಸಲ್ಮಾನ ಜಮೀನುದಾರನ ಮಕ್ಕಳಿಗೆ ಮಹಿಮ ಇಂಗ್ರಾಜಿ ಕಲಿಸುತ್ತಿದ್ದ ಜಮೀನುದಾರ ಸಾಹೇಬ ಸುಶಿಕ್ಷಿತನಲ್ಲದಿದ್ದರೂ ಉದಾರ ಮಹಿಮನ ಬಗ್ಗೆ ಅವನಿಗೆ ಆದರವೂ ಇತ್ತು ಎಂತಲೇ ಅವನಿಗೆ ಉಪದ್ರವ ಕೊಡಲು ಕಂಕಣಕಟ್ಟಿ ನಿಲ್ಲಲು, ಊರ ಜನಕ್ಕೆ ಎದೆ ಸಾಲದೆ ಹೋದುದು.

“ ಇಂದು ಕಲಿಸಲು ಹೋಗದಿದ್ದರೆ ಆಗದೆ ? ” ಅಚಲೆ ಕೇಳಿದಳು

“ ಏಕೆ ? ”

ಅಚಲೆಗೆ ಮನೋಬಲ, ಅಂತರಂಗ ನೈರ್ಮಲ್ಯ ಬೇಕಾದಷ್ಟಿರಬಹುದು ಆದರೆ ಸುರೇಶನೊಡನೆ ಅವಳಿಗಿದ್ದಂತಹ ಸಂಬಂಧದಲ್ಲಿ, ಅವನ ಆಕಸ್ಮಿಕ ಆಗಮನದಿಂದ ಯಾವ ರಮಣಿಗೂ ಸಂಕೋಚವೆನಿಸದಿರದು. ಸುರೇಶನನ್ನು ಚೆನ್ನಾಗಿ ಬಲ್ಲಳು ಅವನ ಹೃದಯ ಎಷ್ಟೇ ದೊಡ್ಡದಿರಲಿ, ಆದರ ಲಹರಿಯ ಬಗ್ಗೆ ಅವಳಿಗೆ ಆಸ್ಥೆಯಿರಲಿಲ್ಲ, ಇಷ್ಟೇ ಅಲ್ಲ, ಅಂಜಿಕೆ ಆ ಸಂಜೆಹೊತ್ತಿನಲ್ಲಿ ಅವನೊಡನೆ ತಾನೊಬ್ಬಳೇ ಇರಬೇಕಲ್ಲ ಎಂಪು ವಿಹ್ವಲೆಯಾದಳು ಅದನ್ನು ಕಿಂಚಿತ್ತೂ ತೋರಗೊಡದೆ ನಕ್ಕು ನುಡಿದಳು :
“ ಭಲೆ, ಇದೇನು ಚೆಂದ ? ಅತಿಥಿಯೊಬ್ಬರನ್ನೇ— ”

“ ಇದರಿಂದ ಅತಿಥಿಸತ್ಕಾರಕ್ಕೇನೂ ಕೊರತೆಯಾಗದು ಅಲ್ಲದೆ

ನೀನಂತೂ ಇದ್ದೀ—"

"ನನಗೆ ಇರಲಿಕ್ಕಾಗುವುದಿಲ್ಲ" ಎಂದು ಅಚಲೆ ಸುರೇಶನ ಕಡೆ ನೋಡಿ ಹೇಳಿದಳು "ನಮ್ಮ ಉಡಿಂಗಾ ಬ್ರಾಹ್ಮಣ ಇಷ್ಟು ಪಕ್ಕಾ ಅಡಿಗೆಯವನಿದ್ದಾನೆ—ನಾ ಹತ್ತಿರವಿರದಿದ್ದರೆ ಕೂಳು ಕಾಣುವ ಸಂಭವವೇ ಇಲ್ಲ ಆದುದರಿಂದ ನೀವು—"

ಮಹಿಮ ಗೋಣುಹಾಕಿ, "ಇಲ್ಲ, ಸಾಧ್ಯವಿಲ್ಲ, ಒಂದೆರಡು ಗಂಟೆ ಮಾತ್ರ—" ಎನ್ನುತ್ತ ಮೂಲೆಯೊಳಗಿನ ಬಡಿಗೆ ತೆಗೆದುಕೊಂಡು ಮೆಲ್ಲ; ಮೆಲ್ಲನೆ ಹೊರಟುಹೋದ

ಅವನಿಗೆ ಕೇಳಿಸುವಂತೆ ಸುರೇಶ ಅಚಲೆಗೆಂದ "ಏಕೆ ಮುಖ ತಗ್ಗಿಸುತ್ತೀ! ಅವನು ಯಾರ ಮಾತನ್ನೂ ಕೇಳುವ ಪ್ರಾಣಿಯಲ್ಲ. ನನಗೇನಾದರೊಂದು ಪುಸ್ತಕ ಕೊಟ್ಟು ನೀ ನಿನ್ನ ಕೆಲಸಕ್ಕೆ ಹೋಗು ಬೇಸರವಿಲ್ಲದೆ ಹೊತ್ತುಗಳೆಯುವೆ "

ಮಹಿಮನೆಂದೂ ತನ್ನ ಯಾವ ಮಾತೂ ನಡೆಸುವವನಲ್ಲವೆಂಬುದು ಅಚಲೆಗೆ ತಟ್ಟನೆ ನೆನಪಾಯಿತು ಇದವನ ಮಹದ್ಗುಣ ಇದ್ದಿರಲೊಲ್ಲದೇಕೆ, ಆದರ ಗಂಡನ ಕರ್ತವ್ಯನಿಷ್ಠೆಯ ಪರಿಚಯ ಅವನೆದುರಿಗೇ ಸುರೇಶನ ಮುಖದಿಂದಾದುದು ಅಪಮಾನಕರ ಉಪೇಕ್ಷೆಯಾಗಿ ಅವಳಿಗೆ ತಾಗಿತು ಅವಳು ನೀರವವಾಗಿ ತನ್ನ ಕೋಣೆಗೆ ಹೋಗಿ ಯದುವಿನ ಕೈಲಿ ಒಂದು ಬಂಗಾಲಿ ಪುಸ್ತಕ ಕೊಟ್ಟು ಕಳಿಸಿ, ಅಡುಗೆಮನೆಗೆ ಹೋದಳು

ರಾತ್ರಿ ಬಹಳ ಹೊತ್ತಿಗೆ ಮಲಗಹೋದಾಗ ಮಹಿಮ ಕೇಳಿದ: "ಸುರೇಶ ಎಷ್ಟು ದಿನ ಇರುತ್ತಾನೆ, ನಿನ್ನ ಮುಂದೆ ಹೇಳಿದನೆ?"

ನಾನಾ ಕಾರಣಗಳಿಂದ ಇಡೀ ದಿನ ಗಂಡನ ಬಗ್ಗೆ ಅಚಲೆಯ ಮನಸ್ಸು ವಿರಸವಾಗಿತ್ತು, ಈ ಪ್ರಶ್ನೆಯಲ್ಲಿ ಕುತ್ಸಿತ ವ್ಯಂಗ್ಯವಡಗಿದೆಯೆಂಬ ಕಲ್ಪನೆಯಿಂದ ಅದು ಉರಿಯಿತು. "ಇದರರ್ಥ?" ಎಂದು ಕೇಳಿದಳು ಕಠೋರಸ್ವರದಿಂದ

ಮಹಿಮ ಅವಾಕ್ಕಾದ ಅವನ ಪ್ರಶ್ನೆ ಸರಳವಾಗಿತ್ತು ಗೆಳೆಯನನ್ನು ಸಂಕೋಚದಿಂದ ಈ ವಿಷಯ ಕೇಳಿರಲಿಲ್ಲ ಸುರೇಶನೂ ತಾನಾಗಿ ಹೇಳಿರಲಿಲ್ಲ ಅವನಿದನ್ನು ಅಚಲೆಗೆ ನಿಶ್ಚಯವಾಗಿ ಹೇಳಿರಬೇಕೆಂದು ಮಹಿಮ ಭಾವಿಸಿದ್ದ.

ಅವನು ಸುಮ್ಮನಿರುವುದನ್ನು ಕಂಡು ಅಚಲೆಯೇ ಮಾತನಾಡಿದಳು: "ಇದರರ್ಥ ಸರಳವೇ ಇದೆ—ನೀವು ಹೇಳಬೇಕಾಗಿಲ್ಲ, ಸುರೇಶಬಾಬು ಏನೋ ಒಂದು ಸಂಕಲ್ಪದಿಂದ ಇಲ್ಲಿಗೆ ಬಂದಿದ್ದಾರೆ, ಅದು ಈಡೇರುವುದಕ್ಕೆ ಎಷ್ಟು ಸಮಯ ಬೇಕೆಂಬುದು ನನಗೆ ಗೊತ್ತಿದೆ ಎಂವಲ್ಲವೇ ನಿಮ ಅಭಿಪ್ರಾಯ ?"

ಮಹಿಮ ಇನ್ನೂ ಕೊಂಚ ಕಾಲ ಸುಮ್ಮನಿದ್ದು ಸ್ನಿಗ್ಧ ಸ್ವರದಿಂದ ಹೇಳಿದ "ನನ್ನ ಅಭಿಪ್ರಾಯವೇನು ಹಾಗಿಲ್ಲ ಆದರೆ ಮೃಣಾಲಳ ಇಂದಿನ ನಡತೆಯಿಂದ ನಿನ್ನ ಮನಸಿಗೇ ನೆಟ್ಟಗಿಲ್ಲ, ನೀ ಯಾವುದನ್ನೂ ಸಾವಧಾನವಾಗಿ ಯೋಚಿಸಲಾರ ಈಗ ಮಲಗಿಕೋ, ನಾಳೆ ಮಾತನಾಡುವ" ಎಂದು ಮಲಗಿದ

ಅಚಲೆಯೂ ಮಲಗಿದಳು ಕೊಂಚವೂ ನಿದ್ದೆ ಬರಲಿಲ್ಲ ಆಕೆಯ ಮನಸಿನಲ್ಲಿ ವಿರಕ್ತಿ ಇಡೀ ದಿನ ಕೂಡಿಬೀಳುತ್ತಲೇ ಇತ್ತು ಸಾಮಾನ್ಯ ಕಲಹರೂಪದಿಂದ ಅದು ಹೊರಬಿದ್ದು ಹೋಗಿದ್ದರೆ ಅವಳಿಗೆ ಹಗುರೆನಿಸುತ್ತಿತ್ತು ಅದಕ್ಕೆ ದಾರಿ ಇಲ್ಲದಾಗಲು ಒಳಗೊಳಗೆ ಕುದಿಯತೊಡಗಿದಳು. ಗಭೀರರಾತ್ರಿಯ ವರೆಗೂ ನಿದ್ದೆ ಹತ್ತದೆ ಚಡಪಡಿಸುತ್ತಲಿದ್ದಳು

ನಿದ್ದೆ ಯಾವಾಗ ಹತ್ತಿತೋ ? ಎಚ್ಚತ್ತು ಗಡಬಡಿಸಿ ಎದ್ದು ಹೊರಗೆ ಬಂದಾಗ ಯದು ಕೇತ್ಲಿ ತೆಗೆದುಕೊಂಡು ಅಡುಗೆಮನೆಗ ಹೊರಟಿದ್ದ. ಅವನನ್ನು ಕೂಗಿ, "ಬಾಬುಗಳು ಏನಾದರೂ ಹೇಳಿ ಹೋದರೆ ?" ಎಂದು ಕೇಳಿದಳು

"ಒಂದು ಪ್ರಹರದೊಳಗೇ ಬರುವೆನೆಂದರು"

"ಹೊಸ ಬಾಬು ಎದ್ದಿದ್ದಾರೆಯೆ ?"

"ಏಳದೇನು ? ಅವರೇ ಚಾ ಕಾಸಲು ಹೇಳಿದ್ದು."

ಅಚಲೆ ಲಗುಬಗೆಯಿಂದ ಮೋರೆ ತೊಳೆದು ಬಟ್ಟೆ ಬದಲಿಸಿ ಹೊರಗೆ ಬಂದಳು ಸುರೇಶ ಯಾವಾಗಲೋ ಸಿದ್ಧನಾಗಿ ಕಿಡಿಕಿಗಳನ್ನೆಲ್ಲ ತೆರೆದು ಬಾಗಿಲೆದುರಿಗೆ ಕುರ್ಚಿ ಹಾಕಿಕೊಂಡು ನಿನ್ನೆಯ ಪುಸ್ತಕ ಓದುತ್ತ ಕುಳಿತಿದ್ದ ಅಡಿಸದ್ದು ಕೇಳಿ ಕಣ್ಣೆತ್ತಿ ನೋಡಿದ ಅಚಲೆಯ ಮುಖದ ಮೇಲೆ ಜಾಗರಣ ಚಿಹ್ನ ದೇದೀಪ್ಯಮಾನವಾಗಿತ್ತು ಕೆಳಗಣ್ಣು ಕಪ್ಪಾಗಿದ್ದವು, ಕೆನ್ನೆ ಮಾಸಲಾಗಿದ್ದವು, ತುಟಿ ಬಾಡಿದ್ದವು ನೋಡಿ ಅವನ

ಕಣ್ಣುಗಳು ಈರ್ಷಾಗ್ನಿಯಿಂದ ಉರಿಯತೊಡಗಿದವು ಆದರೆ ಏನು ಮಾಡಿದರೂ ಅಲ್ಲಿಂದ ಕಣ್ಣು ಕೀಳಲಾಗಲಿಲ್ಲ

ಅವನ ನೋಟದ ಭಂಗಿಗೆ ಅಚಲೆ ವಿಸ್ಮಿತೆಯಾದಳು ಅದರಿಂಗಿತ ತಿಳಿಯಲಿಲ್ಲ "ಯಾವಾಗ ಎದ್ದಿರಿ? ನನಗೀವೊತ್ತು ಏಳಲಿಕ್ಕೆ ಸ್ವಲ್ಪ ತಡವಾಯಿತು," ಎಂದಳು

"ಮೇಲೆಯೇ ಕಾಣುತ್ತದೆ," ಎಂದು ಸುರೇಶ ಮೆಲ್ಲಮೆಲ್ಲನೆ ತಲೆಹಾಕಿದ ಎದುರಿನ ಗೋಡೆಗೆ ತೂಗುಹಾಕಿದ್ದ ದೊಡ್ಡ ಕನ್ನಡಿಯಲ್ಲಿ ಆಕಸ್ಮಾತ್ ತನ್ನ ಪ್ರತಿಬಿಂಬ ಕಂಡು ಸುರೇಶನ ನೋಟದ ಅರ್ಥ ಹೊಳೆಯಿತವಳಿಗೆ ನಾಚಿಕೆ ಸಾವಾಯಿತು ಈ ಶ್ರೀಹೀನಮುಖ ಎಲ್ಲಿ ಮರೆಯಿಸಲಿ? ಸುರೇಶನ ತಪ್ಪು ತಿಳುವಳಿಕೆಗೆ ಏನುತ್ತರ ಕೊಡಲಿ? ಎಂಬುದು ತಿಳಿಯದಂತಾಗಿ ಅವಳು, "ಹೋಗಿ ಚಾ ತರುತ್ತೇನೆ" ಎನ್ನುತ್ತ ದ್ರುತವೇಗದಿಂದ ಹೊರಟುಹೋದಳು

ಸುರೇಶ ನಿಡಿದಾಗಿ ಉಸಿರ್ಗರೆದು ಶೂನ್ಯದೃಷ್ಟಿಯಿಂದ ಶೂನ್ಯವನ್ನೇ ನೋಡುತ್ತ ನಿಶ್ಚಲನಾಗಿ ಕುಳಿತುಕೊಂಡ ಎಂಟುಹತ್ತು ನಿಮಿಷಗಳಲ್ಲಿ ಅಚಲೆ ಚಾ ತಂದಾಗ ಅವನು ಸುಧಾರಿಸಿಕೊಂಡಿದ್ದ ಚಾ ಕುಡಿಕುಡಿಯುತ್ತ ಕೇಳಿದ "ಏಕೆ, ನೀನು?"

"ನಾನೀಗ ತೆಗೆದುಕೊಳ್ಳುವುದಿಲ್ಲ"

"ಏಕೆ?"

"ಈಗ ಸೇರುವುದಿಲ್ಲ ಅಲ್ಲದೆ ಇಲ್ಲಿ ಸೆಕೆಯಲ್ಲವೆ? ಕುಡಿದರೆ ನಿದ್ದೆ ಬರುವುದಿಲ್ಲ ನಿನ್ನೆಯಂತೂ ಬಹುಶಃ ಬೆಳತನಕ ನಿದ್ದೆಯಿಲ್ಲ" ಎಂದು ನಸುನಕ್ಕು, "ಒಂದು ರಾತ್ರಿ ನಿದ್ದೆ ಹತ್ತದ್ದಕ್ಕೆ ಮುಖ ಈ ಗತಿ! ಸುಟ್ಟ ಮುಖ ಮುಂದಿಗೆ ತೋರಿಸಬಾರದು!" ಎಂದಳು

ಕ್ಷಣ ಸುಮ್ಮನಿದ್ದು ಸುರೇಶನೆಂದ "ಇದಂತೂ ನಿನ್ನ ಚಿಕ್ಕಂದಿನ ಅಭ್ಯಾಸವೇ ಮಹಿಮ ಚಾ ಕುಡಿಯಲು ನಿನಗೆ ಬಲವಂತಪಡಿಸುವುದಿಲ್ಲವೇ?"

"ಬಲವಂತ ಕೇಳುವರಾರು? ಅಲ್ಲದೆ ಇದೇನಂಥ ವಿಷಯ, ಬಿಟ್ಟರೆ ನಡೆಯದಂಥದ್ದು?" ಎಂದು ನಕ್ಕು ನುಡಿದಳು.

ಅದು ಒಣನಗೆ ಎಂದು ಸುರೇಶ ನಿಚ್ಚಳವಾಗಿ ಕಂಡ ಕ್ಷಣ ಸುಮ್ಮನಿದ್ದು ನುಡಿದ· "ನಿನಗೆ ಗೊತ್ತಿದೆ, ಪ್ರಸ್ತಾವನಹೇಳಿ ಮಾತಿಗಾರಂಭಿಸುವ

ಅಭ್ಯಾಸ ನನಗಿಲ್ಲ ಅದು ಸಾಧ್ಯವೂ ಅಲ್ಲ ಆದರೂ ಒಂದು ಮಾತು ಸ್ಪಷ್ಟವಾಗಿ ಕೇಳಿದರೆ ನಿನಗೆ ಸಿಟ್ಟಿಲ್ಲವಷ್ಟೆ?"

ಅಚಲೆ ನಕ್ಕು ಹೇಳಿದಳು "ಚೆಲೋ ಇದು ಸಿಟ್ಟೇಕೆ ಬರುವುದು?"

"ಒಳ್ಳೆಯದು ನೀನಿಲ್ಲಿ ಸುಖವಾಗಿದ್ದೀಯಾ?"

ಅಚಲೆಯ ನಗುಮೋರೆ ಕೆಂಪಾಯಿತು "ಇದು ಕೇಳುವುದಲ್ಲ," ಎಂದಳು

"ಏಕೆ?"

"ನನಗಿಲ್ಲಿ ಸುಖವಿಲ್ಲ ಎಂದು ನೀವು ಬಗೆದದ್ದೇ ತಪ್ಪು"

"ಮನಸ್ಸೇನು ತಪ್ಪು-ಒಪ್ಪು ವಿಮರ್ಶಿಸಿಯೇ ಎಲ್ಲವನ್ನೂ ವಿಚಾರಿಸುವುದೇ ಅಚಲಾ? ಈಗೆರಡು ತಿಂಗಳ ಹಿಂದೆ ಹೀಗೆ ಕೇಳುವುದು ಒಪ್ಪಾಗಿತ್ತು, ಆ ಅಧಿಕಾರವೂ ನನಗಿತ್ತು ಎರಡು ತಿಂಗಳೊಳಗೇ ಆ ಅಧಿಕಾರ ನಷ್ಟವಾದರಾಗಲಿ, ನನಗೆ ಖೇದವಿಲ್ಲ,— ಸತ್ಯಸಂಗತಿಯನ್ನು ಮಾತ್ರ ತಿಳಿಯಬಯಸುವೆ ಏನು ಹೇಳು ಅಚಲಾ?"

ಅಶ್ರುಪ್ರವಾಹ ಅಚಲೆಯ ಕೊರಳವರೆಗೂ ನುಗ್ಗಿತು ಬಲು ಬಲವಂತದಿಂದ ಅದರ ಒತ್ತಡವನ್ನು ತಡೆದು, "ನಾ ಚೆನ್ನಾಗಿಯೇ ಇದ್ದೇನೆ" ಎಂದಳು

"ಇದು ಒಳ್ಳೆಯದೇ" ಸುರೇಶ ಮೆಲ್ಲಗೆ ನುಡಿದ

ಕೆಲ ಹೊತ್ತು ಯಾರಿಗೂ ಏನು ಮಾತಾಡುವುದೂ ಹೊಳೆಯಲಿಲ್ಲ. ಸುರೇಶ ಒಮ್ಮೆಲೆ ಮೆಟ್ಟಿಬಿದ್ದಂತೆ ಮಾತನಾಡಿದ "ಇನ್ನೊಂದು ಮಾತು. ನಿನಗಾಗಿ ನಾನೆಷ್ಟು ಸಹಿಸಿದೆ ಎಂಬುದು ನಿನಗೆಂದಾದರೂ—"

ಅಚಲೆ ಕಿವಿಗಳಲ್ಲಿ ಬೆರಳಿಟ್ಟುಕೊಂಡು, "ಆ ಬಗ್ಗೆ ನನ್ನನ್ನು ಕ್ಷಮಿಸಿರಿ" ಎಂದು ಹೊರಡಲು ಹವಣಿಸಿದಳು

ಅಚಲೆ ಹೋಗಬಾರದೆಂದು ಸುರೇಶ ಬಾಗಿಲುಕಟ್ಟಿ, "ಉಂಹೂ, ಕ್ಷಮಿಸಲಾರೆ, ಹೇಳಲೇಬೇಕು," ಎಂದ

ಅವನ ನಯನಗಳಲ್ಲಿ— ಯಾವುದನ್ನು ನೆನೆದಮಾತ್ರಕ್ಕೆ ಇಂದಿಗೂ ಅಚಲೆಗೆ ಮೈ ಜುಮ್ಮೆನ್ನುತ್ತಿತ್ತೋ— ಅದೇ ಆ ದೃಷ್ಟಿ! ಅವಳು ಬೆದರಿ ಹಿಂದಕ್ಕೆ ಸರಿದಳು. "ಆಗಲಿ, ಹೇಳಿರಿ" ಎಂದಳು

"ಬೆಚ್ಚಬೇಡ ನಿನ್ನ ಮೈಗೆ ಕೈ ಹಚ್ಚುವುದಿಲ್ಲ. ನನಗೀಗ ಅಷ್ಟು

ಜ್ಞಾನವಿದೆ," ಎಂದು ಸುರೇಶ ತಿರುಗಿ ಚೌಕಿಯಲ್ಲಿ ಕುಕ್ಕರಿಸಿ ನುಡಿದ: "ನಾ ನಿನ್ನ ಮೇಲಿನ ಅಧಿಕಾರವನ್ನೆಲ್ಲ ಕಳೆದುಕೊಂಡಿದ್ದರೂ ನನ್ನ ಮೇಲೆ ನಿನ್ನ ಅಧಿಕಾರವಿದ್ದೇ ಇದೆ, ಮರೆಯಬೇಡ—"

"ನೆನಪಿಸುವುದು ನನಗೇನು ಅಗತ್ಯವಿಲ್ಲ ಆದರೆ—"

ಈ ಮಾತು ಸುರೇಶನಿಗೆ ತಾಗಿ ಅವನು ವಿವಶನಾದುದು ನಿಚ್ಚಳವಾಗಿ ಕಂಡಿತು ಮರುಕ್ಷಣವೇ ಅದು ತನ್ನ ಬೆನ್ನಮೇಲೂ ಅಪ್ಪಳಿಸಿದಂತೆ ಭಾಸವಾಯಿತು ತುಸ ತಡೆದು ಕೋಮಲಕಂಠದಿಂದ ಅವಳು ನುಡಿದಳು: "ಸುರೇಶಬಾಬೂ, ಇದನ್ನೆಲ್ಲ ಕೇಳುವುದು ನನಗೆ ಪಾಪ, ನಿಮಗೂ ಅನುಚಿತ ಈ ವಿಷಯ ತೆಗೆದು ನನ್ನನ್ನೇಕೆ ಪೀಡಿಸುವಿರಿ?"

"ಪೀಡೆ ಏಕೆ ಅಚಲಾ?" ಅವಳ ಮುಖ ದಿಟ್ಟಿಸುತ್ತ ಸುರೇಶ ಕೇಳಿದ

"ಎಂದರೆ, ನಾ ಕಲ್ಲೇ ಸುರೇಶಬಾಬೂ!" ತಟ್ಟನೆ ಅಚಲೆ ನುಡಿದಳು.

ಸುರೇಶ ಅವಳ ಮುಖದಮೇಲಿನ ನೋಟ ಕೀಳಲಿಲ್ಲ ಅವಳ ನೋಟ ಕೆಳಗಾಯಿತು ಸುರೇಶ ಮೆಲ್ಲಮೆಲ್ಲನೆ ಉಸುರಿದ "ಸಾಕು, ಇದೇ ನನ್ನ ಚಿರಜೀವನದ ಬಂಡವಾಳ ಅಚಲಾ! ಹೆಚ್ಚಿನದೇನೂ ಬೇಡ!" ಸ್ವಲ್ಪ ತಡೆದು, "ನೀ ಕಲ್ಲಲ್ಲವೆಂದ ಬಳಿಕ ನನ್ನನ್ನು ಈ ಕೊನೆಯ ಭಿಕ್ಷೆಯಿಂದ ಎಂದೂ ವಂಚಿಸಲಾರೆ ನಿನ್ನ ಸುಖದ ಭಾರ ಯಾರ ಮೇಲೇ ಇರಲಿ, ನಾ ಮಾತ್ರ ನಿನ್ನಿಂದ ಬರೀ ದುಃಖವನ್ನೇ ಅನುಭವಿಸುತ್ತ ಬಂದಿದ್ದೇನೆಂದ ಬಳಿಕ ನಿನ್ನೆಲ್ಲ ದುಃಖದ ಭಾರ ಇಂದಿನಿಂದ ನನ್ನಮೇಲಿರಲಿ— ನಾ ಬೇಡುವುದು ಇದೇ ವರ"

ಅಶ್ರುಭಾರದಿಂದ ಸುರೇಶನ ಕೊರಳು ಬಿಗಿಯಿತು ಅಚಲೆಯ ಕಣ್ಣುಗಳಿಂದಲೂ ಕಳೆದ ಹಗಲುರಾತ್ರಿ ಕೂಡಿಬಿದ್ದ ವೇದನೆ ಝುರಝುರನೆ ಹರಿಯತೊಡಗಿತು.

ಅಗಲೇ ಹೊರಗೆ ಮೆಟ್ಟಿನ ಸದ್ದು ಮರುಕ್ಷಣವೇ ಮಹಿಮ ಒಳಗೆ ಬರುಬರುತ್ತಲೇ "ಏನು ಸುರೇಶ, ಚಹಾ ಗಿಹಾ ಆಯಿತೆ?" ಎಂದ

ಸುರೇಶನಿಗೆ ತಟ್ಟನೆ ಉತ್ತರ ಕೊಡಲಾಗಲಿಲ್ಲ. ಅವನು ಮುಖ ತಗ್ಗಿಸಿ ದೋತರ ಸೆರಗಿನಿಂದ ಕಣ್ಣೊರಸಿಕೊಂಡ. ಮುಖಕ್ಕೆ ಸೆರಗು ಮರೆ ಮಾಡಿಕೊಂಡು ಅಚಲೆ ಮಹಿಮನ ಪಕ್ಕದಲ್ಲಿ ಹಾಯ್ದು ಸರಕ್ಕನೆ ಹೊರಗೆ

ಹೋದಳು ಮಹಿಮ ಹೊಸತಿಲ ಹೊರಗೊಂದು ಕಾಲು ಒಳಗೊಂದು ಕಾಲು ಇಟ್ಟಿದ್ದವನು ಹಾಗೆಯೇ ಹೌಹಾರಿ ನಿಂತುಬಿಟ್ಟ

೧೭

ಇಂತಹ ಪರಿಸ್ಥಿತಿಯಲ್ಲಿ ಮಾನವನ ಮನಸ್ಸು ಪೂರ್ಣಾ ಸಂಕೋಚ ರಹಿತವಾಗುವುದು, ಸುಳ್ಳು ರಚಿಸುವುದು ಮಹಿಮ ಒಳಗೆ ಬಂದು ಕುಳಿತ ಬಳಿಕ ಸುರೇಶ 'ನಿಜವಾಗಿ ತಾನು ಬಹಳ ದುರ್ಬಲನಾಗುತ್ತಿದ್ದೇನೆಂ'ದು ಪ್ರಾಂಜಲವಾಗಿ ಒಪ್ಪಿಕೊಂಡ ಅವರ ಮಹಿಮ ಆ ಬಗ್ಗೆ ಎಷ್ಟೂ ಉದ್ವೇಗ ತೋರಲಿಲ್ಲ ಅದರ ಕಾರಣ ಕೂಡ ಕೇಳಲಿಲ್ಲ

ಸುರೇಶ ತಾನಾಗಿಯೇ ಹೇಳಿಕೊಳ್ಳಹೊಡಗಿದ

"ಯಾರು ಏನೇ ಎನ್ನಲಿ ಮಹಿಮ, ಈಕೆಯ ಕಣ್ಣೊಳಗೆ ನೀರು ಕಂಡು, ನನ್ನ ಕಣ್ಣೊಳಗೂ ನೀರು ಎಲ್ಲಿಂದಲೋ ಒತ್ತರಿಸಿತು, ಎಷ್ಟು ಮಾಡಿದರೂ ತಡೆಯಲಾಗಲಿಲ್ಲ ನಾ ಹೋಗದಿದ್ದರ ಕೇದಾರಬಾಬು ಈ ಬಾರಿ ಉಳಿಯುವುದೇ ಕಠಿಣವಿತ್ತು ಅಲ್ಲಾ, ಮುದುಕ ಬಲು ವಿಚಿತ್ರ ಮಹಿಮ, ಒಬ್ಬಳೇ ಒಬ್ಬ ಮಗಳು ನೋಡಿದರೆ, ಆಕೆಗೂ ಸುದ್ದಿ ತಿಳಿಸಿಲ್ಲ ಮದುವೆಯ ದಿನ ಅವರಿಗಾದ ಪೆಟ್ಟು ಇನ್ನೂ ಮಾದಿಲ್ಲ ನಾ ಹೇಳಿದೆ—ಆಗುವುದಿತ್ತು, ಆಯಿತು—"

"ಚಾ ಆಯಿತ ?" ಮಹಿಮ ನಡುವೆ ಕೇಳಿದ

"—ಹೂಂ, ಆಯಿತು ತಂದೆಯೊಡನೆ ಈರೀತಿ ನಡೆದುಕೊಂಡುದಕ್ಕೆ ಯಾರ ಕಣ್ಣೊಳಗೆ ನೀರು ಬರಲಿಕ್ಕಿಲ್ಲ? ಗಂಡುಸಿಗೇ ಎಷ್ಟೋ ಸಲ ತಡೆಯುವುದಿಲ್ಲ, ಈಕೆಯಂತೂ ಹೆಣ್ಣು ಹೆಂಗುಸು "

"ಅದು ನಿಜ —ರಾತ್ರಿ ಚೆನ್ನಾಗಿ ನಿದ್ದೆಯಾಯಿತೆ ? ಹೊಸಸ್ಥಳ—"

"ಇಲ್ಲ, ಹೊಸ ಸ್ಥಳದ ತೊಂದರೆಯೇನಾಗಲಿಲ್ಲ ಒಂದು ಮಗ್ಗುಲಲ್ಲಿಯೇ ಬೆಳಗಾಯಿತು —ಮಹಿಮ, ಕೇದಾರಬಾಬು ತಮ್ಮ ಜಡ್ಡಿನ ಸುದ್ದಿ ನಿಮಗೆ ತಿಳಿಸದಿದ್ದದ್ದು ಆಶ್ಚರ್ಯ ಬಿಡು !"

ಅದಕ್ಕೆ ಮಹಿಮ ಸಹಜವಾಗಿಯೇ "ಆಶ್ಚರ್ಯವೇತರದು ?"ಎಂದು ನಸುನಕ್ಕು, "ಕೈಕಾಲು ಮೋರೆ ತೊಳೆದುಕೊಂಡು ತುಸು ತಿರುಗಾಡಲು ಹೋಗೋಣವೆ ? ನಡೆ, ಲಗುನೆ ಮುಗಿಸಿಕೊಂಡು ಬರುವ ನಾ ಮತ್ತೆ ಒಂದು ಗಂಟೆಯೊಳಗೆ ಹೊರಗೆ ಹೋಗಬೇಕು. ಮುಂಜಾನೆಯ ಕೆಲಸ

ಇನ್ನೂ ತೀರಿಲ್ಲ," ಎಂದ

ಸುರೇಶ ಪುಸ್ತಕದಲ್ಲಿಯೆ ತೊಡಗಿದ ಮನಸಿನಿಂದ "ಕತೆ ಚೆನ್ನಾಗಿದೆ, ಓದಿ ಮುಗಿಸುವೆ," ಎಂದ

"ಆಗಲಿ. ಒಂದೆರಡು ಗಂಟೆಯೊಳಗೆ ನಾ ಬರುತ್ತೇನೆ" ಎಂದು ಮಹಿಮ ಹೊರಟ.

ಅವನು ಹೋದ ಬಾಗಿಲ ಕಡೆಗೇ ನೋಡುತ್ತ ಸುರೇಶ ಕಟ್ಟಿಗೆಯಂತೆ ಕಠಿನನಾಗಿ ಕುಳಿತ ಆದರೆ ತಾನಾಗಿಯೇ ಹೇಳಿದ ಹೇಳಿಕೆ ಹುಸಿ ಹೋದುದು ಒಳಗೊಳಗೆ ಕಚಕಚ ಚುಚ್ಚುತಿತ್ತು

ಇಬ್ಬರ ಮಾತನ್ನೂ ಅಚಲೆ ಬಾಗಿಲಹಿಂದೆ ನಿಂತು ಕೇಳಿದ್ದಳು. ಮಹಿಮ ಬಟ್ಟೆ ಬದಲಿಸಲು ತನ್ನ ಕೋಣೆಯೊಳಗೆ ಹೋಗುತ್ತಲೆ ಅವಳೂ ಹಿಂದೆಯೇ ಹೋದಳು "ನಿಮಗೆ ನಮ್ಮಪ್ಪ ಮಾಡಿದ ಅಂಥ ಅಪರಾಧ ವಾದರೂ ಏನು?" ಎಂದು ಸ್ವಾಭಾವಿಕ ಮೃದುಕಂಠದಿಂದ ಕೇಳಿದಳು. ಅಕಲ್ಪಿತ ಪ್ರಶ್ನೆಯ ತಾತ್ಪರ್ಯ ತಿಳಿಯದೆ ಮಹಿಮ ಮಿಕಿಮಿಕಿ ನೋಡಿದ. ಅಚಲೆ ಮತ್ತೆ ಕೇಳಿದಳು "ನನ್ನ ಮಾತು ತಿಳಿಯಲಿಲ್ಲವೇನೋ?"

"ಇಲ್ಲ ಮಾತು ಪ್ರಿಯವಾದುದಲ್ಲವಾದರೂ ಸ್ಪಷ್ಟವಾಗಿದೆ ಆದರೆ ಅದರರ್ಥ ತಿಳಿಯುವುದು ಬಿರಿ—ಕನಿಷ್ಠ ನನಗಂತೂ"

ಸಿಟ್ಟನ್ನು ಯಥಾಶಕ್ತಿ ದಮನಿಸಿಕೊಂಡು ಅಚಲೆ ಉತ್ತರವಿತ್ತಳು: "ನಿಮಗೆ ಅದೇನು ಬಿರಿಯಲ್ಲ, ಆದರೆ ಅದನ್ನು ಒಪ್ಪುವುದೇ ಬಿರಿ ಸುರೇಶ ಬಾಬುಗಳಿಗೆ ಸಹಜವಾಗಿ ಹೇಳಿಬಂದುದನ್ನು ನನಗೆ ಹೇಳಲು ಧೈರ್ಯ ಸಾಲದೇನೋ ಆದರೆ ನಾ ಸ್ಪಷ್ಟವಾಗಿಯೇ ಕೇಳಿಬಿಡುತ್ತೇನೆ— ನಮ್ಮಪ್ಪ ನಿಮಗಿಷ್ಟು ತುಚ್ಛನಾದನೇ? ಆತನ ಕೆಟ್ಟ ಜಡ್ಡಿನ ಸುದ್ದಿಗೂ ಲಕ್ಷ್ಯ ಕೊಡಬಾರದೇ?"

ಮಹಿಮ ಗೋಣುಹಾಕುತ್ತ ಹೇಳಿದ "ಕೊಡಬೇಕು. ಆದರೆ ಅದರ ಅಗತ್ಯವಿಲ್ಲದಿದ್ದಲ್ಲಿ ಏನು ಮಾಡಬೇಕೆನ್ನುತ್ತೀ?"

"ಎಂದರೆ?"

ಕ್ಷಣ ಹೊತ್ತು ಮಹಿಮ ಹೆಂಡತಿಯ ಮುಖ ನೋಡುತ್ತಿದ್ದು, ಕಠೋರಸ್ವರದಿಂದ, "ಇದೀಗ ಸುರೇಶ ಹೇಳುವುದೂ ಅಗತ್ಯವಿರಲಿಲ್ಲ; ಅದನ್ನೇ ಹಿಡಿದು ನೀನೂ ಸಿಟ್ಟಿಗೆದ್ದು ನನ್ನ ಬಾಯಿಂದ ಕಟುವಚನ

ಹೊರಡಿಸುವುದೂ ಅಗತ್ಯವಿರಲಿಲ್ಲ ಹೋಗಲಿ ಬಿಡು. ತಳದಲ್ಲಿ ಕೆಸರಿದ್ದ ನೀರನ್ನು ಕಲಕುವುದು ಜಾಣತನವಲ್ಲ" ಎಂದು ಹೊರಡಲನುವಾದ ಅಚಲೆ ಸರಕ್ಕನೆ ಇದಿರಿಗೆ ಬಂದು ಹಾದಿಕಟ್ಟಿದಳು ಈ ಆಕಸ್ಮಿಕವಾದ ದುಃಸಹವಾದ ಆಘಾತದ ವೇದನೆಯ ಚೀತ್ಕಾರವನ್ನು ತಡೆಯುವುದಕ್ಕೋ ಏನೋ, ಗಟ್ಟಿಯಾಗಿ ಅವಡುಗಚ್ಚಿದಳು ಕ್ಷಣಹೊತ್ತು ಹಾಗೆ ನಿಂತಿದ್ದು ಕೊನೆಗೆಂದಳು "ಹೊರಗೆ ಹೋಗುವುದು ಅಷ್ಟು ಅವಸರವೋ? ಒಂದು ನಿಮಿಷ ತಡೆಯಲಾರಿರೋ?"

"ತಡೆಯಬಹುದು"

"ಹಾಗಾದರೆ ಮಾತು ನಿಚ್ಚಳವಾಗಿಬಿಡಲಿ! ನೀರು ತಿಳಿಯಿದ್ದ ರಲ್ಲವೇ ತಳದಲ್ಲಿ ಕೆಸರಿದ್ದದ್ದು ತಿಳಿಯುವುದು?"

"ಹಾಂ"

"ಸರಿ ನಿರರ್ಥಕವಾಗಿ ನೀರು ಕಲಕಬೇಕೆಂದು ನಾನೂ ಎನ್ನುವುದಿಲ್ಲ ಆದರೆ ಆ ಭಯದಿಂದ ಕೆಸರನ್ನು ತೆಗೆಯದಿರಬೇಕೆ? ಒಂದಿನ ರಾಡಿಯಾದ ರಾಗಲೊಲ್ಲದೇಕೆ, ಮುಂದೆ ಕೊನೆತನಕ ಸ್ವಚ್ಛವಾಗಿರುವುದಲ್ಲ ಏನೆಂದಿರಿ?"

ಮಹಿಮ ಕಠಿನವಾಗಿ ಉತ್ತರವಿತ್ತ "ಅದಕ್ಕೆ ನನ್ನದೇನಡ್ಡಿಯಿಲ್ಲ. ಆದರೆ ಅದಕ್ಕೂ ಹೆಚ್ಚಿನ ಕೆಲಸ ನನಗೆ ಒಟ್ಟಿವೆ ಈಗ ಪುರಸತ್ತಿಲ್ಲ"

ಅಚಲೆ ಅಷ್ಟೇ ಕಠೋರವಾಗಿ ನುಡಿದಳು "ನಿಮ್ಮ ಆ ಹೆಚ್ಚಿನ ಕೆಲಸ ಮುಗಿದ ಬಳಿಕಾದರೂ ಪುರಸತ್ತಿದೆಯಲ್ಲ! ಆಗಲಿ, ಅವರೆಗೂ ಕಾಯುವೆ"

ಮಹಿಮ ಹೊರಟುಹೋದ ಅವನು ಮರೆಯಾಗುವ ವರೆಗೂ ಅವಳು ನೋಡುತ್ತ ನಿಂತಿದ್ದು ಆಮೇಲೆ ಕದ ಮುಚ್ಚಿದಳು

ಸುಮಾರು ಗಂಟೆಯ ತರುವಾಯ ಅಚಲೆ ಸುರೇಶನನ್ನು ಸ್ನಾನಕ್ಕೆ ಎಬ್ಬಿಸಹೋದಳು ಅವಳ ಶಾಂತ ಮುಖ ಶೋಕಾಚ್ಛನ್ನವಾದುದನ್ನು ನೋಡಿ, ಇಷ್ಟರೊಳಗೆ ಮಹಿಮನೊಡನೆ ಏನೋ ನಡೆದಿರಬೇಕೆಂದು ಅವನು ಊಹಿಸಿದ ಬಾಯಿಬಿಟ್ಟು ಕೇಳುವ ಧೈರ್ಯವಾಗಲಿಲ್ಲ

ಕೊಂಚಹೊತ್ತು ಸುಮ್ಮನೆ ನಿಂತಿದ್ದು "ಏನು ನಡೆದಿದೆ?" ಎಂದು ಕೇಳಿದಳು ಅಚಲೆ

ಸುರೇಶ ಬಟ್ಟೆಗಳನ್ನು ಬ್ಯಾಗಿನಲ್ಲಿ ಇಡುತ್ತಿದ್ದ "ಒಂದರೊಳಗೇ

ಇದೆಯಂತೆ ಟ್ರೇನು ಸ್ವಲ್ಪ ಮೊದಲೇ ಸಿದ್ಧಮಾಡಿಡುವೆ " ಎಂದ.

" ಈವೊತ್ತೇ ಹೋಗುವಿರೇನು ? " ಸ್ವಲ್ಪ ಆಶ್ಚರ್ಯದಿಂದ ಅಚಲೆ ಕೇಳಿದಳು

" ಹೌ "

" ಅದೇಕೆ ? "

ಸುರೇಶ ತಲೆಯೆತ್ತದೆಯೆ ಹೇಳಿದ " ಇನ್ನೇನು ಕೆಲಸ ? ನಿಮ್ಮ ನ್ನೊಮ್ಮೆ ನೋಡಿಕೊಂಡು ಹೋಗಲು ಬಂದಿದ್ದೆ, ನೋಡಿದೆ, ಆಯಿತು "

ಮೌನವಾಗಿ ಕ್ಷಣ ನಿಂತಿದ್ದು ಅಚಲೆ, " ಹಾಗಾದರೆ ಸ್ವಲ್ಪ ಈಕಡೆ ಬರ್ರಿ ಈ ಕೆಲಸ ನಿಮ್ಮದಲ್ಲ, ಹೆಣ್ಣುಮಕ್ಕಳದು, " ಎಂದು ಮುಂದು ವರಿದಳು

" ಬೇಡ ಬೇಡ ಇದೇನು ಮಹಾ "

ಅಚಲ ಬ್ಯಾಗನ್ನು ಎಳೆದುಕೊಂಡು ಬಟ್ಟೆ ಕೆಳಗೆ ಸುರುವಿ ಮಡಿಚಿ ಮಡಿಚಿ ಇಡತೊಡಗಿದಳು ಕಿಂಚಿತ್ ದೂರದಲ್ಲಿ ನಿಂತು ಸುರೇಶ: "ಇಷ್ಟೇನು ಅಗತ್ಯವಿರಲಿಲ್ಲ—ನಾನೇ—" ಇತ್ಯಾದಿ ಎನ್ನುತ್ತಲಿದ್ದ

ಅಚಲೆ ಯಾವುದಕ್ಕೂ ಉತ್ತರ ಕೊಡದೆ ನಿದಾನವಾಗಿ ತನ್ನ ಕೆಲಸ ಮಾಡುತ್ತ ನುಡಿದಳು "ನಿಮಗೆ ಅಕ್ಕತಂಗಿ ಅಥವಾ ಹೆಂಡತಿ ಇದ್ದಿದ್ದರೆ ಅವರೇ ಮಾಡುತ್ತಿದ್ದರು, ನಿಮಗೆ ಹಚ್ಚುತ್ತಿರಲಿಲ್ಲ ಆದರೆ ನಿಮಗೆ ಗೆಳೆಯ ತಿರುಗಿ ಬಂದರೆ ನೋಡಿಯಾರೆಂದು ಭಯ, ಅಲ್ಲವೆ ? ಇದರೊಳ ಗೇನು ? ಇದು ಹೆಣ್ಣುಮಕ್ಕಳದೇ ಕೆಲಸ "

ಬ್ಯಾಗನ್ನು ವ್ಯವಸ್ಥಿತಗೊಳಿಸಿಟ್ಟು ಮೆಲ್ಲಮೆಲ್ಲನೆ ಅವಳೆಂದಳು: "ಅಪ್ಪನ ಜಡ್ಡಿನ ಸುದ್ದಿ ತೆಗೆಯದಿದ್ದರೇ ಚೆನ್ನಾಗಿತ್ತು ಅದರಿಂದ ಇವರಿಗೆ ಅವಮಾನವಾದಂತಾಯಿತಿಷ್ಟೇ ಗಮನವನ್ನೇನೂ ಕೊಡಲಿಲ್ಲ "

ಸುರೇಶ ಚಕಿತನಾಗಿ ಕೇಳಿದ "ಮಹಿಮ ನಿನಗೇನು ಹೇಳಿದ ? "

ಅದಕ್ಕೆ ನೇರವಾಗಿ ಉತ್ತರ ಕೊಡದೆ ಅಚಲೆಯೆಂದಳು "ಮರೆಗೆ ನಿಂತು ನಾ ಎಲ್ಲ ಕೇಳಿದೆ "

" ಅದಕ್ಕಾಗಿ ಕ್ಷಮೆ ಬೇಡುವೆ ಅಚಲಾ, " ಎಂದ ಸುರೇಶ ಅಪ್ರತಿಭನಾಗಿ

"ಏಕೆ ? " ನಕ್ಕು ಕೇಳಿದಳು ಅಚಲೆ.

"ಕಾರಣ ನೀನೇ ಹೇಳಿದೆಯಲ್ಲ, ನನ್ನ ತಪ್ಪಿನಿಂದ ಅವನಿಗೆ ನಿನಗೆ ಇಬ್ಬರಿಗೂ ಅವಮಾನವಾಯಿತು — ಅದಕ್ಕಾಗಿ"

ಅಚಲೆ ಮುಖವೆತ್ತಿ ನೋಡಿದಳು ಅಂತರಂಗದ ಆವೇಗದಿಂದ ಅವಳ ಮುಖವೆಲ್ಲ ಉದ್ಭಾಸಿತವಾಯಿತು "ನೀವು ಏನೇ ಮಾಡಿದರೂ ನನಗಾಗಿ ಮಾಡಿದ್ದೀರಿ ನನ್ನನ್ನು ಲಜ್ಜೆಯಿಂದ ಬಿಡುಗಡೆ ಮಾಡುವುದಕ್ಕಾಗಿ ನೀವು ಲಜ್ಜಿತರಾಗಬೇಕಾಯಿತು ಹೀಗಿದ್ದೂ ನಿಮ್ಮಿಂದ ನಾನು ಕ್ಷಮೆ ಕೇಳಿಸಿಕೊಳ್ಳಲೇ? ನಾನಷ್ಟು ಅಮಾನುಷಳಲ್ಲ ನೀವೇಕೆ ಲಜ್ಜಿತರಾಗುತ್ತೀರಿ? ನೀವು ಮಾಡಿದ್ದು ವಿಹಿತವೇ ಆಗಿದೆ" ಎಂದಳು

ಸುರೇಶ ಹತಬುದ್ಧನಾಗಿರುವುದನ್ನು ಕಂಡು ತನ್ನ ಮಾತು ಅವನ ಎದೆ ಮುಟ್ಟಲಿಲ್ಲವೆಂದು ಅಚಲೆ ಅರಿತಳು "ನೀವಿಂದು ಹೋಗಬೇಡಿರಿ, ಸುರೇಶಬಾಬೂ ಇಲ್ಲಿ ನಿಮಗೆ ನಾಚಿಕೆಪಡಬೇಕಾಗುತ್ತಿದ್ದೀತು, ಅದು ನನ್ನ ನಾಚಿಕೆ ಮುಚ್ಚುವುದಕ್ಕೆ, ಇಲ್ಲದಿದ್ದರೆ ನಿಮಗಿದೆಲ್ಲ ಏನಗತ್ಯವಿತ್ತು? ಅಲ್ಲದೆ, ಈ ಮನೆ ನಿಮ್ಮ ಗೆಳೆಯರದೊಬ್ಬರದೇ ಅಲ್ಲ, ನನ್ನದೂ ಇಲ್ಲಿ ಅಧಿಕಾರವಿದೆ ನನ್ನ ಅತಿಥಿಯಾಗಿ ಸ್ವಲ್ಪ ದಿನ ಇರ್ರಿ," ಎಂದಳು

ಅವಳ ಸಾಹಸಕ್ಕೆ ಸುರೇಶ ಬೆರಗಾದ ಇತಿಮಿತಿಗೆ ಬಿದ್ದು ಏನೋ ಮಾತನಾಡಬೇಕೆಂಬಷ್ಟರಲ್ಲಿ ಮಹಿಮ ಬರುತ್ತಿರುವುದನ್ನು ಕಂಡ ಅಚಲೆ ಬ್ಯಾಗಿನ ಮುಂದೆ ಈ ಕಡೆ ಬೆನ್ನುಮಾಡಿಕೊಂಡು ಕುಳಿತಿದ್ದಳು ಮಹಿಮ ಬಂದುದು ಅವಳಿಗೆ ಕಾಣುವಂತಿರಲಿಲ್ಲ ಅವಳು ಏನಾದರೂ ಮಾತನಾಡಿಬಿಟ್ಟಾಳೆಂಬ ಭಯದಿಂದ, "ಬಂದೆಯಾ ಮಹಿಮ, ಕೆಲಸ ಆಯಿತೆ?" ಎಂದ

"ಹೂಂ ಆಯಿತು," ಎಂದು ಒಳಗೆ ಕಾಲಿಡುತ್ತಲೇ ಅಚಲೆಯನ್ನು ಕಂಡು, "ಏನು ನಡೆದಿದೆ?" ಎಂದು ಕೇಳಿದ

ಅವಳು ಹೊರಳಿ ನೋಡಿದಳು ಆದರೆ ಅದಕ್ಕೆ ಉತ್ತರ ಕೊಡದೆ ಸುರೇಶನನ್ನು ಕುರಿತು, "ನೀವು ನನಗೂ ಮಿತ್ರರು, ಅದೇಕೆ, ಮಾಡಿ ಮುಟ್ಟಿದ ಪರಮ ಆತ್ಮೀಯರು ಹೀಗೆ ಹೊರಟುಹೋದರೆ ನನಗೆ ಸೇರದು ವಿಪರೀತ ಸಿಟ್ಟೂ ಬರುವುದು ಈವೊತ್ತಂತೂ ನಾ ಹೋಗಗೊಡುವುದಿಲ್ಲ," ಎಂದಳು

ಒಣನಗೆ ನಕ್ಕು ಸುರೇಶನೆಂದ "ಕೇಳು ಮಹಿಮ, ನಿಮ್ಮನ್ನು ನೋಡಿಕೊಂಡು ಹೋಗಬೇಕೆಂದು ಬಂದಿದ್ದೆ, ನೋಡಿದೆ ಆಯಿತು. ಈ

ಕಾಡಿನೊಳಗೆ ನನ್ನನ್ನು ಬಹಳ ದಿನ ವ್ಯರ್ಥ ಏಕೆ ಹಿಡಿದುಹಾಕುವಿರಿ ? ”

“ನನಗೆನಿಸುತ್ತದೆ—ನೀ ಸಿಟ್ಟುಗೊಂಡು ಹೊರಟಿದ್ದೀ, ಇದು ಈಕೆಗೆ ಸಮ ಎನಿಸುತ್ತಿಲ್ಲ ” ಮಹಿಮ ಹೇಳಿದ

“ನಿಮ ೧ ಸಮ ಎನಿಸುತ್ತದೇನೋ ! ” ಅಚಲೆ ತೀಕ್ಷ್ಣಕಂಠದಿಂದ ನುಡಿದಳು

“ನನ್ನ ಮಾತು ಇರಲೊಲ್ಲದೇಕೆ ” ಎಂದ ಮಹಿಮ

ಸುರೇಶ ಒಳಗೊಳಗೆ ಅತ್ಯಂತ ವ್ಯಾಕುಲನಾದ ಈ ವಿರಸವನ್ನು ತಡೆಯುವುದಕ್ಕಾಗಿ ಪ್ರಸನ್ನಭಾವ ತಂದುಕೊಂಡು ನಗುತ್ತ ಮಾತನಾಡಿದ. “ಏನಿದು ಮಿಥ್ಯಾಪವಾದ ! ನನಗೆಲ್ಲಿಯ ಸಿಟ್ಟು ! ನೀವೊಳ್ಳೆಯ ಜನ ! ನಿಮ್ಮಿಚ್ಛೆಯಿದ್ದರೆ ಇನ್ನೂ ಒಂದೆರಡು ದಿವಸ ಇದ್ದುಹೋಗುವೆ ಅತ್ತಿಗೆ, ಬಟ್ಟೆ ಮುಚ್ಚಿಡುವ ಕಾರಣವಿಲ್ಲ, ತೆಗೆದಿಡು ಮಹಿಮ, ನಡೆ, ಇಂದು ನಿಮ್ಮ ಹೊಂಡದೊಳಗೆ ಸ್ನಾನ ಮಾಡುವ ”

“ ನಡೆ ”

೧೮

ಹೊಸ ಜೋಡು ಮೆಟ್ಟಿದ ಜನ, ತೀಕ್ಷ್ಣವಾದ ಒತ್ತುವಿಕೆಯನ್ನು ಸುಮ್ಮನೆ ಸಹಿಸಿಕೊಂಡು, ಆರಾಮವಿದ್ದಂತೆ ನಡೆಯುತ್ತಾರಲ್ಲ, ಇಡೀ ದಿನ ಸುರೇಶ ಹಾಗೆಯೆ ಕಳೆದ ಆನಂದ ಉಲ್ಲಾಸಗಳಲ್ಲಿ ! ಆದರೆ ಆ ಒತ್ತುವಿಕೆಯನ್ನು ಅವನಿಗಿಂತಲೂ ಗೌಪ್ಯವಾಗಿ ಅನುಭವಿಸುತ್ತಿದ್ದ ಇನ್ನೊಬ್ಬರಿಗೆ ಹಾಗಿರುವುದು ಸಾಧ್ಯವಾಗಲಿಲ್ಲ

ಗಂಡನ ಅವಿಚಲಿತ ಗಾಂಭೀರ್ಯದ ಮುಂದೆ, ತನ್ನ ಕುತ್ಸಿತ ಕಪಟತನಕ್ಕಾಗಿ ಈ ನಿರ್ಲಜ್ಜತನಕ್ಕಾಗಿ ತಲೆಯೊಡೆದುಕೊಂಡು ಸತ್ತು ಹೋಗಲಿಯಾ ಎಂದು ಅಚಲೆಗೆನಿಸುತ್ತಿತ್ತು ಈಗವಳು ಮಹಿಮನನ್ನು ಹೃದಯದಿಂದ ಅರಿತಿರದಿದ್ದರೂ ಬುದ್ಧಿಯಿಂದ ಅರಿತಿದ್ದಳು ತೀಕ್ಷ್ಣಬುದ್ಧಿಯ, ಅಲ್ಪಭಾಷಿಯ ಎದುರಿನಲ್ಲಿ ಈ ನಟನೆ ವ್ಯರ್ಥವಾಗುತ್ತಿದೆ, ತನ್ನ ಮುಖದಲ್ಲಿ ಲಜ್ಜಾಕಲಂಕ ಕ್ಷಣಕ್ಷಣಕ್ಕೂ ದಟ್ಟವಾಗುತ್ತಿದೆ ಎಂದು ಅವಳಿಗೆ ಸ್ಪಷ್ಟವಾಗಿ ಕಂಡುಬಂತು

ಮಹಿಮ ಅಂದು ಮತ್ತೆ ಹೊರಗೆ ಹೋಗಲಿಲ್ಲ ಅರ್ಥಾತ್, ಹಗಲಿನೂಟದಿಂದ ರಾತ್ರಿಯ ಫುರಿಯೂಟದವರೆಗೂ ಸಮಯವೆಲ್ಲ

ಹೀಗೆಯೆ ಹೋಯಿತು

ನಡುರಾತ್ರಿಯ ವರೆಗೂ ತಳಮಳಿಸಿ ತಳಮಳಿಸಿ ಅಚಲೆ ನುಡಿದಳು: "ಇಡೀ ರಾತ್ರಿ ದೀಪ ಉರಿಯುತ್ತಿದ್ದರೆ ಮತ್ತೊಬ್ಬರಿಗೆ ನಿದೆ ಹತ್ತದು. ನನ್ನ ಮೇಲೆ ಇಷ್ಟೂ ದಯೆಯಿಲ್ಲವೆ?"

ಮಹಿಮ ಬೆಚ್ಚಿಬಿದ್ದ. ಸರಕ್ಕನೆ ಬತ್ತಿ ಇಳಿಸಿ, "ತಪ್ಪಿದೆ, ಕ್ಷಮಿಸು" ಎಂದು ಪುಸ್ತಕ ಮುಚ್ಚಿ, ದೀಪ ನಂದಿಸಿ ತನ್ನ ಹಾಸಿಗೆಯಲ್ಲಿ ಮಲಗಿಕೊಂಡ. ಆದರೆ ಇದರಿಂದ ಅಚಲೆಯ ನಿದ್ದೆಗೇನೂ ಸಹಾಯವಾಗಲಿಲ್ಲ. ಹೊತ್ತು ಹೋದ ಹೋದ ಹಾಗೆ ಆ ನಿಃಶಬ್ದ ಅಂಧಕಾರವೇ ದುಃಸಹವಾಯಿತು. ಅದು ಅಸಹ್ಯವಾಗಿ ಕೊನೆಗೆಂದಳು: "ಅಲ್ಲಾ, ತಿಳಿದೇ ಆಗಲಿ ತಿಳಿಯದೆ ಆಗಲಿ, ಮಾಡಿದ ತಪ್ಪಿಗೆ ಶಿಕ್ಷೆ ತಪ್ಪಿದ್ದಲ್ಲ ಎಂಬುದು ನಿಜವೆ?"

"ತಿಳಿದ ಜನ ಹಾಗೆ ಹೇಳುತ್ತಾರೆ."

ಮತ್ತೆ ಕೆಲಹೊತ್ತು ನೀರವವಾಗಿ ಕಳೆದು ಅಚಲೆ ಕೇಳಿದಳು: "ಹಾಗಿದ್ದರೆ ನಾವಿಬ್ಬರೂ ಮಾಡಿದ ತಪ್ಪಿನ ಫಲವನ್ನು ಮೊದಲಿನಿಂದಲೇ ಅನುಭವಿಸುತ್ತಿದ್ದೇವಲ್ಲ, ಇದರ ಪರ್ಯವಸಾನ ಹೇಗಾಗಬಹುದೆನ್ನುವಿರಿ?"

"ಗೊತ್ತಿಲ್ಲ."

"ನನಗೂ ತಿಳಿಯದು. ಆದರೆ ಮಿಕ್ಕುದೆಲ್ಲ ಹೋಗಲಿ, ಶಿಕ್ಷೆಯ ಹೆಚ್ಚು ಭಾಗ ಪುರುಷರೇ– ಎಷ್ಟೆಂದರೂ ಪುರುಷರು– ವಹಿಸಿಕೊಳ್ಳುವುದುಚಿತ ಎಂದು ನನಗೆನಿಸುತ್ತದೆ."

"ಇನ್ನೂ ಸ್ವಲ್ಪ ವಿಚಾರಮಾಡಿ ನೋಡಿದ್ದರೆ, ಅದರಲ್ಲಿ ಹೆಂಗುಸಿನ ಪಾಲು ಎಳ್ಳಷ್ಟೂ ಕಡಿಮೆಯಿಲ್ಲವೆಂದು ತೋರುತ್ತಿತ್ತು. ಇರಲಿ, ಪುರುಷ ಎಂದರೆ ಯಾರು? ನಾನೋ ಸುರೇಶನೋ?"

ಅಚಲೆಗೆ ರೋಮಾಂಚವೆದ್ದುದು ಮಹಿಮನಿಗೆ ಕತ್ತಲಲ್ಲಿಯೂ ಗೊತ್ತಾಯಿತು. ಸ್ವಲ್ಪ ತಡೆದು ಅವಳೆಂದಳು: "ಒಂದಿಲ್ಲೊಂದು ದಿನ ನೀವು ನನ್ನನ್ನು ಇದಿರಾ ಇದಿರು ಅವಮಾನಿಸುವಿರೆಂದು ತಿಳಿದೇ ಇತ್ತು. ಇದರ ಕೊನೆ ಎಲ್ಲಿಯೋ ದೇವರೇ ಬಲ್ಲ. ಆದರೆ ನಾ ಜಗಳವಾಡಲೂ ಆರೆ, ಮದುವೆಯಾಗಿದೆಯೆಂದ ಮಾತ್ರಕ್ಕೆ ಜಗಳವಾಡುತ್ತ ನಿಮ್ಮೊಡನೆ ಬಾಳ್ವೆಮಾಡಲೂ ಆರೆ. ನಾಳೆಯಲ್ಲದಿದ್ದರೆ ನಾಡದು ತವರುಮನೆಗೆ

ಹೋಗುವವಳು "

" ಸಿದ್ದಪ್ಪನಿಗೆ ಆಶ್ಚರ್ಯವೇ ಆದೀತು."

" ಉಂಹೂ, ಆತನಿಗೆ ಗೊತ್ತಿತ್ತಂತಲೇ 'ಇದರ ಪರಿಣಾಮವೇನು ನೆಟ್ಟಗಾಗಲಿಕ್ಕಿಲ್ಲ'ನೆಂದು ಮತ್ತೆ ಮತ್ತೆ ಎಚ್ಚರಿಸುತ್ತಿದ್ದ ಕಲಕತ್ತೆಯೊಳಗೆ ನಡೆಯುತ್ತದೆ, ಆದರೆ ಹಳ್ಳಿಯವರಲ್ಲಿ ಆತ್ಮೀಯ ಸ್ವಜನರನ್ನು ಬಿಟ್ಟು ಬರೀ ಹೆಂಡತಿಯೊಡನಿರುವುದು ಯಾರಿಗೂ ಹೆಚ್ಚುದಿನ ಸಾಧ್ಯವಿಲ್ಲ ಆದುದರಿಂದ ಆತನಿಗೆ ಮತ್ತೇನೆನಿಸಿದರೂ ಆಶ್ಚರ್ಯ ಮಾತ್ರ ಎನಿಸುವುದಿಲ್ಲ!"

" ಹಾಗಿದ್ದರೆ ಅವರ ಮಾತು ಕೇಳಲಿಲ್ಲವೇಕೆ?"

" ನೀವು ವಿಚಾರಮಾಡದೆ ಏನೂ ಮಾಡುವುದಿಲ್ಲವೆಂದು ಬಗೆದಿದ್ದೆ"

" ಈ ಗ್ರಹಿಕೆ ಸುಳ್ಳಾಯಿತೆ ?"

" ಹೌದು "

" ಅಂತೆಯೇ ಪಾಲುಗಾರಿಕೆಯ ವ್ಯವಹಾರದಲ್ಲಿ ಲಾಭವಿಲ್ಲವೆಂದು ಅಂಗಡಿ ಕಿತ್ತುಕೊಂಡು ಹೋಗಬೇಕೆನ್ನುವೆಯಾ ?"

" ಹಾಂ "

" ಹಾಗಾದರೆ ಹೋಗು ಇದು ವ್ಯವಹಾರವೆಂದೇ ತಿಳಿಯುತ್ತಿದ್ದರೆ ನನಗೂ ನಿನಗೂ ಹೊಂದದು ಆದರೆ ವ್ಯವಹಾರವನ್ನು ತಿಳಿಯುವುದಕ್ಕೂ ಸ್ವಲ್ಪ ಸಮಯ ಬೇಕೆಂಬುದನ್ನು ಮರೆಯಬೇಡ ನಿನ್ನ ತಪ್ಪು ನಿನಗೆ ಮನವರಿಕೆಯಾದ ದಿನ ನನಗೆ ಬರ, ಕೂಡಲೆ ನಾ ಕರೆಯಲಿಕ್ಕೆ ಬರುವೆ "

ಉದಿರುವ ಕಂಬನಿ ಒರಸಿಕೊಂಡು, ಕೊರಳು ಸುಧಾರಿಸಿಕೊಂಡು ಅಚಲೆಯೆಂದಳು " ಮನುಷ್ಯ ತಿರುಗಿಮುರುಗಿ ತಪ್ಪು ಮಾಡಲಾರ. ನಿಮಗೆ ಆ ತೊಂದರೆ ಉಂಟಾದೀತೆಂದು ನನಗೆನಿಸುವುದಿಲ್ಲ "

" ಎನಿಸುವುದಿಲ್ಲವಾದುದರಿಂದಲೇ ಅದಕ್ಕೆ ಭವಿಷ್ಯತ್ತು ಎನ್ನುವುದು ಭವಿಷ್ಯತ್ತಿನ ವಿಚಾರ ಭವಿಷ್ಯತ್ತಿಗೇ ಬಿಟ್ಟುಬಿಟ್ಟು ಇಂದು ನನ್ನನ್ನು ಕ್ಷಮಿಸು — ಹೆಚ್ಚು ಹೇಳಲಾರೆ "

ಅಚಲೆ ಆಘಾತ ಹೊಂದಿ ನುಡಿದಳು " ನೀವು ಚೇಷ್ಟೆ ನಡೆಸಿರುವಿ ರೇನು ಮತ್ತೆ? ಹಾಗಿದ್ದರೆ ನೀವು ತಪ್ಪುತ್ತಿರುವಿರಿ ನಾ ನಿಜವಾಗಿಯೂ ನಾಳೆ ನಾಡಿದು ಹೊರಡಬೇಕೆನ್ನುವೆ."

" ನಾ ನಿಜವಾಗಿಯೂ ಹೋಗಗೊಡಲಿಚ್ಛಿಸುವುದಿಲ್ಲ "

" ಏನು ; ಬಲಾತ್ಕಾರದಿಂದ ಇಟ್ಟುಕೊಳ್ಳುವಿರೊ ? ಖಂಡಿತ ಸಾಧ್ಯ ವಿಲ್ಲ, ಬಲ್ಲಿರಾ ? "

ಸಹಜ ಶಾಂತಭಾವದಿಂದ ಮಹಿಮನೆಂದ " ಒಳ್ಳೆಯದು, ಈಗಿಂದೀಗ ಅಲ್ಲವಲ್ಲ, ನಾಳೆ ನಾಡದು ಆಗ ವಿಚಾರಮಾಡಲಿಕ್ಕೆ ಬಂದೀತು. ಈಗ ಸಾಕು. " ಎಂದು ಮುಖ ಆಕಡೆ ತಿರುಗಿಸಿ ಪ್ರಸಂಗವನ್ನು ಬಲವಂತದಿಂದ ನಿಲ್ಲಿಸಿ ನಿಶ್ಚಿಂತನಾಗಿ ಮಲಗಿದ ಮರುಕ್ಷಣದಲ್ಲಿಯೇ ನಿದ್ದೆಯೂ ಹತ್ತಿರಬೇಕು

ಮುಂಜಾನೆ ಚಾಕ್ಕೆ ಕುಳಿತಾಗ ಸುರೇಶ ಕೇಳಿದ " ಮಹಿಮ ಈವೊತ್ತೂ ನಸುಕಿನಲ್ಲಿಯೇ ಹೋದಂತೆ ಕಾಣುತ್ತದೆ ? "

" ಭೂಮಿ ತಲೆಕೆಳಗಾದರೂ ಅದು ತಪ್ಪದು " ಅಚಲೆ ಹೇಳಿದಳು.

" ಒಂದು ದೃಷ್ಟಿಯಿಂದ ನನಗಿಂತ ಅವನದು ಎಷ್ಟೊ ಮೇಲು. ಅವನ ಕೆಲಸಕ್ಕೆ ಒಂದು ಗತಿಯಿರುತ್ತದೆ, ಯಂತ್ರದ ಚಕ್ರದಂತೆ ಕೀಲಿ ತುಂಬಿರುವ ವರೆಗೂ ನಡೆಯುತ್ತಿರುವುದು "

" ಯಂತ್ರದಂತಿರುವುದು ಚೆಲೋ ಎಂದಿರೇನು ? "

" ಏಕಲ್ಲ ? ಈ ಕ್ಷಮತೆ ನನಗೆ ಸಾಧ್ಯವಲ್ಲ ದೌರ್ಬಲ್ಯದ ದೋಷ ಎಂತಹದೆಂಬುದು ನನಗೆ ಗೊತ್ತು ಆದುದರಿಂದ ಸ್ಥಿರಚಿತ್ತರನ್ನು ಪ್ರಶಂಸಿಸದಿರಲಾರೆ — ಇರಲಿ, ಇಂದು ನನ್ನನ್ನು ಮುಕ್ತಮಾಡು ಊರಿಗೆ ಹೋಗುವೆ "

ಅಚಲೆ ತತ್‌ಕ್ಷಣ ಒಪ್ಪಿ ನುಡಿದಳು "ಹೋಗಿರಿ ನಾಳೆ ನಾನೂ ಹೊರಡುವೆ "

"ಎಲ್ಲಿಗೆ ? " ಆಶ್ಚರ್ಯದಿಂದ ಸುರೇಶ ಕೇಳಿದ

"ಕಲಕತ್ತೆಗೆ "

"ಅಕಸ್ಮಾತ್ ಹೀಗೇಕೆ ? ನಿನ್ನೆ ಇದರ ಸೂಚನೆ ಕೂಡ ಇರಲಿಲ್ಲ."

"ಅಪ್ಪಗೆ ನೆಟ್ಟಗಿಲ್ಲ, ನೋಡಬೇಕು "

ಸುರೇಶನ ಮುಖದಲ್ಲಿ ಉದ್ವೇಗದ ನೆರಳು ಮೂಡಿತು "ಅಸ್ವಸ್ಥನಾದ ತಂದೆಯನ್ನು ನೋಡಬೇಕೆಂದು ಅಕಸ್ಮಾತ್ ಇಚ್ಛೆಯುಂಟಾದರೂ ಆಶ್ಚರ್ಯವಲ್ಲ. ಆದರೆ ನನಗೆ ಭಯ—ನನ್ನ ಸಲುವಾಗಿಯೇ ಏಕಾಂತದಲ್ಲಿ ಎಲ್ಲಿ ಸಿಟ್ಟುಸಿಟ್ಟಾಗಿ— "

ಅಚಲೆ ಉತ್ತರವೀಯಲಿಲ್ಲ ಕೋಣೆಯ ಎದುರಿನಿಂದ ಯದು ಹೋಗುತ್ತಿದ್ದ ಸುರೇಶ ಕೂಗಿ ಕೇಳಿದ. "ನಿಮ್ಮ ಬಾಬು ಹೊಲದಿಂದ ಬಂದರೇನೊ?"

"ಇನ್ನವರು ಹೋಗಿಲ್ಲ ಓದುವ ಕೋಣೆಯೊಳಗೆ ಮಲಗಿ ನಿದ್ದೆ ಹೋಗಿದ್ದಾರೆ" ಯದು ಹೇಳಿದ

ಅಚಲೆ ಚಟ್ಟನೆದ್ದು ಹೋಗಿ ಇಣಕಿನೋಡಿದಳು ಮಹಿಮ ಕುರ್ಚಿಯ ಮೇಲೆ, ಮೇಜಿನ ಮೇಲೆ ಕಾಲು ಚಾಚಿ ಬಿದ್ದುಕೊಂಡು ನಿದ್ದೆಗೈಯುತ್ತಿದ್ದ ರಾತ್ರಿಯ ನಿದ್ದೆಯ ಕೊರತೆಯನ್ನು ಹೀಗೆ ತುಂಬಿಕೊಳ್ಳುವುದು ಮಹಾದ್ಭುತ ಅಲ್ಲ ಆದರೆ ಅಚಲೆಗೆ ಎಲ್ಲಿಯಿಲ್ಲದ ಅಚ್ಚರಿ—ತನ್ನ ಪತಿ ನಿತ್ಯಕಾರ್ಯ ಬದಿಗಿಟ್ಟು ಅಕಾಲದಲ್ಲಿ ನಿದ್ರಿಸಿರುವುದನ್ನು ಕಣ್ಣಾರೆ ಕಾಣುತ್ತಿದ್ದಾಳೆ! ಸದ್ದುಮಾಡದೆ ಒಳಗೆ ಹೋಗಿ ನೀರವವಾಗಿ ಅವನ ಮುಖ ನೋಡುತ್ತ ನಿಂತಳು ಪ್ರಭಾತದ ನಸುಬೆಳಕು ಅದರ ಮೇಲೆ ಬಿದ್ದಿತ್ತು. ಶಾಂತ ಮುಖದಲ್ಲಿ ಅಶಾಂತಿಯ ಛಾಯೆ ಹರಡಿತ್ತು ಹಣೆಯಲ್ಲಿ ಕೆಲವು ರೇಖೆಗಳು ಮೂಡಿದ್ದವು ಒಂದೇ ಒಂದು ವರ್ಷದ ಹಿಂದೆ ಹೀಗಿರಲಿಲ್ಲ. ಯಾವುದೋ ಗುಪ್ತವ್ಯಥೆಯಿಂದ ಪೀಡಿತನಾಗಿರುವನೆಂದು ಅವಳಿಗೆನಿಸಿತು. ಅವಳು ಬಂದಹಾಗೆಯೆ ಸದ್ದುಮಾಡದೆ ಹೋಗಬೇಕೆಂದಿದ್ದಳು ಪೀಕದಾನಿಗೆ ಕಾಲುತಾಕಿದ ಸದ್ದಿಗೆ ಮಹಿಮ ಕಣ್ತೆರೆದು ನೋಡಿದ ಅಚಲೆಗೆ ನಾಚಿಕೆಯಾದಂತಾಯಿತು "ಇದೇನು, ಅವೇಳೆಯಲ್ಲಿ ನಿದ್ದೆ? ಅಸ್ವಾಸ್ಥ್ಯ ಇಲ್ಲವಷ್ಟೆ?" ಎಂದು ಕೇಳಿದಳು

"ಯಾರಿಗೆ ಗೊತ್ತು—ಅಸ್ವಾಸ್ಥ್ಯ ಇಲ್ಲದಿದ್ದರೇ ಆಶ್ಚರ್ಯ!" ಮಹಿಮ ಕಣ್ಣುಜ್ಜಿಕೊಳ್ಳುತ್ತ ಹೇಳಿದ ಅಚಲೆ ಮರಳಿ ಪ್ರಶ್ನಿಸದೆ ಹೊರಟು ಹೋದಳು

ಊಟವಾದ ಬಳಿಕ ಸುರೇಶ ಹೊರಡುವ ಸಿದ್ಧತೆ ನಡೆಸುತ್ತಿದ್ದ. ಹತ್ತಿರ ಕುರ್ಚಿಯಲ್ಲಿ ಕುಳಿತು ಮಹಿಮ ಅವನೊಡನೆ ಮಾತನಾಡುತ್ತಿದ್ದ. ಅಚಲೆ ಬಾಗಿಲಬಳಿ ಬಂದು, "ನಾಳೆ ನಾನೂ ಹೋಗುವೆ. ಪುರಸತ್ತಾದರೆ ಒಮ್ಮೆ ಬಂದು ಅಪ್ಪನನ್ನು ನೋಡಿರಿ." ಎಂದಳು ಯಾವ ಪ್ರಸ್ತಾವನೆಯೂ ಇಲ್ಲದೆ.

"ಹೀಗೇನು!" ಎಂದು ಆಶ್ಚರ್ಯದಿಂದ ನುಡಿದು ಮಹಿಮನ ಕಡೆ

ಹೊರಳಿ, "ಅತ್ತಿಗೆಯನ್ನು ನಾಳೆಯೇ ಕಲಕತ್ತೆಗೆ ಕಳಿಸಬೇಕೆಂದಿರುವೆಯಾ?" ಎಂದು ಸುರೇಶ ಕೇಳಿದ

ಹೆಂಡತಿಯ ಈ ಇಲ್ಲದ ವಿರೋಧಕ್ಕಾಗಿ ಮಹಿಮನ ಎದೆ ಉರಿಯಿತು. ಆದರೂ ಮುಖಭಾವವನ್ನು ಪ್ರಸನ್ನವಾಗಿಯೇ ಇಟ್ಟುಕೊಂಡು ಮೆಲುನಗೆಯೊಂದಿಗೆ ನುಡಿದ "ಏನೂ ಅಡ್ಡಿಯಿಲ್ಲ. ಆದರೆ ನಮ್ಮ ಹಳ್ಳಿ ಗೃಹಸ್ಥರ ಮನೆಯೊಳಗೆ ನಾಟಕವಾಡುವ ಪರಿಪಾಠವಿಲ್ಲ ನಾಳೆ ಏಕೆ? ಇಂದೇ ನಿನ್ನ ಸಂಗಡಲೇ ಕಳಿಸಿಕೊಡಬಹುದು"

ಲಜ್ಜೆಯಿಂದ ಸುರೇಶನ ಮುಖ ಆರಕ್ತವಾಯಿತು ಅಚಲೆ ಅದನ್ನು ತತ್‌ಕ್ಷಣ ಅರಿತಳು ಗಟ್ಟಿಯಾಗಿ ನಕ್ಕು ನುಡಿದಳು "ಸುರೇಶ ಬಾಬು, ನಾವು ಪಟ್ಟಣಿಗರು, ನಾಚಿಕೊಳ್ಳುವ ಕಾರಣವಿಲ್ಲ ಜಡ್ಡಿನ ತಂದೆ-ತಾಯಿಗಳನ್ನು ನೋಡಲು ಹೋಗುವ ರೂಢಿ ಹಳ್ಳಿಯಲ್ಲಿರದಿದ್ದರೆ, ನಮ್ಮ ಪಟ್ಟಣದ ನಾಟಕಗಳೇ ಬಹಳ ಚೆಲೋ ಎನ್ನಬೇಕು ಹಾಗಿದ್ದರೆ, ನೀವಿಂದು ಹೋಗಬೇಡಿರಿ, ನಾಳೆ ಇಬ್ಬರೂ ಹೋಗುವ"

ಅವಳ ಮಿತಿಮೀರಿದ ಉದ್ಧಟತನಕ್ಕೆ ಸುರೇಶನ ಮುಖ ಬಣ್ಣಗೆಟ್ಟಿತು. ಅವನು ಮೋರೆ ತಗ್ಗಿಸಿ ಹೇಳಿದ "ಇಲ್ಲಿಲ್ಲ, ನಾ ನಿಲ್ಲುವ ಹಾಗಿಲ್ಲ ಅತ್ತಿಗೆ ನೀ ಬೇಕಾದರೆ ನಾಳೆ ಬಾ, ನಾ ಮಾತ್ರ ಇಂದೇ ಹೋಗುವೆ—" ಮಾತನಾಡಾಡುತ್ತಲೇ ಅವನು ತೀವ್ರ ಉತ್ತೇಜಿತನಾಗಿ ಬ್ಯಾಗು ತೆಗೆದುಕೊಂಡು ಎದ್ದೇ ನಿಂತ

ಅವನ ಉತ್ತೇಜನೆಯ ಆವೇಗ ಅಚಲೆಯ ಮೈಯಂತ ಮೈ ನಡುಗಿಸಿತು ವ್ಯಾಕುಲಳಾಗಿ, "ಇನ್ನೂ ಗಾಡಿಗೆ ಹೊತ್ತಿದೆ ಸುರೇಶಬಾಬೂ. ಸ್ವಲ್ಪ ತಡೆಯಿರಿ ನನ್ನೆರಡು ಮಾತು ಕೇಳಿಕೊಂಡು ಹೋಗಿರಿ" ಎಂದಳು. ಅವಳ ಆರ್ತಕಂಠಸ್ವರಕ್ಕೆ ಇಬ್ಬರೂ ಬೆಚ್ಚಿದರು

ಅಚಲೆ ಯಾವುದನ್ನೂ ಗಮನಿಸದೆ ಹೇಳತೊಡಗಿದಳು "ನಾ ನಿಮ್ಮ ಯಾವ ಕೆಲಸಕ್ಕೂ ಆಗಲಿಲ್ಲ ಸುರೇಶಬಾಬೂ. ಆದರೆ ನಿಮ್ಮ ಹೊರತು ನನಗಾರೂ ಆಪತ್ತಿಗಾಗುವ ಮಿತ್ರರಿಲ್ಲ ನೀವು ಅಪ್ಪನಿಗೆ ಹೋಗಿ ಹೇಳಿರಿ ಇವರು ನನ್ನನ್ನು ಕಟ್ಟಿಹಾಕಿದ್ದಾರೆ, ಎಲ್ಲಿಗೂ ಬಿಡುವುದಿಲ್ಲ, ನಾನಿಲ್ಲಿಯೇ ಸತ್ತುಹೋಗುವೆ.—ಸುರೇಶಬಾಬೂ, ನನ್ನನ್ನು ಕರೆದುಕೊಂಡು ಹೋಗಿರಿ, ಪ್ರೀತಿ ಇಲ್ಲದಲ್ಲಿ ಒಗೆತನ ಮಾಡುವುದಕ್ಕಾಗಿ ತಳ್ಳಿ

ಹೋಗಬೇಡಿರಿ!"

ಮಹಿಮ ವಿಹ್ವಲನಾಗಿ ನಿಶ್ಶಬ್ದವಾಗಿ ನೋಡುತ್ತಲಿದ್ದ. ಸುರೇಶ ತಿರುಗಿ ನಿಂತು ಕಣ್ಣು ಕೆಕ್ಕರಿಸಿ ಉಚ್ಚಸ್ವರದಿಂದ ನುಡಿದ "ನೀ ಬಲ್ಲೆ ಮಹಿಮ ಇವಳು ಬ್ರಾಹ್ಮ ಸ್ತ್ರೀ. ಸತಿಯೆನಿಸಿದ ಮಾತ್ರಕ್ಕೆ ಪಾಶವಿಕ ಬಲಾತ್ಕಾರ ಮಾಡಲು ನಿನಗೆ ಅಧಿಕಾರವಿಲ್ಲ!"

ಕ್ಷಣ ಹೊತ್ತು ಮಹಿಮ ಅಚೇತನನಾದ. ಬಳಿಕ ಸುಧಾರಿಸಿಕೊಂಡು ಶಾಂತಸ್ವರದಿಂದ ಹೆಂಡತಿಗೆ ಹೇಳಿದ "ನೀನು ಏತಕ್ಕಾಗಿ, ಏನು ಮಾಡುತ್ತಿರುವೆ ಎಂಬುದನ್ನು ತುಸ ವಿಚಾರಮಾಡಿ ನೋಡು ಅಚಲಾ!" ತಿರುಗಿ ಸುರೇಶನಿಗೆಂದ "ನಾನೆಂದೂ ಯಾರ ಮೇಲೆಯೂ ಪಶುಬಲ-ಮನುಷ್ಯಬಲ ಯಾವ ಬಲವನ್ನೂ ಪ್ರಯೋಗಿಸುವುದಿಲ್ಲ. ಒಳ್ಳೆಯದು ಸುರೇಶ, ನೀನು ನಿಲ್ಲುವಂತಿದ್ದರೆ ಈವೊತ್ತಿದ್ದು ಇವಳನ್ನು ಕರೆದುಕೊಂಡು ಹೋಗಲ್ಲ. ನಾ ಬಂದು ಗಾಡಿ ಹತ್ತಿಸುವೆ, ಎಂದರೆ ಊರವರ ವಕ್ರದೃಷ್ಟಿ ತಪ್ಪುವುದು."

ಸ್ವಲ್ಪ ತಡೆದು ಮಹಿಮ, "ಸ್ವಲ್ಪ ಕೆಲಸವಿದೆ, ಹೋಗಿಬರುತ್ತೇನೆ ಸುರೇಶ, ಇಂದ ಹೋಗುವುದಿಲ್ಲದಿದ್ದರೆ ಬಟ್ಟೆ ಕಳಚಿ ಇಡು. ಒಂದು ಗಂಟೆಯೊಳಗೇ ತಿರುಗಿ ಬರುತ್ತೇನೆ" ಎಂದು ಮೆಲ್ಲಮೆಲ್ಲನೆ ಹೊರಬಿದ್ದು ಹೋದ.

ಅಚಲೆ ಮೂರ್ತಿಯಂತೆ ಚೌಕಟ್ಟು ಹಿಡಿದುಕೊಂಡು ನಿಂತಹಾಗೆಯೇ ನಿಂತುಬಿಟ್ಟಳು. ಸುರೇಶ ಕೆಲಹೊತ್ತು ತಲೆತಗ್ಗಿಸಿ ನಿಂತಿದ್ದು ಅಟ್ಟಹಾಸದ ನಗೆ ನಕ್ಕು ಮಾತನಾಡಿದ "ಭಲೆ ಭಲೆ, ಚೆಲೋ ಒಂದು ಅಂಕ ಅಭಿನಯಿಸಲ್ಪಟ್ಟಿತು. ನೀನೂ ಕೆಡಿಸಲಿಲ್ಲ, ನಾನೂ ಅದ್ಭುತ ಮಾಡಿಬಿಟ್ಟೆ! ಅವನ ಮನೆಯೊಳಗೇ ಅವನ ಹೆಂಡತಿಯ ಬಗ್ಗೆ ಅವನನ್ನು ಜಬರಿಸಿಬಿಟ್ಟೆ! ಇನ್ನೇನು, ಅವನು ಸವಿನಗೆ ನಕ್ಕು ಒಂದುರೀತಿಯಿಂದ ನನಗೆ ಶಹಬ್ಬಾಸಿಕೆಯನ್ನೇ ಕೊಟ್ಟ. ನಾ ಪಣವಿಟ್ಟು ಹೇಳಬಲ್ಲೆ ಅಚಲಾ,— ಅವನು ಕೆಲಸದ ನೆವದಿಂದ ಹೋದದ್ದು ಗಂಟಲು ಸಡಿಲುಬಿಟ್ಟು ನಗುವುದಕ್ಕೆ! ಹೋಗಲಿ, ಒಂದಿಷ್ಟು ಕನ್ನಡಿ ತೆಗೆದುಕೊಂಡು ಬಾ ಇಲ್ಲಿ ಅತ್ತಿಗೆ, ನೋಡುವೆ, ನನ್ನ ಮುಖ ಹೇಗೆ ಕಾಣುತ್ತಿದೆಯೊ!"

ಸುರೇಶ ಮುಖವೆತ್ತಿ ನೋಡಿದ. ಅಚಲೆಯ ಮುಖದ ಮೇಲೆ ಕಳೆ ಇರಲಿಲ್ಲ. ಅವಳು ಮೌನವಾಗಿ ಮೆಲ್ಲಮೆಲ್ಲನೆ ಹೋಗಿಬಿಟ್ಟಳು.

## ೧೯

ಮುಟ್ಟಲೂ ಜುಗುಪ್ಸೆಯುಂಟಾಗುವಂತಹ ಹಾಸಿಗೆಯನ್ನು ನಿತ್ಯ ನಿಯಮದಂತೆ ಹಾಸಲು ಹೋದಾಗ ಅಚಲೆಯ ಮನಃಸ್ಥಿತಿ ಹೇಗಿದ್ದಿರ ಬಹುದು !

ಯಂತ್ರದ ಗೊಂಬೆಯಂತೆ ಕೆಲಸ ಪೂರಯಿಸಿ ತಿರುಗಿದಾಗ ಪುಟ್ಟ ಮೇಜಿನ ಮೇಲೆ ಅವಳ ದೃಷ್ಟಿಬಿದ್ದಿತು ಬ್ಲಾಟಿಂಗ್ ಪ್ಯಾಡಿನ ಮೇಲಿದ್ದ ಚಿಕ್ಕ ಚೀಟಿಯನ್ನು ನಿಮಿಷದಲ್ಲಿಯೇ ಓದಿಕೊಂಡಳು ಒಂದೇ ಒಂದು ಸಾಲು, ಪಾರವಿಲ್ಲ ಮಿತಿಯಿಲ್ಲ, ಮೃಣಾಲ ಬರೆದಿದ್ದಾಳೆ 'ಅಣ್ಣಯ್ಯ ದೊರೆಯೇ, ಏನು ಕೆಲಸ? ಮೊನ್ನೆಯಿಂದಲೂ ನಿನ್ನ ಹಾದಿ ನೋಡಿ ನೋಡಿ ನಿನ್ನ ಮೃಣಾಲಳ ಕಣ್ಣು ಇಂಗಿಹೋದವು !'

ಎಷ್ಟೋ ಹೊತ್ತು ಅಚಲೆಯ ಕಣ್ಣೆವೆ ಅಲುಗಲಿಲ್ಲ ಆ ಒಂದು ಪಙ್ಕ್ತಿಯಲ್ಲಿ ನೋಟ ನಟ್ಟುಹೋಯಿತು ಚೀಟಿ ಎಂದಿನದು? ಯಾರು ಯಾವಾಗ ತಂದುಕೊಟ್ಟರು? ಯಾವುದೂ ತಿಳಿಯದು ಮೃಣಾಲಳ ಮನೆಯೆಲ್ಲಿ? ಯಾವ ಕಡೆ? ಎತ್ತಲಿಂದ ಹೋಗುವುದು ಅವಳ ಮನೆಗೆ? ಅವಳೇಪರಿ ಕಾಯುವುದು ಏತಕ್ಕೆ? ಯಾವುದನ್ನೂ ತಿಳಿಯಲು ಮಾರ್ಗವಿಲ್ಲ

ನಟ್ಟ ನೋಟದಿಂದ ನೋಡಿ ನೋಡಿ ಅವಳ ಕಣ್ಣು ಉರಿಯ ತೊಡಗಿದವು ಆ ಕಪ್ಪಕ್ಷರಗಳು ಮೊದಲು ಮಸುಮಸುಕಾಗಿ, ಬಳಿಕ ಸಣ್ಣ ಸಣ್ಣ ಹುಳುಗಳಂತೆ ಕಾಗದದ ತುಂಬ ಹರಿದಾಡತೊಡಗಿದವು. ಅವಳಿನ್ನೂ ಹಾಗೆಯೇ ನೋಡುತ್ತ ನಿಂದಿರುತ್ತಿದ್ದಳು ಆದರೆ ಈವರೆಗೆ ಅವಳಿಗೆ ಗೊತ್ತಿಲ್ಲದಂತೆಯೇ ಕೂಡಿಬೀಳುತ್ತ ಬಂದ ದುಃಖದ ಆವೇಗ, ಒಮ್ಮೆಲೆ ಅಣೆಕಟ್ಟೊಡೆದ ಪ್ರವಾಹದಂತೆ ಘನಗರ್ಜಿಸಿ ಹೊರಹೊಮ್ಮಿತು. ಆ ಶಬ್ದಕ್ಕೆ ಅವಳು ಬೆಚ್ಚಿ ಬಿದ್ದು ಎಚ್ಚತ್ತಳು ಹೊರಕ್ಕೆ ನೋಡಿದಳು. ಸಂಜೆಗತ್ತಲು ಅಂಗಳಕ್ಕಿಳಿದಿತ್ತು ಯದು ಲಾಟೀನು ಹಚ್ಚಿಕೊಂಡು ಹೊರಗಿನ ಕೋಣೆಯಲ್ಲಿಡಲು ಒಯ್ಯುತ್ತಿದ್ದ "ಬಾಬುಗಳು ಬಂದಿರುವರೇ ಯದು?" ಎಂದು ಅಚಲೆ ಕೇಳಿದಳು "ಇನ್ನೂ ಇಲ್ಲ" ಎಂದು ಅವನೆಂದ

ಮಧ್ಯಾಹ್ನದ ಲಜ್ಜಾಜನಕ ನಾಟಕದ ಒಂದಂಕ ಮುಗಿದ ಕೂಡಲೆ ಹೊರಗೆ ಹೋದ ಮಹಿಮ ಇನ್ನೂ ಮರಳಲಿಲ್ಲವೆಂಬುದು ಅವಳ ಗಮನಕ್ಕೆ

ಬಂದಿತು ಗಂಡನ ಪ್ರತಿನಿತ್ಯದ ರೀತಿನಡತೆಯ ಬಗ್ಗೆ ಅವಳಿಗೀಗ ಸಂಶಯವುವುಳಿಯಲಿಲ್ಲ ಸುರೇಶ ಬಂದಂದಿನಿಂದ ಮನೆಯೊಳಗೆ ಪ್ರವಹಿಸುತ್ತಲಿದ್ದ ಉತ್ಕಟ-ಅವಿಚ್ಛಿನ್ನ-ಕಲಹದ ಪ್ರವಾಹದೊಡನೆ ಹೋರಾಡುತ್ತ ಅಚಲೆ ಇ...ದೆಲ್ಲವನ್ನು ಮರೆತಿದ್ದಳು ಅವಳು ಗಂಡನನ್ನು ಪ್ರೀತಿಸುತ್ತಿಲ್ಲ, ತಪ್ಪಿ ಮದುವೆ ಮಾಡಿಕೊಂಡಿದ್ದಾಳೆ, ಆ ತಪ್ಪಿಗಾಗಿ ಆಜನ್ಮವೂ ದಾಸಳಾಗಿರಬೇಕೆ? ಅವಳ ಅಶಾಂತ ಚಿತ್ತ ಕ್ರಾಂತಿಯನ್ನು ಘೋಷಿಸಿ ಮಸಗುತ್ತಿದೆ! ಮೃಣಾಲಳ ವಿಷಯ ಮರೆತಂತೆಯೇ ಆಗಿತ್ತು ಆದರಿಂದು ಆ ಸಂಜೆಗತ್ತಲಲ್ಲಿ ಆ ಒಂದೇ ಒಂದು ಪಙ್ತಿ ಅವಳ ಎಲ್ಲಾ ಹಳೆಯ ದಾಹಗಳೊಂದಿಗೆ ವಿರುದ್ಧ ಪ್ರವಾಹದಿಂದ ಹರಿದು ಬಂದು ಉಪಸ್ಥಿತವಾಯಿತು ತಪ್ಪಿ ಮಾಡಿಕೊಂಡ ಆ ಗಂಡ ಕೂಡ ಅನ್ಯಳಲ್ಲಿ ಆಸಕ್ತನಾಗಿರುವನೆಂಬ ಸಂಶಯ ಹೃದಯವನ್ನು ಸುಡುವುದರಲ್ಲಿ ಯಾವುದಕ್ಕಿಂತಲೂ ಕಡಿಮೆಯದೆನಿಸಲಿಲ್ಲ ಅದನ್ನಿನ್ನೊಮ್ಮೆ ಓದಬೇಕೆಂದು ಅಚಲೆ ಕೈ ನೀಡಿದಳು ಆದರೆ ಅತೀವ ತಿರಸ್ಕಾರದ ಮೂಲಕ ಆ ಕೈ ತನಗೆ ತಾನೇ ಹಿಂದಿರುಗಿತು ಅವಳು ಹೊರಗೆ ಬಂದು ಪಡಸಾಲೆಯ ಕಂಬಕ್ಕೆ ಆತು ಸ್ತಬ್ಧವಾಗಿ ನಿಂತುಬಿಟ್ಟಳು

'ಎಲ್ಲಾ ಮಿಥ್ಯೆ ಮನೆ-ಮಾರು, ಗಂಡ ಬಾಳ್ವೆ, ಊಟ-ಉಡಿಗೆ, ಯಾವುದೂ ಸತ್ಯವಲ್ಲ ಇದಾವುದರ ಸಲುವಾಗಿಯೂ ಮನುಷ್ಯ ಆತುರನಾಗಬೇಕಾಗಿಲ್ಲ, ಕೇವಲ ಭ್ರಮೆಯಿಂದಲೇ ಒದ್ದಾಡಿ ಸಾಯುತ್ತಾನೆ ಇಲ್ಲದೆ ಹೋದರೆ ಹಳ್ಳಿಯೇನು ಪಟ್ಟಣವೇನು, ಹುಲ್ಲುಗುಡಿಸಲೇನು ಅರಮನೆಯೇನು! ಗಂಡ-ಹೆಂಡತಿ, ತಂದೆ ತಾಯಿ, ಅಕ್ಕ ತಂಗಿ, ಅಣ್ಣ-ತಮ್ಮ ಎಂಬ ಸಂಬಂಧ ಎಲ್ಲಿಯದು? ಸಿಟ್ಟು ಪ್ರೀತಿ, ಅಳು-ನಗೆ, ಜಗಳ-ಚೇಷ್ಟೆ ಇವೆಲ್ಲ ಏಕೆ? ಮಧ್ಯಾಹ್ನ ಇಷ್ಟು ಪ್ರಕರಣ ನಡೆದಮೇಲೂ ಗಂಡನೆಂಬಾತ ಹೆಂಡತಿಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಎರಡು ಮೂರು ಗಂಟೆ ಹೊರಗೆ ನಿಶ್ಚಿಂತನಾಗಿ ಕಳೆಯುತ್ತಾನೆಂದಮೇಲೆ ಅವನ ಮನಸ್ಸನ್ನು ಪರೀಕ್ಷಿಸಲು ಇಷ್ಟು ತಲೆ ಕೆಡಿಸಿಕೊಳ್ಳುವುದು ಏಕೆ? ಎಲ್ಲಾ ಸುಳ್ಳು! ಎಲ್ಲಾ ಮೋಸ! ಬಿಸಿಲುಗುದುರೆ!' ಎಂದು ಅಚಲೆಗೆನಿಸತೊಡಗಿತು ಆದರೆ ಸಂಸಾರ ಅವಳಿಗೆ ಅಷ್ಟು ಶೂನ್ಯವಾಗದೆ ಹೋಗಿದ್ದರೆ, ಮೃಣಾಲಳ ಮಾತಾಳಿತನಕ್ಕಾಗಿಯೇ ಅವಳ ಸಮಸ್ತ ಚಿತ್ತವೂ ಸೂರೆಹೋಗಿರದಿದ್ದರೆ,

ಆ ಮೃಣಾಲಳ ಬಗ್ಗೆ ಒಮ್ಮೆಯಾದರೂ ಯೋಚಿಸಲು ಪ್ರಯತ್ನಿಸಿದ್ದರೆ, ಮಿಕ್ಕ ಹೆಂಗುಸರೊಡನೆ ಆ ಗ್ರಾಮ್ಯ ಸದಾನಂದಮಯಿಯನ್ನೊಮ್ಮೆ ಹೋಲಿಸಿ ನೋಡಿದ್ದರೆ, ನಾಲ್ಕು ಶಬ್ದಗಳ ಆ ಕಪ್ಪುಕಲೆಗಳಿಂದ ಅಚಲೆಯ ಮನಸ್ಸು ಬಹುಶಃ ಕಲುಷಿತವಾಗುತ್ತಿರಲಿಲ್ಲ

"ಬಾಬು ಕೇಳುತ್ತಾರೆ ಚಾದ ಎಸರುಬಂದಿದೆಯೆ ?" ಯದು ಬಂದು ಪ್ರಶ್ನಿಸಿದ

"ಯಾವ ಬಾಬೂ ?" ನಿದ್ದೆಯಿಂದೆಚ್ಚತ್ತಂತೆ ಅಚಲೆ ಕೇಳಿದಳು

ಯದು ಗಟ್ಟಿಯಾಗಿ ಹೇಳಿದ "ನಮ್ಮ ಬಾಬು, ಇದೀಗ ತಿರುಗಿ ಬಂದಿದ್ದಾರೆ — ಎಸರುಬಂದು ಬಹಳಹೊತ್ತಾಗಿದ್ದೀತು "

"ನಡೆ ಬಂದೆ'' ಎಂದು ಅಚಲೆ ಅಡುಗೆಮನೆಗೆ ಹೋದಳು ಆಳಿನ ಕೈಲಿ ಚಾ-ತಿಂಡಿ ಹಿಡಿಸಿಕೊಂಡು ಕೊಂಚ ಹೊತ್ತಿನಲ್ಲಿ ಹೊರಕ್ಕೆ ಬಂದಳು ಮಹಿಮ ಕತ್ತಲೆಯ ಪಡಸಾಲೆಯಲ್ಲಿ ಎಡೆಯಾಡುತ್ತಿದ್ದ ಸುರೇಶ ಕೋಣೆಯೊಳಗೆ ಲಂಠನಿನ ಮುಂದೆ ಕುಳಿತು ಏಕಾಗ್ರತೆಯಿಂದ ಪತ್ರಿಕೆ ಓದುತ್ತಿದ್ದ ಒಬ್ಬರಿದ್ದುದು ಒಬ್ಬರಿಗೆ ಗೊತ್ತಿತ್ತೋ ಇಲ್ಲವೊ ! ಲಾಂಛನಾಸ್ಪದವಾದ ಸಂಕೋಚ ಬಾಲಮಿತ್ರರಿಬ್ಬರಿಗೂ ನಡುವೆ ಬಂದು ಸಹಜಶಿಷ್ಟಾಚಾರದ ಮಾರ್ಗವನ್ನು ಕೂಡ ಕಟ್ಟಿರುವುದನ್ನು ಕಂಡು— ಅದರ ಕಾರಣ ನೆನಪಾಗಿ— ಅಚಲೆಯ ಕಾಲು ತಾವಾಗಿ ನಿಂತವು.

'' ಸುರೇಶನಿಗೆ ಚಾ ಕೊಡಲಿಕ್ಕೆ ಇಷ್ಟೇಕೆ ತಡ ?'' ಗಕ್ಕನೆ ನಿಂತು ಮಹಿಮ ಕೇಳಿದ

ಅಚಲೆ ಕೊಂಚ ಸಮಯ ನೀರವವಾಗಿ ತಲೆ ತಗ್ಗಿಸಿ ನಿಂತಿದ್ದು, ಮೆಲ್ಲಮೆಲ್ಲನೆ ಕೋಣೆಯೊಳಗೆ ಹೋದಳು ಯದು ಚಾದ ಸರಂಜಾಮು ವನ್ನು ಮೇಜಿನ ಮೇಲಿಟ್ಟು ಹೊರಟುಹೋದ ಸುರೇಶ ಪತ್ರಿಕೆ ಕೆಳಗಿಟ್ಟು ಈ ಕಡೆ ಹೊರಳಿ ಕೇಳಿದ "ಮಹಿಮ ಎಲ್ಲಿ ? ಇನ್ನೂ ಬರಲಿಲ್ಲವೆ ? "

ಮಹಿಮ ಒಳಗೆ ಹೋಗಿ ಚೌಕಿಯೊಂದನ್ನೆಳೆದುಕೊಂಡು ಕುಳಿತ. ಈಗಾಗಲೆ ಹತ್ತೆಂಟು ನಿಮಿಷಗಳಿಂದಲೂ ತಾನು ಸುರೇಶನ ಕಿವಿಯ ಹತ್ತಿರವೇ ಅಡ್ಡಾಡುತ್ತಿದ್ದುದನ್ನು ಅವನಿಗೆ ಹೇಳುವುದಗತ್ಯವೆಂದು ಮಹಿಮ ಎಣಿಸಲಿಲ್ಲ. ಈಗಲೂ ನೀರವ ಇಬ್ಬರೂ ಅಚಲೆ ನಿಃಶಬ್ದವಾಗಿಯೇ ಎರಡು ಬಟ್ಟಲು ಚಾ ಅಣಿಗೊಳಿಸಿ, ಇಬ್ಬರ ಮುಂದೂ ಒಂದೊಂದು

ಸರಿಸಿ ಹೊರಡುವುದರಲ್ಲಿದ್ದಳು

"ಸ್ವಲ್ಪ ತಡೆ," ಎಂದು ಮಹಿಮ ಎದ್ದುಹೋಗಿ ಬಾಗಿಲಿಕ್ಕಿ ಚಿಲಕ ಹಾಕಿದ • ಅವನ ಏಳು ನಳಿಕೆಯ ಪಿಸ್ತೂಲಿನ ನೆನಪಾಯಿತು ಸುರೇಶನಿಗೆ ಅವನ ಕೈ ನಡುಗಿ–ಒಂದಿಷ್ಟು ಚಾ ಚೆಲ್ಲಿತು, ಮೋರೆ ಹೆಣದಂತಾಯಿತು. "ಬಾಗಿಲೇಕೆ ಇಕ್ಕಿದೆ ?" ಎಂದು ಕೇಳಿದ

ಅವನ ದನಿ, ಮುಖಭಾವ, ಪ್ರಶ್ನೆಯ ರೀತಿ ಅಚಲೆಗೂ ಅವನ್ನೇ ನೆನಪುಗೊಟ್ಟವು ಅವಳ ತಲೆಗೂದಲು ಕೂಡ ನೆಟ್ಟಗಾದವು ಅವಳು ಚೀರಲು ಹವಣಿಸಿರಬಹುದು, ಆದರಾಗಲಿಲ್ಲ ಅವಳ ಮುಖ ನೋಡಿದ ಮಾತ್ರಕ್ಕೆ ಮಹಿಮನಿಗೆ ಎಲ್ಲ ಹೊಳೆಯಿತು ಸುರೇಶನ ಕಡೆ ನೋಡುತ್ತ ಅವನೆಂದ "ಆಳು ಬಂದಾನೆಂತ ನನ್ನ ಪಿಸ್ತೂಲು ಯಾವಾಗಲೂ ಪೆಟ್ಟಿಗೆಯಲ್ಲಿರುವುದು, ಈಗಲೂ ಹಾಗೆಯೇ ಇದೆ ನೀವಿಷ್ಟು ಅಂಜುತ್ತೀ ರೆಂದು ತಿಳಿದಿದ್ದರೆ ಬಾಗಿಲಿಕ್ಕುತ್ತಿರಲಿಲ್ಲ "

"ಭಲೆ, ಅಂಜಿಕೆಯೆಲ್ಲಿಯದು ! ನನಗೆ ಜೀವದಂಜಿಕೆ ! ನೀನೆಂದಾ ದರೂ ನೋಡಿದ್ದೆಯಾ ? ಸರಿಹೋಯ್ತು—" ಮೋರೆಯ ಮೇಲೆ ನಗೆ ತಂದುಕೊಂಡು ಸುರೇಶ ಮಾತನಾಡಲು ತೊಡಗಿದ ಅವನ ಅಸಂಬದ್ಧ ಕೈಫಿಯತ್ತು ಮುಗಿಯುವ ಮುನ್ನವೇ ಮಹಿಮನೆಂದ "ನೀನಂಜಿದ್ದು ನಾನೆಂದೂ ನೋಡಿಲ್ಲ, ನಿನಗೆ ಪ್ರಾಣದಾಸೆಯಿಲ್ಲವೆಂದೇ ನಾನರಿತದ್ದು. ಸುರೇಶ, ನನ್ನ ದುಃಖಕ್ಕಿಂತಲೂ ನಿನ್ನೀ ಅಧಃಪತನ ನನ್ನನ್ನು ಹೆಚ್ಚು ಪೀಡಿಸುತ್ತಿದೆ ಯಾವುದು ನಿನ್ನಂಥವನನ್ನೂ ಇಷ್ಟು ಕೀಳು ಮಾಡುತ್ತಿ ದೆಯೋ— ಬೇಡ, ಸುರೇಶ, ನಾಳೆ ನೀ ಖಂಡಿತ ಊರಿಗೆ ಹೋಗು ಯಾವ ನೆವದಿಂದಲೂ ನಿಲ್ಲುವುದು ಒಳಿತಲ್ಲ"

ಸುರೇಶ ಏನಾದರೂ ಉತ್ತರ ಕೊಡಬೇಕೆಂದ ಆದರೆ ಸ್ವರವೇ ಹೊರಡಲಿಲ್ಲ ಬಾಯಿಂದ, ಕತ್ತು ನೀಟಾಗಿರಿಸಿಕೊಳ್ಳುವುದೂ ಆಗಲಿಲ್ಲ. ಅದು ಅವನಿಗೆ ತಿಳಿಯದಂತೆಯೇ ಬಾಗಿರಬೇಕು

"ನೀ ಒಳಗೆ ನಡೆ ಅಚಲಾ," ಎಂದು ಮಹಿಮ ಚಿಲಕ ತೆಗೆದು ಕತ್ತಲೊಳಗೆ ಹೊರಗೆ ಬಂದ.

ಆಗ ಸುರೇಶ ಬಲವಂತದಿಂದ ನಕ್ಕು, "ಕೇಳು ಹೇಳುವುದು. ಇಂಥ ಎಷ್ಟೋ ಪಿಸ್ತೂಲು–ಬಂದೂಕು ಹೆಗಲೆಲ್ಲ ಹಾರಿಸಾಡಿದ್ದೇನೆ ಈ ಸೊಟ್ಟ-

ಮುರಕ ರಿವಾಲ್ವರಿಗೆ ಅಂಜಿ ಸಾಯುವುದೇ! ಮತ್ತೇನು! ಚೆಲೋ ನಗಿಸಿದೆ ಮಾರಾಯ!" ಎಂದು ನುಡಿದು ನಗತೊಡಗಿದ ಆ ನಗೆಯೊಳಗೆ ಜೊತೆಗೂಡಲು ಅಚಲೆಯ ಹೊರತು ಯಾರೂ ಅಲ್ಲಿರಲಿಲ್ಲ ಆದರವಳು ಮೊದಲು ನಿಂತಿದ್ದಂತೆಯೇ ಮತ್ತೆ ಕೆಲ ಹೊತ್ತು ತಲೆತಗ್ಗಿಸಿಕೊಂಡು ನಿಂತಿದ್ದು ಪಕ್ಕದ ಬಾಗಿಲಿಂದ ಒಳಗೆ ಹೋದಳು

ಒಂದು ಗಂಟೆಯನಂತರ ಮಹಿಮ ತಿರುಗಿ ಬಂದು ತನ್ನ ಕೋಣೆಗೆ ಹೋದಾಗ ಅಲ್ಲಿ ಯಾರೂ ಇರಲಿಲ್ಲ ಬದಿಯ ಕೋಣೆಯಲ್ಲಿ ನೋಡಿದ ನೆಲದ ಮೇಲೆ ಚಾಪ ಚೆಲ್ಲಿಕೊಂಡು ಅಚಲೆ ತೋಳು ತಲೆದಿಂಬಾಗಿ ಮಲಗಿದ್ದಳು ಗಂಡ ಬಂದುದನ್ನು ಕಂಡು ಎದ್ದು ಕುಳಿತಳು ಪಕ್ಕದಲ್ಲಿದ್ದ ಆಸನದ ಮೇಲೆ ಕುಳಿತುಕೊಂಡು ಮಹಿಮ ಕೇಳಿದ "ಏನು, ನಾಳೆ ನೀ ತವರುಮನೆಗೆ ಹೊರಡುವುದಾಯಿತೆ ?"

ಅಚಲೆ ನೆಲ ನೋಡುತ್ತ ಸುಮ್ಮನಿದ್ದಳು ಹುಸ ಕಾದು ಅವನು ಮತ್ತೆಂದ "ಪ್ರೇಮವಿಲ್ಲದವನೊಡನೆ ಒಗೆತನ ಮಾಡಲೇಬೇಕೆಂದು ನಾನೇನು ಅನ್ಯಾಯವಾಗಿ ತೊಂದರೆ ಕೊಡುವುದಿಲ್ಲ"

ಅಚಲೆ ಏಟ್ಟುಮಿಸುಕದೆ ಪಿಟ್ಟೆನ್ನದೆ ಕುಳಿತುದನ್ನು ಕಂಡು ಮಹಿಮನೇ ಮಾತನಾಡತೊಡಗಿದ "ನಿನ್ನ ಬಗ್ಗೆ ನನ್ನ ದೂರಿದೆ ನನ್ನ ಸ್ವಭಾವ ನೀ ಬಲ್ಲೆ ಮದುವೆಯ ಮುಂಚಿನಿಂದಲೂ ನನ್ನನ್ನು ಕಂಡಿರುವೆ. ಸುಖವಿರಲಿ ದುಃಖವಿರಲಿ, ಲಭ್ಯಕ್ಕಿಂತ ಹೆಚ್ಚಿನವನ್ನು ಆಶಿಸುವವನಲ್ಲ, ಸಿಕ್ಕರೂ ತೆಗೆದುಕೊಳ್ಳುವವನಲ್ಲ ಪ್ರೇಮದ ಮೇಲೆ ಅದರ ಪ್ರಭಾವ ನಡೆಯಲಿಲ್ಲ ಅಚಲಾ ನಡೆಯದಿದ್ದುದು ಖೇದದ ಮಾತು ಅಷ್ಟೆ, ನಾಚಿಕೆಯ ವಿಷಯವೇನಲ್ಲ ನೀನಷ್ಟು ದಿನ ಏಕೆ ಕಷ್ಟಪಟ್ಟೆ? ನಿನ್ನನ್ನು ನಾ ಬಲವಂತದಿಂದ ಕಟ್ಟಿಹಾಕುವೆನೆಂದು— ನನ್ನ ಮುಂದೆಷ್ಟೂ ಆಡದೆ— ಏಕೆ ಯೋಚಿಸಿದೆ? ಎಂದೂ ಯಾವ ವಿಷಯದಲ್ಲಿಯೂ ನಾ ಬಲಾತ್ಕಾರ ಮಾಡಿಲ್ಲ ಅವನು ನಿನ್ನನ್ನು ಉದ್ಧರಿಸಿ ಕರೆದುಕೊಂಡು ಹೋದರೇ ನೀ ಉಳಿಯುವೆಯೇನು? ನನಗೆ ತಿಳಿಸಿದ್ದರೆ ಪರಿಹಾರವಾಗುತ್ತಿರಲಿಲ್ಲವೆ? ನಿನ್ನ ಪ್ರಾಣದ ಬೆಲೆ ಅವನೊಬ್ಬನಿಗೇ ತಿಳಿದಿದೆಯೆ?"

ಅಚಲೆ ಅಶ್ರುವಿಕೃತ ಕಂಠಸ್ವರವನ್ನು ಸಾಧ್ಯವಿದ್ದಮಟ್ಟಿಗೂ ಸರಿಪಡಿಸಿಕೊಂಡು ಮೆಲ್ಲಗೆ ಮಾತನಾಡಿದಳು "ನೀವೂ ಪ್ರೀತಿಸುವುದಿಲ್ಲ."

ಆಶ್ಚರ್ಯದಿಂದ ಮಹಿಮನೆಂದ "ಯಾರೆಂದರು ಹೀಗೆ? ನಾನೆಂತೂ ಎಂದಿಲ್ಲ"

ಅಚಲೆಗೆ ಕಾವೇರುವುದಕ್ಕೆ ತಡವಾಗಲಿಲ್ಲ "ಬಾಯಿಂದೆಂದರೇ ನಿಜವೇನು? ಉಳಿದದ್ದೆಲ್ಲ ಸುಳ್ಳೋ? ಸಿಟ್ಟಿನ ಭರದಲ್ಲಿ, ಮನಸಿಗೆ ಕಷ್ಟವಾದಾಗ ಬಾಯಿಂದ ಏನಾದರೂ ಹೊರಡಬಹುದು, ಅದನ್ನೇ ಸತ್ಯವೆಂದು ಬಲಾತ್ಕಾರ ನಡೆಸುವಿರೇನು ನೀವು? ನಿಮ್ಮಂತೆ ತೂಗಿ ತೂಗಿ ಮಾತಾಡಲು ಬಾರದವರನ್ನು ತಲೆಮೆಟ್ಟಿ ಮುಳುಗಿಸಬೇಕೇನು?" ಮಾತಾಡುತ್ತಾಡುತ್ತ ಅವಳ ಕೊರಳು ಬಿಗಿದಂತಾಯಿತು

ಏನೊಂದೂ ಗೊತ್ತಾಗದೆ, "ಇದರರ್ಥ?" ಎಂದು ಮಹಿಮ ಕೇಳಿದ.

ಉಕ್ಕುವ ದುಕ್ಕವನ್ನು ಹತ್ತಿಕ್ಕಿ ಅಚಲೆ ಎಂದಳು "ನಿಮ್ಮಂಥ ಸಾವಧಾನಿಗಳಾದರೇನು, ಸುಳ್ಳನ್ನು ಕೊನೆಯ ತನಕ ಬಚ್ಚಿಡಬಲ್ಲಿರೆಂದು ತಿಳಿಯಬೇಡಿರಿ ನಿಮ್ಮಿಂದಲೂ ಎಷ್ಟೋ ತಪ್ಪುಗಳಾಗಿರಬಹುದು—ನಿಮ್ಮ ಮೇಜಿನ ಮೇಲೆ ಸ್ವಲ್ಪ ನೋಡಿರಿ! ಬರೀ ನನ್ನಿಂದಲೇ—"

ಮಹಿಮ ಹತಬುದ್ಧನಾಗಿ "ನನ್ನ ಮೇಜಿನಮೇಲೇನು?" ಎಂದ

ಅಚಲೆ ಬಾಯಿಗೆ ಸೆರಗು ಹಾಕಿಕೊಂಡು ತಲೆದಿಂಬಿನ ಮೇಲೆ ಡಬ್ಬ ಬಿದ್ದಳು ಮಹಿಮ ತನ್ನ ಓದುವ ಕೋಣೆಗೆ ಹೋಗಿ ಹುಡುಕಿ ಏನೂ ಕಾಣದೆ ವಿಮೂಢನಂತೆ ತಿರುಗಿ ಬರುತ್ತಿದ್ದ ದಾರಿಯಲ್ಲಿ ಮಲಗುವ ಕೋಣೆಯ ಕಡೆ ಲಕ್ಷ್ಯಹೋಗಿ, ಒಳಹೊಕ್ಕ ಮೃಣಾಲಳ ಚೀಟಿ ಅವನ ಕಣ್ಣಿಗೆ ಬಿದ್ದಿತು ಅದನ್ನು ಓದಿದಾಕ್ಷಣವೆ ಎಲ್ಲ ಸ್ಪಷ್ಟವಾಯಿತು ಅದನ್ನು ಕೈಯಲ್ಲಿ ಹಿಡಿದುಕೊಂಡು ಹಾಸಿಗೆಯ ಮೇಲೆ ಕುಳಿತು ಹೊರಗಿನ ಕತ್ತಲನ್ನು ಶೂನ್ಯದೃಷ್ಟಿಯಿಂದ ನೋಡತೊಡಗಿದ ಮೊದಲ ದಿನ ಅವಳು ಹೇಗೆ ಬಂದಿದ್ದಳು, ಹೇಗೆ ತಿರುಗಿ ಹೋದಳು, ಅಚಲೆಗೆ ಸವತಿಯೆಂದು ಹೇಗೆ ಚೇಷ್ಟೆ ಮಾಡುತ್ತಿದ್ದಳು— ಒಂದೊಂದಾಗಿ ಎಲ್ಲವೂ ಅವನ ಮನಸಿನೊಳಗೆ ಬರತೊಡಗಿದವು ಹಳ್ಳೂರಿನ ನಗೆಚಾಟಿಕೆಯನ್ನರಿಯದ ಹೆಂಗಸಿಗೆ ಅದೆಷ್ಟು ಚುಚ್ಚಿರಬಹುದು! ತಾನು ಮಾತ್ರ ಆ ಚೇಷ್ಟೆಯಲ್ಲಿ ಮನಸಾ ಸೇರಲಿಲ್ಲ, ಆದರೆ ನಾಚಿಕೆಯಿಂದ ಅವಳನ್ನು ತಡೆಯಲಿಕ್ಕೇ ಪ್ರಯತ್ನಪಡುತ್ತಿದ್ದ ತನ್ನಾ ನಾಚಿಕೆಯೇ ಈ ಉಚ್ಚ ಶಿಕ್ಷಿತ ಬುದ್ಧಿಮತಿ ರಮಣಿಯ ತಿಳುವಳಿಕೆಯಂತೆ ಅಪರಾಧವಾಗಿದ್ದರೆ, ಅದವಳ ಮನಸಿನಲ್ಲಿ ನಿಜವಾಗಿಯೂ

ಬದ್ಧಮೂಲವಾಗಿದ್ದರೆ ಅದನ್ನು ಬೇರುಸಹಿತ ಕಿತ್ತಿಹಾಕುವುದು ಹೇಗೆ? ಅಚಲೆಯ ಹೃದಯ ತನ್ನಿಂದ ಮೆಲ್ಲಮೆಲ್ಲನೆ ಹೇಗೆ ದೂರಾಗತೊಡಗಿತು, ದಿನದಿನಕ್ಕೂ ಅವಳಿಗೆ ಗಂಡನ ಸಂಗತಿ ಹೇಗೆ ವಿಷವಾಗುತ್ತ ಬಂದಿತು, ಅವನ ಆಶ್ರಯ ಪ್ರತಿಗಳಿಗೆಗೂ ಅವಳಿಗೆ ಹೇಗೆ ಸೆರೆಮನೆಯೆನಿಸತೊಡ ಗಿತು—ಎಲ್ಲ ಸತ್ಯ ಚಿತ್ರಗಳು ಆ ಕತ್ತಲಲ್ಲಿ ಮಹಿಮನಿಗೆ ಸ್ಪಷ್ಟವಾಗಿ ಕಾಣ ತೊಡಗಿದವು. ಈ ಬಂಧನದ ಮರಣಪ್ರಾಯ ದುಃಖದಿಂದ ರಕ್ಷಿಸುವುದ ಕ್ಕಾಗಿ ಅವಳು ಸುರೇಶನನ್ನು ವ್ಯಾಕುಲತೆಯಿಂದ ಪ್ರಾರ್ಥಿಸಿದುದು— ಆ ಪ್ರಾರ್ಥನೆ ಅವಳ ಅಂತಃಕರಣದಿಂದ ಎಷ್ಟು ಆಳದಿಂದ ಹೊರಟಿತ್ತೆಂಬುದು ಕೂಡ— ಅವನ ಮನಶ್ಚಕ್ಷುವಿಗೆ ಗೋಚರಿಸದಿರಲಿಲ್ಲ ಅವನು ನಿಜ ವಾಗಿಯೂ ಪೂರ್ಣಹೃದಯದಿಂದ ಅಚಲೆಯನ್ನು ಪ್ರೀತಿಸುತ್ತಿದ್ದ ಆದೇ ಅಚಲೆಯೊಡನೆ ಇಷ್ಟು ಹತ್ತಿರವಿದ್ದೂ ಅವಳೀ ಮನೋವೇದನೆಯನ್ನು ತಾನು ಲಕ್ಷಿಸದಿದ್ದುದು ಮಹಾಪರಾಧವೆಂದು ಅವನು ತಿಳಿದ ಆದರೆ ಈ ರೀತಿ ಇನ್ನೊಂದು ಕ್ಷಣವೂ ನಡೆಯಲಾರದು ಮಡದಿಯ ಹೃದಯವನ್ನು ತಿರುಗಿ ಪಡೆಯಲು ಉಪಾಯವಿದೆಯೋ ಇಲ್ಲವೊ? ಅದು ಎಲ್ಲಿ ಎಷ್ಟು ದೂರ ಹೋಗಿದೆ? ಎಂಬುದೀಗ ಎಣಿಸುವುದಕ್ಕೂ ಅಸಾಧ್ಯವಾಗಿದೆ ಅನೇಕ ಪ್ರತಿಕೂಲತೆಗಳೊಡನೆ ಹೋರಾಡಿ ಪತಿಯೆಂದು ಅಂಗೀಕರಿಸಿದವನನ್ನು, ಅವನಿಂದಾದ ಅಪಮಾನಕ್ಕಾಗಿಯೇ ಬಿಟ್ಟುಹೋಗಬೇಕಾಗಿದೆಯೆಂಬು ದನ್ನು—ಈ ಭಯಂಕರ ತಪ್ಪನ್ನು—ಆಕೆ ತಿಳಿಸಬೇಕಿತ್ತು

ಮಹಿಮ ಮೆಲ್ಲಮೆಲ್ಲನೆದ್ದು ಅಚಲೆಯ ಕೋಣೆಗೆ ಹೋದ ಬಾಗಿಲಿ ಕ್ಕಿತ್ತು ತಳ್ಳಿದ ಚಿಲಕ ಹಾಕಿತ್ತು ಒಂದೆರಡು ಸಲ ಮೆಲ್ಲಗೆ ಕೂಗಿದ. ಉತ್ತರ ಬರಲಿಲ್ಲ. ಹೆಚ್ಚು ಗದ್ದಲಮಾಡಿ ಎಬ್ಬಿಸುವ ಪ್ರವೃತ್ತಿ ಅವನಿ ಗುಂಟಾಗಲಿಲ್ಲ ಅತಿಕಠಿನ ಪರೀಕ್ಷೆಯ ಭಾರ ದೂರವಾದಂತೆ ಅವನಿಗೆನಿ ಸಿರಬೇಕು

ಮಹಿಮ ಬಂದು ತನ್ನ ಹಾಸಿಗೆಯಲ್ಲಿ ಬಿದ್ದುಕೊಂಡ ಆದರೆ ಪಕ್ಕದ ಹಾಸಿಗೆ ಬರಿದು ಅಲ್ಲಿ ಮಲಗುವಾಕೆ ಆ ಕೋಣೆಯೊಳಗೆ ನೆಲದ ಮೇಲೆ ಉಪವಾಸ ಮಲಗಿರುವುದು ಅವನ ನಿದ್ದೆಗೆ ಕಂಟಕವಾಯಿತು. ಹೋಗಿ ಅವಳನ್ನೆಬ್ಬಿಸಿಕೊಂಡು ಬರುವುದು ಉಚಿತವೋ ಅಲ್ಲವೋ ಎಂಬ ಯೋಚನೆಯಲ್ಲಿಯೇ ಬಹಳ ರಾತ್ರಿ ಕಳೆದ ಬಳಿಕ ಅವನು ತಂದ್ರಾಮಗ್ನ

ನಾಗಿರಬೇಕು ಮುದ್ರಿತ ನೇತ್ರಗಳಲ್ಲಿ ಒಮ್ಮೆಲೆ ತೀವ್ರಪ್ರಕಾಶ ಕಂಡಂತಾಗಿ ಕಣ್ದೆರದ ತಲೆದಿಂಬು ದೆಸೆಯ ತೆರೆದ ಕಿಡಿಕಿಯಿಂದ, ಚಪ್ಪರದ ಕಿಂಡಿಗಳೊಳಗಿಂದ ಬೆಳಕೂ ತೆರಪಿಲ್ಲದ ಹೊಗೆಯೂ ಬಂದು ಕೋಣೆ ತುಂಬಿ ಹೋಗಿದೆ ಹತ್ತಿರದಿಂದಲೇ ಎದೆಯೊಡೆಸುವಂತಹ ಸ್ವರ ಕೇಳುತ್ತಿದೆ ಎಲ್ಲಿ ಬೆಂಕಿ ಸತ್ತಿದೆ ಎಂಬುದು ತಿಳಿದರೂ ಕ್ಷಣಹೊತ್ತು ಅವನ ಕೈಕಾಲಾಡಲಿಲ್ಲ ಆ ಕ್ಷಣದೊಳಗೇ ಅವನ ತಲೆಯೊಳಗೆ ಬ್ರಹ್ಮಾಂಡವೇ ತಿರುಗಿತು. ನೆಗೆದೆದ್ದು ಬಾಗಿಲು ತೆರೆದುಕೊಂಡು ಹೊರಗೆ ಬಂದ ಅಡುಗೆ ಮನೆಯನ್ನೂ ಅಚಲೆ ಮಲಗಿದ ಕೋಣೆಯ ವರಾಂಡದ ಒಂದು ಮೂಲೆಯನ್ನೂ ಸುಡುತ್ತಿರುವ ಅಗ್ನಿಜ್ವಾಲೆ ನೇರಿಲ ಮರವನ್ನು ಕೆಂಗೊಳಿಸಿದೆ

ಹಳ್ಳಿಗರೊಳಗೆ ಹುಲ್ಲುಮನೆಗೆ ಬೆಂಕಿ ಬಿದ್ದರೆ ಆರಿಸುವ ವಿಚಾರ ಮಾಡುವುದೂ ಮೂರ್ಖತನ, ಆ ಪ್ರಯತ್ನ ಯಾರೂ ಮಾಡಲಾರರು. ಓಣಿಯ ಜನ ತಮ್ಮ ತಮ್ಮ ಸಾಮಾನು, ದನಕರು ಸಾಗಿಸಲು ಅತ್ತಿತ್ತ ಓಡಾಡುವರು ಬೇರೆ ಓಣಿಯವರು, ಒಂದು ಕಡೆ ಗಂಡಸರು ಒಂದು ಕಡೆ ಹೆಂಗಸರು ನಿಂತು, ಅತ್ಯಂತ ನಿರುದ್ವೇಗದಿಂದ ಹಾಯ್ ಹಾಯ್ ಎನ್ನುತ್ತ, ಈ ಸರ್ವನಾಶ ಹೇಗೆ ಘಟಿಸಿತು, ಏನೇನು ಸುಟ್ಟವು, ಎಷ್ಟು ನಷ್ಟವಾಗಿರಬಹುದು ಎಂಬುದನ್ನು ಚರ್ಚಿಸುತ್ತ ಇಡೀ ಮನೆ ಬೂದಿಯಾಗುವ ವರೆಗೂ ಕಾಯುವರು ಬಳಿಕ ಮನೆಗೆ ಹೋಗಿ ಕೈಕಾಲು ತೊಳೆದುಕೊಂಡು ಹಾಸಿಗೆಯ ಮೇಲೆ ಬಿದ್ದುಕೊಳ್ಳುವರು ಮುಂಜಾನೆ ಎದ್ದು ಒಬ್ಬೊಬ್ಬರೇ ತಂಬಿಗೆ ತೆಗೆದುಕೊಂಡು ಹೊರಡುವರು ಅಪೂರ್ಣವಾದ ಚರ್ಚೆಯನ್ನು ಪೂರಯಿಸಿ ಮನೆಗೆ ಹೋಗಿ ಸ್ನಾನ ಊಟ ತೀರಿಸುವರು ಒಬ್ಬರ ಮನೆಯ ಬೂದಿರಾಶಿ ಮತ್ತೊಬ್ಬರ ನಿಯಮಿತ ಜೀವನ ಯಾತ್ರೆಗೆ ಲೇಶಮಾತ್ರವೂ ಆತಂಕವಾಗಲಾರದು

ಮಹಿಮ ಹಳ್ಳಿಯವ, ಅವನಿಗೆಲ್ಲ ಗೊತ್ತು ಕೂಗಾಡಿ ಅವೇಳೆಯಲ್ಲಿ ಜನರ ನಿದ್ದೆ ಕೆಡಿಸಲಿಲ್ಲ ಮನೆಯ ಸುತ್ತಲೂ ದೊಡ್ಡ ತೋಟವಿದ್ದುದರಿಂದ ಇತರರ ಮನೆಗಳಿಗೆ ಭಯವಿಲ್ಲದುದರಿಂದ ಅವರನ್ನೆಬ್ಬಿಸುವ ಅಗತ್ಯವಿರಲಿಲ್ಲ. ಸುರೇಶ, ಆಳುಹೋಳು ಹೊರಗಿನ ಕೋಣೆಗಳಲ್ಲಿ ಮಲಗಿದ್ದರು ಉರಿ ಅಲ್ಲಿಗೆ ಹೋಗಲು ಅವಕಾಶವಿತ್ತು ▪ ಭಯ ಅಚಲೆಯ ಕೋಣೆಗಿತ್ತು. ಅವನು ಆವರ ಬಾಗಿಲನ್ನು ಬಲವಾಗಿ ಬಡಿದು ಕೂಗಿದ. "ಅಚಲಾ!"

ಅಚಲೆ ಚೆನ್ನಾಗಿ ಎಚ್ಚತ್ತಿರುವವಳಂತೆ ಕೇಳಿದಳು "ಏಕೆ?"

"ಬಾಗಿಲು ತೆರೆದು ಹೊರಗೆ ಬಾ"

ಅಚಲೆ ಬೇಸರದ ದನಿಯಲ್ಲಿ ನುಡಿದಳು "ಏನದು? ನಾನೀಗ ಒಳ್ಳೆಯ ಮೌಜಿನಲ್ಲಿದ್ದೇನೆ!"

"ಹೊಂ, ತಡಮಾಡಬೇಡ, ಹೊರಗೆ ಬಾ, ಮನೆಗೆ ಬೆಂಕಿ ಬಿದ್ದಿದೆ!"

ಪ್ರತ್ಯುತ್ತರ ರೂಪವಾಗಿ ಅಚಲೆ ಭಯದಿಂದ ಚೀರಿದಳು ಮಾತ್ರ ಮುಂದೆ ಪೂರಾ ಸ್ತಬ್ಧ! ಎಷ್ಟು ಕೂಗಿದರೂ ಓ ಇಲ್ಲ ಅವಳು ಮೊದಲು ಕಣ್ಣುಮುಚ್ಚಿಕೊಂಡೇ ಮಾತನಾಡಿರಬೇಕು, ಕಣ್ಣುತೆರೆದೊಡನೆ ಮನೆಯೆಲ್ಲ ಝುಗಝುಗಿಸುವುದನ್ನು ಕಂಡು ತನ್ನಂತೆಯೇ ಅವಳಿಗೆ ಎಚ್ಚರುದಪ್ಪಿರಬೇಕು ಎಂದು ಮಹಿಮ ತಿಳಿದುಕೊಂಡ ಅವನು ತಿರುಗಣಿ ತಪ್ಪಿಸಿ ಒಳಹೊಕ್ಕು ಮೂರ್ಛಿತ ಪತ್ನಿಯನ್ನು ಅವಚಿಕೊಂಡು ಅಂಗಳಕ್ಕೆ ಬಂದ ಬಳಿಕ ಮನೆಯೊಳಗಿನ ಇತರರನ್ನು ಕೂಗಿ ಎಬ್ಬಿಸಿದ ಸುರೇಶ ಮಲಿನ ವದನದಿಂದ ಹೊರಬಂದ ಯದು ಉಳಿದವರು ಬಂದರು ಒಗ ಪ್ರಚಂಡ ಶಬ್ದವಾಗಿ ಅಚಲೆಗೆ ಎಚ್ಚರು ಹುಟ್ಟಿ, ಪತಿಗೆ ತಕ್ಕೈಬಿದ್ದು ಬಿಕ್ಕಿಬಿಕ್ಕಿ ಅಳ ತೊಡಗಿದಳು

ಮಹಿಮ ಎಲ್ಲರನ್ನೂ ಕರೆದುಕೊಂಡು ಹೊರಬಯಲಿಗೆ ಬಂದಾಗ ದೊಡ್ಡ ಕೋಣೆಯ ಚಪ್ಪರಕ್ಕೆ ಉರಿ ತಗೆದುಕೊಂಡಿತ್ತು ಆಗವನಿಗೆ ನೆನಪಾಯಿತು, ಅಚಲೆಯ ಬೆಲೆಯುಳ್ಳ ಒಡವೆಗಳೆಲ್ಲ ಅಲ್ಲಿಯೇ ಇವೆ, ತಡವಾದರೆ ಏನೂ ಉಳಿಯಲಾರದೆಂದು

ಅಚಲೆಯಾಗ ಪೂರ ಎಚ್ಚತ್ತಿದ್ದಳು ಗಂಡನ ಕೈಯನ್ನು ಗಟ್ಟಿಯಾಗಿ ಹಿಡಿದು ಅವಳೆಂದಳು "ಬೇಡ, ಹಾಗೆ ಮಾಡಲಾಗದು, ಮುಯ್ಯ ತೀರಿಸಲು ನಿಮಗಿದೇ ಹೊತ್ತೇನು? ನಾನೇನು ಬಿಡಲಾರೆ. ಹೋಗಲಿ, ಅವೆಲ್ಲಾ ಸುಟ್ಟುಹೋಗಲಿ!"

"ಊಂಹುಂ, ಅದಾಗದು ಅಚಲಾ" ಎನ್ನುತ್ತ ಕೈಕೊಸರಿಕೊಂಡು ಮಹಿಮ ಹೊಗೆಯೊಳಗೆ ನುಗ್ಗಿದ ಯದು ಕೂಗುತ್ತ ಕೂಗುತ್ತ ಹಿಂದೆ ಹೋದ.

ಸುರೇಶ ಈ ವರೆಗೂ ಹೌಹಾರಿ ನಿಂತಿದ್ದ ಈಗ ಎಚ್ಚರು ಬಂದು ಏನೋ ತರಲುಜ್ಜುಗಿಸಿದ ಕೂಡಲೆ ಅಚಲೆ ಅವನ ದೋತ್ರದ ಚುಂಗು

ಹಿಡಿದು ಕಠೋರಸ್ವರದಿಂದ, " ನೀವೆಲ್ಲಿ ಹೊರಟಿರಿ ? " ಎಂದಳು

" ಮಹಿಮ ಹೋದಲ್ಲಿ—" ಕೊಸರಿಕೊಳ್ಳುತ್ತ ಸುರೇಶನೆಂದ

" ಅವರು ತಮ್ಮ ಸಾಮಾನು ತಾವು ಉಳಿಸಿಕೊಳ್ಳಲು ಹೋದರು. ನೀವೇಕೆ ? ನಾ ನಿಮ್ಮನ್ನು ಬಿಡುವುದಿಲ್ಲ "

ಅಚಲೆಯ ಸ್ವರದಲ್ಲಿ ಸ್ನೇಹದ ಲವಲೇಶವೂ ಇರಲಿಲ್ಲ ಸಂಬಂಧ ವಿಲ್ಲದವರಿಗೆ ತೊಂದರೆಯೇಕೆಂದೇ ತಡೆದಿರಬೇಕು

ಎರಡು ಮೂರು ನಿಮಿಷಗಳಲ್ಲಿ ಮಹಿಮ ಎರಡು ಕೈಗಳಲ್ಲಿಯೂ ಎರಡು ಬಾಕ್ಸುಗಳನ್ನು ಹಿಡಿದುಕೊಂಡು, ಯದು ತಲೆಯ ಮೇಲೆ ದೊಡ್ಡ ಟ್ರಂಕು ಹೊತ್ತುಕೊಂಡು ಬಂದರು. ಅಚಲೆಯ ಹತ್ತಿರ ಬಾಕ್ಸ್ ಇಟ್ಟು ಮಹಿಮ " ನಿನ್ನ ಆಭರಣದ ಬಾಕ್ಸ್ ಜೋಕೆ, ನಾ ಹೋಗಿ ಹೊರಗಿನ ಕೋಣೆಯೊಳಗಿನದೇನಾದರೂ ಉಳಿಸಿಕೊಳ್ಳಲಾಗುವುದೇನೋ ನೋಡು ತ್ತೀನೆ " ಎಂದ

ಅಚಲೆಯ ಮುಖದಿಂದ ಮಾತು ಹೊರಡಲಿಲ್ಲ ಸುರೇಶನ ದೋತರ ಚುಂಗು ಇನ್ನೂ ಅವಳ ಕೈಯೊಳಗಿತ್ತು ಆ ಕಡೆ ಕಿಂಚಿತ್ ದೃಷ್ಟಿಸಿ ಮಹಿಮ ಯದುವಿನೊಡನೆ ಮತ್ತೆ ಅದೃಶ್ಯನಾದ

೨೦

ಪ್ರಭಾತ ಪ್ರಕಾಶದಲ್ಲಿ ಪತಿಯ ಮುಖವನ್ನು ಕಂಡಾಗ ಅಚಲೆಯ ಹೃದಯಾಂತರಾಳ ಹಾಯೆಂದತ್ತಿತು, ಕಂಬನಿ ನಿಲ್ಲಲಿಲ್ಲ ಏನಿದು ರೂಪ! ತಲೆಗೂದಲು ದೂಳಿ ಮಳಲು ಬೂದಿಗಳಿಂದ ರುಕ್ಷವಾಗಿ ವಿಪರ್ಣವಾಗಿದೆ ! ಎಷ್ಟು ಸುಂದರ ಪತಿ, ಒಂದು ರಾತ್ರಿಯೊಳಗೇ ಮುದುಕನಾಗಿಬಿಟ್ಟಿದ್ದಾನೆ!— ಅಷ್ಟು ಬೆಂದುಹೋಗಿದೆ ಮುಖ, ಉರಿಯ ಝುಳಕ್ಕೆ

ಊರ ಜನ ಸುತ್ತಲೂ ನೆರೆದು ಕಲರವ ಗೈಯುತ್ತಿದ್ದರು ಪಾತ್ರೆ ಪಡಗಗಳಂತೂ ಒಂದೂ ಉಳಿದಿರಲಿಕ್ಕಿಲ್ಲ ಹೋಗಲಿ, ಬಟ್ಟೆ ವಸ್ತ್ರ ಒಡವೆಗಳಾದರೂ— ಒಂದು ಟ್ರಂಕಿನಲ್ಲಿ ಉಳಿದಾವಾದರೂ ಎಷ್ಟು ? ಎಂಬುದರ ಚರ್ಚೆಯೆ ತೀಕ್ಷ್ಣವಾಗಿ ನಡೆದಿತ್ತು ಅವರಿಂದ ಅನತಿದೂರ ದಲ್ಲಿಯೇ ಉರಿಯುತ್ತಿರುವ ಅಗ್ನಿಸ್ತೂಪವನ್ನು ಶೂನ್ಯದೃಷ್ಟಿಯಿಂದ ನೋಡುತ್ತ ನಿಂತಿದ್ದ ಮಹಿಮ. ಅವನಿಗೆಲ್ಲವೂ ಕೇಳಿಸುತ್ತಿತ್ತು ಆದರೆ ಜನರ ಆ ಕುತೂಹಲವನ್ನು ನಿವಾರಿಸುವ ಸ್ಥಿತಿಯಲ್ಲಿ ಅವನಿರಲಿಲ್ಲ ಅಚೆ ಕೇರಿಯ

ಭಿಖು ಬನರ್ಜಿಯವರಿಗೆ— ಅತ್ಯಂತ ಗಣ್ಯಮಾನ್ಯ ವ್ಯಕ್ತಿಯದು—ವಾತ ರೋಗದ ಮೂಲಕ ಬೇಗನೆ ಬರಲಿಕ್ಕಾಗಲಿಲ್ಲ ಬಡಿಗೆಯೂರಿಕೊಂಡು ಸಪರಿವಾರರಾಗಿ ಈಗ ಬರುತ್ತಲಿದ್ದರು ಕಂಡು ಮಹಿಮ ಮುಂದುವರಿದು ಹೋದ ಬನರ್ಜಿ ಮಹಾಶಯರು ಮುಮ್ಮಲ ಮರುಗಿದರು. "ಮಹಿಮ, ನಿಮ್ಮ ತಂದೆ ತೀರಿ ಬಹಳ ದಿನಗಳಾದವು ಅವರು ಬೇರೆಯಲ್ಲ, ನಾ ಬೇರೆಯಲ್ಲ ಇಬ್ಬರೂ ಹರಿ-ಹರ-ಆತ್ಮರಾಗಿದ್ದೆವು!" ಎಂದರು

'ಇದರಲ್ಲಿ ನನಗೇನೂ ಸಂದೇಹವಿಲ್ಲ'ವೆಂದು ಮಹಿಮ ಗೋಣು ಹಾಕಿ ತಿಳಿಸಿದ

"ಹೀಗಾಗುವುದೆಂದು ಪೂರ್ವಾಹ್ನದಲ್ಲಿಯೇ ನನಗೆ ಗೊತ್ತಾಗಿತ್ತು" ಎಂದು ಅವರೆಂದರು

ಮಹಿಮ ಪ್ರಶ್ನಾರ್ಥಕ ದೃಷ್ಟಿಯಿಂದ ನೋಡತೊಡಗಿದ. ಬದಿಯ ಆವಾರದ ಗೋಡೆಯ ಹಿಂದೆಯೇ ಅಚಲೆ ಸ್ತಬ್ಧವಾಗಿ ಕುಳಿತಿದ್ದಳು. ಕೇಳುವುದಕ್ಕೆ ಅವಳ ಕಿವಿಗಳೂ ನೆಟ್ಟಗಾದವು ಬನರ್ಜಿಯವರು ಮಾತನಾಡಿದರು "ಬ್ರಹ್ಮಕ್ರೋಧ ಸುಮ್ಮಸುಮ್ಮನೆ ಉಂಟಾಗುವುದಿಲ್ಲ ಮಗೂ! ನನ್ನನ್ನೊಮ್ಮೆಯಾದರೂ ನೀ ವಿಚಾರಿಸಲಿಲ್ಲ—ಇಂಥ ದೊಡ್ಡ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಎಂಥ ಅಕರ್ಮ ಮಾಡಿಬಿಟ್ಟೆ!"

ಮಹಿಮನಿಗೆ ತಿಳಿಯಲಿಲ್ಲ ಅವರು ತಮ್ಮ ಅನುಚರರ ಕಡೆ ನೋಡಿ ತಮ್ಮ ಮಾತನ್ನು ವ್ಯಾಖ್ಯಾನಿಸಿದರು "ನಾವೆಲ್ಲರೂ ಎಂದು ಕೊಂಡಿದ್ದೆವು, ಏನಾದರೂ ಒದಗಬಹುದೆಂದು. ಅಲ್ಲಾ, ಬ್ರಹ್ಮನ ಅವಕೃಪೆ ಮತ್ತಾರ ಮೇಲೆಯೂ ಏಕಾಗಲಿಲ್ಲ? ಬ್ರಾಹ್ಮರು ಖ್ರಿಸ್ತಾನರಿದ್ದ ಹಾಗೆಯೆ! ಇದು ನಮ್ಮಲ್ಲಿ—ಶಾಸ್ತ್ರಜ್ಞಾನವಿದ್ದವರಲ್ಲಿ—ಮುಚ್ಚಲಾರದು!"

ನೆರೆದವರೆಲ್ಲ ಅನುಮೋದಿಸಿದರು. ಬನರ್ಜಿಯವರು ಉತ್ಸಾಹಿತರಾಗಿ "ಏನೇ ಆಗಲಿ ತಮ್ಮಾ, ಮುಂಚೆ ಪ್ರಾಯಶ್ಚಿತ್ತ ತೆಗೆದುಕೊಂಡು ಅವಳನ್ನು ಬಿಟ್ಟು—"

ಮಹಿಮ ಕೈಯೆತ್ತಿ ಹೇಳಿದ "ತಡೆಯಿರಿ ನಾ ನಿಮ್ಮನ್ನು ಅಮಾನ್ಯ ಮಾಡಬೇಕೆನ್ನುವುದಿಲ್ಲ ಆದರೆ ಆಗದ ಮಾತನ್ನು ಏಕಾಡುವಿರಿ? ನಾ ಕೈಹಿಡಿದವಳ ಪುಣ್ಯದಿಂದ ಮನೆ ಉಳಿದರೆ ನೆಟ್ಟಗೇ ಆಯಿತು. ಇಲ್ಲದಿದ್ದರೆ ಪುನಃ ಪುನಃ ಸುಟ್ಟು ಹೋದರೂ ಚಿಂತೆಯಿಲ್ಲ" ಎಂದು

ಅಲ್ಲಿಂದ ಹೊರಟುಬಿಟ್ಟ

ಬನರ್ಜಿ ಮಹಾಶಯರು ಸಮಸ್ತ ಪರಿವಾರದೊಡನೆ ಬಾಯಿ ತೆರೆದು ಕೊಂಡೇ ನಿಂತರು ಬಳಿಕ ಬಡಿಗೆ ರಕ್‌ರಕ್ ಮಾಡುತ್ತ ಮನೆಗೆ ತೆರಳಿದರು ಅವರು ಮನಸಿನೊಳಗೆ ಏನೆಂದುಕೊಳ್ಳುತ್ತ ಹೋದರೆಂಬುದನ್ನು ಹೇಳದಿರುವುದೇ ಲೇಸು

ಅಚಲೆಗೆ ಎಲ್ಲ ಕೇಳಿಸಿತು ಅವಳ ಕಣ್ಣಿಂದ ದೊಡ್ಡ ದೊಡ್ಡ ಹನಿಗಳುದುರಿದವು ಯದು ಬಂದು ಕೇಳಿದ "ಅಮ್ಮಾ, ಬಾಬುಗಳು ನಿಮ್ಮನ್ನು ಕೇಳಿ ಪಲ್ಲಕ್ಕಿ ತರಲು ಹೇಳಿದ್ದಾರೆ ತರಲೆ ?"

"ಬಾಬುಗಳನ್ನು ಇಲ್ಲಿ ಸ್ವಲ್ಪ ಕಳಿಸು" ಅಚಲೆ ಕಣ್ಣೊರಸಿಕೊಳ್ಳುತ್ತ ಹೇಳಿದಳು

ಮಹಿಮ ಬರುತ್ತಲೇ ಅವಳಿಗೆ ಮತ್ತೆ ಕಣ್ಣೀರು ಬಂತು ತಟ್ಟನೆ ಅವನ ಪಾದಧೂಳಿಯನ್ನು ತಲೆಯಲ್ಲಿ ಧರಿಸಿದಳು ಅವನು ವಿಸ್ಮಿತನಾದ ಅವಳು ಅವನ ಕೈಹಿಡಿದು ತನ್ನ ಹತ್ತಿರ ಕುಳ್ಳಿರಿಸಿಕೊಳ್ಳುತ್ತಿದ್ದಳೋ ಏನೋ, ಏನಾದರೂ ಹುಡುಗಾಟಿಕೆ ಮಾಡುತ್ತಿದ್ದಳೋ ಏನೋ. ಆದರೆ ಬೆಳಕು ಹರಿದಿತ್ತು, ಕುತೂಹಲಿಗಳಾದ ಜನ ನೆರೆದಿದ್ದರು "ಪಲ್ಲಕ್ಕಿ ಏಕೆ ?" ಎಂದಿಷ್ಟೇ ಕೇಳಿದಳು

"ಒಂಬತ್ತರ ಗಾಡಿ ಸಿಕ್ಕರೆ ಎಲ್ಲ ರೀತಿಯಿಂದಲೂ ಅನುಕೂಲ. ಒಂದರೊಳಗೆ ಮನೆ ಸೇರಿ ಸ್ನಾನ ಊಟ ಮಾಡಲಿಕ್ಕಾಗುತ್ತದೆ ನಿನ್ನೆ ರಾತ್ರಿಯೂ ಉಂಡಿಲ್ಲ—"

"ಮತ್ತೆ ನೀವು ?"

"ನಾನೇ ?" ಸ್ವಲ್ಪ ವಿಚಾರಮಾಡಿ ಮಹಿಮನೆಂದ "ನನ್ನದು ಏನಾದರೂ ವ್ಯವಸ್ಥೆ ಆಗುವುದು"

"ಎಂದಮೇಲೆ ನನ್ನದೂ ಆಗುವುದು ನಾ ಹೋಗುವುದಿಲ್ಲ"

"ಏನಾಗುವುದು ?"

ಅಚಲೆಯಿಂದ ಉತ್ತರ ಹೊರಡಲಿಲ್ಲ 'ಅಡವಿಯೊಳಗೆ ಮರದಡಿಯಲ್ಲಿ' ಎಂದೊಮ್ಮೆ ಅವಳ ತುದಿನಾಲಗೆಗೆ ಬಂದಿತ್ತು ಆದರದು ಆಗವ ಮಾತು ಯಾರ ಮನೆಯಲ್ಲಾದರೂ ಒಂದು ಗಂಟೆ ಕೂಡ ಆಶ್ರಯ ಹೊಂದುವುದು ಎಷ್ಟು ಅಪಮಾನಕರವೆಂಬುದು ಇದೀಗ ಅವಳ ಅನುಭವಕ್ಕೆ

ಬಂದ ಮಾತು ಅವಳಿಗೆ ಮೃಣಾಲಳ ನೆನಪಾಗದಿರಲಿಲ್ಲ ನಾಚಿಕೆ ಯಿಂದ ಅವಳ ವಿಷಯ ಎತ್ತಲಾಗಲಿಲ್ಲ ಕೆಲಹೊತ್ತು ಸುಮ್ಮನಿದ್ದು "ನೀವೂ ಸಂಗಡ ಬರ್ರಿ" ಎಂದಳು.

"ನಾನೂ ಬರಬೇಕೊ? ಅದರಿಂದೇನು ಲಾಭ?"

"ಲಾಭಹಾನಿಯು ಹೊಣೆ ಇಂದಿನಿಂದ ನನ್ನದು ಇಲ್ಲಿ ನಿಮ್ಮ ಹಿತೈಷಿಗಳಿಲ್ಲ ಎಂಬುದನ್ನು ನಾ ಬಲ್ಲೆ ಅಲ್ಲದೆ ಈ ಒಂದು ರಾತ್ರಿಯೊಳಗೇ ನಿಮ್ಮ ಮೋರೆ ಹೇಗಾಗಿದೆ ಎಂಬುದು ನಿಮಗೆ ಕಾಣನು, ನನಗೆ ಕಾಣು ತ್ತಿದೆ. ಈ ಸ್ಥಿತಿಯಲ್ಲಿ ನಿಮ್ಮನ್ನೊಬ್ಬರನ್ನೇ ಇಲ್ಲಿ ಬಿಟ್ಟು ನಾ ಸತ್ತರೂ ಹೋಗುವುದಿಲ್ಲ"

ಮಹಿಮನ ಮನಸಿನೊಳಗೆ ಕಲಮಲವೆದ್ದಿತು ಆದರೂ ಸ್ಥಿರನಾ ಗಿದ್ದ ಅಚಲೆ ಮತ್ತೆ ಹೇಳಿದಳು "ಏಕೆ ನಿಮಗಷ್ಟು ಯೋಚನೆ? ನನ್ನ ಆಭರಣಗಳಿವೆ. ಆದರಿಂದ ಪಶ್ಚಿಮದಲ್ಲಿ ಎಲ್ಲಿಯಾದರೂ ಒಂದು ಸಣ್ಣ ಮನೆ ಕೊಳ್ಳಬಹುದು ಎಲ್ಲಿದ್ದರೂ ನೀವು ಉಪವಾಸ ಕೆಡವಲಾರಿರಿ. —ಉದರ ನಿರ್ವಾಹದ ಪ್ರಯತ್ನ ನೀವು ಮಾಡಿಯೇ ಮಾಡುವಿರಿ ಅಲ್ಲದೆ ನಾ ಹೇಳಿಯೇ ಇದ್ದೇನಲ್ಲ—ಇಂದಿನಿಂದ ನಿಮ್ಮ ಭಾರ ನನ್ನದು"

ಯದು ಬಂದು ಕೇಳಿದ "ಪಲ್ಲಕ್ಕಿ ತರಲು ಹೋಗಲೇ ಅಮ್ಮಾ?"

ಉತ್ತರಕ್ಕಾಗಿ ಅಚಲೆ ಉತ್ಸುಕ ದೃಷ್ಟಿಯಿಂದ ಗಂಡನ ಮುಖ ನೋಡಿದಳು ಅವನು ಪಲ್ಲಕ್ಕಿ ತರಲು ಯದುವಿಗೆ ಹೇಳಿ ಅಚಲೆಗೆಂದ: "ಆದರೆ ನಾನೀಗ ಬರಲಾರೆ"

ಅಚಲೆಗೆ ಹೇಳಲಾರದಷ್ಟು ಸಮಾಧಾನವಾಯಿತು "ಇದು ನಿಜ, ನೀವೀಗಲೇ ಹೊರಡಲಾರಿರಿ ಆದರೆ ಸಂಜೆಯ ಗಾಡಿಗೆ ನಿಶ್ಚಯವಾಗಿ ಬರುವಿರಲ್ಲವೆ? ಅಲ್ಲದೆ ಹೋದರೆ ನಾ ಅಡುಗೆ ಮಾಡಿಕೊಂಡು ಚಿಂತಿ ಸುತ್ತ ಕೂತಿರಬೇಕು, ಮತ್ತೆ ನೀವು—"

ಆದರವಳ ಅಭಿಪ್ರಾಯ ಮಹಿಮನ ದೀರ್ಘಶ್ವಾಸದಿಂದ ಅರಿ ತಣ್ಣ ಗಾಯಿತು ಅವಳು ಕಂಗೆಟ್ಟು ಕಾತರಳಾಗಿ ನುಡಿದಳು. "ಏನು, ಆಗಲೂ ಬರಲಾರಿರಾ ಹಾಗಾದರೆ?" ಈ ಅಂಧಕಾರಮಯ ರಾತ್ರಿಯನ್ನು ಯಾರ ಮನೆಯೊಳಗೆ ಕಳೆಯುವ ಸಂಭವವುಂಟೆಂದು ಸ್ಮರಣೆಗೆ ಬರುತ್ತಲೇ ಅಚ ಲೆಯ ಮುಖ ಗಂಭೀರವಾಯಿತು, ವಿವರ್ಣವಾಯಿತು. ಅವಳ ಮನ

ಇಂಗಿತ ಮಹಿಮನಿಗೆ ಗೊತ್ತಾದಂತೆ ತೋರಲಿಲ್ಲ. "ಕಲಕತ್ತೆಯಲ್ಲಿ ನಾನೆಲ್ಲಿಗೆ ಬರಬೇಕೆನ್ನುತ್ತೀ ?" ಎಂದು ಕೇಳಿದ.

"ಏಕೆ, ಅಪ್ಪನ ಮನೆಗೆ !"

"ಒಲ್ಲೆ" ತಲೆಯಲ್ಲಾಡಿಸಿ ಮಹಿಮನೆಂದ

"ಒಲ್ಲೆನೇಕೆ, ಅದೇನು ನಿಮ್ಮ ಮನೆಯಲ್ಲವೊ ?"

'ಅಲ್ಲ' ಎಂಬುದನ್ನು ಮಹಿಮ ತಲೆಯಲ್ಲಾಡಿಸಿ ಸೂಚಿಸಿದ

"ಅಲ್ಲದಿದ್ದರೆ, ಎರಡೇ ದಿನ ಇದ್ದು ಪಶ್ಚಿಮಕ್ಕೆ ಹೊರಟುಹೋಗುವ."

"ಬೇಡ."

ಆವನನ್ನು ಒಲಿಸುವುದು ಅಸಾಧ್ಯವೆಂದು ಅಚಲೆ ಅರಿತಳು ಸ್ವಲ್ಪ ಯೋಚಿಸಿ, "ಹಾಗಾದರೆ ನಡೆಯಿರಿ, ಇಲ್ಲಿಂದಲೇ ಪಶ್ಚಿಮಕ್ಕೆ ಹೋಗಿಬಿಡುವ ನಾ ಜೊತೆಗಿದ್ದರೆ ಎಲ್ಲಿಯೂ ತೊಂದರೆಯಾಗಕ್ಕಿಲ್ಲ ಆಭರಣ ಮಾರಬೇಕಾದೀತು, ಅಷ್ಟೆ ಕಲಕತ್ತೆಯ ಹೊರತು ಅದೆಲ್ಲಿ ಸಾಧ್ಯ ?"

ಮಹಿಮ ಬೇರೆ ಕಡೆ ನೋಡುತ್ತ ನೀರವವಾಗಿದ್ದ ಅಚಲೆ ವ್ಯಗ್ರ ಸ್ವರದಿಂದ ಕೇಳಿದಳು "ಪಶ್ಚಿಮದಲ್ಲಿಯೂ ದೊಡ್ಡ ಪಟ್ಟಣಗಳಿವೆ; ಅಲ್ಲಿಯೆ ಮಾರಬಹುದಲ್ಲವೆ ? ನನ್ನಲ್ಲಿ ಹೆಚ್ಚುಕಡಿಮೆ ೨೦೦ ರೂಪಾಯಿ ಇವೆ ಅಷ್ಟು ಪ್ರವಾಸಕ್ಕೆ ಸಾಲಬಹುದಷ್ಟೆ ? ಏಕೆ ಸುಮ್ಮನೆ ಕುಳಿತಿರಿ ? ಹೇಳಿರಲ್ಲ ಬೇಗನೆ"

ಮಹಿಮ ಅವಳ ಕಣ್ಣ ಕಡೆ ನೋಡದೆ ಹೇಳಿದ. "ನಿನ್ನ ಆಭರಣ ನಾ ಮುಟ್ಟಲಾರೆ ಅಚಲಾ"

ದಕ್ಕೆ ತಗಲಿ ಜಕ್ಕನೆ ಜರಿದಳು ಅಚಲೆ. ಕ್ಷಣ ತಡೆದು, "ಏಕೊಲ್ಲಿರಿ ಹೇಳುವಿರಾ ?" ಎಂದಳು.

ಮಹಿಮ ಹೇಳಲಿಲ್ಲ. ಕೆಲ ಹೊತ್ತು ಇಬ್ಬರೂ ಮೌನವಾಗಿದ್ದರು. ಒಮ್ಮಿಂದೊಮ್ಮೆಲೆ ಅಚಲೆ ಪ್ರಶ್ನೆಗಳ ಮಳೆಗರೆದಳು · "ಜಗತ್ತಿನೊಳಗೆ ಗಂಡರೆಷ್ಟು ಜನರಿಲ್ಲ ? ಅವರು ಆಪತ್ತುಬಂದಾಗ ತೆಗೆದುಕೊಳ್ಳುವುದಿಲ್ಲವೆ? ಸ್ತ್ರೀಯರ ಆಭರಣ ಇರುವುವೇತಕ್ಕೆ ? ಇಷ್ಟು ಸಂಕಟಪಟ್ಟು ಇವನ್ನು ಉಳಿಸಿದಿರಾದರೂ ಏಕೆ ?" ಎಂದು ಸಣ್ಣ ಬಾಕ್ಸನ್ನು ತಳ್ಳಿ, "ಕಿಚ್ಚಿನ್ನೂ ನಂದಿಲ್ಲ, ಅದರೊಳಗೆ ಒಗೆದುಬಿಟ್ಟರೆ ನಿಶ್ಚಿಂತೆಯಾಗುವುದು. ನೀವು ನಿಮ್ಮ ಮನಸಿಗೆ ಬಂದಂತೆ ಮಾಡಿರಿ" ಎಂದು ಸೆರಗಿನಿಂದ ಕಣ್ಣೊತ್ತಿಕೊಂಡಳು.

ಎರಡು ನಿಮಿಷ ಸುಮ್ಮನಿದ್ದು ಮಹಿಮ ಮೆಲ್ಲಮೆಲ್ಲನೆಂದ “ನಾನೆಲ್ಲಾ ವಿಚಾರ ಮಾಡಿದ್ದೇನೆ ಅಚಲಾ. ಆವೇಶಭರದಲ್ಲಿ ಏನೂ ಮಾಡುವುದಿಲ್ಲ; ಮಂದಿ ಮಾಡಿದರೂ ಸೇರುವುದಿಲ್ಲ. ನೀ ಕೊಡುವುದನ್ನು ತೆಗೆದುಕೊಂಡಿದ್ದರೆ ನನ್ನ ಸುಖಕ್ಕೆ ಎಲ್ಲೆಯಿರುತ್ತಿರಲಿಲ್ಲ. ಆದರೆ ತೆಗೆದುಕೊಳ್ಳಲಾರೆ. ನನ್ನ ಕಷ್ಟ ನೋಡಲಾರದೆ ಇದಕ್ಕೂ ಎಷ್ಟೋ ಪಟ್ಟು ಕೊಡಲು ಬಂದಿದ್ದರೊಬ್ಬರು ಆ ದಯ ಈ ದಯ ಎರಡೂ ಅಷ್ಟೇ. ಆದರದರಿಂದ ನನಗೂ ನಿಮಗೂ ಯಾರಿಗೂ ಹಿತವಾಗಲಾರದು ”

ಅಚಲೆಯ ಸಹನೆ ತೀರಿತು ಅಳುವುದು ಬಿಟ್ಟು, ಪ್ರತಿವಾದಿಸಲೆಂದು ಸದರ್ಪನೇತ್ರ ಮೇಲೆತ್ತಿದಾಕ್ಷಣ, ಮಹಿಮ ನೋಡುತ್ತಿದ್ದ ಕಡೆ ಅವಳ ದೃಷ್ಟಿ ಹರಿಯಿತು ಕಿರಿದಂತರದಲ್ಲಿದ್ದ ಅವರ ಪುಷ್ಕರಿಣಿಯ ಬೇವಿನ ಕಟ್ಟೆಯ ಮೇಲೆ ಸುರೇಶ ಮುಗಿಲು ನೋಡುತ್ತ ಬಿದ್ದುಕೊಂಡಿದ್ದ. ಅಚಲೆಯ ಬಾಯೊಳಗಿನ ಮಾತು ಬಾಯೊಳಗೇ ಉಳಿಯಿತು. ಮೋರೆ ತನಗೆ ತಾನೇ ಬಾಗಿತು.

ಮಹಿಮನೆಂದ “ ಅಚಲಾ, ತಾನು ಪೂರ್ಣ ಬೋರೆಯಾಗಿ ದಾನ ಮಾಡುವುದು ದುಃಖಮೂಲ ಆವೇಶ ತುಂಬಿದಾಗ ಒಂದು ಕ್ಷಣದೊಳಗೆ ಹಾಗೆ ಮಾಡಬಹುದು, ಅದರ ಫಲ ಅನುಭವಿಸುವುದು ಬದುಕಿರುವ ತನಕ ನನಗೆ ಗೊತ್ತಿದೆ— ಒಂದು ತಪ್ಪಿಗಾಗಿ ನಿಮಗೆ ವಿಪರೀತ ದುಃಖವಾಗಿದೆ ಈಗ ಮತ್ತೊಂದು ತಪ್ಪಾಗಿಬಟ್ಟಿತೆಂದರೆ ನೀ ನಿನ್ನನ್ನೂ ಕ್ಷಮಿಸಿಕೊಳ್ಳಲಾರೆ, ನನ್ನನ್ನೂ ಕ್ಷಮಿಸಲಾರೆ. ಆ ನಷ್ಟವನ್ನು ತಾಳಿಕೊಳ್ಳುವಷ್ಟು ಬಂಡವಾಳ ನಿನ್ನಲ್ಲಿಲ್ಲ ಇದು ಇಂದು ಮನವರಿಕೆಯಾಗಲಿಕ್ಕಿಲ್ಲ, ನಾಲ್ಕು ದಿನ ಹೋದಮೇಲಾದೀತು. ಅದಕ್ಕೇ ನಿನ್ನಿಂದೇನೂ ತೆಗೆದುಕೊಳ್ಳಲಿಕ್ಕೊಲ್ಲೆ. ”

ಮಾತು ಅಚಲೆಯ ಎದೆಗೆ ನಟ್ಟಿತು. ಗಂಡನ ದೃಷ್ಟಿಯಲ್ಲಿ ತಾನೆಷ್ಟು ಪರಕೀಯಳೆಂಬುದು ಇಂದಿನಷ್ಟು ಎಂದೂ ಅವಳ ಅನುಭವಕ್ಕೆ ಬಂದಿರಲಿಲ್ಲ ಇದರೊಡನೆ ಮೃಣಾಲಳ ನೆನಪೂ ಸೇರಿ ಅವಳು ಕಾಯ್ದು ಹೋದಳು. ಅವಳೂ ಕಠಿನವಾಗಿಯೇ ಮಾತನಾಡಿದಳು. “ ನೀವೆನ್ನುವುದೆಲ್ಲ ತಿಳಿಯಿತು. ನಿಮ್ಮ ಮಾತೇ ಸತ್ಯವಿರಬಹುದು. ನಿಮ್ಮ ಮೋರೆ ನೋಡಿ ಕನಿಕರ ಹುಟ್ಟಿಯೇ ನಾ ನನ್ನ ಸರ್ವಸ್ವವನ್ನು ಕೊಡಬಯಸಿರಬಹುದು. ಒಂದೆರಡು

ದಿನಗಳಲ್ಲಿ ಇದಕ್ಕಾಗಿ ನಾ ಅನುತಾಪಕ್ಕೆ ಗುರಿಯಾಗಬಹುದು ! ಸರಿ, ಸರಿ - ಆದರೆ ನೋಡಿರಿ, ಹೆರವರ ಅಂತರಂಗವನ್ನರಿಯುವ ಜಾಣ್ಮೆ ನಿಮಗೆಷ್ಟೇ ಇರಲಿ, ನಿಮಗೆ ತಿಳಿಸಬೇಕಾದ ವಿಷಯಗಳೂ ಎಷ್ಟೋ ಉಂಟು ಹೆಂಡತಿಯ ಒಡವೆಗಳನ್ನು ಬಲವಂತದಿಂದ ತೆಗೆದುಕೊಳ್ಳುವುದೊತ್ತಟ್ಟಿಗಿರಲಿ, ಕೈಯೊಡ್ಡಿ ತೆಗೆದುಕೊಳ್ಳುವಂಥ ಸತಿ ನಿಮಗಿದೆಯೆ? ನಾನಿನ್ನು ನಿಮ್ಮೊಡನೆ ತರ್ಕ ಹೂಡುವುದಿಲ್ಲ ಇನ್ನೂ ನಿಮ್ಮಲ್ಲಿ ಒಂದಿಷ್ಟು ವಿವೇಕ ಬುದ್ಧಿಯಿದೆಯಲ್ಲ, ಅದೇ ನನಗೆ ಸಮಾಧಾನ ಎಲ್ಲಿದ್ದರೂ ಒಂದಿಲ್ಲೊಂದು ದಿನ ನಿಮಗೆ ಎಲ್ಲವನ್ನೂ ತಿಳಿಸಿಯೇ ತಿಳಿಸುವೆ." ಎಂದು ಅವಳು ಕೈಯಿಂದ ಬಾಯಿ ಮುಚ್ಚಿಕೊಂಡು ಅಳುವನ್ನು ತಡೆದಳು

ಒಂಬತ್ತರ ಗಾಡಿಗೆ ಸುರೇಶನೂ ಹೊರಡುವವ ಗತರಾತ್ರಿಯ ಅಗ್ನಿಕಾಂಡ ಅವನನ್ನು ಏನೋ ಒಂದು ರೀತಿ ಮಾಡಿತ್ತು ಯಾರೊಡನೆಯೂ ಮಾತನಾಡುವ ಉತ್ಸಾಹ ಅವನಿಗಿರಲಿಲ್ಲ ಗಾಡಿ ಬಿಡುವುದಕ್ಕೆ ಇನ್ನೂ ಸ್ವಲ್ಪ ಅವಕಾಶವಿತ್ತು ಅವನು ಮಹಿಮನನ್ನು ನಿಲ್ದಾಣದೊಂದು ಕೊನೆಗೆ ಕರೆದೊಯ್ದು, "ಮಹಿಮ, ಅಗ್ನಿಕಾಂಡದ ಬಗ್ಗೆ ನನ್ನ ಮೇಲೆ ಸಂಶಯವಿಲ್ಲವಷ್ಟೆ?" ಎಂದು ಕೇಳಿದ

ಮಹಿಮ ಥಟಕ್ಕನೆ ಅವನೆರಡು ಕೈಗಳನ್ನೂ ಹಿಡಿದು "ಛೆ" ಎಂದ.

ಸುರೇಶನ ಕಣ್ಣೆರಡೂ ಕಂಬನಿದುಂಬಿದವು "ನಿನ್ನೆಯಿಂದ ಇದೇ ಭಯದಿಂದ ನನಗೆ ಶಾಂತಿಯಿರಲಿಲ್ಲ, ಮಹಿಮ!" ಎಂದ

ಮಹಿಮ ಅವನ ಕೈಹಿಸುಕಿದ ನೀರವವಾಗಿ ಸ್ವಲ್ಪ ತಡೆದು "ಸುರೇಶ, ಒಂದು ಸತ್ಯವಾದ ಅಪರಾಧ ಅನೇಕ ಮಿಥ್ಯಾಪರಾಧಗಳನ್ನು ಕಲ್ಪಿಸುವುದು ದುಃಖಾತಿರೇಕದಿಂದ ನೀ ಏನೇ ಮಾಡಿದರೂ 'ಕ್ರಾಯಿಮ್' ಎನ್ನುತ್ತಾರಲ್ಲ ಅದು ನಿನ್ನಿಂದಾಗದೆಂದು ನನಗಿಂದಿಗೂ ವಿಶ್ವಾಸವಿದೆ"—"ಸುರೇಶ, ನೀ ದೇವರನ್ನು ನಂಬುವುದಿಲ್ಲವಾದರೂ, ನಾ ಮಾತ್ರ ಈ ವಿಶ್ವಾಸ ಅವಿನಾಶಿಯಾಗಲೆಂದು ಹಗಲಿರುಳು ಪ್ರಾರ್ಥಿಸುವೆ"

ಗಾಡಿ ಬಂತು ಅಚಲೆಯನ್ನೂ ದಾಸಿಯನ್ನೂ ಹೆಂಗುಸರ ಡಬ್ಬಿಯಲ್ಲಿ ಕುಳ್ಳಿರಿಸಿ ಮಹಿಮ ಸುರೇಶನ ಹತ್ತಿರ ಹೋದ. ಅವನು ಕಿಡಿಕಿಯೊಳಗಿಂದ ಮಹಿಮನ ಕೈಹಿಡಿದು, "ನಿನ್ನ ನಷ್ಟವನ್ನು ತುಂಬಿಕೊಳ್ಳೆಂಬ ನನ್ನ ಪ್ರಾರ್ಥನೆಯನ್ನೇನು ನೀ ಸಫಲಗೊಳಿಸಲಿಲ್ಲ. ಆದರೆ ನಿನ್ನ ದೇವರು

ನನ್ನೀ ಪ್ರಾರ್ಥನೆಯನ್ನು ನಿಜವಾಗಿ ಪೂರಯಿಸುವ ಅವನು ನನ್ನನ್ನು ಹೀನನನ್ನಾಗಿ ಮಾಡದಿರಲಿ " ಎಂದು ನುಡಿದು ಮುಖ ತಿರುಗಿಸಿ ಕುಳಿತು ಕೊಂಡ

ಅಚಲೆ ಯದುವಿನೊಡನೆ ಏನೋ ಗುಣುಗುಣು ಮಾತನಾಡುತ್ತಿದ್ದಳು ಮಹಿಮ ಅಲ್ಲಿಗೆ ಹೋಗುತ್ತಲೆ ಕೇಳಿದಳು "ಈವೊತ್ತು ಮೃಣಾಲಕ್ಕನ ಗಂಡ ತೀರಿಕೊಂಡರಲ್ಲವೆ ? "

"ಈಗೊಂದು ಗಂಟೆಯ ಹಿಂದೆ ತೀರಿಕೊಂಡರೆಂದು ಕೇಳಿದೆ "

"ಬಹುಶಃ ಹತ್ತು ಹನ್ನೆರಡು ದಿನ ನಿಮೋನಿಯಾ ಭೋಗಿಸಿರಬೇಕು ಅವರು ನನಗೀ ಸುದ್ದಿ ಹೇಳುವುದೂ ಅಗತ್ಯವೆಂದು ನಿಮಗೆನಿಸಲಿಲ್ಲವೆ? "

ಮಹಿಮ ಉತ್ತರ ಕೊಡಬೇಕೆಂದ ಮಾತನ್ನು ಹೇಗೆ ಹೊಂದಿಸಿ ಹೇಳಬೇಕೆಂದು ಯೋಚಿಸುತ್ತಿರುವಾಗಲೇ ಗಾಡಿ ಕೂಗಿ ಹೊರಟುಬಿಟ್ಟಿತು.

೨೧

ಕೇದಾರಬಾಬು ಇನ್ನೂ ಮೊದಲಿನ ಸ್ಥಿತಿಗೆ ಬಂದಿರಲಿಲ್ಲ ಉಂಡು ವರಾಂಡದಲ್ಲಿ ಈಜಿ ಚೇರಿನಲ್ಲಿ ಪತ್ರಿಕೆ ಓದುತ್ತ ತಂದ್ರಿತರಾಗಿರಬೇಕು ಬಂಡಿಯ ಸದ್ದಾಗಲು ಕಣ್ಣು ತೆರೆದರು ಸುರೇಶ, ಹಿಂದೆ ಹಿಂದೆಯೇ ತಮ್ಮ ಮಗಳನ್, ಪರಿಚಾರಿಕೆ ಇಳಿದರು ತತ್‌ಕ್ಷಣ ಬಾಬುಗಳ ಮುಖ್ಯ ಬಿಟ್ಟಿತು ಏನೋ ಅಜ್ಞಾತಶಂಕೆಯಿಂದ ಶಶವ್ಯಸ್ತರಾಗಿ, "ಅಚಲೆಯೆ? ಸುರೇಶ, ನೀನೆಲ್ಲಿಂದ ? ದಾಸಿ, ಏನಿದು ? ಏನು ಕಥೆ ? " ಎಂದರು

ಅಚಲೆ ತಂದೆಯ ಪಾದಧೂಳಿ ಗ್ರಹಣಮಾಡಿದಳು ಸುರೇಶ ನಮಸ್ಕರಿಸಿ ಕೇಳಿದ "ಮಹಿಮನ ತಂತಿ ಬರಲಿಲ್ಲವೆ ? "

"ಇಲ್ಲವಲ್ಲ ! " ಉದ್ವಿಗ್ನತೆಯಿಂದ ಬಾಬುಗಳೆಂದರು

ಸುರೇಶ ಒಂದು ಚೌಕಿಯನ್ನೆಳೆದುಕೊಂಡು ಕುಳಿತು, "ಹಾಗಾದರೆ, ತಂತಿ ಕೊಡಲು ಅವನಾದರೂ ಮರೆತಿರಬೇಕು, ಅಥವಾ ಮುಟ್ಟಲು ತಡವಾಗಿರಬೇಕು," ಎಂದ

"ತಂತಿ ಹಾಳಾಗಲಿ, ಏನು ಸಮಾಚಾರ, ಮೊದಲು ಹೇಳು. "

"ನಿನ್ನೆ ರಾತ್ರಿ ಮಹಿಮನ ಮನೆ ಸುಟ್ಟಿತು "

"ಆಂ ! ಮನೆ ಸುಟ್ಟಿತು ? ಸರ್ವನಾಶ ! ಏನೆಂದೆ ? ಮನೆ ಸುಟ್ಟು ಹೋಯಿತೆ ? ಹೇಗೆ ಸುಟ್ಟಿತು ? ಮಹಿಮ ಎಲ್ಲಿ ? ಇವರೆಲ್ಲಿ ಸಿಕ್ಕರು ? "

ಒಂದುಸುರಿಗೇ ಇಷ್ಟು ಕೇಳಿ ಬಾಬು ಚೇರಿನಲ್ಲಿ ದೊಪ್ಪನೆ ಬಿದ್ದರು

"ಇವರನ್ನು ಅಲ್ಲಿಂದಲೇ ಕರೆದುಕೊಂಡು ಬಂದೆ ನಾನಲ್ಲಿಯೇ ಇದ್ದೆನಲ್ಲ!"

"ನೀ ಯಾವಾಗ ಹೋಗಿದ್ದೆ, ನನಗೊಂದೂ ಗೊತ್ತಿಲ್ಲ? ಇರಲಿ, ಅವನೆಲ್ಲಿ?"

"ಮಹಿಮನಿಗೆ ಬರಲಿಕ್ಕಾಗಲಿಲ್ಲ ಅಂತೆಯೇ—"

ಬಾಬುಗಳ ಮುಖಕ್ಕೆ ಕಾಡಿಗೆ ಕವಿಯಿತು "ಛೆಛೆ, ಎಂಥ ಭಯಂಕರ ಕೆಟ್ಟ ಸುದ್ದಿ! ಇದಕ್ಕಿಂತ ಅನ್ಯಾಯ ಮತ್ತೊಂದಿಲ್ಲ! ಇದೆಲ್ಲವನ್ನೂ ನಾನೆಂದೂ—"

ಮಾತಾಡುತ್ತಾಡುತ್ತ ಅವರು ಮಗಳ ಕಡೆ ನೋಡಿದರು ಅಚಲೆ ಒಂದು ಕುರ್ಚಿಯ ಬೆನ್ನು ಹಿಡಿದುಕೊಂಡು ಇನ್ನೂ ನಿಂತಿದ್ದಳು ತಂದೆಯ ಈ ಸಂದೇಹ ಅವಳ ಮರ್ಮವನ್ನು ಭೇದಿಸಿತು ತನ್ನ ಆಕಸ್ಮಿಕ ಆಗಮನದ ಕಾರಣವನ್ನು ತಂದೆ ನಂಬಲಿಲ್ಲವೆಂದರಿತು, ಲಜ್ಜೆ ತಿರಸ್ಕಾರಗಳಿಂದ ಅವಳ ಮೋರೆಯ ರಕ್ತವೆಲ್ಲ ಇಂಗಿಹೋಯಿತು ಮಗಳ ಮುಖಮುದ್ರೆಯಿಂದ ಬಾಬುಗಳ ಸಂದೇಹ ಗಟ್ಟಿಯಾಯಿತು ಅವರು ಹಿಂದಕ್ಕೊರಗಿ ಮುಖದ ಮೇಲೆ ಪತ್ರಿಕೆಯಿಟ್ಟುಕೊಂಡು ಫೋಂಸೆಂದು ಉಸಿರುಗರೆದರು "ನಿಮ್ಮ ಮನಸಿಗೆ ಬಂದಂತೆ ಮಾಡಿರಿ ನಾ ನಾಳೆಯೇ ಎಲ್ಲಿಗಾದರೂ ಹೊರಟು ಹೋಗುವೆ" ಎಂದರು.

ಸುರೇಶ ಸಕೋಪ ವಿಸ್ಮಯದಿಂದ "ಇದೇನು ಕೇದಾರ ಬಾಬೂ, ನೀವೇಕೆ ಹೋಗುವಿರಿ? ಅಂಥದೇನು ಬಂತು?" ಎಂದು ನುಡಿದು, ಅಚಲೆಯನ್ನೊಮ್ಮೆ ಬಾಬುಗಳನ್ನೊಮ್ಮೆ ನೋಡಿದ ಅವನಿಗೆ ಯಾರ ಮುಖವೂ ಕಾಣಲಿಲ್ಲ ಕೇದಾರರಿಂದ ಯಾವ ಉತ್ತರವೂ ಬಾರದಿರಲು ಅವನು ಎದ್ದುನಿಂತು, "ಆಯಿತು. ಮಹಿಮ ನನಗೊಪ್ಪಿಸಿದ ಭಾರ ಇಳಿಸಿದಂತಾಯಿತು ಇನ್ನು ನಿಮಗೆ ಸರಿಕಂಡದ್ದು ಮಾಡಿರಿ. ನಾ ಹೊರಡುತ್ತೇನೆ" ಎಂದು ಹೊರಟ

ಕೇದಾರಬಾಬು ಎದ್ದು ಕುಳಿತು ಕ್ಲಾಂತಸ್ವರದಿಂದ ನುಡಿದರು. "ಎಲಾ, ಏಕೆ ಹಾಗೆಯೆ ಹೊರಟೆ? ಏನು ಸುದ್ದಿ, ಹೇಳಲೇ ಇಲ್ಲ ಉರಿ ಹೇಗೆ ಹತ್ತಿತು?"

" ಅದು ಗೊತ್ತಿಲ್ಲ "

" ನೀ ಅಲ್ಲಿಗೆಂದು ಹೋಗಿದ್ದೆ ? "

" ಐದಾರು ದಿನಗಳ ಹಿಂದೆ ನನಗಿನ್ನೂ ಸ್ನಾನ ಊಟ ಇಲ್ಲ. ಇನ್ನು ನಿಲ್ಲಲಾರೆ " ಸುರೇಶ ಮತ್ತೆ ಹೊರಡಲನುವಾದ

" ಓ, ಸುರೇಶ, ಸ್ನಾನ ಊಟ ನಿಮ್ಮದು ಯಾರದೂ ಆಗಿಲ್ಲ. ಮಳೆಯೊಳಗೆ ನಿಂತಿಲ್ಲ, ಚಳಿಯೊಳಗೆ ನಿಂತಿಲ್ಲ ಇದೂ ಮನೆಯೇ, ಇಲ್ಲಿಯೂ ಮಾಡುವವರು ಮುಟ್ಟುವವರು ಇದ್ದಾರೆ ಅಚಲಾ, ಬೇಹಾಕ ನನ್ನು ಕರೆ— ಏಕೆ ನಿಂತೆ ? ಕೂಡ್ರು ಕೂಡ್ರು ಸುರೇಶ, ಏನೇನಾಯಿತು ಒಂದಿಷ್ಟು ಬಿಡಿಸಿ ಹೇಳು. " ಕೇದಾರಬಾಬು ಎಂದರು

ಸುರೇಶ ತಿರುಗಿ ಬಂದು ಕುಳಿತ ಸ್ವಲ್ಪ ತಡೆದು ಹೇಳಿದ " ರಾತ್ರಿ ಮಲಗಿದ್ದೆವು ಮಹಿಮನ ಚೀತ್ಕಾರಕ್ಕೆ ಎಚ್ಚತ್ತು ಹೊರಗೆ ಬಂದು ನೋಡುತ್ತೇವೆ— ಮನೆ ಧಗಧಗ ಉರಿಯುತ್ತಿತ್ತು ಹುಲ್ಲುಮನೆ ನಂದಿ ಸಲು ಉಪಾಯವಿರಲಿಲ್ಲ ಎಲ್ಲಾ ಸುಟ್ಟುಹೋಯಿತು, ಮತ್ತೇನು ? "

" ಎಲ್ಲಾ ? ಏನೂ ಉಳಿಸಿಕೊಳ್ಳಲಾಗಲಿಲ್ಲವೆ ? ಅಚಲೆಯ ವಸ್ತ್ರ ಒಡವೆ ? "

" ಅವು ಉಳಿದಿವೆ "

" ಅಂತೂ ಉಳಿದಿದೆ! " ಎಂದು ನಿಟ್ಟುಸಿರಿಟ್ಟು ಮುದುಕ ಮತ್ತೆ ಕೇಳಿದರು " ಅಲ್ಲಾ, ಬೆಂಕಿ ಹತ್ತಿತಾದರೂ ಹೇಗೆ ? "

" ಆಗಲೇ ಹೇಳಿದೆನಲ್ಲ, ಅದಿನ್ನೂ ತಿಳಿದಿಲ್ಲ ಆದರೆ ಊರೊಳಗೆ ಆವನ ಶುಭಾಕಾಂಕ್ಷಿಗಳು ಯಾರೂ ಇಲ್ಲವೆಂದು ತೋರುತ್ತದೆ "

ಕೇದಾರಬಾಬು ಮತ್ತೆ ಮೌನ ತಾಳಿದರು ಎಷ್ಟೋ ಹೊತ್ತು ಹೊರಗಡೆ ನೋಡುತ್ತಿದ್ದು ಗಂಭೀರ ನಿಃಶ್ವಾಸದೊಡನೆ ಎದ್ದು ನಿಂತರು. " ಏಳು ಸುರೇಶ, ಸ್ನಾನ ಮಾಡು ಸುಮ್ಮನೆ ತಡವಾಗುವುದು ನಾ ಅಡುಗೆಮನೆಯ ಕಡೆ ಒಂದಿಷ್ಟು ನೋಡಿಬರುತ್ತೇನೆ " ಎಂದು ಸುರೇಶ ನನ್ನು ಕರೆದುಕೊಂಡು ಹೋದರು

ಊಟವಾದ ಮೇಲೂ ಸುರೇಶನನ್ನು ಬಿಡಲಿಲ್ಲ. ಅವನು ಆರಾಮ ಚೌಕಿಯಲ್ಲಿ ಅರನಿದ್ದೆಯಲ್ಲಿ ಬಿದ್ದುಕೊಂಡಿದ್ದ. ಅಚಲೆ ತನ್ನ ಕೋಣೆ-ಯೊಳಗೆ ಹೋಗಿ ಬಾಗಿಲಿಕ್ಕಿಕೊಂಡಿದ್ದಳು; ಅವಳ ಸದ್ದೂ ಇರಲಿಲ್ಲ.

ಆರಾಮವಿಲ್ಲದಿದ್ದುದು ಕೇದಾರರಿಗೆ ಮಾತ್ರ ಇನ್ನೂ ಬಾರದಿದ್ದ—ಬಂದರೂ ನಿಷ್ಪ್ರಯೋಜಕವಾದ—ತಂತಿಗಾಗಿ ಚಡಪಡಿಸುತ್ತಿದ್ದರು. ಕೊನೆಗೆ ಸಂಜೆಯ ಹೊತ್ತಿನಲ್ಲಿ ಮಲಗುವುದು ಒಳಿತಲ್ಲವೆಂದು ಮಗಳನ್ನು ಕರೆಸಿಕೊಂಡು, " ಅವನು ತಂತಿ ಬಿಟ್ಟಿದ್ದಾನೆಂದು ಹೇಳಿದಿರಲ್ಲ—ಎಲ್ಲಿದೆ? ನೀವು ಗಾಡಿಯಿಂದ ಬಂದೇ ಎಷ್ಟೊತ್ತಾಯಿತು, ಅದಿನ್ನೂ ಬರಲಿಲ್ಲ!—ಒಳ್ಳೆಯದು, ನಿಂದಿರು, ಬಂದೆ—" ಎಂದು ಬಾಬು ಮಗಳ ಉತ್ತರ ಕೇಳಿಕೊಳ್ಳದೆ ದ್ರುತವೇಗದಿಂದ ಹೊರಗೆ ಹೋದರು ಮುಂದೆ ತುಸಹೊತ್ತಿನಲ್ಲಿ ಕೆಳಗೆ ಅವರ ಉತ್ತೇಜಿತ ಕಂಠಸ್ವರ ಕೇಳತೊಡಗಿತು ಅವರು ದಾಸಿಯನ್ನು ಪರಿಪರಿಯಿಂದ ಕೆದರಿ ಕೇಳುತ್ತಿದ್ದರು, ಅವಳು ಅಚ್ಚರಿಯಿಂದ ಅಲ್ಲಗಳೆದು ಹೇಳುತ್ತಿದ್ದಳು ' ಇದೇನೆನ್ನುತ್ತೀರಿ ಬಾಬೂ' ಮನೆ ಸುಟ್ಟು ಬೂದಿಯಾದವನ್ನು ಕಣ್ಣಾರ್ಟ್ಟ ನೋಡಿ ಬಂದಿದ್ದೇನೆ, ನೀವು ಸುಟ್ಟಿಲ್ಲ ಎನ್ನುತ್ತೀರಿ! '

ಸುರೇಶ ಎಲ್ಲವನ್ನೂ ಕೇಳಿ, ಮುಖವೆತ್ತಿ ನೋಡಿದ ಅಚಲೆ ಮ್ಲಾನವದನೆಯಾಗಿ ಚೌಕಟ್ಟು ಹಿಡಿದುಕೊಂಡು ನಿಂತಿದ್ದಳು ಒಣನಗೆಯೊಂದಿಗೆ ಅವನು ಪ್ರಶ್ನಿಸಿದ " ನಿಮ್ಮಪ್ಪನಿಗೆ ಅಗಿದೆಯಾದರೂ ಏನು ? "

ಅಚಲೆ ಚಕಿತಳಾಗಿ ಅತ್ತ ಹೊರಳಿ ಹೇಳಿದಳು " ಗೊತ್ತಿಲ್ಲ "

" ನನಗೆ ಖಂಡಿತ ಗೊತ್ತು, ನನ್ನ ಮಾತಿನಲ್ಲಿ ಅವರಿಗೆ ನಂಬಿಗೆಯಿಲ್ಲ ಅಗ್ನಿಕಾಂಡವ ಕತೆ ಹುಟ್ಟಿಸಿ ಹೇಳಿದ್ದೆಂದು ಅವರ ಕಲ್ಪನೆ. " ಎಂದು ಸುರೇಶ ಸ್ವಲ್ಪ ತಡೆದು ಮತ್ತೆ ನುಡಿದ " ದಿಟ ಸಟಿ ಒಂದಿನ ತಾನೇ ಗೊತ್ತಾಗುವುದು ಆದರೆ ಅವರೀ ಸಂದೇಹದಿಂದ ನಾನಿಲ್ಲಿಗೆ ಬರುವುದೇ ಅಸಾಧ್ಯವಾಗಬಿಟ್ಟಿದೆ. "

" ನೀವಿನ್ನು ಬರಲಾರಿರಾ ? " ಅಚಲೆ ಶುಷ್ಕಸ್ವರದಿಂದ ಕೇಳಿದಳು.

ಸುರೇಶ ಎದ್ದುನಿಂತು ಹೇಳಿದ. " ಬಹುಶಃ ಸಂಭವವಿಲ್ಲ ನನಗೂ ಸ್ವಲ್ಪ ಅಭಿಮಾನ ಎಂಬುದಿದೆ ನನ್ನ ಬ್ಯಾಗನ್ನು ಯಾರ ಕೈಲಾದರೂ ಕಳಿಸಿಕೊಡು "

" ಒಳ್ಳೆಯದು " ಎಂದಳು ಅಚಲೆ. ಅವನ ಬರುವ ಬಿಡುವ ವಿಷಯವಾಗಿ ಅವಳೇನೂ ಮಾತನಾಡಲಿಲ್ಲ

" ಹಾಗಾದರೆ ನಾಳೆ ಮುಂಜಾನೆಯೇ ಕಳಿಸು; ಬಹಳ ಅಗತ್ಯದೆ

ವಸ್ತುಗಳು ಅದರಲ್ಲಿವೆ" ಎಂದು ಕೇದಾರರಿಗಾಗಿ ಕಾಯದೆ ಸುರೇಶ ಹೊರಟುಹೋದ

ರಾತ್ರಿ ಬಹಳ ಹೊತ್ತು ಚಡಪಡಿಸುತ್ತ ಹೊರಳಾಡಿ ಅಚಲೆ ಎದ್ದು ಕುಳಿತಳು ಹೊರಗೆ ವರಾಂಡದಲ್ಲಿ ನಿಂತು ಬೀದಿಯ ಜನರನ್ನು ನೋಡುತ್ತ ಕೆಲಹೊತ್ತು ಅನ್ಯಮನಸ್ಕಳಾಗಬೇಕೆಂದು ಅವಳಿಚ್ಛೆ ಅವಳು ಅಲ್ಲಿಗೆ ಹೊರಟಳು ಬಾಬುಗಳ ಕೂಡ್ರುವ ಕೋಣೆಯೊಳಗೆ ಇನ್ನೂ ಬೆಳಕಿತ್ತು. ಸ್ವಲ್ಪ ಮುಂದುವರಿದಾಗ ತಂದೆಯ ದನಿ ಕೇಳಿ ಅವಳು ಅಚ್ಚರಿಗೊಂಡಳು. ಅವರು ಯಾವಾಗಲೂ ರಾತ್ರಿ ಹತ್ತುಹೊಡೆಹೊಡೆಯುವುದರೊಳಗಾಗಿಯೇ ಮಲಗುವವರು, ಈಗ ಹತ್ತೂವರೆ ಆಗಿಹೋಗಿತ್ತು ಮರುಕ್ಷಣದಲ್ಲಿ ದಾಸಿಯ ದನಿ "ಈಗ ಅವಳ ಗಂಡ ತೀರಿಕೊಂಡಿದ್ದಾನೆ, ಇನ್ನು ಮೃಣಾಲಕ್ಕ ಅತ್ತೆಮನೆ ಮಾಡಿಕೊಂಡಿದ್ದಾಳೆಂದು ನನಗಂತೂ ಎನಿಸುವುದಿಲ್ಲ, ಅಳಿಯ ದೇವರೊಡನೆ ಅವಳ ಸಂಬಂಧ ಎಂಥದೋ, ಅದವರಿಗೇ ಗೊತ್ತು." ಎಂದವಳು ಹೇಳಿದಳು ಪ್ರತ್ಯುತ್ತರವಾಗಿ ತಂದೆ "ಹೂಂಃ" ಎಂದಿಷ್ಟೆ ಎಂದರು

ಈ ಮುಂಚೆ ಬಹಳ ಮಾತುಕತೆಯಾಗಿದೆ, ಮೃಣಾಲಳ ಬಗ್ಗೆ, ಮಹಿಮನ ಬಗ್ಗೆ, ತನ್ನ ಬಗ್ಗೆ ಏನೂ ಬಾಕಿ ಉಳಿದಿಲ್ಲ ಎಂದು ಅಚಲೆ ತಿಳಿದುಕೊಂಡಳು ಇನ್ನು ಮುಂದೆ ತನ್ನ ಬಗ್ಗೆ ಏನೇನು ಕೇಳಬೇಕಾಗುವುದೊ ಎಂದು ಅವಳು ಬಂದಹಾಗೆಯೆ ನಿಃಶಬ್ದವಾಗಿ ತಿರುಗಿ ಹೋಗಬೇಕೆಂದಿದ್ದಳು ಆದರೆ ಅವಳ ಕಾಲಿಗೇಕೋ ಬೇಡಿ ಬಿಗಿದಂತಾಯಿತು

"ಎಂದರೆ ಇಬ್ಬರಿಗೂ ಕೂಡಿಬರಲಿಲ್ಲವೆ?" ಕೇದಾರಬಾಬು ಕೇಳಿದರು.

"ಇಲ್ಲ, ಒಂದಿನವೂ ಇಲ್ಲ" ದಾಸಿ ಹೇಳಿದಳು

ಅಚಲೆಯಿಷ್ಟುದಿನ ದಾಸಿಯನ್ನು ಪೆದ್ದಿಯೆಂದು ಭಾವಿಸಿದ್ದಳು, ಅವಳ ಬುದ್ಧಿ ಯಾರಿಗೂ ಕಡಿಮೆಯಲ್ಲವೆಂದು ಇಂದು ಮನಗಂಡಳು

"ನಿನ್ನೆ ರಾತ್ರಿ ಇವರು ಯಾರೂ ಉಣ್ಣಲಿಲ್ಲವೆ? ಸುರೇಶ ಅಲ್ಲಿಗೆ ಬಂದಾಗಿನಿಂದ ದಿನಗಳೆಲ್ಲ ಒಂದು ರೀತಿ ಜಗಳದಲ್ಲಿಯೇ ಕಳೆದವಲ್ಲವೆ?" ತಂದೆ ಕೇಳಿದರು

ದಾಸಿಯ ಉತ್ತರ ಕೇಳಿಸಲಿಲ್ಲ. ಆದರೂ ತಂದೆಯ ಮಾತುಗಳಿಂದ ಅವಳು ಗೋಣಿನಿಂದ ಏನು ಅಭಿಪ್ರಾಯಪಟ್ಟಳೆಂಬುದು ಅಚಲೆಗೆ ತಿಳಿಯ್ತು

ವಿರಲಿಲ್ಲ. ತಂದೆ ಗಂಭೀರವಾಗಿ ನಿಃಶ್ವಸಿಸಿ, "ಒಂದಿನ ಹೀಗಾದೀತೆಂದು ನಾ ಮೊದಲೇ ಭಾವಿಸಿದ್ದೆ. ಈಗಿನ ಕಾಲದ ಹುಡುಗ-ಹುಡುಗಿಯರು ಹಿರಿಯರ ಮಾತು ಕೇಳುವುದಿಲ್ಲ. ನಾನೊಂದು ರೀತಿಯಿಂದ ಎಲ್ಲವನ್ನೂ ಸರಿಮಾಡಿಟ್ಟಿದ್ದೆ. ಹಾಗಾಗಿದ್ದರೆ ಇಂದವಳಿಗೆ ಯಾವ ಚಿಂತೆ ಇರುತ್ತಿತ್ತು!" ಎಂದು ನುಡಿದು ಮತ್ತೆ ಉಸಿರ್ಗರೆದರು.

ಅವರ ಮಾತಿನ ಜೊತೆಜೊತೆಗೇ ತೊತ್ತು ಸಹಾನುಭೂತಿಯಿಂದ ಹೇಳಿದಳು "ಅದೇ ಎನ್ನುತ್ತೀನೆ ಬಾಬೂ, ಇಂದು ಅವರಿಗೇನು ಚಿಂತೆಯಿರುತ್ತಿತ್ತು? ಹಳ್ಳಿಗಾಡಿನಲ್ಲಿ ಇದ್ದುದೊಂದು ಹುಲ್ಲುಮನೆ— ಅದೂ ಉಳಿಯಲಿಲ್ಲ! ಅಲ್ಲದೆ ಅಳಿಯಮಹಾಶಯರಂತೂ— " ಮಾತನ್ನು ಮುಗಿಸದೆ ನಿಃಶ್ವಾಸದೊಡನೆ ಹಾರಿಸಿಬಿಟ್ಟಳು.

ಕೇದಾರಬಾಬು "ಹರೇಬರಹ" ಎಂದು ನಿಮಿಷ ನೀರವವಾಗಿದ್ದು "ಒಳ್ಳೆಯದು, ನೀ ಹೋಗು" ಎಂದು ತೊತ್ತನ್ನು ಕಳಿಸಿ ದೀಪ ಕಳೆಯುವುದಕ್ಕೆ ಆಳನ್ನು ಕೂಗಿದರು. ಅಚಲೆ ಕಳ್ಳಹೆಜ್ಜೆಯಿಂದ ತನ್ನ ಕೋಣೆಗೆ ಹೋಗಿ ಬಿದ್ದುಕೊಂಡಳು. ತಂದೆಯ ಔದಾರ್ಯ ಶಿಷ್ಟತೆಗಳ ವಿಷಯದಲ್ಲಿ ಅವಳ ಕಲ್ಪನೆ ಉಚ್ಚವಾಗಿರಲಿಲ್ಲ, ಆದರೆ ಯಃಕಶ್ಚಿತ್ ದಾಸಿಯೊಡನೆ ಗುಪ್ತಾಲೋಚನೆ ಮಾಡುವಷ್ಟು ಕೀಳಾಗಿ ಬಗೆದಿರಲಿಲ್ಲ. ತನ್ನ ಹೃದಯದಿಂದು ಕ್ಷುದ್ರವಾಗಿ ಮಣ್ಣೊಳಗೆ ಹೊರಳಾಡುತ್ತಿದೆ— ತನ್ನ ಗಂಡ, ತನ್ನ ತಂದೆ, ತನ್ನ ಗೆಳತಿ, ತನ್ನ ದಾಸಿ ಎಲ್ಲರೂ ಮಣ್ಣು ಮುಕ್ಕುತ್ತಿದ್ದಾರೆ!— ಇನ್ನು ತಾನಾರ ಅವಲಂಬನದಿಂದಲಾದರೂ ಮೇಲೇಳುವ ಆಸೆ ಅವಳಿಗುಳಿಯಲಿಲ್ಲ.

೨೨

ಕೇದಾರಬಾಬು ಹತ್ತು ಜನ ಸಾಮಾನ್ಯರಂತೆ ಗುಣದೋಷ ಎರಡೂ ಉಳ್ಳವರು. ಅಳಿಯ ಪದವೀಧರ, ಸ್ಥಿತಿವಂತ ಇರಬೇಕೆಂಬುದು ಅವರಿಚ್ಛೆ. ಹುಡುಗ ಎಂ. ಎ., ಊರೊಳಗೆ ಹೊಟ್ಟೆಬಟ್ಟೆಗೆ ಸಾಕಷ್ಟಿದೆ ಎಂದೇ ಮಹಿಮನಿಗೆ ಮಗಳನ್ನು ಕೊಡುವುದು ಸುದೈವವೆಂದು ಬಗೆದಿದ್ದರು. ಆದರೆ ಅಕಸ್ಮಾತ್ತೊಂದು ದಿನ ಧನಾಢ್ಯ ಸುರೇಶ ತಾನಾಗಿ ಬಂದು, ವಿಪರೀತ ಸಂಗತಿಯನ್ನು ತಿಳಿಸಿ, ತಾನೂ ಒಬ್ಬ ಅಳಿಯತನದ ಹುರಿಯಾಳಾಗಿ ನಿಂತುಕೊಂಡ. ಆಗ ಇಬ್ಬರು ಮಿತ್ರರ ಆರ್ಥಿಕಸ್ಥಿತಿಯನ್ನು ತೂಗಿ ನೋಡಿ

ಮಹಿಮನನ್ನು ರದ್ದುಗೊಳಿಸಲು ಬಾಬುಗಳಿಗೆ ಯಾವ ಅಡ್ಡಿಯೂ ತೋರಲಿಲ್ಲ ಅವರು ಪ್ರೇಮದ ಸೂಕ್ಷ್ಮತತ್ವಗಳನ್ನು ಅಷ್ಟೊಂದು ಗಣನೆಗೆ ತರುವವರಲ್ಲ ಮೈತುಂಬ ಆಭರಣ ಇಡಬಲ್ಲ, ಸುಖಸ್ವಚ್ಛಂದದಿಂದ ಇರಿಸಬಲ್ಲ ಗಂಡನನ್ನೇ ಹೆಣ್ಣುಮಕ್ಕಳು ಅಪೇಕ್ಷಿಸುವರೆಂದು ಅವರ ವಿಶ್ವಾಸ ಮಗಳ ಹಿತವೇ ತಂದೆಯ ಕರ್ತವ್ಯವೆಂದ ಮೇಲೆ ಸುರೇಶನನ್ನು ಆರಿಸಿಕೊಳ್ಳಲು ಹೆಚ್ಚು ವಿಚಾರ ಮಾಡಬೇಕಾಗಲಿಲ್ಲ ಇಷ್ಟೇ ಅಲ್ಲ— ಸಿರಿವಂತ ಅಳಿಯನಿಂದ ಮದುವೆಯ ಮುಂಚೆಯೇ ಸಾಲತೆಗೆದುಕೊಳ್ಳುವುದೂ ಗೌಣವೆನಿಸಲಿಲ್ಲ ಮನೆಯೇ ಅವನದಾಗುವುದರಿಂದ ಸಾಲ ತೀರಿಸುವ ಚಿಂತೆಯೂ ಬಾಧಿಸಲಿಲ್ಲ

ಆದರೆ ಹತಭಾಗಿನಿ ಮಗಳು ಎಲ್ಲ ಹಾಳುಮಾಡಿದಳು ಅವಳನ್ನು ಮಹಿಮನಿಗೇ ಕೊಡಬೇಕಾಯಿತು ಈ ದುರ್ಘಟನೆಯಿಂದ ಅವರಿಗೆ ವಿಪರೀತ ತಳಮಳವಾಯಿತು ಅಲ್ಲದೆ ಸದ್ಯದಲ್ಲಿಯೆ ಸಾಲ ತೀರಿಸುವುದಗತ್ಯವೆಂದು ತಮ್ಮಷ್ಟಕ್ಕೆ ತಾವೇ ಆದರೂ ಒಪ್ಪಿಕೊಳ್ಳಬೇಕಾಯಿತು ಆದರೆ ತೀರಿಸುವ ಹಾದಿ ಸುಗಮವಾಗಿಲ್ಲದುದರಿಂದ, ವ್ಯವಹಾರ ಬರೆಹದಲ್ಲಿ ಆಗಿದ್ದಿಲ್ಲವಾದುದರಿಂದ ಅದರ ಚಿಂತೆಯೇನು ಅಷ್ಟು ಹತ್ತಲಿಲ್ಲ

ಅಚಲೆ ಅತ್ತೆಮನೆಗೆ ಹೋದಬಳಿಕ ಸುರೇಶನ ಸಂಬಂಧ ಬಾಬುಗಳಿಗೆ ಸೇರದಾಯಿತು ಮನೆಯೊಳಗಿಲ್ಲವೆಂದು ಹೇಳಿಸಿ ದರ್ಶನ ತಪ್ಪಿಸುತ್ತಿದ್ದರು. ಆದರೆ ಅವನನ್ನು ಪ್ರೀತಿಸುತ್ತಿದ್ದುದರಿಂದ ಮಗಳ ನಡತೆಗಾಗಿ ಒಳಗೊಳಗೆ ಮಿಡುಕುತ್ತಿದ್ದರು ಹೀಗೆ ದಿನ ಕಳೆಯುತ್ತಿದ್ದಾಗ ಅವರಿಗೆ ಜಡ್ಡಾಯಿತು. ಸುರೇಶ ಬಂದು ಔಷಧ ಕೊಟ್ಟು, ಮಗನಿಗಿಂತ ಹೆಚ್ಚಾಗಿ ಶುಶ್ರೂಷೆ ಮಾಡಿ ಅವರನ್ನು ಗುಣಪಡಿಸಿದ ಅವರು ಸಾಲದ ಮಾತೆತ್ತಲು, 'ಗೆಳೆಯರಿಗೆ ಉಡುಗೊರೆಯೆಂದು ಕೊಟ್ಟಿದ್ದೇನೆ' ಎಂದು ಹಾರಿಸಿಬಿಟ್ಟ ಅಂದಿನಿಂದ ಆ ಯುವಕನಲ್ಲಿ ಅವರ ಸ್ನೇಹ ಅಗಾಧವೂ ಅಕೃತ್ರಿಮವೂ ಆಗತೊಡಗಿತು. ತಮ್ಮ ಮಗಳ ಬಗ್ಗೆ ಅವರ ಹೃದಯದಲ್ಲಿ ಅಭಿಶಾಪವೂ ಆಗಾಗ ಉತ್ಪನ್ನವಾಗುತ್ತಿತ್ತು . 'ಇಂಥ ರತ್ನವನ್ನು ವರಿಸಲಿಲ್ಲ ಅಭಾಗಿನಿ, ಇದರ ಫಲ ಒಂದಿನ ಉಂಡಾಳು!'

ಈ ಘಟನೆಯಿಂದ ಮಹಿಮ ಅವರಿಗೆ ಅಪ್ರಿಯನಾಗಿದ್ದ ಆದರೆ ತಮ್ಮ ಮಗಳು ಪತಿತ್ವಕ್ಕೆ ನೀರು ಬಿಟ್ಟು, ಪತಿತ್ಯಾಗದ ಮಹಾಪಾತಕವನ್ನು

ಹೊತ್ತುಕೊಂಡು ಮನೆಗೆ ಬಂದಾಳೆಂದು ಅವರು ಕನಸುಮನಸಿನಲ್ಲಿಯೂ ಬಗೆದಿರಲಿಲ್ಲ ಅವರ ಪಿತೃಹೃದಯ ಈ ಪಾಪಕ್ಕೆ ಸಹಾಯಕನಾದವನ— ಅವನೆಷ್ಟೇ ದೊಡ್ಡ ಮನುಷ್ಯನಿರಲೊಲ್ಲ—ವಿರುದ್ಧವಾಗಿ ಎಷ್ಟು ವಕ್ರಿಸಿರ ಬಹುದಂಬುದನ್ನು ಅನುಮಾನಿಸುವುದು ಕಠಿನವಲ್ಲ

ಅಚಲೆಯ ದೃಷ್ಟಿಯಲ್ಲಿ ಅವರು,—ಕೇವಲ ಧನದಾಸೆಗಾಗಿ ಮಹಿಮನನ್ನು ಬಿಟ್ಟು ಸುರೇಶನಿಗೆ ತನ್ನನ್ನು ಕೊಡಲು ಸಿದ್ಧರಾದ ದಿನ, ತೀರಿಸುವ ಶಕ್ತಿಯಿಲ್ಲದಿದ್ದರೂ ಅವನಲ್ಲಿ ಸಾಲ ಮಾಡಿದ ದಿನ— ಮನುಷ್ಯತ್ವದಿಂದ ತೀರ ಕೆಳಗಿಳಿದಿದ್ದರು ಮಗಳ ಚರಿತ್ರೆಯ ವಿಷಯವಾಗಿ ದಾಸಿಯೊಡನೆ ಅವರು ಸಂಕೋಚವಿಲ್ಲದೆ ಗುಪ್ತಾಲೋಚನೆ ನಡೆಸಿದಾಗಲಂತೂ ಅವಳ ಈ ಭಾವನೆ ಶತಗುಣವಾಯಿತು.

ಅಚಲೆ ತನ್ನನ್ನೂ ತಾನು ನೋಡಿಕೊಂಡಳು ಗಂಡನಿಗೆ ಬಾಯ್ಬಿಟ್ಟು ನಿಮ್ಮಲ್ಲಿ ತನಗೆ ಪ್ರೀತಿಯಿಲ್ಲವೆಂದು ಹೇಳಿದುದು ಹೆಣ್ತನದ ಮರ್ಯಾದೆಯ ಕೊಲೆ ಎಂದು ನೆನೆದಾಗ ಅವಳ ಮೈ ಜುಮ್ಮೆಂದಿತು ಅದರಿಂದ ತಾನು ಗಂಡನ ಕಣ್ಣಿಗೆ ಕೀಳು, ತಂದೆಗೆ ಕೀಳು, ದಾಸಿಗೆ ಕೀಳು, ಅದೇಕೆ, ಸುರೇಶನಂತಹ ಜನರ ದೃಷ್ಟಿಗೂ ಎಷ್ಟೋಂದು ಕೀಳು! ಆದರೂ ತಾನು ವಿಲಾಸದ ದಾಸಿಯೆಂದು ಅವಳಿಗೆನಿಸಲಿಲ್ಲ ವಾಸ್ತವವಾಗಿಯೂ ತಾನಿಷ್ಟು ಕೀಳೆ? ಅವಳಂದು ಸಮಸ್ತ ವಿರೋಧಗಳನ್ನೆದುರಿಸಿ, ಪ್ರಲೊಭನಗಳನ್ನು ಒದೆದು, ನಲ್ಮೆಯನ್ನೇ ಗೆಲಿಸಿಕೊಂಡಿದ್ದಳು ಅದೆಲ್ಲ ಈಗಿಷ್ಟರೊಳಗೇ ಮರೆತುಹೋಯಿತೇ ಅವಳಿಗೆ? ಇಲ್ಲ ತನ್ನನ್ನು ಸುರೇಶನೊಂದಿಗೆ ಕಳಿಸಿ ಕೊಟ್ಟೂ ಗಂಡನೆಂಬವ ತನ್ನ ಯೋಗಕ್ಷೇಮ ವಿಚಾರಿಸಲಿಲ್ಲವಲ್ಲ! ಈ ಔದಾಶೀನ್ಯದ ನಿಗೂಢ ಅವಮಾನ ಅವಳೆದೆಗೆ ಬೆಳತನಕ ಬರೆಕೊಡುತ್ತಿತ್ತು

ಮುಂಜಾನೆ ಎಚ್ಚತ್ತಾಗ ಹೊತ್ತೇರಿತ್ತು. ತೆರೆದ ಕಿಡಿಕಿಯಿಂದ ಬಿಸಿಲು ಒಳಗೆ ಬಂದಿತ್ತು ಅವಳೆದ್ದು ಕಿಡಿಕಿಯಲ್ಲಿ ಮುಖವಿಟ್ಟು ಕುಳಿತುಕೊಂಡಳು ರಾಜಮಾರ್ಗದಲ್ಲಿ ತೆರಪಿಲ್ಲದ ಜನಸಂದಣಿ. ಯಾರು ಕೆಲಸಕ್ಕೆ ಹೊರಟಿದ್ದಾರೆ, ಯಾರು ಮನೆಗೆ ಮರಳುತ್ತಿದ್ದಾರೆ, ಯಾರು ಇದೀಗ ಬೆಳಗಿನ ಎಳಬಿಸಿಲು ಸುಳಿಗಾಳಿಗಳಲ್ಲಿ ಅಡ್ಡಾಡಹೊರಗಿದ್ದಾರೆ. ಈ ಹೊತ್ತಿನಲ್ಲಿ ಮನೆಯೊಳಗೆ ಯಾರೂ ಕುಳಿತಿರಲಿಕ್ಕಿಲ್ಲ, ತಾನೊಬ್ಬಳೇ ಮೋರೆ ತೋರಿಸ ದಂತಹ ಪಾಪ ಮಾಡಿದ್ದೇನೆ, ತನ್ನನ್ನು ತಾನೇ ಸೆರೆಹಿಡಿದಿಟ್ಟಿದ್ದೇನೆ ಎಂದು

ಅಚಲೆಗೆನಿಸಿತು ಅಪರಾಧವನ್ನೇನಾದರೂ ಮಾಡಿದುದಿದ್ದರೆ ಅದು ಅವರ ಹತ್ತಿರ, ಅದಕ್ಕೆ ಅವರು ದಂಡಿಸಲಿ ಯಾರು ಬೇಕಾದವರು ವಿಚಾರಿಸಿದರೆ ಶಿಕ್ಷಿಸಿದರೆ ತಲೆಬಗ್ಗಿಸಿಕೊಂಡು ತಾನೇಕೆ ಸಹಿಸಬೇಕು ?

ಅಚಲೆ ಚಟ್ಟನೆದ್ದಳು ಗ್ಲಾನಿಯನ್ನೆಲ್ಲ ಕೊಡಹಿ, ಕೈಕಾಲು ಮೋರೆ ತೊಳೆದುಕೊಂಡು ಬಟ್ಟೆಗಳನ್ನು ಬದಲಿಸಿ ಕೂಡ್ರುವ ಕೋಣೆಗೆ ಹೋದಳು. ಕೇದಾರ ಬಾಬು ಪತ್ರಿಕೆ ಓದುತ್ತ ಆರಾಮ ಖುರ್ಚಿಯಲ್ಲಿ ಕುಳಿತಿದ್ದರು. ತುಸ ಹೊತ್ತಿನಲ್ಲಿ ಆಳು ಚಾದ ಕೇತ್ಲಿ ಹಾಗೂ ಉಳಿದ ವಸ್ತುಗಳನ್ನು ಮೇಜಿನ ಮೇಲೆ ಇಟ್ಟು ಹೋದ ಕೇದಾರ ಬಾಬು ಎದ್ದುಹೋಗಿ, ಒಂದು ಕಪ್ಪು ಚಾ ಮಾಡಿಕೊಂಡು, ಕಪ್ಪನ್ನು ಕೈಲಿ ಹಿಡಿದುಕೊಂಡು ಹೋಗಿ ತಿರುಗಿ ತಮ್ಮ ಸ್ಥಳದಲ್ಲಿ ಕುಳಿತರು ಅಚಲೆ ತಲೆತಗ್ಗಿಸಿಕೊಂಡು ಕುಳಿತೇ ತಂದೆ ಮಾಡುವುದನ್ನೆಲ್ಲ ನೋಡಿದಳು ನಾ ಮಾಡಿಕೊಡುವೆನೆಂದು ಮುಂದುವರಿಯುವುದಕ್ಕಾಗಲಿ, ಒಂದೇ ಒಂದು ಮಾತನಾಡುವುದಕ್ಕಾಗಲಿ ಅವಳಿಗೆ ಧೈರ್ಯವಾಗಲಿಲ್ಲ ಇಚ್ಛೆಯೂ ಆಗಲಿಲ್ಲ

ಹೀಗೆ ಇಬ್ಬರೂ ಒತ್ತಟ್ಟಿಗೇ ಎಷ್ಟು ಹೊತ್ತು ಬಾಯಿಮುಚ್ಚಿಕೊಂಡು ಕುಳಿತಿರಲಾದೀತು ? ಬಹಳ ದಿನ ಒಂದೇ ಮನೆಯೊಳಗೆ ಈ ರೀತಿ ಇವರೊಡನಿರುವುದು ಶಕ್ಯವೋ ? ಉಚಿತವೋ ? ಅಲ್ಲದಿದ್ದರೆ ಇದಕ್ಕೆ ಹಂಚಿಕೆಯೇನು ? ಇದೊಂದು ಜಟಿಲಸಮಸ್ಯೆ ಇದನ್ನು ಏಕಾಂತದಲ್ಲಿ ಯೋಚಿಸಬೇಕೆಂದು ಅವಳು ಏಳುವುದರಲ್ಲಿದ್ದಳು • ಸುರೇಶ ಕೋಣೆ ಯೊಳಗೆ ಅಡಿಯಿಡುತ್ತಲಿದ್ದುದನ್ನು ಕಂಡು ವಿಸ್ಮಿತಳಾದಳು

ಸುರೇಶ ಕೇದಾರ ಬಾಬುಗಳಿಗೆ ನಮಸ್ಕರಿಸಿದ ಅವರು ಮುಖವೆತ್ತಿ ತಲೆಹಾಕಿ ಪುನಃ ಓದತೊಡಗಿದರು ಅವನು ಚೇಯಾರೆಳೆದುಕೊಂಡು ಕುಳಿತ ಆಳು ಚಾದ ಸರಂಜಾಮ ಒಯ್ಯಲು ಬಂದ "ನನ್ನ ಬ್ಯಾಗು ಎಲ್ಲಿದೆ ? ನಮ್ಮ ಗಾಡಿಯಲ್ಲಿ ಒಯ್ದಿಡು ಕ್ಷೌರದ ಸಾಮಗ್ರಿಗಳು ಕೂಡ ಅದರಲ್ಲಿಯೇ ಇವೆ ತಡಮಾಡಬೇಡ ನಾನೀಗಲೇ ಹೊರಡಬೇಕು." ಎಂದು ಸುರೇಶ ಆಳಿಗೆ ಹೇಳಿದ. ಆಳು ಅಪ್ಪಣೆ ಎಂದು ಹೊರಟುಹೋದ. ಕೋಣೆಯಲ್ಲಿ ಮತ್ತೆ ಸ್ತಬ್ಧತೆ

"ಮಹಿಮನ ಸುದ್ದಿಯೇನಾದರೂ ?" ಕೆಲಹೊತ್ತು ಸುಮ್ಮನೆ ಕುಳಿತಿದ್ದು ಸುರೇಶ ಪ್ರಶ್ನಿಸಿದ.

" ಇಲ್ಲ " ಮುಖವೆತ್ತದೆ ಬಾಬು ಹೇಳಿದರು.

" ಆಶ್ಚರ್ಯ! "

ಮತ್ತೆ ನೀರವತೆ ಆಳು ಬಂದು ಬ್ಯಾಗನ್ನು ಗಾಡಿಯಲ್ಲಿಟ್ಟುದನ್ನು ತಿಳಿಸಿದ " ನಾ ಹೊರಡುವೆ ಹಾಗಾದರೆ ಮಹಿಮನ ಪತ್ರ ಬಂದರೆ ತಿಳಿಸಿರಿ " ಎಂದು ಸುರೇಶ ಹೊರಡಲುದ್ಯುಕ್ತನಾದ

" ಸುರೇಶ, ಸ್ವಲ್ಪ ತಡೆ, ಈಗ ಬಂದೆ " ಚಟ್ಟನೆ ಪತ್ರಿಕೆ ಬೀಸಾಡಿ ಬಾಬು ಹೇಳಿದರು ಸ್ಲೀಪರ್ ಚಟ್ ಪಟ್ ಮಾಡುತ್ತ ಅವಸರದಿಂದ ಹೊರಟುಹೋದರು, ಅವನ ಕಡೆ ನೋಡಲಿಲ್ಲ ಕೂಡ

ಈವರೆಗೆ ಅಚಲೆ ಮೋರೆ ಕೆಳಗೆ ಹಾಕಿಕೊಂಡೇ ಇದ್ದಳು ಕೇದಾರ ಬಾಬು ಹೋಗುತ್ತಲೇ ಸುರೇಶ ವಿಸ್ಮಿತನಾಗಿ ಮೇಲೆ ನೋಡಿದ ಅವನ ದೃಷ್ಟಿ ಅಚಲೆಯ ಬಾಡಿ ಬಸವಳಿದ ಕಣ್ಣುಗಳ ಮೇಲೆ ಬಿದ್ದಿತು. " ಏನಾಗಿದೆ ? " ಎಂದು ಕೇಳಿದ.

ಅವಳು ಮುಖವೆತ್ತದೆ ಗೋಣಲ್ಲಾಡಿಸಿದಳು ಮಾತ್ರ

" ನಾನೆಷ್ಟು ನೊಂದಿದ್ದೇನೆ, ಲಜ್ಜಿತನಾಗಿದ್ದೇನೆ, ಹೇಳಲಾಸಲ್ಲ. " ಎಂದ ಸುರೇಶ

ಅಚಲೆ ನೀರವವಾಗಿದ್ದಳು.

" ನಿಮ್ಮ ತಂದೆ ನನ್ನನ್ನಿಷ್ಟು ಹೀನನೆಂದು, ಪಾಷಂಡನೆಂದು ಬಗೆದಾರೆಂದು ನಾನೆಣಿಸಿರಲಿಲ್ಲ "

ಇದಕ್ಕೂ ಉತ್ತರವಿಲ್ಲ

" ನನಗಿಷ್ಟೇ ಎನಿಸುತ್ತಿದೆ ಈಗಿಂದೀಗ ಮಹಿಮನ ಹತ್ತಿರ ಹೋಗಿ ಅವನಿಗೆ—"

ಅಷ್ಟರೊಳಗೇ ಕೇದಾರ ಬಾಬು ಬಂದರು. ಕೈಯಲ್ಲಿ ಹುಂಡು ಕಾಗದವಿತ್ತು ಸುರೇಶನೆದುರು ಮೇಜಿನ ಮೇಲೆ ಅದನ್ನಿಟ್ಟು, " ಆಲಸ್ಯದಿಂದ ನಿಮ್ಮ ಹಣಕ್ಕೆ ರಸೀದಿ ಕೊಡುವುದು ಕೂಡ ಆಗಿರಲಿಲ್ಲ. ಐದು ಸಾವಿರಕ್ಕೆ ಹ್ಯಾಂಡ್‌ನೋಟ್ ಬರೆದುಕೊಟ್ಟಿದ್ದೇನೆ. ಬಡ್ಡಿ ಕೊಡುವುದಾಗಲಿಕ್ಕಿಲ್ಲ ಬಹುಶಃ ಆದರೆ ಈ ಮನೆ ಇದೆ, ಇದರಿಂದ ಗಂಟು ಮುಟ್ಟಬಹುದು " ಎಂದರು.

ಕ್ಷಣ ಹೊತ್ತು ಸ್ತಂಭಿತನಂತೆ ನಿಂತಿದ್ದು, " ನಿಮ್ಮಿಂದ ನಾನೇನು

ಹ್ಯಾಂಡ್ ನೋಟ್ ಬಯಸಿರಲಿಲ್ಲ, ಕೇದಾರ ಬಾಬೂ" ಎಂದ ಸುರೇಶ.

"ನೀ ಬಯಸಿರಲಿಲ್ಲ ಹೌದು ಆದರೆ ಕೊಡುವುದು ನನ್ನ ಕರ್ತವ್ಯ ಇಷ್ಟು ದಿನ ಬಿಟ್ಟದ್ದೇ ತಪ್ಪು. ಕಾಗದ ಜೇಬಿನಲ್ಲಿಟ್ಟುಕೋ ಸುರೇಶ ವಯಸ್ಸಾಗಿದೆ— ಅಕಸ್ಮಾತ್ ಏನಾದರೂ ಆದರೆ ಹಣಕ್ಕಾಗಿ ಗೊಂದಲವೆದ್ದೀತು"

"ಇಲ್ಲಿ ನೋಡಿರಿ ಕೇದಾರಬಾಬು, ಸುರೇಶ ಏನು ಮಾಡಿದರೂ ಹಣಕ್ಕಾಗಿ ಯಾರೊಡನೆಯೂ ಜಗಳವಾಡುವನಲ್ಲ ನನಗೆ ಹಣದ ಅಗತ್ಯವಿಲ್ಲ ಅಲ್ಲದೆ ನಾನಿದನ್ನು ಕೊಟ್ಟದ್ದು ಗೆಳೆಯನಿಗೆ ಕಾಣಿಕೆಯೆಂದು."

"ಹಾಗಿದ್ದರೆ, ಆ ಗೆಳೆಯನಿಗೇ ಕೊಡು, ನನಗೆ ಬೇಡ ನಾ ತೆಗೆದುಕೊಂಡದ್ದು ಸಾಲವಾಗಿ."

"ಒಳ್ಳೆಯದು, ಹಾಗೇ ಮಾಡುತ್ತೇನೆ" ಎಂದು ಸುರೇಶ ಮೇಜಿನ ಮೇಲಿನ ಕಾಗದ ಎತ್ತಿಕೊಂಡು ಅಚಲೆಯ ಹತ್ತಿರ ಹೋದ. ಕೇದಾರ ಬಾಬು ಗುಡುಗಿದರು "ಸುರೇಶ, ಜೋಕೆ! ನಿನ್ನೆಯಿಂದ— ಅನೇಕ ಅವಮಾನ ಸಹಿಸಿದೆ ಆದರೆ ನನ್ನೆದುರಿಗೇ ನನ್ನ ಮಗಳಿಗೆ ಹಣ ಕೊಡುವುದನ್ನು ಸಹಿಸಲಾರೆ!" ಎಂದು ನಡುಗುತ್ತ ಕುರ್ಚಿಯ ಮೇಲೆ ದೊಪ್ಪನೆ ಕುಳಿತರು

ಸುರೇಶ ಹೌಹಾರಿ ನಿಂತ ಅಚಲೆ ಕ್ಷಣದೊಳಗೆ ಕಲ್ಲಾಗಿಬಿಟ್ಟದ್ದಳು. ಅವನು ಏನೋ ಮಾತಾಡಲು ಹವಣಿಸಿದ. ಶುಷ್ಕಕಂಠದಿಂದ ಅವ್ಯಕ್ತ ಧ್ವನಿಯ ಹೊರತು ಏನೂ ಹೊರಡಲಿಲ್ಲ. ಹಿಂದಿರುಗಿ ನೋಡಿದ. ಬಾಬು ಕೈಗಳಿಂದ ಮುಖಮುಚ್ಚಿಕೊಂಡು ಹಾಗೆಯೇ ಬಿದ್ದಿದ್ದರು. ಅವನು ಮತ್ತೆ ಮಾತನಾಡಲು ಯತ್ನಿಸಲಿಲ್ಲ. ಸದ್ದುಮಾಡದೆ ಮೆಲ್ಲಮೆಲ್ಲನೆ ಅಲ್ಲಿಂದ ಹೊರಬಿದ್ದ.

ಕುದುರೆಗಳ ಖುರಪುಟಧ್ವನಿಯಿಂದ ಗಾಡಿ ಹೆಬ್ಬಾಗಿಲು ದಾಟಿದುದು ಮೇಲಿನವರಿಗೆ ತಿಳಿಯಿತು ಮರುಕ್ಷಣದಲ್ಲಿ ಆಳು "ಬಾಬೂ" ಎಂದು ಕೂಗಿದ ಬಾಬು ಕಣ್ತೆರೆದರು ಆಳಿನ ಕೈಯಲ್ಲಿ ಹರಕು ಕಾಗದವಿತ್ತು. ಹೆಚ್ಚಿಗೇನೂ ಹೇಳಬೇಕಾಗಲಿಲ್ಲ, ಕೇಳಬೇಕಾಗಲಿಲ್ಲ. ಬಾಬು ಕೈಮಾಡಿ ಗದರಿಸಿದರು. "ನಡೆ, ತಕ್ಕೊಂಡು ನಡೆ! ಸೂ—ಮಗನೆ!-"

ಒಡೆಯನ ಅವತಾರ ನೋಡಿ, ಪಾಪ, ಆಳುಮಗ ಯಃಕಶ್ಚಲಾ

ಯನ ಮಾಡಿದ. ಕೇದಾರಬಾಬು ಮಗಳ ಕಡೆ ಉರಿಗಣ್ಣು ಬಿಟ್ಟು, ಸ್ವರವನ್ನು ಇನ್ನೊಂದು ಪಾವಟಿಗೆ ಮೇಲೇರಿಸಿ ನುಡಿದರು. "ಕಳ್ಳ ಸೂಳೆಮಗ, ಭಂಡ, ಇನ್ನೊಮ್ಮೆ ಮನೆಯೊಳಗೆ ಕಾಲಿಟ್ಟರೆ ಪೋಲೀಸರಿಗೆ ಒಪ್ಪಿಸುತ್ತೇನೆ – ನಿನಗೆ ಗೊತ್ತಿರಲಿ ಅಚಲಾ!"

ಅಚಲೆ ಬಿಳುಪೇರಿದ ಮುಖವನ್ನು ಮೇಲೆತ್ತಿ ನೊಂದ ಬಾಡಿದ ಕಣ್ಣುಗಳಿಂದ ನೀರವವಾಗಿ ನೋಡತೊಡಗಿದಳು

"ಹಣ ತೂರಿ ತಂದೆಗೆ ಕಣ್ಕಟ್ಟು ಮಾಡುವುದು ಸಾಧ್ಯವಿಲ್ಲವೆಂದು ಪಾಖಂಡಿ ನೆನಪಿಡಲಿ!" ತಂದೆ ಹೇಳಿದರು.

ಮಗಳು ಈಗಲೂ ನೀರವ. ಅವಳ ಮ್ಲಾನ ನೇತ್ರಗಳು ಮಾತ್ರ ಉತ್ತರೋತ್ತರ ಪ್ರಖರವಾಗುತ್ತಲಿದ್ದವು. ತಂದೆಗದು ಗೋಚರಿಸಲಿಲ್ಲ "ಹ್ಯಾಂಡ್ ನೋಟ್ ಹರಿದೊಗೆದರೇನು? ತಂದೆಯಲ್ಲಿ ಲಂಚ ನಾಟುವುದಿಲ್ಲವೆಂದು ಅವನಿಗೆ ತೋರಿಸಿಯೇ ಬಿಡುತ್ತೇನೆ. ಮನೆ ಮಾರಿ, ರಿಣ ಹರಿದುಕೊಂಡು ಎಲ್ಲಿಯಾದರೂ ಹೋಗುತ್ತೇನೆ. ನನ್ನನ್ನು ಯಾರು ತಡೆಯುತ್ತಾರೆ, ನೋಡುತ್ತೇನೆ" ಎಂದರು

ಅಚಲೆಯೀಗ ಮಾತನಾಡಿದಳು. ಮೊದಲವಳಿಗೆ ಹಿಡಿದು ಬಿಟ್ಟಂತಾದರೂ ಕೊನೆಗೆ ಅವಿಚಲಿತ ಸ್ವರದಿಂದ ನುಡಿದಳು: "ಮನೆ ನನಗಿಟ್ಟು ರಿಣದೊಳಗೆ ಹೋಗಿರೆಂದು ನಾನೆಲ್ಲೆನ್ನುತ್ತೇನೆ ಅಪ್ಪಾ? ನೀವು ಮಾರದಿದ್ದರೆ ನಾನಾದರೂ ಮಾರಲೇ ಬೇಕು"

ಕೇದಾರಬಾಬು ಇನ್ನಷ್ಟು ಉತ್ತೇಜಿತರಾಗಿ, "ನೀವೇನು ಮಾಡಿ ಬಂದಿದ್ದೀರಲ್ಲ, ಅದರಿಂದ ನನಗೆ ನಾಲ್ಕುಮಂದಿಯೊಳಗೆ ಮೋರೆಯೆತ್ತದಂತಾಗಿದೆ, ಬಲ್ಲೆಯಾ?" ಎಂದ

ಅಚಲೆ ಅದೇ ಶಾಂತ ದೃಢಸ್ವರದಿಂದ ಮಾರುನುಡಿದಳು: "ಇಲ್ಲ, ನನಗೆ ಗೊತ್ತಿಲ್ಲ. ನೀವು ಮೋರೆಯೆತ್ತದಂಥ ಕೆಲಸ ನಾ ಮಾಡಿದ್ದರೆ, ಮೊದಲು ನನ್ನ ಮುಖವನ್ನೇ ನೀವಾರೂ ಕಾಣುತ್ತಿರಲಿಲ್ಲ. ಬಿದ್ದು ಸಾಯುವುದಕ್ಕೆ ಕೆರೆಬಾವಿಗಳ ಅಭಾವವಿಲ್ಲ— ನಿನ್ನೆಯಿಂದ ನೀವು ನನಗೆ ಮಾಡುತ್ತಿರುವ ಅವಮಾನವನ್ನು, ಅದು ಸುಳ್ಳೆಂತಲೇ ಸಹಿಸುತ್ತ ಬಂದಿದ್ದೇನೆ. ಇಲ್ಲದಿದ್ದರೆ—"

ಅಳು ಗಂಟಲ ಹಿಡಿಯಿತು. ಬಾಯಿಗೆ [illegible]ಕೊಂಡು ಅವಳು

ಅಳುವನ್ನು ನಿಗ್ರಹಿಸಿ ಅಲ್ಲಿಂದ ಕಾಲ್ದೆಗೆದಳು

ಕೋಪಿಸುವುದಕ್ಕೆ, ಅಘಾತಿಸುವುದಕ್ಕೆ, ಶೋಕಿಸುವುದಕ್ಕೆ—ಮಗಳ ನಿಂದ್ಯ ಆಚರಣೆಗಾಗಿ ವ್ಯಸನ ಪಡುವುದಕ್ಕೆ—ತಮಗೊಬ್ಬರಿಗೇ ಕಾರಣ ವುಂಟೆಂದು ಬಾಬುಗಳ ಭಾವನೆ ಇದಿರಾಳಿಯೂ ತಮ್ಮ ನಡತೆಯನ್ನು ಹೇಯವೆಂದಾಕ್ಷೇಪಿಸಿ, ಎದುರೆದುರಾಗಿ ತಿರಸ್ಕರಿಸಿ ಬಿಕ್ಕೊಂಡು ಹೋಗುವ ಳೆಂದು ಅವರು ಕನಸಿನಲ್ಲಿಯೂ ಬಗೆದಿರಲಿಲ್ಲ ಆದುದರಿಂದಲೇ ಅವರು ಕ್ಷಣಹೊತ್ತು ಸ್ತಂಭಿತರಾದರು ಬಳಿಕ ಸಾವಕಾಶವಾಗಿ ಕುಳಿತುಕೊಂಡು ತಲೆಯ ಮೇಲೆ ಕೈಯಾಡಿಸುತ್ತ ಎಂದರು "ಇದು ನೋಡಿದೆಯಾ, ಮತ್ತೊಂದು ಕಾಂಡ!"

ಮುಂದೆ ಎಂಟುಹತ್ತು ದಿನ ತಂದೆ-ಮಕ್ಕಳು ಹೇಗೆ ಕಳೆದರೆಂಬುದು ಅಂತರ್ಯಾಮಿಗೇ ಗೊತ್ತು ಅಚಲೆ ತನ್ನ ಕೋಣೆಯಿಂದ ಹೊರಬರುತ್ತಿರ ಲಿಲ್ಲ ಆಳುತೊತ್ತುಗಳಿಗೆ ಮುಖ ತೋರಿಸುವುದೂ ಅವಳಿಗೆ ಬೇಡವೆನಿಸಿತ್ತು. ಅವಳೆಂದಿನಂತೆ ಹೊತ್ತು ನೂಕಲು ಕಿಡಿಕಿಯ ಹತ್ತಿರ ಕುಳಿತು ಬೀದಿಯ ಕಡೆ ನೋಡುತ್ತಲಿದ್ದಳು

ಚಳಿಗಾಲ ಮಧ್ಯಾಹ್ನದ ಹಿಂದೆ ಹಿಂದೆಯೇ ಸಂಜೆಯ ಮ್ಲಾನ-ಚ್ಛಾಯೆ ಇಳಿದು ಬರುತ್ತಲಿದ್ದಿತು ಆ ಮ್ಲಾನತೆಗೂ ತನ್ನ ಜೀವನಕ್ಕೂ ಏನೋ ಅಜ್ಞಾತ ಸಂಬಂಧವಿರಬೇಕೆಂದು ಅವಳಿಗೆನಿಸಿ, ಅವಳ ಮನಸು ಅಲ್ಪಾಯು ಹಗಲಿನಂತೆ ನಿಃಶಬ್ದವಾಗಿ ಬಾಡುತ್ತ ಬಂದಿತು. ಹೀಗೆ ಏಕ ಭಾವದಿಂದ ನೋಡುತ್ತ ಕುಳಿತಿರಲು ತುಸು ಹೊತ್ತು ಉಳಿದಾಗ ಸುರೇಶನ ಬಂಡಿ ಬಂದುದನ್ನು ಕಂಡಳು ಎವೆ ಹಳಚುವುದರೊಳಗೇ ಅವಳ ಮುಖ ಬಣ್ಣಗೆಟ್ಟಿತು ಪುಲಿಸರನ್ನು ಕಂಡ ಕಳ್ಳನಂತೆ ಒಂದುಸಿರಿಗೆ ಓಡಿಬಂದು ಮಂಚದ ಮೇಲೆ ಬಿದ್ದುಕೊಂಡಳು

ಕೆಲಹೊತ್ತಿನಲ್ಲಿ ಅವಳ ಕೋಣೆಯ ಬಾಗಿಲನ್ನು ತಟ್ಟಿದಂತಾಯಿತು. ಹೊರಗಿನಿಂದ ಅವಳ ತಂದೆಯ ಸ್ನಿಗ್ಧಸ್ವರದ ಕರೆ· "ಅಮ್ಮಾ ಅಚಲಾ, ಎದ್ದಿದ್ದೀಯಾ?" ಮಗಳು ಸುಮ್ಮನಿರಲು ಮತ್ತಷ್ಟು ಕೋಮಲಸ್ವರ ದಿಂದ ಕೇದಾರಬಾಬು ನುಡಿದರು: "ಮೂರೂಸಂಜೆಯಾಯಿತಮ್ಮಾ, ಏಳು. ಸುರೇಶನ ಅತ್ತೆಮ್ಮ ನಿನ್ನನ್ನು ಕರೆಯಬಂದಿದ್ದಾರೆ ಮಹಿಮನಿ ಗಿಲ್ಲವೆ, ಬಹಳ ಜಡ್ಡಂತೆ."

ಅಚಲೆಯೆದ್ದು ನೀರವವಾಗಿ ಬಾಗಿಲು ತೆರೆದಳು ಸುರೇಶನ ಅತ್ತೆವ್ವ ಒಳಗೆ ಬಂದಳು. ಎಲ್ಲರ ಹಿಂದೆ ಕೇದಾರ ಬಾಬು ಬಂದು ಹಾಸಿಗೆಯ ಒಂದು ತುದಿಗೆ ಕುಳಿತರು "ನೀವಿತ್ತ ಹೊರಟುಬಂದಂದಿನಿಂದಲೂ ಮಹಿಮನಿಗೆ ವಿಪರೀತ ಜ್ವರ ಬಹುಶಃ ರಾತ್ರಿಯೆಲ್ಲ ತಂಡಿ ಬಡಿಸಿಕೊಂಡು, ಬಹಳ ದಣಿದು, ಚಿಂತಿಸಿ ಚಿಂತಿಸಿ ಹೀಗಾಗಿರಬೇಕು" ಎಂದು ಕೇದಾರ ಬಾಬು ಅತ್ತೆವ್ವನನ್ನುದ್ದೇಶಿಸಿ, "ಇವರನ್ನು ಕಳಿಸಿಕೊಟ್ಟ ಬಳಿಕ ಅವನ ಸುದ್ದಿಯೇ ಇಲ್ಲದೆ ನನಗೆ ಬಲು ಚಡಪಡಿಕೆಯಾಗಿತ್ತು ನಮ್ಮ ಸುರೇಶ ಉದ್ದಂಡ ಆಯುಷ್ಮಂತನಾಗಲಿ ಇವನು ಹೋಗಿ ಕರೆತರದಿದ್ದರೆ ಏನಾಗುತ್ತಿತ್ತೋ ಭಗವಂತನೇ ಬಲ್ಲ!" ಎನ್ನುತ್ತಿದ್ದಂತೆ ಅವರ ಕೊರಳು ಬಿಗಿಯಿತು

ಅಚಲೆ ನಿಃಶಬ್ದವಾಗಿ ನಿಂತುಕೊಂಡಿದ್ದಳು ಏನೊಂದೂ ಪ್ರಶ್ನಿಸ ಲಿಲ್ಲ, ಒಂದಿಷ್ಟೂ ಚಾಂಚಲ್ಯ ತೋರಲಿಲ್ಲ ಅತ್ತೆವ್ವ ಅವಳ ಹೆಗಲ ಮೇಲೆ ಕೈಯಿಟ್ಟು ಶಾಂತ ಮೃದುಸ್ವರದಿಂದ ಎಂದಳು "ಏನೂ ಭಯ ವಿಲ್ಲವಮ್ಮಾ, ಎರಡು ದಿನಗಳಲ್ಲಿ ವಾಸಿಯಾಗುವುದು"

ಅಚಲೆ ಏನೂ ಮಾತಾಡಲಿಲ್ಲ ಬಗ್ಗಿ ಅತ್ತೆವ್ವನಿಗೆ ನಮಸ್ಕರಿಸಿ, ತಂತಿಯ ಮೇಲಿನ ಬಟ್ಟೆಗಳನ್ನೆಳೆದುಕೊಂಡು ಹೊರಡಲನುವಾದಳು

೨೪

ಹೆಂಡತಿಯಾಗಿಯೂ ಮಹಿಮನ ದುಃಖ ಚಿಂತೆಗಳಲ್ಲಿ ಪಾಲುಗಾರ್ತಿ ಯಾಗುವುದು ತನಗಶಕ್ಯವಾದುದು ಅಚಲೆಯ ಕ್ಷೋಭಕ್ಕೆ ಕಾರಣವಾಗಿತ್ತು. ದುಃಖ-ಚಿಂತೆಯೆಲ್ಲ ಕೃಪಣನ ನಿಧಿಯಂತೆ ಅವನ ಹೃದಯದ ಗುಪ್ತಸ್ಥಳ ದಲ್ಲಿ ಸುರಕ್ಷಿತವಾಗಿತ್ತು—ದುಃಖ ದುಃಸಮಯಗಳಲ್ಲಿ ಸಹಭಾಗಿ ಆಗುವುದು ಹೇಗೆ? ಅವನ ಕೊರತೆಯೇನು, ವ್ಯಥೆಯೇನು ಎಂಬುದು ಕೂಡ ಯಾರಿಗೂ ತಿಳಿಯದು.

ಮನೆಯ ಬೂದಿ ರಾಸಿಯನ್ನು ನೋಡಿ ಮಹಿಮನ ಹೃದಯಕ್ಕೆ ವಜ್ರಾಘಾತವೇನೋ ಆಯಿತು. ಆದರೆ ಅವನ ಮುಖಭಾವದಲ್ಲಿ ಅಚಲೆ ಅದನ್ನರಿಯಲಾರದೆ ಹೋದಳು. ಮೃಣಾಲಳ ವೈಧವ್ಯದಿಂದ ಮಹಿಮನಿ ಗಾದ ದುಃಖದ ನೆಲೆಯೂ ಅವಳಿಗೆ ಹತ್ತಲಿಲ್ಲ 'ನನ್ನಲ್ಲಿ ನಿನ್ನ ಪ್ರೀತಿ ಯಿಲ್ಲ' ಎಂದು ತಾನು ಬಾಯ್ಬಿಟ್ಟು ಹೇಳಿದಾಗ ಅವನೆದೆಗೆ ಎಂತಹ

ಗಾಯವಾಗಿರಬಹುದೆಂಬುದೂ ತಿಳಿಯಲಿಲ್ಲ ಆದರೆ ಯಾವ ದುರ್ಘಟನೆಯಲ್ಲಿಯೂ ಪತಿ ನಿರ್ವಿಕಾರ ಉದಾಸೀನನಾಗಿರುವುದು ಯಥಾರ್ಥ ಸತ್ಯವೋ ಎಂದು ಸಂದೇಹಗೊಳ್ಳದಷ್ಟು ಆಕೆ ಮರುಳಲ್ಲ ಆದುದರಿಂದಲೇ ನಿಲ್ದಾಣದಲ್ಲಿ ಅವನ ಅವಿಚಲಿತಶಾಂತ ಮುಖಮಂಡಲವನ್ನು ಕಂಡು ಅವಳು ದಾರಿಯುದ್ದಕ್ಕೂ 'ಈ ಸಹಿಷ್ಣುತೆಯ ಸುಳ್ಳು ಮುಸುಕಿನೊಳಗಿನ ಸತ್ಯಮುದ್ರೆ ಎಂತಹದಿದೆಯೋ ಯಾರಿಗೆ ಗೊತ್ತು!' ಎಂದು ಯೋಚಿಸುತ್ತಲಿದ್ದಳು.

ಇಂದು ಮಹಿಮನ ಜಡ್ಡಿಗೆ ಲಘು-ಸ್ವಾಭಾವಿಕ ಸ್ವರೂಪ ಕೊಡುವ ಉದ್ದೇಶದಿಂದ ಕೇದಾರಬಾಬು ಸಹಜಸ್ವರದಿಂದ ಇದರಲ್ಲೇನೂ ಆಶ್ಚರ್ಯವಿಲ್ಲವೆಂದೂ ಆ ದುರ್ಘಟನೆಯ ತರುವಾಯ ಹಾಗೇನಾದರೂ ಆದೀತೆಂದು ತಮಗೆನಿಸಿತ್ತೆಂದೂ ಹೇಳಿದಾಗ ಅಚಲೆಯ ಹೃದಯದಲ್ಲಿ ಏನೋ ಒಂದು ತರಹ ಆಯಿತು ಆದರದಕ್ಕೆ ಶುದ್ಧ ಉತ್ಕಂಠೆಯೆನ್ನಲು ಬರಲಾರದು.

ರಬರ್ ಟಾಯರಿನ ಗಾಡಿ ಭರದಿಂದ ನಡೆದಿತ್ತು ಅತ್ತೆವ್ವ ಅಚಲೆ ಇಬ್ಬರೂ ನೀರವವಾಗಿ ಕುಳಿತಿದ್ದರು ಕೇದಾರಬಾಬು ಬೀದಿಯ ಕಡೆ ಶೂನ್ಯದೃಷ್ಟಿಯಿಂದ ನೋಡುತ್ತ ತೆರಪಿಲ್ಲದೆ ಬಡಬಡಿಸುತ್ತಿದ್ದರು 'ಸುರೇಶನಂಥ ದಯಾಳು, ಬುದ್ಧಿವಂತ, ವಿಚಕ್ಷಣ ಹುಡುಗರು ಈ ಭೂಮಿಯ ಮೇಲೇ ಇಲ್ಲ, ಮಹಿಮನ ಹಟಮಾರಿತನಕ್ಕೆ ಅವನು ವಿರಕ್ತನಾಗಿದ್ದಾನೆ; ಮನುಷ್ಯರಿಲ್ಲದ, ಡಾಕ್ತರ್-ವೈದ್ಯರಿಲ್ಲದ, ಕಳ್ಳರು ಕಾಕರಿಗೆ ನಾಯಿನರಿಗಳಿಗೆ ನೆಲೆವೀಡಾದ ಕುಗ್ರಾಮವನ್ನು ಸೇರುವ ಪ್ರಸಂಗ ಅವನಿಗೆ ಒಂದಿಲ್ಲೊಂದು ದಿನ ಬರುವುದು!' ಹೀಗೆ ಯದ್ವಾತದ್ವಾ ಅಭಿಪ್ರಾಯಗಳನ್ನು ಆ ನಿಶ್ಚೇಷ್ಟಿತ ರಮಣಿಯರ ಕಿವಿಯಲ್ಲಿ ಅವಿರತವಾಗಿ ತುಂಬುತ್ತಲಿದ್ದರು

ಇದಕ್ಕೆ ಕಾರಣವಿತ್ತು ಕೇದಾರರು ಹುಟ್ಟಾ ಅಷ್ಟೊಂದು ಶೀತಳ ಪ್ರಕೃತಿಯವರಲ್ಲ ಇಂದವರ ಹೃದಯದಲ್ಲಿಯ ಗೂಢ ಆನಂದ ಅಸಗೊಳ್ಳದಾಗಿತ್ತು ಪರಮ ಮಿತ್ರನೊಡನೆ ಪ್ರಕಟವಾಗಿಯೇ ಜಗಳ, ಏಕಮಾತ್ರ ಪುತ್ರಿಯ ನಿಶ್ಶಬ್ದವಾದ ವಿಪ್ಲವ, ಎಲ್ಲಕ್ಕಿಂತ ಮಿಗಿಲಾಗಿ ಅತ್ಯಂತ ಕುತ್ಸಿತ ನಿಂದ್ಯ ಸಂಶಯ—ಇವೆಲ್ಲವೂ ಈಗ ಕೆಲದಿನಗಳಿಂದ ಅವರೆದೆಯ ಮೇಲೆ ಬಂಡೆಗಲ್ಲಾಗಿ ಕೂತಿದ್ದವು ಅತ್ತೆವ್ವನ ಆಕಸ್ಮಿಕ ಆಗಮನದಿಂದ ಅದು ಒಮ್ಮೆಲೆ ಇಳಿದಂತಾಯಿತು ಮಹಿಮನ ಜಡ್ಡು ಅವರಿಗಷ್ಟು ಮಹತ್ವದ್ದಾಗಿರಲಿಲ್ಲ ಥಂಡಿಯಿಂದ ಸ್ವಲ್ಪ ಜ್ವರ ಬಂದಿದ್ದರೆ ಅದೇನು ಮಹಾ, ಎರಡು

ಮೂರು ದಿನಗಳಲ್ಲಿ ನೆಟ್ಟಗಾಗುವುದೆಂದು ಅತ್ತೆವ್ವನೂ ಹೇಳಿದ್ದಾಳೆ, ಒಂದು ವೇಳೆ ಅಷ್ಟು ದಿನ ಕೂಡ ಹೋಗಲಿಕ್ಕಿಲ್ಲ, ನಾಳೆಗೇ ಗುಣವಾಗಬಹುದು—ಎಂದೇ ಅವರ ಎಣಿಕೆ ಆದರೆ ವಸ್ತುಸ್ಥಿತಿಯೆಂದರೆ, ಸುರೇಶ ಸ್ವಯಂ ಹೋಗಿ ಅವನನ್ನು ತಮ್ಮ ಮನೆಗೆ ಕರೆತಂದಿದ್ದಾನೆ, ಏನಾದರೂ ಸೇವದಿಂದ ಅವನ ಹೆಂಡತಿಯನ್ನು ಅವನ ಪಕ್ಕದಲ್ಲಿ ಒಯ್ದು ಕುಳ್ಳಿರಿಸಲೆಂದು ಅತ್ತೆವ್ವನನ್ನು ಕೂಡ ಕಳಿಸಿದ್ದಾನೆ, ಮಗಳು-ಅಳಿಯರ ನಡುವೆ ಮನಃಕ್ಲೇಶ ಅಡ್ಡ ನಿಂತಿದೆಯೆಂದು ದಾಸಿಯಿಂದಲೂ ತಿಳಿದಿದೆ, ಎಂದಮೇಲೆ ಇದೆಲ್ಲವೂ ಆ ದಾಂಪತ್ಯಕಲಹದ ಫಲವೆಂದು ಸ್ಪಷ್ಟವಾದಂತಾಯಿತು "ತಾವು ಹೋಗಿ ಆ ನಿರ್ದುಷ್ಟ ಸಭ್ಯ ಯುವಕನ ಮುಖವನ್ನು ನೋಡುವುದೆಂತು?' ಎಂದವರಿಗೆ ಆ ಬಡಬಡಿಕೆಯಲ್ಲಿಯೂ ಎನಿಸುತ್ತಿತ್ತು ಅವರ ಮಗಳ ಶರೀರವನ್ನೆಲ್ಲ ಕಠೋರ ನೀರವತೆ ಆಕ್ರಮಿಸಿತ್ತು ಜಡ್ಡೇನು ಅಂತಹ ವಿಶೇಷವಲ್ಲವೆಂದು ಅವಳೂ ತಿಳಿದಿದ್ದಳು ಸುರೇಶ ಅವನನ್ನು ಹೇಗೆ ಕರೆದುಕೊಂಡು ಬಂದನೆಂಬುದೇ ತಿಳಿಯದಾಗಿತ್ತು .

ಸುರೇಶನ ಮನೆಯಂಗಳದಲ್ಲಿ ಎರಡು ಗಾಡಿಗಳು ನಿಂತಿದ್ದವು. ಸುರೇಶ ಒಬ್ಬ ಆಂಗ್ಲೇಯನನ್ನು ಆದರಪೂರ್ವಕವಾಗಿ ಗಾಡಿ ಹತ್ತಿಸುತ್ತಿದ್ದ. ಪಕ್ಕದಲ್ಲಿ ಸಾಹೇಬೀ ಉಡುಪಿನ ಬಂಗಾಲಿಯೊಬ್ಬ ನಿಂತಿದ್ದ. ಅವರು ಡಾಕ್ಟರರೆಂದು ತಂದೆ ಮಗಳಿಬ್ಬರೂ ತಿಳಿದುಕೊಂಡರು.

ಅವರು ಹೊರಟುಹೋದ ಬಳಿಕ ಇವರ ಗಾಡಿ ವರಾಂಡಕ್ಕೆ ತಗಲಿ ನಿಂತಿತು "ಮಹಿಮ ಹೇಗಿದ್ದಾನೆ, ಸುರೇಶ? ಏನು ಜಡ್ಡು?" ಚೀತ್ಕಾರಸ್ವರದಿಂದ ಕೇದಾರಬಾಬು ಕೇಳಿದರು

"ನೆಟ್ಟಗಿದ್ದಾನೆ, ಬರ್ರಿ"

"ಏನು ಜಡ್ಡು?" ಮತ್ತಷ್ಟು ವ್ಯಗ್ರಸ್ವರದಿಂದ ಬಾಬು ಕೇಳಿದರು.

"ಜಡ್ಡಿನ ಹೆಸರು ಹೇಳಿದರೆ ನಿಮಗೇನೂ ತಿಳಿಯದು ಜ್ವರ, ಎದೆಯಲ್ಲಿ ಸ್ವಲ್ಪ ತಂಡಿ ಸೇರಿದೆ ಅಲ್ಲಾ, ನೀವಿಳಿದುಬರ್ರಿ, ಅವರನ್ನು ಇಳಿಯಗೊಡಿರಿ."

ಇಳಿಯಲು ಯತ್ನಿಸದೆ ಅವರೆಂದರು: "ಸ್ವಲ್ಪ ತಂಡಿ ಸೇರಿದ್ದರೆ ನಿನ್ನಿಂದಲೇ ಚಿಕಿತ್ಸೆಯಾಗುತ್ತಿತ್ತು ನಾನೇನು ಮಗುವಲ್ಲ ಸುರೇಶ, ಇಬ್ಬರು ಡಾಕ್ತರರೇತಕ್ಕೆ? ಸಾಹೇಬ ಡಾಕ್ತರರು ಏಕೆ ಬೇಕಾಗಿತ್ತು?"

ಸುರೇಶ ಅವರನ್ನು ಕೈಹಿಡಿದಿಳಿಸಿಕೊಂಡು ನುಡಿದ "ಅತ್ತೆಮ್ಮ, ಅಚಲೆಯನ್ನು ಒಳಗೆ ಕರೆದುಕೊಂಡು ಹೋಗು. ನಾ ಬಂದೆ"

ಅಚಲೆ ಯಾರನ್ನೇನೂ ಕೇಳಲಿಲ್ಲ. ಕತ್ತಲೊಳಗೆ ಅವಳ ಮುಖವೂ ಯಾರಿಗೂ ಕಾಣಲಿಲ್ಲ ಗಾಡಿಯಿಂದಿಳಿಯುವಾಗ ಅವಳ ಕಾಲು ನಡುಗಿದುದೂ ಯಾರ ಲಕ್ಷ್ಯಕ್ಕೂ ಬರಲಿಲ್ಲ ಅವಳು ನಿಃಶಬ್ದವಾಗಿ ಅತ್ತೆಮ್ಮನ ಹಿಂದೆ ಹಿಂದೆ ನಡೆದಳು

ಅಚಲೆ ಬಾಗಿಲ ತೆರೆಯನ್ನು ಸರಿಸಿ ಕೋಣೆಯನ್ನು ಪ್ರವೇಶಿಸಿದಾಗ ಮಹಿನು ತಮ್ಮ ಮನೆಯ ವಿಷಯವನ್ನೇ ಮಾತನಾಡುತ್ತಿದ್ದ ಕಿವಿಗೆ ಬಿದ್ದ ಒಂದೆರಡು ಮಾತುಗಳಿಂದಲೇ ಅದು ಅರ್ಥವಿಲ್ಲದ ಬಡಬಡಿಕೆ ಯೆಂಬುದೂ ಬೇನೆ ಯಾವ ಮಟ್ಟದಲ್ಲಿದೆಯೆಂಬುದೂ ಅವಳಿಗೆ ತಿಳಿಯಿತು. ಕ್ಷಣಕಾಲ ಅವಳು ಗೋಡೆಯ ಆಸರಹೊಂದಿ ಸಾವರಿಸಿಕೊಂಡಳು.

ರೋಗಿಯ ತಲೆದಿಂಬುದಿಸೆಯಲ್ಲಿ ಕುಳಿತು ಬರ್ಫದ ಪಟ್ಟಿಹಾಕುತ್ತಿದ್ದ ಹೆಂಗುಸು, ಎದ್ದು ಬಂದು ಅಚಲೆಗೆ ನಮಸ್ಕರಿಸಿ ನಿಂತುಕೊಂಡಳು ವೈಧವ್ಯದ ವೇಷ ಕತ್ತಿನತನಕ ಕತ್ತರಿಸಿದ ಕೂದಲು ಸಮಸ್ತ ವೈರಾಗ್ಯವೂ ಅವಳ ಮುಖದಲ್ಲಿ ನಿಬಿಡವಾಗಿ ನಿಂತಿದೆ ದೀಪದ ಮಸಕು ಬೆಳಕಿನಲ್ಲಿ ಅವಳನ್ನು ಮೃಣಾಲಳೆಂದು ಅಚಲೆಗೆ ಗುರುತಿಸಲಾಗಲಿಲ್ಲ. ಇದಿರುಬದಿರು ಇಬ್ಬರೂ ಸ್ತಂಭಿತರಾಗಿ ನಿಂತರು ಅಚಲೆಯ ದೇಹ ಸಾದ್ಯಂತವೂ ನವಿರದ್ದು ನಡುಗಿತು ಮಾತನಾಡಲು ತುಟಿಗಳೂ ಅಲುಗಿ ಹವು ಮರುಕ್ಷಣವೇ ಎಚ್ಚರುಧಪ್ಪಿ ಮುರಿದ ಬಳ್ಳಿಯಂತೆ ಮೃಣಾಲಳ ಅಡಿಯಲ್ಲಿ ಬಿದ್ದಳು

ಅಚಲೆ ಎಚ್ಚತ್ತು ನೋಡಿದಾಗ ತಾನು ತಂದೆಯ ತೊಡೆಯಮೇಲೆ ತಲೆಯಿಟ್ಟು ಮಲಗಿದ್ದಾಳೆ, ದಾಸಿಯೊಬ್ಬಳು ಗುಲಾಬದಾನಿಯಿಂದ ತನ್ನ ಮುಖಕ್ಕೆ ಕಣ್ಣಿಗೆ ನೀರು ಚಿಮುಕಿಸುತ್ತಿದ್ದಾಳೆ; ಸುರೇಶ ಮೆಲ್ಲನೆ ಗಾಳಿ ಹಾಕುತ್ತಿದ್ದಾನೆ ವಿಷಯವೇನೆಂಬುದನ್ನು ಸ್ಮರಿಸಿಕೊಳ್ಳಲು ಅವಳಿಗೆ ಸ್ವಲ್ಪ ಹೊತ್ತು ತಗಲಿತು ಅದು ಗೊತ್ತಾದೊಡನೆ ನಾಚಿಕೆಸಾವಾಗಿ ಏಳಲು ಹವಣಿಸಿದಳು "ಸ್ವಲ್ಪ ವಿಶ್ರಮಿಸಮ್ಮಾ, ಈಗ ಏಳುವ ಅಗತ್ಯ ವಿಲ್ಲ" ಎಂದರು ಕೇದಾರಬಾಬು

"ಇರಲಪ್ಪಾ, ನಾನು ನೆಟ್ಟಗಿದ್ದೇನೆ" ಮೃದುಕಂಠದಿಂದ ನುಡಿದು

ಅಚಲೆ ಪುನಃ ಏಳಲು ಯತ್ನಿಸಿದಳು. ತಂದೆ ಅವಳನ್ನು ಗಟ್ಟಿಯಾಗಿ ಹಿಡಿದು, "ಈಗ ಏಳುವುದೇನು ಅಗತ್ಯವಿಲ್ಲ ಅಚಲಾ ಒಂದಿಷ್ಟು ನಿದ್ದೆ ಮಾಡಲು ಯತ್ನಿಸು," ಎಂದರು.

ಸುರೇಶನೂ ಅಸ್ಫುಟ ಸ್ವರದಲ್ಲಿ ಆ ಮಾತನ್ನು ಅನುಮೋದಿಸಿದ. ಅಚಲೆ ಸುಮ್ಮನೆ ಅವನ ಕಡೆಗೊಮ್ಮೆ ನೋಡಿ, ತಂದೆಯ ಕೈಗಳನ್ನು ಕಿತ್ತೊಗೆದು ಚಟ್ಟನೆದ್ದು ನಿಂತುಕೊಂಡಳು "ನಿದ್ದೆ ಮಾಡಲಿಕ್ಕೆ ಬಂದಿಲ್ಲ ಅಪ್ಪಾ ಇಲ್ಲಿಗೆ— ನನಗೇನೂ ಆಗಿಲ್ಲ ನಾ ಆ ಕೋಣೆಗೆ ಹೋಗುವೆ" ಎಂದು ನುಡಿದು ಉತ್ತರಕ್ಕಾಗಿ ಕಾಯದೆ ಹೊರಟುಹೋದಳು

ಆ ಕೋಣೆಗೆ ಹೋಗುತ್ತಲೆ ಮೃಣಾಲ ಅಚಲೆಗೆ ಹೇಳಿದಳು "ನೀನಿಲ್ಲಿ ಸ್ವಲ್ಪ ಕೂತುಕೋ ಅತ್ತಿಗೆ, ನಾ ಅಕ್ಕಿಕ ತೀರಿಸಿಕೊಳ್ಳುವೆ ಬರಫದ ಪಟ್ಟಿ ಜಾರಿಹೋದೀತು, ನೋಡುತ್ತಿರು"

೨೪

ಕಠಿನ ನಿಮೋನಿಯಾ ಬೇನೆ ನೆಟ್ಟಗಾಗುವುದಕ್ಕೆ ಸಮಯ ಬೇಕು ಮಹಿಮ ಸಾವಕಾಶವಾಗಿ ಆರೋಗ್ಯದ ಹಾದಿ ನಡೆದಿದ್ದ ಅರ್ಥವಿಲ್ಲದ ಬಡಬಡಿಕೆ, ಉದ್ಭ್ರಾಂತ ದೃಷ್ಟಿ ಎಲ್ಲವೂ ಶಾಂತವಾಗುತ್ತ ಸ್ವಾಭಾವಿಕವಾಗುತ್ತ ನಡೆದಿತ್ತು ಇನ್ನು ಭಯವಿಲ್ಲವೆಂದು ಎಲ್ಲರಿಗೂ ಮನವರಿಕೆಯಾಯಿತು.

ಹತ್ತು ಹನ್ನೆರಡು ದಿನಗಳ ತರುವಾಯ ಒಂದಿನ ಮಹಿಮ ಶಾಂತವಾಗಿ ನಿದ್ರಿಸಿದ್ದ ಆ ವರ್ಷ ಎಲ್ಲ ಕಡೆಗೂ ಚಳಿ ಚೆನ್ನಾಗಿಯೇ ಬಿದ್ದಿತ್ತು ಅದರಲ್ಲಿ ಅದೇ ಆಗ ಒಂದು ಸೆಳಕು ಮಳೆ ಬಂದು ನಿಂತಿತ್ತು ರೋಗಿಯ ಮಂಚಕ್ಕೆ ಹೊಂದಿದ್ದ ಹಲಗೆಯ ಮೇಲೆ ಎಲ್ಲರೂ ಕುಳಿತಿದ್ದರು , ಇಲ್ಲದವರೆಂದರೆ ಕೆಲಸದಲ್ಲಿ ತೊಡಗಿದ್ದ ಅತ್ತೆಮ್ಮ, ಇನ್ನೂ ಮನೆಯಿಂದ ಬಂದಿರದ ಕೇದಾರಬಾಬು. ಎಲ್ಲರ ಮುಖ-ನಯನಗಳಲ್ಲಿ ನಿರುದ್ವಿಗ್ನ ತೃಪ್ತಿಯ ಕಳೆ.

ಮೃಣಾಲ ಸುರೇಶನ ಕಡೆ ನೋಡಿ ಕೈಮುಗಿದೆಂದಳು "ಇನ್ನು ನನಗೆ ಅಪ್ಪಣೆ ಕೊಡಿರಿ ಸುರೇಶಬಾಬೂ, ನಾ ಊರಿಗೆ ಹೋಗಬೇಕು ಈ ಕೆಟ್ಟ ಚಳಿಯೊಳಗೆ ನಮ್ಮ ಮುದುಕಿ ಉಳಿದಿದೆಯೋ ಸೆಟೆದೇ ಹೋಗಿದೆಯೊ!"

"ಇನ್ನೂ ಬದುಕಿ ಅವರು ಮಾಡುವುದಾದರೂ ಏನು? ದೇಡ, ಅವರಿಗಾಗಿ ನೀವು ಹೋಗುವುದಗತ್ಯವಿಲ್ಲ!"

ಮೃಣಾಲ ನಿಮಿಷಮಾತ್ರ ಮುಖ ಹೊರಳಿಸಿದಳು—ಬಹುಶಃ ದೀರ್ಘ

ನಿಃಶ್ವಾಸವನ್ನು ಹತ್ತಿಟ್ಟಿರಬೇಕು ಬಳಿಕ ಈಕಡೆ ತಿರುಗಿ ನಕ್ಕು ನುಡಿದಳು: "ನೀವೊಬ್ಬರೇ ಅಲ್ಲ ಸುರೇಶಬಾಬೂ, ಈ ಪ್ರಶ್ನೆಯನ್ನು ನಾನೂ ಹಿಂದಕ್ಕೆ ಅನೇಕ ಸಾರಿ ಕೇಳಿದ್ದೇನೆ ಇವರು ಹೋಗುವುದೇ ಲೇಸು ಎಂದೆನಿಸುತ್ತಿದೆ. ಆದರೆ ಅಳಿವು-ಉಳಿವುಗಳ ಒಡೆಯನಿಗೆ ಇದರ ಪರಿವೆಯೇ ಇಲ್ಲ ಇದ್ದಿದ್ದರೆ ಮನುಷ್ಯ ಅನೇಕ ಕಷ್ಟದುಃಖಗಳ ಕೈಯಿಂದ ಉಳಿದುಕೊಳ್ಳುತ್ತಿದ್ದ"

ಮೃಣಾಲಳ ಮಾತಿನಿಂದ ಬಹುಶಃ ಆಕೆಯ ಗಂಡನ ಮೃತ್ಯುವಿನ ನೆನಪಾಗಿ ಅಚಲೆಯೆಂದಳು "ನೂರಾರು ದುಃಖಗಳೊದಗಿದರೂ ಮನುಷ್ಯ ಸಾಯಲಿಚ್ಛಿಸುವುದಿಲ್ಲವೆಂಬುದನ್ನು ಅಂತರ್ಯಾಮಿ ಬಲ್ಲ"

ಗುಪ್ತವೇದನೆ ಮೃಣಾಲಳ ಮುಖದಲ್ಲಿ ಮೂಡಿತು ಗೋಣಲ್ಲಾಡಿಸಿ ಅವಳೆಂದಳು "ಅಲ್ಲ ಅತ್ತಿಗೆ, ಹಾಗಲ್ಲ ಮನುಷ್ಯ ನಿಜವಾಗಿಯೂ ಸಾವನ್ನಪೇಕ್ಷಿಸುವ ಸಂದರ್ಭಗಳೂ ಉಂಟು ಒಂದಿನ ರಾತ್ರಿ ಪಕ್ಕನೆ ಎಚ್ಚರಾಯಿತು ಅತ್ತೆಯವರು ಹಾಸಿಗೆಯಲ್ಲಿ ಕಾಣಲಿಲ್ಲ ಎದ್ದು ನೋಡಿದೆ ದೇವರ ಕೋಣೆಯ ಬಾಗಿಲು ಅರೆತೆರೆದಿತ್ತು ಸದ್ದುಮಾಡದೆ ಹತ್ತಿರ ಹೋಗಿ ನಿಂತೆ ಅವರು ದೇವರಿಗೆ ಕೈಮುಗಿದು ಸೆರಗೊಡ್ಡಿ ಸಾವು ಬೇಡುತ್ತಿದ್ದರು 'ದೇವರೇ, ನಾ ಒಂದಿನವಾದರೂ ಕಾಯಾವಾಚಾ ಮನಸಾ ನಿನ್ನ ಸೇವೆ ಮಾಡಿದ್ದಿದ್ದರೆ ಇಂದು ನನ್ನ ಲಜ್ಜೆ ಕಾಯಿ ನನಗೆ ಮುಕ್ತಿ ಬೇಕಿಲ್ಲ, ಸ್ವರ್ಗ ಬೇಕಿಲ್ಲ ನನ್ನನ್ನಿನ್ನು ನಾಚಿಕೆಗೀಡು ಮಾಡಬೇಡ ನಾನಿನ್ನು ಸೊಸೆಮುದ್ದಿಗೆ ಮೋರೆ ತೋರಲಾರೆ' ಎಂದು ಬೇಡಿಕೊಳ್ಳುತ್ತಿದ್ದರು" ಮಾತಾಡುತ್ತಾಡುತ್ತಿರಲಿಕ್ಕೆ ಮೃಣಾಲಳ ಕಣ್ಣು ಝುರಝುರ ಕಂಬನಿಗರೆದವು

ಈ ಪ್ರಾರ್ಥನೆಯಲ್ಲಿ ಮಾತೃಹೃದಯದ ಎಷ್ಟು ಗಭೀರ ವೇದನೆ ತುಂಬಿತ್ತೆಂಬುದನ್ನರಿಯಲು ಯಾರಿಗೂ ವಿಲಂಬವಾಗಲಿಲ್ಲ ಸುರೇಶನ ಕಣ್ಣುಗಳೆರಡೂ ನೀರುದುಂಬಿದವು ಮಗನನ್ನು ಕಳೆದುಕೊಂಡ ಆ ಮುದುಕಿಯ ಕರುಣಕಥೆಯಿಂದ ಅವನ ಹೃದಯದಲ್ಲಿ ಬಿರುಗಾಳಿಯೆದ್ದಿತು ಅವನು ಕೆಲಹೊತ್ತು ನೆಲ ನೋಡುತ್ತಿದ್ದು, ಬಳಿಕ ಮುಖವೆತ್ತಿ ಗದ್ಗದ ಕಂಠದಿಂದ ನುಡಿದ. "ಒಳ್ಳೆಯದು, ಹೋಗಿರಕ್ಕ. ನಿಮ್ಮ ಮುದುಕ ಅತ್ತೆಯ ಸೇವೆಯ ಕರ್ತವ್ಯ ನೆರವೇರಿಸಿರಿ. ನಾನಿನ್ನು ನಿಮ್ಮನ್ನು ತಡೆಯುವುದಿಲ್ಲ. ಈ ಹತಭಾಗ್ಯ ದೇಶದಲ್ಲಿ ಗೌರವಾರ್ಹವಾದದ್ದೇನಾದರೂ ಇದ್ದರೆ ನಿಮ್ಮಂತಹ

ಹೆಣ್ಮಕ್ಕಳೇ ಸರಿ. ಇಂಥ ವಸ್ತು ಮತ್ತಾವ ದೇಶದಲ್ಲಿಯೂ ಇರಲಿಕ್ಕಿಲ್ಲ!” ಎಂದು ಅವನು ಜಿಜ್ಞಾಸು ದೃಷ್ಟಿಯಿಂದ ಅಚಲೆಯ ಕಡೆ ನೋಡಿದ. ಆದರವಳು ಹೊರಗಿನ ಮಾಸಲುಬಣ್ಣದ ತುಂಡು ಮೋಡವನ್ನು ದಿಟ್ಟಿಸುತ್ತಿದ್ದುದರಿಂದ ಮಾತನಾಡಲಿಲ್ಲ.

ಈ ಸ್ತುತಿಯಿಂದ ಮೃಣಾಲಳಿಗೆ ನಾಚಿಕೆಯಾದಂತಾಯಿತು. ಮಾತಿನ ದಿಕ್ಕು ಬದಲಿಸುವುದಕ್ಕಾಗಿ ಅವಳು ಗಟ್ಟಿಯಾಗಿ ನಕ್ಕು ಎಂದಳು: “ಇಲ್ಲವೆ? ಇರದೆ ಏನು ನೀವು ಎಲ್ಲ ದೇಶ ಬಲ್ಲಿರೋ? ನೀವು ಅಣ್ಣನಿಗಿಂತ ಹಿರಿಯರೋ ಚಿಕ್ಕವರೋ?”

“ಅದೇತಕ್ಕೆ ನಿಮಗೆ?”

“ಬೇಡ, ನನಗಿನ್ನು ‘ನೀವು’ ಎನ್ನಬೇಡಿರಿ. ವಯಸ್ಸಿನಿಂದ ಚಿಕ್ಕವಳಾದುದರಿಂದ ನೀವು ನನಗೆ ಹಿರಿಯಣ್ಣನೋ ಕಿರಿಯಣ್ಣನೋ? ಏನು, ಮುಂಚೆ ಹೇಳಿರಿ.”

ಅಚಲೆ ಈಗ ಮೋಡದ ಮೇಲಿನ ದೃಷ್ಟಿ ಈಕಡೆ ತಿರುಗಿಸಿದಳು. ಕೆಲ ದಿನಗಳ ಹಿಂದೆ ಇದೇ ಹುಡುಗಿ ತನ್ನೊಡನೆ ‘ಅತ್ತಿಗೆ’ಯ ಸಂಬಂಧ ಹಚ್ಚಿಕೊಂಡುದು ಅವಳಿಗೆ ನೆನಪಾಯಿತು. ಆದರೆ ಸುರೇಶನಿಗೆ ಅವಳ ಸ್ವಭಾವದ ಪರಿಚಯವಿರಲಿಲ್ಲ. ಕೌತುಕದಿಂದ ಅವನು “ಚಿಕ್ಕಣ್ಣ, ಚಿಕ್ಕಣ್ಣ. ನಿಮ್ಮ ಹಿರಿಯಣ್ಣನಿಗಿಂತ ಸುಮಾರು ಒಂದುವರೆ ವರ್ಷಕ್ಕೆ ಚಿಕ್ಕವ” ಎಂದು ನಕ್ಕ.

“ಚಿಕ್ಕಣ್ಣಾ, ಒಂದು ಆಳು ಗೊತ್ತುಮಾಡಿಕೊಡಿರಿ. ನಾಳೆ ಮುಂಜಾನೆಯ ಗಾಡಿಗೆ ನನ್ನನ್ನು ಕೂಡ್ರಿಸಿ ಬರಲಿ.”

ಹೋಗಲೊಪ್ಪಿಗೆ ಕೊಟ್ಟರೂ ನಾಳೆಯೇ ಹೋಗುತ್ತಾಳೆಂದು ಸುರೇಶ ಬಗೆದಿರಲಿಲ್ಲ. ತುಸ ಸುಮ್ಮನಿದ್ದು ಗಂಭೀರನಾಗಿ ನುಡಿದ: “ಇನ್ನೆರಡು ದಿನವೂ ನಿಲ್ಲಲಾಗುವುದಿಲ್ಲವೇ ತಂಗಿ? ನಿನ್ನ ಮೇಲೆ ಭಾರಹಾಕಿ ಮಹಿಮನ ಬಗ್ಗೆ ನಾವು ಪೂರಾ ನಿಶ್ಚಿಂತರಾಗಿದ್ದೆವು. ಹೀಗೆ ಹಗಲಿರುಳೂ ಜಾಗ್ರ ಜೋಕೆಗಳಿಂದ ಸೇವೆಮಾಡುವುದನ್ನು ಆಸ್ಪತ್ರೆಯಲ್ಲಿಯೂ ಕಾಣೆ ಬಿಡು. ಹೌದಲ್ಲವೋ ಅಚಲಾ?”

ಪ್ರತ್ಯುತ್ತರವಾಗಿ ಅಚಲೆ ತಲೆದೂಗಿದಳು ಮಾತ್ರ. ಸುರೇಶನ ಚಿಂತಿತ ಮುಖ ನೋಡಿ ಮೃಣಾಲ ನಗೆಮೊಗದಿಂದ ನುಡಿದಳು: “ನೀವದರ

ಚಿಂತೆ ಎಷ್ಟೂ ಮಾಡಬೇಡಿರಿ. ಯಾರ ವಸ್ತುವೋ ಅವರಿಗೆ ಒಪ್ಪಿಸಿ ಹೋಗುತ್ತಿದ್ದೇನೆ ಇಲ್ಲದಿದ್ದರೇನು ನಾ ಹೋಗುತ್ತಿರಲಿಲ್ಲ ನಾವು ಒಮ್ಮಿಂದೊಮ್ಮೆಲೆ ಹೇಗೆ ಹೊರಟುಬಂದೆವೆಂಬುದು ನಿಮಗೆ ಗೊತ್ತೇ ಇದೆ. ಏನೂ ವ್ಯವಸ್ಥೆಮಾಡಿ ಬಂದಿಲ್ಲ. ನಾಳೆ ಅಪ್ಪಣೆ ಕೊಡಿರಿ ಚಿಕ್ಕಣ್ಣ. ಮತ್ತೆ ಯಾವಾಗ ಕರೆಸುತ್ತೀರಿ, ಆವಾಗ ಬರುತ್ತೇನೆ "

ಮತ್ತೆ ಕೆಲ ಹೊತ್ತು ಮೌನವಾಗಿದ್ದು ಸುರೇಶ ಪಕ್ಕನೆ ನುಡಿದ · "ಒಳ್ಳೆಯದು ಮೃಣಾಲ, ಆ ಹಳ್ಳಿಗಾಡಿನಲ್ಲಿ ಕೇವಲ ಮುದುಕ ಅತ್ತೆಯ ಸೇವೆಯಲ್ಲಿ, ಪೂಜೆ ಆಹ್ನಿಕಗಳಲ್ಲಿ ನಿನಗೆ ಹೇಗೆ ಹೊತ್ತು ಹೋಗುವುದೆಂಬುದೇ ಯೋಚನೆ "

ಮೃಣಾಲಳ ಮುಖದಲ್ಲಿ ಮತ್ತೆ ವ್ಯಥೆಯ ಚಿಹ್ನ ಕಾಣಿಸಿಕೊಂಡಿತು. ಆದರೆ ನಗುತ್ತ ಅವಳೆಂದಳು: "ಹೊತ್ತುಹೋಗುವ ಹೊಣೆ ನನ್ನ ಮೇಲಿಲ್ಲ ಚಿಕ್ಕಣ್ಣ ಹೊತ್ತನ್ನು ಮಾಡಿದವನೇ ಅದು ಹೋಗುವಂತೆಯೂ ಮಾಡುವ "

"ಸರಿ, ಆಯಿತು ಆದರೆ ನಿಮ್ಮತ್ತೆಯೇನೂ ಹೆಚ್ಚು ದಿನ ಬದುಕಿರ ಲಿಕ್ಕಿಲ್ಲ, ಡಾಕ್ಟರರ ಅಭಿಪ್ರಾಯದಂತೆ ಮಹಿಮನೂ ಪಶ್ಚಿಮದ ಆರೋಗ್ಯ ಕರ ಸ್ಥಳಕ್ಕೆ ಕೆಲಕಾಲ ಹೋಗಬೇಕಾಗುವುದು, ಆಗ ನೀನಲ್ಲಿ ಒಬ್ಬಳೇ ಹೇಗಿದ್ದೀ?" ಎಂದ ಸುರೇಶ

ಮೃಣಾಲ ಮೋರೆ ಮೇಲೆ ಮಾಡಿ ನಗುತ್ತ "ಅದೂ ಅವನಿಗೇ ಗೊತ್ತು" ಎಂದಳು

ಸುರೇಶನ ಮುಖದಿಂದ ತಿಳಿಯದಂತೆಯೆ ಒಂದು ನಿಟ್ಟುಸಿರು ಹೊರಟಿತು "ಚಿಕ್ಕಣ್ಣ ಇದನ್ನೆಲ್ಲ ಒಪ್ಪುವುದಿಲ್ಲ ಕಾಣುತ್ತದೆ" ಎಂದಳು ಮೃಣಾಲ

"ಏನೆಲ್ಲ?"

"ಇದೇ ಈ ದೇವರು—"

"ಇಲ್ಲ."

"ಅಂತೆಯೇ ನಮಗಾಗಿ ಈ ನಿಟ್ಟುಸಿರಲ್ಲವೆ?"

ಸುರೇಶ ಇದಕ್ಕೆ ತಟ್ಟನೆ ಉತ್ತರ ಕೊಡಲಿಲ್ಲ ಕೆಲ ಹೊತ್ತು ವಿಮನಸ್ಕನಂತೆ ಅವಳ ಮುಖ ನೋಡುತ್ತಿದ್ದು "ಇಲ್ಲ ಮೃಣಾಲ,

ಹಾಗಲ್ಲ ಅಜ್ಞಾತನಾದ ಕ್ಷತ್ರಿಯನ ಭಾರವನ್ನು ಅಷ್ಟೇ ಅಜ್ಞಾತನಾದ ಈಶ್ವರನ ಮೇಲೆ ಹಾಕಿದವರೂ ಎಷ್ಟೋ ಜನ ನನಗಿಂತಲೂ ಹೆಚ್ಚು ಗೆಲುವಿನ ಹಾದಿ ಹಿಡಿದದ್ದನ್ನು ನೋಡಿದ್ದೇನೆ ಆದರೆ ಇರಲಿ ಅದೆಲ್ಲ, ತಂಗಿ, ಅದರಿಂದ ನಿನ್ನ ಬಗ್ಗೆ ನನಗೆ ಜುಗುಪ್ಸೆಯುಂಟಾಗಬಹುದು ”

ಮೃಣಾಲ ಬಡಕ್ಕನೆ ಮುಂದೆ ಸುರೇಶನ ಪಾದ ಮುಟ್ಟಿ, ಪದಧೂಳಿ ತೆಗೆದುಕೊಂಡು ಎಂದಳು : “ ಒಳ್ಳೆಯದು, ಇರಲಿ ಬಿಡು ”

ಸುರೇಶ ಅವಾಕ್ಕಾಗಿ, “ ಇದೇನಿದು ಮತ್ತೆ ಮೃಣಾಲ ? ” ಎಂದ

“ ಏನು ಚಿಕ್ಕಣ್ಣ ! ”

“ ಮಾತಿಲ್ಲ ಕತೆಯಿಲ್ಲ, ಒಮ್ಮೆಲೆ ಪದಧೂಳಿ ಕೊಳ್ಳುವುದೆ ? ”

“ ಅಣ್ಣನ ಪದಧೂಳಿ ಕೊಳ್ಳಲು ದಿನ ಮುಹೂರ್ತ ನೋಡಬೇಕೆ ? ” ಎಂದು ನಕ್ಕು ಮೃಣಾಲ ಹೊರಟಳು.

“ ಚೆಲೋ ಹುಡುಗಿ ! ” ಎಂದು ಸಸ್ನೇಹ ಹಾಸ್ಯದೊಡನೆ ಅಚಲೆಯ ಕಡೆ ನೋಡಿ ಬೆರಗು ಬೆಪ್ಪಾದ ಶ್ರಾವಣದ ಆಕಾಶದಂತೆ ಅವಳ ಮುಖ ಮೇಘಾಚ್ಛನ್ನವಾಗಿತ್ತು ಅವನು ಸಾವರಿಸಿಕೊಂಡು ಏನಾದರೂ ಕೇಳಬೇಕೆಂಬಷ್ಟರೊಳಗೇ, ನಿರ್ಬುದ್ಧನಾದ ಸುರೇಶನಿಗೆ ಆಲೋಚಿಸಲು ಪೂರ್ಣ ಅವಕಾಶವೊದಗಿಸಿ ಅಚಲೆ ತ್ವರಿತಗತಿಯಿಂದ ಮೃಣಾಲಳ ಒಡನೊಡನೆಯೇ ಹೋಗಿಬಿಟ್ಟಳು

ಮೃಣಾಲಳ ನಮಸ್ಕಾರಕ್ಕೂ ಇವಳಿಗೂ ಅದೇನು ಸಂಬಂಧವೆಂದು ಸುರೇಶ ನಿಂತಲ್ಲಿಯೇ ಯೋಚಿಸತೊಡಗಿದ ಅವಳೇಕೆ ಪಾದ ಮುಟ್ಟಿ ನಮಿಸಿದಳು ? ಇವಳೇಕೆ ಎವೆ ಹಳಚುವುದೊರಳಗೆ ಕಳೆಗುಂದಿ ಹೊರಟು ಹೋದಳು ? ಇವೆರಡಕ್ಕೂ ಸಂಬಂಧ ಎಲ್ಲಿದೆ ? ತನ್ನ ನಡತೆ, ಮಾತು ಒಂದೊಂದನ್ನು ನೆನೆಸಿಕೊಂಡು ಯೋಚಿಸಿದ ನೆಲೆ ತಿಳಿಯಲಿಲ್ಲ ಆದರೆ ಇಂತಹ ಎರಡು ಮಹಾಘಟನೆಗಳು ಒಂದರಹಿಂದೊಂದು ಸುಮ್ಮನೆ ನಡೆಯಲಾರವೆಂದು ಬಗೆದ ಈ ಅನರ್ಥಕ್ಕೆ ತನ್ನ ಯಾವುದೋ ನಿಂದ್ಯ ಆಚರಣವೇ ಕಾರಣವಾಗಿರಬೇಕೆಂಬ ಶಂಕೆ ಅವನೆದೆಯಲ್ಲಿ ಚುಚ್ಚತೊಡಗಿತು

ರಾತ್ರಿಯನ್ನು ಹೇಗೋ ಕಳೆದು, ಪ್ರಭಾತದಲ್ಲಿ ಅಚಲೆಯನ್ನು ಏಕಾಂತದಲ್ಲಿ ಕಂಡು, “ ನಿನ್ನನ್ನೊಂದು ಮಾತು ಕೇಳಬೇಕಾಗಿದೆ ” ಎಂದ ಸುರೇಶ.

ಕಳೆದ ರಾತ್ರಿಯ ತನ್ನ ವಿಲಕ್ಷಣ ನಡತೆಯ ಬಗ್ಗೆ ಹೇಳಿಕೆ ಒಪ್ಪಿಸ ಬೇಕಾಗಿದೆಯೆಂಬುದನ್ನು ಭಾವಿಸಿ ಅಚಲೆ ನಾಚಿಕೊಂಡಳು ಅವಳ ಮುಖ ಕೆಂಪಾಯಿತು. ನಕ್ಕು "ಏನು ?" ಎಂದು ಕೇಳಿದಳು

"ನಿನ್ನೆ ಮೃಣಾಲ ಒಮ್ಮೆಲೆ ನನ್ನ ಪಾದಧೂಳಿಕೊಂಡು ಹೋದಳು, ನೀನೂ ಸಿಟ್ಟುಸಿಟ್ಟಿಲಿ ಮೋರೆ ಗಂಟು ಹಾಕಿಕೊಂಡು ಹೊರಟು ಹೋದೆ ಇದೇನು ನಾ ಅವಳ ಅತ್ತೆಯ ಸಾವಿನ ಮಾತಾಡಿದ್ದಕ್ಕೇ ?"

ಪ್ರಶ್ನೆಯೊಳಗೇ ಮಾತನಾಡಲು ಹಾದಿ ಸಿಕ್ಕಂತಾಗಿ ಅಚಲೆ ಹಿಗ್ಗಿದಳು "ನೀವಂಥ ಮಾತಾಡಬೇಕೆ ? ಪಾಪ, ಮೊದಲೇ ಗಂಡನನ್ನು ಕಳೆದುಕೊಂಡಿದ್ದಾಳೆ, ಅತ್ತೆಯೂ ಸತ್ತುಹೋದರೆ! ಅವಳೆಂಥ ನಿರ್ಗತಿಕ ಳಾಗುವಳು ನೋಡಿರಿ"

"ನನ್ನದು ದೊಡ್ಡ ತಪ್ಪಾಯಿತು. ಆದರೆ ಅವರು ಬಹಳ ದಿನ ಬದುಕುವುದಿಲ್ಲವೆಂಬುದು ಮೃಣಾಲಳಿಗೂ ಗೊತ್ತಿದೆ ಅಲ್ಲದೆ ಅವಳೇಕೆ ನಿರ್ಗತಿಕಳಾಗುವಳು ?"

"ಈ ಧೈರ್ಯ ಅವಳಿಗೆ ನಾವು ಒಮ್ಮೆಯೂ ಹೇಳಿಲ್ಲ ಇಷ್ಟೇ ಅಲ್ಲ. ನೀವಂತೂ ಅವಳನ್ನು ತಿರುತಿರುಗಿ 'ಒಬ್ಬಳೇ ಹೇಗಿರುತ್ತೀ' ಎಂದಂಜಿಸುತ್ತೀರಿ"

"ಹಾಗಾದರೆ ಅವಳು ಹೋಗುವ ಪೂರ್ವದಲ್ಲಿ ಅವಳಿಗೆ ನಾ ಧೈರ್ಯ ಹೇಳುವುದು ಉಚಿತವಲ್ಲವೆ? ಅವಳೇನೂ ಅಂಜಬೇಕಾಗಿಲ್ಲವೆಂಬುದನ್ನು—" ಮಾತನಾಡುತಿದ್ದಂತೆ ಅಕೃತ್ರಿಮ ಕರುಣೆಯಿಂದ ಸುರೇಶನ ಕೊರಳು ಕಟ್ಟಿತು

ಪರದುಃಖಕಾತರನಾದ ಆ ಸಹೃದಯ ಯುವಕನ ಹಲವು ಕತೆಗಳು ಅಚಲೆಗೆ ನೆನಪಾದವು "ಉಂಹೂ, ನೀವು ಧೈರ್ಯಹೇಳುವ ಅಗತ್ಯವೂ ಇಲ್ಲ, ಅಂಜಿಸುವ ಅಗತ್ಯವೂ ಇಲ್ಲ ಅಂಥ ಹೊತ್ತಿನಲ್ಲಿ ನಾನೇನು ಸುಮ್ಮನಿರುವುದಿಲ್ಲ" ಎಂದಳು.

ಸುರೇಶ ಆವೇಗದ ಮೈಚುರಿವಿನಲ್ಲಿ ಒಮ್ಮೆಲೆ ಅವಳ ಕೈಹಿಡಿದು ಕುಲುಕಿ, "ನೀ ಯೋಗ್ಯ ಹೇಳಿದೆ ಅಚಲಾ! ನಾ ಬಯಸಿದ್ದು ಇದೇ ನಿನ್ನಿಂದ" ಎಂದವನೇ ಅಪರಿಮಿತ ಲಜ್ಜೆಯಿಂದ ಕೈಬಿಟ್ಟು ಉಸಿರುಬಿಡದೆ ಓಡಬಟ್ಟ.

ಕ್ಷಣದ ಹಿಂದೆ ಪರಾರ್ಥದ ನಿರ್ಮಲ ಆನಂದದಲ್ಲಿ ಹುಟ್ಟಿದ ಅವನ ಆವೇಗ, ಇಷ್ಟರೊಳಗೇ ಲಜ್ಜಿತಪಲಾಯನದಲ್ಲಿ ಕಲುಷಿತವಾಗಿ ಸಂಯಮ ತಪ್ಪಿ ಹೊರಬಿದ್ದಿತು ಅಚಲೆಯ ಎದೆಯ ನೆತ್ತರು ಮಿಂಚಿನ ವೇಗದಿಂದ ಮೇಲಕ್ಕೆ ಹರಿದು ಹಣೆಯಲ್ಲಿ ಹನಿಹನಿಯಾಗಿ ಹೊರಸೂಸಿತು ಮೈ ಮತ್ತೆ ಮತ್ತೆ ನವಿರೆದ್ದಿತು ಹತ್ತಿರದ ಕುರ್ಚಿಯಲ್ಲಿ ಅಚೇತನಳಂತೆ ಕುಳಿತುಬಿಟ್ಟಳು ಕೆಲ ಹೊತ್ತಿನಲ್ಲಿ ಅವಳೀಸ್ಥಿತಿಯೇನೋ ದೂರವಾಯಿತು. ಆದರೆ ಜಡ್ಡಿನ ಗಂಡನ ಹತ್ತಿರ ಕುಳಿತಿರುವುದಕ್ಕೆ ಅಂದಿನ ಬೆಳತನಕ ಏನೋ ಹೆದರಿಕೆಯಾದಂತಾಗುತ್ತಿತ್ತು

ಹೋಗಬೇಕು ಹೋಗಬೇಕು ಎನ್ನುತ್ತ ಎರಡು ದಿನ ಕಳೆದವು. ಮೂರನೆಯ ದಿನ ಹೋಗುವ ಮುಂದೆ ಮೃಣಾಲ ಮಹಿಮನಿಗೆ ಹೇಳ ಹೋದಳು. ಅವನಂದು ಅಕಾಲದಲ್ಲಿಯೇ ಮಗ್ಗುಲಾಗಿ ಮಲಗಿ ನಿದ್ದೆಹೋಗಿದ್ದ ಅದು ಕಳ್ಳನಿದ್ದೆಯೆಂದು ಅವಳಿಗೆನಿಸಿತು "ಈಗಿವರನ್ನು ಎಬ್ಬಿಸುವ ಅಗತ್ಯವಿಲ್ಲ ಅಲ್ಲವೆ ಅತ್ತಿಗೆ?" ಎಂದಳು ಮೆಲ್ಲಗೆ.

ಪ್ರತ್ಯುತ್ತರವಾಗಿ ಅಚಲೆಯ ತುಟಿಗೊನೆಯಲ್ಲಿ ಓರೆನಗೆ ಮೂಡಿತು ಅಷ್ಟೆ ಈ ಛಲ ತನ್ನ ಹೊರತು ಇನ್ನೊಬ್ಬ ಹೆಂಗುಸಿಗೂ ಗೊತ್ತಾಗಿದೆ ಎಂದು ಭಾವಿಸಿಕೊಂಡಳು ತನ್ನ ವಿರುದ್ಧ ಅಚಲೆಯ ಮನಸಿನೊಳಗೆ ಗುಪ್ತ ಈರ್ಷೆಯಿದೆಯೆಂಬುದು, ಮಹಿಮನಿಂದ ಕೊಂಚವೂ ತಿಳಿಯದಿದ್ದರೂ ಮೃಣಾಲಳಿಗೆ ಗೊತ್ತಾಗಿತ್ತು ಈ ತೀರ ಅಕಾರಣವಾದ ದ್ವೇಷ ಅವಳಿಗೆ ಮುಳ್ಳಿನಂತೆ ಚುಚ್ಚುತ್ತಲಿತ್ತು. ಆದರೆ ತನ್ನ ಹೀನತೆಯ ಮೂಲಕ, ಈಗಲೂ ಆ ಜಡ್ಡಿನವನ ಪವಿತ್ರ ದೌರ್ಬಲ್ಯವನ್ನು ಅಚಲೆ ವಿಕೃತವಾಗಿ ಕಂಡಾಳೆಂದು ಅವಳು ಬಗೆದಿರಲಿಲ್ಲ ಅವಳ ಮನಸಿನಲ್ಲಿ ತಳಮಳವಾಯಿತು ಅದನ್ನು ಹತ್ತಿಟ್ಟು ಕಿವಿಯಲ್ಲಿ ಹೇಳಿದಳು "ನೀ ಎಲ್ಲ ಬಲ್ಲೆ ಅತ್ತಿಗೆ, ನನ್ನ ಪರವಾಗಿ ಇವರಲ್ಲಿ ಕ್ಷಮೆ ಕೇಳು ಇವರು ನೆಟ್ಟಗಾಗಿ ಊರಿಗೆ ತಿರುಗಿಬಂದಾಗ, ನಾ ಇದ್ದರೆ ಭೆಟ್ಟಿಯಾಗುವುದೆಂದು ಹೇಳು"

ಕೇದಾರಬಾಬು ಕೆಳಗಿದ್ದರು. ಮೃಣಾಲ ನಮಸ್ಕರಿಸಿದಳು ಅವರ ಕಣ್ಣಲ್ಲಿ ನೀರು ಬಂತು ಈ ಅಲ್ಪಕಾಲದಲ್ಲಿಯೇ ಎಲ್ಲರಿಗೂ ಆದಂತೆ ಅವರಿಗೂ ಅವಳಲ್ಲಿ ಪ್ರೀತಿಯುಂಟಾಗಿತ್ತು. ಅಂಗಿಯ ತೋಳಿನಿಂದ

ಕಣ್ಣೊರಸಿಕೊಂಡು ನುಡಿದರು “ತಂಗೀ, ನಿನ್ನ ಕಲ್ಯಾಣದಿಂದಲೇ ಮಹಿಮನನ್ನು ಯಮನ ದವಡೆಯಿಂದ ತಿರುಗಿ ಪಡೆದೆವು ನಿನಗಿಷ್ಟ ಬಂದಾಗ, ಅಡ್ಡಾಡಲು ಅನುಕೂಲವಾದಾಗ ನಿನ್ನ ಈ ಮುಪ್ಪಿನ ಮಗನನ್ನು ಮರೆಯಬೇಡಮ್ಮಾ, ನಮ್ಮ ಮನೆ ನಿನಗಾಗಿ ಯಾವಾಗಲೂ ತೆರೆದಿರುವುದು”

ಆ ದೂರದಲ್ಲಿ ನಿಂತಿದ್ದ ಅಚಲೆಯನ್ನು ತೋರಿಸುತ್ತ ನಗೆಮೊಗದಿಂದ ಮೃಣಾಲ ಹೇಳಿದಳು “ಈಕೆಯ ಕೈಯಿಂದ ಅಣ್ಣಯ್ಯನನ್ನು ಸೆಳೆದೊಯ್ಯುವುದು ಯಮನ ಅಪ್ಪನಿಗಾದರೂ ಸಾಧ್ಯವೆ? ಅತ್ತಿಗೆಯ ಕೈಗೊಪ್ಪಿಸಿದಾಗಲೇ ನನ್ನ ಕೆಲಸ ಮುಗಿದುಹೋಗಿದೆ”

ಬಾಬುಗಳ ಮುಖ ಸ್ವಲ್ಪ ಗಂಭೀರವಾಯಿತು ಆದರವರು ಮಾತನಾಡಲಿಲ್ಲ ವಯಸ್ಸಾದ ಇಬ್ಬರು ಆಳು, ಒಬ್ಬ ದಾಸಿಗಳೊಡನೆ ಕುದುರೆ ಗಾಡಿ ಹತ್ತಿ ಮೃಣಾಲ ಹೊರಟು ಹೋದಳು ಕೇದಾರಬಾಬುಗಳ ಅಂತರಂಗದೊಳಗಿಂದ ದೀರ್ಘಶ್ವಾಸವೊಂದು ಹೊರಬಿದ್ದಿತು ‘ಅದ್ಭುತ ಅಪೂರ್ವ ಹುಡುಗಿ’ ಎಂದು ಸಾವಕಾಶವಾಗಿ ಅವರು ಉದ್ಗಾರ ತೆಗೆದರು.

ಸುರೇಶನ ಮನಸಿನಲ್ಲಿಯೂ ಬಹುಶಃ ಇದೇ ಭಾವನೆ ತುಂಬಿತ್ತು. ಅವನು ಯಾವ ಕಡೆಗೂ ಲಕ್ಷ್ಯವಿಲ್ಲದೆ ಅನುಮೋದಿಸಿದ “ಇಂಥವರನ್ನು ನಾನೆಂದೂ ನೋಡಲಿಲ್ಲ ಕೇದಾರಬಾಬೂ! ಇಂಥ ಸವಿಮಾತನ್ನೂ ಕೇಳಿಲ್ಲ, ಇಂಥ ಕಾರ್ಯನೈಪುಣ್ಯವನ್ನೂ ನೋಡಿಲ್ಲ ಬೇಕಾದ ಕೆಲಸ ಒಪ್ಪಿಸಿರಿ, ಹುಟ್ಟಾ ಅದನ್ನೇ ಮಾಡುತ್ತಲಿದ್ದಾಳೇನೋ ಎಂಬಂತೆ ಮಾಡುವಳು. ಹಳ್ಳಿಬಿಟ್ಟು ಎಂದೂ ಹೊರಬಿದ್ದವಳಲ್ಲ ನೋಡಿದರೆ!”

ಕೇದಾರಬಾಬು ಏನೋ ಯೋಚಿಸುತ್ತಿದ್ದು ಒಮ್ಮೆಲೆ ನುಡಿದರು “ಈ ಹುಡುಗಿ ಸ್ತ್ರೀಜಾತಿಯಲ್ಲಿ ಒಂದು ಅಮೂಲ್ಯ ರತ್ನ! ಇಂಥವಳನ್ನು ಆಜೀವನವೂ ಹೀಗೆ ಜೀವನ್ಮೃತಳನ್ನಾಗಿರಿಸುವುದು ಪಾಪ, ಮಹಾಪಾಪ! ಈಕೆ ನನ್ನ ಮಗಳಾಗಿದ್ದರೆ ನಾನೇನು ಸುಮ್ಮನೆ ಕೂಡುತ್ತಿರಲಿಲ್ಲ”

“ಏನು ಮಾಡುತ್ತಿದ್ದಿರಿ?” ಸುರೇಶ ವಿಸ್ಮಯಗೊಂಡು ಕೇಳಿದ

ಉದ್ದೀಪ್ತ ಸ್ವರದಿಂದ ವೃದ್ಧ ಹೇಳಿದರು “ಮತ್ತೆ ಮದುವೆ ಮಾಡುತ್ತಿದ್ದೆ ಒಬ್ಬ ಮುದುಕನಿಗೆ ಕೊಟ್ಟು, ೧೯–೨೦ ವಯಸ್ಸಿನೊಳಗೇ ಅವಳನ್ನು ಸಂನ್ಯಾಸಿನಿಯನ್ನಾಗಿ ಮಾಡಿದವರು ಅವಳ ಮಿತ್ರರಲ್ಲ, ಶತ್ರು. ಶತ್ರುಗಳ ಕಾರ್ಯವನ್ನು ನಾನೆಂದಿಗೂ ನ್ಯಾಯಸಮ್ಮತವೆಂದು ಒಪ್ಪುವ

ದಿಲ್ಲ!" ಎಂದು ಸ್ವಲ್ಪ ಸುಮ್ಮನಿದ್ದು ಮತ್ತೆ ಮುಂದುವರಿಸಿದರು "ಅದು ಬಿಡು ಸುರೇಶ, ಅವಳ ಗಂಡನ ರೀತಿ ತೆಗೆದುಕೋ. ಒಬ್ಬರಲ್ಲ ಇಬ್ಬರು ಹೆಂಡಿರು ಸತ್ತಮೇಲೆ ಐವತ್ತನೆಯ ವಯಸ್ಸಿನಲ್ಲಿ ಈ ಹುಡುಗಿಯನ್ನು ಮಾಡಿಕೊಂಡನಲ್ಲ—ಪಾಷಂಡಿ ತನ್ನ ಸುಖ-ಸೌಕರ್ಯ ನೋಡಿಕೊಂಡನೇ ವಿನಾ ಈಕೆಯ ಭವಿಷ್ಯತ್ತನ್ನು ನೆನೆದನೆ?"

ಸುರೇಶ ನಿರುತ್ತರ ಅದರಿಂದ ವೃದ್ಧ ಮತ್ತಷ್ಟು ಉತ್ತೇಜಿತರಾದರು. "ಇಲ್ಲ ಸುರೇಶ, ವಿಧವಾವಿವಾಹದ ಒಳಿತು ಕೆಡಕುಗಳ ವಿಮರ್ಶೆಗೆ ನಾ ಹೊರಟಿಲ್ಲ ಅದರೆ ಇದ್ದ ವ್ಯವಸ್ಥೆಯೇ ಹಾಲುಗಲ್ಲದ ಹುಡುಗಿಗೆ ಅಂತಿಮ ಶ್ರೇಯವೆಂದು ನಾ ಒಪ್ಪುವುದಿಲ್ಲ ಏತರ ಮೋರೆಯನ್ನಾದರೂ ನೋಡಿ ದಿನ ನೂಕೇನೆಂದರೆ ಇವಳಿಗೆ ಏನೇನೂ ಇಲ್ಲ. 'ಬ್ರಹ್ಮಚರ್ಯ ಬ್ರಹ್ಮಚರ್ಯ' ಎಂದು ಬೊಬ್ಬೆಕುಟ್ಟಿದಾಕ್ಷಣ, ಇಡೀ ಜಗತ್ತು ಬೆಳಗಾಗುವುದರೊಳಗೇ ಋಷಿಗಳ ತಪೋವನವಾಗಲಿಕ್ಕೆ ಜೀವನವೊಂದು ಆಟವೆ? ಹುಡುಗಿಯ ವೇಷ ನೋಡಿದರೇ ನನ್ನೆದೆ ಬಿರಿಯುವುದು!"

ಸುರೇಶ ಉತ್ತರ ಕೊಡಲಿಲ್ಲ. ಮೊಗವೆತ್ತಿಯೂ ನೋಡಲಿಲ್ಲ!

ಮೃಣಾಲ ಹೋದ ಬಳಿಕ, ಸುರೇಶ ವಿಮನಸ್ಕನಾಗಿರುವಂತೆ, ಏನೋ ದುಃಖದಿಂದ ಅವನ ಮುಖ ಒಣಗುತ್ತಿರುವಂತೆ ಅಚಲೆಗೆನಿಸಿತು ಎರಡು ದಿನಗಳ ತರುವಾಯ ಒಂದಿನ ಅಪರಾಹ್ನದ ಉರಿಹೊತ್ತಿನಲ್ಲಿ ವರಾಂಡದಲ್ಲಿ ಆರಾಮಕುರ್ಚಿಯಲ್ಲಿ ಯಾವುದೋ ಪುಸ್ತಕ ಓದುತ್ತ ಕುಳಿತಿದ್ದ. ಹೆಜ್ಜೆಯ ಸದ್ದಿಗೆ ಮುಖವೆತ್ತಿ ನೋಡಿದ. ಅವನಿಗಾಗಿ ಅಚಲೆ ಚಾ ತರುತ್ತಿದ್ದಳು. ಈ ರೀತಿ ಹಿಂದೆಂದೂ ಆಗಿರಲಿಲ್ಲ. ಸುರೇಶ ಅಚ್ಚರಿಗೊಂಡು ಎದ್ದು ನೀಟಾಗಿ ಕುಳಿತ. "ಏಕೆ ನೀನು! ಆಳು ಎಲ್ಲಿ?" ಎಂದು ಕೇಳಿದ.

ಅಚಲೆ ಉತ್ತರಕೊಡದೆ ಅಡ್ಡಣಿಗೆಯೊಂದನ್ನು ಹತ್ತಿರ ಎಳೆದು, ಚಾದ ಬಟ್ಟಲನ್ನು ಅದರ ಮೇಲಿಟ್ಟಳು. ಒಂದು ಚೌಕಿಯನ್ನೆಳೆದುಕೊಂಡು ಕುಳಿತಳು ಅವಳೀ ಅಭಿನವ ಆಚರಣದಿಂದ ಮತ್ತೊಮ್ಮೆ ಪ್ರಶ್ನಿಸುವ ಧೈರ್ಯ ಸುರೇಶನಿಗಾಗಲಿಲ್ಲ ನೀರವವಾಗಿ ಚಾದ ಬಟ್ಟಲನ್ನೆತ್ತಿಕೊಂಡ. ಕುಸ ಹೊತ್ತಿನ ಮೇಲೆ ಅಚಲೆ ಮೆಲುದನಿಯಿಂದ ಕೇಳಿದಳು "ಒಳ್ಳೆಯದು ಸುರೇಶಬಾಬೂ, ವಿಧವಾವಿವಾಹ ಯಾವ ಸಂದರ್ಭದಲ್ಲಿಯೂ ಸರಿ ಎಂದು ನಿಮಗೆನಿಸುವುದಿಲ್ಲವೆ?"

"ಎನಿಸುತ್ತದೆ. ಏಕೆಂದರೆ ನನ್ನ ಕುಸಂಸ್ಕಾರ ಇನ್ನೂ ಅಷ್ಟು ದೂರ ಮುಟ್ಟಿಲ್ಲ" ಬಟ್ಟಲಿಂದ ಮುಖ ತೆಗೆಯದೆ ಸುರೇಶ ಹೇಳಿದ.

ತಟ್ಟನೆ ಅಚಲೆ ನುಡಿದಳು "ಹಾಗಿದ್ದರೆ ಮೃಣಾಲಳಂತಹ ಹುಡುಗಿಯನ್ನು ಮದುವೆಯಾಗುವುದಕ್ಕೆ ನಿಮ್ಮಡ್ಡಿ ಇರಬಾರದು."

"ಹಾಗೆಂದರೆ?" ಚಹಾದ ಬಟ್ಟಲನ್ನು ಬಾಯಿಂದ ಬಿಡಿಸಿ ಸೆಟೆದು ಕುಳಿತು ಸುರೇಶ ಕೇಳಿದ.

ಅಚಲೆಯ ಮುಖದಲ್ಲಿಯಾಗಲಿ, ದನಿಯಲ್ಲಾಗಲಿ ಯಾವ ಉತ್ತೇಜನವೂ ಕಾಣಲಿಲ್ಲ. ಧೀರ ಸಹಜವಾಗಿ ನುಡಿದಳು "ನಾ ನಿಮ್ಮಿಂದ ಉಪಕೃತಳೂ ಅಲ್ಲದೆ ತಮ್ಮ ಹಿತಚಿಂತಕಳು. ನೀವು ಗೃಹಸ್ಥರಾಗಿ ಸುಖವಾಗಿರುವುದನ್ನು ನೋಡಬಯಸುತ್ತೇನೆ. ಒಂದಿನ ನೀವು ಮದುವೆಗೆ ಸಿದ್ಧರಾಗಿದ್ದಿರಿ, ಅದನ್ನಿಂದು ನೆರವೇರಿಸಬೇಕೆಂದು ನನ್ನ ಬೇಡಿಕೆ."

ಬಾಯಿಪಾಠವಿದ್ದಂತೆ ಒಂದುಸಿರಿಗೇ ಹೇಳಿ ಅಚಲೆ ತೇಕತೊಡಗಿದಳು. ಬಹಳ ಹೊತ್ತು ಶಿಲಾಪ್ರತಿಮೆಯಂತೆ ಕುಳಿತಿದ್ದ ಸುರೇಶನೆಂದ:
"ಇದರಿಂದ ನಿನಗೆ ನಿಜವಾಗಿಯೂ ಸುಖವಾಗುವುದೆ?"

"ಹಂ"

"ಅವಳು ಒಪ್ಪುವಳೆ?"

"ಹಾಗೆ ನನ್ನ ನಂಬಿಕೆ"

"ನನಗೇನು ನಂಬಿಕೆಯಿಲ್ಲ. ಹಿಂದಕ್ಕೆ ಸತಿಯರು ನಗುನಗುತ್ತ ಸಹಗಮನ ಮಾಡುತ್ತಿದ್ದರೆಂದು ನೀ ಓದಿರಬಹುದು. ಮೃಣಾಲ ಅದೇ ಜಾತಿಯವಳು. ಅವಳನ್ನು ಬಾಯಿಮಾತಿನಿಂದ ಒಪ್ಪಿಸುವುದಂತೂ ದೂರದ ಮಾತು, ಕೈ ಕಾಲುಗಳನ್ನು ಒಂದೊಂದಾಗಿ ಕಡಿದು ಹಾಕಿದರೂ ಅವಳು ಮರುಮದುವೆಗೆ ಒಪ್ಪುವುದಿಲ್ಲ. ಆಗದುದಕ್ಕೆ ಪ್ರಯತ್ನಪಟ್ಟು ಅವಳೆದುರು ನನ್ನನ್ನು ಕ್ಷುದ್ರಪದಾರ್ಥ ಮಾಡಬೇಡ ಅಚಲಾ! ಅವಳು ಚಿಕ್ಕಣ್ಣ ಎನ್ನುತ್ತಾಳೆ– ಈ ಸಮ್ಮಾನವನ್ನು ನಾ ಕಾಯ್ದುಕೊಳ್ಳಬೇಕೆನ್ನುತ್ತೇನೆ"

ನೋಡುನೋಡುತ್ತಿರಲಿಕ್ಕೆ ಅಚಲೆಯ ಮೋರೆ ಸಿಟ್ಟಿನಿಂದ ಕಪ್ಪಿಟ್ಟಿತು. ಕಠಿಣ ಮೃದುಸ್ವರದಿಂದ ಅವಳೆಂದಳು: "ಜಗತ್ತಿನಲ್ಲಿ ಮೃಣಾಲ ಒಬ್ಬಳೇ ಸತಿ ಅಲ್ಲ, ಸುರೇಶಬಾಬೂ! ಮನಸಿನಿಂದ ಒಬ್ಬರನ್ನು ವರಿಸಿದ ಬಳಿಕ ಸಹಸ್ರ [illegible] ಪ್ರಲೋಭನಗಳಿಂದಲೂ ಚ್ಯುತಿಗೊಳ್ಳದ ಸತಿಯರೂ ಇದ್ದಾರೆ.

ಅವರ ವಿಷಯ ಪುಸ್ತಕದಲ್ಲಿ ಸಿಕ್ಕಲಿಕ್ಕಿಲ್ಲ, ಆದರೆ ಸತ್ಯ!'' ಎಂದು ದಿಙ್ಮೂಢನಾಗಿ ಸ್ತಂಭಿತನಾದ ಸುರೇಶನ ಕಡೆ ಲಕ್ಷಿಸದೆ ಆ ಹೆಮ್ಮೆಯ ಕಮಣಿ ಹೊರಟುಹೋದಳು

೨೫

ಅಚಲೆ ತನ್ನ ಕೋಣೆಗೆ ಹೋಗಿ ಬಾಗಿಲಿಕ್ಕಿಕೊಂಡಳು ತಡೆಯಲಾರದ ಮರ್ಮಾಂತಿಕ ಕ್ರಂದನದ ಆವೇಗವನ್ನು, ತಕ್ಕೆಗೆ ಮುಖ ಹತ್ತಿಟ್ಟು ತಡೆಯತೊಡಗಿದಳು ಪಕ್ಕದ್ದೇ ಮಹಿಮನ ಕೋಣೆ—ಅವನಿಗೆಲ್ಲಿಯಾದರೂ ಒಂದು ಬಿಕ್ಕು ಕೇಳೀತು!

ಆ ಗಂಭೀರ ದುಃಖದಲ್ಲಿ ಅವಳು ನೂತನ ತತ್ತ್ವವೊಂದನ್ನು ಕಂಡಳು. ಈ ನಾರೀಜೀವನದಲ್ಲಿ ಸತಿತ್ವವೆಂಬುದು ಎಂತಹ ದೊಡ್ಡ ಸಂಪದ! ಜೀವನದಲ್ಲಿಂದೇ ಮೊದಲು ಅದರ ಮಹಿಮೆ ಅವಳ ಕಣ್ಣೆದುರಿಗೆ ಪೂರ್ಣ ವ್ಯೈವೆತ್ತು ನಿಂತಿತು ಆ ದಿನ, ಸುರೇಶನ ಸ್ಪರ್ಶವನ್ನು, ತಂದೆಯ ಸಂದಿಗ್ಧ ದೃಷ್ಟಿಯನ್ನು ಅನ್ಯಾಯ ಪೂರ್ಣ ಉಪದ್ರವವೆಂದು ಬಗೆದು ಅವಳು ಅತ್ಯಂತ ಕ್ರುದ್ಧಳೂ ವ್ಯಥಿತಳೂ ಆಗಿದ್ದಳು ಆದರಿಂದು ಅದೇ ಧರ್ಮಹೀನ ಪರಸ್ತ್ರೀಲುಬ್ಧ ಸುರೇಶ ಸತೀತ್ವದ ಪಾದಪದ್ಮಕ್ಕೆ ತಲೆವಾಗುವುದನ್ನು ಕಂಡಾಗ, ತನ್ನ ನಿಜವಾದ ಸ್ಥಾನವೂ ಅವಳಿಗೆ ಗೋಚರವಾಗದಿರಲಿಲ್ಲ

ಇನ್ನೂ ಒಂದು ವಿಷಯ ಸುಸ್ಪಷ್ಟವಾದ ಮಾತಿನ ಶಕ್ತಿ ಎಷ್ಟು ದೊಡ್ಡದೆಂಬುದೂ ಅವಳಿಗಿಂದು ತಿಳಿಯಿತು ಅವಳು ಸುಶಿಕ್ಷಿತ ಹೆಂಗಳೆ; ಗಂಡನಲ್ಲಿ ತನುಮನೋನಿಷ್ಠೆಯೇ ಸತೀತ್ವ ಎಂಬುದು ಅವಳಿಗೆ ತಿಳಿಯದುದಲ್ಲ; ಬರೀ ತನು ಅಥವಾ ಬರೀ ಮನ ಒಂದೇ ಪೂರ್ಣವಲ್ಲ ಎಂಬುದೂ ಗೊತ್ತು ಆದರೂ ತನ್ನ ಮನಸು ವಿಚಲಿತವಾದಾಗಲೂ, ತನಗೆ ಪತಿ ಅಪ್ರಿಯನಾದಾಗಲೂ– ಅದನ್ನು ಸಂಕೋಚವಿಲ್ಲದೆ ಉಚ್ಚರಿಸಿದಾಗಲೂ ಅವಳು ತನ್ನನ್ನು ನೀಚಳೆಂದು ಬಗೆದಿರಲಿಲ್ಲ ಆದರಿಂದು ಸುರೇಶನ ಸ್ಪಷ್ಟವಚನ ಪರ್ಯಾಯದಿಂದ ತನ್ನ ಹೆಸರಿಗೆ ಅಸತೀತ್ವವನ್ನು ಜೋಡಿಸಲೆಳಸಿದಾಗ ಅವಳಂತರಾತ್ಮ ಹೃದಯವಿದಾರಕ ಆರ್ತಸ್ವರದಿಂದ ಅತ್ತುಬಿಟ್ಟಿತು

ಆದರೆ ಮೃಣಾಲಳ ಬಗ್ಗೆ ಅವಳಲ್ಲಿ ಶ್ರದ್ಧೆ ಹೆಚ್ಚಿತೆಂದೇನಲ್ಲ. ಆ ಹುಡುಗಿಯ ಪ್ರಸಂಗದಿಂದ ತನಗಿಂದುಂಟಾದ ಚೈತನ್ಯವನ್ನು ಸಾಯುವ ತನಕ ಮರೆಯಲಾರೆನೆಂದು ಅವಳು ತನ್ನಷ್ಟಕ್ಕೆ ತಾನು ತಿಳಿಯಿತು.

ಸಂಕಲ್ಪಿಸಿದಳು ಮಾತ್ರ.

ಹೊರಗೆ ತಂದೆಯ ಬಡಿಗೆಯ ಸದ್ದು, ಹಿಂದೆ ಹಿಂದೆ ಸುರೇಶನ ಕಾಲ ಸದ್ದು ಅಚಲೆಗೆ ಕೇಳಿಸಿತು. ಅವರು ಮಹಿಮನನ್ನು ನೋಡ ಹೊರಟಿದ್ದಾರೆಂದು ಅವಳರಿತಳು. ಸ್ವಲ್ಪ ಹೊತ್ತಿನಲ್ಲಿ ತಂದೆ ಅವಳನ್ನು ಕೂಗಿದರು. ಚೆನ್ನಾಗಿ ಕಣ್ಣೊರಸಿಕೊಂಡು ಆ ಕೋಣೆಗೆ ಹೋದಳು. ಅವಳ ಮುಖ ನೋಡಿ ಕೇದಾರಬಾಬು ಕೇಳಿದರು: "ಇದೇನಿಂದು ಹೀಗೆ? ಎರಡು ಗಂಟೆಗೆ ಪಥ್ಯಕೊಡುವುದು, ನಾಲ್ಕು ಹೊಡೆದುಹೋಯಿತು! ಏಕೆ, ಕಣ್ಣು ಊದಿಕೊಂಡಂತಿವೆ? ರಾತ್ರಿ ನಿದ್ದೆ ಮಾಡಲಿಲ್ಲವೆ?"

ಅಚಲೆ ಉತ್ತರ ಕೊಡದೆ ಲಗುಬಗೆಯಿಂದ ಹೊರಗೆ ಹೊರಟು ಹೋದಳು. ಪಥ್ಯದ ಕೆಲಸ ಮೃಣಾಲಳೇ ಮಾಡುತ್ತಿದ್ದಳು. ಈಗ ಆ ಭಾರ ಅಚಲೆಯ ಮೇಲೆ ಬಿದ್ದಿತ್ತು. ಇಂದವಳಿಗೆ ಅದರ ನೆನಪೇ ಇರಲಿಲ್ಲ. ಓಡಿ ಹೋಗಿ ನೋಡಿದಳು. ಉರಿ ಯಾವಾಗಲೋ ಆರಿ ಅಂಗಾರವಾಗಿತ್ತು; ಎಲ್ಲವೂ ಅಟ್ಟಿಸಿ ಸುಟ್ಟುಹೋಗಿತ್ತು. ಅಚಲೆ ಎಷ್ಟೋ ಹೊತ್ತು ಅಲ್ಲಿ ಸ್ತಬ್ಧಳಾಗಿ ನಿಂತು ತಿರುಗಿ ಬಂದಳು. ವಿಷಯ ತಿಳಿದು ಕೇದಾರಬಾಬು ಸುರೇಶನಿಗೆಂದರು. "ನಾ ಆವಾಗಲೇ ಹೇಳಲಿಲ್ಲವೆ ಸುರೇಶಬಾಬೂ, ಒಬ್ಬೊಳ್ಳೆಯ ನರ್ಸನ್ನಿಡದೆ ಮಹಿಮ ಬದುಕಲಾರನೆಂದು? ನನ್ನ ಮಗಳನ್ನು ನನಗಿಂತ ನೀ ಬಲ್ಲೆಯಾ?"

ಸುರೇಶ ಮಾರುನುಡಿಯಲಿಲ್ಲ. ಆದರೆ ಮಹಿಮ— ಅವನಿಷ್ಟು ಹೊತ್ತು ಹೆಂಡತಿಯ ಲಜ್ಜಿತ ಮ್ಲಾನಮುಖವನ್ನು ನೋಡುತ್ತಿದ್ದುದನ್ನು ಯಾರೂ ಅರಿಯರು— ಸಾವಕಾಶವಾಗಿ ನುಡಿದ: "ನರ್ಸಳ ಕೈಯಿಂದ ಔಷಧ ತೆಗೆದುಕೊಳ್ಳಲು ಕೂಡ ನನಗೆ ಮನಸ್ಸಿಲ್ಲ ಸುರೇಶ. ಇವಳ ಸಹಾಯಕ್ಕೆ ಒಬ್ಬರನ್ನು ಕೊಡು. ನಿನ್ನೆ ಮೊನ್ನೆ ಎರಡು ಇಡೀರಾತ್ರಿ ಇವಳಿಗೆ ಜಾಗರಣೆಯಾಗಿದೆ. ಹಗಲು ಒಂದಿಷ್ಟು ವಿಶ್ರಾಂತಿಯಿಲ್ಲದಿದ್ದರೆ ಯಂತ್ರದ ಮನುಷ್ಯನಿಗೂ ಕೆಲಸ ಸಾಧ್ಯವಿಲ್ಲ."

ಈ ಮಾತು ಶಬ್ದಶಃ ದಿಟವಲ್ಲದಿದ್ದರೂ ಸಟೆಯಲ್ಲ. ಸುರೇಶ ತೃಪ್ತಿಯಿಂದ ಮುಖವೆತ್ತಿದ. ಕೇದಾರಬಾಬು ತಮ್ಮ ಸ್ವಾಭಾವಿಕ ಮಾತಿಗಾಗಿ ಲಜ್ಜಿತರಾಗಿ ಏನೋ ಹೇಳಬೇಕೆಂಬಷ್ಟರಲ್ಲಿ ಅಚಲೆ ಅಲ್ಲಿಂದ ಹೊರಟುಹೋದಳು.

ತನ್ನ ಅಪರಾಧಗಳಿಗಾಗಿ ಅತ್ತು ಕ್ಷಮೆಬೇಡಿ, ತನ್ನಂತಹ ಪಾಪಿಷ್ಠೆಯನ್ನು ಆ ತಿರಸ್ಕಾರದಿಂದ ರಕ್ಷಿಸುವುದಕ್ಕೆ ನಿಮಗೇನು ತಲೆಶೂಲೆಯಿದ್ದಿತ್ತೆಂದು ಪತಿಯನ್ನು ಕೇಳಿಬಿಡಲೇ ಎಂದು ಅಚಲೆಗೆ ರಾತ್ರಿ ಹಲವು ಸಲ ಇಚ್ಛೆಯಾಯಿತು. ಲಜ್ಜೆ ತಡೆಗಟ್ಟಿತು.

ಬಹಳ ರಾತ್ರಿಗೆ ಮಹಿಮನ ಕೋಣೆಗೊಮ್ಮೆ ಬಂದು, ಆವಶ್ಯಕ ವ್ಯವಸ್ಥೆಮಾಡಿ ಮಲಗಲು ಹೋಗುವುದು ಸುರೇಶನ ನಿತ್ಯಕ್ರಮ ಮೃಣಾಲ ಇದ್ದಾಗ ಅವನು ಪ್ರಾಯಿಕವಾಗಿ ರಾತ್ರಿಯೆಲ್ಲ ಬಂದುಹೋಗಿ ಮಾಡುತ್ತಿದ್ದ; ಅದು ಅಗತ್ಯವೂ ಇತ್ತು ಆದರೀಚೆಗೆ ಸಹಜವಾಗಿ ಬರುತ್ತಿರಲಿಲ್ಲ ಅಗತ್ಯವಿದ್ದಾಗ ತೊತ್ತಿನಿಂದ ಸುದ್ದಿ ತರಿಸುತ್ತಿದ್ದ ರಾತ್ರಿ ಒಮ್ಮೆ ಮಾತ್ರ ಸ್ವತಃ ಬಂದು ಮಾತನಾಡಿಸುತ್ತಿದ್ದ ಅವನ ಈ ಹೊಸರೀತಿಯ ಕಡೆ ಎಲ್ಲರಿಗಿಂತ ಅಚಲೆಯ ದೃಷ್ಟಿ ಮೊದಲು ಹೋಯಿತು. ಆದರೆ ಈ ಬಗ್ಗೆ ಸಹಜವಾಗಿ ಮಾತೆತ್ತುವುದೂ ಅವಳಿಗಶಕ್ಯವಾದುದರಿಂದ ಸುಮ್ಮನಿದ್ದಳು. ಒಂದಿನ ಮಹಿಮನೇ ಮಾತು ತೆಗೆದುದರಿಂದ ಹೇಳಲೇಬೇಕಾಯಿತು— 'ಅವರು ಇತ್ತೀಚೆಗೆ ಹೆಚ್ಚಾಗಿ ಮನೆಯೊಳಗೇ ಇರುವುದಿಲ್ಲ ಅದರ ಕಾರಣ ನನಗೂ ಗೊತ್ತಿಲ್ಲ' ಮಹಿಮ ಸುಮ್ಮನೆ ಕೇಳಿಕೊಂಡ, ತನ್ನ ಅಭಿಪ್ರಾಯ ಸೂಚಿಸಲಿಲ್ಲ

ಮರುದಿನ ಮುಂಜಾನೆ ಅಚಲೆ ಕೆಳಗಿಳಿಯುತ್ತಿದ್ದಳು ಸುರೇಶ ಏತಕ್ಕೋ ಮೇಲೇರುತ್ತಿದ್ದ ಅವಳನ್ನು ಕಾಣುತ್ತಲೆ ಬೇರೆ ಕಡೆ ಹೊರಟು ಹೋದ. ಅವನು ಸರ್ವಪ್ರಯತ್ನದಿಂದಲೂ ತನ್ನನ್ನು ತಪ್ಪಿಸಿ ಅಡ್ಡಾಡುತ್ತಿದ್ದಾನೆಂಬುದರಲ್ಲಿ ಅವಳಿಗೆ ಸಂಶಯ ಉಳಿಯಲಿಲ್ಲ ಒಂದು ಕಾಲದಲ್ಲಿ ಇದನ್ನೇ ಮನಃಪೂರ್ವಕವಾಗಿ ಇಚ್ಛಿಸುತ್ತಿದ್ದಳು. ಆದರಿಂದು ಅದೇ ಮನಸಿಗೆ ವೇದನೆಯಾಯಿತು

೨೬

ಅಚಲೆಯ ನಿಗೂಢ ಅಂತರಾಳದಲ್ಲಿ ಒಂದು ವಿಷಯ ಪ್ರತಿಕ್ಷಣವೂ ಬೆಂಕಿಹೊತ್ತಿಸುತ್ತಿದೆ· ಸುರೇಶನ ಮನಸಿನಲ್ಲಿ ಅದ್ಭುತ ಪರಿವರ್ತನೆ ಕೆಲಸ ಮಾಡುತ್ತಿದೆ, ಅದರೊಡನೆ ತನ್ನ ಸಂಬಂಧ ತಪ್ಪಿಹೋಗಿದೆ, ಒಂದು ಕಾಲದಲ್ಲಿ ಅಲ್ಲಿಯೇ ತನ್ನ ಬಗ್ಗೆ ಉದ್ದಾಮ ಪ್ರೇಮ ಹುಟ್ಟಿ ಬೆಳೆದಿತ್ತು, ಅದಿಂದು ಮುರಿದು ಬಿದ್ದ ಮನೆ—ಆ ಪ್ರೇಮ ಅಲ್ಲಿಂದ ಹೊರಟುಹೋಗಿದೆ! ಅವಳು

ತನ್ನನ್ನು ಸಾವಿರ ಸಲ ತಿರಸ್ಕರಿಸಿಕೊಂಡಳು, ತನಗೆ ಸಾವಿರ ಬಿರುನುಡಿಗಳನ್ನಾಡಿಕೊಂಡಳು. ಈ ಅಗಲಿಕೆಯ ವೇದನೆಯನ್ನು ತನ್ನ ಮನಸಿನಿಂದ ದೂರಗೊಳಿಸುವುದು ಅವಳಿಗೆ ಅಸಾಧ್ಯವಾಯಿತು ತನಗೆ ತಿಳಿಯದಂತೆಯೇ ತಾನು ಸುರೇಶನನ್ನು ಗೌಪ್ಯವಾಗಿ ಪ್ರೀತಿಸುತ್ತಿರುವೆನೇನೋ ಎಂಬ ಸಂಶಯ ಮತ್ತೆ ಮತ್ತೆ ಇಣಿಕಿ ನೋಡಿ ಅವಳನ್ನು ಅಂಜಿಸುತ್ತಿತ್ತು, ಅವಳ ಸರ್ವಾಂಗಕ್ಕೂ ಮುಳ್ಳು ಬರಿಸುತ್ತಿತ್ತು, ಪ್ರತಿಸಲವೂ ಆ ಸಂಶಯವನ್ನು ಅಸಂಗತವೆಂದು ಅಕಾರಣವೆಂದು ಹಾರಿಸುತ್ತಲಿದ್ದಳು ಈ ಅಸಂಭವ ಸಂಭವಿಸುವುದರೊಳಗೇ ಉರುಲು ಹಾಕಿಕೊಂಡು ಸತ್ತುಹೋಗುವೆ ಎಂದುಕೊಳ್ಳುತ್ತಿದ್ದಳು ಆದರೂ ಈ ವಿಷಯ ನೆರಳಿನಂತೆ ಅವಳ ಮನಸಿನ ಬೆನ್ನು ಹತ್ತಿಯೇ ಇತ್ತು ಈ ಬೆದರಿನಿಂದ ತನ್ನನ್ನು ಉಳಿಸಿಕೊಳ್ಳಲೆಂದೋ ಏನೋ, ಅವಳು ಸ್ನಾನ ಊಟಗಳ ಸಮಯದ ಹೊರತು ಹಗಲು ರಾತ್ರಿ ಗಂಡನ ಹತ್ತಿರದಿಂದ ಒಂದಿಷ್ಟೂ ಕದಲುತ್ತಿರಲಿಲ್ಲ ತನ್ನ ಕೋಣೆಗೆ ಹೋಗುವುದೂ ಅವಳಿಗೆ ಬೇಡವಾಗಿತ್ತು ಹೀಗೆಯೇ ಕೆಲದಿನಗಳು ಕಳೆದವು

ಮಹಿಮ ತಕ್ಕಮಟ್ಟಿಗೆ ನೆಟ್ಟಗಾಗಿ ಎದ್ದಿದ್ದಾನೆ ಗಾಳಿ ಬದಲಾವಣೆಗಾಗಿ ಬೇಗನೆ ಜಬ್ಬಲಪುರಕ್ಕೆ ಹೋಗುವ ಮಾತು ನಡೆದಿದೆ ...ನ ಬೆಳಗಿನಲ್ಲಿ ಅಚಲೆ ಮೇಜಿನ ಮೇಲೆ ಕುಳಿತು ಗಂಡನಿಗಾ... ...ನ ಮೇಲೆ ಹಾಲು ಕಾಯಿಸುತ್ತಿದ್ದಳು ಹಾಲಿಗೆ ಮತ್ತೆ ಮತ್ತೆ ಆ... ಒರು...ತ್ತಿತ್ತು, ಅವಳಿಗೆ ಅತ್ತಿತ್ತ ನೋಡಲು ಸಾಧ್ಯವಿರಲಿಲ್ಲ ಮಹಿಮ...ಟ್ಟ ನೋಟದಿಂದ ತನ್ನನ್ನೇ ನೋಡುತ್ತಿದ್ದುದು ಅವಳಿಗೆ ಗೊತ್ತಾಗಲಿಲ್ಲ. ಒಮ್ಮೆ ಅವನ ನಿಟ್ಟುಸಿರು ಕಿವಿ ಹೊಕ್ಕಾಗ ಒಮ್ಮೆ ಮಾತ್ರ ಕಣ್ಣೆತ್ತಿ ನೋಡಿ ಪುನಃ ತನ್ನ ಕೆಲಸದಲ್ಲಿ ತೊಡಗಿದಳು

ಮಹಿಮ ಎಂದೂ ಹೆಚ್ಚು ಮಾತನಾಡುವವನಲ್ಲ ಅಂದು ನಿಟ್ಟುಸಿರೊಡನೆ ಮಾತನಾಡತೊಡಗಿದ "ಅತಿದುಃಖವಿಲ್ಲದೆ ಯಾವ ಮಹಾ ವಸ್ತುವೂ ದೊರೆಯುವುದಿಲ್ಲವೆಂಬುದು ಸುಳ್ಳಲ್ಲ ಅಚಲಾ,—ಮನೆ ಸುಟ್ಟಿತು, ಅದು ಮತ್ತೆ ಆಗುವುದು. ನನಗೆ ಜಡ್ಡಾಯಿತು, ಇದೂ ಒಂದಿನ ನೆಟ್ಟಗಾಗುವುದು ಇದರಿಂದ ನನಗೆ ಸಿಕ್ಕ ಅಮೂಲ್ಯವಸ್ತುವೆಂದರೆ ನೀನು. ಇತ್ತೀಚೆಗೆ ನೀನಿಲ್ಲದೆ ನನಗೆ ಒಂದಿನವೂ ಸಾಗದೆಂದು ಎನಿಸುತ್ತಿದೆ!"

ಅಚಲೆ ನಿಃಶಬ್ದವಾಗಿ ಬಟ್ಟಲಿಗೆ ಹಾಲು ಹಾಕಿ ಆರಿಸತೊಡಗಿದಳು.

ಮಹಿಮ ಸ್ವಲ್ಪ ತಡೆದು ಮತ್ತೆ ಹೇಳತೊಡಗಿದ "ಮೃಣಾಲ ಸುರೇಶರು ನನಗೆ ಮಾಡಿದ ಸೇವೆ ಅಷ್ಟಿಷ್ಟಲ್ಲ ಆದರೆ ಮೈಮೇಲೆ ಎಚ್ಚರುಬಂದಾಗಲೆಲ್ಲ ಏಕೋ ಏನೋ ಒಂದುತೆರದ ಬೇಜಾರವೆನಿಸುತ್ತಿತ್ತು; ಇವರಿಗೆಷ್ಟು ಕಷ್ಟ, ಎಷ್ಟು ಕೊಂದರೆ, ಇವರ ದಯೆಯ ಋಣವನ್ನು ಈ ಜನ್ಮದಲ್ಲಿ ಹೇಗೆ ತೀರಿಸೇನು ಎನಿಸುತ್ತಿತ್ತು ಆದರೆ ದೇವರು ಮಾಡಿದ ಶರೀರಸಂಬಂಧ ಎಂಥದೋ! ನೀ ಮಾಡಿದ ಸೇವೆ ಋಣವೆಂದು ಒಮ್ಮೆಯೂ ಎನಿಸಲಿಲ್ಲ. ನನ್ನನ್ನು ಬದುಕಿಸಿಕೊಳ್ಳುವುದು ನಿನ್ನ ಕರ್ತವ್ಯವೇ" ಎಂದು ನಸುನಕ್ಕ

ಅಚಲೆ ತಲೆ ತಗ್ಗಿಸಿಕೊಂಡು ಹಾಲಲ್ಲಿ ಚಮಚೆ ಆಡಿಸುತ್ತಿದ್ದಳು ಏನೂ ಮಾತನಾಡಲಿಲ್ಲ "ಇನ್ನೂ ಎಷ್ಟು ಆರಿಸುತ್ತೀ, ತಾ" ಎಂದ ಮಹಿಮ

ಆದರೂ ಅಚಲೆ ಮಾತನಾಡಲಿಲ್ಲ ಮಹಿಮನಿಗೆ ಮೊದಲು ಆಶ್ಚರ್ಯವಾಯಿತು. ಆದರೆ ಮರುಕ್ಷಣವೇ ಕಂಬನಿ ತನಗೆ ಕಾಣಬಾರದೆಂದೇ ಹೀಗೆ ಅಧೋಮುಖಿಯಾಗಿರುವಳೆಂದು ತಿಳಿದುಕೊಂಡ

ಸುರೇಶ ಏಕೆ ಹೆಚ್ಚಾಗಿ ಬರುತ್ತಿಲ್ಲವೆಂಬುದನ್ನು ಮಹಿಮ ನಿಶ್ಚಿತವಾಗಿ ತಿಳಿಯದಿದ್ದರೂ ಅದನ್ನೆಷ್ಟೂ ಅನುಮಾನಿಸಿರಲಿಲ್ಲವೆಂದಲ್ಲ ಆದರಿಂದ ಕ್ಷೋಭಮಿಶ್ರಿತ ಆನಂದವೂ ಸ್ವಲ್ಪ ಅವನ ಮನಸಿಗಾಗಿತ್ತು ಏಕೆಂದರೆ, ಅಚಲೆ ಈಗ ಚಿಂತಿಸುತ್ತಲಿದ್ದಾಳೆ, ನಿರ್ಜನಸ್ಥಾನದಲ್ಲಿ ಕಾಣಿಸಿಕೊಂಡೇನಲ್ಲ ಎಂಬ ಭಯದಿಂದ ಅವಳು ಕೋಣೆಬಿಟ್ಟು ಹೋಗುವುದಿಲ್ಲ ಎಂಬುದು ಅವನಿಗೆ ಹೊಳೆದಿತ್ತು ಅಂತೆಯೇ ಅವನ ಮನಸು ಅಂದಿನ ದಿನವೆಲ್ಲ ಗಾಳಿಯಲ್ಲಿ ತೇಲಾಡುತ್ತಿತ್ತು ಅವನ ಹಾಸಿಗೆಗೆ ತುಸ ದೂರದಲ್ಲಿ ಆರಾಮ ಚೌಕಿಯೊಂದಿಟ್ಟಿತ್ತು ಅಂದು ಬಹಳ ರಾತ್ರಿಯ ವರೆಗೆ ಅಚಲೆ ಅಲ್ಲಿ ಕುಳಿತು ಓದುತ್ತಿದ್ದಳು, ಕೊನೆಗವಳಿಗೆ ಅಲ್ಲಿಯೇ ನಿದ್ದೆ ಹತ್ತಿತು ಮುಂಜಾನೆ ಮಹಿಮನ ಕರೆಗೆ ಮೆಟ್ಟಿಬಿದ್ದು ಎದ್ದು ಕುಳಿತು ಕಿಡಿಕಿ ತೆರೆದು ನೋಡಿದಳು, ಆಗಲೇ ಹೊತ್ತೇರಿತ್ತು

ಮಹಿಮ ಏನೋ ಕೆಲಸ ಹೇಳಲು ಹೋಗಿದ್ದ. ಪಕ್ಕನೆ ಆಶ್ಚರ್ಯಗೊಂಡು ನಿಂತುಬಿಟ್ಟ. ಹೆಂಡತಿಯನ್ನು ಅಡಿಯಿಂದ ಮುಡಿಯ ವರೆಗೆ ಮತ್ತೆ ಮತ್ತೆ ನೋಡುತ್ತ ಕೇಳಿದ: "ಹೊದ್ದುಕೊಳ್ಳುವ ಬಟ್ಟೆ ನಿನ್ನದೇನಾಯಿತು?"

ಅಚಲೆಗೆ ಅವನಿಗಿಂತಲೂ ಹೆಚ್ಚಿನ ಅಚ್ಚರಿ ಅವಳು ನೋಡಿ ಕೊಂಡಳು ಇದೀಗ ಎಚ್ಚತ್ತು ಅವಸರದಿಂದ ಹೊದ್ದುಕೊಂಡು ಬಂದ ದುಪ್ಪಟಿ ಸುರೇಶನದು ಗಂಡನ ಪ್ರಶ್ನೆ ಅವಳನ್ನು ತಿವಿಯಿತು. ಲಜ್ಜೆಯಿಂದ ವ್ಯಥೆಯಿಂದ ಅವಳ ಮುಖ ಕಂದಿತು ಹೀಗೆ ಹೇಗಾಯಿತೆಂಬುದು ತಿಳಿಯದಾಯಿತು ನಿನ್ನೆ ರಾತ್ರಿ ತನ್ನ ದುಪ್ಪಟಿಯನ್ನು ಮಡಿಚಿ ಕಾಲಬುಡಕ್ಕಿಟ್ಟುಕೊಂಡು ಓದುತ್ತ ಕುಳಿತುದು, ನಿದ್ದೆಯಲ್ಲಿ ನಡುನಡುವೆ ತಂಡಿಯಾದಂತೆನಿಸಿದುದು ಅವಳಿಗೆ ನೆನಪಾಯಿತು ಬೆಳಗಾಗುವುದರೊಳಗೆ ಹೀಗಾಗಿದೆ

ಮಹಿಮ ಸಸ್ನೇಹವಾಗಿ ಸಕೌತುಕವಾಗಿ ನಕ್ಕ "ಇದರೊಳಗೇನು ನಾಚಿಕೆ ಅಚಲಾ' ಆಳು ಅದಲುಬದಲು ಮಾಡಿರಬಹುದು ನೋಡದೆ ಇಲ್ಲವೆ ಸುರೇಶನೇ ಇಲ್ಲಿ ಮರೆತು ಹೋಗಿರಬಹುದು, ನೀ ನೋಡದೆ ಹೊದ್ದು ಕೊಂಡಿರಬಹುದು ಆಳನ್ನು ಕರೆದು ಬದಲಿಸಿ ತರಲಿಕ್ಕೆ ಕೊಡು" ಎಂದ

"ಕೊಡುವೆ" ಎಂದು ಅಚಲೆ ಹೊರಗೆ ಬಂದಳು ಪಕ್ಕದ ಕೋಣೆಯಲ್ಲಿ ಇಣಿಕಿಹಾಕಿದಾಗ ಅವಳಿಗೆಲ್ಲವೂ ತಿಳಿಯಿತು ಎಲ್ಲರಿಗೂ ನಿದ್ದೆ ಹತ್ತಿದಾಗ ಸುರೇಶ ಕೋಣೆಯೊಳಗೆ ಬಂದಿದ್ದ, ತಾನು ನಡುಗುವುದನ್ನು ಕಂಡು ಸ್ನೇಹದಿಂದ ಜೋಕೆಯಿಂದ ತನ್ನ ದುಪ್ಪಟಿಯನ್ನು ಹೊದಿಸಿ ಹೋಗಿದ್ದಾನೆ ಎಂಬುದು ನಿಃಸಂದೇಹ ಅವಳು ಕಣ್ಣುಮುಚ್ಚಿ ಆತನ ಸತೃಷ್ಣ ದೃಷ್ಟಿಯನ್ನು ಸ್ಪಷ್ಟವಾಗಿ ಕಂಡಳು. ಹ್ಯ ನಿವೇದಿಸಿತು ಕೇವಲ ತನ್ನನ್ನು ನೋಡುವುದಕ್ಕೆ, ಕಣ್ತಣಿಯ ನೋಡುವುದಕ್ಕೆ ಅವನು ಬಂದಿರಬೇಕು, ಬಹುಶಃ ಪ್ರತಿ ರಾತ್ರಿಯೂ ಬರುತ್ತಿರಬೇಕು—ಯಾರಿಗೂ ಗೊತ್ತಿಲ್ಲ

ಈ ಹೇಯ ಆಚರಣೆಗಾಗಿ ಅಚಲೆ ವಿಪರೀತ ಲಜ್ಜಿತೆಯಾದಳು. ಇದು ಕುತ್ಸಿತ, ಗರ್ಹಿತ, ಅಭದ್ರ ಎಂದು ಸಾವಿರಸರಿಯಿಂದ ಹೀಯಾಳಿಸಿದಳು ಅತಿಥಿಯ ವಿಷಯದಲ್ಲಿ ಮನೆಯೊಡೆಯನ ಕಳ್ಳತನ ಇದನ್ನು ತಾನೆಂದೂ ಕ್ಷಮಿಸಲಾರೆನೆಂದು ಅವಳು ಮತ್ತೆ ಮತ್ತೆ ಪ್ರತಿಜ್ಞೆ ಮಾಡಿದಳು ಆದರೆ ಈ ಪಾಪಕ್ಕೆ ತನ್ನ ಪೂರ್ಣಮನಸ್ಸು ಬೆಂಬಲಕೊಡುತ್ತಿಲ್ಲವೆಂಬುದೂ ಅವಳಿಗೆ ಗೋಚರಿಸದಿರಲಿಲ್ಲ ಇಷ್ಟು ದಿನ ಕುಳಿತರೆ ನಿಂತರೆ ತನ್ನನ್ನು ಏನೋ ಎಂತೋ ಚುಚ್ಚುತ್ತಲಿದೆ ಎಂಬುದೂ ಸ್ಪಷ್ಟವಾಗಿ ತೋರಿತು.

ಕೇದಾರಬಾಬುಗಳ ಬಾಲ್ಯಸ್ನೇಹಿತರೊಬ್ಬರು ಜಬ್ಬಲಪುರದಲ್ಲಿದ್ದರು 'ಗಾಳಿ ನೀರಿಗೆ, ಸೃಷ್ಟಿಯ ಸೊಬಗಿಗೆ ಈ ಸ್ಥಳ ಹೆಸರಾದದ್ದು, ನಮ್ಮ ಮನೆಯೂ ಸಾಕಷ್ಟು ದೊಡ್ಡದಿದೆ ಮಹಿಮ ಬರುವುದಾದರೆ ನಮ್ಮಲ್ಲಿಯೇ ಯಥೇಷ್ಟ ಇರಬಹುದು' ಎಂದು ಅವರು ಬರೆದರು

ಒಂದು ದಿನ ಕೇದಾರಬಾಬು ಈ ಮಾತು ತೆಗೆದರು ಮಾಘಮಾಸ ಮುಗಿಯುತ್ತ ಬಂದುದರಿಂದ, ಮಹಿಮ ದಾರಿಯ ಆಯಾಸ ತಡೆದು ಕೊಳ್ಳುವಂತಾಗಿರುವುದರಿಂದ ಬೇಗ ಹೊರಡುವುದೊಳ್ಳೆಯದೆಂದರು ತಾವು ಚಿಕ್ಕಂದಿನಲ್ಲಿ ಅಲ್ಲಿಗೆ ಹೋದಾಗಿನ ನೆನಪು ತೆಗೆದು ಉಲ್ಲಾಸದಿಂದ ಬಣ್ಣಿಸಿದರು "ಜಗದೀಶನ ಹೆಂಡತಿ ಇನ್ನೂ ಇದ್ದಾರೆ, ಅಕೆ ಮಹಿಮನನ್ನು ತಾಯಿಯಂತೆ ನೋಡುವರು, ಈ ನೆವದಿಂದ ನಾನೂ ಮತ್ತೊಮ್ಮೆ ಆ ದೇಶ ನೋಡಿದಂತಾಗುವುದು," ಎಂದರು ಮಹಿಮ ಸುಮ್ಮನೆ ಕೇಳಿಕೊಂಡ, ಎಷ್ಟೂ ಉತ್ಸಾಹ ತೋರಿಸಲಿಲ್ಲ ಈ ನಿರಿಚ್ಛೆ ಅಚಲೆಗೆ ಮಾತ್ರ ಗೊತ್ತಾಯಿತು

"ಜಬ್ಬಲಪುರ ಒಳ್ಳೆಯ ಸ್ಥಳ ನಿಮಗೆ ಹೋಗಲು ಇಚ್ಛೆಯಿಲ್ಲವೆ ?" ತಂದೆ ಹೋದಬಳಿಕ ಅಚಲೆ ಕೇಳಿದಳು

"ನೀವು ತಿಳಿದುಕೊಂಡಷ್ಟು ನಾನಿನ್ನೂ ಗಟ್ಟಿಯಾಗಿಲ್ಲ ಎಂದಿಗಾದರೂ ಅದೇನೆಂಬ ಆಸೆಯೂ ಇಲ್ಲ "

"ಅದಕ್ಕೇ ಡಾಕ್ಟರು ಹವೆ ಬದಲಿಸಲು ಹೇಳಿದ್ದು ಒಮ್ಮೆ ಹೋಗಿ ಬಂದರೆ ಎಲ್ಲ ಸರಿಹೋಗುವುದು "

"ಯಾರಿಗೆ ಗೊತ್ತು ! ಆದರೆ ಈ ಅವಸ್ಥೆಯಲ್ಲಿ ನಾ ನನ್ನನ್ನು ಅಥವಾ ಪರರನ್ನು ಅವಲಂಬಿಸಿ ಸ್ವರ್ಗಕ್ಕೆ ಹೋಗುವುದೂ ನಂಬಿಕೆಯದಲ್ಲ ಅಚಲಾ, ಒಳಗೊಳಗೆ ನಾ ಬಲು ನಿರ್ವಿಣ್ಣನಾಗಿದ್ದೇನೆ ನೀ ಹತ್ತಿರವಿಲ್ಲದಿದ್ದರೆ ನಾನೇನು ಹೆಚ್ಚು ದಿನ ಬದುಕಲಾರೆ" ಮಾತನಾಡುತ್ತಾಡುತ್ತಾ ಮಹಿಮನ ಸ್ವರ ಗದ್ಗದವಾಯಿತು.

ಎಂದೂ ಬಾಯಿಬಿಚ್ಚಿ ಏನೂ ಕೇಳಿದವನಲ್ಲ, ತನ್ನ ನೋವು-ಕೊರತೆಗಳನ್ನು ಹೇಳಿದವನಲ್ಲ ಮಹಿಮ ಅವನ ಬಾಯಿಂದಲೇ ಈ ವ್ಯಾಕುಲ ಯಾಚನೆ! ಅದು ಅಚಲೆಗೆ ಶೂಲದಂತೆ ಅಪ್ಪಳಿಸಿ, ಅವಳಲ್ಲಿಷ್ಟು ದಿನ ನೆಲೆಗೊಂಡಿದ್ದ ಸ್ನೇಹ-ಕರುಣೆ-ಮಾಧುರ್ಯಗಳೆಲ್ಲವನ್ನೂ ಒಮ್ಮೆಲೆ ಬಿಚ್ಚಿ

ಬಿಟ್ಟಿತು ಅವಳು ತನ್ನನ್ನು ಸಂಯಮಿಸಿಕೊಳ್ಳಲಾರದೆ, ಆಗಬಾರದು ಬಾದೀತೆಂಬ ಭಯದಿಂದ ಕಂಬನಿಯನ್ನು ತಡೆದು ತಟ್ಟನೆ ಅಲ್ಲಿಂದ ಕಾಲ್ತೆಗೆದಳು ಮಹಿಮ ಹತಬುದ್ಧನಾಗಿ ಬಹಳ ಹೊತ್ತು ವಿಸ್ಮಯದಿಂದ ವ್ಯಥೆಯಿಂದ ತೆರೆದ ಬಾಗಿಲಕಡೆಗೇ ಎವೆಯಿಕ್ಕದೆ ನೋಡುತ್ತಿದ್ದು ಆ ಮೇಲೆ ಮಲಗಿಕೊಂಡ

ತಿರುಗಿ ಇಬ್ಬರೂ ಕೂಡಿದಾಗ ಒಬ್ಬರೂ ಈ ಬಗ್ಗೆ ಮಾತೆತ್ತಲಿಲ್ಲ ಮರುದಿನ ಅಚಲೆ ಟೆಲಿಗ್ರಾಮು ಹಿಡಿದುಕೊಂಡು ಬಂದು ನಗುಮೊಗದಿಂದ ನುಡಿದಳು "ಜಗದೀಶಬಾಬು ತಂತಿಗೆ ಉತ್ತರ ಕೊಟ್ಟಿದ್ದಾರೆ. ತಮ್ಮ ಮನೆಯ ಹತ್ತಿರ ನಮಗಾಗಿ ಒಂದು ಸಣ್ಣಮನೆ ಹಿಡಿದಿಟ್ಟಿದ್ದಾರಂತೆ."

"ಎಂದರೆ ?"

"ತಂದೆಯ ಗೆಳೆಯರಾದುದರಿಂದ ಅವರು ತಮ್ಮಲ್ಲಿಯೇ ಇಟ್ಟುಕೊಂಡಾರು ಆದರೆ ಅವರ ಮೇಲೆ ಇಬ್ಬರ ಭಾರ ಹಾಕುವುದು ನೆಟ್ಟಗಲ್ಲ ಆದುದರಿಂದ ಬೇರೆ ಮನೆ ಗೊತ್ತುಮಾಡಲು ತಂತಿಕೊಡಿರೆಂದು ಅಪ್ಪನಿಗೆ ಚೀಟಿ ಕಳಿಸಿದ್ದೆ ಅದರ ಉತ್ತರವಿದು." ಎಂತು ಪಾಕೀಟನ್ನು ಅವನ ಹಾಸಿಗೆಯ ಮೇಲೆ ಒಗೆದಳು

ಮಹಿಮ ಓದಿಕೊಂಡು "ಸರಿ" ಎಂದಿಷ್ಟೇ ನುಡಿದ ಅಚಲೆ ಸ್ವೇಚ್ಛೆಯಿಂದ ಸಂಗಡ ಬರಲಪೇಕ್ಷಿಸುವಳೆಂದು ಅವನರಿತುಕೊಂಡ ಆದರೆ ಇನ್ನೂ ಒಡೆಯದ ಒಗಟವಾಗಿಯೇ ಉಳಿದಿದ್ದ ಸಿನ್ನೆಯ ನಡತೆ ನೆನಪಾದುದರಿಂದ ಹೆಚ್ಚಿನ ಚಾಪಲ್ಯವನ್ನು ತೋರ್ಪಡಿಸುವ ಪ್ರವೃತ್ತಿ ಅವನಿಗುಂಟಾಗಲಿಲ್ಲ.

ಅಚಲೆ ಹೊರಡುವ ಸಿದ್ಧತೆ ನಡೆಸಿದಳು: ಆದಿನ ಮಧ್ಯಾಹ್ನ ಅವಳು ಈ ಮನೆಗೆ ಬಂದು ಸಾಮಾನುಸಟ್ಟು ಕಟ್ಟುತ್ತಲಿದ್ದಳು "ನೀ ಬಿಟ್ಟು ರಾಗಲಿಕ್ಕಿಲ್ಲವೆ ?" ಎಂದು ಕೇದಾರಬಾಬು ಕೇಳಿದರು

ಅಚಲೆ ಚಕಿತಳಾಗಿ "ಏಕೆ ?" ಎಂದಳು

ಸ್ವಾಸ್ಥ್ಯ ಮತ್ತು ಚಿಕಿತ್ಸಾ ದೃಷ್ಟಿಯಿಂದ ಅವನ ಹತ್ತಿರ ಇರುವುದು ನೆಟ್ಟಗಲ್ಲವೆಂದು ಮಗಳಿಗೆ ತಂದೆ ಹೇಳುವುದಕ್ಕೆ ಸಂಕೋಚಗೊಂಡರು ಅಂತೆಯೇ ಮಹಿಮನ ಆರ್ಥಿಕ ಸ್ಥಿತಿಯನ್ನು ನಿರ್ದೇಶಿಸಿ ಅವರೆಂದರು. "ಬಹಳ ದಿವ ಏನಲ್ಲ, ಅಲ್ಲದೆ ಜಗದೀಶನ ಮನೆಯಲ್ಲಿ ಯಾವ ತೊಂದರೆಯೂ

ಆಗುವುದಿಲ್ಲ, ಸ್ವಲ್ಪ ದಿನಕ್ಕಾಗಿ ಸುಮ್ಮನೆ ಹೆಚ್ಚುವೆಚ್ಚ—"

ಮೂಲ ಮಾತು ಅಚಲೆಗೆ ತಿಳಿಯಲಿಲ್ಲ ತಂದೆಯ ಮೋರೆ ನೋಡುತ್ತ, "ಅವರು ಹೇಳಿದರೇನೋ!" ಎಂದಳು.

"ಇಲ್ಲ ಇಲ್ಲ, ಮಹಿಮ ಏನೂ ಹೇಳಿಲ್ಲ ನನಗೇ ಎನಿಸುತ್ತದೆ—"

"ನೀವೇನೂ ಚಿಂತಿಸಬೇಡಿರಿ ಅಪ್ಪಾ, ನಾನೆಲ್ಲ ವ್ಯವಸ್ಥೆ ಮಾಡಿಕೊಂಡು ಹೋಗುವೆ," ಎಂದು ಅಚಲೆ ತನ್ನ ಕೆಲಸ ಮಾಡತೊಡಗಿದಳು. ಮರುದಿನವೇ ತನ್ನ ಒಂದೆರಡು ವಸ್ತ್ರಗಳನ್ನು ಕದ್ದುಮಾರಿ ಕೈಯೊಳಗೆ ಹಣ ಮಾಡಿಕೊಂಡಳು

ಹೊರಡುವುದು ಎರಡು ದಿನ ಇರಲಿಕ್ಕೇ ಅಚಲೆಯ ಹೃದಯ ಗಾಳಿಯಲ್ಲಿ ಹಾರಾಡತೊಡಗಿತು ಕಲಕತ್ತೆಯನ್ನು ಬಿಟ್ಟು—ಕೆಲವೇ ದಿನ ಗಂಡನ ಮನೆಗೆ ಹೋದುದರ ಹೊರತು—ಅವಳೆಲ್ಲಿಯೂ ಹೋಗಿರಲಿಲ್ಲ. ಇಷ್ಟು ದಿನವಾದರೂ ಪಶ್ಚಿಮದ ಮೋರೆ ನೋಡಿರಲಿಲ್ಲ ಅಲ್ಲಿಯ ಪ್ರಾಚೀನ ಕೀರ್ತಿ ಎಷ್ಟು, ವನಕಾನನ ಎಷ್ಟು, ಗುಡ್ಡಬೆಟ್ಟಗಳು, ನದಿನದಗಳು, ತಡಸಲುಗಳು ಇನ್ನೂ 'ಏನೇನೋ ನೋಡತಕ್ಕಂತಹ ವಿಷಯಗಳೆಷ್ಟು' ಎಂಬುದನ್ನು ಮಂದಿಯ ಬಾಯಿಂದ ಕೇಳಿದುದೆಷ್ಟೋ ಅಷ್ಟೆ ಕಣ್ಮುಟ್ಟ ನೋಡುವೆನೆಂಬ ಕಲ್ಪನೆ ಕೂಡ ಅವಳಿಗಿರಲಿಲ್ಲ ಈಗವನ್ನು ನೋಡುವ ಭಾಗ್ಯ ಒದಗಿದೆ ಅಲ್ಲದೆ ಅಲ್ಲಿ ಪತಿಯ ಸವೆದ ಶರೀರ ತುಂಬುವುದು, ಅಲ್ಲಿ ತಾನೊಬ್ಬಳೇ ಗೃಹಿಣಿ, ಪತಿಯ ಕಾರ್ಯದಲ್ಲಿ ಸಹಾಯಕಳು, ಅಲ್ಲಿಯ ಗಾಳಿನೀರು ಹಿತಕರ, ಅಲ್ಲಿ ಸಂಸಾರ ಯಾತ್ರೆಯ ಮಾರ್ಗ ಸರಳ-ಸುಗಮ, ಅವರಿಗೆ ಗುಣವಾಯಿತೆಂದರೆ ಬೇಕಾದರೆ ಅಲ್ಲಿಯೇ ಮನೆ ಮಾಡಿಬಿಡಬಹುದು — ಆಗ ಮನೆಗೆ ಬರಬಹುದಾದ ಅಪರಿಚಿತ ಅತಿಥಿಗಳೆಲ್ಲರ ಮುಖಗಳೂ ನಿಕಟ ಪರಿಚಯವುಳ್ಳವುಗಳಂತೆಯೇ ಅವಳ ಕಣ್ಣಿಗೆ ಕಟ್ಟಿದವು ಕೂಡ — ಒಂದಲ್ಲ ಎರಡಲ್ಲ, ಹಲವು ಸವಿಗನಸುಗಳು ದಿವರಾತ್ರಿಯೆನ್ನದೆ ಅವಳ ತಲೆಯೊಳಗೆ ಸುಳಿದಾಡತೊಡಗಿದವು. ಈ ಎಲ್ಲ ವಿಷಯಗಳಿಗೂ 'ತನ್ನನ್ನು ಬಿಟ್ಟು ಸ್ವರ್ಗಕ್ಕೆ ಹೋಗುವ ಭರವಸೆಯೂ ಇಲ್ಲವೆಂದು' ಗಂಡನಾಡಿದ ಮಾತಿನ ಸವಿಬೆರಕೆ ಬೇರೆ ಅಲ್ಲದೆ ಈಗವಳಿಗೆ ಯಾರ ಬಗ್ಗೆಯೂ ಕ್ಷೋಭವಿಲ್ಲ. ಅಂತರ್ಯದ ಸಕಲ ಗ್ಲಾನಿಯೂ ತೊಳೆದು ಒರಸಿಹೋಗಿ ಹೃದಯ ಗಂಗಾಜಲದಂತೆ ನಿರ್ಮಲವಾಗಿದೆ, ಪವಿತ್ರವಾಗಿದೆ.

ಹೋಗುವ ಮೊದಲೊಮ್ಮೆ ಮೃಣಾಲಳನ್ನು ಕಾಣಬೇಕು, ಪೂರ್ಣಾಂತಃಕರಣದಿಂದ ಅವಳನ್ನು ತಬ್ಬಿಕೊಳ್ಳಬೇಕು, ತಿಳಿದ ತಿಳಿಯದ ಎಲ್ಲ ತಪ್ಪುಗಳಿಗಾಗಿ ಕೇಳಿಕೊಳ್ಳಬೇಕು ಎಂದವಳಿಗೆ ಬಲವಾದ ಇಚ್ಛೆಯಾಯಿತು ಅಂದು ಸುರೇಶನಿಗಾಗಿಯೂ ಅವಳ ಜೀವ ಅತ್ತಿತು ಒಳ್ಳೆಯ ಗೆಳೆಯನಾಗಿಯೂ ಲಜ್ಜೆಯಿಂದ ಸಂಕೋಚದಿಂದ ತಮಗೆ ಕಾಣದಾಗಿದ್ದಾನಲ್ಲ ಎಂಬ ತನ್ನ ದೌರ್ಭಾಗ್ಯದ ಗುಪ್ತವೇದನೆ ಅವಳಿಗೆ ಎಂದಿಲ್ಲದಷ್ಟಾಯಿತು ಅವನಲ್ಲಿಯೂ ಕ್ಷಮೆ ಬೇಡುವುದಿತ್ತು ಆದರೆ ವಿಚಾರಿಸಲಾಗಿ ಅವನು ನಿನ್ನೆಯಿಂದ ಮನೆಯೊಳಗೇ ಇಲ್ಲವೆಂದು ತಿಳಿಯಿತು.

ಹೊರಡುವ ದಿನ ಮುಂಜಾನೆಯಿಂದಲೇ ಟಿಪಿ ಟಿಪಿ ಮಳೆ ಆರಂಭವಾಗಿತ್ತು ಕೆಲವು ಸಾಮಾನು ನಿಲ್ದಾಣಕ್ಕೆ ಕಳಿಸಿಯಾಗಿತ್ತು, ಟಿಕೇಟೂ ಕೊಂಡಾಗಿತ್ತು ಹಿಂದಿನಿಡೀ ಎರಡು ದಿನ ಸುರೇಶನ ದರ್ಶನವೇ ಇರಲಿಲ್ಲ. ಆದರೆ ಅಂದು ಮುಂಜಾನೆ ದುರ್ದೈವದಿಂದಲೋ ಮತ್ತಾವ ಕಾರಣದಿಂದಲೋ ಅವನು ತನ್ನ ಓದುವ ಕೋಣೆಯಲ್ಲಿಯೇ ಇದ್ದ. ಆ ಆನಂದಹೀನ ಕೋಣೆಯೊಳಗೆ ಅಚಲೆ ವಸಂತಮಾರುತನಂತೆ ಪ್ರವೇಶಿಸಿದಳು. ಅವಳ ಕಂಠಸ್ವರದಲ್ಲಿ ಆನಂದ ಉಕ್ಕುತ್ತಿತ್ತು "ಸುರೇಶಬಾಬೂ, ಈ ಜನ್ಮದಲ್ಲಿ ನಮಗಿನ್ನು ನೀವು ಮುಖ ತೋರಿಸುವುದಿಲ್ಲವಲ್ಲವೆ? ಅಂಥದೇನು ದೊಡ್ಡ ತಪ್ಪು ಮಾಡಿದ್ದೇನೆ ನಾನು?" ಎಂದಳು

ಸುರೇಶ ಮುಖವೆತ್ತಿದ ತಮ್ಮ ಮನೆ ಸುಟ್ಟಾಗ ನೋಡಿದ ಅದರ ತತ್ತರದ ಮರಗಳ ಮುಖವನ್ನು ಸುರೇಶನ ಮುಖ ಸ್ಮರಣೆಗೆ ತಂದುಕೊಟ್ಟಿತು ಅಚಲೆಗೆ ಅವಳು ರೋಮಾಂಚಿತಳಾದಳು ಹೇಳಬೇಕೆಂದಿದ್ದುದೆಲ್ಲ ಮರೆತುಹೋಯಿತು "ಮೈಯೊಳಗೆ ನೆಟ್ಟಗಿಲ್ಲವೇ ಸುರೇಶಬಾಬು? ನನಗೆ ಹೇಳಿಯೇ ಇಲ್ಲವಲ್ಲ!" ಎಂದಳು

ಸುರೇಶ ತಲೆತಗ್ಗಿಸಿ, "ಇಲ್ಲ, ನನಗೇನೂ ಆಗಿಲ್ಲ. ನೆಟ್ಟಗೇ ಇದ್ದೇನೆ" ಎಂದು ಪುಸ್ತಕದ ಹಾಳೆ ಮುಗುಚುತ್ತ ನುಡಿದ "ಇಂದೇ ನೀವು ಹೊರಡುವುದು—ಎಲ್ಲ ಏರ್ಪಾಡು ಆಗಿದೆಯೆ? ಮತ್ತೆ ಇನ್ನೆಂದು ಭೆಟ್ಟಿಯೊ!"

ಅಚಲೆ ಮಾತನಾಡದಿರಲು ಸುರೇಶ ಮುಖವೆತ್ತಿ ನೋಡಿದ ಅಚಲೆಯ ಕಂಗಳೆರಡೂ ಹನಿಗೂಡಿ ಹೊಳೆಯುತ್ತಿದ್ದವು. ದೃಷ್ಟಿಸಂಗಮವಾಗುತ್ತಲೆ ದೊಡ್ಡ ದೊಡ್ಡ ಹನಿಗಳು ಟಪಟಪನೆ ಉದುರಿದವು. ಸುರೇಶನ

ಧಮನಿಗಳಲ್ಲಿ ಉಷ್ಣರಕ್ತ ಪ್ರವಾಹ ನೆರೆದುಂಬಿತು. ಆದರೆ ಆಗವನು ಬಲವನ್ನೆಲ್ಲ ಒಟ್ಟುಗೂಡಿಸಿ ನಿಗ್ರಹದಿಂದ ನೋಟ ತಗ್ಗಿಸಿದ. ಅಚಲೆ ಸೆರಗಿನಿಂದ ಕಣ್ಣೊರಸಿಕೊಂಡು ಗಾಢಸ್ವರದಿಂದ ಮಾತನಾಡಿದಳು: “ ನಿಜವಾಗಿಯೂ ನಿಮ್ಮ ಪ್ರಕೃತಿ ಚೆನ್ನಾಗಿಲ್ಲ ಸುರೇಶಬಾಬೂ , ನೀವೂ ನಮ್ಮ ಸಂಗಡ ನಡೆಯಿರಿ ”

“ ಒಲ್ಲೆ ”

“ ಏಕೆ ಒಲ್ಲಿರಿ ? ನಿಮಗಾಗಿ—”

“ ಬಾಬೂ, ತಮ್ಮ ಚಾ—” ಎನ್ನುತ್ತ ಆಳು ಬಾಗಿಲ ತೆರೆ ಸರಿಸಿ ಒಳಗೆ ಬಂದ ಅಚಲೆ ಬೇರೆ ಕಡೆ ಮುಖ ತಿರುಗಿಸಿ ಹೊರಟುಹೋದಳು

ಕೆಲಗಂಟೆಗಳ ತರುವಾಯ ಅಚಲೆ ಮಹಿಮನ ಕೋಣೆಗೆ ಹೋದಳು. ಅವನು ಕೇಳಿದ “ ಸುರೇಶ ಎಲ್ಲಿಗೆ ಹೋಗಿದ್ದಾನೆ, ಎಷ್ಟು ದಿನವಾಯಿತು ಬಲ್ಲೆಯಾ ? ಅತ್ತೆವ್ವನಿಗೂ ಹೇಳಿ ಹೋಗಿಲ್ಲವಂತೆ ಈವೊತ್ತಾದರೂ ಅವನ ಬೆಟ್ಟಿಯಾಗುವುದೋ ಇಲ್ಲವೊ ? ”

“ ಇಂದಂತೂ ಮನೆಯಲ್ಲಿಯೇ ಇದ್ದಾರೆ ”

“ ಇಲ್ಲ ಇದೇ ಈಗ ದಾಸಿ ಹೇಳಿದಳು ಅವನು ಬೆಳಗ್ಗೇ ಹೊರ ಗೆಲ್ಲಿಯೋ ಹೋದನಂತೆ.”

ಅಚಲೆ ಸುಮ್ಮನಿದ್ದಳು ಇದೇ ಈಗ ತಾನು ನೋಡಿದ್ದಳು, ಅವನಿಗೆ ಮೈಯೊಳಗೆ ನೆಟ್ಟಗಿಲ್ಲ, ಅವನನ್ನು— ಚಿಕ್ಕಂದಿನಲ್ಲಿಯಂತೆ ಈಗೊಮ್ಮೆ ಬದುಕಿಸಿದ ಕೃತಜ್ಞತೆಗಾಗಿಯಾದರೂ— ನಮ್ಮೊಂದಿಗೆ ಕರೆದುಕೊಂಡು ಹೋಗುವುದು ಉಚಿತ, ಇನ್ನು ತನಗೆ ಭಯವಿಲ್ಲ, ಲಜ್ಜಿತಳನ್ನು ಸಂಶಯ ದೃಷ್ಟಿಯಿಂದ ನೋಡಿ ಮತ್ತಷ್ಟು ಲಜ್ಜೆಗೀಡು ಮಾಡಬಾರದು— ಇದೆಲ್ಲ ಅವಳ ಒಳಗಿನ ಮಾತು, ಬಾಯಿಂದ ಮಾತ್ರ ಹೊರಡದಾಯಿತು ಪತಿಯ ಮುಖವನ್ನು ಸರಿಯಾಗಿ ನೋಡುವುದಕ್ಕೂ ಅವಳಿಂದಾಗಲಿಲ್ಲ. ನಿಃಶಬ್ದ ವಾಗಿ ಕೈಗೆ ಸಿಕ್ಕ ಯಾವುದೋ ಕೆಲಸದಲ್ಲಿ ತೊಡಗಿದಳು

ಕ್ರಮಶಃ ಹೊರಡುವ ಹೊತ್ತು ಸಮೀಪಿಸಿತು ಕೆಳಗಡೆ ಕೇದಾರ ಬಾಬುಗಳ ದನಿ ಕೇಳಿಸುತ್ತಿತ್ತು ಅತ್ತೆವ್ವ ಮಂಗಲ ಘಟ ಇಡುವುದು ಮೊದಲಾದವುಗಳಲ್ಲಿ ತೊಡಗಿದ್ದಳು. ಆಳುಗಳು ಸಾಮಾನು ಹೇರುತ್ತಿದ್ದರು. ಆದರೆ ಮನೆಯ ಯಜಮಾನನ ಪತ್ತೆಯೆ ಇಲ್ಲ ಆದರೂ ಈ ವಿಷಯ

ಬಾಯಿಬಿಟ್ಟು ವಿಚಾರಿಸಲು ಯಾರೂ ಸಾಹಸಪಡಲಿಲ್ಲ. ಎಲ್ಲರೂ ಒಳಗೊಳಗೆ ಕುಂಠಿತರಾಗಿದ್ದರು ಮಾತ್ರ

ಕೇದಾರಬಾಬು ಮಗಳನ್ನೊತ್ತಟ್ಟಿಗೆ ಕರೆದು ತಲೆಯ ಮೇಲೆ ಕೈಯಿಟ್ಟು ಸ್ನೇಹಾರ್ದ್ರಕಂಠದಿಂದ ನುಡಿದರು "ಸತಿಸಾವಿತ್ರಿಯಾಗಮ್ಮಾ, ತಾಯಿಯಂತಾಗು ಈ ಮುಪ್ಪಿನಲ್ಲಿ ಎಷ್ಟೋ ಕೆಟ್ಟಮಾತು ಆಡಿದ್ದ ರಾಡಿರಬಹುದು, ಸಿಟ್ಟಾಗಬೇಡ" ಎಂದು ಒಡನೆಯೆ ಹೊರಟುಹೋದರು.

ಮಹಿಮ ಗಾಡಿಹತ್ತುವಾಗ ಅತಿಶಯ ಖಿನ್ನಸ್ವರದಿಂದ ಅಚಲೆಗೆಂದ: "ಅವನು ಕೊನೆಗೂ ಕಾಣಿಸಿಕೊಳ್ಳಲಿಲ್ಲ ಒಂದು ಮಾತು ಆಡುವುದಕ್ಕಾಗಿ ಎರಡು ದಿನಗಳಿಂದಲೂ ಹಾದಿನೋಡುತ್ತಿದ್ದೆ"

ತಂದೆಯು ಮಾತಿನಿಂದ ಅವಳ ಕಣ್ಣೊಳಗೆ ನೀರುಬಂದಿತ್ತು ಅವಳು ಗೋಣುಹಾಕಿ ಬರೀ, "ಹೌದು ಕಾಣಿಸಿಕೊಳ್ಳಲಿಲ್ಲ" ಎಂದಳು

ಅಚಲೆ ಅತ್ತೆವ್ವನಿಗೆ ನಮಸ್ಕರಿಸಿದಳು ಆಕೆ ಗದ್ಗದಕಂಠದಿಂದ ಬಾಯ್ತುಂಬ ಹರಸಿ "ಕೈಯಕಂಕಣ ಅಕ್ಷಯವಾಗಲಮ್ಮ ಗಂಡನಿಗೆ ಗುಣವಾಗಿ, ಶೀಘ್ರವೇ ತಿರುಗಿ ಬಾ"

"ಇದೇ ನನಗೆ ಎಲ್ಲಕ್ಕೂ ಹಿರಿದಾದ ಹರಕೆ- ಅತ್ತೆವ್ವ!" ಎಂದು ಕಣ್ಣೊರಸಿಕೊಳ್ಳುತ್ತ ಅಚಲೆ ಗಾಡಿ ಹತ್ತಿದಳು

೨೭

ಹಾಒರಾ ಸ್ಟೇಶನಿನಿಂದ ಗಾಡಿ ಬಿಡುವುದಕ್ಕೆ ಹತ್ತು ಹನ್ನೆರಡು ನಿಮಿಷವಿದ್ದಿತು ಮೋಡ ಇನ್ನೂ ಹರಿದಿರಲಿಲ್ಲ, ಟಪಿಟಪಿ ಮಳೆಯೂ ನಿಂತಿರಲಿಲ್ಲ ಕಿಕ್ಕಿರಿದು ಕಿಚಪಿಚನೆ ಓಡಾಡುತ್ತಿದ್ದ ಜನಜಂಗುಳಿಯೊಳಗೆ, ಪ್ರಕಾಂಡ ಬ್ಯಾಗನ್ನು ಹಿಡಿದುಕೊಂಡು ಸುರೇಶ ಬರುತ್ತಿರುವುದು ಕಂಡಿತು.

ವಿಸ್ಮಯದಿಂದ ದುಶ್ಚಿಂತೆಯಿಂದ ಕೇದಾರಬಾಬುಗಳ ಮೋರೆ ಕಾಳುಗವಿಯಿತು ಅವನು ಹತ್ತಿರ ಬರುವುದೇ ತಡ, ಅವರು ಕೂಗಿ ಕೊಂಡರು. "ಏನು ಸುರೇಶ? ನೀ ಎಲ್ಲಿಗೆ?"

ಸುರೇಶ ಅಚಲೆಯ ಮೋರೆಯನ್ನೇ ದಿಟ್ಟಿಸುತ್ತ ಅವಳಿಗೇ ಉತ್ತರ ಕೊಟ್ಟ "ಉಃ, ನಿನ್ನ ಯಾವ ಉಪದೇಶವನ್ನೂ ನಿಮಂತ್ರಣವನ್ನೂ ಮೀರುವುದು ನನಗೆ ಅಸಾಧ್ಯವಾಗಿ ತೋರುತ್ತದೆ. ಇಂದು ಮುಂಜಾನೆ ನೀ ಹೇಳದಿದ್ದರೆ ನನ್ನ ಪ್ರಕೃತಿ ಎಷ್ಟು ಕೆಟ್ಟಿದೆ ಎಂಬುದು ನನಗೇನು ತಿಳಿಯ

ತ್ತಿರಲಿಲ್ಲ! ನಡೆ, ನಿಮ್ಮ ಅತಿಥಿಯಾಗಿ ಕೆಲ ದಿನ ಇದ್ದು ನೋಡುವ, ಹೆಟ್ಟಗಾಗುವುದೋ ಹೇಗೊ! ನಿಜವಾಗಿ ಹೇಳುತ್ತೇನೆ ಮ— ”

“ ಉತ್ತಮವಾಯಿತು ಸುರೇಶ, ಉತ್ತಮವಾಯಿತು; ಅಲ್ಲದೆ ಹೊಸ ಸ್ಥಳದಲ್ಲಿ ನಮಗೂ ಜೋಡಾದಂತಾಗುವುದು ” ಎಂದು ಮಹಿಮ ಅಚಲೆಯ ಕಡೆ ಕಿಂಚಿತ್ ನೋಡಿದ

ಆ ನಿಶ್ಶಬ್ದ, ವ್ಯಥಿತ, ಕ್ಷಣಿಕ ದೃಷ್ಟಿ ಎಲ್ಲರಿಗೂ ಕೇಳಿಸುವಂತೆ ಅಚಲೆಗೆಂದಿತು ‘ ನನಗೇಕೆ ಹೇಳಲಿಲ್ಲ? ಅವನ ಅಸ್ವಾಸ್ಥ್ಯದ ಬಗ್ಗೆ ಒಳಗೊಳಗೆ ಇಷ್ಟೊಂದು ವ್ಯಾಕುಲಳಾಗಿಯೂ ಇಂದು ಬೆಳಗಿನಲ್ಲಿಯೇ ಇಬ್ಬರೂ ಈ ವಿಷಯ ಆಲೋಚನೆಮಾಡಿಕೊಂಡೂ ನನಗೆ ರವಷ್ಟೂ ತಿಳಿಸಬಾರದೇಕೆ? ಹೀಗೆ ಕದ್ದುಮುಚ್ಚಿ ಇಡುವ ಅಗತ್ಯವೇನಿತ್ತು ಅಚಲಾ? ’

ಅಚಲೆ ಬೇರೆ ಕಡೆ ಮುಖ ತಿರುಗಿಸಿದಳು ಸುರೇಶ ಕ್ಷಣಹೊತ್ತು ವಿಮೂಢನಂತೆ ನಿಂತ ಬಳಿಕ ಅಕಾರಣವ್ಯಗ್ರತೆಯಿಂದ ಅವನೆಂದ “ ಇನ್ನು ಹೊತ್ತಿಲ್ಲ, ನಡೆ ನಡೆ, ಗಾಡಿಯಲ್ಲಿಯೆ ಮಾತನಾಡುವ. ನಡೆಯಿರಿ ಕೇದಾರಬಾಬು, ” ಎನ್ನುತ್ತ ಒಂದು ರೀತಿಯಿಂದ ಎಲ್ಲರನ್ನೂ ತಳ್ಳಿಕೊಂಡು ಹೊರಟ

ಕೇದಾರಬಾಬು ಮಹಿಮನನ್ನು ಅವನ ಸ್ಥಳದಲ್ಲಿ ಕುಳ್ಳಿರಿಸಿ, ಮಗಳನ್ನು ಹೆಂಗುಸರ ಡಬ್ಬಿಯಲ್ಲಿ ಹತ್ತಿಸಿದರು. ಗಾಡಿ ಬಿಡುವ ಹೊತ್ತಿನಲ್ಲಿ ಸುರೇಶ ಅವರಿಗೆ ಬಾಗಿ ನಮಸ್ಕರಿಸಿ ಮಹಿಮನ ಪಕ್ಕದಲ್ಲಿ ಕುಳಿತ ಆಗ ಕೇದಾರಬಾಬು ಅವನಿಗೆ “ ನೀನೂ ಸಂಗಡ ಇರುವೆ, ದಾರಿಯಲ್ಲಿ ಕಷ್ಟವಾಗಲಿಕ್ಕಿಲ್ಲ ಹೆಂಗುಸರ ಡಬ್ಬಿ ಸ್ವಲ್ಪ ದೂರವಾಯಿತು ನಡುನಡುವೆ ವಿಚಾರಿಸುತ್ತಿರು ಸುರೇಶ, ” ಎಂದು ಮುಟ್ಟಿದೊಡನೆ ತಿಳಿಸಬೇಕೆಂದೂ ಅದಕ್ಕಾಗಿ ತಾವು ಆತುರರಾಗಿರುವರೆಂದೂ ಮಹಿಮನನ್ನು ಮತ್ತೊಮ್ಮೆ ಎಚ್ಚರಿಸಿ ಕಣ್ಣೊರಸಿಕೊಂಡು ಹೊರಟುಹೋದರು

ಗಾಡಿ ಬಿಟ್ಟಮೇಲೆ ಚಳಿಯ ಭಯದಿಂದ ಮಹಿಮ ಕಂಬಳಿ ಮುಸುಕಿಟ್ಟು ಬೇಗನೆ ಮಲಗಿದ ಸುರೇಶ ಹಾಗೆಯೇ ಏಕಚಿತ್ತದಿಂದ ಕುಳಿತ ಅವನ ಮೋರೆ ನೋಡುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ಇದ್ದಿದ್ದರೆ ಯಾರಿಗೂ ಎಳೆಸಬಹುದಿತ್ತು— ಆ ಎರಡು ಕಣ್ಣುಗಳ ನೋಟ

ಸ್ವಾಭಾವಿಕವಾಗಿಲ್ಲ, ಒಳಗೆ ದೊಡ್ಡ ಅಗ್ನಿಕಾಂಡ ನಡೆದಿರದಿದ್ದರೆ ಕಣ್ಣಿಂದ ಇಂತಹ ಉಗ್ರಪ್ರಕಾಶ ಹೊರಸೂಸದು

ಸ್ಲೋಪ್ಯಾಸೆಂಜರ್ ಸಣ್ಣ ದೊಡ್ಡ ಎಲ್ಲ ಸ್ಟೇಶನುಗಳಲ್ಲಿಯೂ ನಿಂತು ನಿಂತು ಮಂಥರಗತಿಯಿಂದ ಸಾಗಿತ್ತು ಹೊರಗೆ ಮಳೆ ಜೊಂಯ್ ಜೊಂಯ್ ಒಂದೇಸವನೆ ಹತ್ತಿತ್ತು. ಒಂದು ದೊಡ್ಡ ಸ್ಟೇಶನಿನಲ್ಲಿ ಗಾಡಿ ನಿಲ್ಲಲುಪಕ್ರಮಿಸಿದಾಗ ಮಹಿಮ ಮುಸುಕು ಓರೆಮಾಡಿ "ಗದ್ದಲವಿಲ್ಲ, ಸ್ವಲ್ಪ ಮಲಗಿಕೊಳ್ಳಬಾರದೆ? ಇಂಥ ಅನುಕೂಲತೆ ಯಾವಾಗಲೂ ಸಿಕ್ಕೀತೆಂಬ ನಿಯಮವಿಲ್ಲ," ಎಂದ

ಸುರೇಶ ಬೆಚ್ಚಿಬಿದ್ದು, "ಹಾಂ, ಈಗ ಮಲಗುವೆ" ಎಂದ

ಮಹಿಮನಿಗೆ ಈ ಬೆಚ್ಚಿಕೆ ಅಸಂಗತವಾಗಿ, ಈ ಮನಸಿನ ಕುಗ್ಗು ಅಕಾರಣವಾಗಿ ತೋರಿತು ಅವನು ವಿಸ್ಮಯದಿಂದ ಅವಾಕ್ಕಾದ ಸುರೇಶ ತನಗೆ ತಿಳಿಯದ ಹಾಗೆ ಏನೋ ಅಪರಾಧ ಮಾಡುತ್ತಲಿದ್ದಾನೆ, ಅದು ಬಯಲಿಗೆ ಬಿದ್ದೀತೆಂಬ ಭಯದಿಂದಲೇ ಹೀಗೆ ತ್ರಸ್ತನಾಗುತ್ತಿದ್ದಾನೆ ಎಂಬ ಭಾವನೆ ಎಷ್ಟೋ ಹೊತ್ತಿನ ತನಕ ಮಹಿಮನ ಮನಸಿನಿಂದ ದೂರವಾಗಲಿಲ್ಲ

ಗಾಡಿ ಸ್ಟೇಶನ್ನಿನಲ್ಲಿ ನಿಂತಿತು ಆಗ ತನ್ನರಿವು ತನಗಾಗಿ ಸುರೇಶ ಮುಖದಲ್ಲಿ ನಗೆ ತಂದುಕೊಂಡು ಹೇಳಿದ "ನಿನಗೆ ನಿದ್ದೆ ಹತ್ತಿದೆಯೆಂದು ತಿಳಿದಿದ್ದೆ ಅಂತೆಯೇ ಹಾಗೆ ಬೆಚ್ಚಿಬಿದ್ದೆ—"

ಮಹಿಮ "ಹೂಂ" ಎಂದಿಷ್ಟೇ ಎಂದ ಆದರೆ ಈ ಅನಾವಶ್ಯಕ ಸ್ಪಷ್ಟೀಕರಣದಿಂದ ಅವನಿಗೆ ಸಮಾಧಾನವಾಗಲಿಲ್ಲ

ಸುರೇಶನೆಂದ "ಅಚಲೆಗೆ ಏನಾದರೂ ಬೇಕೋ ಹೇಗೋ ಕೇಳಿಕೊಂಡು ಬಂದರೆ—"

"ಆದರೆ ಮಳೆ ಬರುತ್ತಿಲ್ಲವೆ?"

"ಅದೇನಿಲ್ಲ ಚಟ್ಟನೆ ಹೋಗಿ ಕೇಳಿಬರುವೆ." ಎಂದು ಸುರೇಶ ಇಳಿದು ಹೋದ

ಇಷ್ಟರೊಳಗೆ ಅಚಲೆ ಪಾತಿಗೊಬ್ಬ ಒರಗೆಯ ಗೆಳತಿಯನ್ನು ಮಾಡಿಕೊಂಡಿದ್ದಳು ಸುರೇಶನನ್ನು ಅವಳೇ ಮೊದಲು ನೋಡಿದಳು ಅಚಲೆಯನ್ನು ತಿವಿದು ಮುಖ ತಿರುಗಿಸಿ ಕುಳಿತಳು. ಅಚಲೆ ಮುಖವೆತ್ತಿದೊಡನೆ ಸುರೇಶ ಕೇಳಿದ "ಏನಾದರೂ ಬೇಕೇನು?"

ಅಚಲೆ ಗೋಣುಹಾಕಿ "ಬೇಡ, ನೀವು ಮಳೆಯೊಳಗೆ ಬರಬೇಕಾದ್ದಿಲ್ಲ, ಹೋಗಿರಿ," ಎಂದು ಎದ್ದು ಕಿಡಕಿಯ ಹತ್ತಿರ ಹೋಗಿ ಮೃದು ಕಂಠದಿಂದ ನುಡಿದಳು "ನನ್ನ ಚಿಂತೆಬಿಡಿರಿ, ಯಾರ ಬಗ್ಗೆ ಚಿಂತಿಸಬೇಕೋ ಅವರ ಕಡೆ ದೃಷ್ಟಿಯಿರಲಿ."

"ಅದು ಇದೆ ಆದರೆ ನಿನಗೇನಾದರೂ ತಿನಿಸುಗಿನಿಸು—"

ಅಚಲೆ ಸಹಾಸ್ಯವಾಗಿ, "ಬೇಡಿರಪ್ಪಾ ಬೇಡ ನನಗೇನೂ ಬೇಕಾಗಿಲ್ಲ ನೀವೇನು ಮಳೆಯೊಳಗೆ ತೋಯಿಸಿಕೊಂಡು ಬೇನೆ ಬೀಳಬೇಕೆನ್ನುವಿರೋ?" ಎಂದಳು

ಸುರೇಶ ನಿಮಿಷಮಾತ್ರ ಅವಳ ಮುಖದ ಕಡೆ ನೋಡಿ ದೃಷ್ಟಿ ಕೆಳಗೆ ಹಾಕಿದ "ಬಹಳ ದಿವಸದಿಂದ ಎನ್ನುತ್ತಿದ್ದೇದೆ ಆದರೆ ದುರ್ದೈವಿಯ ಹತ್ತಿರಕ್ಕೆ ಬೇನೆ ಕೂಡ ಸುಳಿಯಲೊಲ್ಲದು!" ಎಂದ

ಕೇಳಿ ಲಜ್ಜೆಯಿಂದ ಅಚಲೆಯ ಮುಖ ಆರಕ್ತವಾಯಿತು ಆದರೆ ಮಾತಿಗೆ ನಗೆಚಾಟಿಕೆಯ ರೂಪ ಕೊಡುವುದಕ್ಕಾಗಿ ಗಟ್ಟಿಯಾಗಿ ನಕ್ಕು ಅವಳೆಂದಳು "ನಡೆದಂತೂ ನಡೆಯಿರಿ ಅಲ್ಲಿ ಈ ರೀತಿ ಮಾಡಿದರೆ—"

ಮಾತು ಪೂರಯಿಸಲಿಲ್ಲ ಲಜ್ಜೆ ತಡೆಯಿತು ಗಾಡಿ ಹೊರಡಲು ಗಂಟೆಯಾಯಿತು. ಸುರೇಶ ಏನೋ ಮಾತನಾಡಲು ಮುಖವೆತ್ತಿ ಮಾತ ನಾಡದೆ ತಿರುಗಿ ಹೊರಟ ಏನೋ ತಡೆದಂತಾಯಿತು ಹೊರಳಿ ನೋಡಿದ ಅವನ ಶಲ್ಯದ ಚುಂಗು ಅಚಲೆಯ ಕೈಯಲ್ಲಿ ಅವಳು ಪಿಸುಮಾತಿನಲ್ಲಿ ಮೂದಲಿಸಿದಳು "ನಾ ನಿಮ್ಮನ್ನು ಕರೆದೆನೆಂದು ಎಲ್ಲರ ಮುಂದೂ ಏಕೆ ಆಡಿದಿರಿ? ಏಕೆ ನನ್ನ ಮುಖಭಂಗ ಮಾಡಿದಿರಿ?"

ಈ ಬಗ್ಗೆ ಸುರೇಶನಿಗೆ ಆಗನಿಂದಲೂ ಪಶ್ಚಾತ್ತಾಪವಾಗುತ್ತಲಿತ್ತು. "ಗೊತ್ತಿಲ್ಲದೆ ತಪ್ಪಾಯಿತು, ಅಚಲಾ" ಎಂದ

ಅಚಲೆ ಕೊಂಚವೂ ಶಾಂತಳಾಗದೆ ಒಗರುನುಡಿ ನುಡಿದಳು: "ಗೊತ್ತಿಲ್ಲದೆ ಅಂತೆ! ಎಲ್ಲರ ಎದುರಿಗೆ ನನ್ನನ್ನು ನಾಚಿಸಬೇಕೆಂದೇ ನಿಮ್ಮಿಚ್ಛೆ!"

ಗಾಡಿ ಹೊರಟಿತ್ತು ಸುರೇಶನಿಗೆ ಉತ್ತರ ಕೊಡಲಾಗಲಿಲ್ಲ. ದ್ರುತಗತಿಯಿಂದ ಹೊರಟು ಹೋದ. ಅವನೆದೆ ಢಕ ಢಕ ಎನ್ನುತ್ತಿತ್ತು. ಅವನು ಅತ್ತಿತ್ತ ನೋಡದೆ ಓಡುತ್ತಿದ್ದನಾದರೂ ಅವನನ್ನು ದೃಷ್ಟಿಯಿಂದ ಅನುಸರಿಸಿದವಳಿಗೆ ಎದೆಯ ಬಡಿತ ಒಮ್ಮೆಲೆ ನಿಂತುಬಿಡುವಂತಾಯಿತು.

ಅವಳ ದೃಷ್ಟಿ ನೆಟ್ಟಗೆ ಮಹಿಮನ ಮೇಲೆ ಬಿದ್ದಿತು. ಅವನು ಕಿಡಿಕಿಯೊಳಗಿಂದ ತಮ್ಮ ಕಡೆಯೇ ನೋಡುತ್ತಲಿದ್ದಾನೆ!

"ಇವರೇ ಕಾಣುತ್ತದೆ ನಿಮ್ಮ ಬಾಬೂ?" ಅಚಲೆ ತನ್ನ ಸ್ಥಳದಲ್ಲಿ ಹೋಗಿ ಕೂಡುತ್ತಲೆ ಗೆಳತಿ ಕೇಳಿದಳು ಅನ್ಯಮನಸ್ಕಳಾದ ಅಚಲೆ 'ಹೂಂ' ಎಂದು ಕಿಡಿಕಿಯೊಳಗೆ ಮುಖವಿಟ್ಟು ಶೂನ್ಯದೃಷ್ಟಿಯಿಂದ ನೋಡತೊಡಗಿದಳು ಗೆಳತಿಯೊಡನೆ ಹಿಂದಿನ ಮಾತು ಕತೆ ಮುಂದುವರಿಸಲು ಅವಳಿಗೆ ಮನಸಾಗಲಿಲ್ಲ ಆದರೆ ಹಲವು ನಿಲ್ದಾಣಗಳು ಕಳೆದ ಬಳಿಕ ಅವಳ ಮನಸು ಹಗುರಾಗಿ ಮುಖ ಶಾಂತವಾಯಿತು ಅವಳು ತನ್ನ ಸಂಗಡಿತಿಯೊಡನೆ ಬೇಕಾದ ಹಾಗೆ ಮಾತನಾಡಲು ಸಮರ್ಥಳಾದಳು

ಒಂದು ದೊಡ್ಡ ನಿಲ್ದಾಣದಲ್ಲಿ ಸುರೇಶ ಚಾ-ತಿಂಡಿ ಹಿಡಿದ ಮಾಣಿಯೊಡನೆ ಬಂದ ಈ ವಿಷಯದಲ್ಲಿ ಅವನಿಗೆ ಯಾರು ಹೇಳುವುದೂ ಬೇಕಿಲ್ಲವೆಂದು ಅಚಲೆ ಬಲ್ಲಳು ಆದರೂ ಈ ಅಯಾಚಿತ ಜತನಕ್ಕಾಗಿ ಸ್ನಿಗ್ಧವಾಗಿ ಚೇಡಿಸದಿರುವುದು ಅವಳಿಂದಾಗಲಿಲ್ಲ ಚಾ-ತಿಂಡಿ ತೆಗೆದುಕೊಳ್ಳುತ್ತ ಅವಳೆಂದಳು "ನಿಮಗಿಷ್ಟು ಕಷ್ಟಪಡಲು ಯಾರು ಹೇಳಿದ್ದರು? ನಿಮ್ಮ ಮಿತ್ರವರ್ಯ ಕಾಣುತ್ತದೆ?"

ಸುರೇಶ ಮುಗುಳ್ನಕ್ಕು ಹೊರಟು ಹೋಗುತ್ತಲಿದ್ದ ಅಚಲೆ ಕರೆದಳು ತಿರುಗಿ ನೋಡಿದ. ಅವಳು ನಸುನಗೆಗೂಡಿ ಲಜ್ಜೆ ಸಂಕೋಚಗಳಿಂದ ಕೆಂಪೇರಿದಳು ಆ ಹೊಂಗಳಿಯನ್ನು ಅವನು ಎರಡೂ ಕಣ್ಣುಗಳಿಂದ ಕಂಟಿಮುಟ ಈಂಟಿವ

ಅವಳು ಕರದುದು ಪತಿಯ ಸಮಾಚಾರ ಕೇಳುವುದಕ್ಕೆ. ಅವರಿಗೆ ತ್ರಾಸ-ತೊಂದರೆ ಇಲ್ಲವಷ್ಟೆ? ಏನಾದರೂ ಬೇಕೋ ಹೇಗೆ? ಒಮ್ಮೆ ಬಂದು ಹೋಗಬಹುದೋ? ಒಂದೊಂದಾಗಿ ಎಲ್ಲವನ್ನೂ ಕೇಳಬಯಸಿದ್ದಳು. ಆದರೆ ಹೀಗಾಗಿ ಬಿಟ್ಟಿತು ಒಂದು ಪ್ರಶ್ನೆ ಕೇಳಲೂ ಅವಳಲ್ಲಿ ಶಕ್ತಿ ಉಳಿಯಲಿಲ್ಲ. ಅಸಂಗವಾದ ಗಾಂಭೀರ್ಯದಿಂದ, "ಏಲಹಾಬಾದಿನಲ್ಲಿ ಗಾಡಿ ಬದಲಾಗುವುದೆ? ಎಷ್ಟು ರಾತ್ರಿಗೆ ಅಲ್ಲಿಗೆ ತಲುಪುವುದು? ಒಂದಿಷ್ಟು ತಿಳಿದುಕೊಂಡು ಬಂದು ನನಗೆ ಹೇಳುವಿರಾ?" ಎಂದು ಕೇಳಿದಳು.

"ಒಳ್ಳೆಯದು" ಎಂದು ಸುರೇಶ ಒಂದಿಷ್ಟು ಆಶ್ಚರ್ಯದಿಂದಲೇ ಹೊರಟುಹೋದ ಅಚಲೆ ತನ್ನ ಸ್ಥಳಕ್ಕೆ ಹೋದಳು. ಗೆಳತಿ ಎಷ್ಟು

ಹೋಗಿ ದೂರ ಕುಳಿತಿದ್ದಳು ಅಚಲೆ ಮನಸಿನ ಬೇಸರವನ್ನು ಹುದುಗಿಸಿಕೊಳ್ಳಲಾರದೆ ನುಡಿದಳು "ನಿಮ್ಮ ಮನೆಯೊಳಗೆ ಯಾರೂ ಚಾ-ರುಟಿ ತೆಗೆದುಕೊಳ್ಳುವುದಿಲ್ಲ ಕಾಣುತ್ತದೆ ?"

ಆ ಹುಡುಗಿ ಸವಿನಯವಾಗಿ ನಕ್ಕು ಉತ್ತರವಿತ್ತಳು· "ಹಾಯ್ ಹಾಯ್, ಇದರ ಹಾವಳಿಯಿಂದ ಯಾವ ಮನೆಯಾದರೂ ಉಳಿದಿದೆ ಎಂದುಕೊಂಡಿರಾ ? ಎಲ್ಲರೂ ತೆಗೆದುಕೊಳ್ಳುವರು"

"ಹಾಗಾದರೆ, ಜುಗುಪ್ಸೆಯಿಂದ ಸರಿದು ಕೂತಿರಿ ?"

"ಅಲ್ಲವ್ವ, ಜುಗುಪ್ಸೆಯಿಂದಲ್ಲ — ಗಂಡಸರು ಎಲ್ಲ ತಿನ್ನುತ್ತಾರೆ, ಆದರೆ ನಮ್ಮ ಮಾವನವರಿಗೆ ಅದೆಲ್ಲ ಸೇರುವುದಿಲ್ಲ — ನಮಗೆ ಹೆಣ್ಣು ಮಕ್ಕಳಿಗಂತೂ— "

ಹಿಂದಕ್ಕೆ ಮೃಣಾಲ-ಅಚಲೆಯರ ವಿಚ್ಛೇದವಾದುದು ಈ ತಿನಿಸು-ಮುಟ್ಟುಗಳ ಸಲುವಾಗಿಯೇ ಆಗಿನಂತೆಯೆ ಈಗಲೂ ಅಂತರ್ಜ್ವಾಲೆಯಿಂದ ಅಚಲೆ ಪರಿವೆಗೆಟ್ಟಳು "ನಾನೇನು ನಿಮ್ಮ ವ್ರತ ಕೆಡಿಸಬೇಕೆನ್ನುವುದಿಲ್ಲ ನೀವು ನಿಮ್ಮ ಸ್ಥಳದಲ್ಲಿ ಬೇಕಾದ ಹಾಗೆ ಕೂಡಬಹುದು" ಎಂದು ರುಕ್ಷ ಸ್ವರದಿಂದ ನುಡಿದು ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೇ ಚಾ ತಿಂಡಿಗಳನ್ನೆಲ್ಲ ಹೊರಕ್ಕೆಸೆದಳು ಆ ಹುಡುಗಿ ನಿಃಶಬ್ದಳಾಗಿ ನಿಶ್ಚಲಳಾಗಿ ಕುಳಿತುಬಿಟ್ಟಳು ಬಹಳ ಹೊತ್ತಿನ ಮೇಲೆ ಆ ಕಡೆ ಮೋರೆ ತಿರುಗಿಸಿ ಕಣ್ಣೊರಸಿಕೊಂಡಳು ಇಷ್ಟೊತ್ತಿನ ಗುರುತು-ಸಲಿಗೆಗಳ ಮರ್ಯಾದೆಯನ್ನೇ ಉಳಿಸಲಿಲ್ಲ, ಏನು ಗೊತ್ತು, ಕಣ್ಣೀರು ನೋಡಿದರೆ ಮತ್ತೇನಾದರೂ ಮಾಡಿಕೊಂಡು ಕೂತಾಳು ಎಂದೆನಿಸಿರಬೇಕು ಅವಳಿಗೆ

ಆರಾ ನಿಲ್ದಾಣದಲ್ಲಿ ಆ ಹುಡುಗಿ ಇಳಿಯುವವಳು ಅದು ಸಮೀಪಿಸಿದಾಗ ಅವಳು ಇಳಿಯುವ ಸಿದ್ಧತೆಗೆ ತೊಡಗಿದಳು ಅಚಲೆ ಸುಮ್ಮನಿರಲಾರದೆ ಚಟ್ಟನೆದ್ದು ಹೋಗಿ ಅವಳ ಪಕ್ಕದಲ್ಲಿ ಕುಳಿತಳು "ನನ್ನ ನಡತೆಗಾಗಿ ನನಗೆ ಬಹಳ ನಾಚಿಕೆಯೆನಿಸುತ್ತಿದೆ ಕ್ಷಮಿಸಿರಿ" ಎಂದಳು ಆ ಹುಡುಗಿಯ ಕೈಹಿಡಿದು ಸ್ನೇಹದಿಂದ

ಹುಡುಗಿ ನಕ್ಕಳು ಆದರೆ ಉತ್ತರ ತಟ್ಟನೆ ಹೊರಡಲಿಲ್ಲ. "ನನ್ನ ಮನಸು ನೆಟ್ಟಗಿಲ್ಲದಾಗ ಏನು ಮಾಡಿ ಬಿಡುವೆನೋ ನಿಯಮವಿಲ್ಲ. ಗಂಡನಿಗೆ ಜಡ್ಡು, ಹವೆ ಬದಲಿಸಲು ಕರೆದುಕೊಂಡು ಹೊರಟಿದ್ದೇನೆ,

ನೆಟ್ಟಗಾದರೆ ಎಲ್ಲಾ ನೆಟ್ಟಗೆ, ಇಲ್ಲದಿದ್ದರೆ ಆ ಪರದೇಶದಲ್ಲಿ ನನ್ನ ಗತಿಯೇ ನಾಗುವುದೋ ದೇವರೇ ಬಲ್ಲ ” ಎಂದಳು ಅಚಲೆ

“ ಆದರೆ ನಿಮ್ಮ ಯಜಮಾನರನ್ನು ನೋಡಿದರೆ ಹಾಗೆ ಜಡ್ಡಾದಂತೆನಿಸುವು ದಿಲ್ಲ” ಎಂದು ಅಚ್ಚರಿಯಿಂದ ಹುಡುಗಿ ನುಡಿದಳು

“ಯಜಮಾನರು ಗಾಡಿಯಲ್ಲಿದ್ದಾರೆ, ನೀವು ನೋಡಿಲ್ಲ ಇವರು ಅವರ ಗೆಳೆಯ ”

ಹುಡುಗಿಗೆ ಇನ್ನಷ್ಟು ಅಚ್ಚರಿ ಈ ಗೆಳೆಯನನ್ನೇ ಅವಳು ‘ಗಂಡನೇ?’ ಎಂದು ಕೇಳಿದಾಗ ತಾನು ‘ ಹೂಂ ’ ಎಂದುದು ಅಚಲೆಗೆ ಗೊತ್ತೇ ಇಲ್ಲ. ಆದರೆ ಆ ಹುಡುಗಿ ಮರೆತಿರಲಿಲ್ಲ ಅವಳ ಅಚ್ಚರಿಯನ್ನು ಅಚಲೆ ಬೇರೆ ಯಾಗಿಯೇ ಭಾವಿಸಿದಳು ಅಂತರಂಗದ ಲಜ್ಜೆಯ ಮೂಲಕ ಸುರೇಶ ನೊಡನೆ ತಾನು ನಡೆದುಕೊಂಡ ರೀತಿ ವಿಕೃತವಾಗಿ ಕಂಡು, ಸಾಮಾನ್ಯ ಹಿಂದೂರಮಣಿಯ ದೃಷ್ಟಿಯಲ್ಲಿ ಅದೆಷ್ಟು ವಿಸಂಗತವಾಗಿ ತೋರಿರಬಹು ದೆಂಬ ಕಲ್ಪನೆಯಲ್ಲಿಯೇ ಅಚಲೆ ಅತ್ಯಂತ ನಿರರ್ಥಕವಾದ ಕುಹಕ ಮಾತ ನ್ನಾಡಿದಳು “ನಾವು ಹಿಂದು ಅಲ್ಲ,—ಬ್ರಾಹ್ಮ!”

ಹುಡುಗಿ ಸುಮ್ಮನಿದ್ದಳು ಅಚಲೆ ಸಂಕೋಚಗೊಂಡು ಅವಳ ಕೈಬಿಟ್ಟು “ನಮ್ಮ ರೀತಿ ನಡತೆ ನಿಮಗೆ ಸರಿಯಾಗಿ ತಿಳಿಯದ್ದಕ್ಕೆ ನಮ್ಮನ್ನು ವಿಲಕ್ಷಣರೆಂದು ಬಗೆಯಬೇಡಿರಿ ” ಎಂದಳು.

ಹುಡುಗಿ ನಕ್ಕಳು “ ನಾನೇನು ಬಗೆಯುವುದಿಲ್ಲ ಆದರೂ ಏಕೋ ಏನೋ ನೀವೇ ನಮ್ಮಿಂದ ದೂರವಿರಬಯಸುವಿರಿ ನಿಮ್ಮ ಸಮಾಜದ ಒಬ್ಬಿಬ್ಬರು ನಮ್ಮ ಆಪ್ತರಿದ್ದಾರೆ ಅವರಿಂದ ನಮಗೆಲ್ಲ ತಿಳಿದಿದೆ ” ಎಂದಳು

“ ಅದಕ್ಕೆ ಕಾರಣವೇನು ? ”

“ ನಿನಗೆ ಗೊತ್ತಿರಲು ಸಾಕು ಇಲ್ಲದಿದ್ದರೆ ಸಮಾಜದ ಯಾರನ್ನಾ ದರೂ ಕೇಳಬಹುದು ” ಎಂದು ನಸುನಕ್ಕು ಆ ವಿಷಯ ಅಷ್ಟಕ್ಕೇ ನಿಲ್ಲಿಸಿ, “ಒಳ್ಳೆಯದು, ಅಷ್ಟು ದೂರ ಹೋಗದೆ ಗಂಡನನ್ನು ಕರೆದುಕೊಂಡು ನಮ್ಮಲ್ಲಿಗೆ ಬರಬಾರದೇಕೆ ? ” ಎಂದಳು

“ ಎಲ್ಲಿಗೆ ? ಆರಾಕ್ಕೇ ! ”

“ ಅಯ್ಯೋ ತಾಯಿ, ಇದೇನು ಜತೆ ಆಯಿತಲ್ಲೋ ? ನಮ್ಮವರು ಅಲ್ಲಿ ಇರು

ಕಂಟ್ರಾಕ್ಟ ಮಾಡುತ್ತಾರೆಂದು ಆಗಾಗ ನಾ ಹೋಗುತ್ತೇನೆ. ನಾ ಹೇಳುತ್ತಿರುವುದು ಬಿಹಾರಿಯ ವಿಷಯ. ಶೋಣನದಿಯ ದಂಡೆಯಮೇಲೆ ನಮ್ಮ ಚಿಕ್ಕ ಮನೆ ಇದೆ. ಅಲ್ಲಿ ಎರಡು ದಿನ ಇದ್ದರೆ ನಿಮ್ಮ ಯಜಮಾನರಿಗೆ ಗುಣವಾಗುವುದು. ಬರುವಿರಾ?" ಎಂದು ಹುಡುಗಿ ಅಚಲೆಯ ಕೈಗಳನ್ನು ಹಿಡಿದು, ಉತ್ತರಕ್ಕಾಗಿ ಮೋರೆ ನೋಡತೊಡಗಿದಳು.

ಅಪರಿಚಿತಳ ಆ ಉತ್ಸುಕತೆ, ಆ ಹಾರ್ದಿಕ ಆಗ್ರಹ ಅಚಲೆಯನ್ನು ಮೂಗಗೊಳಿಸಿದವು. "ಆದರೆ ನಿಮ್ಮ ಯಜಮಾನರ ಒಪ್ಪಿಗೆ ಬೇಕಲ್ಲ" ಎಂದಳು.

"ಉಶ್, ಇದೇನಂತೆ! ನಾವು ಸೇವೆಯಲ್ಲಿ ತೊತ್ತಾದ ಮಾತ್ರಕ್ಕೆ ಎಲ್ಲದರಲ್ಲೂ ತೊತ್ತೇ? ಅಂತಹ ಕಲ್ಪನೆಯೂ ಬೇಡ. ಹುಕುಂ ಮಾಡುವ ಸಮಯದಲ್ಲಿ ನಾವೇ ಒಡೆಯರು. ಆ ಸ್ಥಳ ಮನಸಿಗೆ ಬರದಿದ್ದರೆ ನೆಟ್ಟಗೆ ಬಿಹಾರಿಗೆ ಬಂದುಬಿಡಿರಿ. ಎಷ್ಟೂ ಯೋಚನೆ ಮಾಡಬೇಡಿರಿ. ಒಪ್ಪಿಗೆ ಬೇಕೇ ಆಗಿದ್ದರೆ ನಾ ಪಡೆಯುವೆ, ನಿಮಗೇಕದು?" ಎಂದು ಪತಿಸೌಭಾಗ್ಯವತಿಯಾದ ಆ ಹುಡುಗಿ ಆನಂದಾತಿಶಯದಿಂದ ಅಚಲೆಯನ್ನು ಮುಚ್ಚಿಬಿಟ್ಟಳು.

ಗಾಡಿಯ ಗತಿಮಾಂದ್ಯ ಆರಾ ಬಂದುದನ್ನು ಸೂಚಿಸಿತು. ಹುಡುಗಿ ಅಚಲೆಯ ಕೈಗಳನ್ನು ಮತ್ತೆ ಹಿಡಿದು ಆವೇಗಭರದಿಂದ ನುಡಿದಳು. "ಹೋಗಿಬರುತ್ತೇನೆ. ನೀವು ಚಿಂತಿಸಿ ಚಿಂತಿಸಿ ಸುಮ್ಮನೆ ಮನಸು ಕಂಕರಮಾಡಿಕೊಳ್ಳಬೇಡಿರಿ. ಏನು ಭಯವಿಲ್ಲ, ಅವರಿಗೆ ಬೇಗ ನೆಟ್ಟಗಾಗುವುದು. ಆದರೆ ಮಾತು ಕೊಡಿರಿ— ತಿರುಗಿ ಹೋಗುವಾಗ ನಮ್ಮಲ್ಲಿ ಪಾದಧೂಳಿ ಕೆಡಹುವಿರಲ್ಲವೆ?"

ಅಚಲೆ ಕಂಬನಿ ಹತ್ತಿಕ್ಕಿಕೊಂಡು "ಅಂತಹ ಸಮಯ ಬಂದರೆ ಸತ್ಯವಾಗಿ ನಿಮ್ಮನ್ನು ನೋಡಿಕೊಂಡು ಹೋಗುವೆ" ಎಂದಳು.

"ಬಾರದೆ ಏನು! ನಿಶ್ಚಯವಾಗಿ ಬರುವುದು. ನಾ ನಿಮ್ಮನ್ನು ತಿಳಿದಿದ್ದೇನೆ. ನಿಮ್ಮ ಪ್ರೀತಿ ಭಕ್ತಿಗಳನ್ನು ಭಗವಂತ ಎಂದೂ ಉಪೇಕ್ಷಿಸಲಾರ."

ಅಚಲೆ ಉತ್ತರ ಕೊಡದಾದಳು. ಮುಖ ಹೊರಳಿಸಿ ಒತ್ತರಿಸುವ ಬಾಷ್ಪೋಚ್ಛ್ವಾಸವನ್ನು ನಿವಾರಿಸಿಕೊಂಡಳು.

ಗಾಡಿ ಮಳೆಯೊಳಗೆ ನಿಂತಿತು. ಹುಡುಗಿಯ ಚಿಕ್ಕ ಮೈದುನ

ಬಂದು ಬಾಗಿಲು ತೆರೆದ ಅಚಲೆ ಅವಳ ಕಿವಿಯೊಳಗೆ ಪಿಸ ಪಿಸ ಕೇಳಿದಳು: "ಗಂಡನ ಹೆಸರನ್ನಂತೂ ಹೇಳಲಾರಿರಿ, ನಿಮ್ಮ ಹೆಸರನ್ನಾದರೂ ಹೇಳಿರಿ ಬಂದರೆ ಏನೆಂದು ನಿಮ್ಮನ್ನು ಹುಡುಕುವುದು?"

"ನನ್ನ ಹೆಸರು ರಾಕ್ಷಸೀ ಡಿಹರಿಯಲ್ಲಿ ಯಾವ ಬಂಗಾಲಿ ಹುಡುಗಿಯನ್ನು ಕೇಳಿದರೂ ನಮ್ಮ ಮನೆ ತೋರಿಸುವರು ಆದರೆ ಇಬ್ಬರೂ ಬರಬೇಕಕ್ಕಾ — ನನ್ನ ಕೊರಳಾಣೆ ನಾ ಹಾದಿ ನೋಡುತ್ತಿರುವೆ" ಎಂದು ಕೈಜೋಡಿಸಿ ನಮಸ್ಕರಿಸಿ ಇಳಿದು ಹೋದಳು

ಬಾಷ್ಪೀಯ ಶಕಟ ಮತ್ತೆ ಸಾವಕಾಶ ಹೊರಟಿತು ಅದೇ ಸಂಜೆಯಾಗಿತ್ತು ಆದರೆ ತೆರಪಿಲ್ಲದ ಮಳೆಗೆ ಗಾಳಿಯೂ ಸಹಕಾರಿಯಾದುದರಿಂದ ರಾತ್ರಿ ನೂರುಮಡಿ ಭೀಷಣವಾಗಿತ್ತು ಈ ಸೂಚಿ ಭೇದ್ಯವಾದ ಅಂಧಕಾರ ತನ್ನನ್ನು ಇಡೀ ಜನ್ಮ ಆವರಿಸಿಬಿಟ್ಟಿದೆಯೋ ಏನೋ! ತಾನಿನ್ನು ಬೆಳಕಿನ ಮೋರೆ, ಆನಂದದ ಮೋರೆ ಎಂದೂ ಕಾಣಲಾರೆ, ಸಾಯುವತನಕ ಇದರಿಂದ ತನಗೆ ಮುಕ್ತಿಯಿಲ್ಲ ಎಂದು ಅಚಲೆಗೆ ಎನಿಸತೊಡಗಿತು ನಿರ್ಜನವಾದ ಡಬ್ಬಿಯಲ್ಲೊತ್ತಟ್ಟಿಗೆ ತುಂಬ ಹೊದ್ದುಕೊಂಡು ಕಣ್ಮುಚ್ಚಿ ಮಲಗಿದಳು ಝರ ಝರ ಕಣ್ಣೀರು ಹರಿಯತೊಡಗಿತು ಈ ಕಣ್ಣೀರು ಏಕೆ, ಅಂತಹ ದುಃಖವಾದರೂ ಯಾವುದು ಎಂಬುದೇನೂ ಅವಳಿಗೆ ತಿಳಿಯಲಿಲ್ಲ ಆದರೂ ಕಣ್ಣೀರನ್ನು ತಡೆಯುವುದು ಅಸಾಧ್ಯವಾಯಿತು ಅವಳಿಗೆ ತಂದೆಯ ನೆನಪಾಯಿತು, ಚಿಕ್ಕಂದಿನ ಒಡನಾಡಿಗಳ ನೆನಪಾಯಿತು, ಅತ್ತೆಮ್ಮನ ನೆನಪಾಯಿತು, ಮೃಣಾಲಳ ನೆನಪಾಯಿತು, ಇದೀಗಿನ ರಾಕ್ಷಸಿಯ ನೆನಪಾಯಿತು, ಆಳುಮಗ ಯದು ಕೂಡ ಮತ್ತೆ ಮತ್ತೆ ಅವಳ ಕಣ್ಮುಂದೆ ಸುಳಿವ ಅವರೆಲ್ಲರಿಂದಲೂ ಕೊನೆಯ ನಿರೋಪ ತೆಗೆದುಕೊಂಡು ಗೊತ್ತುಗುರಿಯಿಲ್ಲದೆ ಪಯಣ ಬೆಳೆಸಿರುವಂತೆ ಹೃದಯ ವ್ಯಥೆಗೊಂಡಿತು

ಗಾಡಿ ಮುಂದಿನ ನಿಲ್ದಾಣದಲ್ಲಿ ನಿಲ್ಲುವ ಹೊತ್ತಿಗೆ ಅವಳ ಹೃದಯ ಬಹುಮಟ್ಟಿಗೆ ಶಾಂತವಾಯಿತು ಅವಳು ಎದ್ದು ಕುಳಿತು ಯಾರಾದರೂ ತನ್ನ ಡಬ್ಬಿಯಲ್ಲಿ ಹತ್ತುವರೇನೋ ಎಂದು ವ್ಯಾಕುಲದೃಷ್ಟಿಯಿಂದ ನೋಡಿದಳು ಯಾರು ಯಾರೋ ಇಳಿದರು, ಯಾರು ಯಾರೋ ಹತ್ತಿದರು, ಇವಳ ಡಬ್ಬಿಯ ಸನಿಯಕ್ಕೆ ಮಾತ್ರ ಯಾರೂ ಸುಳಿಯಲಿಲ್ಲ.

ಗಾಡಿ ಬಿಟ್ಟಿತು. ಅಚಲೆ ಯಥಾಪ್ರಕಾರ ತುಂಬ ಹೊದ್ದುಕೊಂಡು ಮಲಗಿದಳು. ಆಗ ಯಾವ ಅಚಿಂತನೀಯ ಕಾರಣದಿಂದಲೋ ಏನೋ ಅವಳ ದುಃಖಾರ್ತ ಹೃದಯ ಅಕಸ್ಮಾತ್ ಸುಖದ ಕಲ್ಪನೆಗಳಿಂದ ತುಂಬಿತು. ಆದರೆ ಅದೇನು ಹೊಸದಲ್ಲ. ಹೊರಡುವುದು ಗೊತ್ತಾದಾಗ ಇಂತಹದೇ ಕನಸು ಕಂಡಿದ್ದಳು. ಈಗಲೂ ತನ್ನ ಗಂಡನ ದೀರ್ಘಾಯುರಾರೋಗ್ಯಗಳನ್ನು ನೆನೆದು, ಆ ಅಪರಿಚಿತಸ್ಥಾನದಲ್ಲಿ ಆ ಶಾಂತಿ-ಪುಷ್ಟಿ-ತುಷ್ಟಿಗಳ ಜಾಳಿಗೆಯನ್ನು ಹೆಣೆಯುತ್ತ ತನ್ಮಯಳಾದಳು.

ಯಾವಾಗ ಎಷ್ಟೊತ್ತು ನಿದ್ದೆ ಹತ್ತಿತೋ ತಿಳಿಯದು. ಒಮ್ಮೆಲೆ ಅವಳ ಹೆಸರು ಕಿವಿದೆರೆಗೆ ಬಿದ್ದು ಎಚ್ಚರವಾಯಿತು. ಎದ್ದು ಕುಳಿತಳು. ಬಾಗಿಲ ಹತ್ತಿರ ಸುರೇಶ ನಿಂತಿದ್ದ. ತೆರೆದ ಬಾಗಿಲಿಂದ ಮಳೆ-ಗಾಳಿಗಳು ಡಬ್ಬಿಯಲ್ಲಿ ನುಗ್ಗಿ ತಾಂಡವ ನಡೆಸಿದ್ದವು.

“ಬೇಗ ಇಳಿದು ಬಾ. ಗಾಡಿ ಪ್ಲಾಟ್‌ಫಾರ್ಮಿನಲ್ಲಿ ನಿಂತಿದೆ. ನಿನ್ನ ಬ್ಯಾಗು ಎಲ್ಲಿ?” ಎಂದ ಸುರೇಶ.

ಅಚಲೆಯ ಕಣ್ಣೊಳಗಿನ ನಿದ್ದೆ ಇನ್ನೂ ಬಿಟ್ಟಿರಲಿಲ್ಲ. ಆದರೂ ಜಬ್ಬಲಪುರಕ್ಕೆ ಹೋಗುವವರು ಇಲಹಾಬಾದಿನಲ್ಲಿ ಇಳಿಯಬೇಕಾಗುತ್ತದೆಂಬುದು ಅವಳಿಗೆ ನೆನಪಾಯಿತು. ಅವಳು ಬ್ಯಾಗನ್ನು ತೋರಿಸಿ ಗಡಿಬಿಡಿಯಿಂದಲೂ ವ್ಯಾಕುಲತೆಯಿಂದ ನುಡಿದಳು: “ಇಂಥ ಮಳೆಯೊಳಗೆ ಅವರನ್ನು ಇಳಿಸುವುದು ಹೇಗೆ? ಇಲ್ಲಿ ಮೇಣೆಗೀಣೆ ಸಿಗುವುದಿಲ್ಲವೋ? ಜಡ್ಡು ಮರಳಿಸೀತು ಎಲ್ಲಿಯಾದರೂ!”

ಸುರೇಶ ಏನು ಹೇಳಿದನೋ ಮಳೆಯ ರಭಸದಲ್ಲಿ ತಿಳಿಯಲಿಲ್ಲ. ಅವನು ಒಂದು ಕೈಯಲ್ಲಿ ಬ್ಯಾಗು, ಇನ್ನೊಂದು ಕೈಯಲ್ಲಿ ಅಚಲೆಯ ಕೈ ಹಿಡಿದುಕೊಂಡು ಅತ್ತ ಕಡೆಯ ಪ್ಲಾಟಫಾರ್ಮಿಗೆ ತೀವ್ರಗತಿಯಿಂದ ನಡೆದ. ಆ ಗಾಡಿ ಹೊರಟು ನಿಂತಿತ್ತು. ಪ್ರಥಮ ವರ್ಗದ ಜನಶೂನ್ಯ ಡಬ್ಬಿಯೊಂದರಲ್ಲಿ ಅಚಲೆಯನ್ನು ಕೂಡಿಸಿ ಅವಸರದಿಂದ ನುಡಿದ: “ನೀನಿಷ್ಟೆ ಕೂಡು. ಅವನನ್ನು ಇಳಿಸಿಕೊಂಡು ಬರುವೆ.”

“ಹಾಗಾದರೆ ನನ್ನ ದೊಡ್ಡ ಶಾಲು ಒಯ್ಯಿರಿ. ಚೆಲೋ ಹೊಚ್ಚಿಕೊಂಡು ಕರಕೊಂಡು ಬರ್ರಿ” ಎಂದು ಅಚಲೆ ತನ್ನ ಗಾತ್ರವಸ್ತ್ರವನ್ನು ಎಸೆದಳು. ಸುರೇಶ ಭರಭರನೆ ಹೊರಟು ಹೋದ.

ಅಚಲೆ ದೃಷ್ಟಿಹರಿದಷ್ಟು ದೂರ ಕತ್ತಲೆಯೊಳಗೆ ನೋಡಿದಳು ಕಂಬದ ಮೇಲೆ ದೂರ ದೂರವಾಗಿ ದೀಪಗಳು ಉರಿಯುತ್ತಿದ್ದವು ಪ್ರಚಂಡ ವಾದ ಮಳೆಯಲ್ಲಿ ಆ ಬೆಳಕು ಕೆಲಸಕ್ಕೆ ಬಾರದುದಾಗಿತ್ತು ಪ್ರಯಾಣಿಕರು ತೋಯಿಸಿಕೊಂಡು ಓಡಾಡುತ್ತಿದ್ದರು, ಕೂಲಿಗಳು ಮೂಟೆ ಹೊತ್ತು ಕೊಂಡು ತಿರುಗಾಡುತ್ತಿದ್ದರು, ರೇಲ್ವೆ ಕೆಲಸಗಾರರು ತಮ್ಮ ತಮ್ಮ ಕೆಲಸ ದಲ್ಲಿ ತೊಡಗಿದ್ದರು— ಮಸಕು ನೆರಳುಗಳಂತೆ ಅವರೆಲ್ಲ ಕಾಣುತ್ತಿದ್ದರು ಕ್ರಮಶಃ ಅದೂ ವಿರಳವಾಯಿತು ತೀಕ್ಷ್ಣ ರವದ ಗಂಟೆ ಬಾರಿಸಿತು ಆಗಲೆ ಇಳಿದುಬಂದ ಗಾಡಿ ಘೀಕರ ಅಜಗರದಂತೆ ಫೋಂಸ್ ಫೋಂಸ್ ಎಂದು ಆಕಾಶವನ್ನು ನಡುಗಿಸುತ್ತ ಹೊರಟುಹೋಯಿತು ಎದುರಿಗೆ ಅಖಂಡ ಅಂಧಕಾರ— ಮತ್ತೇನೂ ಇಲ್ಲ!

ಮತ್ತೆ ಗಂಟೆ ಅದು ಈ ಗಾಡಿ ಬಿಡುವುದಕ್ಕೆಂದು ಅಚಲೆ ತಿಳಿದಳು ಆದರೆ ಅವರು ಹತ್ತಿದರೋ ಇಲ್ಲವೊ, ಎಲ್ಲಿ ಹತ್ತಿದರು, ಸಾಮಾನುಗಳೆಲ್ಲ ಹೇರಿಯಾದವೋ ಉಳಿದವೋ ಯಾವುದೂ ತಿಳಿಯದೆ ಅವಳು ಚಡಪಡಿಸಿದಳು

ಪೇದೆಯೊಬ್ಬ ಗೊಂಗಡಿ ಮುಸುಕಿಟ್ಟು ಸೀಲಿ ದೀಪ ಬೀಸುತ್ತ ಹೊರಟಿದ್ದ ಅಚಲೆ ಕೇಳಿದಳು, "ಎಲ್ಲ ಪ್ಯಾಸೆಂಜರರು ಹತ್ತಿದರಿಲ್ಲವೊ ?" ಪ್ರಥಮ ಶ್ರೇಣಿಯ ಡಬ್ಬಿಯನ್ನು ಕಂಡು ಅವನು ಗಕ್ಕನೆ ನಿಂತು ಉತ್ತರವಿತ್ತ "ಹಾಂ, ಮೇಮ್ ಸಾಹೇಬ "

ಅಚಲೆಗೆ ಸ್ವಲ್ಪ ಸಮಾಧಾನವಾಯಿತು ' ಎಷ್ಟು ಹೊಡೆಯಿತು?" ಎಂದು ಕೇಳಿದಳು

"ಒಂಬತ್ತು ಹೊಡೆದು—"

ಒಂಬತ್ತು ಹೊಡೆದು! ಅಚಲೆ ಬೆಚ್ಚಿದಳು ಗಾಡಿ ಎಲಹಾಬಾದ ತಲುಪುವುದು ರಾತ್ರಿಯ ಕೊನೆಗೆ ವ್ಯಾಕುಲೆಯಾಗಿ ಪ್ರಶ್ನಿಸಿದಳು "ಎಲಹಾಬಾದ-- "

ಆದರೆ ಅವನಿಗೆ ನಿಲ್ಲಲಾಗಲಿಲ್ಲ ಪ್ಲಾಟ್‌ಫಾರ್ಮಿಗೆ ಚಪ್ಪರವಿರಲಿಲ್ಲ ಮಳೆಯ ನೀರು ಹೊಳೆಯಂತೆ ಮೋರಿಗೆ ಒಡಿಯುತ್ತಿತ್ತು, ಮೇಲೆ ಗಾಡಿಯ ಸೂರಿನ ನೀರು. ಅವನು ದೀಪಬೀಸುತ್ತ "ಮೋಗಲಸರಾಯಿ ಮೋಗಲಸರಾಯಿ " ಎನ್ನುತ್ತ ಹೊರಟುಹೋದ.

ಸಿಳ್ಳು ಹೊಡೆದು ಗಾಡಿ ಬಿಟ್ಟಿತು "ಹೆದರಬೇಡ, ನಾ ಪಕ್ಕದ ಡಬ್ಬಿಯಲ್ಲಿಯೇ ಇರುವೆ" ಎನ್ನುತ್ತ ಸುರೇಶ ಅವಳೆದುರಿನಿಂದ ಓಡಿದ

೩೮

ಸುರೇಶ ಪಕ್ಕದ ಡಬ್ಬಿಯಲ್ಲಿಯೇ ಹತ್ತಿದ, ಹೌದು. ಆದರೆ ಅವರು? ಅಚಲ ಎಲ್ಲ ಕಡೆ ನೋಡತೊಡಗಿದಳು. ಅವರ ಮುಖ ಎಷ್ಟು ಅಸ್ಪಷ್ಟವಾದರೂ ಆಗಲಿ ಅವಳಿಗೆ ಒಮ್ಮೆಯಾದರೂ ಕಾಣಬೇಕು! ಅಲಹಾಬಾದು ಬಿಟ್ಟು ಈ ಯಾವುದೋ ನಿಲ್ದಾಣದಲ್ಲಿ ಏಕೆ ಇಳಿದು ಹತ್ತಬೇಕಾಯಿತು? ಇರಚಲು ಹನಿಗೆ ಅವಳ ತಲೆ, ಕುಪ್ಪಸ ಎಲ್ಲ ತೊಯ್ದುವು. ಆದರೂ ಮತ್ತೆ ಮತ್ತೆ ಕಿಡಿಕಿಯ ಹೊರಗೆ ಮೋರೆ ಹಾಕಿ ಮುಂದಕ್ಕೂ ಹಿಂದಕ್ಕೂ ಕತ್ತಲೊಳಗೆ ಏನು ನೋಡುತ್ತಿದ್ದಳೋ ಅವಳೇ ಬಲ್ಲಳು. ಆದರೆ ಈ ಗಾಡಿಯಲ್ಲಿ ತನ್ನ ಗಂಡನಿಲ್ಲ, ತಾನೊಮ್ಮೆಲೆ ಅನನ್ಯಾಶ್ರಯಳಾಗಿ ಸುರೇಶನೊಂದಿಗೆ ಗೊತ್ತು ಗುರಿಯಿಲ್ಲದೆ ನಡೆದಿದ್ದಾಳೆ ಎಂದವಳು ಭಾವಿಸದಾದಳು. ಅದು ಅಸಂಭವ, ಈ ಗಾಡಿಯಲ್ಲಿ ಒಂದಿಲ್ಲೊಂದು ಕಡೆ ಅವರು ಇರಲೇಬೇಕು!

ಸುರೇಶ ಎಂತಹನೇ ಇರಲಿ, ಏನೇ ಮಾಡಲಿ, ನಿರಪರಾಧಿಯಾದ ರಮಣಿಯೊಬ್ಬಳನ್ನು ಸಮಾಜದಿಂದ, ಧರ್ಮದಿಂದ, ನಾರೀತ್ವಗೌರವದಿಂದ ಎಳೆತಂದು ಇಂತಹ ಅನಿವಾರ್ಯ ಮೃತ್ಯು ಮುಖದಲ್ಲಿ ತಳ್ಳುವಂತಹ ಪಾಪಿಯಲ್ಲ! ಅಲ್ಲದೆ, ಇದರಿಂದ ಅವನಿಗೇನು ಬರುತ್ತದೆ? ಅವನಿಗೆ ಲೋಭನೀಯವಾದ ತನ್ನ ದೇಹ ಗಣಿಕಾದೇಹವಾಗಿ ಪರಿವರ್ತಿತವಾಗುವುದನ್ನು ನೋಡಲಿಕ್ಕೆ ಅಚಲೆ ಉಳಿಯಲಾರಳೆಂಬುದನ್ನು ಅವನು ಅರಿತಿರದಿದ್ದರೆ ಪ್ರೇಮದ ಮಾತನಾಡುವನಾದರೂ ಯಾವ ಮುಖದಿಂದ? ಇಲ್ಲ ಇಲ್ಲ, ಇದು ಶಕ್ಯವಿಲ್ಲ! ಅವರು ಅವಸರದಲ್ಲಿ ಇಂಜಿನಿನ ಹತ್ತಿರ ಎಲ್ಲಿಯಾದರೂ ಹತ್ತಿರಬಹುದು--ಇಲ್ಲಿಗೆ ಕಾಣುವುದು ಶಕ್ಯವಿಲ್ಲ!

ಮಳೆಯ ಸೆಳಕೊಂದು ಅಚಲೆಯ ಮುಖಕ್ಕೆ ಬಡಿಯಿತು. ಅವಳು ಮುದುಡಿ ಮುದ್ದೆಯಾಗಿ ಮೂಲೆಗೆ ಹೋದಳು. ಆಗವಳ ದೃಷ್ಟಿ ತನ್ನ ದೇಹದ ಕಡೆ ಹೋಯಿತು. ಮೈಮೇಲೆ ಚೂರೂ ಒಣ ಬಟ್ಟೆ ಉಳಿದಿರಲಿಲ್ಲ. ಸೆರಗು ತೋಳುಗಳಿಂದ ನೀರು ಟಪಟಪ ಬೀಳುತ್ತಿತ್ತು. ಚಳಿಯನ್ನು ಇವರೆಗೆ ಗೊತ್ತಿಲ್ಲದೆ ಸಹಿಸಿದ್ದಳು, ಗೊತ್ತಾದ ಮೇಲೆ ಸಹಿಸಲಾಗಲಿಲ್ಲ. ಬಟ್ಟೆ ಬದಲಿಸಲೆಂದು ಬ್ಯಾಗನ್ನು ತೆರೆಯುವ ಹೊತ್ತಿಗೆ ಗಾಡಿಯ ಗತಿ

ಮಂದವಾಯಿತು, ತುಸಹೊತ್ತಿನೊಳಗೇ ನಿಲ್ದಾಣದಲ್ಲಿ ನಿಂತಿತು. ಮಳೆ ಹತ್ತಿಯೇ ಇತ್ತು. ನಿಲ್ದಾಣ ಯಾವುದೆಂಬುದು ತಿಳಿಯದಂತಾಯಿತು. ತೆರೆದ ಬ್ಯಾಗು ತೆರೆದಂತೆಯೇ ಬಿಟ್ಟು, ಬಾಗಿಲು ತೆರೆದು ಕೆಳಗಿಳಿದು ಸುರೇಶನ ಡಬ್ಬಿಯ ಹತ್ತಿರ ಹೋಗಿ ನಿಂತು "ಸುರೇಶಬಾಬೂ!" ಎಂದಳು.

ಅದೇ ಡಬ್ಬಿಯಲ್ಲಿ ಇಬ್ಬರು ಬಂಗಾಲಿಗಳು, ಒಬ್ಬ ಇಂರಾಜಿ ಸದ್ಗೃಹಸ್ಥ ಇದ್ದರು. ಸುರೇಶ ಒತ್ತಟ್ಟಿಗೆ ಜಡನಂತೆ ಕಣ್ಮುಚ್ಚಿ ಕುಳಿತುಕೊಂಡಿದ್ದ. ತನ್ನ ಬಾಯಿಂದ ಶಬ್ದವೇ ಹೊರಡಲಿಕ್ಕಿಲ್ಲವೆಂದು ಅಚಲೆಗೆನಿಸಿತ್ತು. ಎಂತಲೇ ಅವಳು ಪ್ರಬಲ ಪ್ರಯತ್ನದಿಂದ ಕೂಗಿದ್ದಳು. ಅವಳ ಸ್ವರ ಪೀಡಿತಪ್ರಾಣಿಯ ಆರ್ತನಾದದಂತೆ ಕೇಳಿಸಿ, ಸುರೇಶ ಮಾತ್ರವಲ್ಲ ಎಲ್ಲರೂ ಬೆಚ್ಚಿಬಿದ್ದರು. ಸುರೇಶ ಕಣ್ತೆರೆದು ನೋಡಿದ. ಬಾಗಿಲಲ್ಲಿ ಅಚಲೆ. ಅವಳ ತೆರೆದ ಮುಖದ ಮೇಲೆ ಅಜಸ್ರ ಜಲಧಾರೆ ಹಾಗೂ ಗಾಡಿಯ ಉಜ್ವಲಪ್ರಕಾಶ ಕೂಡಿಯೇ ಬಿದ್ದು ಸೌಂದರ್ಯದ ಇಂದ್ರ ಜಾಲದ ರಚನೆಯಾದಂತಾಗಿತ್ತು. ಅವನು ಬಡಕ್ಕನೆ ಎದ್ದು ಬಂದ. "ಅವರು ಕಾಣುವುದಿಲ್ಲ! ಎಲ್ಲಿದ್ದಾರೆ? ಯಾವ ಡಬ್ಬಿಯಲ್ಲಿ ಹತ್ತಿಸಿದ್ದೀರಿ?" ಎಂದು ಕೇಳಿದಳು ಅಚಲೆ.

"ನಡೆ, ತೋರಿಸುತ್ತೇನೆ" ಎಂದು ಸುರೇಶ ಮಳೆಯೊಳಗೇ ಇಳಿದು, ಅಚಲೆಯ ಕೈಹಿಡಿದು ಅವಳು ಬಂದಿದ್ದ ಕಡೆಗೇ ಎಳೆದುಕೊಂಡು ನಡೆದ. ಅವಳ ಡಬ್ಬಿಯ ಹತ್ತಿರ ನಿಂತು ಒಳಕ್ಕೆ ನೋಡಿ ಬೆದರಿ, "ನಿನ್ನ ಬ್ಯಾಗು ಏಕೆ ತೆರದಿದೆ?" ಎನ್ನುತ್ತ ಹತ್ತಿಹೋಗಿ ಅಚಲೆಯನ್ನೂ ಒಳಗೆಳೆದುಕೊಂಡು ಧಡಗ್ಗನೆ ಬಾಗಿಲಿಕ್ಕಿದ. "ಇದನ್ನು ಯಾರು ತೆರೆದರು?" ಎಂದು ಬ್ಯಾಗನ್ನು ತೋರಿಸುತ್ತ ಕೇಳಿದ.

"ನಾನು ಅದರಲಿ, ಅವರಲ್ಲಿ? ತೋರಿಸಿರಿ, ಇಲ್ಲವೆ ಯಾವ ಕಡೆ ಇದ್ದಾರೆಂದು ಹೇಳಿದರೆ ಹುಡುಕಿಕೊಳ್ಳುವೆ" ಎನ್ನುತ್ತ ಅಚಲೆ ಬಾಗಿಲಕಡೆ ಅಡಿಯಿಟ್ಟಳು.

"ಇಷ್ಟೇಕೆ ಗಾಬರಿ? ಗಾಡಿ ಬಿಟ್ಟು ಬಿಟ್ಟಿದೆ ಕಾಣುವುದಿಲ್ಲವೆ?" ಅವಳ ಕೈಹಿಡಿದೆಳೆದು ಸುರೇಶನೆಂದ.

ಅಚಲೆ ಹೊರಗೆ ಕತ್ತಲೆಯ ಕಡೆ ನೋಡಿದಳು. ನಿಜ, ಗಾಡಿ ಹೊರಟಿತ್ತು. ಅವಳೆರಡು ಕಣ್ಣುಗಳಲ್ಲಿಯೂ ನಿರಾಶೆ ರೂಪುಗೊಂಡು

ನಿಂತಿತು ಅವಳು ಹೊರಳಿ ಒಂದೇ ಒಂದು ನಿಮಿಷ ಸುರೇಶನ ಕಳೆಗುಂದಿದ ಬೆಳ್ಮೊಗವನ್ನು ನೋಡಿದಳು ಮರುಕ್ಷಣವೇ ಬೇರುಗಡಿದ ಮರದಂತೆ ದೊಪ್ಪನೆ ಬಿದ್ದು ಅವನ ಪಾದಗಳನ್ನಪ್ಪಿಕೊಂಡು ಅತ್ತುಬಿಟ್ಟಳು "ಅವರೆಲ್ಲಿ? ಮಲಗಿದಾಗ ಗಾಡಿಯಿಂದ ಕೆಳಗೆ ತಳ್ಳಿಬಿಟ್ಟಿರೊ? ರೋಗಿಯ ಕೊಲೆ ಮಾಡಿ ನಿಮ್ಮ—"

ಈ ಆಪಾದನೆ ಕೊನೆಗೊಳ್ಳಲಿಲ್ಲ ಅವಳ ಹೃದಯದ್ರಾವಕವಾದ ಕ್ರಂದನದಿಂದ ಅದು ಶತಧಾರೆಯಾಗಿ ಹರಿದು, ಸುರೇಶನನ್ನು ಒಮ್ಮೆಗೇ ಕಲ್ಲಾಗಿಸಿ, ಅವನಂತೆಯೇ ಭಯಾವಹವಾದ ನಾಲ್ಕ್ಯಸಿಟ್ಟಿನ ರಾತ್ರಿಯಲ್ಲಿ ವಿಲೀನವಾಯಿತು ಸುರೇಶ ಗಾದಿಬೆಂಚಿನ ಮೇಲೆ ಕುಕ್ಕರಿಸಿ ಅಸಹ್ಯ ವಿಸ್ಮಯದಿಂದ ನೋಡತೊಡಗಿದ ತನ್ನ ಪದತಲದಲ್ಲಿ ಏನು ನಡೆದಿದೆಯೆಂಬುದೇ ಎಷ್ಟೋ ಹೊತ್ತು ಅವನಿಗೆ ತಿಳಿಯಲಿಲ್ಲ ಬಹಳ ಹೊತ್ತಿನ ಮೇಲೆ ಕಾಲನ್ನೆಳೆದುಕೊಳ್ಳಲು ಪ್ರಯತ್ನಿಸುತ್ತ ಅವನೆಂದ "ಈ ಕೆಲಸ ನಾ ಮಾಡೇನೆಂದು ನಿನಗನಿಸುವುದೆ?".

ಅಚಲೆ ಅಳುತ್ತಲೇ ಉತ್ತರವಿತ್ತಳು. "ನೀವು ಮಾಡದ್ದು ಯಾವುದು? ನನ್ನ ಮನೆಗೆ ಬೆಂಕಿಹಚ್ಚಿ ಅವರನ್ನು ಕೊಲ್ಲಬೇಕೆಂದಿರಿ. ನೀವೀಗವರನ್ನು ಎಲ್ಲೇನು ಮಾಡಿದಿರಿ? ನಿಮ್ಮ ಕಾಲಿಗೆ ಬೀಳುತ್ತೇನೆ, ಹೇಳಿರಿ" ಎಂದು ಅವನ ಕಾಲುಗಳನ್ನು ಪುನಃ ಗಟ್ಟಿಯಾಗಿ ಹಿಡಿದುಕೊಂಡು ಹಣೆ ಗಟ್ಟಿಸತೊಡಗಿದಳು. ಆ ಕಾಲು ಯಾರವೊ— ಅವನು ಮಾತ್ರ ಅಚೇತನನಂತೆ ಕಣ್ಣು ಬಿಟ್ಟುಕೊಂಡು ನೋಡುತ್ತಲಿದ್ದ

ಹೊರಗಡೆ ಮತ್ತ ರಾತ್ರಿಯ ಉದ್ಧತತನ ನಡೆದೇ ಇತ್ತು ಮಿಂಚು ಮೇಲಿಂದ ಮೇಲೆ ಕತ್ತಲೆಯನ್ನು ಸೀಳುತ್ತಲಿತ್ತು ಬಿರುಗಾಳಿ ಮಳೆ ಸಮಸ್ತ ಪ್ರಕೃತಿಯ ವಿಧ್ವಂಸ ಕಾರ್ಯದಲ್ಲಿ ತೊಡಗಿತ್ತು ಆದರೆ ಅದೆಲ್ಲವೂ ಆ ಶಾಪಗ್ರಸ್ತ ನರನಾರಿಯರಿಬ್ಬರ ಅಂಧಹೃದಯಗಳಲ್ಲಿಯ ಪ್ರಲಯ ಗರ್ಜನೆಯ ಮುಂದೆ ಅತ್ಯಂತ ತುಚ್ಛವಾಗಿತ್ತು

ಅಚಲೆಯೊಮ್ಮೆಲೆ ಬಾಣವೇಗದಿಂದೆದ್ದು ನಿಂತಾಗ ಸುರೇಶನ ಕನಸು ಹರಿಯಿತು ಮುಂದಿನ ನಿಲ್ದಾಣ ಸಮೀಪಿಸಿದುದರಿಂದ ಗಾಡಿಯ ವೇಗ ಕಡಿಮೆಯಾದುದು ಅವನಿಗೆ ತಿಳಿಯಿತು ಅಚಲೆ ಏಕೆ ಬುದಿಂಗನೆದ್ದಳೆಂಬುವನ್ನರಿಯಲಿಕ್ಕೆ ವಿಲಂಬವಾಗಲಿಲ್ಲ. ಅವನು ಕೈಚಾಚಿ ಅವಳನ್ನು

ತಡೆದು "ಕೂತುಕೋ, ಮಹಿಮ ಈ ಗಾಡಿಯಲ್ಲಿಲ್ಲ!" ಎಂದ.

"ಇಲ್ಲ! ಹಾಗಾದರೆ ಅವರೆಲ್ಲಿ?" ಎಂದು ಅಚಲೆ ಎದುರಿನ ಬೆಂಚಿನ ಮೇಲೆ ದೊಪ್ಪನೆ ಬಿದ್ದಳು.

ಸುರೇಶ ದಿಟ್ಟಿಸಿದ. ಅವಳ ಮುಖದಲ್ಲಿ ರಕ್ತದ ಚಿಹ್ನವೂ ಕಾಣಲಿಲ್ಲ. ಈವರೆಗಿನ ಅಳುವುದು ಕರೆಯುವುದು, ತಲೆಯೊಡೆದುಕೊಳ್ಳುವುದು ನಡೆದಾಗಲೂ ಅವನ ಹೃದಯದಲ್ಲಿ ಒಂದು ಬಗೆಯ ಅವ್ಯಕ್ತ ಆಶೆಯಿದ್ದಿರಬೇಕು— ಈ ಆಶಂಕೆಗಳು ಸತ್ಯವಾಗಿ ನಿಲ್ಲಲಿಕ್ಕಿಲ್ಲ, ಈ ದುಃಸ್ವಪ್ನದ ದುಃಸಹವೇದನೆ ಕನಸು ಹರಿಯುತ್ತಲೆ ಬರೀ ಒಂದು ನಿಟ್ಟುಸಿರಿನಲ್ಲಿ ಅವಸಾನಗೊಳ್ಳಬಹುದು ಎಂದು. ಆಶೆಯೋ ಮತ್ತಾವ ಅಚಿಂತನೀಯ ವಸ್ತುವೋ ಅವನ ಹೃದಯವನ್ನು ಪೂರಾ ತೆರವುಮಾಡಿ ಹೊರಟುಹೋಗಿರಲಿಲ್ಲ. ಸಂಸಾರದ ಕಾಮನೆಗಳೆಂಬುವೆಲ್ಲ ಆವರೆಗೂ ಅವನಲ್ಲಿದ್ದವು. ಆದರೆ ಒಂದು ರಾತ್ರಿಯೂ ಕಳೆದಿಲ್ಲ, ಇಷ್ಟರೊಳಗೆ ಅವುಗಳಲ್ಲೊಂದೂ ಉಳಿಯಲಿಲ್ಲ. ಎವೆ ಹಳಚುವುದರೊಳಗೇ ಜೀವನ ಕೆಟ್ಟಹಣೆಬರಹದ ಸೀಮೆಯನ್ನು ಮೀರಿಹೋಯಿತು! ಇಂತಹ ವಿಪತ್ತಿನಲ್ಲಿ ಉಳಿದೇನೆಂಬ ನಂಬಿಕೆಯೂ ಅವನಿಗಿಲ್ಲದಾಯಿತು. ಇಬ್ಬರೂ ಸ್ತಬ್ಧವಾಗಿ ಕುಳಿತರು. ಗಾಡಿ ಸಣ್ಣ ನಿಲ್ದಾಣದಲ್ಲಿ ಕ್ಷಣ ನಿಂತು ಹೊರಟಿತು.

ಸುರೇಶ ಏನೋ ಮಾತನಾಡಲು ಹವಣಿಸಿ, ಕೆಲ ಹೊತ್ತು ಸುಮ್ಮನೆ ಕುಳಿತು, ಬಳಿಕ ಚಟ್ಟನೆದ್ದು ಕಿಡಿಕಿಯ ಕಾಜಿನ ಬಾಗಿಲೆತ್ತಿ, ಒಂದೆರಡು ಸಾರೆ ಎಡೆಯಾಡಿ, ಕೊನೆಗೆ ಪಕ್ಕನೆ ಅಚಲೆಯ ಮುಂದೆ ನಿಂತು, "ಮಹಿಮ ನೆಟ್ಟಗಿದ್ದಾನೆ, ಇಷ್ಟೊತ್ತಿಗೆ ಅವನು ಅಲಹಾಬಾದು ತಲುಪಿದ್ದಾನು," ಎಂದು ಸ್ವಲ್ಪ ತಡೆದು, "ಅಲ್ಲಿಂದ ಜಬ್ಬಲಪುರಕ್ಕೂ ಹೋಗಬಹುದು, ಕಲಕತ್ತೆಗಾದರೂ ಹೋಗಬಹುದು" ಎಂದ.

ಅಚಲೆ ಸಾವಕಾಶವಾಗಿ ಕೇಳಿದಳು "ನಾವು ಹೋಗುವುದೆಲ್ಲಿ?"

ಆ ಅಶ್ರುಕಲಂಕಿತ ಮುಖದಲ್ಲಿ ಸುರೇಶನಿಗೆ ಮತ್ತೆ ದುಃಖನಿರಾಶೆಗಳ ಪ್ರತಿಮೂರ್ತಿಯ ದರ್ಶನವಾಯಿತು. ತಾನೆಂತಹ ಪ್ರಮಾದವಮಾಡಿದನೆಂಬುದು ಅವನಿಗೆ ಗೋಚರಿಸದಿರಲಿಲ್ಲ. ಇದಕ್ಕಾಗಿ ಆತ್ಮಹತ್ಯೆಮಾಡಿಕೊಳ್ಳಲಿಕ್ಕೂ ಅವನು ಸಿದ್ಧನಾದ. ಆದರೆ ಯಾವಳ ಸಾವಿರಾರು ಛಲನೆಗಳು ಅವನ ಸತ್ಯದೃಷ್ಟಿಯನ್ನು ಈ ರೀತಿಯಾಗಿ ಮುಚ್ಚಿ [illegible]

ಎಚ್ಚರಿಸುತ್ತಿದ್ದವೋ ಆ ಛಲನಾಮಯಿಯ ಬಗ್ಗೆಯೂ ಅವನಂತರಂಗ ವಿಷಪೂರ್ಣವಾಯಿತು ಎಂತಲೇ ಅವನು ಬಿರುಸು ಉತ್ತರವಿತ್ತ. "ನಾವು ಬಹುಶಃ ಸಶರೀರವಾಗಿ ನರಕಕ್ಕೆ ಹೋಗುತ್ತಿದ್ದೇವೆ ಈ ಅಧಃಪತನದಲ್ಲಿ ದಾರಿದೋರುತ್ತ ಇಷ್ಟುದೂರ ಎಳೆತಂದಿದ್ದೀ ಇಲ್ಲಿ ನಡುವೇ ನಿಲ್ಲಬೇಕೆನಿಸಿದರೂ ನಿಲ್ಲಲಿಕ್ಕಾಗುವುದಿಲ್ಲ,– ಕಡೆ ಮುಟ್ಟಲೇಬೇಕು!"

ಅಚಲೆಯ ಮೈಯಂತ ಮೈ ನಡುಗಿತು ನಿರುತ್ತರಳಾಗಿ ತಲೆ ತಗ್ಗಿಸಿದಳು. ಈ ಮಿಥ್ಯಾಚಾರಿ ಕಾಪುರುಷ ಪರಸ್ತ್ರೀಯನ್ನು ಮೋಸದಿಂದ ಹೀಗೆ ತಪ್ಪುದಾರಿಯಲ್ಲಿ ತಂದಿದ್ದರೂ ಸಂಕೋಚವಿಲ್ಲದೆ ಇಂತಹ ನಿರ್ಲಜ್ಜ ಅಪವಾದವನ್ನು ಬಾಯಾರೆ ಹೊರಿಸುತ್ತಿರುವನಲ್ಲ, ಅವನಿಗೆ ಯಾರು ಏನು ಹೇಳುವುದಿದೆ!

ಪುರೋಚನನಿಗೆ ಆ ಪಾಷಾಣ ಮೂರ್ತಿಯ ಮುಂದೆ ನಿಂತು ಮಾತನಾಡುವುದಕ್ಕೆ ಬಹುಶಃ ಶಕ್ತಿಸಾಲಲಿಕ್ಕಿಲ್ಲ, ಅವನು ಪುನಃ ಎದೆಯೂಡುತ್ತ ಮಾತನಾಡತೊಡಗಿದ "ನಿನ್ನೊಬ್ಬಳದೇ ಸರ್ವನಾಶವೆಂದು ಭಾವಿಸುತ್ತಿದ್ದೀ ಆದರೆ ನನ್ನ ಸರ್ವನಾಶ ಯಾವ ಹಂತಕ್ಕೆ ಮುಟ್ಟಿದೆ ಬಲ್ಲೆಯಾ? ನಾ ನಿಮ್ಮಂತೆ ಬ್ರಹ್ಮಜ್ಞಾನಿಯಲ್ಲ, ನಾಸ್ತಿಕ, ಪಾಪಪುಣ್ಯಗಳ ಪೊಳ್ಳು ಮಾತು ಆಡುವುದಿಲ್ಲ, ನಿಜವಾದ ಸರ್ವನಾಶದ ಮಾತನ್ನೇ ಆಡುತ್ತೇನೆ ನಿನಗೆ ರೂಪವಿದೆ, ಕಂಬನಿಯಿದೆ, ಹೆಂಗುಸರ ಶಸ್ತ್ರಾಸ್ತ್ರಗಳೆಂಬುವೆಲ್ಲಾ ಅಗತ್ಯಕ್ಕಿಂತ ಹೆಚ್ಚಾಗಿಯೇ ಇವೆ ನಿನ್ನ ಬತ್ತಳಿಕೆಯಲ್ಲಿ, ನಿನಗೆ ಯಾವ ಹಾದಿಯಲ್ಲಿಯೂ ಆತಂಕವುಂಟಾಗಲಾರದು ಆದರೆ ನನ್ನ ಗತಿಯನ್ನು ಕಲ್ಪಿಸಬಲ್ಲೆಯಾ? ನಾ ಗಂಡುಸು ಜೀವ ತಪ್ಪಿಸಿಕೊಳ್ಳುವುದಕ್ಕಾಗಿ ಗುಂಡಿಕ್ಕಿಕೊಳ್ಳಬೇಕಾಗುವುದು!"

ಏನೋ ಮಾತನಾಡಲು ಅಚಲೆ ಮುಖವೆತ್ತಿದವಳು ನಿಃಶಬ್ದವಾಗಿ ಮುಖ ತಿರುವಿದಳು ಅವಳ ನೋಟದಲ್ಲಿಯ ತಿರಸ್ಕಾರವನ್ನು ಕಂಡು ಪುರೋಚನ ಸಂತಪ್ತನಾದ "ನವಿಲುಗರಿ ಚುಚ್ಚಿಕೊಂಡರೆ ಕಾಗೆ ನವಿಲಾಗಲಾರದು ಅಚಲಾ ಈ ನೋಟ ನನಗೆ ಅರ್ಥವಾಗುತ್ತದೆ, ಆದರೆ ನಿನಗಿದು ಒಪ್ಪುವುದಿಲ್ಲ, ಮೃಣಾಲಳಿಗೆ ಒಪ್ಪುವುದು ಸೂರ್ಯನ ಮುಖ ನೋಡದ ಹಿಂದೂ ಕುಲವಧುವಲ್ಲ ನೀನು ಇಷ್ಟಕ್ಕೆ ನಿನ್ನ ಜಾತಿ ಹೋಗಲಿಲ್ಲ. ನಿನ್ನ ಮನಸಿಗೆ ಬಂದಲ್ಲಿ ಇಳಿದು ಹೋಗು ನಾನೊಂದು ಚೀಟಿ ಬರೆದು

ಕೊಡುವೆ, ಮಹಿಮನಿಗೆ ತೋರಿಸು, ಅವನು ನಿನ್ನನ್ನು ಕರೆದುಕೊಳ್ಳುವ. ಹಣ ಕೊಡುತ್ತೇನೆ, ನಿಮ್ಮ ತಂದೆಗೆ ಕೊಡು, ಅವರ ಬಾಯಿ ಮುಚ್ಚು ವುದು ನಿನಗೇನು ಚಿಂತೆ ಅಚಲಾ? ಅಂಥ ದೊಡ್ಡ ಪ್ರಮಾದವೇ ಇದು?” ಎಂದ.

ಸುರೇಶ ಮತ್ತೆ ಎಡೆಯಾಡತೊಡಗಿದ. ತನ್ನ ಆಗ್ನೇಯಾಸ್ತ್ರದ ಪರಿಣಾಮ ಏನಾಯಿತೆಂಬುದನ್ನು ಕಣ್ಣೆತ್ತಿ ನೋಡಲಿಲ್ಲ ಕೂಡ. ಆಮಿಷದ ಆಸೆಗೆ ಬಲೆಯಲ್ಲಿ ಬಿದ್ದ ವನ್ಯಪಶು ಕ್ರೋಧಾಂಧವಾಗಿ ಕೈಗೆ ಸಿಕ್ಕುವದನ್ನು ನಿಷ್ಕರುಣೆಯಿಂದ ಕಡಿದು ಸೀಳುವಂತೆ ಸುರೇಶ ಅಚಲೆಯನ್ನು ಚೂರು ಚೂರು ಮಾಡಿ ಚೆಲ್ಲಬಗೆದನೇನೋ. ಅವನು ಒಮ್ಮೆಲೆ ನಿಂತು ಮತ್ತೆಂದ: “ಇದು ಅಂಥ ಭಯಂಕರ ಅಪರಾಧವ? ಗಂಡನ ಮನೆಯೊಳಗೆ ನಿಂತುಕೊಂಡು ಅವನೆದುರಿಗೇ ಮತ್ತೊಬ್ಬನನ್ನು ಪ್ರೀತಿಸುತ್ತೇನೆಂದು ಸಾರಿದ್ದು ಮರೆತೆಯಾ? ಯಾವನು ಮನೆಗೆ ಬೆಂಕಿಹಚ್ಚಿ ನಿನ್ನ ಪತಿಯನ್ನು ಸುಡಲೆಣಿಸಿದನೆಂದು ನೀ ನಂಬುವೆಯೋ ಅವನ ಸಂಗಡಲೇ ಬರಬಯಸಿದೆಯಲ್ಲ! ಬಂದೂ ಬಂದೆ! ಅವನ ಮನೆಯೊಳಗೇ ಅವನ ಆಶ್ರಯದಲ್ಲಿಯೇ ಇದ್ದು ಗುಟ್ಟಾಗಿ ಅತ್ತು ಅವನನ್ನು ನಿಮ್ಮ ಸಂಗಡ ಬರುವಂತೆ ಬೇಡಿದೆಯಲ್ಲ! ಅದಕ್ಕಿಂತಲೂ ನನ್ನದಿದು ಮಹಾಪರಾಧವೆ? ಅಲ್ಲದೆ ಇನ್ನೂ ಎಷ್ಟೋ ದೋಷ ಕುಟಿಲತೆಗಳುಂಟು! ಅಂತೆಯೇ ನನ್ನಿಂದಿಷ್ಟು ಸಾಹಸವಾಯಿತು! ವಾಸ್ತವವಾಗಿ ನಿನ್ನನ್ನೊಬ್ಬ ಗಣಿಕೆಯಿಂದೇ ಮೋಸದಿಂದ ತಂದೆ! ನಾ ಬಲ್ಲೆ—ನೀ ಮೊದಲು ಸ್ವಲ್ಪ ಬೆಚ್ಚಿ ಬೀಳಬಹುದು, ಅಷ್ಟೆ! ನೂರು ಸಾರಿ ಹೇಳುತ್ತೇನೆ ಅಚಲಾ, ನೀ ಸತಿ ಸಾವಿತ್ರಿಯಲ್ಲ! ಆ ದರ್ಪ ನಿನಗೊಪ್ಪುವುದಿಲ್ಲ, ಒಗ್ಗುವುದಿಲ್ಲ! ನಿನಗದು ಅತ್ಯಂತ ಅನಧಿಕಾರ ವಿಷಯ!” ಎಂದು ಸುರೇಶ ಉಸಿರು ಸೋತು ಮಾತು ನಿಲ್ಲಿಸಿದ. ಕೂಡಲೆ ಅಚಲೆ ಮುಖವೆತ್ತಿ ಭಗ್ನಸ್ವರದಿಂದ ಚೀರಿಕೊಂಡಳು: “ನಿಲ್ಲಿಸಬೇಡಿರಿ ಸುರೇಶ ಬಾಬೂ, ಇನ್ನೂ ಎನ್ನಿರಿ! ನನ್ನನ್ನು ಚೆನ್ನಾಗಿ ಒದೆದೊದೆದು, ಭೂಮಿಯ ಮೇಲೆ ಎಷ್ಟು ಕಟುವಚನಗಳಿವೆಯೋ ಎಷ್ಟು ಕುತ್ಸಿತ ವ್ಯಂಗ್ಯಗಳಿವೆಯೋ ಎಷ್ಟು ಅವಮಾನಗಳಿವೆಯೋ ಎಲ್ಲವನ್ನೂ ನನಗೆ ಪ್ರಯೋಗಿಸಿರಿ!” ಎಂದು ಕೆಳಗೆ ಬಿದ್ದು ಅಳುತ್ತೆಂದಳು: “ಇದೇ ನನ್ನಿಚ್ಛೆ, ಇದೇ ನನಗೆ ತಕ್ಕದ್ದು! ಇದೇ ನಮ್ಮ ನಿಜವಾದ ಸಂಬಂಧ! ಪ್ರಪಂಚದಿಂದ, ದೇವರಿಂದ, ನಿಮ್ಮಿಂದ

ಣಾ ಪಡೆಯಬೇಕಾದ್ದು ಇದೊಂದೇ ! ”

ಸುರೇಶ ಅಚಲವಾಗಿ ಗೋಡೆಗಾತು ನಿಂತು ನೋಡುತ್ತಿದ್ದ. ಹೊಸ ಬೇಟೆಗಾರ ಮೊದಲ ಬಾರಿ ಕೆಡಹಿದ ಪಕ್ಷಿಯು ಸಾಯುವ ಸಂಕಟವನ್ನು ನಿಃಶಬ್ದವಾಗಿ ದಿಟ್ಟಿಸುತ್ತಿರುವಂತೆ, ಅವನು ತನ್ನ ಮುಗ್ಧನೇತ್ರಗಳ ಎವೆಯಿಕ್ಕದ ನೋಟದಿಂದ ನೋಡುತ್ತ ಮರಣಾಹತಳಾದ ಸ್ತ್ರೀಯೊಬ್ಬಳ ಅಂತಿಮಕಾಲದ ಸಾಕ್ಷಿಯಾಗಿ ನಿಂತಿದ್ದನೇನೋ !

ಮತ್ತೆ ಗಾಡಿಯ ಗತಿ ಮಂದವಾಗಿ, ಮಂದತರವಾಗಿ, ನಿಲ್ದಾಣದಲ್ಲಿ ಹೋಗಿ ನಿಂತಿತು ಸುರೇಶ ನೆಟ್ಟಗೆ ನಿಂತುಕೊಂಡು ಶಾಂತಸಹಜ ಸ್ವರದಿಂದ ನುಡಿದ :“ನಿನ್ನೀ ಅವಸ್ಥೆ ನೋಡಿ, ಜನರಿಗೆ ಆಶ್ಚರ್ಯ ವಾದೀತು ಎದ್ದು ಕೂಡು, ನಾ ನನ್ನ ಡಬ್ಬಿಗೆ ಹೋಗುವೆ ಬೆಳಗಾಯಿ ತೆಂದರೆ, ಎಲ್ಲಿ ಇಳಿಯಬೇಕೆನ್ನುವೆಯೋ ಅಲ್ಲಿ ಇಳಿಸುವೆ, ಎಲ್ಲಿಗೆ ಹೋಗ ಬೇಕೆನ್ನುವೆಯೋ ಅಲ್ಲಿಗೆ ಕಳಿಸುವೆ ಅಷ್ಟರೊಳಗೇ ಇಲ್ಲದ್ದೊಂದು ಭಯಂಕರ ಮಾಡಲು ಯತ್ನಿಸಬೇಡ, ಅದರಿಂದೇನೂ ಫಲವಿಲ್ಲ ”

ಸುರೇಶ ಬಾಗಿಲು ತೆರೆದು ಇಳಿದು, ಸಾವಕಾಶವಾಗಿ ಬಾಗಿಲಿಕ್ಕಿ, ಏನೋ ಯೋಚಿಸಿ ಕ್ಷಣ ಹೊತ್ತು ಸುಮ್ಮನೆ ನಿಂತ ಬಳಿಕ ಮುಖ ಮುಂದೆ ನೀಡಿ, “ನನ್ನ ಮಾತು ನಿನಗೆ ತಿಳಿದಿರಲಿಕ್ಕಿಲ್ಲ ಆದರೆ ಈ ಸಮಸ್ಯೆಯ ಮೀಮಾಂಸೆಯ ಭಾರ ನನ್ನ ಮೇಲಿದೆ ಎಂದಿಷ್ಟು ತಿಳಿದುಕೊ ಇನ್ನು ನಿನಗೆ ಯಾವ ಅಕಲ್ಯಾಣವೂ ಆಗದಂತೆ ನೋಡಿಕೊಳ್ಳುವೆ— ಈ ಋಣವನ್ನೆಲ್ಲ ಪೈಗೆ ಪೈ ತೀರಿಸಿ ಹೋಗುವೆ ” ಎಂದು ನುಡಿದು ಹೊರಟು ಹೋದ

ಗಾಡಿಯ ತೂಗಾಟ ಸಪ್ಪಳ ನಿಂತಾಗಲೊಮ್ಮೆ ಸುರೇಶನಿಗೆ ಎಚ್ಚರೇನೋ ಆಗುತ್ತಿತ್ತು ಆದರೆ ಭಾರವಾದ ಎವೆಗಳನ್ನು ಬಿಡಿಸಿ ನೋಡುವ ಶಕ್ತಿ ಅವನಿಗಿರಲಿಲ್ಲ ಬಟ್ಟೆಗಳು ತೊಯ್ದುದರಿಂದ ಅವನಿಗೆ ತಂಡಿಯಾಗುತ್ತಿತ್ತು ಜಡ್ಡುಗಿಡ್ಡು ಆದೀತು, ಪ್ರಸ್ತುತಸ್ಥಿತಿಯಲ್ಲಿ ಅದರಿಂದ ಬಹಳ ಕಷ್ಟವಾದೀತು ಎಂದೆನಿಸುತ್ತಿತ್ತು. ಆದರೆ ಬ್ಯಾಗು ತೆರೆದು ಬಟ್ಟೆ ಬದಲಿಸಬೇಕೆಂಬ ಯೋಚನೆ ಅಸಾಧ್ಯ ಅಭಿಲಾಷೆಯಂತೆ ನಿಶ್ಚೇಷ್ಟವಾಗಿತ್ತು ಈ ಸ್ಥಿತಿಯಲ್ಲಿಯೆ ಸುಪರಿಚಿತ ಧ್ವನಿಯೊಂದು ಅವನ ಕಿವಿಗೆ ಬಿತ್ತು : “ಕೂಲೀ, ಕೂಲೀ. ” ಅರೆಯಚ್ಚರದಲ್ಲಿ ಸುರೇಶ ಕಣ್ತೆರೆದು

ನೋಡಿದ ಯಾವುದೋ ನಿಲ್ದಾಣ ಯಾವಾಗಲೋ ಕತ್ತಲು ಹರಿದಿದೆ. ಮಳೆಗರೆದು ದಣಿದ ಧೂಸರ ಮೇಘದೊಳಗಿಂದ ಬರುತ್ತಿದ್ದ ಮಸಕು ಬೆಳಕಿನಲ್ಲಿ ಎಲ್ಲವೂ ನಿಚ್ಚಳವಾಗಿ ಕಾಣುತ್ತಿತ್ತು ಹಲವರು ಇಳಿಯು ತ್ತಿದ್ದರು, ಹಲವರು ಹತ್ತುತ್ತಿದ್ದರು. ಅವರ ಮಧ್ಯದಲ್ಲಿ ಶೋಕಾಚ್ಛನ್ನ ರಮಣಿಯೊಬ್ಬಳು ಯಾರಿಗಾಗಿಯೋ ಕಾದು ನಿಂತಿದ್ದಳು ಅವಳು ಅಚಲೆ. ಕೂಲಿ ಬ್ಯಾಗು ಹೊತ್ತುಕೊಂಡು ಗಾಡಿಯಿಂದಿಳಿದುಬಂದ ಅವಳು ಅವನನ್ನೇನೋ ವಿಚಾರಿಸಿ ನಿಲ್ದಾಣದ ಬಾಗಿಲತ್ತ ಸಾಗಿದಳು

ಸುರೇಶ ಇಷ್ಟನ್ನೂ ಅಚೇತನನಾಗಿ ನೋಡುತ್ತಲಿದ್ದ ಬಹಳವಾಗಿ ಕಣ್ಣು-ಮನಸುಗಳ ನಡುವಣ ಕದ ಮುಚ್ಚಿರಬಹುದು ಗಾಡಿ ಬಿಡುವುದಕ್ಕೆ ಗಂಟೆಯಾಯಿತು ಆ ನಾದ ವಿದ್ಯುತ್ಸ್ಪರ್ಶವಾದಂತೆ ಅವನ ಒಳಹೊರಗು ಗಳನ್ನು ಏಕಾಕಾರ ಮಾಡಿತು ಜಡತೆ ಬಿಟ್ಟುಹೋಯಿತು ತತ್‌ಕ್ಷಣ ಅವನು ಬ್ಯಾಗೆಳೆದುಕೊಂಡು ಬಾಗಿಲು ತೆರೆದು ಇಳಿದ

ಟಿಕಿಟಿನ ನೆನಪೇ ಇರಲಿಲ್ಲ ಅಚಲೆಗೆ ಬಾಗಿಲಲ್ಲಿ ಟಿಕಿಟಬಾಬುವನ್ನು ನೋಡಿದಾಗ ಬೆಚ್ಚಿ ನಿಂತಳು "ನಿಲ್ಲಬೇಡ, ನಡೆ, ಟಿಕೀಟು ನಾ ಕೊಡುವೆ" ಎಂದ ಸುರೇಶ ಹಿಂದಿನಿಂದ

ಅವನು ಬಂದುದು ಅಚಲೆಗೆ ಗೊತ್ತಿರಲಿಲ್ಲ ಭಯ ಸಂಕೋಚಗ ಳಿಂದ ಕ್ಷಣಹೊತ್ತು ಅವಳ ಕಾಲೇಳಲಿಲ್ಲ ಆದರೆ ಅದು ಅವನ ಲಕ್ಷ್ಯಕ್ಕೆ ಬರುವ ಮುಂಚೆಯೆ ಅವಳು ನಿದಾನವಾಗಿ ಹೊರಹೊರಟು ಬಂದಳು

"ನೀ ನೆಟ್ಟಗೆ ಕಲಕತ್ತೆಗೆ ಹೋಗಬಹುದೆಂದು ನಾನೆಂದುಕೊಂಡಿದ್ದೆ. ಒಮ್ಮೆಲೆ ಈ ಡಿಹರಿಯಲ್ಲೇಕೆ ಇಳಿದೆ? ಇಲ್ಲಿ ಗುರುತಿನವರು ಯಾರಾದರೂ ಇದ್ದಾರೇನು?" ಸುರೇಶ ಕೇಳಿದ

ಅಚಲೆಯ ದೃಷ್ಟಿ ಬೇರೆ ಕಡೆಯಿತ್ತು ಆಕಡೆ ನೋಡುತ್ತಿದ್ದಂತೆಯೇ ಉತ್ತರವಿತ್ತಳು "ಕಲಕತ್ತೆಗೆ ಯಾರ ಕಡೆ ಹೋಗಲಿ?"

"ಮತ್ತಿಲ್ಲೆ?"

ಅಚಲೆ ಸುಮ್ಮನಿದ್ದಳು ಸುರೇಶನೂ ಕೊಂಚಹೊತ್ತು ಮೌನ ವಾಗಿದ್ದು ನುಡಿದ "ನನ್ನ ಯಾವ ಮಾತನ್ನೂ ನೀ ನಂಬಲಿಕ್ಕಿಲ್ಲ; ಅದಕ್ಕೇನು ಸನ್ನದ್ಧಿಯಿಲ್ಲ ಆದರೆ ನಿನ್ನಲ್ಲಿ ನನ್ನದೊಂದು ಕೊನೆಯ ಭಿಕ್ಷೆಯಿದೆ"

ಅಚಲೆ ಮತ್ತೂ ಮೌನವಾಗಿದ್ದಳು

"ನನ್ನ ಮಾತು ಯಾರಿಗೂ ತಿಳಿಯಬೇಕಾದ ಅಗತ್ಯವಿಲ್ಲ, ತಿಳಿಸಿ ಕೊಡಲೂ ಬಯಸುವುದಿಲ್ಲ ನನ್ನ ವಸ್ತು ನನ್ನ ಹತ್ತಿರವೇ ಇರಲಿ ಎಲ್ಲಿಗೆ ಹೋದರ ಇಲ್ಲಿಯ ಬೆಂಕಿ ನನ್ನನ್ನು ಸುಡಲಿಕ್ಕಿಲ್ಲವೋ ಆ ದೇಶಕ್ಕೆ ನಾನಿಂದು ಹೋಗುವೆ ನನ್ನ ಕೊನೆಯ ಬಂಡವಾಳ ನನಗೆ ಕೊಡು—ಇಷ್ಟೇ ನಿನ್ನನ್ನು ನಾ ಕೈಜೋಡಿಸಿ ಬೇಡುವುದು" ಎಂದ ಸುರೇಶ

ಆದರೂ ಅಚಲೆಯ ಬಾಯಿಂದ ಒಂದು ಮಾತೂ ಹೊರಡಲಿಲ್ಲ ಸುರೇಶ ಹೇಳತೊಡಗಿದ "ನಾ ನಿನಗೆ ಬಹಳ ಕಟಕಿ ಮಾತಾಡಿದ್ದೇನೆ, ಎಷ್ಟೋ ಪೀಡಿಸಿದ್ದೇನೆ, ಆದರೆ ಮುಂದೆ ಯಾರಾದರೂ ತಮ್ಮ ಸದಾ ಚಾರದ ದಂಭದಿಂದ ನಿನ್ನ ಮೋರೆಗೆ ಕಪ್ಪು ಬಳಿದರೆ, ಅದು ನನಗೆ ಸತ್ತರೂ ಸಹಿಸದು ನನಗೋಸುಗ ನಿನಗಿನ್ನು ಮುಂದೆ ಕಷ್ಟವುಂಟಾಗದು ಬೇಳ್ಕೊಳ್ಳುವ ಪೂರ್ವದಲ್ಲಿ ನನಗಿಷ್ಟು ಸುಯೋಗವನ್ನು ಒದಗಿಸಿಕೊಡು"

ಅವನ ಕಂಠಸ್ವರದಲ್ಲಿ ಏನಿತ್ತೋ ಅಂತರ್ಯಾಮಿಯೇ ಬಲ್ಲ ಅಚಲೆಯ ಕಣ್ಣುಗಳಲ್ಲಿ ಅಕಸ್ಮಾತ್ ಬಿಸಿಕಂಬನಿ ಮೂಡಿದವು ಆದರೆ ಅವಳು ತನ್ನ ಸ್ವರವನ್ನು ಪ್ರಯತ್ನದಿಂದ ಸಹಜವಾಗಿಸಿ ಮೃದುವಾಗಿಸಿ ಕೇಳಿದಳು: "ನಾನೇನು ಮಾಡಬೇಕೆಂದಿರಿ ?"

ಸುರೇಶ ಟ್ರೈನ್ ಟೇಬಲ್ ತೆಗೆದು ತೆರೆದು ನೋಡಿ ಹೇಳಿದ: "ನೀನೇನೂ ಮಾಡಬೇಕಾದ್ದಿಲ್ಲ ಸಂಜೆಯ ತನಕ ಯಾವ ಕಡೆಗೂ ಹೋಗುವುದಕ್ಕೆ ಅನುಕೂಲವಿಲ್ಲವೆಂದ ಬಳಿಕ, ಅಷ್ಟು ಹೊತ್ತಿನ ಮಟ್ಟಿಗೆ ನನ್ನಲ್ಲಿ ಅವಿಶ್ವಾಸ ತೋರ್ಪಡಿಸಬೇಡ— ಇಷ್ಟೇ ನನ್ನ ಬಯಕೆ ನನ್ನಿಂದ ನಿನಗಿನ್ನು ಯಾವ ಅಕಲ್ಯಾಣವೂ ಆಗದು—ನಿನ್ನಾಣೆಯಾಗಿ ಹೇಳುತ್ತೇನೆ"

ಬಾಯಿಂದ ಹೇಳದಿದ್ದರೂ ಅವಳು ಒಪ್ಪಿಗೆಯನ್ನು ಸೂಚಿಸಿದಳು

ಜನರ ಕುತೂಹಲ ದೃಷ್ಟಿಗೆ ಗುರಿಯಾಗಬಹುದೆಂಬ ಸಂಶಯದಿಂದ ಅವರು ತಿರುಗಿ ಹೋಗಿ ನಿಲ್ದಾಣದ ಕೋಣೆಯೊಳಗೆ ಕೂಡಲಿಲ್ಲ ವಿಚಾರಿಸಲಾಗಿ, ದೊಡ್ಡ ಹಾದಿಗೆ ಹೊಂದಿ ಸಮ್ರಾಟ್ ಶೇರಶಹಾನ ಹೆಸರಿನ ಧರ್ಮಶಾಲೆಯೊಂದು ಇನ್ನೂ ಪೂರ್ಣ ನಾಶವಾಗದಿದೆಯೆಂದು ಗೊತ್ತಾಯಿತು ಎತ್ತಿನ ಬಂಡಿಯನ್ನು ಬಾಡಿಗೆ ಮಾಡಿಕೊಂಡು ಅಲ್ಲಿಗೆ ಸಾಗಿದರು.

ಹಾದಿಯಲ್ಲಿ ಯಾರು ಯಾರನ್ನೂ ಮಾತನಾಡಿಸಲಿಲ್ಲ; ನೋಡಲಿಲ್ಲ

ಕೂಡ ಗೋಣಕಟದಿಂದಿಳಿಯುವಾಗ ಅಚಲೆಯ ದೃಷ್ಟಿ ಸುರೇಶನ ಮುಖದ ಮೇಲೆ ಬಿದ್ದಿತು ಅವಳು ಅಚ್ಚರಿಗೊಂಡಳಷ್ಟೇ ಅಲ್ಲ, ಉದ್ವಿಗ್ನಳಾದಳು. ಅವನ ಕಣ್ಣುಗಳು ಭಯಂಕರ ಕೆಂಪಾಗಿದ್ದವು ಮುಖ ಕಪ್ಪಗಿತ್ತು. ಸಂಸಾರದ ಅನೇಕ ಕಷ್ಟಜಂಜಡಗಳಲ್ಲಿಯೂ ಅವನನ್ನು ಅವಳು ನೋಡಿದ್ದಳು ಆದರೆ ಈ ಅವತಾರವನ್ನು ಹಿಂದೆ ನೋಡಿದಂತೇನು ಅವಳಿಗೆನಿಸಲಿಲ್ಲ.

ಬಂಡಿಯುವನಿಗೆ ಬಾಡಿಗೆ ಕೊಟ್ಟು ಕಳಿಸಿ ಮನಿಬ್ಯಾಗನ್ನು ಅಲ್ಲಿಯೇ ಇಟ್ಟು ಸುರೇಶನೆಂದ "ಇದು ನಿನ್ನ ಹತ್ತಿರವೇ ಇರಲಿ ಅಗತ್ಯಬಿದ್ದಾಗ ತೆಗೆದುಕೊಳ್ಳಲು ಸಂಕೋಚಪಡಬೇಡ"

ಇದರರ್ಥವೇನೆಂದು ಅಚಲೆ ಕೇಳಲಿಚ್ಛಿಸಿದಳು, ಕೇಳಲಾಗಲಿಲ್ಲ. ಸುರೇಶ "ಇದ್ದದ್ದರೊಳಗೆ ಇದಿರಿನ ಕೋಣೆ ನೆಟ್ಟಗೆ ನೀ ಅಲ್ಲಿ ಸ್ವಲ್ಪ ವಿಶ್ರಮಿಸು ಪಕ್ಕದ ಯಾವುದೊಂದು ಕೋಣೆಯೊಳಗೆ ನಾ ಬಟ್ಟೆ ಬದಲಿಸಿಕೊಂಡು ಬರುತ್ತೇನೆ ಯಾರಿಗೆ ಗೊತ್ತು— ಈ ಬಟ್ಟೆಗಳಿಂದಲೇ ನಾನಿಷ್ಟು ಅಸಡ್ಡಾಳಿ ಕಾಣುತ್ತೇನೋ ಏನೋ!" ಎಂದು ತನ್ನ ಬ್ಯಾಗು ತೆಗೆದುಕೊಂಡು ಕುಡಿದವರಂತೆ ಜೋಲಿ ಹೊಡೆಯುತ್ತ ಮೂಲೆಯ ಕೋಣೆಯೊಳಗೆ ಹೋದ

ಬೀದಿಯ ಪಕ್ಕದಲ್ಲಿ ಒಬ್ಬಳೇ ನಿಂದಿರಲಾರದೆ, ಅಚಲೆ ತನ್ನ ದೊಡ್ಡ ಬ್ಯಾಗನ್ನು ಅತಿ ಕಷ್ಟದಿಂದ ಎಳೆದೊಯ್ದು ಇದಿರಿನ ಕೋಣೆಯಲ್ಲಿ ಒಗೆದಳು. ಅದರ ಮೇಲೆ ಸ್ತಬ್ಧವಾಗಿ ಕುಳಿತು ಬೀದಿಯಲ್ಲಿ ಜನ ಓಡಾಡುವುದನ್ನು ನೋಡತೊಡಗಿದಳು

೨೯

ಹಾಗೆ ಕುಳಿತಿದ್ದಂತೆ ಆಶೆ-ಆಶ್ವಾಸನೆಗಳ ಸ್ವಪ್ನದಲ್ಲಿ ಎರಡು ಗಂಟೆ ಕಾಲ ಅಚಲೆಗೆ ಗೊತ್ತಾಗದೆ ಕಳೆಯಿತು ಸೂರ್ಯೋದಯವಾಗಿ ಎಷ್ಟೋ ಹೊತ್ತಾಗಿತ್ತು ದೂಳಡಿದ ತರುರಾಜಿ ನಿನ್ನೆಯ ಮಳೆಯಲ್ಲಿ ಮಿಂದು ರವಿರಶ್ಮಿಯಲ್ಲಿ ತಳತಳಿಸುತ್ತಿದ್ದವು ತೊಳೆದ ಬೀದಿಗಳಲ್ಲಿ ದಣಿವ್ವುಗಳೆದ ಹಾದಿಗರು ಪ್ರಫುಲ್ಲಮುಖದಿಂದ ಅಡ್ಡಾಡತೊಡಗಿದ್ದರು ನಡುನಡುವೆ ಒಂದೆರಡು ಎಕ್ಕಗಳು ಕಿರುಗಂಟೆಗಳ ನಾದದಿಂದ ನಾಲ್ಕು ದಿಕ್ಕುಗಳನ್ನು ತುಂಬುತ್ತ ಓಡುತ್ತಿದ್ದವು ದನಗಾಹಿ ಹುಡುಗರು ದನಗಳನ್ನು ಬಿಟ್ಟುಕೊಂಡು, ತಂತಮ್ಮ ಅದ್ಭುತ ಅಸಂಭವ ವಿಷಯಗಳನ್ನು ಉಚ್ಚಕಂಠದಿಂದ

ಘೋಷಿಸುತ್ತ ಹೋಗುತ್ತಲಿದ್ದರು. ಸಮೀಪದ ಗುಡಿಸಲಿನಿಂದ ಭಾರತೀಯ ಹೆಂಗಳೆಯ ಅಪರಿಚಿತ ಸುಸ್ವರ ಬೀಸುಕಲ್ಲಿನ ಶಬ್ದದೊಡನೆ ಬೆರೆತು ಬರುತ್ತಲಿತ್ತು. ಒಟ್ಟಾರೆ ಹೊಸದಿನದ ಕಾರ್ಯಪ್ರವಾಹ ಅಚಲೆಯ ಚಿತ್ತಕ್ಕೆ ಗತಿಗೊಟ್ಟಿತು. ಆ ವಿಚಿತ್ರ ಪ್ರವಾಹದಲ್ಲಿ ಅವಳ ದುಃಖ-ದೌರ್ಭಾಗ್ಯ-ದುಶ್ಚಿಂತೆಗಳು ಕೆಲಹೊತ್ತು ಎಲ್ಲಿಯೋ ಹರಿದುಹೋಗಿದ್ದವು. ತಾನಿಲ್ಲಿ ಯಾರಿಗಾಗಿ ಏಕೆ ಕುಳಿತಿದ್ದೇನೆಂಬುದು ಮಾತ್ರ ಅವಳಿಗೆ ನೆನಪಿರಲಿಲ್ಲ. ಆಡಬಂದ ಇಬ್ಬರು ಹಳ್ಳಿಹುಡುಗರು ಆಶ್ಚರ್ಯದಿಂದ ಅವಳನ್ನು ನೋಡುತ್ತ ನಿಂತರು. ಅವರಿಗೆ ತಿಳಿವಳಿಕೆ ಬಂದಾಗಿನಿಂದ ಹೀಗೆ ವಿಶಿಷ್ಟ ಅತಿಥಿಗಳು ಈ ಪಾಂಥಶಾಲೆಗೆ ಬಂದಿರಲಿಲ್ಲವೆಂಬುದನ್ನು ಅವರ ನೀರವ ವಿಸ್ಮಿತದೃಷ್ಟಿ ಅಚಲೆಗೆ ತಿಳಿಸಿದವು.

ಅಚಲೆ ಚಟ್ಟನೆದ್ದು ನಿಂತಳು. ಏನನ್ನೋ ವಿಚಾರಿಸಬೇಕೆಂದಿದ್ದಳೇನೋ. ನಿಮಿಷದೊಳಗೆ ಹುಡುಗರಿಬ್ಬರೂ ಅಂತರ್ಧಾನವಾದರು. ಸುಮಾರು ಎರಡು ಗಂಟೆಗಳ ಹಿಂದೆಯೇ ಬಟ್ಟೆ ಬದಲಿಸಲು ಹೋದ ಸುರೇಶ ಇನ್ನೂ ಬರಲಿಲ್ಲವೆಂಬುದು ಆಗವಳ ಲಕ್ಷ್ಯಕ್ಕೆ ಬಂತು. ಇಷ್ಟೊತ್ತಿನತನಕ ಒಬ್ಬನೇ ಏನು ಮಾಡುತ್ತಿರಬಹುದೆಂದು ಅವಳು ಆ ಕೋಣೆಗೆ ಹೋದಳು. ಬಾಗಿಲು ಮುಚ್ಚಿತ್ತು. ಒಳಗೆ ಸದ್ದಿಲ್ಲ. ಅವಳು ಒಂದೆರಡು ನಿಮಿಷ ಸುಮ್ಮನೆ ನಿಂತು ಹೌರಗೆ ಬಾಗಿಲು ತೆರೆದು ನೋಡಿದಳು. ಅವಳ ಮೈ ಜುಮ್ಮೆಂದಿತು. ಕತ್ತಲು ಕೋಣೆ, ಆಕಡೆಯ ಮುರುಕ ಕಿಡಕಿಯಿಂದ ಸ್ವಲ್ಪ ಬೆಳಕು ನಡುವೆ ಬಿದ್ದಿತ್ತು ಅಷ್ಟೆ. ಆ ಕತ್ತಲೆಬೆಳಕಿನಲ್ಲಿ, ಕಸಮೂಳುಗಳಲ್ಲಿ ಹಾಸಿಗೆ ಹೊದ್ದಿಕೆಯಿಲ್ಲದೆ ಎಚ್ಚರಿಲ್ಲದೆ ಬಿದ್ದಿದ್ದ ಸುರೇಶ. ಅವನ ಮೈಯಲ್ಲಿ ಮೊದಲಿನ ಬಟ್ಟೆಗಳೇ ಇದ್ದವು. ಬ್ಯಾಗು ಮಾತ್ರ ತೆರೆದಿತ್ತು, ಅದರೊಳಗಿನ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು.

ಅಚಲೆಗೆ ಸುರೇಶನ ಕೊನೆಯ ಮಾತು ನೆನಪಾಯಿತು. ಡಾಕ್ಟರರು ಜನರ ಜೀವ ಉಳಿಸುವ ವಿದ್ಯೆಯನ್ನು ಮಾತ್ರ ಬಲ್ಲವರಲ್ಲ, ಅದನ್ನು ನಿಃಶಬ್ದವಾಗಿ ಹೊರಗೆಡಹುವ ವಿದ್ಯೆಯೂ ಅವರಲ್ಲುಂಟು ಎಂದೆನಿಸಿತು. ತನ್ನ ತಪ್ಪಿಗಾಗಿ ಅವನಿಗಾದ ಆತ್ಮಗ್ಲಾನಿ, ಅವನ ಆ ಬೀಳ್ಕೊಳ್ಳುವಿಕೆ, ಅವನ ಆ ಆಶ್ವಾಸನ, ಎಲ್ಲಕ್ಕೂ ಹೆಚ್ಚಾಗಿ ಅವನು ಮತ್ತೆಮತ್ತೆ ಆಡುತ್ತಿದ್ದ ನಿಷ್ಠುರ ಪ್ರಾಯಶ್ಚಿತ್ತದ ಮಾತು— ಎಲ್ಲವೂ ಒಟ್ಟುಗೂಡಿ ಆ ಬಿದ್ದಿರುವ

ದೇಹದ ಏಕಮಾತ್ರ ಪರಿಣಾಮವನ್ನೇ ತನ್ನ ಕಿವಿಯಲ್ಲಿ ಹೇಳುತ್ತಿರುವಂತೆ ಅವಳಿಗೆ ಭಾಸವಾಯಿತು ಅವಳಲ್ಲಿಯೇ ಬಾಗಿಲಲ್ಲಿ ಕುಳಿತುಬಿಟ್ಟಳು ಒಳಹೊಗಲು ಅವಳಿಗೆ ಧೈರ್ಯ ಸಾಲಲಿಲ್ಲ

ಆ ಅಚೇತನ ಶರೀರದ ಕಡೆ ನೋಡುತ್ತಿದ್ದಂತೆ ಅವಳ ಕಣ್ಣಿನ ಕೋಡಿಯೊಡೆಯಿತು ತನ್ನಿಂದಲೇ ಇಷ್ಟೊಂದು ಕೆಟ್ಟ ಹೆಸರು ಹೊತ್ತು, ನಿರಾಶೆಯಿಂದ ಅವನು ಹೀಗೆ ಜಗತ್ತಿನಿಂದ ಚಿರನಿರೋಪ ತೆಗೆದುಕೊಂಡ, ಅವನ ಅಪರಾಧ ಎಷ್ಟು ಗುರುತರವಾದರೂ ಅದನ್ನು ಕ್ಷಮಿಸವಂತಹ ಕರಿನ ಹೃದಯ ವಿಶ್ವದಲ್ಲಿಯೇ ವಿರಳವಿರಬಹುದು ಎಂದವಳು ಬಗೆದಳು. ಅವನಲ್ಲಿ ತಾನು ಮಾಡಿದ ಅಪರಾಧಗಳೂ ಈಗವಳಿಗೆ ಗೋಚರಿಸಿದವು

ಪ್ರಥಮ ಪರಿಚಯವಾದಂದಿನಿಂದ ಈವರೆಗೆ, ಎಷ್ಟು ಕಾಮನೆ-ವಾಸನೆಗಳು, ಎಷ್ಟು ಪ್ರಮಾದ-ಭ್ರಾಂತಿಗಳು, ಎಷ್ಟು ಮೋಹ ಛಲನಗಳು, ಎಷ್ಟು ಆಗ್ರಹ ಆವೇಗಗಳು ತಮ್ಮಿಬ್ಬರ ನಡುವೆ ಹಾಯ್ದುಹೋಗಿದ್ದವೋ ಅವೆಲ್ಲ ಒಂದೊಂದಾಗಿ ಅವಳ ಕಣ್ಣಿಗೆ ಕಟ್ಟಿದವು ತನ್ನ ನಡತೆ, ತನ್ನ ತಂದೆಯ ನಡತೆ— ಅವಳ ಮೈಗೆ ಒಮ್ಮೆಲೆ ಮುಳ್ಳುಬಂದವು ಸುರೇಶ ತನ್ನದುಮಾತ್ರವಲ್ಲದೆ ಅನೇಕರ ಅನೇಕ ಪಾತಕಗಳ ಗುರುತರ ಭಾರವನ್ನು ಹೊತ್ತುಕೊಂಡು ಯಾವ ನ್ಯಾಯಮೂರ್ತಿಯ ಸನ್ನಿಧಿಗೆ ಹೋಗಿರುವನೋ ಅಲ್ಲಿ ಅವನು ಸಂಪೂರ್ಣ ಶಿಕ್ಷೆಯನ್ನು ಮೌನವಾಗಿ ಸ್ವೀಕರಿಸಬಹುದು, ಅಥವಾ ಒಂದೊಂದಾಗಿ ಎಲ್ಲ ದುಃಖ ಆಘಾತಗಳನ್ನು ನಿವೇದಿಸಿ ಕ್ಷಮೆ ಕೇಳಿಕೊಳ್ಳಬಹುದು ಎಂದವಳಿಗೆನಿಸಿತು

ಸಂಸಾರಭೋಗದ ಅನೇಕ ಸಾಧನ ಸಂಪತ್ತುಗಳು ಒಟ್ಟಿರಲಿಕ್ಕೆ, ಹೀಗೆ ನೀರವವಾಗಿ ಕೊಂಚವೂ ಆಡಂಬರವಿಲ್ಲದೆ ಎಲ್ಲವನ್ನೂ ಬಿಟ್ಟು ಹೊರಟುಹೋದನಲ್ಲ ಎಂಬ ಗಭೀರವೇದನೆ ಅಚಲೆಯನ್ನು ಮತ್ತೆ ಮತ್ತೆ ಇರಿಯತೊಡಗಿತು ಅವಳ ಕೆನ್ನೆಯ ಮೇಲೆ ಕಂಬನಿ ತೊರೆಯಾಗಿ ಹರಿಯಿತು ಕಳೆದ ರಾತ್ರಿ ಗಾಡಿಯೊಳಗೆ ಇಬ್ಬರಲ್ಲಿಯೂ ಎಷ್ಟು ಕಠಿನ ಮಾತುಕತೆಗಳಾಗಿದ್ದವು, ಎಷ್ಟು ಧರ್ಮಾಧರ್ಮ ನ್ಯಾಯಾನ್ಯಾಯಗಳ ತರ್ಕವಾಗಿತ್ತು! ಅದೆಲ್ಲ ಅರ್ಥವಿಲ್ಲದ ಪ್ರಲಾಪವೆಂದು ಅಚಲೆ ಆಗ ಅರಿತಿದ್ದಳೆ? ಪ್ರೇಮಕ್ಕೆ ಜಾತಿಯಿಲ್ಲ, ಧರ್ಮವಿಲ್ಲ, ವಿಚಾರ ವಿವೇಕ ಹಿತಾಹಿತಜ್ಞಾನ ಯಾವುದೂ ಇಲ್ಲ. ಈ ರೀತಿ ಸಾಯುವವನು ಸಮಾಜ

ಕಟ್ಟಿದ ನಿಯಮನಿರ್ಬಂಧಗಳಿಂದ ಬಹಳ ಎತ್ತರದಲ್ಲಿರುವನು; ವಿಧಿನಿಷೇಧ ಯಾವುದೂ ಅವನನ್ನು ಮುಟ್ಟಲಾರದು– ಎಂಬುದನ್ನು ಸಾವಿನೆದುರಲ್ಲಿ ಕುಳಿತು ಅವಳೆಂತು ಅಲ್ಲಗಳೆಯಬಲ್ಲಳು?

ಅವಳು ಕಣ್ಣೊರಸಿಕೊಂಡಳು ಆಗ ಆ ಮೃತ ದೇಹ ಮಿಸುಕಿದಂತೆ ನಿಸಿ ಅವಳೆದೆ ನಡುಗಿತು ಮರುಕ್ಷಣವೇ ಅಸ್ಫುಟ ಆರ್ತಸ್ವರದೊಂದಿಗೆ ಸುರೇಶ ಮಗ್ಗುಲಾದ ಸತ್ತಿಲ್ಲ– ಜೀವವಿದೆ! ಅಚಲೆ ಧಾವಿಸಿಹೋಗಿ ಅವನ ಹತ್ತಿರ ಕುಸಿದು ಭಗ್ನಸ್ವರದಿಂದ ಕೂಗಿದಳು "ಸುರೇಶಬಾಬೂ!"

ಸುರೇಶ ಕೆಂಗಣ್ಣುಗಳನ್ನು ತೆರೆದು ನೋಡಿದ ಮಾತನಾಡಲಿಲ್ಲ. ಅಚಲೆಯ ಬಾಯಿಂದಲೂ ಮಾತು ಹೊರಡದಾಯಿತು ಗಂಟಲು ಕಟ್ಟಿ ದಳದಳ ಕಂಬನಿಗಳುದುರತೊಡಗಿದವು. ಆದರೆ ಹಿಂದಿನ ಕ್ಷಣದ ಕಂಬನಿಗೂ ಇದಕ್ಕೂ ಎಷ್ಟು ಭೇದ!

ಒಳಗೊಳಗೆ ಅತಿಗೌಪ್ಯವಾಗಿ ಒಂದು ಚಿಂತೆ ಅವಳನ್ನು ಪೀಡಿಸುತ್ತಿತ್ತು: ಗುರುತುಪರಿಚಿತಿ ಇಲ್ಲದ ಇಲ್ಲಿ ಸುರೇಶನ ಮೃತದೇಹದ ಏರ್ಪಾಡು ಹೇಗೆ ಮಾಡುವುದು, ಯಾರನ್ನು ಕರೆಯುವುದು! ಆಗ ಅನೇಕ ಅಪ್ರಿಯ ವಿಷಯಗಳು, ಅನೇಕ ಕುತ್ಸಿತ ಪ್ರಶ್ನೆಗಳು ಏಳಬಹುದು, ಅವುಗಳಿಗೇನು ಹೇಳುವುದು! ಪೋಲಿಸರು ಕೀಟಲೆಕೊಟ್ಟು ಎಲ್ಲವನ್ನೂ ಪ್ರಕಾಶಕ್ಕೆ ತರಬಹುದು! ಈ ಎಲ್ಲ ವಿಪತ್ತುಗಳಿಂದ ಪಕ್ಕನೆ ಪಾರಾದುದಕ್ಕಾಗಿ ಅವಳಿಗೆ ಅಳು ಒತ್ತರಿಸಿತು ಅವನು ಸಾಯಲಿಲ್ಲವೆಂದಾದೊಡನೆ ಅಚಲೆಯ ಹೃದಯದ ಸಂದಿಗೊಂದಿಯೂ ಕೃತಜ್ಞತೆಯಿಂದ ತುಂಬಿತು

ಕೆಲ ಹೊತ್ತಿನ ಮೇಲೆ ಸುರೇಶ ಸಾವಕಾಶವಾಗಿ ಕೇಳಿದ: "ಏಳುತ್ತೀ ಅಚಲಾ?"

ಅಚಲೆ ಭಗ್ನಸ್ವರದಿಂದ ಕೇಳಿದಳು. "ನೀವೇಕೆ ಹೀಗೆ ಮಲಗಿದಿರಿ? ಹೋಗಲಿಲ್ಲವೇಕೆ? ನನ್ನನ್ನೇಕೆ ಹೀಗೆ ಹೆದರಿಸಿದಿರಿ?"

ಅವಳ ಸ್ವರದಲ್ಲಿ ಧ್ವನಿತವಾದ ಸ್ನೇಹ ಎಷ್ಟು ಸಕರುಣವಾಗಿತ್ತು, ಎಷ್ಟು ಮಧುರವಾಗಿತ್ತು! ಅದರಿಂದ ಸುರೇಶನಲ್ಲಿ ಮಾತ್ರವಲ್ಲ ಅಚಲೆಯಲ್ಲಿಯೂ ಒಂದು ಬಗೆಯ ಮೋಹದ ಸಂಚಾರವಾಯಿತು. ಮತ್ತೆ ಅವಳೆಂದಳು: "ನಿಮಗಿಷ್ಟು ನಿದ್ದೆ ಬಂದಿದ್ದರೆ ನನ್ನನ್ನು ಕರೆಯಬಾರದೆ? ಅತ್ತಲಾಗಿನ ದೊಡ್ಡ ಕೋಣೆಯನ್ನು ಸ್ವಚ್ಛ ಮಾಡಿ ಏನಾದರೂ ಹಾಸಿ

ಕೊಡುತ್ತಿದ್ದೆ ಗಾಡಿಗೆ ಇನ್ನೂ ಬಹಳ ಸಮಯವಿತ್ತು ”

ಸುರೇಶ ಉತ್ತರವೀಯಲಿಲ್ಲ ವಿಗಲಿತ ಸ್ನೇಹದಿಂದ ಅವಳ ಮೋರೆ ನೋಡುತ್ತ, ಅವಳ ಬಲಗೈ ತೆಗೆದುಕೊಂಡು ತನ್ನ ಹಣೆಯಮ್ಯೇಲಿಟ್ಟು ಉಸಿರ್ಗರೆದ ಅಚಲೆ ಗಾಬರಿಯಾದಳು “ ಎಷ್ಟು ಭಯಂಕರ ಬಿಸಿ ! ಜ್ವರ ಬಂದುಬಿಟ್ಟಿತೆ ? ” ಎಂದಳು

“ ಹೂಂ ಈ ಜ್ವರ ಸಹಜವಾಗಿ ಆರದೆಂದು ನನಗೆನಿಸುತ್ತದೆ—”

ಅಚಲೆ ಮೆಲ್ಲಗೆ ಕೈತೆಗೆದುಕೊಂಡಳು ಅವನ ಮಾತಿಗುತ್ತರ ಒಂದು ನಿಟ್ಟುಸಿರು ಮಾತ್ರ ತನ್ನ ಇದ್ದಬಿದ್ದ ಸಹನಶಕ್ತಿಯನ್ನು ಒಟ್ಟುಗೂಡಿಸಿ ಗಾಡಿಯ ಹೊತ್ತಿನ ವರೆಗೆ ಕಾದಿದ್ದರಾಯಿತೆಂದು ಧೈರ್ಯಮಾಡಿಕೊಂಡಿದ್ದಳು. ಆದರೆ ಅಕಲ್ಪಿತವಾಗಿ ವಿಪತ್ತಿನ ಮೋಡಕವಿಯಿತು, ಅವಳ ಆಶಾಕಿರಣದ ಕ್ಷೀಣರೇಖೆ ನಿಮಿಷದಲ್ಲಿಯೇ ಲುಪ್ತವಾಯಿತು, ಅವಳಿಗೆ ಸಾವಿನ ಹೊರತು ಜಗತ್ತಿನಲ್ಲಿ ಬೇಕಾದುದಿನ್ನೇನೂ ಉಳಿಯಲಿಲ್ಲ.

ಆ ಸ್ಥಿತಿಯಲ್ಲಿ ಅವನನ್ನು ಏಕಾಕಿಯಾಗಿ ಬಿಟ್ಟುಹೋಗುವ ಕಲ್ಪನೆಯೂ ಅವಳಿಗೆ ಬರಲಿಲ್ಲ ಈ ಜಡ್ಡಿನವನನ್ನು ಕಟ್ಟಿಕೊಂಡು ಅಪರಿಚಿತ ಸ್ಥಳದಲ್ಲಿ ಏನು ಮಾಡಬೇಕು ? ಯಾರನ್ನು ಏನು ನೆರವು ಕೇಳಬೇಕು ? ಏನೆಂದು ನಮ್ಮ ಪರಿಚಯ ಹೇಳಿ ಜನರ ಸಹಾನುಭೂತಿ ಪಡೆಯಬೇಕು ? ಅಹರ್ನಿಶಿ ಯಾವ ನಟನೆ ಮಾಡಬೇಕು ? ಇದೇ ಚಿಂತೆ ಅವಳ ತಲೆಯೊಳಗೆ ಗಿಮಿಗಿಮಿಸತೊಡಗಿತು ಎಲ್ಲಿಯಾದರೂ ಓಡಿಹೋಗಲೆ ? ಬಡಬಡಕೊಂಡು ಅಳಲೆ ? ತಲೆಯೊಡೆದುಕೊಂಡು ಸಾಯಲೆ ? ಏನು ಮಾಡಲಿ ?

## ೩೦

ಅಂದು ಇವರನ್ನು ಕಳಿಸಿ ನಿಲ್ದಾಣದಿಂದ ಮನೆಗೆ ಹೋಗುವಾಗ ತೋಯಿಸಿಕೊಂಡುದೇ ನೆವವಾಗಿ ಕೇದಾರಬಾಬು ಸಂದುಸೂಲೆ-ನೆಗಡಿಗಳಿಂದ ಎಂಟೊಂಬತ್ತು ದಿನ ಮಲಗಿದರು ಮಗಳು-ಅಳಿಯಂದಿರ ಕುಶಲ ತಿಳಿಯದೆ ಅವರಿಗೆ ಬಹಳ ಚಡಪಡಿಕೆಯಾಯಿತು ಜಬ್ಬಲಪುರಕ್ಕೆ ತಮ್ಮ ಗೆಳೆಯನಿಗೆ ಪೋಸ್ಟ್‌ಕಾರ್ಡ್ ಬರೆಯುವುದರ ಹೊರತು ಮತ್ತೇನೂ ಮಾಡಲಾರದಾಗಿದ್ದರು. ತಮ್ಮಲ್ಲಿ ಯಾರೂ ಬರಲಿಲ್ಲವೆಂದೂ ಯಾವ ಸಮಾಚಾರವೂ ಗೊತ್ತಿಲ್ಲವೆಂದೂ ಅವರಿಂದ ಉತ್ತರ ಬಂದಿತ್ತು ಆ ಎರಡು ಸಾಲುಗಳನ್ನೇ ತಿರುತಿರುಗಿ ಓದುತ್ತ, ಶೂನ್ಯದೃಷ್ಟಿಯಿಂದ ಬಯಲು ನೋಡುತ್ತ

ಕನ್ನಡಕವನ್ನು ಗಸಗಸ ಒರಸಿದರು ಅವರೆಲ್ಲಿ ಹೋದರು? ಏನಾದರು? ಯಾರನ್ನು ಕೇಳಬೇಕು? ಯಾರಿಗೆ ಕಾಗದ ಹಾಕಬೇಕು?— ಎಷ್ಟು ಯೋಚಿಸಿದರೂ ಏನೂ ಹೊಳೆಯದಾಯಿತು ಅವರಿಗೆ ಹೊತ್ತಿನಲ್ಲಿ ನೆರವಾಗುತ್ತಿದ್ದ ಸುರೇಶನೂ ಇಲ್ಲ, ಅವನೂ ಜೊತೆಗೆ ಹೋಗಿದ್ದಾನೆ

ಆಳು ಇನ್ನೊಂದು ಕಾಗದ ತಂದು ಮುಂದಿಟ್ಟ ಕೇದಾರಬಾಬು ನಡುಗುವ ಕೈಯಿಂದ ಕನ್ನಡಕ ಮೂಗಿನ ಮೇಲಿಟ್ಟುಕೊಂಡು ನೋಡಿದರು ಪತ್ರ ಮಗಳ ಹೆಸರಲ್ಲಿ ಬಂದಿತ್ತು ಬರೆಹ ಹೆಣ್ಮಕ್ಕಳದು ಯಾರದು, ಎಲ್ಲಿಯದು ತಿಳಿದುಕೊಳ್ಳುವ ಕುತೂಹಲದಲ್ಲಿ ಅವರಿಗೆ ಮಂದಿಯ ಪತ್ರ ಒಡೆಯಬಾರದೆಂಬ ವಿವೇಕವೇ ಉಳಿಯಲಿಲ್ಲ ಚರಕ್ಕನೆ ಹರಿದು ತೆಗೆದು ನೋಡಿದರು 'ನಿನ್ನ ಮೃಣಾಲ' ಎಂದು ಅಂಕಿತವಿತ್ತು ಆ ಪತ್ರವನ್ನು ಮತ್ತೆ ಮತ್ತೆ ಓದುತ್ತ ಶೂನ್ಯದೃಷ್ಟಿಯಿಂದ ಬಯಲು ನೋಡುತ್ತ ಪುನಃ ಕನ್ನಡಕ ಒರಸತೊಡಗಿದರು ಅವರ ಮನಸಿನೊಳಗೆ ಏನು ನಡೆದಿತ್ತೋ ಪರಮೇಶ್ವರನೇ ಬಲ್ಲ ಎಷ್ಟೋ ಹೊತ್ತು ಒರಸಿ ಕನ್ನಡಕವನ್ನು ಯಥಾ ಸ್ಥಾನದಲ್ಲಿರಿಸಿ ಮತ್ತೆ ಸಾದ್ಯಂತವಾಗಿ ಪತ್ರ ಓದತೊಡಗಿದರು ಸ್ತ್ರೀಯ ರಲ್ಲಿರಬೇಕಾದ ಸಹಿಷ್ಣುತೆ, ಕ್ಷಮೆ, ಧೈರ್ಯ ಮೊದಲಾದವುಗಳನ್ನು ಕುರಿತು ಬಹುಪ್ರಕಾರವಾಗಿ ಉಪದೇಶಿಸಿ ಮೃಣಾಲ ಕೊನೆಗೆ ಹೀಗೆ ಬರೆದಿದಳು

'ಹಿರಿಯಣ್ಣ ನಿನ್ನ ವಿಷಯ ಏನೂ ಹೇಳಲೊಲ್ಲ, ಕೇಳಿದರೆ ಭಯಂಕರ ಗಂಭೀರನಾಗಿಬಿಡುತ್ತಾನೆ, ನಿಜ ಆದರೂ ನಾನೂ ಹೆಂಗುಸು, ನನಗೆಲ್ಲವೂ ತಿಳಿಯುತ್ತದೆ! ಇರಲಿ ಬಿಡು ಅತ್ತಿಗೆ, ಜಗಳ ತಂಟೆ ಯಾರು ಮಾಡುವು ದಿಲ್ಲ? ನಿನ್ನ ಪತಿ ಈಗಿನ ದೈಹಿಕ ಮಾನಸಿಕ ಸ್ಥಿತಿಯಲ್ಲಿ ತಿಳಿಯದೆ ಸಿಟ್ಟಿಗೆದ್ದಿದ್ದರೂ ಎದ್ದಿರಬಹುದು ಅಧೀರನಾಗಿ ಅನ್ಯಾಯ ಮಾಡಿ ಹೊರಟು ಬಂದಿರಲೂ ಬಹುದು ಆದರೆ ನೀನು ಮಾತ್ರ ಅವನು ಹೋಗುವೆ ನೆಂದ ಕೂಡಲೆ, 'ಒಳ್ಳೆಯದು, ಹಾಗೇ ಆಗಲಿ, ಹೋಗಿರಿ ನಿಮ್ಮ ವನ ವಾಸಕ್ಕೆ' ಎಂದನುಮತಿಸುವಷ್ಟು ಹುಚ್ಚಿಯಲ್ಲ ತಾನೆ! ನನಗಿದೇ ಯೋಚನೆ ಇವಳು ಹೇಗೆ ಜೀವ ಗಟ್ಟಿಮಾಡಿ ಸಾಯಲಾದ ಪತಿಯನ್ನು ಈ ವನವಲ್ಲಿ ಇಷ್ಟು ಸಹಜವಾಗಿ ಬಿಟ್ಟುಕೊಟ್ಟಳು, ಬಿಟ್ಟು ಏಳೆಂಟು ದಿನ, ಅದೇಕೆ ಏಳೆಂಟು ವರುಷ ತವರುಮನೆಯಲ್ಲಿ ಹೇಗೆ ನಿಶ್ಚಿಂತೆಯಿಂದ ಕೂತುಬಿಟ್ಟಳು ಎಂದು. ನಿಜವಾಗಿ ಹೇಳುತ್ತೇನೆ. ಅಂದು ಅವನು ಗಂಟು

ತಾದಡಿ ತೆಗೆದುಕೊಂಡು ಮನೆಗೆ ಬಂದಾಗ ನನಗವನ ಗುರುತೇ ಸಿಕ್ಕಲಿಲ್ಲ. ನೀವೇಕೆ ಜಗಳಾಡಿದಿರಿ, ಎಂದು ಜಗಳಾಡಿದಿರಿ, ಪಶ್ಚಿಮಕ್ಕೆ ಹೋಗುವುದು ಬಿಟ್ಟು ಅವನು ಊರಿಗೇಕೆ ಬಂದ ಯಾವುದೂ ನನಗೆ ತಿಳಿಯದು, ತಿಳಿಯುವ ಇಚ್ಛೆಯೂ ಇಲ್ಲ ಆದರೆ, ನನ್ನ ಕೊರಳಾಣೆ, ಈ ಪತ್ರ ಕಂಡ ಕೂಡಲೆ ಹೊರಟು ಬಾ ಗೊತ್ತೇ ಇದೆ, ಅತ್ತೆಯನ್ನು ಬಿಟ್ಟು ಸರಿದಾಡ ಲಿಕ್ಕೂ ನನಗೆ ಅವಕಾಶವಿಲ್ಲ ಆದರೂ ಹಿರಿಯಣ್ಣ ಇಷ್ಟು ಅಸ್ವಸ್ಥನಾಗ ದಿದ್ದರೆ ನಾನೇ ಬಂದು ನಿನ್ನ ಕಾಲು ಹಿಡಕೊಂಡು ನಿನ್ನನ್ನು ಕರೆದುಕೊಂಡು ಬರುತ್ತಿದ್ದೆ ಒಮ್ಮೆ ಬಂದು ಕಣ್ಣಾರೆ ನೋಡು ಅವನನ್ನು, ಎಂದರೆ ಇಲ್ಲದ ಅಭಿಮಾನದಿಂದ ಎಂತಹ ಅನ್ಯಾಯ ಮಾಡಿಬಿಟ್ಟದ್ದೀ ಎಂದು ಗೊತ್ತಾಗು ವುದು ಈ ಮನೆಯೂ ನಿನ್ನದು, ನಾನೂ ನಿನ್ನವಳು ಬರಲಿಕ್ಕೆ ಎಷ್ಟೂ ಅನ್ಯಥಾ ಭಾವಿಸಲಾಗದು ನಿನ್ನ ಹಾದಿ ಕಾಯುತ್ತಿದ್ದೇನೆ ಶ್ರೀಚರಣ ದಲ್ಲಿ ಶತಕೋಟಿ ಪ್ರಣಾಮ— '

'ಇನ್ನೊಂದು ಮಾತು ನಾನು ಪತ್ರ ಬರೆದದ್ದು ಅಣ್ಣನಿಗೆ ಗೊತ್ತಾಗ ಬಾರದು, ಕದ್ದುಮುಚ್ಚಿ ವ್ಯವಹಾರ '

ಪತ್ರ ಮುಗಿಸಿದ ಬಳಿಕ ಒಂದು ವಾಕ್ಯ 'ಪುನಶ್ಚ' ಬರೆದಿದ್ದಳು— 'ಪತಿ ಇಲ್ಲದಾಗ ನೀನು ಸುರೇಶಬಾಬುಗಳ ಮನೆಯೊಳಗಿರಲಿಕ್ಕಿಲ್ಲವೆಂದು ತಂಪೆಯುವರ ವಿಳಾಸಕ್ಕೆ ಬರೆದಿದ್ದೇನೆ ಇದು ನಿನಗೆ ಮುಟ್ಟಲು ತಡವಾಗ ಲಿಕ್ಕಿಲ್ಲವೆಂದು ನಂಬುವೆ '

ಪತ್ರ ಕೇದಾರಬಾಬುಗಳ ಕೈಯಿಂದ ಜಾರಿತು ಅವರು ಮತ್ತೆ ಶೂನ್ಯ ವನ್ನು ನೋಡುತ್ತ ಕನ್ನಡಕ ಒರಸತೊಡಗಿದರು ಮಹಿಮ ಜಬ್ಬಲಪುರಕ್ಕೆ ಹೋಗದೆ ಊರಿಗೆ ಹೋಗಿದ್ದಾನೆ! ಅಚಲೆ ಅಲ್ಲಿಲ್ಲ! ಹಾಗಾದರೆಲ್ಲಿ? ಅವ ಳಿಗೇನಾಯಿತು? ಅವರ ಅತಿಥಿಯಾಗಿ ಹೋಗಿದ್ದ ಸುರೇಶನಾದರೂ ಎಲ್ಲಿ? ಅವನು ಖಂಡಿತ ತಿರುಗಿ ಬಂದಿರಲಾರ ಬಂದಿದ್ದರೆ ಮನೆಗೊಮ್ಮೆಯಾದರೂ ಬರುತ್ತಿದ್ದ

ಕೇದಾರಬಾಬುಗಳ ಹೃದಯಕ್ಕೆ ಸಂಶಯಶೂಲ ತಾಗಿತು ಅದರಿಂದ ಅವರಿಗೆ ನೆಟ್ಟಗೆ ಕುಳ್ಳಿರುವುದು ಅಸಾಧ್ಯವಾಯಿತು ಬೆತ್ತದ ಕುರ್ಚಿಯ ಬೆನ್ನಿಗೊರಗಿ ಕಣ್ಮುಚ್ಚಿಕೊಂಡರು

ಮಧ್ಯಾಹ್ನ ದಾಸಿ ಸುರೇಶನ ಮನೆಯಿಂದ ಸುದ್ದಿ ತಂದಳು. ಅತ್ತೆಮ್ಮ

ನಿಗೂ ಏನೂ ತಿಳಿದಿಲ್ಲ, ಸುರೇಶನ ಕಾಗದವಿಲ್ಲದ್ದಕ್ಕೆ ಅವರೂ ಚಡಪಡಿ ಸುತ್ತಿದ್ದಾರೆ

ರಾತ್ರಿ ಕೇದಾರಬಾಬು ಮತ್ತೆ ಮೃಣಾಲಳ ಪತ್ರ ತೆಗೆದುಕೊಂಡು ಅಕ್ಷರಕ್ಷರಕ್ಕೂ ವಿಚಾರಮಾಡತೊಡಗಿದರು ತಮಗೆ ನಿಲ್ಲಲು ಸ್ಥಾನ ವಿದೆಯೆ? ಇಲ್ಲದಿದ್ದರೆ ತಾವು ಎಲ್ಲಿ ಹೇಗೆ ಮುಖ ಮರೆಸಬೇಕು? ಅಜ್ಜ ಮುತ್ತಜ್ಜಂದಿರ ಕಾಲದಿಂದಲೂ ಕಲಕತ್ತೆಯಲ್ಲಿಯೇ ನೆಲಸಿದ್ದವರು ಕಲಕತ್ತೆಯ ಹೊರತೆಲ್ಲಿಯಾದರೂ ಭದ್ರಜನ ಬಾಳಬಹುದೆಂದು ಅವರು ಭಾವಿಸಲಾರರು ಕೂಡ ಆಜನ್ಮ ಪರಿಚಿತ ಸ್ಥಳವನ್ನು ಬಿಟ್ಟು ಎಲ್ಲಿಯೋ ಅಜ್ಞಾತವಾಸದಲ್ಲಿ ಬದುಕಬೇಕಾಗಿ ಬಂದರೆ, ಆ ದುಃಸಹ ದುರ್ಭರ ದಿನ ಗಳನ್ನು ಹೇಗೆ ಕಳೆದೇನೆಂಬುದು ಅವರಿಗೆ ಬಗೆಹರಿಯದ ಯೋಚನೆ ಮಗ ಳಾಗಿಯೂ ಆ ದುರ್ಭಾಗಿನಿ ತನ್ನ ರುಗ್ಣ-ವೃದ್ಧ ತಂದೆಯ ತಲೆಯ ಮೇಲೆ ಈ ಶಿಕ್ಷೆಯನ್ನು ಹೇರಿಬಿಟ್ಟಿದ್ದಾಳೆ— ಅವಳನ್ನು ಏನೆಂದು ಶಪಿಸಲೆಂಬುದೂ ಅವರಿಗೆ ತಿಳಿಯದಾಯಿತು

ಇಡೀ ರಾತ್ರಿ ಒಮ್ಮೆಯೂ ಕಣ್ಣಿಗೆ ಕಣ್ಣು ಹತ್ತಲಿಲ್ಲ ಬೆಳಗಾಗುವುದ ರೊಳಗೆ ಅವರಿಗೆ ಅಮ್ಲಪಿತ್ತ ವಿಕಾರವಾಯಿತು ಆದರೆ ಈ ಜಗತ್ತಿನಲ್ಲಿ ತನ್ನವರೆಂಬವರು ಯಾರೂ ಇಲ್ಲವೆಂದೆನಿಸುತ್ತಲೇ, ಹೆಣದಂತೆ ಹಾಸಿಗೆಯಲ್ಲಿ ಬಿದ್ದುಕೊಂಡಿರುವುದೂ ಬೇಡವೆನಿಸಿತು ಈ ಭಯಂಕರ ವೇದನೆಯನ್ನು ಹೃದಯದೊಳಗೆ ಬಚ್ಚಿಟ್ಟು ದಿನದಂತೆ ಎದ್ದರು ಆಳನ್ನು ಕರೆದು ಗಾಡಿ ತರಲಿಕ್ಕೆ, ಬೇಗನೆ ಬಟ್ಟೆಬರೆ ಕಟ್ಟಲಿಕ್ಕೆ ಹೇಳಿದರು

೩೧

ಶೀತಕಾಲದ ಸೂರ್ಯ ಅಪರಾಹ್ನದಲ್ಲಿಯೇ ಮ್ಲಾನನಾಗುತ್ತಲಿದ್ದ. ಅವನ ನಸುಬಿಸಿ ಕಿರಣಗಳಿಂದ ಶೋಣನದಿಯ ಪಕ್ಕದ ವಿಶಾಲವಾದ ಮರುಭೂಮಿ ರಣಗುಡುತ್ತಿತ್ತು ಒಂದು ಬಂಗಲೆಯ ಮೊಗಸಾಲೆಯಲ್ಲಿ ಕಟಾಂಜನ ಹಿಡಿದುಕೊಂಡು ಅಚಲೆ ಆಕಡೆ ನೋಡುತ್ತ ನಿಂತಿದ್ದಳು. ಅವಳ ಜೀವನಕ್ಕೂ ಆ ದಗ್ಧ ಮರುಸ್ಥಳಕ್ಕೂ ಏನಾದರೂ ಘನಿಷ್ಠ ಸಂಬಂಧ ವಿದ್ದಿತೋ ಏನೋ, ಅದು ಬೇರೆ ಮಾತು ಆದರೆ ಆ ವಿವೆಹಳಚದ ನೋಟವನ್ನು ಕ್ಷಣಮಾತ್ರ ನೋಡಿದರೆ ಸಾಕು— ಹೀಗೆ ದಿಟ್ಟಿಸಿ ನೋಡು ತ್ತಿದ್ದರೂ ಅವಳಿಗೇನೂ ಕಾಣಿಸುತ್ತಿಲ್ಲ, ಇಡೀ ಪ್ರಪಂಚವೇ ಒಂದು

ವಿಚಿತ್ರವಿರಾಟ್ ಛಾಯಾಚಿತ್ರದಂತೆ ತೋರುತ್ತಿದೆ ಎಂದು ತಿಳಿಯು ವಂತಿತ್ತು.

"ಅಕ್ಕಾ!"

ಅಚಲೆ ಬೆಚ್ಚಿಬಿದ್ದು ಹೊರಳಿ ನೋಡಿದಳು ರಾಕ್ಷಸಿ. ಹತ್ತಿರ ಬಂದು ಅಚಲೆಯ ಕಳೆಗುಂದಿದ ಉದ್ಭ್ರಾಂತ ಮುಖವನ್ನು ನೋಡುತ್ತ ಎಂದಳು "ಅಕ್ಕಾ, ನಮಗೆಲ್ಲ ಸುರೇಶಬಾಬು ನೆಟ್ಟಗಾಗಿದ್ದಾರೆಂದು ತೋರುತ್ತದೆ ಎಳ್ಳಷ್ಟೂ ಭಯವಿಲ್ಲವೆಂದು ಡಾಕ್ಟರೂ ಹೇಳಿದ್ದಾರೆ. ಆದರೂ ಹಗಲೂ ರಾತ್ರಿ ನಿನ್ನ ಚಿಂತೆ ತಪ್ಪಲೊಲ್ಲದು, ಮೋರೆಯ ಮೇಲೆ ನಗೆ ಮೂಡಲೊಲ್ಲದು, ನಿನ್ನದು ಬಲು ಹೆಚ್ಚಿನದಾಯಿತು ಬಿಡು! ನನಗೂ ಗಂಡ ಇದ್ದಾರೆ, ಅವರ ಜಡ್ಡುಜಾಪತ್ತಿನಲ್ಲಿ ನಾನೂ ಚಿಂತಿಸುತ್ತಿದ್ದೆ. ಆದರೆ ದೇವರನ್ನು ಸ್ಮರಿಸಿ ಹೇಳುತ್ತೇನೆ, ನಿನ್ನದಕ್ಕೂ ನನ್ನದಕ್ಕೂ ತುಲನೆಯೇ ಇಲ್ಲ"

ಅಚಲೆ ಮುಖ ತಿರುಗಿಸಿ ಉಸಿರ್ಗರೆದಳು, ಮಾತನಾಡಲಿಲ್ಲ ರಾಕ್ಷಸಿ ಸಿಟ್ಟಿನಿಂದ ನುಡಿದಳು "ಇಶ್! ಪೋ ಎಂದು ಬರೀ ಉಸಿರ್ಗರೆವ ರಾಯಿತೆ?" ಎಂದು ತುಸ ತಡೆದಳು ಅಚಲೆ ಏನೂ ಮಾತನಾಡದಿರಲು, ಅವಳ ಕೈಯನ್ನು ಹಿಡಿದು ಅತ್ಯಂತ ಕರುಣಾಸ್ವರದಿಂದ ಕೇಳಿದಳು: "ಒಳ್ಳೆಯದು ಸುರಮಕ್ಕಾ, ನಿಜವಾಗಿ ಹೇಳು, ನಮ್ಮನೆಯೊಳಗೆ ನಿನಗೆ ಕೊಂಚವೂ ಸೊಗಸಲೊಲ್ಲದು, ಅಲ್ಲವೆ? ಬಹಳ ತೊಂದರೆ ಕಷ್ಟ ಆಗುತ್ತಿರಬೇಕು, ಹೌದೇನು?"

ಅಚಲೆ ನದಿಯ ಕಡೆಗೇ ನೋಡುತ್ತ ಉತ್ತರವಿತ್ತಳು. "ನಿಮ್ಮ ಮಾವ ನಮಗೆ ಮಾಡಿದ ಉಪಕಾರ ಈ ಜನ್ಮದಲ್ಲಿಯೇ ಮರೆತೇನೆ?"

ಆ ಹುಡುಗಿ ನಕ್ಕಳು. "ಮರೆಯುವುದಕ್ಕೆಂದೇ ನಾನು ನಿನ್ನ ಮುಖಸ್ತುತಿ ಮಾಡುತ್ತ ತಿರುಗುತ್ತೇನೇನೋ!" ಎಂದು ಅವಳು ಕೃತ್ರಿಮ ಹೀಯಾಳಿಕೆಯ ದನಿಯಿಂದ ನುಡಿದಳು "ಅದಕ್ಕೇ ತಂದೆ ಅಷ್ಟು ಕೂಗಿದರೂ ಓಗೊಡಲಿಲ್ಲವಲ್ಲವೆ? ಮುದುಕ ಯಾವಾಗ ನೋಡಿದರೂ—"

ಅಚಲೆ ಅತ್ಯಂತ ವಿಸ್ಮಯದಿಂದ ಹೇಳಿದಳು "ಇಲ್ಲ, ಅದು ಅಸಂಭವ—"

"ಅಸಂಭವವೇ? ನಾ ಪ್ರತ್ಯಕ್ಷ ಇಲ್ಲದಿದ್ದರಲ್ಲವೇ ಹೀಗೆನ್ನುವುದು!

' ಸುರಮ್ಮಾ, ಅಮ್ಮಾ, ಸುರಮ್ಮಾ ' ಎಂದು ನಾಲ್ಕು ಸಲ ತಂದೆ ಕೂಗಿದರು ನಿನ್ನೆ— ದೇವರ ಮನೆಗೂ ಕೇಳಿಸಿತು ನಾ ಪೂಜೆಗೆ ಅಣಿಮಾಡುತ್ತಿದ್ದೆ. ಇದ್ದುದಿದ್ದ ಹಾಗೆ ಬಿಟ್ಟು ಓಡಿಬಂದೆ. ಅವರು ಪಾವಟಿಗೆ ಇಳಿಯುತ್ತಿದ್ದರು ಸತ್ಯವಾಗಿ ಅಕ್ಕಾ, ಚೇಷ್ಟೆಯಲ್ಲ "

ಅವರು ಕೂಗಿದುದು ತನ್ನ ವಿಮನಸ್ಕ ಚಿತ್ತದ ದ್ವಾರವನ್ನು ತೆರೆದು ಒಳಗೆ ಬಂದಿರಲಿಕ್ಕಿಲ್ಲವೆಂದು ಅಚಲೆ ತಿಳಿದುಕೊಂಡಳು. ನಾಚಿಕೆಯಿಂದ ಚಂಚಲಳಾಗಿ ಹೇಳಿದಳು " ನಾ ಕೋಣೆಯೊಳಗೆ— "

" ಎಲ್ಲಿ ಕೋಣೆಯೊಳಗೆ ? ' ಕೋಣೆಯವರು ' ಆಗ ತಿರುಗಾಡಲು ಹೋಗಿದ್ದರು ಅಂಗಳದಿಂದ ನನಗೆ ಸ್ಪಷ್ಟ ಕಾಣಿಸಿದೆ—ಹೀಗೆಯೇ ಚೇಲಿಂಗ್ ಹಿಡಿದುಕೊಂಡು ನಿಂತಿದ್ದೀ" ಎಂದು ನಗುತ್ತ ರಾಕ್ಷಸಿ ಮತ್ತೆಂದಳು : " ನಿನ್ನೊಳಗೆ ನೀನೇ ಇದ್ದಿರಲಿಕ್ಕಿಲ್ಲ, ಮುದುಕತದುಕರ ಕರೆ ಕೇಳಿಸಲಿಕ್ಕೆ ! ಅಪೇನು ಯೋಚನೆ ತಿಳಿಸಿದರೆ— "

ಅಚಲೆ ಈ ವ್ಯಂಗ್ಯೋಕ್ತಿಗೆ ಉತ್ತರ ಕೊಡಲು ಯತ್ನಿಸದೆ ನದಿಯ ಕಡೆ ನೋಡತೊಡಗಿದಳು

ಇಲ್ಲಿಯೇ ಒಂದು ಮಾತು ಹೇಳುವುದಗತ್ಯ ರಾಕ್ಷಸಿಯ ಸ್ವಭಾವ ಅವಳ ಹೆಸರಿಗೆ ಅಣುಮಾತ್ರವೂ ಹೊಂದುವುದಿಲ್ಲ ಅವಳ ಹೆಸರು ರಾಕ್ಷಸಿಯೂ ಅಲ್ಲ, ವೀಣಾಪಾಣಿ ಆಕೆ ಹುಟ್ಟಿದಾಕ್ಷಣ ತಾಯಿ ತೀರಿ ಕೊಂಡುದಕ್ಕೆ ಸಿಟ್ಟಿನಿಂದ ದಾಸಿ ಹಾಗೆ ಕರೆದಳು. ಮುಂದೆ ಅದೇ ಜನ-ಜನಿತವಾಯಿತು.

ಅಚಲೆ ಒಮ್ಮೆಲೆ ಮುಖ ತಿರುಗಿಸಿ ನೀರವಳಾದುದಕ್ಕೆ ವೀಣಾಪಾಣಿಗೆ ಕೆಟ್ಟೆನಿಸಿತು " ಸರಿ ಸುರಮಕ್ಕಾ, ನಿನಗೊಂದಿಷ್ಟೂ ಚೇಷ್ಟೆ ಮಾಡಬಾರದು ಬಿಡು ತಂದೆಯಲ್ಲಿ ನಿನಗೆಷ್ಟು ಭಕ್ತಿ ಎಂಬುದನ್ನು ನಾನರಿಯೆನೇ ? ಅವರಿಂದ ನನಗೆಲ್ಲ ತಿಳಿದಿದೆ ಅವರು ಮುಂಜಾನೆ ತಿರುಗಾಡಿಕೊಂಡು ಬರುವಾಗ ನೀನೀ ಅಪರಿಚಿತ ಸ್ಥಳದಲ್ಲಿ ಅಳುತ್ತಿದ್ದೆಯಂತೆ, ಅವರು ನಿನ್ನೊಡನೆ ಧರ್ಮಶಾಲೆಗೆ ಹೋಗಿ ನಿನ್ನ ಗಂಡನನ್ನು ಕರೆದುಕೊಂಡು ಬಂದರಂತೆ. ಇದೆಲ್ಲ ದೇವರಾಟ ಅಕ್ಕಾ ಇಲ್ಲದಿದ್ದರೆ ನಿಮ್ಮ ಪಾದಧೂಳಿ ಈ ಮನೆಯಲ್ಲಿ ಬೀಳುವುದೆಂದು ಅಂದು ಗಾಡಿಯಲ್ಲಿ ಯಾರು ಬಗೆದಿದ್ದರು ? ಇರಲಿ ನನ್ನ ಪ್ರಶ್ನೆಗೆ ನೀ ಉತ್ತರವನ್ನೇ ಕೊಡಲಿಲ್ಲ— ನಮ್ಮನೆಯೊಳಗೆ ನಿನಗೆ ಸ್ವಲ್ಪವೂ

ಸರಿಹೋಗಲೊಲ್ಲದೆಂದು ನಗಗೆಸುತ್ತದೆ, ಏಕೆ? ಇಲ್ಲಿ ನಿಮಗೆ ಏನು ತೊಂದರೆ ಆತಂಕ ಆಗುತ್ತಿದೆ?'' ಎಂದು ಉತ್ತರಕ್ಕಾಗಿ ತಡೆದಳು ಆದರೆ ವ್ಯರ್ಥವಾಗಿ ಅಪೇಕ್ಷಿಸುತ್ತಿದ್ದೇನೆಂದು ಅವಳಿಗೆನಿಸಿತು ಆಗವಳು ಅಚಲೆಯ ಮುಖವನ್ನು ಬಲವಂತದಿಂದ ತನ್ನ ಕಡೆ ತಿರುಗಿಸಿಕೊಂಡಳು ಅವಳೆರಡೂ ಕಣ್ಣುಗಳಿಂದ ನೀರು ನಿರರ್ಗಳವಾಗಿ ಹರಿಯುತ್ತಿತ್ತು ಕಂಡು ವೀಣಾ ಪಾಣಿ ಸ್ತಬ್ಧಳಾಗಿ ನಿಂತುಬಿಟ್ಟಳು ಅಚಲೆ ಕಣ್ಣೊರಸಿಕೊಂಡು ಶೂನ್ಯ ದೃಷ್ಟಿಯನ್ನು ಬೇರೆ ಕಡೆ ಹೊರಳಿಸಿದಳು

ಮರುದಿನ ಇಳಿಹೊತ್ತಿನಲ್ಲಿ ವೀಣಾಪಾಣಿ ಒಂದು ಕತೆಯನ್ನು ಅಚಲೆಗೆ ಓದಿಹೇಳುತ್ತಿದ್ದಳು ಅಚಲೆ ಬೆತ್ತದ ಕುರ್ಚಿಯಲ್ಲಿ ಅರೆಮಲಗಿ ದಂತೆ ಕುಳಿತಿದ್ದಳು ಒಂದಿಷ್ಟು ಕೇಳುತ್ತಿದ್ದಳು, ಒಂದಿಷ್ಟು ಕೇಳುತ್ತಿದ್ದಿಲ್ಲ ಆಗ ವೀಣಾಪಾಣಿಯ ಮಾವ ರಾಮಚರಣ ಲಾಹಿರಿಯವರು ಪಾವಟಿಗೆ ಏರುತ್ತಿರುವಾಗಲೇ ''ಅಮ್ಮಾ ರಾಕ್ಷಸೀ'' ಎಂದು ಕೂಗುತ್ತ ಬಂದರು ಇಬ್ಬರೂ ಶಶವ್ಯಸ್ತರಾಗಿ ಎದ್ದುನಿಂತರು ವೀಣಾಪಾಣಿ ಒಂದು ಕುರ್ಚಿ ಯನ್ನು ಸರಿಸಿ ''ಏನಪ್ಪಾ?'' ಎಂದಳು

ಲಾಹಿರಿಯವರು ಕುಳಿತುಕೂಳ್ಳುತ್ತ ಸ್ನೇಹಪೂರ್ಣ ದೃಷ್ಟಿಯಿಂದ ಅಚಲೆಯನ್ನು ನೋಡುತ್ತ ಹೇಳಿದರು ''ಒಂದು ವಿಷಯ—ಭಟ್ಟಾ ಚಾರ್ಯರು ನಿಮ್ಮ ಗಂಡಹೆಂಡಿರ ಹೆಸರಿನಿಂದ ನಾರಾಯಣನಿಗೆ ತುಳಸಿ ಏರಿಸುತ್ತಿದ್ದಾರೆ, ಅದು ನಾಳೆಗೆ ಮುಗಿಯುವುದು ಆದ್ದರಿಂದ ನೀ ನಾಳೆ ಒಪ್ಪೊತ್ತು ಉಪವಾಸ ಮಾಡಬೇಕಮ್ಮ ಅವರು ನಾರಾಯಣನನ್ನು ಮನೆಯಲ್ಲಿಯೇ ತಂದು ಕೆಲಸ ನೆರವೇರಿಸುವರು, ನೀ ಮತ್ತೆಲ್ಲಿಗೂ ಹೋಗಬೇಕಾಗಿಲ್ಲ''

ಕೇಳಿ ಅಚಲೆಯ ಮೋರೆ ಕಪ್ಪಿಟ್ಟಿತು ಮಬ್ಬುಗತ್ತಲಲ್ಲಿ ಮುದುಕ ನಿಗೆ ಕಾಣಿಸದಿದ್ದರೂ ವೀಣಾಪಾಣಿಗೆ ಕಂಡಿತು ಅವಳು ಹಿಂದೂ ಹುಡುಗಿ, ಹುಟ್ಟಿದಾರಭ್ಯ ಅದೇ ಸಂಸ್ಕಾರದಲ್ಲಿ ಬೆಳೆದವಳು ರೋಗಪೀಡಿತ ಪತಿಯ ಕಲ್ಯಾಣಕ್ಕಾಗಿ ಇದೆಷ್ಟು ಉತ್ಸಾಹದ ಆನಂದದ ವಿಷಯ! ಅಚಲೆಯ ಮುಖದಲ್ಲಾದ ಪರಿವರ್ತನೆಯಿಂದ ಅವಳು ಅತ್ಯಾಶ್ಚರ್ಯಗೊಂಡಳು ಆದರೂ ಗೆಳತಿಗೋಸುಗ ಕೇಳಿದಳು ''ಅಲ್ಲ ಅಪ್ಪಾ, ತುಳಸಿ ಏರಿಸುವುದು ಸುರೇಶ ಬಾಬುಗಳಿಗಾಗಿ, ಉಪವಾಸ ಮಾಡುವುದು ಅಕ್ಕ ಏಕೆ?''

ಮುದುಕ ನಕ್ಕು ನುಡಿದರು: "ಅವರು ಬೇರೆ, ನಿಮ್ಮಕ್ಕ ಬೇರೆ ಏನಮ್ಮಾ? ಸುರೇಶ ಬಾಬುವಿಗಂತೂ ಉಪವಾಸ ತಡೆಯುವುದಿಲ್ಲ; ಅಂತೆಯೇ ಸುರಮಕ್ಕ ಮಾಡಬೇಕಾಗಿದೆ ಶಾಸ್ತ್ರದಲ್ಲಿ ಹಾಗೆ ನಿಯಮ ವುಂಟಮ್ಮಾ "

ಅಚಲೆ ಇದಕ್ಕೂ ಹಾಂ ಇಲ್ಲ, ಹೂಂ ಇಲ್ಲ ಈಗ ಮಾತ್ರ ಅವಳ ನೀರವತೆ ಮುದುಕನ ಗಮನಕ್ಕೆ ಬಂದಿತು "ಇದಕ್ಕೆ ನಿನ್ನದೇನು ಅಡ್ಡಿ ಯುಂಟಮ್ಮಾ ಸುರಮಾ?" ಎಂದು ನುಡಿದು ಉತ್ತರಾಪೇಕ್ಷೆಯಿಂದ ಅವಳ ಮೋರೆ ನೋಡತೊಡಗಿದರು

ಅಚಲೆಗೆ ಇದಕ್ಕೂ ತಟ್ಟನೆ ಉತ್ತರ ಕೊಡಲಾಗಲಿಲ್ಲ ಸ್ವಲ್ಪ ಹೊತ್ತು ಸುಮ್ಮನಿದ್ದು ಮೆಲ್ಲಮೆಲ್ಲನೆ ಮೃದುಸ್ವರದಿಂದ ಹೇಳಿದಳು "ಅವರಿಗೆ ಹೇಳಿದರೆ ಅವರೂ ಮಾಡಿಯಾರು "

ಆ ಮೇಲೆ ಮೂವರೂ ಮೌನತಾಳಿದರು ಕೊನೆಗೆ ಲಾಹಿರಿ ಎದ್ದು ನಿಂತು "ಹಾಗಾದರೆ ಹಾಗೇ ಆಗಲಮ್ಮಾ" ಎಂದು ಹೊರಟುಹೋದರು ಉಳಿದಿಬ್ಬರೂ ಸಂಕೋಚದಿಂದ ಕುಗ್ಗಿ ಸುಮ್ಮನೆ ಕುಳಿತರು ಆಳು ದೀಪ ಹಚ್ಚಿ ಹೋದ ಆದರೆ ಆ ಸ್ವಾರಸ್ಯವಾದ ಕತೆಯನ್ನು ಮುಗಿಸಬೇಕೆಂಬ ಉತ್ಸಾಹ ಯಾರಿಗೂ ಇರಲಿಲ್ಲ ಹೀಗೆ ನಿಶ್ಶಬ್ದವಾಗಿ ಎಷ್ಟು ಹೊತ್ತು ಕಳೆಯಿತೋ ಕೊನೆಗೆ ಏನೋ ವಿಚಾರದಿಂದ ವೀಣಾಪಾಣಿ ತನ್ನ ಚೌಕಿ ಯನ್ನು ಅಚಲೆಯ ಪಕ್ಕಕ್ಕೆ ಎಳೆದುಕೊಂಡು ಅವಳ ತೊಡೆಯ ಮೇಲೆ ಕೈಯಿಟ್ಟು ಮೆತ್ತಗೆ ಮಾತನಾಡಿದಳು · "ಆ ದಡದ ಆ ಬಯಲಿನ ಕಡೆ ನೋಡುತ್ತಿದ್ದಾಗ ನನಗೇನಿಸಿತು ಬಲ್ಲೆಯಾ? ಅದರಂತೆಯೇ ನೀನು ಎನಿಸಿತು ಹೀಗೆಯೇ ಅಂಧಕಾರ ಮುಸುಕಿದ— ಇದೇನು! ಒಮ್ಮೆಲೆ ಮೈ ನವಿರೆದ್ದಿತೇಕೆ?"

ಅಚಲೆ ಕ್ಷಣಕಾಲ ನಿರ್ವಾಕ್ಯಾಗಿದ್ದು ಅಸ್ಫುಟಸ್ವರದಿಂದ, "ಬಹಳ ತಂಡಿಯಾದಂತಾಯಿತು" ಎಂದಳು

ವೀಣಾಪಾಣಿ ಎದ್ದು ಹೋಗಿ ಬೆಚ್ಚಗಿನ ಬಟ್ಟೆಯನ್ನು ತಂದು ತುಂಬ ಹೊದಿಸಿ, ಮತ್ತೆ ತನ್ನ ಸ್ಥಳದಲ್ಲಿ ಕುಳಿತಳು "ನಿನ್ನನ್ನು ಒಂದು ಮಾತು ಕೇಳಬೇಕೆಂದು ಬಹಳ ಇಚ್ಛೆಯಾಗುತ್ತಿದೆ. ಆದರೆ ಸಂಕೋಚ. ನಿನಗೆ ಸಿಟ್ಟು ಬರುವುದಿಲ್ಲವಾದರೆ—"

ಅಜ್ಞಾತ ಸಂಶಯದಿಂದ ಅಚಲೆಯ ಮೈ ನಡುಗಿತು ಹೆಚ್ಚು ಮಾತಾಡಿದರೆ ದನಿಯೂ ನಡುಗೀತೆಂದು "ಬರುವುದಿಲ್ಲ" ಎಂದಿಷ್ಟೇ ನುಡಿದಳು

ವೀಣಾಪಾಣಿ ಸಂಭ್ರಮದಿಂದ ಅವಳ ಕೈ ಬಡಿದು ಹೇಳಿದಳು: "ಇಂದೇನೋ ನೀ ಅಕ್ಕ, ನಾ ತಂಗಿ ಅಂದು ಗಾಡಿಯಲ್ಲಿ ಮಾತ್ರ ನಾ ನಿನಗೆ ಏನೂ ಇರಲಿಲ್ಲ ಆದರೂ ನಿನ್ನ ಪರಿಚಯವನ್ನು ಏಕೆ ಮರೆ ಮಾಡುತ್ತಿದ್ದೆ? ಗಂಡನಿಗೆ ಯಾರೋ ಎಂದೆ—ಜಡ್ಡಿನ ಗಂಡನ ಜೋಡಿಗೆ ಬಂದಿದ್ದಾರೆ ಎಂದೆ— ಆದರೆ ಆ ಟೆಕ್ಕು ಸಫಲವಾಗಲಿಲ್ಲ ಅವರು ನಿನಗೆ ಯಾರೆಂದು ಚೆನ್ನಾಗಿ ಬಲ್ಲೆ ಮತ್ತೆ ಹೇಳುತ್ತೀ ನೀವು ಬ್ರಾಹ್ಮರೆಂದು—" ಎಂದು ಮುಗುಳುನಕ್ಕು "ಆದರೀಗ ನಿನ್ನ ಗಂಡನ ಜನಿವಾರ ನೋಡಿದರೆ, ವಿಷ್ಣುಪುರದ ಪುರೋಹಿತರೂ ನಾಚುವಂತಿದೆ ಅಲ್ಲಾ, ಇಷ್ಟೇಕೆ ಸುಳ್ಳಾಡಿದೆ, ಹೇಳು" ಎಂದಳು

ಅಚಲೆ ಗಟ್ಟಿಯಾಗಿ ಶುಷ್ಕನಗೆ ನಕ್ಕು "ಹೇಳದಿದ್ದರೆ?" ಎಂದಳು.

"ನೀ ಹೇಳದಿದ್ದರೆ ನಾ ಹೇಳುವೆ ಆದರೆ ನಾ ಸರಿಯಾಗಿ ಹೇಳಿದರೆ ನನಗೇನು ಕೊಡುವೆ?"

ಅಚಲೆಯ ಹೃದಯದಲ್ಲಿ ರಕ್ತಚಲನೆಯೇ ನಿಲ್ಲುವಂತಾಯಿತು. ಅವಳ ಮುಖದ ಹೆಣಗಳೆ ದೀಪದ ಮಸಕು ಬೆಳಕಿನಲ್ಲಿ ವೀಣಾಪಾಣಿಗೆ ಕಾಣಿಸಿತೋ ಇಲ್ಲವೋ ಹೇಳುವುದು ಕಠಿನ ಅವಳು ಮತ್ತೆ ನಕ್ಕು ನುಡಿದಳು "ಉಳಿದದ್ದು ಬೇಕಾದರೆ ಕೊಡು, ಸಾಕಾದರೆ ಬಿಡು ಆದರೆ ಸರಿಯಾಗಿ ಹೇಳಿದರೆ ನನಗೇನು ತಿನ್ನಲು ಕೊಡುವೆ ಅಚಲಕ್ಕಾ?"

ಅಚಲೆಯ ಕಿವಿಯಲ್ಲಿ ಆ ಹೆಸರು ಹೊಕ್ಕುದು ಕೊಳ್ಳಿಯಿಟ್ಟಂತಾಯಿತು ಮರುಕ್ಷಣವೇ ಅವಳು ಅರ್ಧ ಸಚೇತನ ಅರ್ಧ ಅಚೇತನ ಅವಸ್ಥೆಯಲ್ಲಿ ಕಠೋರಳಾಗಿ ಕುಳಿತಳು ವೀಣಾಪಾಣಿ ಹೇಳತೊಡಗಿದಳು: "ನಮ್ಮಿಬ್ಬರ ಗಂಡಂದಿರಷ್ಟೇನು ನಮ್ಮಿಬ್ಬರ ದೋಷವಿಲ್ಲ ಒಬ್ಬರು ಜ್ವರದ ತಾಮಸದಲ್ಲಿ ನಿನ್ನ ಹೆಸರನ್ನು ಪ್ರಕಾಶಪಡಿಸಿದರು, ಇನ್ನೊಬ್ಬರು ಅಷ್ಟರಿಂದ ನಿನ್ನ ಸತ್ಯಪರಿಚಯವನ್ನು ಕಂಡುಕೊಂಡಿದ್ದಾರೆ"

ವಿಕ್ಷುಬ್ಧವಾದ ಹೃದಯವನ್ನು ಅಚಲೆ ಬಹುಶ್ರಮದಿಂದ ಸಂಯಮಿಸಿಕೊಂಡು ಕೇಳಿದಳು: "ಸತ್ಯಪರಿಚಯವೆಂದರೇನು?"

" ಸತ್ಯವಾಗಲಿ ಅಥವಾ ಅಸತ್ಯವಾಗಲಿ, ಅವರ ಬುದ್ಧಿವಂತಿಕೆಯನ್ನು ಮಾತ್ರ ನೀ ಒಪ್ಪಲೇಬೇಕು ಅವರು ಒಂದಿನ ರಾತ್ರಿ ಅಕಸ್ಮಾತ್ ಹೇಳಿದರು 'ನಿಮ್ಮ ಅಚಲಕ್ಕನ ಪ್ರಕರಣ ನೀ ಬಲ್ಲೆಯಾ? ಅವಳು ಮನೆಯಿಂದ ಓಡಿಬಂದಿದ್ದಾಳೆ' ನನಗೆ ಸಿಟ್ಟು ಬಂತು 'ಹೋಗಿರಿ, ಇಲ್ಲದ ಚೇಷ್ಟೆ ಮಾಡಬೇಡಿರಿ. ಈ ಮಾತು ಅಕ್ಕನ ಕಿವಿಗೆ ಬಿದ್ದರೆ ಸಾಯುವತನಕ ನಿಮ್ಮ ಮೋರೆ ನೋಡಲಿಕ್ಕಿಲ್ಲ,' ಎಂದೆ "

ಅಚಲೆ ಕುರ್ಚಿಯ ತೋಳುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತಳು ವೀಣಾಪಾಣಿ ಹೇಳತೊಡಗಿದಳು, "ಅದಕ್ಕೆ ಅವರೆಂದರು. 'ಆಕೆ ನನ್ನ ಮೋರೆ ನೋಡಲಿ, ಬಿಡಲಿ ಇದು ಮಾತ್ರ ದೇವರಾಣೆಗೂ ಸತ್ಯ ಅತ್ತಿಗೆನಾದಿನಿಯರೊಡನೆ ಜಗಳವಾಗಿರಬಹುದು, ಅಥವಾ ಅತ್ತೆ ಮಾವಂದಿರೊಡನೆ ಕೂಡಿಬಂದಿರಲಿಕ್ಕಿಲ್ಲ ಗಂಡನನ್ನು ಕಟ್ಟಿಕೊಂಡು ವಿರಾಗಿಯಾಗಿ ಹೊರಬಿದ್ದಿದ್ದಾಳೆ ಸುರೇಶಬಾಬುಗಳ ಭಾವ-ರೀತಿಗಳನ್ನು ನೋಡಿದರೆ, ನಿಮ್ಮಕ್ಕ 'ಸಮುದ್ರ ಬೀಳು' ಎಂದು ಆಜ್ಞಾಪಿಸಿದರೂ ಒಲ್ಲೆ ಎಂಬ ಧೈರ್ಯ ಅವರಿಗಿಲ್ಲವೆಂದೆನಿಸುತ್ತಿದೆ ಇನ್ನಿಬ್ಬರೂ ಒಂದು ಕಡೆ ಛದ್ಮನಾಮದಿಂದ ಇದ್ದುಬಿಡುವವರಿದ್ದಾರೆ— ಮುದುಕ ಮುದುಕಿ ದೇಶವೆಲ್ಲಾ ಹುಡುಕಾಡಿ ಗೊತ್ತುಹಚ್ಚಿ ಅತ್ತು ಕರೆದು ಕರೆದುಕೊಂಡು ಹೋಗುವತನಕ. ಇದು ನಿಜವಲ್ಲದಿದ್ದರೆ ನೀ ನನಗೆ—' ಅದಕ್ಕೆ ನಾ ಕೇಳಿದೆ 'ಒಳ್ಳೆಯದು, ಇದು ನಿಜವಾದರ, ಗಾಡಿಯಲ್ಲಿ ನನ್ನಂತಹ ಪೆದ್ದಿಯ ಎದುರಿಗೂ ಸುಳ್ಳು ಹೇಳುವುದು ಏನಗತ್ಯವಿತ್ತು?' ಅದಕ್ಕವರು ನಕ್ಕು 'ನಿಮ್ಮಕ್ಕ ನಿನ್ನಂತೆ ಬುದ್ಧಿವಂತಳಾಗಿದ್ದರೆ ಇಂಥದೇನು ಅಗತ್ಯವಿರಲಿಲ್ಲ ಆದರಾಕೆ ಹಾಗಿಲ್ಲ ನಿನ್ನ ಮನೆ ಡಿಹರಿಯಲ್ಲಿ, ನೀ ಇನ್ನೆರಡು ದಿನಕ್ಕೆ ಡಿಹರಿಗೆ ಹೋಗುವವಳು ಎಂದು ತಿಳಿದೊಡನೆ, ಆಕೆ ಅಚಲೆಗೆ ಬದಲು ಸುರಮಾ, ಡಿಹರಿಗೆ ಬದಲು ಜಬ್ಬಲಪುರಕ್ಕೆ ಹೋಗುವವಳು, ಹಿಂದುವಿನ ಬದಲು ಬ್ರಾಹ್ಮಮಹಿಳೆ ಆಗಿಬಿಟ್ಟಳು. ಜಬ್ಬಲಪುರಕ್ಕೆ ತಿಕೀಟು ತೆಗೆದುಕೊಂಡವರು ಒಮ್ಮೆಲೆ ಗಾಡಿ ಬದಲಿಸಿ ಈಕಡೆಗೇಕೆ ಹೊರಡುತ್ತಿದ್ದರು? ಅಲ್ಲದೆ ಜಡ್ಡಿನ ಗಂಡನನ್ನು ಕಟ್ಟಿಕೊಂಡು ಯಾರಾದರೂ ಬಂಗಾಲಿಗಳಲ್ಲಿ ಇಳಿಯದೆ ಮುರಕ ಧರ್ಮಶಾಲೆಯಲ್ಲಿ ಏಕೆ ಇಳಿಯಬೇಕು?' ಎಂದರು " ಎನ್ನುತ್ತ ವೀಣಾಪಾಣಿ ಒಮ್ಮೆಲೆ ಪಕ್ಕಕ್ಕೆ ಬಾಗಿ ಅಚಲೆಯ

ಕೊರಳಿಗೆ ತೆಕ್ಕೆಬಿದ್ದಳು; ಅವಳ ಕಿವಿಯಲ್ಲಿ "ಏನಾಗಿದೆ ಹೇಳಲ್ಲ ಅಕ್ಕಾ. ನಾನೆಂದೂ ಯಾರ ಮುಂದೂ ಹೇಳುವುದಿಲ್ಲ,– ನಿನ್ನಾಣೆ ಹೇಳುವುದಿಲ್ಲ" ಎಂದು ಕೇಳಿದಳು

ತನ್ನ ಸಂಬಂಧದ ಸತ್ಯಶೋಧನೆಯ ಮಿಥ್ಯಾ ಇತಿಹಾಸವನ್ನು ಕೇಳಿ, ಅಚಲೆಯ ದೇಹ ಅಚೇತನ ವಸ್ತುವಿನಂತೆ ಗೆಳತಿಯ ಅಪ್ಪುಗೆಯಿಂದ ಜಗುಳಿತು ಹರಿಗಡಿಯದ ಅಶ್ರುಧಾರೆಯ ಹೊರತು ಸಜೀವತೆಯ ಯಾವ ಲಕ್ಷಣವೂ ಅವಳಲ್ಲಿ ಕಾಣಲಿಲ್ಲ

ವೀಣಾಪಾಣಿ ಮತ್ತೆ ಮತ್ತೆ ಅವಳ ಕಂಬನಿ ಒರಸುತ್ತ ಸಸ್ನೇಹ ಕರುಣಸ್ವರದಲ್ಲಿ ನುಡಿದಳು "ಸುರಮಕ್ಕಾ, ನೀ ಹಿರಿಯಳಾದರೂ ಈ ತಂಗಿಯ ಮಾತು ಕೇಳಕ್ಕ ಮನೆಗೆ ಹೋಗಿರಿ, ಹೀಗೆ ಬಂದುದು ಒಳ್ಳೆಯ ದಲ್ಲ, ಅಭಿಮಾನಕ್ಕೆ ಬಿದ್ದು ಹಿರಿಯರನ್ನು ನೋಯಿಸಬೇಡ, ಅತ್ತೆಯ ಮನೆಗೆ ಬಗ್ಗಿಕೊಂಡು ಹೋಗುವುದೇನೂ ಅಗೌರವವಲ್ಲ" ತುಸು ತಡೆದು ಪ್ರಶ್ನಿಸಿದಳು "ಏನು, ಸಮ್ಮನೆ ಕುಳಿತೆಯಲ್ಲಕ್ಕ? ಹೋಗುವುದಿಲ್ಲವೇ? ತಂದೆ-ತಾಯಿಗಳ ಮೇಲೆ ಸಿಟ್ಟಾಗಿ ಮನೆ ಬಿಟ್ಟ ಮೇಲೆ ಸುರೇಶಣ್ಣನಿಗೆ ನೆಟ್ಟಗೇ ಇಲ್ಲ ನೀ ಈ ವಿಚಾರ ಎತ್ತಿದರೆ—ನಾ ಖಂಡಿತ ಹೇಳುವೆ—ಆತ ನಿಗೆ ಸಂತೋಷವಾಗುವುದು"

ಅಚಲೆ ಕಣ್ಣೊರಸಿಕೊಂಡು ನೆಟ್ಟಗೆ ಕುಳಿತಳು ವೀಣಾಪಾಣಿ ಉತ್ಸುಕ ದೃಷ್ಟಿಯಿಂದ ತನ್ನನ್ನೇ ನೋಡುತ್ತಿದ್ದಳು ಉತ್ತರ ಹೇಳಲು ಮೊದಲವಳಿಗೆ ಅತಿಶಯ ನಾಚಿಕೆಯಾಯಿತು ಆದರೆ ಮೌನವಾಗಿದ್ದರೆ ಈ ಹುಡುಗಿಯಿಂದ ಉಳಿದುಕೊಳ್ಳುವುದು ಖಂಡಿತ ಸಾಧ್ಯವಿಲ್ಲವೆಂದು ಮನಗಂಡಾಗ, ಸಂಕೋಚವನ್ನೆಲ್ಲ ಹೊಡೆದಟ್ಟಿ ಮೆಲ್ಲಮೆಲ್ಲನೆ ಆವಳೆಂದಳು: "ನಾವು ತಿರುಗಿ ಮನೆಗೆ ಹೋಗಲು ಹಾದಿಯೇ ಇಲ್ಲ ವೀಣಾ"

ವೀಣೆ ಎಂದಳು "ಏಕೆ? ನನ್ನ ನಿನ್ನ ಗುರುತು ಬಹಳ ದಿವಸದ್ದಲ್ಲ ನಿಜ ಆದರೂ ನಿನ್ನ ಆ ಹಾದಿ ಕಟ್ಟಲಾರದು,— ನೀ ಅಂಥ ಕೆಲಸ ಎಂದೂ ಮಾಡಿರಲಾರೆ—ಎಂದು ಪ್ರಮಾಣ ಮಾಡಿ ಹೇಳಬಲ್ಲೆ. ಒಳ್ಳೆಯದು, ನಿಮ್ಮ ಮಾವನ ವಿಳಾಸ ತಿಳಿಸು, ನಾ ನಾಳೆ ಊರಿಗೆ ಹೋಗುತ್ತೇನೆ, ಆಗ ಅಪ್ಪನನ್ನು ಕರೆದುಕೊಂಡು ನಿಮ್ಮನೆಗೆ ಹೋಗು ತ್ತೇನೆ; ಮುದುಕ ಮುದುಕಿ ಏನು ಹೇಳುತ್ತಾರೋ ನೋಡುವ"

ಅಚಲೆ ಚಕಿತಳಾದಳು "ನೀ ನಾಡದು ಊರಿಗೆ ಹೋಗುವುದು ಗೊತ್ತೇ ಇಲ್ಲವಲ್ಲ? ಇಲ್ಲಿ ಯಾರು ಯಾರಿರುತ್ತಾರೆ?" ಎಂದು ಕೇಳಿದಳು.

"ಯಾರ್ಯೂ ಇಲ್ಲ ಬರೀ ಆಳು ಹೋಳು ಮನೆ ಕಾಯ್ದುಕೊಂಡಿರುತ್ತಾರೆ ನಮ್ಮ ದೊಡ್ಡಕ್ಕ ಬಹಳ ದಿನಗಳಿಂದ ನೆಲಹಿಡಿದಿದ್ದಾಳೆ ಬದುಕುವುದೆಂಥ ಮಾತೋ! ಆಕೆ ಎಲ್ಲರನ್ನೂ ಒಮ್ಮೆ ನೋಡಬಯಸಿದ್ದಾಳೆ"

"ನಿಮ್ಮತ್ತೆಮನೆ ಎಲ್ಲಿ?"

"ಕಲಕತ್ತೆಯಲ್ಲಿ ಪಟಲಡಾಂಗಾದಲ್ಲಿ"

ಪಟಲಡಾಂಗಾ ಎಂದು ಕೇಳಿದಾಕ್ಷಣ ಅಚಲೆಯ ಮುಖ ಬತ್ತಿತು. ಕ್ಷಣ ಸುಮ್ಮನಿದ್ದು ಮೆಲ್ಲನೆ "ಹಾಗಾದರೆ ನಾವೂ ನಾಳೆ ಇಲ್ಲಿಂದ ಹೊರಡುತ್ತೇವೆ" ಎಂದಳು

ವೀಣೆ ನಕ್ಕಳು "ನಿಮ್ಮನ್ನು ಇಲ್ಲಿಂದ ಹೊರಡಿಸುವುದಕ್ಕೆ ಇಷ್ಟೆಲ್ಲ ಹೇಳಿದೆನೆಂದುಕೊಂಡೆಯಾ? ಇಲ್ಲಕ್ಕಾ ತಪ್ಪಾಯಿತು ಇನ್ನೆಂದೂ ಮನೆಗೆ ಹೋಗೆನ್ನುವುದಿಲ್ಲ ಈ ಗುಡಿಸಲೊಳಗೆ ಬೇಕಾದಷ್ಟು ದಿನ ಇರಬಹುದು, ನಮ್ಮದಾರದೂ ಅಡ್ಡಿಯಿಲ್ಲ" ಎಂದಳು

ಕ್ಷಣ ಹೊತ್ತು ಮೌನವಾಗಿದ್ದು ಮ್ಲಾನ ಮುಖದಿಂದ ಅಚಲೆ ಕೇಳಿದಳು "ನೀವು ಹೋಗುವುದು ನಿರ್ಧಾರವಾಗಿ ಬಿಟ್ಟಿದೆಯೆ?"

"ನಿರ್ಧಾರವೇನು, ಗಾಡಿ ಕೂಡ ರಿಝರ್ವ್ ಮಾಡಿಯಾಗಿದೆ. ತಂದೆಯ ಕೋಣೆಯಲ್ಲಿ ಒಮ್ಮೆ ಇಣಿಕಿ ನೋಡು—ಹದಿನೈದಾಣೆ ಸಾಮಾನು ಕಟ್ಟಿ ಸಿದ್ಧವಾಗಿದೆ"

ದಾಸಿ ಬಂದು ಬಾಗಿಲಲ್ಲಿ ನಿಂತು, "ಸೊಸೆಯಮ್ಮಾ, ಅಡಿಗೆಮನೆಯಲ್ಲಿ ಅಮ್ಮಾವರು ಕರೆಯುತ್ತಾರೆ" ಎಂದಳು ವೀಣಾಪಾಣಿ, "ಬಂದೆ" ಎಂದು ಹೇಳಿ ಅಚಲೆಯನ್ನು ಮತ್ತೆ ತಬ್ಬಿಕೊಂಡು ಕಿವಿಯಲ್ಲಿ ನುಡಿದಳು: "ಇಷ್ಟು ದಿನ ತುಂಬಿದ ಮನೆಯಲ್ಲಿ ದಿನಗಳೆಯುವುದು ನಿಮಗೆ ಬಹಳ ಕಷ್ಟವಾಗಿತ್ತು. ಇನ್ನು ಮನೆಯೆಲ್ಲ ತೆರವು—ಎಲ್ಲಿಯೂ ಯಾರೂ ಇರುವುದಿಲ್ಲ—ಆತಂಕವಾಗಿದ್ದ ನಾವೆಲ್ಲ ಹೊರಟು ಹೋಗುವೆವು— ತಿಳಿಯಿತೇ ಅಕ್ಕಣ್ಣಿ?" ಎಂದು ಗೆಳತಿಯ ಕೆನ್ನೆಗೆ ಬೆರಳ್ಗೊನೆಯಿಂದ ಹಗುರಾಗಿ ಹೊಡೆದು ಹೊರಟುಹೋದಳು.

ಆ ಸೌಭಾಗ್ಯವತೀ ತರುಣಿ ತೆಂಕಣ ಗಾಳಿಯಂತೆ ಮೆಲ್ಲಮೆಲ್ಲನೆ

ಸಾಗಿ ಕಣ್ಮರೆಯಾದಳು ಆದರವಳ ಕಿವಿಮಾತುಗಳು ಅಚಲೆಯ ಕಿವಿಯೊಳಗುಳಿದವು ಅವಳು ಪಾಷಾಣಮೂರ್ತಿಯಂತೆ ಕುಳಿತಳು: ಇನ್ನು ಇಂದಿನ ರಾತ್ರಿ, ನಾಳಿನ ಒಂದು ದಿನ ಮಾತ್ರ ಉಳಿದಿವೆ— ಆಮೇಲೆ ಯಾವ ತಡೆ-ತೊಂದರೆಗಳೂ ಇರುವುದಿಲ್ಲ; ಈ ನಿರ್ಜನ ನೀರವಪುರಿಯಲ್ಲಿ ತಾನು ಸುರೇಶ ಇಬ್ಬರ ಹೊರತು ಮತ್ತಾರೂ ಇರುವುದಿಲ್ಲ!

೩೨

ವೀಣಾಪಾಣಿ ಎಂದಿದ್ದಳು 'ಅತ್ತೆಯ ಮನೆ ನಮ್ಮ ಮನೆ ಅಲ್ಲಿಗೆ ಬಗ್ಗಿ ಹೋಗುವುದಕ್ಕೆ ಹೆಂಗುಸು ಲಜ್ಜಿಸಬೇಕಾಗಿಲ್ಲ!'

ಅಕಟಕಟಾ! ತನಗೆ ಯಾರುಂಟು ಯಾರಿಲ್ಲ ಎಂಬ ಲೆಕ್ಕ ಅಂತರ್ಯಾಮಿಯ ಹೊರತು ಯಾರಿಟ್ಟಿದ್ದಾರೆ? ಆದರೂ ತನಗಿಂದಿಗೂ ಗಂಡನಿದ್ದಾನೆ, ಸುಟ್ಟುಹೋಗಲೊಲ್ಲದೇಕೆ ತನ್ನದೆಂಬ ಮನೆಯಿದೆ. ಈಗಳಿಗೆಯಲ್ಲಿಯೇ ಬೇಕಾದರೂ ತಾನು ಅಲ್ಲಿ ಹೋಗಿ ಇರಬಲ್ಲಳು!

ಕಟ್ಟಿದ ದನ, ಹೊರಗಿನ ಬಯಲು ಕಣ್ಣಿಗೆ ಕಾಣದಾಗುವ ವರೆಗೂ ನಿಂತಲ್ಲಿಯೇ ಒಂದೇಸವನೆ ತಲೆತಿಕ್ಕುತ್ತಿರುವಂತೆ ಅಚಲೆಯ ಆಬದ್ಧ ಮನಸಿನ ಪ್ರಚಂಡ ಕಾಮನೆ ಅವಳ ಹೃದಯದಲ್ಲಿ ಹಾಹಾಕಾರವೆಬ್ಬಿಸುತ್ತ ಹೊರಹೊರಡಲು ಹಾದಿ ಹುಡುಕತೊಡಗಿತು ಪಕ್ಕದ ಕೋಣೆಯಲ್ಲಿ ಸುರೇಶ ನಿರುದ್ವೇಗವಾಗಿ ನಿದ್ದೆ ಮಾಡುತ್ತಿದ್ದ ನಡುವಿನ ಬಾಗಿಲು ನಸು ತೆರೆದಿತ್ತು ಅದರ ಈ ಕಡೆಯಲ್ಲಿ ಹಿಂದುಸ್ತಾನೀ ದಾಸಿ ಚಾಪಿಚಲ್ಲಿಕೊಂಡು ನಿದ್ದೆಹೋಗಿದ್ದಳು ಇಡೀ ಮನೆಯಲ್ಲಿ ಯಾರೂ ಎಚ್ಚತ್ತಿರುವಂತೆ ಕಾಣಲಿಲ್ಲ ಅಚಲೆಯೊಬ್ಬಳು ಮಾತ್ರ ಕಿಚ್ಚುಹಾಸಿಗೆಯಲ್ಲಿ ಬೇಯುತ್ತಿದ್ದಳು ಬಹುದಿನಗಳಿಂದ ಅದೇ ಮಂಚದಲ್ಲಿ ಅವಳ ಪಕ್ಕದಲ್ಲಿಯೇ ವೀಣಾಪಾಣಿ ಮಲಗುತ್ತಿದ್ದಳು ಅಂದು ಗಂಡ ಬಂದುದರಿಂದ ತನ್ನ ಕೋಣೆಯಲ್ಲಿ ಮಲಗಿದ್ದಳು. ಆ ಯೋಚನೆಯು ಎಳೆಯನ್ನೇ ಹಿಡಿದು ತನ್ನ ದೃಷ್ಟಿ ತಾವು ಕದವಿಕ್ಕಿಕೊಂಡು ಮಲಗುವ ವಿಷಯದ ಕಡೆಗೆ ಹರಿದೀತು, ವೇದನೆಯಿಂದ, ಅಪಮಾನದಿಂದ, ಲಜ್ಜೆಯಿಂದ ತನ್ನ ವಿಕ್ಷಿಪ್ತ ಚಿತ್ತ ಚೂರುಚೂರಾದೀತು ಎಂಬ ಭಯದಿಂದ ಅವಳು ಪ್ರಚಂಡಶಕ್ತಿಯನ್ನು ಪಯೋಗಿಸಿ ಆತ್ಮನಿಗ್ರಹಮಾಡಿಕೊಂಡಳು ಆದರೆ ನಿಗ್ರಹದೊಡನೆಯೇ ಅವಳ ದೇಹಾದ್ಯಂತವೂ ವಿದ್ಯುತ್ಸ್ಪರ್ಶವಾದ ಹಾಗೆ ತರತರಿಸಿತು.

ಬದಿಯ ಕೋಣೆಯೊಂದರಲ್ಲಿ ಎರಡು ಬಾರಿಸಿತು ಅಚಲೆಗೆ ಆ ಚಳಿಗಾಲದಲ್ಲಿಯೂ ಹಣೆಕೊರಳುಗಳಲ್ಲಿ ಬೆವರು ಮೂಡಿತು ಎದ್ದು ಕಿಡಿಕಿಯನ್ನು ತೆರೆದಳು ಕೃಷ್ಣಪಕ್ಷದ ಅಷ್ಟಮಿಯ ಖಂಡಚಂದ್ರ ಇದಿರಿಗೇ ಇದ್ದ. ಆತನ ಸ್ನಿಗ್ಧ ಮೃದು ಕಿರಣಗಳಲ್ಲಿ ಶೋಣನದಿಯ ನೀಲವಾದ ನೀರು ಬಹು ದೂರದವರಗೂ ಕಂಗೊಳಿಸುತ್ತಿತ್ತು ಗಭೀರ ರಾತ್ರಿಯ ತಂಗಾಳಿ ಅವಳ ಕಾದ ಮುಂದಲೆಯನ್ನು ಸ್ನೇಹದಿಂದ ತೀಡಿತು ಅವಳು ಅಲ್ಲಿಯೇ ತನ್ನ ಅದೃಷ್ಟದ ಕೊನೆಯ ಸಮಸ್ಯೆಯನ್ನು ಯೋಚಿಸುತ್ತ ಕುಳಿತಳು

ತನ್ನ ಅಭಿಶಪ್ತ ಜೀವನದಲ್ಲಿಯ ಅಲ್ಪ ಸ್ವಲ್ಪ ಸತ್ಯ, ಜಗತ್ತಿನ ಜನಕ್ಕೆ ಅದ್ಭುತ ಕಾದಂಬರಿಯಾಗಬಹುದೆಂದು ಅಚಲೆಗೆನಿಸಿತು ಈ ಕತೆಯ ಸೂತ್ರಪಾತವಾದಂದಿನಿಂದ, ಎಷ್ಟು ಮಿಥ್ಯಗಳು ಸತ್ಯದ ಮೊಗವಾಡ ಹಾಕಿಕೊಂಡು ತಲೆದೋರಿದವೋ ಅವನ್ನೆಲ್ಲ ಒಂದೊಂದಾಗಿ ನೆನೆದು ಅವಳ ಮನಸು ಪ್ರಕ್ಷುಬ್ಧವಾಯಿತು ಕಣ್ಣಲ್ಲಿ ನೀರು ಹರಿಯತೊಡಗಿತು. ಅವಳ ಯೌವನದ ಪ್ರಥಮಾನಂದವನ್ನು ಮಿಥ್ಯದಿಂದ ವಿಕೃತಗೊಳಿಸಿ ಜಗತ್ತಿನ ಮುಂದೆ ತೆರೆದಿಟ್ಟು ಭಾಗ್ಯವಿಧಾತ ಕನಿಕರವೆಳ್ಳಷ್ಟೂ ಇಲ್ಲದೆ ನಗೆಯಾಡುತ್ತಿದ್ದಾನೆ! ಅವಳು ಕಣ್ಣೊರಸಿಕೊಂಡು 'ಹೇ ದೇವರೇ, ನಿನ್ನ ಪ್ರಚಂಡ ಬ್ರಹ್ಮಾಂಡದಲ್ಲಿ ನಿನಗೆ ವಿನೋದಬಡಲಿಕ್ಕೆ ಈ ದುರ್ಭಾಗ್ಯಳ ಹೊರತು ಮತ್ತೇನು ಮಣ್ಣೂ ಇರಲಿಲ್ಲವೆ?' ಎಂದುಕೊಂಡಳು

ತಾ ಯಾರು, ಸುರೇಶ ಯಾರು? ಬ್ರಾಹ್ಮರ ನೆರಳು ಕಂಡರೂ ಆಗದ ಸುರೇಶನಿಗೆ ಈಪರಿ ಆಸಕ್ತಿಯುಂಟಾಗುವುದೆಂದರೆ ದೈವ ಪರಿಹಾಸವಲ್ಲವೆ? ಯಾರನ್ನು ತಾನೆಂದೂ ಪ್ರೀತಿಸಿಲ್ಲವೋ ಅವನೇ ತನ್ನ ಪ್ರಾಣಾಧಿಕನೆಂದು ಎಲ್ಲರೂ ಸುಳ್ಳೇ ಭಾವಿಸುವರಲ್ಲವೆ? ಸತ್ಯಕ್ಕೆ ಎಲ್ಲಿಯೂ ಯಾರಲ್ಲಿಯೂ ಇಂಬು ಆಸರ ಇಲ್ಲವೆ? ಆ ಅಸತ್ಯ ತನ್ನ ಮುಖಾಂತರವೇ ಪ್ರಚುರಗೊಳ್ಳುವಂತಾಗಬೇಕೆ? ಇಷ್ಟೊಂದು ದೈವವಿಡಂಬನೆ ಯಾರ ಹಣೆಬರಹದಲ್ಲಾದರೂ ಇದ್ದಿರಬಹುದೆ? ತಾನು ಬಹು ಕಷ್ಟದಿಂದ ಗಂಡನನ್ನು ಪಡೆದಿದ್ದಳು— ದೈವ ಅದನ್ನು ಸಹಿಸಲಿಲ್ಲ ಸುರೇಶ ತನ್ನ ಚರಮದುರ್ದೆಸೆಯ ಹೊರೆ ಹೊತ್ತುಕೊಂಡು ಅಕಲ್ಪಿತವಾಗಿ ತವ್ಮ ಮನೆಗೆ ಬಂದ ತನ್ನ ಸುಖದ ಗೂಡು ಸುಟ್ಟುಹೋಯಿತು. ಅದರೊಡನೆಯೇ ತನ್ನ ಭಾಗ್ಯವೂ ಪೂರಾ ಬೂದಿಯಾಯಿತು. ಇದನ್ನೆಲ್ಲ ಅರಿತೂ ಜಿದ್ದಿನ ಜಳಿಯನ್ನು ತಂದು

ತನ್ನ ತೊಡೆಯ ಮೇಲೆ ಏಕೆಡಬೇಕಿತ್ತು? ಬಿಟ್ಟು ಹೋದುದನ್ನು ಕೂಡಿ ಸುವುದೇ ಆ ವಿಧಾತನ ಉದ್ದೇಶವಿದ್ದರೆ, ಮತ್ತೇಕೆ ತನಗೆ ದುಃಖದುರ್ದಶೆ, ಅಪಮಾನ ಲಾಂಛನಗಳಿಂದು? ರೋಗಮುಕ್ತ ಪತಿಯ ಸ್ನೇಹಾಶೀರ್ವಾದ ದಿಂದ ಸಕಲ ಅಪರಾಧಗಳ ಪ್ರಾಯಶ್ಚಿತ್ತವಾದಂತಾಯಿತೆಂದು ನಂಬಿಗೆ ಹುಟ್ಟಿಸಿ, ಮತ್ತೆ ಈ ಮಹಾದುರ್ಗತಿಯಲ್ಲಿ ನೂಕಿದುದೇಕೆ? ಇಷ್ಟಾದ ಮೇಲೂ ತಾನು ಸಂಕೋಚವಿಲ್ಲದೆಯೆ ಸುರೇಶನನ್ನು ಸಂಗಡ ಬರಲು ಕರೆದಳಲ್ಲ— ಆ ಅಪರಾಧ ಆ ಕಲಂಕ ಇನ್ನು ಅಳಿಸದು! ಅದರೆ ಅಂತ ರ್ಯಾಮಿಯೆ, ದುರ್ಭಾಗ್ಯದಿಂದ ನೀನೂ ತಪ್ಪು ತಿಳಿದುಕೊಳ್ಳುವೆಯಾ? ಈ ಹೃದಯದಲ್ಲಿ ಯಾವಾಗಲೂ ಇದ್ದ ನಿನಗೆ ಸತ್ಯ ಕಾಣುವುದಿಲ್ಲವೆ?

ತಂದೆಯ ಹಾಗೂ ಗಂಡನ ಯೋಚನೆಯನ್ನು ಅವಳಿಗೆ ಪ್ರಯತ್ನ ದಿಂದ ಒತ್ತಿಡುವುದು ಸಾಧ್ಯವಿತ್ತು ಇಂದೂ ಅದನ್ನು ಹತ್ತಿರ ಬರಗೊಡು ತ್ತಿರಲಿಲ್ಲ ಆದರವಳಿಗೆ ಮೃಣಾಲಳ ನೆನಪಾಯಿತು, ಅತ್ತೆವ್ವನ ನೆನಪಾ ಯಿತು ಬರುವಾಗ ಅತ್ತೆವ್ವ 'ಸತಿ ಸಾಧ್ವಿಯಾಗೆ'ಂದು ಹರಸಿದುದು ನೆನಪಾಯಿತು ಇಂದು ತನ್ನ ಬಗ್ಗೆ ಅವರೇನು ಭಾವಿಸಿಕೊಂಡಿರಬಹು ದೆಂಬುದನ್ನು ನೆನೆದಾಗ ಅವಳಿಗೆ ಮರ್ಮಾಂತಿಕ ಆಘಾತವಾಯಿತು ಅವಳ ವಿಚಾರಶಕ್ತಿಯೇ ಲುಪ್ತವಾಯಿತು ಕ್ಷಣಹೊತ್ತು ಹಾಗೆ ಕಿಡಕಿಯಲ್ಲಿ ಒರಗಿಕೊಂಡಳು ಕಣ್ಣೀರು ಅಜ್ಞಾತವಾಗಿ ಹರಿಯುತ್ತಲೇ ಇತ್ತು ಹಿಂದುಗಡೆ ಮೆಲ್ಲಡಿಯ ಸದ್ದಾಯಿತು ಹೊರಳಿ ನೋಡಿದಳು, ಸುರೇಶ.

ಸುರೇಶ ಬರಿಮೈಯಿಂದ ಬರಿಗಾಲಿಂದ ನಿಂತಿದ್ದ. ಅಚಲೆ ಏನೋ ಮಾತನಾಡಬೇಕೆಂದಳು. ಆದರೆ ಕೊರಳು ಬಿಗಿದಿತ್ತು ಸರಿಪಡಿಸಿ ಕೊಂಡು ಮಾತನಾಡುವ ಪ್ರವೃತ್ತಿ ಅವಳಿಗಾಗಲಿಲ್ಲ. ಎಂತಲೇ ಪುನಃ ಆಕಡೆ ಹೊರಳಿ ಕಿಡಿಕಿಯೊಳಗೆ ಮೊಗವಿಟ್ಟಳು. ಅವರೆಗೆ ಹನಿಹನಿಯಾಗಿದ್ದ ಕಣ್ಣೀರು ಒಮ್ಮೆಲೆ ಒಡ್ಡೊಡೆದ ಉನ್ಮತ್ತ ಪ್ರವಾಹದಂತೆ ಹರಿಯ ತೊಡಗಿತು.

ಎಲ್ಲಿಯೂ ಯಾವ ಸದ್ದೂ ಇಲ್ಲ. ರಾತ್ರಿಯ ಗಭೀರ ನೀರವತೆ ಒಳಗೂ ಹೊರಗೂ ವಿರಾಜಿಸುತ್ತಿತ್ತು ಸುರೇಶ ನಿಂತಲ್ಲಿಯೇ ಪಾಷಾಣ ಮೂರ್ತಿಯಂತೆ ಸ್ತಬ್ಧನಾಗಿದ್ದ. ಅವನ ಮೈಯೊಮ್ಮೆಲೆ ಬಿದಿರೆಲೆಯಂತೆ ಅದಿ

ಕಂಪಿಸಿತು ನಿಮಿಷಾರ್ಧದಲ್ಲಿ ಆವೇಗದಿಂದ ಅಚಲೆಯ ಮುಖವನ್ನೆಳೆದು ಕೊಂಡು ತನ್ನ ಎದೆಗಿಟ್ಟುಕೊಂಡ

ಅಚಲೆ ಬಿಡಿಸಿಕೊಂಡು ಕಂಬನಿ ಒರಸಿಕೊಂಡಳು ಆದರೆ ಆಶ್ಚರ್ಯದ ಸಂಗತಿಯೆಂದರೆ ತನ್ನೀ ದುಃಖಕ್ಕೆ ಮೂಲನಾದವನ ಈ ವರ್ತನೆಯಿಂದ ಅವಳಿಗೆ ಜುಗುಪ್ಸೆಯುಂಟಾಗಲಿಲ್ಲ ಇಷ್ಟೇ ಅಲ್ಲ, "ನೀವೀ ಕೋಣೆಗೇಕೆ ಬಂದಿರಿ?" ಎಂದು ಮೃದುಕಂಠದಿಂದ ಕೇಳಿದಳು

ಸುರೇಶ ಸುಮ್ಮನಿದ್ದ —ದನಿಯೇ ಹೊರಡಲಿಲ್ಲ ಅಚಲೆ ಕಿಡಿಕಿ ಮುಚ್ಚಿ, "ತಂಡಿಗೆ ನಿಮ್ಮ ಕೈ ನಡುಗುತ್ತಿವೆ ಬರಿಮೈಯಿಂದ ನಿಂದಿರ ಬೇಡಿರಿ; ಕೋಣೆಗೆ ಹೋಗಿ ಮಲಗಿಕೊಳ್ಳಿರಿ" ಎಂದಳು

ಸುರೇಶನ ಕಣ್ಣು ಮಿನುಗಿದವು ಅಚಲೆಯ ಕೈ ಹಿಡಿದು ನಡುಗುವ ಧ್ವನಿಯಿಂದ ನುಡಿದ "ಹಾಗಾದರೆ ನೀನೂ ಅಲ್ಲಿಯೇ ಬಾ"

ಕ್ಷಣ ಹೊತ್ತು ಅಚಲೆ ಅವಾಕ್ಕಾದಳು ಬಳಿಕ ಅವನ ಮೋರೆ ನೋಡುತ್ತ "ಒಲ್ಲೆ, ಈವೊತ್ತು ಬೇಡ" ಎಂದು ಹೇಳಿ ಕೈ ಬಿಡಿಸಿ ಕೊಂಡಳು ಆ ಶಾಂತ ಸಂಕ್ಷಿಪ್ತ ಉತ್ತರದೊಳಗೆ ಏನಿತ್ತೆಂಬುದನ್ನು ಸರಿಯಾಗಿ ಗ್ರಹಿಸಲಾಗದೆ ಸುರೇಶ ನೀರವವಾಗಿ ನಿಂತುಕೊಂಡ ಅಚಲೆ ಅವನ ಕಡೆ ನೋಡದೆ, "ನನಗೆ ನಿದ್ದೆ ಹತ್ತಿಲ್ಲವೆಂದು ತಿಳಿದು ಬಂದಿರಾ?" ಎಂದು ಕೇಳಿದಳು

"ಅಲ್ಲದಿದ್ದರೆ, ನಿದ್ದೆ ಹತ್ತಿದೆಯೆಂದು ತಿಳಿದು ಬಂದೆನೆಂದು ಬಗೆದೆಯಾ?"

ಬಗೆಯುವುದೆ? ಅಚಲೆ ಮೋರೆ ತಿರುಗಿಸಿ ನಕ್ಕಳು ದೀಪದ ಕ್ಷೀಣ ಪ್ರಕಾಶದಲ್ಲಿಯೂ ಆ ತೀಕ್ಷ್ಣ ನಗೆ ಸುರೇಶನ ಕಣ್ಣು ತಪ್ಪಿಸಲಿಲ್ಲ. ಆ ನಗೆ ಸ್ಪಷ್ಟವಾಗಿ ನುಡಿಯಿತು: 'ಎಲವೋ ಕಾಪುರುಷ! ನಿದ್ರಿತ ರಮಣಿಯ ಕೋಣೆಯಲ್ಲಿ ಪ್ರವೇಶಿಸಬಾರದೆಂಬುದನ್ನು ನೀನಿನ್ನೂ ಮನ್ನಿಸುವೆಯಾ?'

ಕ್ಷಣ ಹೊತ್ತಿನ ತರುವಾಯ ಅಚಲೆ ಕಿಡಿಕಿ ಬಟ್ಟಿದ್ದು, "ನಿಮ್ಮ ಮೈಯೊಳಗೆ ನೆಟ್ಟಗಿಲ್ಲ, ನಿದ್ದೆ ಕಟ್ಟಬೇಡಿರಿ, ಹೋಗಿರಿ, ಮಲಗಿಕೊಳ್ಳಿರಿ," ಎಂದು ನುಡಿದು ಮೆಲ್ಲಮೆಲ್ಲನೆ ತನ್ನ ಹಾಸಿಗೆಗೆ ಹೋಗಿ ಮುಸುಕಿಟ್ಟು ಕೊಂಡು ಮಲಗಿದಳು

ಕೆಲ ಹೊತ್ತು ಸುರೇಶ ಜಡವತ್ತಾಗಿ ಅಲ್ಲಿಯೇ ನಿಂತಿದ್ದು ಬಳಿಕ ಮೆತ್ತಗೆ ಹೆಜ್ಜೆಯಿಡುತ್ತ ತನ್ನ ಕೋಣೆಗೆ ಹೊರಟುಹೋದ.

೩೩

ಒಬ್ಬರಿಬ್ಬರು ದಾಸಿಯರ ಹೊರತು ಮನೆಯುವರೆಲ್ಲರೂ– ನಾಲ್ಕೈದು ಜನವಾಯಿತು– ಕಲಕತ್ತೆಗೆ ಹೋಗಿದ್ದಾರೆ ಯಜಮಾನ ಒಬ್ಬ ಏನೋ ಅಗತ್ಯದ ಕೆಲಸದ ನಿಮಿತ್ತ ಹೋಗಿಲ್ಲ.

ಈ ಕೆಲ ದಿನ ರಾಮಚರಣಬಾಬುಗಳು ತಮ್ಮ ಕೆಲಸದೊಳಗೇ ತೊಡಗಿರುತ್ತಿದ್ದರು, ಮನೆಯೊಳಗೆ ಹೆಚ್ಚಾಗಿ ಕಾಣುತ್ತಲೇ ಇರಲಿಲ್ಲ. ಈವೊತ್ತು ನಸುಕಿನಲ್ಲಿ ಹಠಾತ್ತಾಗಿ ಅಟ್ಟದಮೇಲೆ ಹೋದರು ಚಳಿಗಾಲ, ಅಷ್ಟು ನಸುಕಿನಲ್ಲಿ ಇನ್ನೂ ಯಾರೂ ಹಾಸಿಗೆ ಬಿಟ್ಟಿದ್ದಿರಲಿಲ್ಲ ಮುದುಕ "ಸುರಮಾ' ಎಂದು ಕೂಗಿದರು. ಅಚಲೆ ಶಶವ್ಯಸ್ತಳಾಗಿ ಎದ್ದು ಬಾಗಿಲು ತೆರೆದು ಹೊರಕ್ಕೆ ಬಂದಳು ಮರುಕ್ಷಣವೇ ಇನ್ನೊಂದು ಬಾಗಿಲಿಂದ ಸುರೇಶ ಕಣ್ಣುಜ್ಜಿಕೊಳ್ಳುತ್ತ ಹೊರಬಿದ್ದ ಇದೀಗ ಎಚ್ಚತ್ತ ದಂಪತಿಗಳು ಬೇರೆ ಬೇರೆ ಕೋಣೆಗಳಿಂದ ಹೊರಬಂದುದನ್ನು ನೋಡಿ ಮುದುಕ ವಿಸ್ಮಿತರಾದರು ಅದನ್ನು ಸುರೇಶ ನೋಡಲಿಲ್ಲ, ಅಚಲೆ ಮಾತ್ರ ನೋಡದಿರಲಿಲ್ಲ.

"ಅಕಾಲದಲ್ಲಿ ಕೂಗಾಡಿ ನಿನ್ನ ನಿದ್ದೆ ಕೆಡಿಸಿದೆ ಸುರೇಶಬಾಬೂ, ದೊಡ್ಡ ತಪ್ಪಾಯಿತು"ಎಂದು ರಾಮಚರಣರು ವಿಷಾದವನ್ನು ಸೂಚಿಸಿದರು.

ಸುರೇಶ ನಕ್ಕ "ಏನು ತಪ್ಪಿಲ್ಲ ನನಗೆ ಎಚ್ಚರವೇ ಆಗಿತ್ತು. ಇಲ್ಲದಿದ್ದರೆ, ಕೂಗುವುದೇ ಏಕೆ, ನಗಾರಿ ಬಾರಿಸಿದರೂ ನನ್ನ ಕೋಣೆಯ ಶಾಂತತಾಭಂಗವಾಗುವುದಿಲ್ಲ ಇರಲಿ, ಇಷ್ಟು ನಸುಕಿಲೆ ?" ಎಂದ

"ಇಂದು ನಮ್ಮ ಸುರಮಕ್ಕನಿಗೆ ತೊಂದರೆ ಕೊಡಬೇಕಾಗಿದೆ," ಎಂದು ಮುದುಕ ಅವಳ ಕಡೆ ನೋಡಿ ನಗುಮೊಗದಿಂದ ನುಡಿದರು: "ಪಲ್ಲಕ್ಕಿ ಅಣಿಯಾಗಿದೆ, ಈಗಲೇ ಹೊರಡಬೇಕು ಬಹುಶಃ ಎರಡು ಮೂರರೊಳಗೆ ತಿರುಗಿ ಬರಲಾಗಲಿಕ್ಕಿಲ್ಲ ಈ ಮುದುಕನಿಗೆ ಈವೊತ್ತು ಒಂತುತ್ತು ಅನ್ನಸಾರು ಕುಚ್ಚಿಡು ಅಷ್ಟೊತ್ತಿನ ಮೇಲೆ ಬಂದು ಕೈಬಾಯಿ ಸುಟ್ಟುಕೊಳ್ಳಲಾರೆ"

ಮುದುಕ ಬಲು ನಿಷ್ಠಾವಂತ ಬ್ರಾಹ್ಮಣ ಹೆಂಡತಿಯ ಅಥವಾ ಸೊಸೆಯ ಕೈಯಿಂದ ಹೊರತು ಯಾರ ಕೈಯಿಂದಲೂ ಎಂದೂ ಉಂಡವರಲ್ಲ ಅವರಿಗಾಗಿ ಒಂದಡಿಗೆಮನೆ ಪ್ರತ್ಯೇಕವೇ. ಇತರರಿಗೆ ಅಲ್ಲಿ ಪ್ರವೇಶವೇ ಇರಲಿಲ್ಲ. ನಡುನಡುವೆ ಅವರಿಗೆ ಕೈಯಡಿಗೆಯ ಅಭ್ಯಾಸವೂ ಆಗಿತ್ತು.

ಅಂತೆಯೇ ಹೆಂಗುಸರಿಗೆ ಹೋಗಲು ಬಿಡುವಾಯಿತು ಇಷ್ಟು ದಿನ ಹಾಗೆಯೇ ನಡೆಸಿದ್ದರು ಇಂದು ಅಕಸ್ಮಾತ್ ಸರಿಯಾದ ಪರಿಚಯವಿಲ್ಲದ ಹುಡುಗಿ ಯೊಬ್ಬಳಿಗೆ ಆ ಕೆಲಸ ಒಪ್ಪಿಸುವ ಪ್ರಸ್ತಾಪ ತೆಗೆದುದಕ್ಕೆ ವಿಸ್ಮಯದಿಂದ ಭಯದಿಂದ ಅವಳಿಗೆ ಏನೂ ತೋಚದಾಯಿತು

ಅವಳ ಮ್ಲಾನವದನವನ್ನು ಕಂಡು ರಾಮುಬಾಬು ನುಡಿದರು "ಮುದುಕ ಇದೇನು ಹೊಸದು ಹೇಳುತ್ತಿದ್ದಾನೆ, ಕಠೋರ ನಿಷ್ಠಾವಂತ-ನಾದಿವನಿಗೆ ಇಂದೇನಾಗಿದೆ, ಎಂದು ಯೋಚಿಸುತ್ತೀಯಲ್ಲವೆ ? ರಾಕ್ಷಸಿಯ ಕೈಲಿ ಉಣ್ಣಲಡ್ಡಿಯಿಲ್ಲವೆಂದ ಮೇಲೆ ನೀ ಅಟ್ಟು ಹಾಕಿದರೆ ಬರಬಾರದೇಕೆ? ಚೆಲೋ ಆಗಲಿ ಬಿಡಲಿ— ಅಷ್ಟೊತ್ತಿನ ಮೇಲೆ ಬಂದು ನಾ ತಪ್ಪೇಲಿ ಏರಿಸ ಲಾರೆ" ಎಂದು ಅಚಲೆಯ ಮೌನಮುದ್ರೆಯ ಕಡೆ ನೋಡಿ, "ಈ ಮುದುಕನಿಗೆ ಇಷ್ಟು ಉದಾರತನ ಬಂದಿದ್ದರೆ, ನನಗೆ ತೊಂದರೆ ಕೊಡದೆ ಹಿಂದುಸ್ತಾನೀ ಬ್ರಾಹ್ಮಣನ ಕೈಯಿಂದ ಉಣ್ಣುತ್ತಿದ್ದ, ಎಂದು ನೀ ಮನಸಿ ನೊಳಗೆ ಎಂದುಕೊಳ್ಳುತ್ತಿರಬಹುದು ಆದರೆ ಈ ಮುದುಕನಲ್ಲಿ ಅಂಧ ಶ್ರದ್ಧೆ-ಕುಸಂಸ್ಕಾರ ಇನ್ನೂ ಅಷ್ಟು ನಷ್ಟವಾಗಿಲ್ಲವಮ್ಮಾ ಆ ಸಂಧ್ಯಾ ಗಾಯತ್ರೀಹೀನ ಹಿಂದುಸ್ತಾನೀ 'ಮಹಾರಾಜ'ನ ಅನ್ನ ನನ್ನ ಗಂಟಲೊಳಗೆ ಸತ್ತರೂ ಇಳಿಯಲಾರದು ಇಷ್ಟರೊಳಗಾಗಲೇ ರಾಕ್ಷಸಿಯನ್ನೂ ನಿನ್ನನ್ನೂ ಒಂದೇ ಮಾಡಿಬಿಟ್ಟೆನೆಂದಲ್ಲ ಆದರೆ ನಿನ್ನನ್ನು ನೋಡಿ ನೋಡಿದ ಹಾಗೆಲ್ಲ, ಈ ತಾಯಿ ಅಟ್ಟದ್ದೂ ಅನ್ನಪೂರ್ಣೆಯ ಅನ್ನವೇ ಆಗುವುದೆಂದೇ ಎನಿಸು ತ್ತಿದೆ —ಹಾಂ, ಇನ್ನು ನಿಲ್ಲುವಂತಿಲ್ಲ ಉಳಿದ ಮಾತು ಊಟಕ್ಕೆ ಕೂತಾಗ ಆಡುವ ಆಗಿನ ಮಾತೇ ಎಲ್ಲಕ್ಕಿಂತ ಸತ್ಯವಾದದ್ದು" ಎಂದರು

ರಾಮುಬಾಬು ಹೋಗತೊಡಗುತ್ತಲೇ ಅಚಲೆ ಕಕ್ಕಾವಿಕ್ಕಿಯಾದಳು ಏನು ಹೇಳಬೇಕೆಂಬುದು ನಿಶ್ಚಿತವಿಲ್ಲದೆ ಬಾಯಿಗೆ ಬಂದುದನ್ನು ಆಡಿ ಬಿಟ್ಟಳು "ನನಗೆ ಅಡಿಗೆ ಚೆಲೋ ಬರುವುದಿಲ್ಲ— ನಿಮಗೆ ಸೇರಲಿಕ್ಕಿಲ್ಲ"

ಅವರು ತಿರುಗಿ ನಿಂತು ನಸುನಕ್ಕು "ನೀ ಹೇಳಿದರೆ ನಾ ನಂಬಲೇ ? ಎಂದರು

"ಅಡಿಗೆ ಎಲ್ಲರಿಗೂ ಬರುತ್ತದೆಯೆ ?"

"ನಾ ಹಾಗೆಲ್ಲಂದೆ ?"

ಅಚಲೆ ನಿರುತ್ತರಳಾದಳು ಆ ಮುದುಕನ ಆಚಾರಸಂಸ್ಕಾರಗಳು

ಹೇಳೋ ಇರಲಿ ಕೆಟ್ಟ ಇರಲಿ, ನಿಜವಿರಲಿ ಸುಳ್ಳಿರಲಿ, ಅವರಿಗೆ ಅಡಿಗೆಮಾಡಿ ಹಾಕುವುದು ವಂಚನೆ ಎಂದು ಅವಳ ಭಾವನೆ ಆ ಪಾಪದಿಂದ ಬಿಡುಗಡೆ ಹೊಂದಲಾಗದುದಕ್ಕೆ ಆ ಸಭ್ಯನಾರೀಹೃದಯ ತೊಳಲಾಡುತ್ತಿತ್ತು. ಅವಳ ವಿವರ್ಣಮುಖವನ್ನು ನೋಡಿ ಸುರೇಶ ಆ ಹೃದಯವೇದನೆಯನ್ನು ಅರಿತ ಅವನಿಗೆ ಅಲ್ಲಿ ನಿಂದಿರಲಾಗಲಿಲ್ಲ ಮೋರೆ ತೊಳೆಯುವ ನೆವದಿಂದ ಕಾಲ್ದೆಗೆದ.

"ನಾ ಹೋಗುತ್ತೇನೆ ಹಾಗಾದರೆ" ಎಂದು ರಾಮುಚರಣಬಾಬು ಗಳೂ ಹೊರಟರು ಅಚಲೆ ಪಳಮಾತ್ರ ಹತಬುದ್ಧಳಾಗಿ ನಿಂತಿದ್ದು, ಪ್ರಯಾಸದಿಂದ ಚೇತನ ತಂದುಕೊಂಡು ನುಡಿದಳು "ಒಂದು ಮಾತು ಕೇಳಿರಿಲ್ಲ—"

ಮುದುಕ ತಿರುಗಿ ನೋಡಿದರು ಸುರಮೆ ಏನೋ ಮಾತನಾಡ ಬೇಕೆಂದವಳು ಸುಮ್ಮನೆ ನಿಂತಿದ್ದಳು ಅವರು ನಾಲ್ಕು ಹೆಜ್ಜೆ ಮುಂದಕ್ಕೆ ಬಂದು, "ನಿನಗೆ ಇನ್ನೊಂದು ಮಾತು ಹೇಳುವುದಿದ ತಂಗೀ ನಿಮ್ಮಪ್ಪನಿ ಗಿಂತ ನಾ ಸಣ್ಣವನೇನಲ್ಲ, ಎಂದಬಳಿಕ ನನಗೇಕೆ ನೀ ದೊಡ್ಡಪ್ಪ ಎನ್ನ ಬಾರದು ?" ಎಂದ

ಮುದುಕ ತನ್ನ ಮೇಲೆ ಬಲು ಜೀವ ಎಂಬುದು ಅವಳಿಗೆ ಗೊತ್ತು. ಈ ಮಾತಿನಿಂದ ಅವಳ ಕಣ್ಣಲ್ಲಿ ನೀರೂರಿತು ಅಂತೆಯೆ ಅವಳು ತಲೆಹಾಕಿ ಸಮ್ಮತಿಯಿತ್ತಳು

"ಇನ್ನೇನಾದರೂ ಕೇಳುವುದಿದೆಯೆ ?" ಎಂದು ಕೇಳಿದರು ಅವರು

ಅಚಲೆ ಒಂದು ಕ್ಷಣ ಮೌನವಾಗಿ ನೆಲ ನೋಡುತ್ತ ನಿಂತಳು. ಇದ್ದ ಬಿದ್ದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಉಪಯೋಗಿಸಿದಾಗ ಒಂದು ಮಾತು ಹೊರಟಿತು "ಆದರೆ ನಮ್ಮಪ್ಪ ಬ್ರಾಹ್ಮ!"

ರಾಮುಚರಣ ಬಾಬು ವಿಸ್ಮಯ ಚಕಿತರಾದರು "ನಿಜವೋ, ಏನು ಕಲಕತ್ತೆಯಲ್ಲಿದ್ದು ಫ್ಯಾಶನ್ನಿಗಾಗಿ ನಾಲ್ಕುಜನ ಆಗುತ್ತಾರಲ್ಲ—ಬ್ರಾಹ್ಮ ಸಮಾಜದಲ್ಲಿ ಹಿಂದುಗಳನ್ನು ಬಯ್ಯುವುದು, ಮನೆಗೆ ಬಂದು ಬ್ರಾಹ್ಮರನ್ನು ಬಯ್ಯುವುದು ಮಾಡುತ್ತಾರಲ್ಲ— ಅಂಥವರ ಪೈಕಿಯೋ ? ಹಾಗಿದ್ದರೇನೂ ಅಡ್ಡಿಯಿಲ್ಲ." ಎಂದರು

ಲಜ್ಜೆಯಿಂದ ಅಚಲೆಯ ಮುಖ ಕೆಂಪಾಯಿತು. "ಅಲ್ಲ, ಅವರು

ನಿಜವಾಗಿಯೂ ಬ್ರಾಹ್ಮರು,'' ಎಂದಳು

ಮುದುಕ ಸ್ವಲ್ಪ ಇತ್ತಂಡಕ್ಕೆ ಸಿಕ್ಕಿದರೂ ಮರುಕ್ಷಣವೇ ಹಸನ್ಮುಖ ದಿಂದ ಮಾತನಾಡಿದಳು "ಆಗಲಿ, ಅಪ್ಪ ಬ್ರಾಹ್ಮ ಇರಲೊಲ್ಲನೇಕೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರತು ನೀ ಯಾರೊಡನೆ ಧರ್ಮದ ಪಾಲು ತೆಗೆದುಕೊಂಡಿದ್ದೀಯೋ ಅವನು ಹಿಂದುವೆಂದ ಮೇಲೆ, ಅವನ ಕೊರಳಲ್ಲಿ ಜನಿವಾರವಿದೆಯೆಂದ ಮೇಲೆ, ಅದನ್ನವನು ಅವಮಾನಿಸುವುದಿಲ್ಲವೆಂದ ಮೇಲೆ ತಂದೆಯ ಕರ್ಮ ನಿನಗೆ ಸೋಂಕದು ನೀ ಎಷ್ಟೋ ರಕ್ಕಿಸಬೇಕೆನ್ನು, ಈ ಮುದುಕ ದೊಡ್ಡಪ್ಪ ಮೋಸಹೋಗಲಾರ ನಿನಗಿಂದು ಅಡಿಗೆ ಬಿಟ್ಟಿದ್ದಲ್ಲ " ಎಂದು ಪುನಃ ಹೊರಡಲನುವಾದರು

ಅದನ್ನು ಕಂಡು ಅಚಲೆ ತನ್ನ ದಿಙ್ಮೂಢತೆಯನ್ನು ತಕ್ಷಣ ಕೊಡವಿ ಬಿಟ್ಟು, "ಒಳ್ಳೆಯದು ದೊಡ್ಡಪ್ಪಾ, ನಾ ಬ್ರಾಹ್ಮ ಮಹಿಳೆಯಾದರೆ ನನ್ನ ಕೈಲಿ ಉಣ್ಣುವುದಿಲ್ಲವೆ ? " ಎಂದು ಕೇಳಿದಳು

"ಇಲ್ಲ ಆದರೆ ನೀ ಬ್ರಾಹ್ಮಳಲ್ಲ, ಆಗಲಾರೆ "

"ಇದ್ದದ್ದೇ ಆದರೆ, ಕೇವಲ ಧರ್ಮ-ಮತ ಬೇರೆಯಾದಾಕ್ಷಣಕ್ಕೆ ಅಸ್ಪೃಶ್ಯಳಾಗಿಬಿಡುವೆನೆ ?"

"ಅಸ್ಪೃಶ್ಯಳೇಕೆ ಆಗುತ್ತೀ ತಂಗಿ, ಆಗುವುದಿಲ್ಲ, ನಿನ್ನ ಕೈಲಿ ಉಣ್ಣಲಾರೆ, ಅಷ್ಟೆ "

ಈ ವಿಷಯವಾಗಿ ಹೆಚ್ಚಿಗೆ ತಿಳಿದುಕೊಳ್ಳಬೇಕೆಂದು ಅಚಲೆಗೆನಿಸಿತು "ಏಕೆ? ಜುಗುಪ್ಸೆಯೆ ? " ಎಂದು ಕೇಳಿದಳು

ತಟ್ಟನೆ ಉತ್ತರ ತೋಚದೆ ಮುದುಕ ಹುಳುಹುಳು ನೋಡತೊಡಗಿದರು ಅಚಲೆ ಪೂರಾ ಸಂಕೋಚ ತೊರೆದಿದ್ದಳು "ದೊಡ್ಡಪ್ಪಾ, ನೀವೆಷ್ಟೊಂದು ದಯೆ-ಮಾಯೆ ಉಳ್ಳವರು, ಆದರೆ ನಿಮ್ಮಂಥವರ ಮನಸು ಇಷ್ಟು ಸಣ್ಣದು ಹೇಗೆ ಇರಬಲ್ಲುದೆಂಬುವೇ ತಿಳಿಯಲೊಲ್ಲದು ನೀವು ಮನುಷ್ಯನನ್ನು ಇಷ್ಟೊಂದೇಕೆ ತಿರಸ್ಕರಿಸುವಿರಿ ? " ಎಂದು ಕೇಳಿದಳು

ಮುದುಕ ವ್ಯಾಕುಲರಾಗಿ ಒಮ್ಮೆಲೆ ಕೇಳಿದರು "ನಾ ತಿರಸ್ಕರಿಸುವೆನೆ ? ಯಾರನ್ನಮ್ಮ ? ಎಂದಮ್ಮ ? "

"ಯಾರ ಕೈಯನ್ನ ನಿಮಗಾಗದೆನ್ನುವಿರೋ ಅವರನ್ನು ಅವರೆಂದರೆ ಒಳಗೊಳಗೆ ಹೇಸುವಿರಿ ಬಹುದಿನದ ರೂಢಿಯಿಂದ ಅದು ತಿರಸ್ಕಾರ

ವೆಂಬುದು ಮರೆತೇ ಹೋಗಿದೆ ಆಳುಹೋಳುಗಳ ಮಾತಂತಿರಲಿ, ಅಡಿಗೆ-ಭಟ್ಟನ ಅಡಿಗೆ ಕೂಡ ನಿಷಿದ್ಧವೆನ್ನುವಿರಿ ಇದರಿಂದ ದೇಶಕ್ಕೆ ಎಷ್ಟು ನಷ್ಟ, ಎಷ್ಟು ಅವನತಿ ”

ಅವಳ ಉತ್ತೇಜನವನ್ನೇ ನೋಡುತ್ತ ಮುದುಕ ಸುಮ್ಮನೆ ಕೇಳುತ್ತಿದ್ದರು ಹಠಾತ್ತಾಗಿ ಅವಳ ಮಾತು ನಿಲ್ಲಲು ನಸುನಕ್ಕು ನುಡಿದರು: “ತಂಗೀ, ನಾವು ಯಾರನ್ನೂ ತಿರಸ್ಕರಿಸುವುದಿಲ್ಲ ನೀ ಸಾಹೇಬರ ಹಾಗೆ ಮಾತನಾಡುತ್ತಿದ್ದೀಯಲ್ಲ ಮನುಷ್ಯ ದೇವರಿದ್ದಂತೆ ಎಂಬ ಜ್ಞಾನ ಅವರಿಗೆ ಮಾತ್ರ ವಿಾಸಲಾದದ್ದಲ್ಲ, ನಮಗೂ ಇತ್ತು, ಇದೆ ”

ಕೆಳಗಡೆಯಿಂದ ಕೇಳಬರುತ್ತಿದ್ದ ಅಸ್ಪಷ್ಟ ಕಲಕಲಕ್ಕೆ ಒಂದು ಕ್ಷಣ ಕಿವಿಗೊಟ್ಟು ಮುದುಕ “ಸುರಮಾ, ಊಟವೇ ಒಂದು ದೊಡ್ಡ ವಿಷಯ, ಅದರದೇ ದೊಡ್ಡ ಆಡಂಬರ ಆಗಿರುವವರೊಡನೆ ನಮ್ಮ ಹೊಂದಿಕೆಯಾಗುವುದಿಲ್ಲ ನಮಗೆ ಊಟ ಕಿರುಕುಳ ವಿಷಯ ಏನಾದರಷ್ಟು ಬೇಯಿಸಿಪು ಊಟಕ್ಕೆ ಕುಳಿತಾಗ ಮಾತನಾಡುವಾ— ನಮಗೆ ಯಾರ ಬಗ್ಗೆ ಎಷ್ಟು ತಿರಸ್ಕಾರ, ಅದರಿಂದ ದೇಶಕ್ಕಾಗುವ ಹಾನಿ ಎಷ್ಟು ನೋಡುವಾ —ದಂಗೆ ಹೆಚ್ಚುತ್ತಲಿದೆ—ತಡವಾಯಿತು, ಇನ್ನು ಹೋಗುವೆ” ಎಂದು ನುಡಿದು ಬಡಬಡ ಇಳಿದುಹೋದರು

೩೪

ಸುಮಾರು ಇಳಿಹೊತ್ತಿಗೆ ರಾಮಬಾಬು ಉಂಡು ತೃಪ್ತಿಯ ತೇಗು ತೇಗಿದರು ಅತ್ಯಂತ ಪ್ರಯಾಸದಿಂದ ನಸುನಕ್ಕು ಅಚಲೆ ನುಡಿದಳು: “ಆದರೆ ದೊಡ್ಡಪ್ಪಾ, ನಿಮ್ಮ ಜಾತಿ ಕೆಟ್ಟಿತೆಂದು ಒಂದಿನ ಗೊತ್ತಾದರೆ, ಸಿಟ್ಟಾಗಬಾರದಾಂ!”

ಮುದುಕ ಅಕ್ಕರತೆಯ ಮೆಲುನಗೆಯೊಡನೆ ತಲೆತೂಗುತ್ತ, “ಒಳ್ಳೆಯದು, ಹಾಗೆಯೆ ಆಗಲಮ್ಮಾ” ಎಂದು ನುಡಿದು ಎದ್ದು ಕೈತೊಳೆಯ ಹೋದರು

ಅವರ ಹಾವುಗೆಯ ಶಬ್ದ ಕೇಳುತ್ತಿರುವ ವರೆಗೂ ಅಚಲೆ ಅದನ್ನನು-ಸರಿಸಿಯೇ ನೋಡುತ್ತಲಿದ್ದಳು ಆ ಮೇಲೆ ಆ ಶಬ್ದ ಯಾವಾಗ ನಿಂತಿತು, ಬಾಹ್ಯಪ್ರಪಂಚ ತನ್ನ ಚೇತನದಿಂದ ಯಾವಾಗ ವಿಲುಪ್ತವಾಗಿ ತನ್ನನ್ನು ಕಲ್ಲಾಗಿಸಿತು ಎಂಬುದವಳಿಗೆ ಗೊತ್ತೇ ಆಗಲಿಲ್ಲ.

ಏನೋ ಕೆಲಸಕ್ಕೆ ಬಂದ ದಾಸಿ ಅಚಲೆಯ ಆ ಸ್ಥಿತಿಯನ್ನು ಕಂಡು ಅಚ್ಚರಿಗೊಂಡು, “ಈವೊತ್ತೇನು ಊಟಗೀಟ ಬೇಡವೇ ಬಹುರಾಣಿ, ಯೋಚಿಸುತ್ತ ಕೂತುಬಿಟ್ಟಿರಿ ?” ಎಂದು ಎಚ್ಚರಿಸಿದಳು. ಆಗವಳು ಕಣ್ತೆರೆದು ನೋಡಿದಳು ಚಳಿಗಾಲದ ಸಂಜೆಯಾಗಲೇ ಸನ್ನಿಹಿತವಾಗಿತ್ತು. ನಾಚಿಕೆ ಆದಹಾಗಾಗಿ ಅಚಲೆ ಎದ್ದುನಿಂತು ನುಡಿದಳು: “ಈವೊತ್ತು ಹೊತ್ತುಮುಳುಗಿಯೇ ಉಣ್ಣಬೇಕೆಂದು ಮಾಡಿದ್ದೇನೆ ಲಾಲೂನತಾಯಿ. ಅಷ್ಟು ಹಸಿವಿಲ್ಲ”

“ದೊಡ್ಡ ಬಾಬುಗಳದಾದ ಕೂಡಲೆ ಉಣ್ಣುತ್ತೇನೆಂದು ಇದೇ ಈಗ ಹೇಳಿದ್ದಿರಲ್ಲ, ಬಹುರಾಣಿ ?”

“ಇಲ್ಲ, ಒಮ್ಮೆಲೆ ರಾತ್ರಿಯೇ ಉಣ್ಣುವೆ” ಎಂದು ನುಡಿದು, ಅಚಲೆ ಹೆಚ್ಚಿನ ಮಾತಿಗೆ ಆಸ್ಪದ ಕೊಡದೆ ಅಟ್ಟದ ಮೇಲೆ ಹೊರಟುಹೋದಳು.

ಸ್ವಲ್ಪ ಪುರಸತ್ತು ಸಿಕ್ಕರಾಯಿತು—ಅಚಲೆ ಅಟ್ಟದ ಮೊಗಸಾಲೆಯಲ್ಲಿ ಕಟಕಟೆಯ ಹತ್ತಿರ ಕುರ್ಚಿ ಎಳೆದುಕೊಂಡು ನದಿಯ ಕಡೆ ನೋಡುತ್ತ ಕುಳಿತುಕೊಳ್ಳುತ್ತಿದ್ದಳು ಅಂದು ರಾತ್ರಿಯೂ ಕುಳಿತಳು ಹಠಾತ್ ರಾಮಬಾಬುಗಳ ಮೊಚ್ಚೆಯ ಸದ್ದು ಕೇಳಿ ತಿರುಗಿ ನೋಡಿದಳು ಅವರು ಹುಕ್ಕಾ ಮೂಲೆಯಲ್ಲಿಟ್ಟು ಇನ್ನೊಂದು ಕುರ್ಚಿ ಎಳೆದುಕೊಂಡು ಕುಳಿತು ಮುಗುಳುನಕ್ಕು ನುಡಿದರು “ಅದೇ ವಿಷಯ ಸ್ವಲ್ಪ ಚರ್ಚಿಸ ಬಂದೆ ಕುರಮಾ,— ನಿಮ್ಮ ಬ್ರಹ್ಮಜ್ಞಾನಿ ತಂದೆಯ ಮಾತು ಸರಿಯೋ ಈ ದೊಡ್ಡಪ್ಪನ ಮಾತು ಸರಿಯೋ ?”

ಅದು ಜಾತಿಭೇದದ ವಿಷಯ ಎಂಬುದನ್ನು ಅಚಲೆ ಅರಿತಳು ಶಾಂತಸ್ವರದಿಂದ, “ತರ್ಕಶಾಸ್ತ್ರ ನಾನೇನು ಬಲ್ಲೆ ದೊಡ್ಡಪ್ಪ ?” ಎಂದಳು.

“ಅಬ್ಬಬ್ಬಾ, ಸಾಕು ! ನೀ ಸಾಮಾನ್ಯರ ಮಗಳೇನಮ್ಮಾ ? ಇರಲಿ. ನಿನ್ನ ಮಾತೆಲ್ಲ ಸುಳ್ಳೆಂತಲೇ ನಾ ಉಳಿದುಕೊಂಡೆ, ಇಲ್ಲದಿದ್ದರೆ ಆಗ ನಾ ಸೋತು ಹೋದವನೇ !”

ಅಚಲೆಯ ಮನಃಸ್ಥಿತಿ ಯಾವ ವಿಷಯದಲ್ಲಿಯೂ ಮಾತನಾಡುವ ಹಾಗಿರಲಿಲ್ಲ ಈ ತರ್ಕಯುದ್ಧದಿಂದ ಜಾರಿಕೊಳ್ಳಲು ಅನುವು ಸಿಕ್ಕಿತೆಂದು-ಕೊಂಡು ಅವಳೆಂದಳು! “ಹಾಗಿದ್ದರೆ ಇನ್ನೇತರ ತರ್ಕ ದೊಡ್ಡಪ್ಪ ? ಸೋತವರನ್ನು ಮತ್ತೆ ಸೋಲಿಸುವುದರಲ್ಲಿ ಏನರ್ಥ ?”

ರಾಮುಬಾಬು ತಟ್ಟನೆ ಏನಾದರೊಂದು ಉತ್ತರ ಕೊಡಲಿಲ್ಲ ಅವಳ ಆ ಅವಸನ್ನ ಕಂಠಸ್ವರ ಅವರ ಲಕ್ಷ್ಯಕ್ಕೆ ಬಾರದಿರಲಿಲ್ಲ ಅವಳ ಪಾಂಡುರ ಮುಖದಿಂದ, ಹುಡುಗಿಗೆ ಸೊಗಸಿಲ್ಲ, ಒಳಗೆ ಸುಣ್ಣಾದ ಭಟ್ಟಿ ಉರಿಯುತ್ತಿದೆ ಎಂಬುದನ್ನು ಭಾವಿಸಿಕೊಂಡರು ಕ್ಷಣ ಹೊತ್ತು ಮೌನವಾಗಿದ್ದು ನಗಲು ಹವಣಿಸಿ ಸ್ನೇಹದಿಂದ, "ಇಲ್ಲ ತಂಗೀ, ಮನಸು ಕಿಂಕರವಮಾಡಿಕೊಳ್ಳ ಬೇಡ ಮುದುಕ ಮನುಷ್ಯ, ಬಡಬಡಿಸುವ ಹುಚ್ಚು, ಒಬ್ಬನೇ ಕೂತು ಕೂತು ಬೇಸರವಾಗಿತ್ತು, ಸುಳ್ಳುಸೊಟ್ಟ ಮಾತನಾಡಿ ಹುಡುಗಿಯನ್ನು ರೇಗಿಸಿ ನಗೆಯಾಡುವ ಎಂದು ಬಂದೆ, ಆದರೆ ಹೊಗೆಯಾಡಿತು!" ಎಂದು ಬಗ್ಗಿ ಹುಕ್ಕಕ್ಕೆ ಕೈ ನೀಡಿದರು

ಇನ್ನವರು ಹೋಗುವರೆಂಬುದು ಅಚಲೆಗೆ ತಿಳಿಯಿತು ಕೆಳಗೆ ಅವರಿಗೊಬ್ಬರಿಗೇ ಹೊತ್ತುಗಳೆಯುವುದು ಬಹಳ ಕಷ್ಟವಾಗುವುದೆಂಬುದನ್ನು ನೆನೆದು ಅವಳಿಗೆ ವ್ಯಥೆಯಾಯಿತು ಅವಳು ಚಟ್ಟನೆದ್ದು ಹುಕ್ಕವನ್ನು ಅವರ ಕೈಗೆ ಕೊಡುತ್ತ, "ಜೀವ ಬೇಡಿದಷ್ಟು ತಂಬಾಕ ಇಲ್ಲಿಯೇ ಕೂತು ಸೇದಿರಿ ನಾ ನಿಮ್ಮನ್ನು ಬಿಡುವುದಿಲ್ಲ" ಎಂದಳು

ಮುದುಕ ನಗುತ್ತ, "ಅಯ್ಯೋ, ಇಷ್ಟು ಮುಕ್ತದ್ವಾರ ಕೊಡಬೇಡ ತಂಗೀ, ಹಿಂದುಗಡೆ ಸಹಿಸುವುದಾಗಲಿಲ್ಲ ನಾ ಮೌನವಾಗಿ ತಂಬಾಕು ಸೇದುವುದು ಹೇಗಿರುತ್ತದೆಂಬುದು ನಿನಗೆ ಗೊತ್ತಿಲ್ಲ ಅದಕ್ಕಿಂತ ನನಗೆ ಸ್ವಲ್ಪ ಬಡಬಡಿಸಲಿಕ್ಕೇ—"

"ಉಸಿರು ತಡೆಹಿಡಿಯುವುದಾಗುವುದಿಲ್ಲವಲ್ಲವೇ ದೊಡ್ಡಪ್ಪಾ' ಸರಿ, ಆಗಲಿ ಯಾವ ವಿಷಯ ಬಡಬಡಿಸುವಿರಿ?"

ರಾಮುಬಾಬು ಬಾಯಿಂದ ಹೊಗೆಮೋಡ ಹಾರಿಸಿ "ಈಗ ನನ್ನನ್ನು ತೊಡಕಿಗೆ ಸಿಕ್ಕಿಸಿದೆ ತಂಗೀ. ಈ ಪ್ರಶ್ನೆಗೆ ಎಂಥೆಂಥ ವಕ್ತಾರರ ಬಾಯಿಯೂ ಕಟ್ಟುವುದು, ನನ್ನ ಪಾಡೇನು?" ಎಂದರು

"ಒಳ್ಳೆಯದು, ಯಾರ ಕೈಯಿಂದ ಈವೊತ್ತು ಒತ್ತಾಯದಿಂದ ಮಾಡಿಸಿಕೊಂಡು ಉಂಡಿರೋ ಅಕೆಗಿಂತ ನೀಚರು, ತುಚ್ಛರು ಜಗತ್ತಿನೊಳಗೇ ಇಲ್ಲ ಎಂದು ಕಂಡುಬಂದರೆ ಏನು ಮಾಡುವಿರಿ? ಅದರ ಪ್ರಾಯಶ್ಚಿತ್ತದ ವಿಧಿವಿಧಾನ ಶಾಸ್ತ್ರದಲ್ಲಿ ಕೂಡ ಇದ್ದಿದ್ದಿಲ್ಲವೆಂದರೆ!"

"ತಂಟೆಯೇ ಮುಗಿಯಿತು. ಪ್ರಾಯಶ್ಚಿತ್ತವೇ ಬೇಕಿಲ್ಲ"

"ಎಂದರೆ ಆವಾಗ ನನ್ನ ಬಗ್ಗೆ ಯಾವ ತುಚ್ಛತೆಯೂ ಉಂಟಾಗದಷ್ಟೆ?"

"ಆವಾಗ ಎಂದರೆ?"

"ನಾ ಜಾತಿಹೀನಳೆಂದು ತಿಳಿದಾಗ?"

ಬಾಯಿಂದ ಹುಕ್ಕ ತೆಗೆದು ರಾಮಬಾಬು ಅವಳ ಮುಖ ನೋಡುತ್ತ ನಿದಾನವಾಗಿ ನುಡಿದರು "ನಿಮ್ಮ ಮಾತೇ ನನಗೆ ಅರ್ಥವಾಗುವುದಿಲ್ಲ 'ನಿಮ್ಮ' ಎಂದೇಕೆ ಎನ್ನುತ್ತಿದ್ದೇನೆ ಗೊತ್ತೆ? ನನ್ನ ಮಗನ ಬಾಯಿಂದಲೂ ಇದೇ ವಿಚಾರ ಕೇಳಿದ್ದೇನೆ ಅವನೂ 'ಈ ನಿಷಿದ್ಧತೆ ಅಸ್ಪೃಶ್ಯತೆಗಳ ಮೂಲಕವೇ ದೇಶ ಸರ್ವನಾಶದ ಕಡೆ ಹೋಗುತ್ತಿದೆ, ಏಕೆಂದರೆ ಇದರ ಬುಡದಲ್ಲಿ ತಿರಸ್ಕಾರವಿದೆ, ತಿರಸ್ಕಾರದಿಂದ ಯಾವ ಒಳ್ಳೆಯ ಫಲವೂ ಸಿಕ್ಕದು,' ಎಂದೆನ್ನುತ್ತಾನೆ"

ಈ ತರದ ವಿಚಾರಕ್ಕೆ ಈ ಮನೆಯೊಳಗೆ ಪ್ರವೇಶವಿರುವುದನ್ನು ಕೇಳಿ ಅಚಲೆಗೆ ಆಶ್ಚರ್ಯವಾಯಿತು "ಏಕೆ, ಅದು ಸುಳ್ಳೆನ್ನುತ್ತೀರಾ?" ಎಂದು ಕೇಳಿದಳು

"ಅದು ಸುಳ್ಳೋ ಏನೋ ನಾ ಹೇಳಲಾರೆ, ಸತ್ಯ ಮಾತ್ರ ಅಲ್ಲ. ಶಾಸ್ತ್ರದಂತೆ ನಡೆಯಬೇಕು ಅಷ್ಟೆ ಇನ್ನೂ ಸರಿಯಾಗಿ ನಡೆಯುವವರು— ನಮ್ಮ ಗುರುದೇವರು ತಮ್ಮಡಿಗೆ ತಾವೇ ಮಾಡಿಕೊಳ್ಳುವರು, ಮಗಳ ಕೈಲೂ ಉಣ್ಣುವುದಿಲ್ಲ ಎಂದರೆ ಅವರಿಗೆ ಒಬ್ಬಳೇ ಒಬ್ಬ ಮಗಳ ಬಗ್ಗೆಯೂ ತಿರಸ್ಕಾರ ಎಂದು ತೀರ್ಮಾನಿಸುವುದೇ?"

ಅಚಲೆ ಏನು ಹೇಳುವುದಕ್ಕೂ ತೋಚದೆ ಸುಮ್ಮನಿದ್ದಳು ಮುದುಕ ಮತ್ತೊಂದು ಜುರಿ ಎಳೆದು ಮಾತನಾಡಿದರು "ಹರಯದಲ್ಲಿ ನಾ ಬಹಳ ದೇಶ ತಿರುಗಿದೆ ಎಷ್ಟು ಕಾಡು ಬೆಟ್ಟ, ಎಷ್ಟು ಕೆರೆ-ತೊರೆ, ಎಷ್ಟು ತರದ ಮಂದಿ, ಎಷ್ಟು ತೆರದ ನಡೆನಡಾವಳಿ— ಅವುಗಳ ಹೆಸರೂ ನಿಮಗೆ ಗೊತ್ತಾಗಲಿಕ್ಕಿಲ್ಲ ಕೆಲವು ಕಡೆ ಭೋಜನ ಸ್ಪರ್ಶಗಳ ವಿಚಾರವುಂಟು, ಕೆಲವು ಕಡೆ ಅದರ ಗಂಧವೂ ಇಲ್ಲ, ಆದರೂ ಅವರು ಎಂದಿನಿಂದಲೂ ಹಾಗೇ ಅಸಭ್ಯರೇ ಕೀಳರೇ—" ಸುಟ್ಟು ಹೋದ ಹುಕ್ಕವನ್ನು ಮತ್ತೆ ಒಂದೆರಡು ಬಾರಿ ವ್ಯರ್ಥವಾಗಿ ಎಳೆದು ಮೂಲೆಯಲ್ಲಿಟ್ಟರು ಅಚಲೆ ಸುಮ್ಮನೆಯೇ ಕುಳಿತಿದ್ದಳು ತುಸು ತಡೆದು ನೀಟಾಗಿ ಕುಳಿತು ರಾಮಬಾಬು ಮತ್ತೆಂದರು. "ಬೀಜಮಾತು ಹೇಳಲಿಯಾ ಸುರಮಾ? ನೀವು ಸಾಹೇಬ

ರಿಂದ ಕಲ್ತವರು ಅವರು ಮೇಲು, ಅವರು ಅರಸರು, ಅವರಲ್ಲಿ ಕಾಲು ಮೇಲಾಗಿ ಕೈಯಿಂದ ನಡೆಯುವ ಪದ್ಧತಿ ಇದ್ದಿದ್ದರೆ 'ಹಾಗೆ ನಡೆಯಲು ಕಲಿಯದಿದ್ದರೆ ಉನ್ನತಿಯ ಆಸೆಯೇ ಬೇಡ' ಎಂದು ನೀವೆನ್ನುವಿರ "

ಬಂಗಾಲಿ ದೈನಿಕಗಳಲ್ಲಿ ಇಂಥ ಯುಕ್ತಿವಾದಗಳನ್ನು ಅಚಲೆ ಎಷ್ಟೋ ಓದಿದ್ದಳು ಆದುದರಿಂದ ಮಾತನಾಡದೆ ನಕ್ಕಳು ಮಾತ್ರ ಮುದುಕ ಅದನ್ನು ಕಂಡೂ ಕಾಣದಂತೆ ತಮ್ಮ ಮಾತು ತಾವು ನಡೆಸಿದರು "ಶ್ರೀಧಾಮ-ಶ್ರೀಕ್ಷೇತ್ರಗಳಿಗೆ ಹೋದಾಗ ತಿಳಿದು-ತಿಳಿಯದೆ ಎಷ್ಟೋ ಜನರೊಡನೆ ಸೇರಬೇಕಾಯಿತು ಅಲ್ಲಿ ಮಡಿಮೈಲಿಗೆ ಇಲ್ಲ, ಆ ವಿಚಾರವೇ ಬರುವುದಿಲ್ಲ ಒಂದುವೇಳೆ ಮಡಿಮೈಲಿಗೆಯ ಮೂಲ ತಿರಸ್ಕಾರವಾಗಿದ್ದರೆ ಹಾಗೆ ಸೇರುವುದು ಸಹಜವೆ? ನಾ ಯಾರ ಕೈಲೂ ಉಣ್ಣುವುದಿಲ್ಲ ವೆಂದಿಟ್ಟುಕೋ, ಆದರೆ ದೀನದುಃಖಿಗಳ ಬಗ್ಗೆ ನನ್ನಲ್ಲಿ ತಿರಸ್ಕಾರವುಂಟೆ?–"

"ಛೆ ಛೆ, ನಮಗೇನು ಗೊತ್ತಿಲ್ಲವೆ? ನಿಮ್ಮಷ್ಟು ದಯಾವಂತರು ಯಾರಿದ್ದಾರೆ ದೊಡ್ಡಪ್ಪ?"

"ದಯೆ ಅಲ್ಲ ತಂಗೀ ದಯೆಯಲ್ಲ, ಪ್ರೀತಿ ಅವರನ್ನು ನಾ ಪ್ರೀತಿಸುವೆ ! ಯಾವ ಜಾತಿಯವನೇ ಆಗಲಿ, ಯಾವ ಮನುಷ್ಯನೇ ಆಗಲಿ ಹೀನದೆಸೆಗಿಳಿದನೆಂದರೆ, ಎಲ್ಲ ತಪ್ಪನ್ನೂ ಕ್ಷುದ್ರವಸ್ತುವಿನಮೇಲೆಯೇ ಹಾಕಿ ಸಮಾಧಾನಹಚ್ಚಿಕೊಳ್ಳುತ್ತಾನೆ, ಆ ಸಹಜವಸ್ತುವನ್ನು ಸಂಬಾಳಿಸಿ ಕೊಂಡರಾಯಿತು, ಒಂದು ರಾತ್ರಿಯೊಳಗೇ ತಾನು ದೊಡ್ಡವನಾಗುತ್ತಾ ನೆಂದು ಭಾವಿಸುತ್ತಾನೆ ನಾವೂ ಅಷ್ಟೇ ಆದರೆ—"

ಸೋಪಾನದಿಂದ ಮೆಟ್ಟಿನ ಸದ್ದು ಕೇಳಿಸಿತು ಮೋರೆ ಎತ್ತಿ ನೋಡಲಾಗಿ ಸುರೇಶ "ಏನು ಸುರೇಶಬಾಬೂ, ನೀವೂ ಹಿಂದು ನಮ್ಮ ಜಾತಿಭೇದವನ್ನು ಒಪ್ಪುವೆಯೋ?" ಎಂದು ಮುದುಕ ಕೇಳಿದರು

ಸುರೇಶ ತಬ್ಬಿಬ್ಬಾದ ಏನೀ ಪ್ರಶ್ನೆ! ಇವರು ಯಾವ ಕಳ್ಳುಸುಕಿನ ಹಾದಿಯಲ್ಲಿ ನಡೆದಿದ್ದಾರೋ, ಅದರ ನಿರ್ದೇಶವಿಲ್ಲದೆ ಗಸಕ್ಕನೆ ಕಾಲಿಟ್ಟರೆ ಯಾವ ರಸಾತಳಕ್ಕೆ ಹೋಗುವೆನೋ ಎಂಬಂತಾಯಿತವನಿಗೆ ಸಂದರ್ಭ ತಿಳಿದುಕೊಳ್ಳಲು ಅಚಲೆಯ ಮುಖದ ಕಡೆ ನೋಡಿದ ಅದರರ್ದು ಕಾಣಲಿಲ್ಲ ಹುಸಿನಕ್ಕು ಅನುಮಾನಸ್ವರದಿಂದ ಅವನೆಂದ "ನಾವೇನಿದ್ದೇ ವೆಂಬುದು ನಿಮಗೆ ಗೊತ್ತೇ ಇದೆ"

“ಗೊತ್ತಿದೆ ಎಂದೇ ನನ್ನ ಭಾವನೆ ಆದರೆ ನಿನ್ನ ಗೃಹಿಣಿ ಒಮ್ಮೆಲೆ ಅದನ್ನು ಬುಡಮೇಲು ಮಾಡಬೇಕೆನ್ನುತ್ತಾಳೆ ಜಾತಿಭೇದ ಮಹದನ್ಯಾಯ, ಸರ್ವನಾಶಕಾರಿ, ಅದು ತನಗೆ ಮಾನ್ಯವಿಲ್ಲ ಎಂದೆನ್ನುತ್ತಾಳೆ ಮ್ಲೇಚ್ಛರಲ್ಲಿ ಉಣ್ಣುವುದಕ್ಕೂ ಅಡ್ಡಿಯಿಲ್ಲವಂತೆ, ತಂದೆಯಿಂದ ಚಿಕ್ಕಂದಿನಲ್ಲಿ ಇದೇ ಸಂಸ್ಕಾರ ದೂರೆತಿದೆಯಂತೆ ಆದುದರಿಂದ ಇವಳ ಕೈಲಿ ಉಂಡುದಕ್ಕೆ ನನ್ನ ಜಾತಿ ಹೋಯಿತೋ ಹೇಗೆ? ಪ್ರಾಯಶ್ಚಿತ್ತ ತೆಗೆದುಕೊಳ್ಳಬೇಕೋ ಹೇಗೆ? ಇಷ್ಟೊತ್ತನಕ ಇದೇ ಮಾತಾಯಿತು ನೀ ಏನೆನ್ನುತ್ತೀ?”

ಅಚಲೆಯ ಪ್ರಕೃತಿ ಸುರೇಶನಿಗೆ ಅರಿಯದುದಲ್ಲ ಅಲ್ಲಿ ಯಾವಾಗಲೂ ಕ್ರಾಂತಿಯ ಕಿಚ್ಚು ಹೊಗೆಯಾಡುತ್ತಿರುವುದೆಂಬುದನ್ನೂ ಆತ ಬಲ್ಲ ಆದರೆ ಆ ಕಿಚ್ಚು ಈವೊತ್ತು ಏತರಿಂದ ಹೊತ್ತಿತು, ಎಲ್ಲಿಯವರೆಗೆ ಹಬ್ಬಿದೆ ಎಂಬುದನ್ನು ಅನುಮಾನಿಸಲಾಗದೆ ಅವನು ಆಪ್ರತಿಭನಾದ ತುಸ ಹೊತ್ತಿನಲ್ಲಿ ಸಾವರಿಸಿಕೊಂಡು ಮತ್ತೆ ಮೊದಲಿನಂತೆ ನಗಲು ಯತ್ನಿಸಿದ ಸಫಲವಾಗಲಿಲ್ಲ ಮುಖ ವಿಕಾರವಾಯಿತು ಅಷ್ಟೆ “ಅವಳು ಸುಮ್ಮನೆ ಚೇಷ್ಟೆ ಮಾಡುತ್ತಾಳೆ ನಿಮಗೆ” ಎಂದ

ರಾಮಬಾಬು ಗಂಭೀರರಾಗಿ ನುಡಿದರು “ಹಾಗೆ ಭಾವಿಸಲು ನಾನೂ ಸಿದ್ಧನಿದ್ದೆ ಆದರೆ ಪತಿಯ ಹಿತಕ್ಕಾಗಿಯೂ ಹಿಂದೂ ಮನೆತನದ ಹುಡುಗಿ ತನ್ನ ಕರ್ತವ್ಯ ಮಾಡಲೊಪ್ಪಲಿಲ್ಲ— ತುಲಸಿ ಪೂಜೆಯ ದಿನ ಉಪವಾಸ ಮಾಡಲಿಲ್ಲ— ಇದಕ್ಕೂ ಚೇಷ್ಟೆ ಎಂದರೆ ಒಂದಿಷ್ಟು ಕಠಿನ ಚೇಷ್ಟೆಯೇ ಸೈ ಅದಿರಲಿ ಸುರೇಶಬಾಬೂ, ಮದುವೆಯಾದರೂ ನಿಮ್ಮದು ಹಿಂದು ಮತದಂತಾಗಿದೆಯಷ್ಟೆ?”

“ಹಾಂ”

ಮುದುಕ ಮೆಲುನಗೆ ನಗತೊಡಗಿದರು “ಅದನ್ನು ನಾ ಬಲ್ಲೆ”ಎಂದು ಅಚಲೆಯ ಕಡೆ ನೋಡಿ, “ನಿನಗಿನ್ನೂ ಹೇಳಬೇಕಾದ್ದು ಬಹಳವಿದೆ ಆದರೂ ತಂಗೀ, ನಿಮ್ಮಪ್ಪ ಬ್ರಾಹ್ಮನಾದ ಮಾತ್ರಕ್ಕೆ ನನಗೆ ದುಃಖವಿಲ್ಲ ಇಂಥ ಬ್ರಾಹ್ಮರನ್ನು ನಾ ಬಹಳ ನೋಡಿದ್ದೇನೆ ಸಮಾಜಕ್ಕೆ ಹೋದಾಗ ಕಣ್ಮುಚ್ಚಿ ಗದ್ಗದಕಂಠರಾಗುವರು, ಅಲ್ಪ ಸ್ವಲ್ಪ ಅನಾಚಾರವನ್ನೂ ಮಾಡುವರು, ಆದರೆ ಮಗಳ ಮದುವೆಯ ವಿಷಯದಲ್ಲಿ ಹಾದಿ ತಪ್ಪುವುದಿಲ್ಲ. ಇರಲಿ ಅಂತೂ ಒಂದು ಯೋಚನೆ ತಪ್ಪಿದಂತಾಯಿತು” ಎಂದರು.

ಅವರಿಗಿಂತ ಹೆಚ್ಚಾಗಿ ಸುರೇಶನ ಯೋಚನೆಯೇ ದೂರಾಯಿತು. ಅವನು ತತ್‌ಕ್ಷಣ ಅವರ ದನಿಗೆ ದನಿಗೂಡಿಸಿದ "ಸರಿಯಾಗಿ ಹೇಳಿದಿರಿ ರಾಮುಬಾಬೂ, ಈಗ ಇಂಥ ಜನವೇ ಹೆಚ್ಚು ಅವರು—"

ನಡುವೆಯೇ ಅಚಲೆಯ ತೀಕ್ಷ್ಣ ಸ್ವರ ಗರ್ಜಿಸಿತು ಅವಳು ತೀವ್ರ ದೃಷ್ಟಿಯಿಂದ ಸುರೇಶನನ್ನು ದಿಟ್ಟಿಸುತ್ತ, "ಇಷ್ಟು ಮಾಡಿದ್ದು ಸಾಲದೆ ಇನ್ನೂ ಅಪರಾಧ ಮಾಡಲು ನಾಚಿಕೆಯಾಗುವುದಿಲ್ಲವೆ? ಅದೂ ನನ್ನೆದುರಿಗೇ! ಇದೆಲ್ಲ ಸುಳ್ಳು ಬಲ್ಲಿರಾ? ಅಪ್ಪ ಮನಸಾ ಯಥಾರ್ಥ ಬ್ರಾಹ್ಮ, ಠಕ್ಕನಲ್ಲ ಬಲ್ಲಿರಾ? ಆತ—" ಎಂದೆನ್ನುತ್ತಿನ್ನುತ್ತ ಚೌಕಿಯಿಂದೆದ್ದು ನಿಂತಳು

ಸುರೇಶ ಮೊದಲು ಕಕ್ಕಾವಿಕ್ಕಿಯಾದ. ಆದರೆ ಹೊರಳಿ ನೋಡಿದಾಗ ಮುದುಕ ಅಚ್ಚರಿಯಿಂದ ಕಣ್ಣು ಬಿಟ್ಟುಕೊಂಡಿರುವುದನ್ನು ಕಂಡು ಬಹುಶಃ ಅವನೂ ಉರಿದೆದ್ದಿರಬೇಕು "ಸುಳ್ಳು ಯಾರದು? ಹಿಂದೂಗೆ ಮಗಳನ್ನು ಕೊಡಲು ಒಪ್ಪಲಿಲ್ಲವೆ? ನಿಜ ಹೇಳು!"

ಅಚಲೆ ಮುಹೂರ್ತಕಾಲ ನಿಃಶಬ್ದವಾಗಿದ್ದು ಆ ಮೇಲೆ ನಿದಾನವಾಗಿ ನುಡಿದಳು "ಅದನ್ನು ನನ್ನ ಏಕೆ ಕೇಳುತ್ತೀರಿ? ಅದರ ಉದ್ದೇಶ ಎಲ್ಲರಿಗಿಂತ ನಿಮಗೇ ಹೆಚ್ಚು ಗೊತ್ತಿದೆಯಲ್ಲವೆ? ನಮ್ಮಪ್ಪ ಹೇಗ, ನಾ ಹೇಗೆ ಎಲ್ಲವನ್ನೂ ಬಲ್ಲಿರಿ. ಆದರೆ ಈ ವಿಷಯ ನಿಮ್ಮೊಡನೆ ಮಾತನಾಡಲು ನನ್ನ ಮನಸಿಲ್ಲ, ನಾಚಿಕಯೂ ಆಗುತ್ತದೆ ಹೇಗೆ ಬೇಕು ಹಾಗೆ ಹುಟ್ಟಿಸಿಕೊಂಡು ಹೇಳಿರಿ ನಾ ಕೇಳಲಾರೆ ಹೇಳಿರಿ, ನಾ ಹೊರಟ" ಎಂದು ದ್ರುತಗತಿಯಿಂದ ಹೋಗಿ ಪಕ್ಕದ ಕೋಣೆ ಹೊಕ್ಕಳು

ತುಸ ಹೊತ್ತು ಇಬ್ಬರೂ ಕಲ್ಲಿನಂತೆ ಮಿಸುಕದೆ ಕುಳಿತಿದ್ದರು ರಾಮುಬಾಬು ವಿಮನಸ್ಕತೆಯಿಂದ ಹುಕ್ಕ ತೆಗೆದುಕೊಳ್ಳಲು ಚಾಚಿದ ಕೈಯನ್ನು ಹಾಗೆಯೆ ಹಿಂತೆಗೆದುಕೊಂಡು, ಮೈಮುರಿದು ಕುಳಿತು, ಕೆಮ್ಮಿ ಕೇಕರಿಸಿ ಕೊರಳು ಸಮಮಾಡಿಕೊಂಡು "ನಿನ್ನ ಮೈಯೊಳಗೆ ಈಗ ಹೇಗಿದೆ ಸುರೇಶ?" ಎಂದು ಕೇಳಿದರು

ಸುರೇಶನಿಗೆ ಪರಿವೆದಪ್ಪಿತ್ತು ಬೆಚ್ಚಿ ಬಿದ್ದು "ಚೆನ್ನಾಗಿದೆ" ಎಂದು— ನಿಜಸಂಗತಿ ನೆನಪಾಯಿತೇನೋ— ಮತ್ತೆ ಹೇಳಿದ "ಎದೆಯೊಳಗೆ ಸ್ವಲ್ಪ ನೋವಿದೆ ನಿನ್ನೆಯಿಂದ ಸ್ವಲ್ಪ ಹೆಚ್ಚೂ ಆಗಿದೆಯೋ ಏನೋ—"

"ಎಂದಮೇಲೆ ..ನೇ ನೋಡು ಇಷ್ಟು ರಾತ್ರಿಯಲ್ಲಿ ಇಂಥ ತಂಡಿ

ಯಲ್ಲಿ ಹೊರಗೆ ಅಡ್ಡಾಡುವುದು ಒಳ್ಳೆಯದೆ ? ”

“ ಬಹಳ ಅಡ್ಡಾಡಿಲ್ಲ ರಾಮುಬಾಬು. ಆ ಮನೆಗೋಸುಗ ಎರಡು ಸಾವಿರ ಸಂಚಕಾರ ಕೊಟ್ಟು ಬಂದೆ ”

ರಾಮುಬಾಬು ಆಶ್ಚರ್ಯವನ್ನು ತೋರ್ಪಡಿಸಿ, “ ಹೊಳೆದಂಡೆಯ ಮನೆ ಚೆಲೋದೆ ಆದರೆ ನನ್ನ ಮೊದಲೇ ಕೇಳಿದ್ದರೆ ಬೇಡವೆನ್ನುತ್ತಿದ್ದೆ. ಆವೊತ್ತು ಮಾತನಾಡುವಾಗ ಸುರಮಾಕ್ಕಗೆ ಅಲ್ಲಿರುವ ಮನಸ್ಸಿಲ್ಲವೆಂದು ತೋರಿತು ” ಎಂದು ನಗುತ್ತ ರಾಮುಬಾಬು ಮತ್ತೆಂದರು “ ಆಕೆಯ ಅಭಿಪ್ರಾಯ ಕೇಳಿದೆಯೋ, ಏನು ಬರೀ ನಿನ್ನಿಚ್ಛೆಯಿಂದಲೇ ಕೊಂಡೆಯೋ ? ”

ಸುರೇಶ ಇದಕ್ಕೆ ನೇರವಾಗಿ ಉತ್ತರ ಕೊಡದೆ “ ಮನಸಿಲ್ಲದಿರುವುದಕ್ಕೆ ಅಂಥದೇನು ಕಾರಣ ಕಾಣುವುದಿಲ್ಲ ಅಲ್ಲದೆ ಅಗತ್ಯದ ಸಾಮಾನು ಸರಂಜಾಮುಗಳಿಗಾಗಿ ಕಲಕತ್ತೆಗೆ ಬರೆದೂ ಆಗಿದೆ ನಾಳೆ ನಾಡದನೊಳಗೇ ಬಂದು ಬೀಳಬಹುದು, ” ಎಂದ

ರಾಮುಬಾಬು ಕೆಲಹೊತ್ತು ಮೌನವಾಗಿದ್ದು ಏನೋ ವಿಚಾರದಿಂದ, “ ತಂಗೀ ಸುರಮಾ, ” ಎಂದು ಕೂಗಿದರು ಅಚಲೆ ಓಗೊಡಲಿಲ್ಲ ನೀರವವಾಗಿ ಬಂದು ತನ್ನ ಚೌಕಿಯಲ್ಲಿ ಕುಳಿತಳು. “ ತಂಗೀ, ನಿನ್ನ ಗಂಡ ನಮ್ಮ ದೇಶದಲ್ಲಿಯೇ ಒಂದು ದೊಡ್ಡ ಮನೆ ಕೊಂಡಿದ್ದಾನೆ ಇನ್ನು ಈ ಮುದುಕ ದೊಡ್ಡಪ್ಪನನ್ನು ಬಿಟ್ಟು ನೀ ಹೋಗಲಾರೆಯಮ್ಮಾ ” ಎಂದರು ರಾಮುಬಾಬು ಸ್ನೇಹಸ್ವರದಿಂದ

ಅಚಲೆ ನೀರವ

“ ಬರೀ ಮನೆತನದ ಸಾಮಾನಲ್ಲ. ಬಂಡಿ, ಕುದುರೆ - ನನಗೆ ಗೊತ್ತು– ಇಷ್ಟೆಲ್ಲ ನಿನಗಾಗಿಯೇ, ” ಎಂದು ಮುದುಕ ನಗುಮೊಗದಿಂದ ಒಮ್ಮೆ ಸುರೇಶನನ್ನು ಒಮ್ಮೆ ಅಚಲೆಯನ್ನು ನೋಡಿದರು ಅಚಲೆಯ ಮುಖದಲ್ಲಿ ಆನಂದದ ಚಿಹ್ನವೂ ಕಾಣಲಿಲ್ಲ ಆದರೂ ಅವರು ಕೇಳಿದರು : “ ಆದರೆ ತಂಗೀ, ನಿನ್ನ ಅಭಿಪ್ರಾಯ— ”

“ ನನ್ನ ಅಭಿಪ್ರಾಯದ ಅಗತ್ಯವಿಲ್ಲ ದೊಡ್ಡಪ್ಪ ”

“ ಇದೆಂಥ ಮಾತಮ್ಮ ! ನೀನೇ ಸರ್ವಸ್ವ ! ಎಲ್ಲ ನಿನ್ನ ಮನಸಿನಂತೆಯೇ— ”

“ ಇಲ್ಲ ದೊಡ್ಡಪ್ಪ. ನನ್ನ ಮನಸಿನಂತೆ ಆಗುವುದಿಲ್ಲ, ಹೋಗುವುದಿಲ್ಲ.

ಅದೆಲ್ಲ ನಿಮಗೆ ಗೊತ್ತಿಲ್ಲ, ನನ್ನಿಂದ ತಿಳಿಸುವುದಕ್ಕೂ ಆಗುವುದಿಲ್ಲ ನನ್ನ ಕೆಲಸ ಆಯಿತಲ್ಲ, ಹೋಗುತ್ತೇನೆ—"

ಮುದುಕರ ಬಾಯಿಂದ ಮಾತು ಹೊರಡಲಿಲ್ಲ, ಅದರ ಅಗತ್ಯವೂ ಬೀಳಲಿಲ್ಲ ಹಿಂದುಸ್ತಾನೀ ದಾಸಿ ಜಾಕಣಿಯಲ್ಲಿ ಕೆಂಡ ತೆಗೆದುಕೊಂಡು ಬಂದಳು ಎಲ್ಲರ ಗಮನ ಅತ್ತ ಹೋಯಿತು ರಾಮುಬಾಬು ಅಚ್ಚರಿಯಿಂದ ಏನೋ ಪ್ರಶ್ನಿಸಬೇಕೆಂದಿದ್ದರು ಸುರೇಶ ಹೇಳಿದ "ಅಳಿಗೆ ತರಹೇಳಿದ್ದೆ; ಅವ ಇವಳಿಗೆ ಹೇಳಿದನೇನೋ ನನ್ನ ಸೂಲೆಯಿಂದು—"

ಕೆಂಡ ಏತಕ್ಕೆಂಬ ಬಗ್ಗೆ ಹೆಚ್ಚಿನ ವುಲ್ಲಿನಾಥಿ ಬೇಕಾಗಲಿಲ್ಲ ಆದರೆ ಆದಕ್ಕೆ ಇನ್ನೊಂದಾಳು ಬೇಕು ಮುದುಕ ಅಚಲೆಯ ಮೋರೆ ನೋಡಿದರು ಅವಳು ಆಕಡೆ ಮುಖ ತಿರುಗಿಸಿ ಶ್ರಾಂತಸ್ವರದಿಂದ, "ನನಗೆ ಬಹಳ ನಿದ್ದೆ ಬಂದಿದೆ, ಮಲಗುತ್ತೇನೆ," ಎಂದು ನುಡಿದವಳೇ ಹೊರಟು ನಡೆದಳು ಮರುಕ್ಷಣವೇ ಪಕ್ಕದ ಕೋಣೆಯ ಬಾಗಿಲಿಕ್ಕಿದ ಸದ್ದಾಯಿತು

ರಾಮುಬಾಬು ಎದ್ದು ದಾಸಿಯ ಕೈಯೊಳಗಿನ ಕೆಂಡದ ಜಾಕಣಿ ಈಸಿಕೊಂಡು, "ನಡೆ ಹಾಗಾದರೆ ಸುರೇಶಬಾಬೂ" ಎಂದರು

"ನೀವು ?"

"ಹಾಂ ನಾನೇ ಇದೇನು ನನಗೆ ಹೊಸದಲ್ಲ," ಎಂದು ರಾಮು ಬಾಬು ಸುರೇಶನನ್ನು ಬಲವಂತದಿಂದ ಅವನ ಕೋಣೆಗೆ ಸೆಳೆದೊಯ್ದರು

ಜಾಕಣಿಯನ್ನು ಕೆಳಗಿಟ್ಟು, ಸುರೇಶನ ಶುಷ್ಕ ಮುಖವನ್ನು ನೋಡಿ, ಒಮ್ಮೆಲೆ ಅವನ ಕೈಹಿಡಿದು ಆರ್ದ್ರಸ್ವರದಿಂದ ಅವರೆಂದರು "ಇಲ್ಲ ಸುರೇಶ ಬಾಬೂ, ನಿಶ್ಚಯವಾಗಿ ಏನೋ ಆಗಿದೆ— ನಾನೊಮ್ಮೆ ನಿಮ್ಮ— ಆದರೆ ಇರಲಿ ಆ ಮಾತು — ಅಗತ್ಯವಿದ್ದರೆ ಈ ಮುದುಕ ಮತ್ತೊಮ್ಮೆ— "

ಸುರೇಶನಿಗೆ ಮಾತನಾಡಲಾಗಲಿಲ್ಲ ಮೊದಲು ಅವನ ತುಟಿಗಳು ಅದುರಿದವು ಬಳಿಕ ಕಂಬನಿಯನ್ನು ಮರೆಸಲು ಮೋರೆ ತಿರುವಿದ

೩೫

ಸುರೇಶ ಕಣ್ಣುಮುಚ್ಚಿಕೊಂಡು ಕೋಚಿನ ಮೇಲೆ ಮಲಗಿದ್ದ, ರಾಮು ಬಾಬು ಕುರ್ಚಿಯ ಮೇಲೆ ಕುಳಿತು ಅವನೆದೆಗೆ ಕಾವು ಕೊಡುತ್ತಿದ್ದರು. ಸದ್ದು ಕೇಳಿ ಇಬ್ಬರೂ ಬಾಗಿಲ ಕಡೆ ನೋಡಿದರು ಬಂದವಳು ಅಚಲೆ ಆಡಂಬರವೇನೂ ಇಲ್ಲದೆ, "ರಾತ್ರಿ ಬಹಳವಾಗಿದೆ ದೊಡ್ಡಪ್ಪ, ನೀವು

ಮಲಗಿರಿ ಹೋಗಿರಿ," ಎಂದಳು

"ಇದನ್ನೇ ನೋಡುತ್ತಿದ್ದೆ ತಂಗೀ," ಎಂದು ಮುದುಕ ಚಟ್ಟನೆದ್ದು ಸುರೇಶನನ್ನು ಕುರಿತು, "ಇಷ್ಟೊತ್ತಿನಕ ಇಬ್ಬರೂ ನಗೆಚಾಟಿಕೆ ನಡೆಸಿದ್ದಿ ರೇನೋ ಅಲ್ಲವೆ ?" ಎಂದು ಅಚಲೆಯ ಕಡೆ ಕೊಂಚ ನೋಟ ಹೊರಳಿಸಿ, "ಯಾರ ಕೆಲಸ ಅವರಿಗೇ ಚೆಂದ ತಂಗೀ, ಬಾ ಕೂತುಕೋ ನಾನೊಂದಿಷ್ಟು ಕೈಕಾಲು ಚಾಚಿಕೊಂಡು ಬಿದ್ದುಕೊಳ್ಳುವೆ," ಎಂದರು

ಮುದುಕ ಬಹಳ ದಣಿದಂತೆ ದೊಡ್ಡದಾಗಿ ಆಕಳಿಸಿ, ಚಿಟಗೆ ಹೊಡೆದು ಹುಕ್ಕ ಎತ್ತಿದರು ಹೊರಗೆ ಹೋಗಿ ಮೆಲ್ಲಗೆ ಬಾಗಲಿಕ್ಕಿಕೊಳ್ಳುತ್ತ ನಗುದನಿ ಯಿಂದ ನುಡಿದರು "ಸಿದ್ದಿಗಣ್ಣೊಳಗೆ ವೈಕೈ ಸುಟ್ಟುಕೊಳ್ಳಲಿಲ್ಲ ಅದೇ ಪುಣ್ಯ, ಅಲ್ಲವೇ ಸುರೇಶಬಾಬೂ ?"

ಸುರೇಶ ಮಾತನಾಡಲಿಲ್ಲ ಅಚಲೆ ಕುರ್ಚಿಯ ಮೇಲೆ ಕುಳಿತು ಕಾವುಕೊಡುವ ಪ್ಲ್ಯಾನೇರನ್ನು ಬಿಸಿ ಮಾಡುತ್ತ, "ಮತ್ತೇಕೆ ಸೂಲೆ ಬಂತು ? ಎಲ್ಲಿ ನೋವಿದೆ ?" ಎಂದು ಕೇಳಿದಳು

ಸುರೇಶ ಕಣ್ಣು ತೆರೆಯಲಿಲ್ಲ, ಮಾತನಾಡಲಿಲ್ಲ ಎಡ ಎದೆ ಮುಟ್ಟಿ ಕೊಂಡು ತೋರಿಸಿದ ಆಗಿನ ನಿಃಸ್ತಬ್ಧತೆ ಈ ಮೂಕನಾಟಕದ ಕೊನೆಯ ಅಂಕವೂ ನೀರವವಾಗಿಯೇ ಮುಗಿದು ಬಿಡುವುದೇನೋ ಎಂಬಂತಿತ್ತು ಆದರೆ ಹಾಗಾಗಲಿಲ್ಲ ಪ್ಲಾನೇರ್ ಹಿಡಿದ ಅಚಲೆಯ ಕೈಯನ್ನು ಸುರೇಶ ಪಕ್ಕನೆ ಎದೆಗೊತ್ತಿಕೊಂಡ ಅಚಲೆ ಉದ್ವೇಗಗೊಳ್ಳಲಿಲ್ಲ— ಅವಳು ಇದನ್ನು ಬಗೆದೇ ಇದ್ದಳೇನೋ "ಬಿಡಿರಿ, ಇನ್ನೊಂದು ಸಲ ಕಾವು ಕೊಡುವೆ" ಎಂದಳಷ್ಟೇ

ಸುರೇಶ ಕೈಬಿಟ್ಟ ಆದರೆ ನಿಮಿಷಾರ್ಧದಲ್ಲಿಯೇ ಎದ್ದು ಕುಳಿತು ಅಚಲೆಯನ್ನು ಸೆಳೆದು ಎದೆಗವಚಿಕೊಂಡ ತೆರಪಿಲ್ಲದ ಮುತ್ತಿನ ಮಳೆ ಯಿಂದ ಅವಳನ್ನು ಹೌಹಾರಿಸಿದ ಕ್ಷಣ ಪೂರ್ವದಲ್ಲಿ ನೀರವತೆಯಲ್ಲಿಯೇ ನಾಟಕ ಮುಗಿಯುವುದೆಂದೆನಿಸಿತ್ತು ಆದರೀಗ ಈ ಉನ್ಮತ್ತ ನಿರ್ಲಜ್ಜತನಕ್ಕೆ ಎಲ್ಲೆಯಿಲ್ಲ, ಕೊನೆಯಿಲ್ಲ— ಸದಾಕಾಲವೂ ಸರ್ವದಿಕ್ಕುಗಳನ್ನೂ ವ್ಯಾಪಿಸಿ ಹೀಗೆಯೇ ಅಕ್ಷಯವಾಗಿ ಅನಂತವಾಗಿ ಇರುವುದೋ ಏನೋ ಎಂದೆನಿಸಿ-ತವಳಿಗೆ

ಅಚಲೆ ತಡೆಯಲಿಲ್ಲ, ಕೊಸರಿಕೊಳ್ಳಲಿಲ್ಲ. ಇದಕ್ಕೂ ಸಿದ್ಧಳಾಗಿಯೇ

ಇದ್ದಂತಿದ್ದಳು ಆದರೆ ಅವಳ ಶಾಂತ ಮುಖ ಕಲ್ಲಿನಂತೆ ಬಿರುಸಾಯಿತು, ತಣ್ಣಗಾಯಿತು ಅಷ್ಟೆ ಸುರೇಶನೂ ಅಚೇತನನಾಗಿದ್ದ ಬಹುಶಃ ಸೃಷ್ಟಿಯ ಘೋರತರ ಅಂಧಕಾರ ಅವನನ್ನು ಕುರುಡು ಮಾಡಿರಬೇಕು ಇಲ್ಲದಿದ್ದರೆ ತನ್ನದು ತನಗೇ ನಾಚಿಕೆಯಾಗದಿರುತ್ತಿರಲಿಲ್ಲ ಅವನಿಗೆ ನಾಚಿಕೆಯಾಗಲಿಲ್ಲ ನಿಜ ಆದರೆ ಅವನ ಉನ್ಮಾದ ದಣಿವಿನಿಂದ ಸ್ಥಿರಸ್ಥಾಯಿಯಾಯಿತು. ಆಗ ಅಚಲೆ ಮೆಲ್ಲನೆ ಬಿಡಿಸಿಕೊಂಡು ತನ್ನ ಸ್ಥಳದಲ್ಲಿ ಹೋಗಿ ಕುಳಿತಳು.

ಸ್ವಲ್ಪ ಹೊತ್ತಿನ ಮೇಲೆ ಸುರೇಶ ಉಸಿರ್ಗರೆದು, "ನಮ್ಮದಿನ್ನು ಹೀಗೇ ಎಷ್ಟು ದಿನ ಸಾಗುವುದು?" ಎಂದು ಕೇಳಿ ಉತ್ತರಕ್ಕಾಗಿ ನಿಲ್ಲದೆ ನುಡಿದ "ನಿನ್ನ ದುಃಖ ನಾ ಬಲ್ಲೆ ಆದರೆ ನನ್ನ ದುಃಖವನ್ನೂ ನೀ ಸ್ವಲ್ಪ ಅರಿತುಕೋ ನಾನಂತೂ ಹೊರಟಿದ್ದೇನೆ"

ಇದಕ್ಕೆ ಉತ್ತರವೀಯದೆ, "ನೀವಿಲ್ಲಿ ಮನೆ ಕೊಂಡಿರಾ?" ಎಂದು ಕೇಳಿದಳು ಅಚಲೆ

"ಅದು ನಿನ್ನ ಸಲುವಾಗಿಯೇ ಅಚಲಾ!"

ಅಚಲೆ ಇದನ್ನನುಸರಿಸಿ ಮಾತನಾಡದೆ, "ವಸ್ತ್ರ ಒಡವೆ, ಬಂಡಿ ಕುದುರೆ ತರಲಿಕ್ಕೂ ಕಳಿಸಿದ್ದೀರಾ?" ಎಂದು ಪ್ರಶ್ನಿಸಿದಳು

"ಎಲ್ಲವೂ ನಿನಗಾಗಿಯೇ!"

ಅಚಲೆ ಸುಮ್ಮನಾದಳು ಇದೆಲ್ಲ ತನಗೋಸುಗವೆ? ಇದೆಲ್ಲ ತನಗೆ ಬೇಕಾದುದೇ ಬೇಡವಾದುದೇ? ಎಂದು ಅವನನ್ನು ಪ್ರಶ್ನಿಸುವುದು ಅವಳಿಗೆ ಲಾಂಛನಾಸ್ಪದವೆನಿಸಿತು ಕೆಲ ಹೊತ್ತಿನ ಮೇಲೆ, "ರಾಮಬಾಬುಗಳಿಗೆ ನಮ್ಮಪ್ಪನ ಹೆಸರು ಹೇಳಿದಿರಾ? ಪುನೆ ಎಲ್ಲೆಂದು ತಿಳಿಸಿದಿರಾ?" ಎಂದು ಕೇಳಿದಳು

"ಇಲ್ಲ"

"ಇನ್ನೊಂದಿಷ್ಟು ಕಾವು ಕೊಡಬೇಕೆ?"

"ಬೇಡ"

"ಹಾಗಾದರೆ ನಾ ಹೋಗುತ್ತೇನೆ ಬಲು ನಿದ್ದೆ ಬಂದಿದೆ," ಎಂದು ಅಚಲೆ ಎದ್ದುನಿಂತಳು. ಬೆಂಕಿಯ ಪಾತ್ರೆ ಸರಿಸಿಟ್ಟು ಹೊರಗೆ ಹೋಗಿ ಬಾಗಿಲಿಕ್ಕಿಕೊಳ್ಳುತ್ತಿದ್ದಳು. ಸುರೇಶ ಗಡಬಡಿಸಿ ಎದ್ದು ಕುಳಿತು, "ಒಂದು ಮಾತು ಹೇಳಿ ಹೋಗು ಅಚಲಾ ನೀ ಮತ್ತೆಲ್ಲಿಗಾದರೂ ಹೋಗ

ಬೇಕೆನ್ನುವೆಯಾ ? ”

" ಎಲ್ಲಿಗೆ ? ''

“ಎಲ್ಲಿಗಾದರೂ. ಗುರುತಿನವರಿಲ್ಲದಲ್ಲಿ, ಗೊತ್ತು ಸಿಕ್ಕದಲ್ಲಿ; ಆ ದೇಶ ಎಷ್ಟೇ —''

ಸುರೇಶನ ಸ್ವರ ಕಂಪಿಸಿತು ಅಚಲೆ ಅದನ್ನರಿತಳು ಸಹಜ ಸ್ವಾಭಾವಿಕ ಸ್ವರದಿಂದ ಅವಳೆಂದಳು “ ಈ ನಾಡಿನಲ್ಲಿಯೂ ನಮ್ಮನ್ನು ಗುರುತಿಸುವವರಿಲ್ಲ ಈವರೆಗೂ ಯಾರೂ ಗುರುತಿಸಿಲ್ಲ ”

“ ಬರುಬರುತ್ತ— ''

" ಸಂಭವವಿದೆ. ಮತ್ತೆಲ್ಲಿ ಹೋದರೂ ಹೀಗೆಯೆ ”

ಸುರೇಶ ಉಲ್ಲಾಸದಿಂದ ಚಂಚಲನಾದ “ ಹಾಗಾದರೆ ಇಲ್ಲಿಯೇ ನಿಲ್ಲುವುದೆ ? ಇದೇ ನಿನಗೆ ಒಪ್ಪಿಗೆಯೆ ? ಹೇಳು, ಒಮ್ಮೆ ಸ್ಪಷ್ಟವಾಗಿ ಹೇಳು ಅಚಲಾ—'' ಮಾತನಾಡುತ್ತಿರುವಾಗಲೇ ಯಾವ ಆಘಾತವೊ ಅವನನ್ನು ಎಬ್ಬಿಸಿಬಿಟ್ಟಿತು ನಿಂತಲ್ಲಿಂದಲೇ ನೋಡಿದ ಅಚಲೆ ಬಾಗಿಲಿಕ್ಕಿಕೊಂಡು ಹೊರಟುಹೋಗಿದ್ದಳು

ಕೆಲದಿನಗಳಿಂದ ಮೋಡ ಕವಿಯುತ್ತ ಹರಿಯುತ್ತ ದೊಡ್ಡ ಮಳೆಯ ಆಗಮನವನ್ನು ಸೂಚಿಸುತ್ತಿತ್ತು ಸುರೇಶನ ಹೊಸ ಮನೆಯಲ್ಲಿ ರಾಶಿ ಸಾಮಾನು ಬಂದು ಬಿದ್ದಿದ್ದವು ಆದರೆ ಅವನ್ನು ಓರಣಿಸುವ ಕಡೆ ಯಾರ ಲಕ್ಷ್ಯವೂ ಇರಲಿಲ್ಲ ಮೊನ್ನೆ ತಾನೆ ಬಂದ ಜೋಡುಕುದುರೆ, ಬೆಲೆಬಾಳುವ ಗಾಡಿ ಎಲ್ಲಿವೆಯೆಂಬುದನ್ನು ಕೂಡ ಯಾರೂ ವಿಚಾರಿಸುವರಿಲ್ಲ ದಿನಗಳು ಹಾಗೂ ಹೀಗೂ ಸಾಗಿದ್ದವು ಅಚಲೆ ರೇಲಿಂಗಿನ ಹತ್ತಿರ ಸೋಫಾದಲ್ಲಿ ಒರಗಿಕೊಂಡಿದ್ದಳು ದೊಡ್ಡಪ್ಪ ಬಂದುದನ್ನು ಕಂಡು ಎದ್ದು ಕುಳಿತಳು. ಅವರು ಚೀಟಿಯೊಂದನ್ನು ಕೊಡುತ್ತ “ಇದು ನೋಡು ನಿಮ್ಮ ರಾಕ್ಷಸಿಯ ಕಾಗದ, ಸುರಮಾ ನಿನಗೆ ಇಷ್ಟು ದಿನ ಬರೆಯಲಾಗದುದಕ್ಕೆ ನನ್ನ ಪತ್ರದಲ್ಲಿ ಕ್ಷಮೆ ಬೇಡಿದ್ದಾಳೆ ಅನೇಕ ವಂದನೆ ತಿಳಿಸಿದ್ದಾಳೆ '' ಎಂದು ಚೌಕಿಯೊಂದನ್ನೆಳೆದುಕೊಂಡು ಕುಳಿತರು. ನದಿಯ ಕಡೆ ನೋಡುತ್ತ ತನ್ಮಯತೆಯಿಂದ ಹುಕ್ಕ ಎಳೆದೆಳೆದು ಹೊಗೆ ಬಿಡತೊಡಗಿದರು.

ಅಚಲೆ ಪತ್ರವನ್ನು ಓದಿಕೊಂಡು ಕೇಳಿದಳು· “ ಇವರೆಲ್ಲ ಹಾಗಾದರೆ ನಾಡದು ಬೆಳಗಿನ ಗಾಡಿಗೇ ಬರುವವರು? ಅತ್ತೆವ್ವ ಯಾರು ದೊಡ್ಡಪ್ಪ?

ಮತ್ತವರ ರಾಜಪುತ್ರ, ರಾಜಸ್ನುಷೆ, ಗಾರ್ಜಿನ್ ಟೆಊಟರ್—"

ರಾಮುಬಾಬು ನಕ್ಕು ನುಡಿದರು "ರಾಕ್ಷಸಿ ತಮಾಷೆಗೆ ಆಸ್ಪದ ಸಿಕ್ಕರೆ ಸುಮ್ಮನೆ ಬಿಡುವ ಹುಡುಗಿಯಲ್ಲ ಅತ್ತಿವ್ವ ಎಂದರೆ ನನ್ನ ವಿಧವೆ ತಂಗಿ, ರಾಜಪುತ್ರ ಎಂದರೆ ಆಕೆಯ ೧೦–೧೧ ವರುಷದ ಮಗ, ರಾಜ ಸ್ನುಷೆ ಆಕೆಯ ಮಗಳು, ಭಾಂಡಾರಪುರದ ಭವಾನೀ ಚೌಧುರಿಯ ಹೆಂಡತಿ — ಅವಳು ಸುಮ್ಮನೆ ಬರೆದಿರಲೊಲ್ಲಳೇಕೆ, ಆದರೆ ನಿಜವಾಗಿಯೂ ಆ ಮನೆ ಅರಮನೆಯೇ ಸೈ ಇನ್ನಾ ಕೊನೆಯವ ಯಾರೋ ನೋಡಿದರೆ ಗೊತ್ತಾಗಬೇಕು ಸಣ್ಣವರಿಗೆ ದೊಡ್ಡವರಿಗೆ ಎಲ್ಲರಿಗೂ ಬೇಕಾದ ಕೈಗುಡಿಗೆಯ ಹುಡುಗಾಳು ಯಾವನಾದರೂ ಇದ್ದಿದ್ದಾನು ಅದರದೇನು ಯೋಚನೆಯಿಲ್ಲ ಸುರಮಾ ಬಂದು ನಾಲ್ಕು ದಿನ ಉಂಡು ತಿಂದು, ಈ ಪಶ್ಚಿಮದ ಹವೆಯಿಂದ ನೆಮ್ಮದಿ ಹೊಂದಿದರೆ ಸಂತೋಷ ಆದರೆ ಮನೆ ಸಣ್ಣದು ರಾಜ–ರಾಜಪರಿವಾರಗಳನ್ನು ಕಣ್ಮುಂದಿಟ್ಟುಕೊಂಡು ಕಟ್ಟಿ-ಸಿದ್ದಲ್ಲ ಕೋಣೆಕೊಟಡಿಗಳೂ ಅವರಿಗೆ ತಕ್ಕವಾಗಿಲ್ಲ ಎಂಬುದೇ ಯೋಚನೆ ಸಂಗಡ ಆಳುತೊತ್ತುಗಳೂ ಇದ್ದೇ ಇದ್ದಾವು—ಅಗತ್ಯಕ್ಕಿಂತ ಮೂರು ಪಟ್ಟು ಹೆಚ್ಚೇ ನನಗೆ ತೋರುತ್ತದೆ ನಿಮ್ಮ ಮನೆಯುನ್ನು—"

"ಆದರೆ ಅದಿನ್ನೂ ಸಜ್ಜಿಲ್ಲ ದೊಡ್ಡಸ್ಪ ಅಲ್ಲದೆ ಅಷ್ಟು ದೂರ ಅವರೊಬ್ಬರೇ ಇರುವುವಕ್ಕೆ ಅನುಕೂಲವಾದೀತ ?"

"ಈಗಲೇ ಕೆಲಸಕ್ಕೆ ಹತ್ತಿಪರೆ ಆಗುವುದು ಸ್ಥಳವೊಂದು ಸಿದ್ಧವಿದ್ದರೆ ಯಾರಿಗೆ ಎಲ್ಲಿ ಅನುಕೂಲವೆಂಬುದೇನೂ ದೊಡ್ಡ ವಿಚಾರವಲ್ಲ. ಸುರೇಶನಂತೂ ಕೇಳಿದೊಡನೆ ಟವ್ ಟವ್ ಬಾಡಿಗೆ ಮಾಡಿಕೊಂಡು ಹೋಗಿಬಿಟ್ಟಿದ್ದಾನೆ ನಿನ್ನ ಗಾಡಿಯೂ ಸಿದ್ಧವಾಗಿ ಬಂದಿರಬಹುದು. ನೀ ಬೇಗನ ತಯಾರಾಗು, ನಾ ಅಷ್ಟರೊಳಗೇ ಜೋಡು ಬದಲಿಸಿ ಹೆಗಲ ಮೇಲೆ ಶಲ್ಯೆ ಚೆಲ್ಲಿಕೊಂಡು ಬಂದುಬಿಡುತ್ತೇನೆ ನಿಮ್ಮ ಮನೆಯ ವ್ಯವಸ್ಥೆ ನಮಗೆ ಬಗೆಹರಿಯಲಿಕ್ಕಿಲ್ಲ"

ಅಚಲೆ ಕ್ಷಣ ಸುಮ್ಮನಿದ್ದು, "ಒಳ್ಳೆಯದು" ಎಂದು ಬಟ್ಟೆ ಬದಲಿಸಲು ಕೋಣೆಗೆ ಹೋದಳು

ರಾಮುಬಾಬುಗಳ ಪ್ರಸ್ತಾಪ ಅಸಂಗತವೂ ಆಗಿರಲಿಲ್ಲ, ಅಸ್ಪಷ್ಟವೂ ಇರಲಿಲ್ಲ ಕೇವಲ ಆತ್ಮೀಯರಾದ ರಾಜಕುಮಾರ ರಾಜಮಾತೆಯರಿಗಾಗಿ

ತಾವು ಈ ಸ್ಥಳ ಬಿಟ್ಟುಕೊಡಬೇಕೆಂಬುದನ್ನು ಅಚಲೆ ಸಹಜವಾಗಿಯೇ ಗ್ರಹಿಸಿದಳು ಗ್ರಹಿಸುವುದು ಸಹಜವಾದ ಮಾತ್ರಕ್ಕೆ ಅದರ ಭಾರವೇನು ಕಡಿಮೆಯಾಗುವುದಿಲ್ಲ ಅದು ಮನಸಿನೊಳಗೆ ಎಷ್ಟು ದೂರ ಹೋಯಿತೋ ಅಷ್ಟುದ್ದಕ್ಕೂ ಗುರುಭಾರವಾದ ಸ್ಟೀಮ್ ರೋಲರನಂತೆ ಅರೆದುಕೊಂಡೇ ಹೋಯಿತು

ಇಷ್ಟು ದಿನವಾಯಿತು, ಹೊರಹೊರಡುವುದಕ್ಕೆ ಅವಳನ್ನೊಪ್ಪಿಸುವುದು ಯಾರಿಗೂ ಸಾಧ್ಯವಾಗಿರಲಿಲ್ಲ ಇಂದವಳು ಹದಿನೈದೇ ನಿಮಿಷಗಳಲ್ಲಿ ತನ್ನ ವಾಡಿಕೆಯ ಉಡುಪಿನಲ್ಲಿ ಹೊರಟಳು ಆಗವಳಿಗೆ ಸುತ್ತುಮುತ್ತಿನದೆಲ್ಲ ಹೊಸತಾಗಿ ಅಚ್ಚರಿಯದಾಗಿ ಕಂಡಿತು ತಾನು ಕೂಡ ಬೇರೆ ತರಹ ಆಗಿರುವಂತೆನಿಸಿತೆಂದರೆ! ಹೊಸ ಉಡುಪಿನಿಂದ ಸಜ್ಜಿತನಾದ ಬಂಡಿಯವ ಒಡತಿಯೆಂದರಿತು ನಮಸ್ಕರಿಸಿದ. ಆಳು ಬಾಗಿಲು ತೆರೆದು ಗೌರವಬಂದ ಪಕ್ಕಕ್ಕೆ ಸರಿದ ಅವಳು ಹತ್ತಿ ಕುಳಿತಳು ಮುದುಕನೂ ಹತ್ತಿ ಇದಿರಿಗೆ ಕುಳಿತರು ಅವಳಿಗಿದೆಲ್ಲವೂ ಅದ್ಭುತ ಸ್ವಪ್ನದಂತೆ ಕಂಡಿತು ಆ ಬಂಡಿಯ ಯಾವ ಯಾವ ಭಾಗವನ್ನು ನೋಡಿದರೂ, ಇದು ಬರಿ ಬಹುಮೂಲ್ಯವಲ್ಲ, ಧನವಂತರ ಐಶ್ವರ್ಯದ ಜಂಭ ಮಾತ್ರವಲ್ಲ, ಇದರ ಕಣಕಣವೂ ಪ್ರೇಮದಿಂದ ಕೆಟ್ಟಿದೆ ಎಂದೆನಿಸತೊಡಗಿತು

ಕಲ್ಲುಹಾದಿಯಲ್ಲಿ ಕುದುರೆಗಳ ಖುರಪುಟದ ತಾಳ ಅಖಂಡವಾಗಿ ನಡೆದಿತ್ತು ಆದರೆ ಅಚಲೆಯ ಕಿವಿಗೆ ಮಾತ್ರ ಅಸ್ಪಷ್ಟವಾಗಿ ಕೇಳುತ್ತಿತ್ತು ಅವಳ ಜ್ಞಾನಶೂನ್ಯತೆ ಇನ್ನೂ ಎಷ್ಟೊತ್ತಿರುತ್ತಿತ್ತೊ ರಾಮಬಾಬು ಅವಳ ಗಮನವನ್ನು ಇದಿರುಗಡೆ ತಿರುಗಿಸಿ, “ತಂಗೀ, ಅದೇ ಇದಿರಿಗೆ ಕಾಣುವುದು ನಿಮ್ಮನೆ ಆಳುತೊತ್ತುಗಳನ್ನು ನಿಯಮಿಸಿದೆ ತಕ್ಕಮಟ್ಟಿಗೆ ಸಾಮಾನು ಹಚ್ಚುವ ಕೆಲಸ ಇಷ್ಟೊತ್ತಿಗೆ ಮುಗಿಯಬಂದಿದ್ದೀತು ನಿಮ್ಮ ಮಲಗುವ ಕೋಣೆಗೊಂದಕ್ಕೆ ಮಾತ್ರ ಯಾರಿಗೂ ಕೈ ಹಚ್ಚಗೊಟ್ಟಿಲ್ಲ ಹಾಗೆ ನಾನು ಸುರೇಶ ಹೋಗುವಾಗ ಹೇಳಿಕಳಿಸಿದ್ದೇನೆ,” ಎಂದು ನುಡಿದು, ಅವಳ ಮುಖ ಲಜ್ಜೆಯಿಂದ ಹಾಸ್ಯಯುಕ್ತವಾಗಿರಬಹುದೆಂಬ ಆಶೆಯಿಂದ ನೋಡಿ ಒಮ್ಮೆಲೆ ಸುಮ್ಮನಾದರು ಅವರು ಹೀಗೇಕೆ ಮಾತು ನಿಲ್ಲಿಸಿದರೆಂಬುದು ಅಚಲೆಗೆ ತಕ್ಷಣ ಹೊಳೆಯಿತು ಎಂತಲೇ ಮನೆ ಬರುವ ತನಕ ಹೊರಗಡೆಗೇ ನೋಡುತ್ತ ಅವರ ವಿಸ್ಮಿತ ದೃಷ್ಟಿಯಿಂದ ಮೋರೆ ತಪ್ಪಿಸಿಕೊಂಡಳು

ಬಂಡಿಯ ಸದ್ದು ಕೇಳಿ ಸುರೇಶ ಹೊರಕ್ಕೆ ಬಂದ ಹೊಸ ಒಡತಿಯನ್ನು ನೋಡಲು ಆಳುತೊತ್ತುಗಳೂ ಬಿಟ್ಟದು ಬಿಟ್ಟು ಬಂದರು ಆದರೆ ಅವಳ ಮುಖ ನೋಡಿದಾಗ ಯಾರಿಗೂ ಉತ್ಸಾಹವೆನಿಸಲಿಲ್ಲ. ಅಚಲೆ ರಾಮುಬಾಬುಗಳೊಡನೆ ನೀರವವಾಗಿ ಬಂಡಿಇಳಿದು ನಡೆದಳು ಸುರೇಶನ ಕಡೆ ನೋಡಲಿಲ್ಲ ಕೂಡ ಮೂವರೂ ನೀರವವಾಗಿಯೇ ಮನೆಯನ್ನು ಪ್ರವೇಶಿಸಿದರು

೩೬.

ಈ ಹೊಸಮನೆಯ ಸಡಗರದಲ್ಲಿ ದೊಡ್ಡ ನ್ಯೂನತೆಯಿರುವುದೆಂದು ಎಲ್ಲರಿಗೂ ಎದ್ದು ಕಾಣಿಸಿತು ದುಡ್ಡಿದ್ದವ ವೆಚ್ಚ ಮಾಡಿಯಾನು, ಅದು ವಾಡಿಕೆಯ ವಿಷಯ ಆದರೆ ಇದೆಲ್ಲ ಯಾರ ಆನಂದಕ್ಕಾಗಿಯೋ ಅವರ ವ್ಯಾಕುಲತೆಗೆ ಮಿತಿ ಮೇರೆ ಇಲ್ಲ ಸಾಮಾನು ಎತ್ತಿಡುವಾಗ, ಸಾಧಾರಣ ಮಾತುಕತೆಗಳೆಷ್ಟೋ ಆದವು, ಎಷ್ಟೋ ಸಲ ದೃಷ್ಟಾದೃಷ್ಟಿಯಾಯಿತು, ಆದರೆ ಅದರಲ್ಲಿಯ ಆಡದ ಮಾತು, ತೋರದ ಇಂಗಿತ ಅದನ್ನೇ ನಿರ್ದೇಶಿಸುತ್ತಿತ್ತು

ಮನೆಯನ್ನು ಸಾರಿಸುವುದು ಬಳಿಯುವುದು ಮುಗಿಯಲಿಲ್ಲ ತಕ್ಕ ಮಟ್ಟಿಗೆ ಇರಲಿಕ್ಕೆ ಬರುವ ಹಾಗೆ ಮಾಡುವುದರಲ್ಲಿಯೇ ಇಡೀ ದಿನ ತೀರಿತು. ಮೂವರೂ ದಣಿದು ಆ ಮನೆಗೆ ಹೋಗಲು ಬಂಡಿ ಹತ್ತಿದರು ರಾತ್ರಿ ಒಂದು ಪ್ರಹರವಾಗಿತ್ತು ಆಕಾಶ ಸ್ವಚ್ಛವಾಗಿತ್ತು ಬೂದಿಬಣ್ಣದ ಒಂದೆರಡು ತುಂಡು ಮೋಡಗಳು ನಡುನಡುವೆ ಒಂದು ಕ್ಷಿತಿಜದಿಂದ ಹೊರಟು ನದಿಯನ್ನು ದಾಟಿ ಇನ್ನೊಂದು ಕ್ಷಿತಿಜಕ್ಕೆ ಹೋಗುತ್ತಿದ್ದವು ಅಷ್ಟೆ. ಸಪ್ತಮಿಯ ಕೋರೆಚಂದಿರನ ಬೆಳುದಿಂಗಳು ಒಮ್ಮೆ ನಿಚ್ಚಳವಾಗಿ ಒಮ್ಮೆ ಮಕಾಳವಾಗಿ ಬೀಳುತ್ತಿತ್ತು ಅದರ ಸೊಬಗನ್ನು ನೋಡುವುದಕ್ಕೆ ಕಿಡಿಕಿಯೊಳಗೆ ಮುಖವಿಟ್ಟು ಮುದುಕ ಕುಳಿತಿದ್ದರು ಆದರೆ ಮುಂದಕರಲ್ಲದವರು, ಪ್ರಕೃತಿಯ ರಸಮಾಧುರ್ಯಗಳ ಅಭಿರುಚಿಯುಳ್ಳ ವಯಸ್ಸಿನವರು ಬಂಡಿಯ ಒಂದೊಂದು ಮೂಲೆಯೊಳಗೆ ಕಣ್ಮುಚ್ಚಿಕೊಂಡು ಕುಳಿತಿದ್ದರು

ಬಹಳ ಹಿಂದಿನ ನೆನಪೊಂದು ಈಗ ಅಚಲೆಯ ಮನಸಿನಲ್ಲಿ ಮೂಡಿತು ಸುರೇಶನ ಕಲಕತ್ತೆಯ ಮನೆಯಿಂದ ಇಬ್ಬರೂ ಹೀಗೆಯೇ ರಾತ್ರಿ ಬಂಡಿಯಲ್ಲಿ ಹೊರಟಿದ್ದರು, ಅಂದವನ ಸಂಪತ್ತು, ವಿಪುಲ ಸುಖಸಾಮಗ್ರಿ ಅವಳ

ಅತೃಪ್ತ ಮನವನ್ನು ಮಹಿಮನಿಂದ ದೂರ ಸೆಳೆದೊಯ್ದಿತ್ತು, ಈ ಸುರೇಶನಿಗೇ ಆತ್ಮಾರ್ಪಣೆ ಮಾಡುವುದು ಅಸಂಗತವೆಂದಾಗಲಿ ಅಸಂಭವವೆಂದಾಗಲಿ ಅವಳಿಗೆನಿಸಿರಲಿಲ್ಲ — ಇಷ್ಟು ದಿವಸಗಳ ಮೇಲೆ ಇದೇಕೆ ಒಮ್ಮೆಲೆ ನೆನಪಾಗಬೇಕು, ಎಂಬುದನ್ನು ಯೋಚಿಸುತ್ತಿದ್ದಂತೆ ತನ್ನ ಅಂತರ್ಯದ ನಿಗೂಢ ಚಿತ್ರ ಅವಳಿಗೆ ಕಾಣಿಸಿತು ನೋಡುತ್ತಲೇ ಅವಳ ಸರ್ವಾಂಗವಲ್ಲಿಯೂ ನಾಚಿಕೆಯ ಬಿರುಗಾಳಿ ಬೀಸಿತು

ನಾಚಿಕೆ! ನಾಚಿಕೆ! ನಾಚಿಕೆ! ಈ ಬಂಡಿ, ಈ ಮನೆ, ಈ ಸರಂಜಾಮು. ಎಲ್ಲವೂ ತನ್ನ ಪತಿಯ ಪ್ರೇಮದ ಉಪಹಾರವೆಂದು ಅವಳಿಗೆನಿಸಿತು. ಇದರಲ್ಲಿ ತನ್ನದೆಳ್ಳಷ್ಟೂ ಅಧಿಕಾರವಿಲ್ಲವೆಂದು—ಇದೆಲ್ಲಾ ಸುಳ್ಳೆಂದು—ಒಂದಿನ ಎಲ್ಲರಿಗೂ ತಿಳಿದು ಬಿಡುವುದು ಆಗ ತಾನು ತನ್ನ ಲಜ್ಜೆಯನ್ನೆಲ್ಲಿ ಬಚ್ಚಿಟ್ಟುಕೊಳ್ಳುವುದು? ಆವರೂ ಇಂದು ಇದು ಕಿಂಚಿತ್ತೂ ಸುಳ್ಳಲ್ಲ. ಎಲ್ಲವೂ ತನ್ನ ಪೂಜೆಗಾಗಿಯೇ ಜತನದಿಂದ ಅಣಿಮಾಡಿದುದಾಗಿದೆ ಇವರ ಆದ್ಯಂತವೂ ಪ್ರೇಮಾದರ ಮಂಡಿತವಾಗಿದೆ! ಈ ಅಗಣಿತ ದಾಸದಾಸಿಯರು ತನಗಾಗಿಯೇ ಕೈಕಟ್ಟಿಕೊಂಡು ಕಾಯ್ದಿರುವರು!

ಅಚಲೆಯ ಮನಸಿನೊಳಗೆ ಲೋಭ-ತ್ಯಾಗ, ಲಜ್ಜೆ ಗೌರವಗಳು ಗಂಗೆಯಮುನೆಯರಂತೆ ಜೊತೆಜೊತೆಯಾಗಿ ಹರಿಯತೊಡಗಿದವು ಇವುಗಳಲ್ಲಿ ಒಂದನ್ನೂ ಅಲ್ಲಗಳೆಯುವುದು ಕ್ಷಣಹೊತ್ತು ಅಸಾಧ್ಯವಾಯಿತು ಮನೆ ಮುಟ್ಟಿ ದಣಿವು ತಲೆಸೂಲೆ ಎಂದು ಹೇಳಿ ಅಕಾಲದಲ್ಲಿಯೇ ಬಾಗಿಲಿಕ್ಕಿಕೊಂಡು ಮಲಗಿದಾಗ ಮಾತ್ರ ಲಜ್ಜೆ ಅಪಮಾನಗಳಷ್ಟೇ ಅವಳನ್ನು ತಿನ್ನತೊಡಗಿದವು ಪಿತೃಲಜ್ಜೆ, ಪತಿಲಜ್ಜೆ, ಅಪ್ರೇಷ್ಟಲಜ್ಜೆ—ಎಲ್ಲ ಲಜ್ಜೆಗಳೂ ಒಟ್ಟುಗೂಡಿ ಅವಳೆದುರಿಗೆ ಗಗನಭೇದಿಯಾಗಿ ನಿಂತು ಮಿಕ್ಕೆಲ್ಲ ದುಃಖಗಳನ್ನೂ ಹೂಳಿಬಿಟ್ಟವು ಈ ಮರೆಮೋಸ ರಟ್ಟಾಯಿತೆಂದರೆ ಈ ಮುಖ ಮುಚ್ಚಿಕೊಳ್ಳುವುದೆಲ್ಲಿ ಎಂದೆನಿಸತೊಡಗಿತು

ಅವಳು ಬೆಳೆದು ದೊಡ್ಡವಳಾದ ಸಮಾಜದಲ್ಲಿ ಕೃಷ್ಣಾಜಿನದ ಹಾಸಿಗೆ, ತರುತಲ ಮೂಲ ವಾಸಗಳೇ ಕಾಮ್ಯವಸ್ತುಗಳಾಗಿರಲಿಲ್ಲ, ಯಾವ ರೀತಿ ನಡತೆ ಊಟಉಡಿಗೆಗಳಲ್ಲಿಯೂ ವಿಲಾಸವೈರಾಗ್ಯವಿರಲಿಲ್ಲ ಪರಲೋಕದ ಆಸೆಗಾಗಿ ಇಹಲೋಕದ ಸುಖದಿಂದ ವಂಚಿತರಾಗುವ ನಿಷ್ಠುರನಿಷ್ಠೆಯನ್ನೆಂದೂ ಅವಳು ಕಂಡಿರಲಿಲ್ಲ ಅಂತೆಯೇ ಈ ಏಕಾಂತದಲ್ಲಿ ಬಿದ್ದು

ಕೊಂಡಾಗಲೂ ಹೊನ್ನನ್ನು ಮಣ್ಣೆಂದು ತಳ್ಳಿಬಿಡಲು ಅವಳು ಸಮರ್ಥಳಾಗಲಿಲ್ಲ; ಹಾಗೆ ಅಪೇಕ್ಷಿಸಲೂ ಇಲ್ಲ. ಆದರೂ ಗ್ಲಾನಿಯಿಂದ ಅವಳ ಹೃದಯ ಕಂದಿತು. ಅಯಾಚಿತವಾಗಿ ಕಾಲಡಿಯಲ್ಲಿ ಬಂದು ಬಿದ್ದ ಭೋಗಸಂಪದದ ಮೋಹ ಅವಳನ್ನು ಒಂದು ಕೈಯಿಂದ ಸೆಳೆಯುತ್ತಿತ್ತು, ಇನ್ನೊಂದು ಕೈಯಿಂದ ತಳ್ಳುತ್ತಿತ್ತು.

ದುಸ್ಸ್ವಪ್ನದಿಂದ ಮನುಷ್ಯನನ್ನು ಬಿಡುಗಡೆಮಾಡಲು ಅಜ್ಞಾತಚೇತನ ಜಾಗೃತವಾಗಿರುವುದಂತೆ. ಹಾಗೆಯೇ ದೈವವಿಡಂಬನೆಯಿಂದ ಒದಗಿದ ಈ ಸಂಕಟದಿಂದ ಪಾರಾಗಲು ಒಂದಿಸ ಯಾವ ಅದ್ದಿಯೂ ಇರಲಿಲ್ಲವೆಂಬ ಅರಿವು ಅವಳಲ್ಲಿ ಅಳಿದಿರಲಿಲ್ಲ. ಈ ಸುರೇಶನೇ ಪತಿಯಾಗಬಹುದಿತ್ತು,— ಒಂದಾನೊಂದು ಭವಿಷ್ಯದ್ದಿನದಲ್ಲಿ ಅಸಂಭವನೀಯವೆಂದಾದರೂ ಯಾರು ಎದೆತಟ್ಟಿ ಹೇಳಬಲ್ಲರು!

ಎಲ್ಲ ತತ್ಸಮ ಸಮಾಜಗಳಲ್ಲಿಯೂ ವಿಧವಾವಿವಾಹ ನಡೆಯುತ್ತಿದೆ, ಹಿಂದೂರಮಣಿಯಂತೆ ಇಹದಲ್ಲಿ ಮಾತ್ರವಲ್ಲ ಪರದಲ್ಲಿಯೂ ಒಬ್ಬನೊಂದಿಗೇ ಪತ್ನೀತ್ವಬಂಧನ ಕಟ್ಟಿಕೊಂಡಿರುವ ಅಲಂಘ್ಯನಿಯಮ ಅವರಿಗೆ ಮಾನ್ಯವಿಲ್ಲ. ಅಂತೆಯೆ ಇರಲಿ, ಸಾಯಲಿ, ಒಬ್ಬನನ್ನೇ ಅನನ್ಯಗತಿಯೆಂದು ತಿಳಿಯುವಷ್ಟು ಅವಳ ಮನಸು ಸಂಕುಚಿತವಿದ್ದೀತೆಂದು ಭಾವಿಸುವಂತಿಲ್ಲ. ಆ ಮನಸು ಒಬ್ಬ ಗಂಡನಿರುತ್ತಿರಲಿಕ್ಕೆ ಇನ್ನೊಬ್ಬನನ್ನು ಗಂಡನೆನ್ನುವ ತಪ್ಪಿಗಾಗಿ ಎಷ್ಟೋ ನೋಯಲಿ ಬೇಯಲಿ, ಧರ್ಮದ ಪರಲೋಕದ ಗನೆ ಮಾತ್ರ ಅವಳನ್ನು ಬಡಿದು ಕೆಡಹುವೆನೆಂದು ಬೆದರಿಸಲಿಲ್ಲ.

ಕದ ತಟ್ಟಿ ರಾಮುಬಾಬು ಕೂಗಿದರು. “ನೀರು ಕೂಡ ಕುಡಿಯದೆ ಮಲಗಿದೆಯಲ್ಲ ತಂಗೀ, ಮೈಯೊಳಗೆ ನೆಟ್ಟಗಿಲ್ಲವೆ?”

ಅಚಲೆಯ ಯೋಚನೆ ಹರಿಯಿತು. ತಂದೆಯ ದನಿಯೇನೋ ಎಂದೊಮ್ಮೆಲೆ ಅವಳಿಗೆನಿಸಿತು. ಅಕಾಲದಲ್ಲಿ ಸಿಟ್ಟಲಿ ಮಲಗಿದ್ದರೆ ಅವರೂ ಹೀಗೆಯೇ ಬಾಗಿಲಲ್ಲಿ ನಿಂತು ಎಬ್ಬಿಸುತ್ತಿದ್ದರು. ಕಣ್ಣಲ್ಲಿ ನೀರೂರಿತು. ತಟ್ಟನೆ ಒರಸಿಕೊಂಡು ಹೋಗಿ ಬಾಗಿಲು ತೆರೆದಳು.

ಇಷ್ಟು ದಿನದ ಪರಿಚಯವಿದ್ದರೂ ಮಹೇಶ ದೂರದಿಂದಲೇ ಮಾತನಾಡುತ್ತಿದ್ದರು. ತಮ್ಮ ಮನೆಯಲ್ಲಿ ಇವರದು ಕೊನೆಯ ದಿನವೆಂದೋ ಏನೋ ಆ ಭಾವನೆ ಹೋಗಿ, ಅವರು ಅಚಲೆಯ ಹೆಗಲ

ಮೇಲೊಂದು ಕೈ ಹಾಕಿ, ಒಂದು ಕೈಯಿಂದ ಹಣೆ ಹಿಡಿದು ನಗುತ್ತ ನುಡಿದರು "ಮುದಿ ದೊಡ್ಡಪ್ಪನ ಸಂಗಡ ತುಂಟತನವೇನಮ್ಮಾ? ಏನೂ ಆಗಿಲ್ಲ, ಬಾ" ಎಂದು ಕೈಹಿಡಿದು ಕರೆದುಕೊಂಡು ಹೋಗಿ ವರಾಂಡದಲ್ಲಿ ಕುರ್ಚಿಯ ಮೇಲೆ ಕುಳ್ಳಿರಿಸಿದರು

ಬದಿಯ ಇನ್ನೊಂದು ಕುರ್ಚಿಯಲ್ಲಿ ಸುರೇಶ ಕುಳಿತಿದ್ದ ಕೊಂಚ ಮುಖವೆತ್ತಿ ನೋಡಿ ಮತ್ತೆ ತಗ್ಗಿಸಿದ ಮರುದಿನದ ಕಾರ್ಯದ ಬಗ್ಗೆ ಮಾತನಾಡುವುದಕ್ಕಾಗಿ ರಾಮಬಾಬು ತಿರುಗಿ ಬರುವುದನ್ನು ಕಾದಿದ್ದ. ಅಚಲೆಯ ಕಡೆ ನೋಡಿ ಮುದುಕ ನಗುತ್ತ ನುಡಿದರು "ಸುರೇಶಬಾಬೂ, ನಿನ್ನ ಗೃಹಲಕ್ಷ್ಮಿ ಬಲಿತಿತಂದೆಯ ಮಗಳಾಗಿದ್ದಾಳೆ—ದಿನಗಳಿಗೆ, ಪಂಚಾಂಗ ಪೊತ್ತಿಗೆ ಏನೂ ನೋಡುವುದಿಲ್ಲ ನೀವು ನೋಡಿರಿ ಬಿಡಿರಿ, ನನ್ನದೇನು ಹೋಗುವುದಿಲ್ಲ, ಆದರೆ ಮೂರಿಪ್ಪತ್ತು ವರುಷದ ನನ್ನ ಕುಸಂಸ್ಕಾರವೇನು ಬಿಡುವುದಿಲ್ಲ — ನಾಳೆ ಒಂದು ಒಂದೂವರೆ ಪ್ರಹರದೊಳಗೆ ಒಂದು ಶುಭ ಮುಹೂರ್ತ–"

"ಏತರ ಮುಹೂರ್ತ?" ಸುರೇಶ ಇಂಗಿತ ಹೊಳೆಯದೆ ಕೇಳಿದ

ಅವರಿಗೂ ಸರಳ ಉತ್ತರ ತೋಚಲಿಲ್ಲ ಕೊಂಚ ತಬ್ಬಿಬ್ಬಾಗಿ ಹೇಳಿದರು "ಆ ಮೇಲೆ ಒಂದೆರಡು ವಾರದೊಳಗೆ ಮುಹೂರ್ತ ಕಾಲ ಒಳ್ಳೆದು ಅಂತೆಯೋ—"

ಈಗ ತಿಳಿಯಿತಾದರೂ ಏನು ಹೇಳಬೇಕೆಂಬುದು ಗೊತ್ತಾಗದೆ, ಅಂಜಂಜುತ್ತ ಗುಪ್ತವಾಗಿ ಅಚಲೆಯ ಕಡೆ ನೋಡಿದ ಅವಳು ಕಣ್ಣುಗಳೆರಡನ್ನೂ ತನ್ನಲ್ಲಿಯೇ ನಟ್ಟು ನಿಃಶಬ್ದವಾಗಿ ನೋಡುತ್ತಿದ್ದಳು ಸುರೇಶನಿಗೆ ತನ್ನ ದೃಷ್ಟಿ ತಿರುಗಿಸಿಕೊಳ್ಳಲಾಗಲಿಲ್ಲ

"ನಾಳೆ ಬೆಳಗ್ಗೆ ಆ ಮನೆಗೆ ಹೋಗಲಾದೀತೋ?" ಎಂದು ಶಾಂತ ಮೃದುಸ್ವರದಿಂದ ಅಚಲೆ ಕೇಳಿದಳು

ಆಶ್ಚರ್ಯಮಗ್ನ ಸುರೇಶನ ಬಾಯಿಂದ ಮಾತು ಹೊರಡದಾಯಿತು ಅಂತೂ ಇಂತೂ ಅಸ್ಪಷ್ಟಸ್ವರದಿಂದ ಹೇಳಿದ "ಮನೆಯಿನ್ನೂ ಇರಲಿಕ್ಕೆ ತಕ್ಕದ್ದಾಗಿಲ್ಲ, ನೆಲ ತೇವವಾಗಿದೆ, ಹೊಸ ಗೋಡೆಗಳು ಕಚ್ಚಾ ಇವೆ, ಅಲ್ಲಿ ಹೋಗಿದ್ದರೆ ಅಚಲೆಗೇನಾದರೂ ತೊಂದರೆ, ಜಡ್ಡು ಜಾಪತ್ತು—"

ಅವನ ಆತಂಕಗಳು ಸೂಚಿ ಪೂರ್ಣವಾಗಲಿಲ್ಲ ಅಚಲೆ ನಗುನುಡಿ

ಯಲ್ಲಿ ಹೇಳಿದಳು "ಇರಲೊಲ್ಲದೇಕೆ ದುರ್ದಿನಗಳಲ್ಲಿ ನಾಯಿನರಿಗಳೂ ತಮ್ಮ ಮನೆ ಬಿಡುವುದಿಲ್ಲವಂತೆ ಅಂಥ ಕಾಲದಲ್ಲಿಯೇ ನೀವು ನನ್ನನ್ನು ಅಪರಿಚಿತ ಸ್ಥಳದಲ್ಲಿ ಮರವಡಿಯಲ್ಲಿ ತಂದು ಹಾಕಿದವರು ತೇವನೆಲ ಕಚ್ಚಾಗೋಡೆಗಳಿಗೆ ಭಯಪಡಬೇಕಾಗಿಲ್ಲ ಅಂದು ಸಾಯದಾಕೆ ಇಂದೂ ಬದುಕುವಳು " ರಾಮುಬಾಬುಗಳ ಕಡೆ ನೋಡಿ "ನೀವೇನೂ ಯೋಚಿಸಬೇಡಿರಿ ದೊಡ್ಡಪ್ಪ, ನಾವು ನಾಳೆ ಬೆಳಗ್ಗೆ ಹೋಗುವೆವು — ನಿಮ್ಮ ಋಣ ಏಳೇಳು ಜನ್ಮಕ್ಕೂ ತೀರುವುದಲ್ಲ ದೊಡ್ಡಪ್ಪ — ನಾವು ನಾಳೆ ಹೊರಡುತ್ತೇವೆ," ಎಂದಳು ಇದ್ದಕಿದ್ದ ಹಾಗೆಯೇ ಅಳು ಬಂದು ಓಡಿಹೋಗಿ ತನ್ನ ಕೋಣೆ ಹೊಕ್ಕು ಕದವಿಕ್ಕಿಕೊಂಡಳು

ರಾಮುಬಾಬು ವಜ್ರಾಹತರಂತೆ ನಿಶ್ಚಲರಾದರು ಅವರ ವಿಹ್ವಲ ವ್ಯಾಕುಲ ದೃಷ್ಟಿ ಅನತ ಮುಖದ ಸುರೇಶನನ್ನೊಮ್ಮೆ ಇಕ್ಕಿದ ಬಾಗಿಲನ್ನೊಮ್ಮೆ ನೋಡಿ 'ಏನಿದು ' ಹೀಗೇಕೆ ? ' ಎಂದು ಪ್ರಶ್ನಿಸಿತು ಆದರೆ ಅಂತರ್ಯಾಮಿಯ ಹೊರತು ಯಾರು ಉತ್ತರ ಕೊಡಬಲ್ಲರು ?

೧೭

ಮರುದಿನ ಮುಂಜಾನೆಯಿಂದಲೇ ಮೋಡಮುಸುಕಿತು ಆ ಮಲಿನ ಆಕಾಶದಡಿಯಲ್ಲಿ ಪ್ರಪಂಚವೇ ವಿಷಣ್ಣವಾದಂತಿತ್ತು ಬಾಗಿಲಲ್ಲಿ ಬಂಡಿ ಅಣಿಯಾಗಿತ್ತು ಕೆಲವು ಟ್ರಂಕು ಹಾಸಿಗೆ ಹೇರಿಯಾಗಿತ್ತು ಶುಭ ಮುಹೂರ್ತದಲ್ಲಿ ಅಚಲೆ ಅಟ್ಟ ಇಳಿದಳು ರಾಮುಬಾಬುಗಳ ಅಡಿಹುಡಿ ಮುಡಿದಳು ಮುಖದಲ್ಲಿ ಒತ್ತಾಯದ ನಗೆ ತಂದುಕೊಂಡು ಅವರೆಂದರು "ತಂಗೀ, ಮುದುಕ ಮನುಷ್ಯರ ಮಗಳಾಗುವುದರಿಂದ ರಗಳೆ ಬಹಳ ಪಾದಧೂಳಿ ಕೊಂಡು ಒಂದೆರಡು ಮೈಲಿ ಅಗಲಿದ ಮಾತ್ರಕ್ಕೆ ಬಗೆತರಿಯಿತೆಂದು ತಿಳಿಯಬೇಡವಮ್ಮಾ "

ಅಚಲೆಯ ಕಣ್ಣು ಒದ್ದೆಯಾದವು "ನಾ ಹಾಗೆ ಎಣಿಸುವುದಿಲ್ಲ ದೊಡ್ಡಪ್ಪ " ಎಂದಳು

ಮುದುಕನ ಕಣ್ಣೊಳಗೂ ನೀರು ಬಂದಿತು ಈ ಅಪರಿಚಿತ ಮಗಳು ದೂರ ಗೊತ್ತಿಲ್ಲದಲ್ಲಿಗೆ ಹೊರಟುಹೋಗುತ್ತಿದ್ದಾಳೇನೋ ಎಂದೆನಿಸಿತವರಿಗೆ "ನನಗೇನು ಅದು ಗೊತ್ತಿಲ್ಲವೆ ತಂಗೀ ' ಇಲ್ಲದೆ ಹೋದರೆ, ಗಂಡನೊಡನೆ ನಿಮ್ಮನೆಗೆ ನೀ ಹೋದರೆ ನನಗೇಕೆ ಕಣ್ಣೀರು ಬರಬೇಕು ?" ಎಂದು

ಕಂಬನಿ ಮಿಡಿದು ನಸುನಕ್ಕು ಮತ್ತೆಂದರು "ಹತ್ತಿರ ಇದ್ದಿ, ಹಗಲೂ ರಾತ್ರಿ ಕಾಡುತಿದ್ದೆ ಇನ್ನದು ಸಾಧ್ಯವಿಲ್ಲ ಆದರೂ ಮುಂದೆ ಬಡ್ಡಿಸಹಿತ ಮುಟ್ಟಿಸಿಕೊಳ್ಳದೆ ಬಿಡುವುದಿಲ್ಲ, ಗೊತ್ತಿರಲಿ"

ಸುರೇಶ ಹಿಂದೆ ಇದ್ದ ಅವನೂ ನಮಸ್ಕಾರ ಮಾಡಿದ. ಅವರು ಪಿಸುಮಾತಿನಲ್ಲಿ "ಇಲ್ಲಿ ನಿಮಗೆ ಸೊಗಸಿರಲಿಲ್ಲ ಎಂಬುದು ನಾ ಬಲ್ಲೆ ಸುರೇಶ ನಿಮ್ಮನೆಯೊಳಗೆ ಇದು ತಪ್ಪಲಿ ಎಂದೇ ಹರಸುವೆ," ಎಂದರು

ಅಚಲೆ ಸುರೇಶ ಬಂಡಿಯೇರಿದರು ರಾಮಬಾಬು ಹೇಳಿದರು: ಒಂದೆಕ್ಕ ತರಲಿಕ್ಕೆ ಹೇಳಿದ್ದೇನೆ ಹೊತ್ತು ಮುಳುಗುವುದರೊಳಗೇ ನಾನೂ ಬಂದುಬಿಡಬಹುದು, ಸಿಟ್ಟು ಮಾಡಿಕೊಳ್ಳಬಾರದಾಂ!"

ಬಂಡಿ ಹೊರಟುಹೋಯಿತು. 'ಇವರು ಸಮಯದೊಳಗೇ ಹೋದರು, ಒಳ್ಳೆಯದು ಮಾಡಿದರು' ಎಂದು ಅವರೆಂದುಕೊಂಡರು ಇಲ್ಲಿ ಸ್ಥಳ ಸಂಕೋಚ ಅಲ್ಲದೆ ತಮ್ಮ ವಿಧವೆ ತಂಗಿಯ ಸ್ವಭಾವವನ್ನು ಅವರು ಬಲ್ಲರು ಎರಡನೆಯವರ ನಾಡಿ ತಿಳಿದುಕೊಳ್ಳುವ ಕುತೂಹಲ ಅವಳಿಗೆ ಅಷ್ಟಿಷ್ಟಲ್ಲ ಅವಳು ಒಂದಾಕ್ಷಣ ಸುರಮೆಯ ಸೂಕ್ಷ್ಮ ಪರೀಕ್ಷೆ ನಡೆಸುವವಳೆ ಆದರ ಪರಿಣಾಮ ಏನೇ ಆಗಲಿ, ಸಂತೋಷಕರವಾಗಲಾರದು ಈ ಹುಡುಗಿ ಹೊತ್ತು ಬಂದ ಹಾಗೆ ಚತ್ತರಿಗೆ ಹಿಡಿಯುವವಳಲ್ಲ, ಸುಖಕ್ಕಾಗಿ ಸುಳ್ಳು ಹೇಳುವವಳಲ್ಲ ತನ್ನ ತಂದೆ ಬ್ರಾಹ್ಮ, ತಾನು ದೇವರು ದಿಂಡರು, ಮಡಿಮೈಲಿಗೆ ಒಪ್ಪುವವಳಲ್ಲ ಎಂಬುದನ್ನೂ ಇವಳು ಬಚ್ಚಿಡಲಾರಳು ಅದರಿಂದ ಮನೆಯಲ್ಲಾಗುವ ವಿಪ್ಲವವನ್ನು ನೆನೆದೇ ಅವರ ಮೈ ಜುಮ್ಮೆಂದಿತು ಅದೆಲ್ಲ ತಪ್ಪಿತು ಪುಣ್ಯಕ್ಕೆ

ಅಚಲೆಯಂದು ತಾನು ಬ್ರಾಹ್ಮಪುತ್ರಿಯೆಂದು ಹೇಳಿದಾಗ— ಸುರೇಶನ ಕೊರಳಲ್ಲಿ ಯಜ್ಞೋಪವೀತ ನೋಡಿದ್ದುದರಿಂದ—ರಾಮಬಾಬುಗಳಿಗೆ ಆಶ್ಚರ್ಯವೆನಿಸಿತ್ತು, ಆಘಾತವಾದಂತೆಯೂ ಆಗಿತ್ತು ಆದರೂ ಈ ಗುಪ್ತ ರಹಸ್ಯಕ್ಕೆ ಕಾರಣವೊಂದಿರಬೇಕೆಂದು ಅವರು ಬಗೆದಿದ್ದರು ಮನೆಯೊಳಗೆ ಜಗಳವಾಗಿ ಸುರೇಶಬಾಬು ಹೆಂಡತಿಯನ್ನು ಕಟ್ಟಿಕೊಂಡು ಹೊರಬಿದ್ದಿರಬೇಕೆಂದು ರಾಕ್ಷಸಿಯೊಮ್ಮೆ ಆಡಿದ ಮಾತು ಈಗ ನೆನಪಾಗಿ, ಸುರೇಶ ಬ್ರಾಹ್ಮ ಕನ್ಯೆಯನ್ನು ಮದುವೆಯಾದುದೇ ಜಗಳಕ್ಕೆ ಮೂಲವಾಗಿರಬೇಕೆಂದು ಅವರು ನಿಸ್ಸಂದೇಹವಾಗಿ ಭಾವಿಸಿದರು

ಮುದುಕ ನಿಷ್ಠಾವಂತ ಹಿಂದುವೇನೋ ಹೌದು ಆದರೆ ಆದರೆ ನಿಷ್ಠುರತೆ ಇರಲಿಲ್ಲ ಬ್ರಾಹ್ಮಣ ಸಂತಾನವಾದ ಸುರೇಶನ ಈ ದುರ್ಗತಿ ಅವರಿಗೆ ಸಂತೋಷಕರವಲ್ಲ ನಿಜ ಆದರೂ ಈ ಪ್ರೇಮ ವಿವಾಹ, ಅದಕ್ಕಾಗಿ ಸ್ವಜನತ್ಯಾಗ ಈ ಕಳ್ಳತನಗಳ ಸೌಂದರ್ಯ ಮಾಧುರ್ಯಗಳು ಅವರನ್ನು ಬಲು ಮುಗ್ಧಗೊಳಿಸಿದ್ದವು ಪೂರ್ವಾಪರ ಗೊತ್ತಿಲ್ಲದೆ ಅವರಿಗೆ ಇಂಬುಗೊಟ್ಟೆನಲ್ಲ ಎಂಬ ಭಾವನೆ ಆ ಸ್ವಾರಸ್ಯದಲ್ಲಿ ಮುಳುಗಿ ಹೋಗುತ್ತಿತ್ತು. ಹೆರವರ ಮನೆಯ ಸಂಕೀರ್ಣ ಸಂಕುಚಿತ ಪರಿಧಿಯಲ್ಲಿ ಒಬ್ಬರಿಗೊಬ್ಬರು ಮುಸ್ಸಿನ್ನುವ ಈ ಜೋಡಿ ತಮ್ಮ ಮನೆಯ ಸ್ವತಂತ್ರ ಪ್ರಶಸ್ತ ಸ್ಥಳದಲ್ಲಿ ಒಳ್ಳೆಯ ಶಾಂತಿಯನ್ನು ಹೊಂದೀತೆಂದು ಅವರೆಣಿಸಿದ್ದರು

ಹೊಳೆಗೆ ಜಳಕಕ್ಕೆ ಹೊರಟಾಗ ಆ ಮುದುಕನಿಗೆ ಅವರ ಯೋಚನೆಯೆ ಹೋಗುವಾಗ ಮುದುಕನಲ್ಲಿ ಸಿಟ್ಟು ಮಾಡಿಕೊಂಡೇ ಹೋದೆ ತಂಗೀ ತಮ್ಮ ಜನರಿಗಾಗಿ ನಮ್ಮನ್ನು ಹೊರಗೆ ಹಾಕಿದ ದೊಡ್ಡಪ್ಪ ಎಂದುಕೊಂಡಿದ್ದೀ ! ಆದರೆ ನಾಲ್ಕೇ ದಿನಗಳಲ್ಲಿ ನಿನ್ನ ಮುಖದಲ್ಲಿ ಕಣ್ಣಲ್ಲಿ ಆನಂದ ಮಿನುಗದಿದ್ದರೆ ಹೇಳಲಿ ಆಗ ' ಸಿಟ್ಟು ಇನ್ನೆಷ್ಟು ಉಳಿದಿದೆಯಮ್ಮ ನನ್ನಾಣೆ ಹೇಳು ' ಎಂದು ಕೇಳುವೆ ಹುಡುಗಿ ಅದಕ್ಕೇನು ಹೇಳುವಳೋ ನೋಡುವೆ

ಅವರ ಮುಖ ಪ್ರಶಾಂತ ನಿರ್ಮಲ ಹಾಸ್ಯದಿಂದ ಬೆಳಗಿತು ಮನೋರಂಗದಲ್ಲಿ ಒಂದು ಚಿತ್ರ ನಿಚ್ಚಳವಾಗಿ ಚಲಿಸಿತು ಸುರಮೆ ಬಾಯಿ ಮುಚ್ಚಿಕೊಂಡು ನಕ್ಕು ಕೆಲಸದ ನೆವದಿಂದ ಹೊರಟುಹೋದಳು, ಮರುಕ್ಷಣದಲ್ಲಿ ತಾಲಿಯಲ್ಲಿ ಸಂದೇಶ ತಂದು ಗಂಭೀರವಾಗಿ ನುಡಿದಳು ' ನಾ ಮಾಡಿದ ಈ ತಿಂಡಿ ತಿನ್ನದಿದ್ದರೆ ದೊಡ್ಡಪ್ಪಾ, ಚೆಲೋ ಜಗಳವೇ ಆದೀತು ! '

* * *

ನಾಳೆ ಬೆಳಗ್ಗೇ ಎಲ್ಲರು ಬರುವರು ತಂತಿ ಬಂದಿದೆ ರಾಜಕುಮಾರ ಮೊಮ್ಮಗ, ರಾಜಕುಮಾರಿ ಸೋದರಸೊಸೆ ಬರುವರೆಂದ ಮೇಲೆ ಸಂಗಡ ಮಂದಿಮಕ್ಕಳು ಕಡಿಮೆ ಇರಲಾರರು ಆದುದರಿಂದ ಮನೆಯಲ್ಲಿ ತುಂಬ ಕೆಲಸವಿರುವುದು ಆಗ ಹೋಗಲಿಕ್ಕಾಗುವುದಿಲ್ಲ ಈವೊತ್ತೇ ಹೋಗಬೇಕು ಮಗಳ ಮನೆಗೆ ಎಂದು ರಾಮಬಾಬು ಯೋಚಿಸಿದರು ಮನೆಯ ಲಕ್ಷಣ ತೋರುತ್ತಿದ್ದುದರಿಂದ ಇನ್ನೂ ಹೊತ್ತಿರುವಾಗಲೇ ಒಕ್ಕ ಬಾಡಿಗೆ

ಮಾಡಿಕೊಂಡು ಹೊರಟರು ಎಕ್ಕವನ ಮೆಚ್ಚಿನ ಆಸೆಯಿಂದ ಎಷ್ಟು ತ್ವರಿತ ಹೊಡೆದರೂ ಮನೆ ಮುಟ್ಟುವುದರೊಳಗೇ ಸಣ್ಣಗೆ ಮಳೆ ಆರಂಭವಾಯಿತು

"ಈ ಹೊತ್ತಿನೊಳಗೆ ಏಕೆ ಬಂದಿರಿ ದೊಡ್ಡಪ್ಪ? ಇನ್ನೊಂದು ಸ್ವಲ್ಪ ಆಗಿದ್ದರೆ ತೊಯ್ಸಿಕೊಳ್ಳುತ್ತಿದ್ದಿರಿ" ಎಂದಳು ಅಚಲೆ

ಅವಳ ಮುಖದಲ್ಲಿ, ಸ್ವರದಲ್ಲಿ ಭಾವೀ ಆನಂದದ ಚಿಹ್ನವೂ ಇಲ್ಲ. ಮುದುಕನ ಕಲ್ಪನಾಮಾಲೆಯನ್ನು ಯಾರೋ ಸರಕ್ಕನೆ ಎಳೆದು ಹರಿದೊಗೆದಂತಾಗಿ ಅವರ ಮನಸು ಕುಗ್ಗಿತು ಆದರೂ ಮೋರೆಯ ಮೇಲಿನ ಉತ್ಸಾಹ ಕಳೆದುಕೊಳ್ಳದೆ, "ಸರಿ ಸರಿ, ಹಾಗಾದರೆ ಮಾಡುವುದೇನು? ತೊಯ್ದರ ಸಹಿಸಬಹುದು, ಚಿರದಿನ ತ್ಯಾಜ್ಯಪುತ್ರನಾಗಿ ಹೇಗೆ ಇರುವುದವಮ್ಮಾ?" ಎಂದರು

ಅಚಲೆ ಹುಚ್ಚಳಂತೊಮ್ಮೆಲೆ ಓಡಿಬಂದು ಅವರ ಎದೆಯ ಮೇಲೆ ಮುಖವಿಟ್ಟು ಬಿಕ್ಕಿಬಿಕ್ಕಿ ಅಳುತ್ತ, "ದೊಡ್ಡಪ್ಪ, ನನ್ನನ್ನೇಕೆ ಇಷ್ಟು ಪ್ರೀತಿಸುತ್ತೀರಿ?— ನಾ ಲಜ್ಜೆಯಿಂದ ಮಣ್ಣುಗೂಡುತ್ತಿದ್ದೇನೆ" ಎಂದಳು

ಬಹಳ ಹೊತ್ತು ಮುದುಕ ಮಾತನಾಡಲಿಲ್ಲ ಅವಳನ್ನೊಂದು ಕೈಯಿಂದ ಎದೆಗವಚಿಕೊಂಡು ಇನ್ನೊಂದು ಕೈ ತಲೆಯ ಮೇಲಾಡಿಸುತ್ತಿದ್ದರು ಸಮಾಜವೊಪ್ಪದ ವಿವಾಹ, ಆದಕ್ಕಾಗಿ ತನ್ನವರೊಡನೆ ತಂದೆ ತಾಯಿಗಳೊಡನೆ ಕೂಡ— ವಿದ್ರೋಹವಿಚ್ಛೇದ, ಕಲಹ ಗೃಹತ್ಯಾಗ ಮೊದಲಾದ ಬಹಳಾವೃತ್ತಿ ರೂಪವಾದ ಯೋಚನಾಧಾರೆಯಲ್ಲಿಯೇ ಅವರ ಸ್ನೇಹಾರ್ದ್ರಚಿತ್ತ ತೇಲಿಹೋಯಿತು ಹೀಗೆಯೇ ನೀರವನಾದ ವೃದ್ಧ ಮತ್ತು ರೋದಿಸುವ ತರುಣಿ ಇಬ್ಬರೂ ಬಹಳ ಹೊತ್ತು ಏಕೀಭಾವದಿಂದ ನಿಂತಿದ್ದರು ಬಳಿಕ ಮುದುಕ ಮೆಲ್ಲಗೆ ಮಾತನಾಡಿದರು "ಇದರೊಳಗೇನು ಲಜ್ಜೆ ತಂಗೀ! ನೀ ಮಗಳು, ನೀ ನನ್ನ ಅದೇ ಸತೀಲಕ್ಷ್ಮಿ, ಬಹುದಿನದ ಹಿಂದೆ ನಾಲ್ಕುದಿನ ಮಾತ್ರ ನನ್ನ ಮಡಿಲಲ್ಲಿ ಆಡಿ ಹೊರಟುಹೋಗಿದ್ದೆ,— ಕರುಳು ಹರಿದುಕೊಳ್ಳಲಾರದೆ ಮತ್ತೆ ತಂದೆಯ ಹೃದಯಕ್ಕೆ ಬಂದಿದ್ದೀ— ನಿನ್ನ ನೋಡಿದಾಕ್ಷಣ ನಾ ಇದನ್ನರಿತಿದ್ದೇನೆ" ಎಂದು ಅವಳನ್ನು ಹತ್ತಿರದ ಚೌಕಿಯಲ್ಲಿ ಕುಳ್ಳಿರಿಸಿ, ಇದರಲ್ಲಿ ಲಜ್ಜೆನಾಚಿಕೆ—ಏತರದು ಎಂಬುದನ್ನೇ ಪುನಃ ಪುನಃ ಹೇಳತೊಡಗಿದರು "ಯಾವಳು ಸತಿ ಆದಿಶಕ್ತಿಯೋ ಅವಳೇ ಗಂಡನನ್ನು ನೆ ಮಾಡಲಿಕ್ಕೆ ಹೆತ್ತವರೊಡನೆ ಜಗಳವಾಡಿ ಹೋಗಿದ್ದಳು.

ಮತ್ತೆ ಎಲ್ಲವನ್ನೂ ಹೊಂದುವೆ, ಇಂದು ವಿಮುಖರಾಗಿದ್ದವರು ಮರಳಿ ಸಮುಖರಾಗುವರು, ಮಗಸೊಸೆಯರನ್ನು ತಿರುಗಿ ಮನೆ ತುಂಬಿಸಿಕೊಳ್ಳುವರು ನೋಡಿಯಾದರೂ ನೋಡು, ನನ್ನ ಆಶೀರ್ವಾದ ಎಂದೂ ನಿಷ್ಫಲವಾಗುವುದಿಲ್ಲ ''

ಮುದುಕ ಏನೇನೋ ಬಡಬಡಿಸಿದರು ಅದರ ಸಾರಾಂಶ ಏನಾದರೇಕೆ ಇರಲೊಲ್ಲದು ಆದರೆ ಅದರ ಭಾರಕ್ಕೆ ಕೇಳುವವಳ ಆನತ ಮುಖ ಮೆಲ್ಲಮೆಲ್ಲನೆ ಧೂಳಿಗೂಡಲುಪಕ್ರಮಿಸಿತ್ತು ಮಳೆ ಸುರಿಯತೊಡಗಿತ್ತು ಆಗ ಸುರೇಶ ತೋಯಿಸಿಕೊಂಡು ರೊಜ್ಜಿನಲ್ಲಿ ಕಚಪಚನೆ ಧಾವಿಸಿ ಮನೆಯೊಳಗೆ ಬರುತ್ತಿರುವುದನ್ನು ಕಂಡರು ಆಗ ಅಚಲೆ ಎದ್ದು ಮಳೆನೀರು ಹಿಡಿದು ಕಣ್ಣು ತೊಳೆದುಕೊಂಡು ಪುನಃ ತನ್ನ ಸ್ಥಳದಲ್ಲಿ ಕುಳಿತಳು

ಸುರೇಶ ಮೇಲೆ ಬಂದು, ರಾಮುಬಾಬುಗಳನ್ನು ಕಂಡು ವಿಸ್ಮಯದಿಂದ ಮಾತನಾಡಲು ಹವಣಿಸಿದೊಡನೆ ಅವರು ವ್ಯಸ್ತರಾಗಿ, "ಮಾತುಕತೆ ಹಿಂದಾಗಿ ಆಗಲಿ, ನಾ ಏನು ಓಡಿಹೋಗುವುದಿಲ್ಲ ಮೊದಲು ಒದ್ದೆಬಟ್ಟೆ ಬಟ್ಟು ಬಾ '' ಎಂದರು

ಸುರೇಶ ನಕ್ಕು "ಅಷ್ಟೇನು ತೊಯ್ದಿಲ್ಲ" ಎನ್ನುತ್ತ ಒಂದು ಚೌಕಿಯನ್ನೆಳೆದುಕೊಂಡು ಕುಳಿತುಕೊಳ್ಳತೊಡಗಿದ ಅಚಲೆ ಮುಖವೆತ್ತಿ ನೋಡಿ "ದೊಡ್ಡಪ್ಪನೇನು ಕೆಟ್ಟದ್ದಕ್ಕೆ ಹೇಳುವನೆ? ಒಂದು ತಿಂಗಳು ಕೂಡ ಆಗಿಲ್ಲ ನಿಮ್ಮ ಘನ ಜಡ್ಡು ನೆಟ್ಟಗಾಗಿ—ಮತ್ತೆ ಮತ್ತೆ ನನಗೆಷ್ಟು ಶಿಕ್ಷೆ ವಿಧಿಸಬೇಕೆನ್ನುತ್ತೀರಿ ? " ಎಂದಳು

ಅವಳ ಮಾತಿನಲ್ಲಿಯ ದೃಷ್ಟಿಯಲ್ಲಿಯ ವ್ಯವಧಾನಕ್ಕೆ ಇಬ್ಬರೂ ವಿಸ್ಮಿತರಾದರು ಆದರೆ ವಿಸ್ಮಯ ಪ್ರವಾಹದ ಮುಖ ಮಾತ್ರ ವಿಪರೀತವಾಗಿದ್ದವು ಸುರೇಶ ಅಪ್ಪಣೆಯನ್ನು ಪಾಲಿಸಲು ನೀರವವಾಗಿ ಹೊರಟುಹೋದ, ರಾಮುಬಾಬು ಹೊರಗಡೆ ನೋಡುತ್ತ ಕುಳಿತರು

ಮಳೆ ಸುರಿಯುತ್ತಲೇ ಇತ್ತು ರಾತ್ರಿ ಹೆಚ್ಚಿದಷ್ಟೂ ಅದರ ಪ್ರಕೋಪವೂ ಹೆಚ್ಚುತ್ತಲಿತ್ತು ಬಹುದಿನದ ಅನಾವೃಷ್ಟಿಯಿಂದ ಭೂಮಿ ಶುಷ್ಕಪ್ರಾಯವಾಗಿತ್ತು ಇದೊಂದೇ ರಾತ್ರಿಯಲ್ಲಿ ಆ ಅಭಾವವನ್ನೆಲ್ಲ ತುಂಬಿಕೊಡಲು ವಿಧಾತೃ ಬದ್ಧಕರನಾಗಿದ್ದನೇನೋ

ರಾಮುಬಾಬುಗಳ ತವಕವನ್ನು ಕಂಡು, "ತಿರುಗಿ ಹೋಗುವುದು ಬಹಳ

ಕಷ್ಟ ದೊಡ್ಡಪ್ಪ ಈ ರಾತ್ರಿ ಹೋಗದಿದ್ದರೆ ಆಗದೊ ? " ಎಂದು ಅಚಲೆ ಕೇಳಿದಳು

ಅವರು ನಕ್ಕರು ಮನಸಿನ ಚಾಂಚಲ್ಯವನ್ನು ದಮನಿಸಿಕೊಂಡು ನುಡಿದರು " ಕಷ್ಟ ಎಂದೇನಲ್ಲ, ಈ ದುರ್ಯೋಗದಲ್ಲಿ ಈ ಹೊಸ ಸ್ಥಳದಲ್ಲಿ ನಿಮ್ಮನ್ನು ಬಿಟ್ಟು ಹೋಗುತ್ತಿರಲಿಲ್ಲ ಆದರೆ ನಾಳೆ ಬೆಳಗ್ಗೇ ಅವರು ಬರುತ್ತಾರ, ನಾ ರಾತ್ರಿಯೇ ತಿರುಗಿ ಹೋಗದೆ ವಿಧಿಯಿಲ್ಲ ಹೀಗೆಯೇ ಏನು ಬೆಳತನಕ ಇರಲಿಕ್ಕಿಲ್ಲ, ಒಂದೆರಡು ಗಂಟೆಗಳೊಳಗೆ ಕಡಿಮೆಯಾದೀತು ನಾ ಅದನ್ನೇ ನೋಡುತ್ತಿದ್ದೇನೆ "

ಈ ಪ್ರಸಂಗವನ್ನನುಸರಿಸಿ ಮರುದಿನ ಬರಲಿರುವವರ ವಿಷಯ ಪ್ರಾರಂಭವಾಗಿ, ವಿಚಾರಧಾರೆ ಪ್ರಪಂಚದ ಕಡೆ, ಸಮಾಜದ ಕಡೆ, ಧರ್ಮಾಧರ್ಮ ಪಾಪಪುಣ್ಯ ಇಹಲೋಕ ಪರಲೋಕಗಳ ಕಡೆ ಹೀಗೆ ನಾನಾಮುಖವಾಗಿ ಹರಿಯಿತು ರಾತ್ರಿ ಎಷ್ಟಾಯಿತೆಂಬ ಅರಿವು ಕೂಡ ಇಲ್ಲದಷ್ಟು ಇಬ್ಬರೂ ಅದರಲ್ಲಿ ತನ್ಮಯರಾಗಿದ್ದರು ಹೊರಗಿನ ಮಳೆ ಮಿಂಚು ಗುಡುಗು-ಕಗ್ಗತ್ತಲೆಗಳ ವಿಕರಾಳತೆಯೂ ಅವರ ಲಕ್ಷ್ಯಕ್ಕೆ ಬರಲಿಲ್ಲ ಮುದುಕನಲ್ಲಿ ಸಂಚಿತವಾಗಿದ್ದ ಜ್ಞಾನ-ಭಕ್ತಿ-ವೈರಾಗ್ಯಗಳಿಗೆ ಅವರ ಪರಮ ಸ್ನೇಹಪಾತ್ರಳ ಮರಿಗೆ ಅಬಾಧಿತವಾಗಿ ಹರಿಯಲು ಹಾದಿಸಿಕ್ಕು ಎರಡೇ ವ್ಯಕ್ತಿಗಳ ಆ ಸಭೆ ಮಾಧುರ್ಯಮಂಡಿತವಾಯಿತು

" ಅವ್ವಾ, ರಾತ್ರಿ ಬಹಳವಾಗಿದೆ, ಹನ್ನೆರಡು ಹೊಡೆದುಹೋಗಿದೆ, ನಿಮ್ಮ ತಟ್ಟೆ ಕಳಿಸಬೇಕೆ ? " ಎಂದು ಆಳು ಬಂದು ಕೇಳಿದ

ಅಚಲೆ ಚಕಿತಳಾಗಿ ಕೇಳಿದಳು " ಹನ್ನೆರಡಾಯಿತು ? ಬಾಬೂ ? "

" ಅವರಿದೇ ಉಂಡು ಮಲಗಲಿಕ್ಕೆ ಹೋದರು "

ಸುರೇಶಬಾಬು ಆಗ ಹೋದವರು ತಿರುಗಿ ಬರಲೇ ಇಲ್ಲ ಎಂಬುದು ಈಗ ಅವರ ಗಮನಕ್ಕೆ ಬಂದಿತು ಅಚಲೆ ಬಗ್ಗಿ ನೋಡಿದಳು ಆವನ ಮಲಗುಕೋಣೆಯ ತೆರೆಯ ಸಂದಿನಿಂದ ಬೆಳಕು ಕಂಡಿತು ರಾಮಬಾಬು ಕಳವಳದಿಂದ, " ನಾ ಬಹಳ ಅನ್ಯಾಯ ಮಾಡಿದೆನಮ್ಮಾ— ಆತನ ಊಟವಾಯಿತೇ ಇಲ್ಲವೇ ನೋಡಿಕೊಳ್ಳಲು ನಿನ್ನ ಬಿಡಲಿಲ್ಲ ಬಹಳ ಅನ್ಯಾಯವಾಯಿತು ಹೋಗು ತಂಗೀ, ನೀ ಊಟಕ್ಕೆ ಹೋಗು. " ಎಂದರು

ಅಚಲೆ ಅದನ್ನು ಕಿವಿಗೆ ಹಾಕಿಕೊಳ್ಳದೆ ಭೃತ್ಯನನ್ನು ಕೇಳಿದಳು:

" ಕೋಚವಾನ ಹೊತ್ತಿಗೆ ಗಾಡಿ ಹೂಡಿಕೊಂಡು ಏಕೆ ಬರಲಿಲ್ಲ ? "

" ಕುದುರೆ ಹೊಸವು, ಈ ಗಾಳಿಮಳೆ ಕಾಳಿನೊಳಗೆ ಹೊರಡಲು ಅವನಿಗೆ ಧೈರ್ಯ ಸಾಲಲಿಲ್ಲ "

" ಹಾಗಿದ್ದರೆ ಮತ್ತೊಂದು ಗಾಡಿ ಏಕೆ ತರಲಿಲ್ಲ ? "

ಭೃತ್ಯ ಮಾತನಾಡಲಿಲ್ಲ ಅದರಿದರರ್ಥ ತಪ್ಪಿನ ಒಪ್ಪಿಗೆ ಎಂದಲ್ಲ, ಹಾಗವರಿಗೆ ಅಪ್ಪಣೆಯಾಗಿರಲಿಲ್ಲ ಆಗ ರಾಮಬಾಬು ಹೇಳಿದರು: " ಗಾಡಿಯ ಅಗತ್ಯವಿಲ್ಲ— ಹೋಗುವುದು ಬಿಟ್ಟರೂ ನಡೆಯುವುದು— ಚುಮುಚುಮು ನಸುಕಿನೊಳಗೇ ಸ್ಟೇಶನಿಗೆ ತಲುಪಿದರಾಯಿತು ನಾ ರಾತ್ರಿ ಏನೂ ತೆಗೆದುಕೊಳ್ಳುವುದಿಲ್ಲ ನೀವಿಬ್ಬರೂ ಉಂಡು ಮಲಗಿರಮ್ಮಾ, ಮಾತಿನ ಭರದಲ್ಲಿ ಬಹಳ ರಾತ್ರಿಯಾಗಿಬಿಟ್ಟಿತು— ಮಹಾ ಅನ್ಯಾಯ ವಾಯಿತು— " ಎಂದು ಒಂದು ರೀತಿಯ ಬಲವಂತದಿಂದಲೇ ಅವಳನ್ನು ಕೆಳಗೆ ಕಳಿಸಿದರು ಹದಿನೈದು ನಿಮಿಷಗಳಲ್ಲಿ ಆಕೆ ತಿರುಗಿ ಬಂದುದನ್ನು ಕಂಡು ಅವರು ವ್ಯಗ್ರರಾಗಿ ನುಡಿದರು " ಹೊತ್ತಾಗಿದೆಯಮ್ಮ, ಮಲಗಿಕೋ ಹೋಗು ನಾ ಇಲ್ಲಿಯೇ ಕೋಚಿನ ಮೇಲೆ ಸೊಗಸಾಗಿ ನಿದ್ರಿಸುವೆ ನನಗೇನೂ ಕಷ್ಟ ತೊಂದರೆಯಾಗುವುದಿಲ್ಲ ಹೋಗು, ನೀ ಮಲಗಿಕೋ. "

ಅವರ ಸಾಗ್ರಹ ನಿವೇದನೆ ಮತ್ತು ಉತ್ತೇಜನ ಅಚಲೆಗೆ ಒಂದು ಬಗೆಯ ಮಾಟವಾಯಿತು ಮೋಸದಿಂದ ಸಂಪಾದಿಸಿದ್ದ ನಿತ್ಯ ಸುಭೇಚ್ಛು ವಾದ ಪಿತೃಪ್ರಸವಾನ ವೃದ್ಧನ ಸ್ನೇಹ-ಸಮ್ಮಾನಗಳೇ ಅವಳ ದುಃಸಮಯದಲ್ಲಿ ಅವಳ ಗಂಟಲನ್ನು ಹಿಡಿದವು , ಅತ್ಯಂತ ಕಸುವಿನಿಂದ ಸುರೇಶನ ನಿರ್ಜನ ಶಯನ ಮಂದಿರದ ಕಡೆ ತಳ್ಳತೊಡಗಿದವು ಹಿಂದಕ್ಕೆ 'ದುರ್ದಿನ'ದ ರಾತ್ರಿಯೊಂದು ತನ್ನನ್ನು ಗಂಡನಿಂದ ಬೇರ್ಪಡಿಸಿತ್ತು, ಈಗ ಅಂತಹದೇ 'ದುರ್ದಿನ'ದ ಅಭಿಶಾಪ ನಿರಂತರ ಅಂಧಕಾರದಲ್ಲಿ ಮುಣುಗಿಸಲು ಅಣಿಯಾಗಿದೆ ಎಂದು ಅವಳಿಗೆನಿಸಿತು ಆದರೂ ಎಂದಿನಂತೆ ಮಿಥ್ಯೆಯೇ ಜಯಶಾಲಿಯಾಗಿ ಅವಳನ್ನು ಸತ್ಯ ಪ್ರಕಟನೆ ಮಾಡಗೊಡಲಿಲ್ಲ ಅವಳು ಪಿಟ್ಟೆನ್ನದೆ, ಒಮ್ಮೆ ತಿರುಗಿ ಕೂಡ ನೋಡದೆ, ಮೆಲ್ಲಮೆಲ್ಲನೆ ಸುರೇಶನ ಕೋಣೆಗೆ ಹೋದಳು

ಹೊರಗಡೆ ಮತ್ತ ಪ್ರಕೃತಿ ಉದ್ಧಟತನವನ್ನು ಹಾಗೇಯೇ ಸಾಗಿಸಿತ್ತು; ಪ್ರಗಾಢ ಅಂಧಕಾರದಲ್ಲಿ ವಿದ್ಯುತ್ತು ನಗುತ್ತಲೇ ಇತ್ತು , ಇಡೀ ರಾತ್ರಿ

ಕೊಂಚವೂ ಪರಿವರ್ತನೆಯಾಗಲಿಲ್ಲ

ಹೊಸ ಸ್ಥಳದಲ್ಲಿ ರಾಮುಬಾಬುಗಳಿಗೆ ನಿದ್ದೆ ಚೆಲೋ ಹತ್ತಲಿಲ್ಲ; ವಿಶೇಷತಃ ಯೋಚನೆಯ ಮೂಲಕ ಬಹಳ ನಸುಕಿನಲ್ಲಿಯೇ ನಿದ್ರಾಭಂಗ ವಾಯಿತು ಹೊರಗೆ ಹೋಗಿ ನೋಡಿದರು ಮಳೆ ನಿಂತಿದ್ದರೂ ಅಬ್ಬರ ಅಡಗಿರಲಿಲ್ಲ ಆಳುಗಳು ಯಾರಾದರೂ ಎದ್ದಿರುವರೇನೋ ನೋಡಲು ವರಾಂಡಕ್ಕೆ ಹೋದರು ಅಲ್ಲಿ ಮೇಜಿನ ಮೇಲೆ ಮುಖವಿಟ್ಟು ಕುರ್ಚಿಯ ಮೇಲೆ ಯಾರೋ ಕುಳಿತಿದ್ದರು ಅವರು ಚಕಿತರಾಗಿ ಹತ್ತಿರ ಹೋಗಿ ವಿಸ್ಮಯಗೊಂಡು ಕೇಳಿದರು "ಯಾರು, ಸುರಮಾ? ಇಷ್ಟು ಬೇಗನೆ ಏಕೆ ಎದ್ದೆ?"

ಸುರಮೆ ಸ್ವಲ್ಪಮಾತ್ರ ಮೇಲೆ ನೋಡಿ ಪುನಃ ಮೇಜಿನ ಮೇಲೆ ಮುಖವಿಟ್ಟಳು ಅವಳ ಮೋರೆ ಹೆಣದಂತೆ ಬೆಳ್ಳಗಾಗಿತ್ತು ಕಣ್ಣೊನೆಗಳಲ್ಲಿ ದಟ್ಟಕಪ್ಪು, ಅಶ್ರುಧಾರೆ ಹರಿಯುತ್ತಿತ್ತು

೩೮

ಮುಂಜಾನೆ ಒಂದು ಮುಕ್ಕು ಬಿಸಿ ಚುರುಮುರಿ ತಿಂದು ಚಾ ಕುಡಿದು ತೃಪ್ತಿಗೊಂಡು ಕೇದಾರಬಾಬು ಮೃಣಾಲಳಿಗೆಂದರು "ತಂಗೀ, ನಿನ್ನ ಈ ಮುಕ್ಕು ಚುರುಮುರಿ ಬಟ್ಟಲು ಚಾದೊಳಗೆ ಏನು ಅಮೃತವಿದೆಯೋ— ಒಂದು ತಿಂಗಳಾದರೂ ಇಲ್ಲಿಂದ ಮಿಸುಕಾಡದಾಗಿದ್ದೇನೆ"

ಅಚಲೆಯ ಸಂಬಂಧದಿಂದ ಮೃಣಾಲಳೂ ಅವರನ್ನು ಅಪ್ಪ ಎಂದು ಸಂಬೋಧಿಸತೊಡಗಿದ್ದಳು ಅವಳೆಂದಳು "ಇಲ್ಲಿಂದ ಓಡಿಹೋಗಲು ನೀವೇಕಿಷ್ಟು ಆತುರರಾಗಿರುವಿರಿ ಅಪ್ಪಾ? ನಿಮ್ಮ ಈ—ನನ್ನ ಸೇವೆಯಲ್ಲೇನಾದರೂ ಕುಂದೇ?"

ಮೈಮರೆವಿನಿಂದ 'ನಿಮ್ಮ ಈ ಮಗಳು' ಎಂದು ಮೃಣಾಲಳ ಬಾಯಿಂದ ಹೊರಡಲಿತ್ತು ಆದರೆ ಅಷ್ಟಕ್ಕೇ ತಡೆದು ಬೇರೆ ರೀತಿಯಿಂದ ಹೇಳಿದಳು ಅಂತೆಯೇ ಆ ಇಂಗಿತವನ್ನು ಕೇದಾರಬಾಬು ತಿಳಿದರೂ ತಿಳಿಯಬಯಸಲಿಲ್ಲ ಆದರೆ ಅವರ ದನಿ ಸಕರುಣವಾಯಿತು. "ಯಾರಿಗೆ ಓಡಿಹೋಗಲು ಆತುರವಮ್ಮಾ? ನೀ ಮಾಡಿದ ಚಾ, ನಿನ್ನ ಕೈಯಡಿಗೆ, ನಿನ್ನ ಈ ಮಣ್ಣಮನೆ ಬಿಟ್ಟು ನನಗೆ ಸ್ವರ್ಗಕ್ಕೆ ಹೋಗಲೂ ಮನಸ್ಸಾಗುವುದಿಲ್ಲ ಆ ಸಣ್ಣ ಕಿಡಿಕಿಯ ಹತ್ತಿರ ಕುಳಿತು ನಾನೆಷ್ಟೋ ದಿನ ಯೋಚಿಸು

ತ್ತಿದ್ದೇನೆ, ಮೃಣಾಲ, ದೇವರ ದಯೆಯಿಂದ ಇನ್ನೆರಡು ವರ್ಷ ಬದುಕಿದ್ದರೆ, ಕಲಕತ್ತೆಯಲ್ಲಿದ್ದು ಇಡೀ ಜೀವನದಲ್ಲಿ ಮಾಡಿಕೊಂಡ ನಷ್ಟವನ್ನೆಲ್ಲಾ ತುಂಬಿಕೊಳ್ಳುವೆ, ಆ ಬಂಡವಾಳವನ್ನು ಕೈಲಿ ತೆಗೆದುಕೊಂಡು ಅವನ ಬಳಿ ಹೋಗಿ ನಿಲ್ಲಲಿಕ್ಕಾಗುವುದು ”

ಈ ಮಾತು ಎಷ್ಟು ವೇದನೆಯಿಂದ ಆಡಿದರು, ಮತ್ತು ಎಂತಹ ಮರ್ಮಾಂತಿಕ ಲಜ್ಜೆಯಿಂದ ಆಜನ್ಮಪರಿಚಿತವಾದ ಕಲಕತ್ತೆಯ ಮನೆ-ಮಾರು ಜನ-ಸಮಾಜಗಳನ್ನು ಸಂಪೂರ್ಣವಾಗಿ ತ್ಯಜಿಸಿ ಈ ಕಾಡುಗುಡಿಸಲಿನಲ್ಲಿ ಶೇಷಾಯುಷ್ಯವನ್ನು ಕಳೆಯಬೇಕೆಂಬ ಅಭಿಲಾಷೆಯನ್ನು ವ್ಯಕ್ತಗೊಳಿಸಿದರು ಎಂಬುದನ್ನು ಮೃಣಾಲ ಅರಿತಳು ಎಂತಲೇ ಏನೂ ಹೇಳದೆ ನೀರವವಾಗಿ ಕಪ್ಪುಸಾಸರುಗಳನ್ನು ತೆಗೆದುಕೊಂಡು ಹೊರಟುಹೋದಳು.

ಕೇದಾರಬಾಬು ಇಲ್ಲಿಗೆ ಬಂದು ತಿಂಗಳು ತಿಂಗಳುವರ್ಷವಾಗಿತ್ತು. ಈವರೆಗೂ ತಿರುಗಿ ಹೋಗುವುದಕ್ಕೇ ಆಗಿರಲಿಲ್ಲ ಮಹಿಮ ಸುರೇಶನಲ್ಲಿ ಜಡ್ಡಿನಿಂದ ಮಲಗಿದಾಗ ಈ ವಿಧವೆ ಹುಡುಗಿಯ ಮೊದಲ ಗುರುತಾಗಿತ್ತು ಅದರಿಲ್ಲಿಗೆ ಬಂದಮೇಲಾದ ಪರಿಚಯು ಅವರ ಮೈಮನಗಳಿಗೆ ಬಂಗಾರದ ಬೇಡಿಯಾಗಿಬಿಟ್ಟಿತು ಅದನ್ನು ಬಿಡಿಸಿಕೊಂಡು ಹೋಗುವುದೇ ಅವರಿಗೆ ಅಸಾಧ್ಯವಾಯಿತು

ಅವರಿಗೆ ಮಹಿಮನ ಬೆಟ್ಟಿಯಾಗಲಿಲ್ಲ ಅವರು ಬರುವ ಸುದ್ದಿ ತಿಳಿದೊಡನೆ ಅವನು ಹೊರಟುಹೋಗಿಬಿಟ್ಟಿದ್ದ ಆಗ ಮೃಣಾಲ ಅವನನ್ನು ತಡೆಯಲಿಲ್ಲ ಏಕೆಂದರೆ ಅವನ ಸಂಯಮ ಸಹಿಷ್ಣುತೆಗಳ ಬಗ್ಗೆ, ಬುದ್ಧಿವಿವೇಚನೆಯ ಬಗ್ಗೆ ಅವಳಿಗೆ ಬಹಳ ವಿಶ್ವಾಸವಿತ್ತು ; ಅಚಲೆಯ ಮೋರೆ ನೋಡಬಾರದೆಂದು ಮಹಿಮ ಹೀಗೆ ಓಡುತ್ತಿದ್ದಾನೆಂದು ಅವಳು ನಿಶ್ಚಯವಾಗಿ ಭಾವಿಸಿದ್ದಳು ತನ್ನ ಕಾಗದ ಮುಟ್ಟಿದ ಕೂಡಲೆ ಇಷ್ಟು ಅವಸರದಿಂದ --ಮಗಳು-ಅಳಿಯಂದಿರಲ್ಲಿ ಒಡಬಂಡಿಕೆ ಮಾಡಿಸುವುದಕ್ಕಾಗಿ-- ಮಗಳನ್ನು ಕರೆದುಕೊಂಡೇ ಅವರು ಬರುತ್ತಿರುವರೆಂದು ಆಕೆ ಬಗೆದಿದ್ದಳು ಆದರೆ ಬಂದರು ಅವರೊಬ್ಬರೆ.

ಇಂದಿಗೂ ಯಾವುದೂ ಪರಿಷ್ಕಾರವಾಗಲಿಲ್ಲ ಒರೆ ಸಂಶಯದ ಹೊರೆಯಿಂದ ಉತ್ತರೋತ್ತರ ಭಾರವಾದ ದಿನಗಳು ಒಂದರ ಹಿಂದೊಂದು ನೀರವವಾಗಿ ಸಾಗಿದ್ದವು. ಮೇಲ್ಗಡೆ ನೋಡುತ್ತಿದ್ದಾಗ ಎನಿಸುತ್ತಿದ್ದುದಿಷ್ಟೇ.

ದುರ್ಭೇದ್ಯ ಮೋಡದ ಥರಗಳು ಒಂದಿಲ್ಲೊಂದು ದಿನ ಹರಿಯಬಹುದು; ಆದರೆ ಅದರ ಹಿಂದೆ ಅಂಧಕಾರವೇ ಸಂಚಿತವಾಗಿದೆಯೋ ವಿನಾ ಬೆಳುದಿಂಗಳಿಲ್ಲ

ಸುರೇಶನ ಅತ್ತಿತ್ವ ಕಾಣೆಯಾದ ಸೋದರಳಿಯನ ಬಗ್ಗೆ ವ್ಯಾಕುಲಗೊಂಡು ಮೃಣಾಲಳಿಗೆ ಒಂದು ಕಾಗದ ಬರೆದಳು ಅದು ಕೇದಾರ ಬಾಬುಗಳ ಕೈಗೆ ಸಿಕ್ಕಿತು ಮಹಿಮ ದೊಡ್ಡ ಜಮೀನುದಾರರೊಬ್ಬರಲ್ಲಿ ಗೃಹಶಿಕ್ಷಕನಾಗಿದ್ದಾನೆಂದು ಸುದ್ದಿಯಿತ್ತು ಎಷ್ಟು ಸಲ ತಿರುಗಿಮುರುಗಿ ಓದಿದರೂ ಆ ಮುದುಕನ ಮಗಳ ವಿಷಯವೇ ಇರಲಿಲ್ಲ

ಅಚಲೆ ಅವರ ಏಕಮಾತ್ರ ಸಂತಾನ, ಕೂಸಿದ್ದಾಗಲೇ ತಾಯಿ ತೀರಿದಳು, ಆಗಿನಿಂದ ಅವರೇ ತಾಯಿಯಾಗಿ ಜೋಪಾನ ಮಾಡಿ ದೊಡ್ಡವಳನ್ನಾಗಿ ಮಾಡಿದರು ಅಂತಹ ಮಗಳ ಗಭೀರ ಅಕಲ್ಯಾಣದ ಸಂದೇಹದಿಂದ ಅವರ ಶರೀರ ದಿನದಿನಕ್ಕೂ ಇಳಿಯತೊಡಗಿತು, ಅವರ ಬಣ್ಣ ತಪ್ತಕಾಂಚನದಂತೆ ಕಪ್ಪಾಗತೊಡಗಿತು ಆದರೂ ಆ ಅಕಲ್ಯಾಣ ಯಾವ ಹಾದಿಯನ್ನು ಸೂಚಿಸುತ್ತಿತ್ತೋ ಆ ಹಾದಿ ಮಾತ್ರ ತಂದೆಗಾಗಿ ಅವರುದ್ಧವಾಗಿದ್ದಿತು

ನೆರೆಹೊರೆಯ ಕೆಲ ವೃದ್ಧರು ಆಗಾಗ ಬಂದು ಅವರೊಡನೆ ಮಾತನಾಡುತ್ತಿದ್ದರು, ಅವರು ತಾವಾಗಿ ಯಾರ ಮನೆಗೂ ಹೋಗುತ್ತಿರಲಿಲ್ಲ. ಮೃಣಾಲ ಯಾವಾಗಲಾದರೂ ಕೇಳಿದರೆ, ಅವರು ನಕ್ಕು 'ಏನು ಕೆಲಸವಮ್ಮಾ, ನನ್ನಂಥ ಮ್ಲೇಚ್ಛ ಯಾರ ಮನೆಗೂ ಹೋಗದಿರುವುದೇ ಲೇಸು' ಎನ್ನುತ್ತಿದ್ದರು 'ಮತ್ತವರೇಕೆ ಬರುತ್ತಾರೆ?' ಎಂದು ಮೃಣಾಲ ಕೇಳುತ್ತಿದ್ದಳು ಮುದುಕ ಅದಕ್ಕೆ ಉತ್ತರ ಕೊಡದೆ ಕೊಡೆ ಏರಿಸಿಕೊಂಡು ಹೊರಗ ಹೋಗಿಬಿಡುತ್ತಿದ್ದರು. ಒಕ್ಕಲಿಗರೊಡನೆ ಗುರುತು ಬೆಳೆಯಿಸಿಕೊಂಡು ಅವರ ಸುಖದುಃಖ, ಅವರ ಮನೆತನದ ಸ್ಥಿತಿಗತಿ, ಅವರಿಗಾಗುವ ಅನ್ಯಾಯ ಉಪದ್ರವಗಳ ಬಗ್ಗೆ ಹೊತ್ತೇರುವ ವರೆಗೂ ಮಾತಾಡಿ ಮನೆಗೆ ಬರುತ್ತಿದ್ದರು ಮುಂಜಾನೆಯ ಚಾ ಆದ ಮೇಲೆ ಇದವರ ನಿತ್ಯ ಕಾರ್ಯಕ್ರಮವಾಗಿತ್ತು

ಬಹುದಿನಗಳಿಂದ ಅವರು ಕಲಕತ್ತೆಯಲ್ಲಿದ್ದವರು ಎಷ್ಟೋ ತಲೆಗಳ ವ[illegible]. ಅವರ ಹಳ್ಳಿಯ ಸಂಬಂಧ ಕಡಿಮೆಹೋಗಿದೆ ಅರ್ಥಾತ್

ಬಹುಜನ ನಾಗರಿಕರಂತೆ, ನಗರದಿಂದ ದೂರದಲ್ಲಿ ಜೀವಿಸಿರುವ ಅಗಣಿತ ಅಶಿಕ್ಷಿತ ಕೃಷಿಜೀವಿಗಳೆಂದರೆ ಪಶುಗಳು, ಆ ಸಮಾಜ ವನ್ಯಸಮಾಜ ಎಂದು ಅವರು ನಂಬಿದ್ದರೆ ಆಶ್ಚರ್ಯವಲ್ಲ ಆದರೆ ದುರ್ಭಾಗ್ಯವಶದಿಂದ ಅವರ ಮನಸ್ಸು ಸ್ವಕೀಯ ಸಮಾಜಕ್ಕೆ ಪೂರ್ಣ ವಿಮುಖವಾಗಲು, ಆ ದರಿದ್ರ ಅಶಿಕ್ಷಿತ ಕೃಷೀವಲರೊಡನೆಯೇ ಬೆರೆಯಬೇಕಾಯಿತು. ಬರು-ಬರುತ್ತ ಅವರ ಬಗ್ಗೆ ಪ್ರೀತಿ ಶ್ರದ್ಧೆಗಳುಂಟಾಗಿ ಸ್ವಕೀಯ ಸಮಾಜ, ಅದರ ಆ ವಿಚಾರ ಸಂಸ್ಕಾರ, ಅದರ ಧರ್ಮ ನಾಗರಿಕತೆಗಳ ವಿರುದ್ಧ ಅತೃಪ್ತಿ ವಿದ್ವೇಷಗಳು ಮುದುಕನಲ್ಲಿ ಬೇರು ಬಿಡತೊಡಗಿದವು

ಹಳ್ಳಿಜನ ಕಲ್ತವರಲ್ಲದಿದ್ದರೂ ಅಶಿಕ್ಷಿತರಲ್ಲವೆಂದು ಕೇದಾರಬಾಬು ಗಳು ಈಗ ಅರಿತರು ಬಹುಯುಗದ ಪ್ರಾಚೀನ ಸಭ್ಯತೆ ಅವರ ನರನರ ವಲ್ಲಿಯೂ ನೆಲಸಿದೆ, ನೀತಿಯ ಮಹಾವಚನಗಳನ್ನು ಅವರು ಬಲ್ಲರು, ಯಾವ ಧರ್ಮದ ವಿಷಯಕ್ಕೂ ಅವರಿಗೆ ದ್ವೇಷವಿಲ್ಲ, ಜಗತ್ತಿನ ಎಲ್ಲ ಧರ್ಮಗಳ ಮೂಲ ಒಂದೇ, ಮೂವತ್ತು ಮೂರು ಕೋಟಿ ದೇವ ದೇವತೆ ಗಳನ್ನು ಅವಮಾನ್ಯ ಮಾಡದೆಯೆ ಒಬ್ಬನೇ ದೇವರೆಂದೂ ಗ್ರಹಿಸಬಹುದು ಎಂಬ ಜ್ಞಾನ ಅವರಿಗೆ ಯಾರಿಗಿಂತಲೂ ಕಡಿಮೆಯಿಲ್ಲ, ಹಿಂದುಗಳ ಈಶ್ವರ, ಮುಸಲ್ಮಾನರ ಅಲ್ಲಾ ಒಂದೇ ಎಂಬ ಸತ್ಯ ಅವರಿಗೆ ಅವಿದಿತವಲ್ಲ

ಇವೆಲ್ಲ ಅವರನ್ನು ನಾಚಿಸಿತು ಇವರು ನಮಗಿಂತ ಕೀಳರೇಕೆ ? ಇವರಿಗಿಂತ ನಮಗೇನು ಹೆಚ್ಚು ಗೊತ್ತಿದೆ ? ಈ ಸಮಾಜವನ್ನು, ಇವರ ಸಂಗತಿಯನ್ನು ಬಿಟ್ಟು ಬಹುದೂರ—ಈ ನಮ್ಮ ಮಂದಿಗೇ ಮ್ಲೇಚ್ಛ-ರೆನಿಸುವಷ್ಟು ದೂರ—ಏಕೆ ಹೋಗಿದ್ದೇವೋ ! ಎಂದು ಅವರು ಪುನಃ ಪುನಃ ಎಂದುಕೊಳ್ಳುತ್ತಿದ್ದರು

ಒಂದಿನ ಈ ಭಾವನೆಯಲ್ಲಿಯೇ ಮನೆಗೆ ಹೋದಾಗ ಹತ್ತು ಹೊಡೆ-ದಿರಬಹುದು ಆಗ ಮೃಣಾಲ ಬಂದು "ನಿಮ್ಮ [illegible]ಯೊಳಗೆ ನೆಟ್ಟಗಿರಲ್ಲ ಈಹೊತ್ತು ಹೊಂಡಕ್ಕೆ ಸ್ನಾನಕ್ಕೆ ಹೋಗಬೇಡಿರಿ ನಿಮಗಾಗಿ ನೀರು ಕಾಸಿಟ್ಟಿದ್ದೇನೆ" ಎಂದಳು

"[illegible] ಇಟ್ಟುಬಿಟ್ಟಿದ್ದೀಯಾ ?" ಎಂದು ಕೇದಾರಬಾಬು ಅವಳ ಮೇ[illegible] ನೋಡತೊಡಗಿದರು.

[illegible] ಕೊಳೆದು ಆಹ್ನಿಕಕ್ಕೆ ಕ[illegible]ತಿದ್ದಳು ಅವರು ಬಂದ

ಸದ್ದು ಕೇಳಿ ಎದ್ದು ಬಂದಿದ್ದಳು ಒದ್ದೆ ಕೂದಲು ಬೆನ್ನಮೇಲೆ ಹರವಿದ್ದವು, ಪಟ್ಟೆವಸ್ತ್ರ ಧರಿಸಿದ್ದಳು, ಮುಖ ಪ್ರಸನ್ನವಾಗಿತ್ತು, ಅವಳ ಸರ್ವಾಂಗದಲ್ಲಿಯೂ ನಿರ್ಮಲಶುಚಿತ್ವ ವಿರಾಜಿಸುತ್ತಿತ್ತು ಅವಳನ್ನೇ ನೋಡುತ್ತ ವೃದ್ಧ ಮಾತನಾಡಿದರು "ಅದಕ್ಕೇಕೆ ದಾವತಿಬಟ್ಟೆಯಮ್ಮಾ? ಅದೇನು ಅಗತ್ಯವಿರಲಿಲ್ಲ ನಾ ಕಲಕತ್ತೆಯ ಮನುಷ್ಯ, ಯಾವಾಗಲೂ ನಳದಲ್ಲಿ ಸ್ನಾನಮಾಡುವುದೇ ರೂಢಿ ಹೊಂಡದ ನೀರು ನನಗೇನು ಬಾಧಿಸುವುದಿಲ್ಲ, ಅಲ್ಲಿಗೇ ಹೋಗುತ್ತೇನೆ ತಂಗೀ "

"ಉಂಹೂ, ಆದಾಗದು ಅಪ್ಪಾ, ನಾ ನೀರು ತೋಡಿಕೊಂಡು ಬರುತ್ತೇನೆ, ನೀವು ಎಣ್ಣೆ ಹಚ್ಚಿಕೊಳ್ಳಿರಿ" ಎಂದು ಮೃಣಾಲ ಹೋಗತೊಡಗಿದಳು

ಅಷ್ಟನೆ ಕೇದಾರಬಾಬು ನುಡಿದರು "ಒಳ್ಳೆಯದು, ಈಪರಿ ಎರಡನೆಯವರ ಸೇವೆ ಮಾಡುವುದನ್ನು ನೀ ಎಲ್ಲಿ ಹೇಗೆ ಕಲ್ತೆ ಹೇಳು ನೋಡುವಾ ಇಂಥದನ್ನು ನಾ ಎಲ್ಲಿಯೂ ಕಾಣಲಿಲ್ಲ ಬಿಡು, ತಂಗೀ "

ಮೃಣಾಲಳ ಮುಖ ಲಜ್ಜೆಯಿಂದ ಕೆಂಪಾಯಿತು ಆದರೆ ಗಟ್ಟಿಯಾಗಿ ನಕ್ಕು "ಆದರ ನೀವೇನು ನಮಗೆ ಹೊರಗೇ?" ಎಂದು ಕೇಳಿದಳು.

"ಅಲ್ಲ ಹೊರಗಲ್ಲ ನಾ ನಿನ್ನ ಮಗು ಆದರೆ ಹೀಗೆ ತಪ್ಪಿಸಿಕೊಂಡು ಹೋದರೆ ಬಿಡುವುದಿಲ್ಲ ಉತ್ತರ ಕೊಟ್ಟೇ ಹೋಗಬೇಕು."

ಮೃಣಾಲ ತಿರುಗಿ ನಿಂತು ಮಂದಹಾಸದೊಡನೆ ಉತ್ತರವಿತ್ತಳು: "ಅದೇನಂಥ ಕಠಿಣ ಕೆಲಸ ಪ್ರಯತ್ನ ಪಟ್ಟು ಕಲಿಯಲಿಕ್ಕೆ? ಹುಟ್ಟಾ ಕಲಿತದ್ದಿದು — ನಿಮ್ಮ ನೀರು ಆರಿಹೋಗುತ್ತಿವೆ ಅಪ್ಪಾ— "

"ಆದಿರಲಿ ಬಿಡು" ಎಂದು ಮುದುಕ ಗಂಭೀರವಾಗಿ ನುಡಿದರು: "ನಾ ಇದನ್ನೇ ಎಷ್ಟೋ ದಿನ ಯೋಜಿಸುತ್ತಿದ್ದೇನೆ ಮನುಷ್ಯ ಈಸು ಕಲಿಯಬೇಕಾಗುತ್ತದ, ಆದರೆ ಜಲಚರ ಪಕ್ಷಿಗಳು ಹುಟ್ಟುತ್ತಲೇ ಈಸುತ್ತವೆ ಅವುಗಳ ಕಲಿಕೆಯನ್ನು ಯಾರೂ ಕಾಣರು ನಿಜ ಆದರೆ ಕಾರ್ಯವಿಲ್ಲದೆ ಫಲ ಸಿಕ್ಕುವುದು ಶಕ್ಯವಿಲ್ಲ ತಂಗೀ ಇದು ಭಗವಂತನ ನಿಯಮ ಒಂದಿಲ್ಲೊಂದು ಕಡೆ, ಒಂದಿಲ್ಲೊಂದು ರೀತಿಯಿಂದ ಕಲಿಯುವ ತೊಂದರೆ ಸಹಿಸಬೇಕು ಅಂತೆಯೇ, ಜಲಚರ ಪ್ರಾಣಿಗಳಂತೆ, ನೀ ಯಾವ ಗೂಢ ಯೋಗವು ಈ ವಿದ್ಯೆಯನ್ನು ಜನ್ಮತಃ ಅನಾಯಾಸವಾಗಿ ಪಡೆದಿದ್ದೀಯೋ

ಆ ವಿರಾಟ್ ವಿಪುಲ ಸಮಾಜನೀಡದ ಬಗ್ಗೆಯೇ ಹಗಲಿರುಳೂ ಯೋಚಿಸು ತ್ತಿದ್ದೇನೆ ನನಗೆನಿಸುತ್ತದೆ— ”

“ ನಿಮ್ಮ ನೀರು ಬಹಳ— ”

“ ಇರಲಿ ಬಿಡು ನೀರು ಹೊಂಡವೇನು ಅಂತರಿಕೆಯಲ್ಲ ಬತ್ತಿ ಹೋಗುವುದಿಲ್ಲ ನನಗೆನಿಸುತ್ತದೆ ನಿನ್ನ ಮುದುಕ ಮಗ ಮಗುವಿನಂತೆ ತನ್ನ ತಾಯಿಯ ಹತ್ತಿರ ರಹಸ್ಯವಾಗಿ ಎಷ್ಟು ವಿಷಯ ಕಲಿತುಕೊಳ್ಳು ತ್ತಿದ್ದಾನೆ, ಅದರರಿವೆ ಇಲ್ಲ ಅವಳಿಗೆ ದೇವರು ದಿಂಡರು, ಮಂತ್ರ ತಂತ್ರ ಗಳಲ್ಲಿ ಈಗಲೂ ನನಗೆ ವಿಶ್ವಾಸವಿಲ್ಲ, ಆದರೆ ಸ್ನಾನ ಮಾಡಿ ಧೂಲಿವರ್ಣದ ಪಟ್ಟೆವಸ್ತ್ರವನ್ನುಟ್ಟು ಆಹ್ನಿಕಕ್ಕೆ ಕುಳಿತ ತಾಯಿಯನ್ನು ನೋಡಿದಾಗ, ಪುನಃ ಜನಿವಾರ ಹಾಕಿಕೊಂಡು ಪೂಜೆಗೆ ಕೂಡಲು ಮನಸಾಗುತ್ತಿದೆ ”

“ ಏಕೆ, ನಿಮ್ಮ ಧರ್ಮ, ನಿಮ್ಮ ಸಮಾಜ ಬಿಟ್ಟು ಪರಕೀಯರ ಆಚಾರ ಸ್ವೀಕರಿಸಬೇಕೆನ್ನುವಿರಾ ? ಅದನ್ನಾದರೂ ಯಾರೂ ದೂಷಿಸ ಲಾರರು ”

“ ಆ ಮಾತು ಬೇರೆ ಆದರೆ ಅದು ಒಳ್ಳೆಯದೇ ಇರಲಿ ಕೆಟ್ಟದೇ ಇರಲಿ, ಈ ವಯಸ್ಸಿನಲ್ಲಿ ಅದನ್ನು ಬಿಡುವ ಸಾಮರ್ಥ್ಯವೂ ನನಗಿಲ್ಲ, ಬದಲಿಸುವ ಅಗತ್ಯವೂ ಇಲ್ಲ ಜೀವನಾಂತ್ಯವೂ ಅದೇ ಹಾದಿಯಿಂದ ಹೋಗುವುದೇ ಆದರೆ ನಿನ್ನನ್ನು ನೋಡಿದಾಗ—ಯಾವಾಗಲೂ ನೋಡು ತ್ತಿದ್ದೇನೆ, ಇಷ್ಟು ವಯಸ್ಸಿನಲ್ಲಿಯೇ ಇಷ್ಟೊಂದು ಆತ್ಮತ್ಯಾಗ, ಯಾರು ಸ್ವರ್ಗವಾಸಿಯಾಗಿರುವರೋ ಅವರ ತಾಯಿಯನ್ನೇ ತಾಯಿಯೆಂದು ತಿಳಿದು—ಸರಿ, ಸಾಕಿನ್ನು ಹೇಳುವುದು— ಆದರೆ ನಾನೆಲ್ಲ ಹುಟ್ಟಿ ಬೆಳೆದು ದೊಡ್ಡವನಾಗಿದ್ದೇನೋ ಆ ಸಮಾಜದೊಂದಿಗೆ ತುಲನೆ ಮಾಡಿ ನೋಡುವೆ. ಸಮಾಜವಿಲ್ಲದ ಧರ್ಮದ ಮೇಲೆ ನನ್ನ ಶ್ರದ್ಧೆಯಿನ್ನು ನಿಲ್ಲಲಾರದು, ಮೃಣಾಲ ”

ಮೃಣಾಲ ಖಿನ್ನಳಾದಳು ತಮ್ಮ ವೈಯಕ್ತಿಕ ಜೀವನದ ದೌರ್ಭಾಗ್ಯ ವನ್ನು ಈ ರೀತಿ ಸಾಮಾಜಿಕ ಶಿಕ್ಷೆದೀಕ್ಷೆಗಳ ಮೇಲೆ ಆರೋಪಿಸುವುದು ಅವಿಚಾರವೆಂದು ಅವಳಿಗೆನಿಸಿತು ಅವಳೆಂದಳು “ ಇದೇ ರೀತಿಯಲ್ಲಿ ನಮ್ಮ ಸಮಾಜವನ್ನು ನೋಡಿದರೂ ಅಪ್ಪಾ, ಇವರಲ್ಲಿಯೂ ಅನೇಕ ಕುಂದು ಕೊರತೆಗಳುಂಟು ನಾವು ಕೂಡ ನಮ್ಮ ದೋಷಗಳನ್ನು ಸಮಾಜದ

ತಲೆಯ ಮೇಲೆ ಹೇರಲು ಹವಣಿಸುವುದುಂಟು ನಾವೂ— ”

ಕೇದಾರಬಾಬು ಮಾತನಾಡಬಿಡದೆ ನುಡಿದರು “ಆದರೆ ನಾ ಮಾತ್ರ ಹವಣಿಸುವುದಿಲ್ಲ, ತಂಗೀ! ನಿಮ್ಮ ಸಮಾಜದಲ್ಲಿ ಕುಂದಿರಬಹುದು, ಕೊರತೆ ಇರಬಹುದು ಆದರೆ ಅದರಲ್ಲಿ ನೀ ಇದ್ದೀ! ನಮ್ಮಲ್ಲಿ ಈ ವಸ್ತು ಪಾತಾಳಗಡೆ ಹಾಕಿದರೂ ಸಿಕ್ಕುವುದಿಲ್ಲ ”

ಲಜ್ಜೆಯಿಂದ ಮೃಣಾಲಳ ಮುಖ ಮತ್ತೆ ಕೆಂಪಾಯಿತು “ನೀವೀ ರೀತಿ ತಿರುಗಿಮುರುಗಿ ನನ್ನ ಲಜ್ಜೆಗೀಡು ಮಾಡಿದರೆ, ನಾ ಇಲ್ಲಿರುವುದೇ ಇಲ್ಲ ತಿರುಗಿ ಕಣ್ಣಿಗೇ ಬೀಳಲಿಕ್ಕಿಲ್ಲ ಹೇಳಲಿಲ್ಲ ಎಂದೀರಿ ” ಎಂದಳು

ವೃದ್ಧ ತತ್‌ಕ್ಷಣದಲ್ಲಿ ಏನೂ ಮಾತನಾಡದೆ ಅವಳ ಮೋರೆ ನೋಡ ತೊಡಗಿದರು ಆಮೇಲೆ ನಿದಾನವಾಗಿ ಮಾತೆತ್ತಿದರು “ನಾನೂ ಹೇಳಲಿಲ್ಲ ಎಂದೀ— ಆ ಕೆಲಸ ನಿನಗೆಂದೂ ಮಾಡಗೊಡುವುದಿಲ್ಲ ನೀ ನನ್ನ ಕಣ್ಮಣಿ; ನೀ ನನ್ನ ತಾಯಿ ನೀನೇ ನನ್ನ ಏಕಮಾತ್ರ ಆಶ್ರಯ ಈ ಅನಾಥ ಅಕರ್ಮಣ್ಯ ವೃದ್ಧನ ಭಾರದಿಂದ ನೀ ಬಿಡುಗಡೆ ಹೊಂದುವ ದಿನ – ಬಹುಶಃ ಅದು ಬಹಳ ದೂರವಿಲ್ಲ, ಅದನ್ನು ನಾ ಕಣ್ಣಿಂದ ನೋಡಲಾರೆ— ಆದರೂ ಬರುವುದೆಂದು ಚೆನ್ನಾಗಿ ಬಲ್ಲೆ!”

ಮಾತನಾಡುತ್ತಿದ್ದಂತೆ ಅವರ ಕಣ್ಣಿಗೆ ನೆರೆಬಂದಿತು ತೋಳಿನಿಂದ ಒಳಸಿಕೊಂಡು “ನನ್ನದಿನ್ನೊಂದು ಕೆಲಸ ಉಳಿದಿದೆ— ಮಹಿಮನನ್ನು ಕಾಣುವುದು ಅವನು ಹೀಗೇಕೆ ಹುಚ್ಚಿದ್ದು ತಿರುಗುತ್ತಾನೋ ಸ್ಪಷ್ಟವಾಗಿ ಕೇಳಬೇಕಾಗಿದೆ ಅವಳು ಜೀವದಿಂದ ಇರಲಿಕ್ಕಿಲ್ಲವೇ ? ” ಎಂದರು

‘ ನಿಮಗೇಕೆ ಇಂಥ ಭಯ ಅಪ್ಪಾ ? ”

“ ಭಯವೆ ? ” ಮುದುಕನ ಮುಖದಿಂದ ನಿಟ್ಟುಸಿರೊಂದು ಹೊರ ಬಿದ್ದಿತು “ ಮಕ್ಕಳ ಮರಣವೊಂದೇ ತಂದೆಗೆ ಎಲ್ಲಕ್ಕಿಂತ ಹೆಚ್ಚು ಭಯಂಕರ ಅಲ್ಲ ತಂಗೀ ! ” ಎಂದರು

೩೯

ಏಕಮಾತ್ರ ಪುತ್ರಿಯ ಮರಣಕ್ಕಿಂತಲೂ ದುರ್ಗತಿಯೇ ತಂದೆಯ ದೃಷ್ಟಿಯಲ್ಲಿ ದೊಡ್ಡದಾಗಿರುವುದೆಂಬುದು ಹೊಳೆದೊಡನೆ ಮೃಣಾಲ ಕುಂಠಿತಳಾಗಿ ಲಜ್ಜಿತಳಾಗಿ ನಿಶ್ಶಬ್ದವಾಗಿ ಕೊಲಗಿದಳು ಜಗಿನ ಆ ಸಾಧ್ವೀ ವಿಧವೆಯ ಲಜ್ಜೆಯನ್ನು ಕಂಡು ಮುದುಕನ ಎದೆಗೆ ಗನ್ನಿನೇಟು ಬಿದ್ದಂತಾಯಿತು.

ಕೆಲಹೊತ್ತು ಅವರು ಮೌನವಾಗಿ ತಮ್ಮ ಹಣ್ಣುಗಡ್ಡದ ಮೇಲೆ ಕೈಯಾಡಿಸುತ್ತಿದ್ದು ಬಳಿಕ ಎಣ್ಣೆಬಟ್ಟಲನ್ನು ತೆಗೆದುಕೊಂಡರು

ಅಂದು ಬೆಳಗು ಚೆಲೋ ಸ್ವಚ್ಛವಾಗಿದ್ದಿತು ಮಧ್ಯಾಹ್ನದ ತರುವಾಯ ಮೋಡ ಕವಿಯತೊಡಗಿತು ಕೇದಾರಬಾಬು ಆದೇ ಎದ್ದು ಕುಳಿತು ಪಶ್ಚಿಮದ ಕಿಡಿಕಿಯನ್ನು ತೆರೆದು ಹೊರಗಡೆ ನೋಡುತ್ತಿದ್ದರು ಎದುರಿಗೇ ಹೂಸುರಿದ ಪೇರಲಮರ, ಜೇನ್ನೊಣಗಳು ಆನಂದಕಲರವ ಗೈಯುತ್ತಿದ್ದವು, ಹತ್ತಿರವೇ ಮೃಣಾಲ ಸಾಕಿದ, ಉದ್ದಹಗ್ಗದಿಂದ ಕಟ್ಟಿದ ಆಕಳು ಮೇಯುತ್ತಲಿತ್ತು, ಅದರ ಬೆನ್ನಮೇಲಿಂದ ಹಳ್ಳಿ ಹಾದಿಯ ಕೆಲವಂಶ ಕಾಣುತ್ತಿತ್ತು

"ಅಪ್ಪಾ, ಈಗಲೇ ಚಾ ತರಲೇ ?"

"ಈಗಲೇ ತರುವೆಯಾ ತಂಗೀ ?" ಕೇದಾರಬಾಬು ಹಿಂದಿರುಗಿ ಕೇಳಿದರು

"ಭಲೆ, ಇನ್ನೂ ಹೊತ್ತಿದೆಯೆಂಬಿರಾ ?"

ಅವರು ನಸುನಕ್ಕು ತಕ್ಕೆಯಡಿಯಿಂದ ಗಡಿಯಾಳ ತೆಗೆದು ನೋಡಿ, "ಆದರಿನ್ನೂ ಮೂರು ಹೊಡೆದಿಲ್ಲ ತಂಗೀ" ಎಂದರು

"ಮೂರು ಹೊಡೆಯದಿದ್ದರಿಲ್ಲ ನೀವು ಮಧ್ಯಾಹ್ನ ಉಣ್ಣಲೇ ಇಲ್ಲ"

ವಾದಿಸುವುದು ನಿಷ್ಫಲವೆಂದು ಮುದುಕ ತಿಳಿದುಕೊಂಡರು "ಒಳ್ಳೆಯದು, ತಕ್ಕೊಂಡು ಬಾ" ಎಂದರು

ಕೆಲಹೊತ್ತು ಸುಮ್ಮನಿದ್ದು ಮೃಣಾಲ ನುಡಿದಳು "ಅಪ್ಪಾ, ಬಿಸಿ ಬಿಸಿ ಕರಿದವಲಕ್ಕಿ ನಿಮಗೆ ಬಹಳ ಪ್ರೀತಿಯೆಂದು ಹೇಳುತ್ತಿದ್ದಿರಲ್ಲವೇ !"

"ಆದೇನು ಸುಳ್ಳಲ್ಲವಮ್ಮಾ"

"ಹಾಗಾದರೆ ಅವನ್ನೂ ಸ್ವಲ್ಪ ತರಲೇ ?"

"ಅವನ್ನು ತರುವೆಯಾ ? ಒಳ್ಳೆಯದು ತಕ್ಕೊಂಡು ಬಾ" ಎಂದು ಅವಳ ಮೋರೆಯ ಕಡೆ ನೋಡಿ ಕೇದಾರಬಾಬು ಗಟ್ಟಿಯಾಗಿ ನಕ್ಕರು. ಮೃಣಾಲ ಹೊರಟುಹೋದ ಬಳಿಕ ಮತ್ತೆ ಹೊರಗೆ ನೋಡಿದರು ಎಲ್ಲವೂ ಮಂಜುಮಂಜಾಗಿ ಕಂಡಿತು, ಪರಕ್ಷಣದಲ್ಲಿಯೆ ನಾಲ್ಕಾರು ಬಿಸಿ ಕಂಬನಿಗಳು ಅವರ ತೊಡೆಯಮೇಲುದುರಿದವು. ತಟ್ಟನೆ ತೋಳಿನಿಂದ ಕಂಬನಿಯ ಚಿಹ್ನ ಕಾಣದಂತೆ ಕಣ್ಣೊರಸಿಕೊಂಡು, ಮುಖ ಶಾಂತವೂ ಸ್ವಾಭಾವಿಕವೂ

ಆಗಲೆಂದು ಎಮರ್ಸನ್ನನ ಪುಸ್ತಕವನ್ನು ಕಣ್ಮುಂದೆ ಹಿಡಿದುಕೊಂಡರು.

ಪುಸ್ತಕದ ಹಾಳೆಗಳಲ್ಲಿ ಇದ್ದುದಿರಲಿ, ಅವರ ಮನಸಿನಲ್ಲಿ ಮೂಡುತ್ತಿದ್ದುದು ಬೇರೆ ಎಂಥ ಅದ್ಭುತವಾದುದು ಈ ಸೃಷ್ಟಿ! ಸಂಸಾರದ ದಿನಗಳು ಬೆರಳೆಣಿಸುವಷ್ಟುಳಿದಾಗ, ಈ ದೀರ್ಘ ಜೀವನದಲ್ಲಿಯ ಸಮಸ್ತ ಅಭಿಜ್ಞತೆಯನ್ನು ಸಕಲ ಆಯೋಜನಗಳನ್ನು ವಿಸರ್ಜಿಸಿ, ಮತ್ತೆ ಹೊಸದಾಗಿ ಆರ್ಜಿಸುವುದು ಅನಿವಾರ್ಯವಾಗಿ ಬಂತು! ನನ್ನ ಮಾನವ ಜನ್ಮದ ಹಿಂದಿನವೆಲ್ಲ ಒಂದು ರೀತಿಯಿಂದ ವ್ಯರ್ಥ ಹೋಯಿತು—ಆದರೂ ಈ ಒಂದೇ ಕ್ಷಣಗಳಲ್ಲಿ ಆ ನಷ್ಟದ ಭರತಿಯಾಯಿತು

ಕಾಲಸಪ್ಪಳಿಗೆ ಕೇದಾರಬಾಬು ಮುಖವೆತ್ತಿ ನೋಡಿದರು ತಟ್ಟೆಯಲ್ಲಿ ಕರಿದವಲಕ್ಕಿ ಕಪ್ಪಿನಲ್ಲಿ ಚಾ ತೆಗೆದುಕೊಂಡು ಮೃಣಾಲ ಬಂದಳು ಎರಡೂ ಕೈನೀಡಿ ಅವನ್ನು ಈಸಿಕೊಳ್ಳುತ್ತ ಅವರೆಂದರು "ಈವೊತ್ತು ನಾ ಹೊಟ್ಟೆ ತುಂಬ ಉಣ್ಣಲಿಲ್ಲವೆಂಬುದು ಈಗ ತಿಳಿಯುತ್ತಿದೆ. ಆದರೆ ನೋಡು ತಂಗೀ—"

"ಇರಲಿ ಅಪ್ಪಾ, ನೀವು ಮಾತಾಡಲಿಕ್ಕೆ ಹತ್ತಿದರೆ ಎಲ್ಲಾ ತಣ್ಣಗಾಗಿ ಬಿಡುವುದು"

ಕೇದಾರಬಾಬು ನೀರವವಾಗಿ ಉಪಹಾರ ಮುಗಿಸಿ ಕಪ್ಪು ಕೆಳಗಿಡುತ್ತ ನುಡಿದರು "ನೀ ಮುಂದಿನ ಸಾರೆ ನನ್ನ ಮಗಳಾಗಬೇಕೆಂದು ಹಾರೈಸುತ್ತೇನೆ ಮೃಣಾಲ, ಎದೆಗವಚಿಕೊಂಡು ಜೋಪಾನ ಮಾಡುವ ವಿದ್ಯೆ ನನಗೆ ಚೆನ್ನಾಗಿ ಬರುತ್ತಿದೆಯವ್ವಾ, ಅದನ್ನು ಇಡೀ ಜೀವನದಲ್ಲಿ ಉಪಯೋಗಿಸಿಕೊಳ್ಳಬೇಕೆನ್ನುತ್ತೇನೆ"

ಕೊನೆಕೊನೆಗೆ ಅವರ ಸ್ವರ ನಡುಗತೊಡಗಿತು ಆದರೆ ಈ ತೆರದ ವಿಚಾರಕ್ಕೆ ಮೃಣಾಲ ಬಹಳ ಅಂಜುತ್ತಿದ್ದಳು ಅಂತೆಯೇ ಅವರ ಅಪರಿಸ್ಫುಟ ಆವೇಗದ ಕಡೆ ಲಕ್ಷ್ಯಗೊಡದೆ ಅವಳು ನಗುತ್ತ ಹೇಳಿದಳು: "ಹಾಗೇ ಆಗಲಪ್ಪ, ನಿಮ್ಮ ಅನೇಕ ಮಕ್ಕಳೊಳಗೆ ನಾನೊಬ್ಬಳಾಗುವೆ"

ಕೇದಾರಬಾಬು ಸವೇಗವಾಗಿ ತಲೆ ಅಲ್ಲಾಡಿಸುತ್ತ ನುಡಿದರು: "ಅಲ್ಲ ತಂಗೀ ಅಲ್ಲ, ಅನೇಕ ಅಲ್ಲ ನೀ ಒಬ್ಬಳೇ— ನನ್ನ ಏಕಮಾತ್ರ ಪುತ್ರಿ ನೀ ಒಬ್ಬಳೇ ನನ್ನ ಎದೆಯನ್ನೆಲ್ಲ ವ್ಯಾಪಿಸಬೇಕು ಈಗ ನಿನ್ನಿಂದ ಕಲಿತುಕೊಂಡುದನ್ನೆಲ್ಲ, ಆಗ ನನ್ನ ಮಗಳಿಗೆ ಒಂದೊಂದೇ ಕಲಿಸಿ, ಕೊನೆಗೆ

ಮುಪ್ಪಿನಲ್ಲಿ ಈಗಿನಂತೆಯೇ ಎಲ್ಲವನ್ನೂ ತಿರುಗಿ ಹೊಂದಿ, ಪರಜನ್ಮದ ಯಾತ್ರೆಗೆ ಹೊರಡುವೆ" ಎಂದು ಅಲಕ್ಷ್ಯದಿಂದೊಮ್ಮೆ ಕಣ್ಣಮೇಲೆ ಕೈಯಾಡಿಸಿಕೊಂಡರು

ಮೃಣಾಲ ಕನ್ನಿಣ್ಣಳಾಗಿ, "ನನ್ನನ್ನು ನೀವು ಬರೀ ಅಪ್ರತಿಭಳನ್ನಾಗಿ ಮಾಡುತ್ತಿರುವಿರಿ, ಅಪ್ಪಾ, ನನಗಂಥ ತಿಳುವಳಿಕೆಯಾವರೂ ಏನಿದೆ?" ಎಂದಳು

" ಅದೇಕೆ ತಂಗೀ, ನನ್ನ ಹೊಟ್ಟೆತುಂಬಿಲ್ಲ ಎಂಬುದು ನನಗೇ ಗೊತ್ತಿರಲಿಲ್ಲ, ನಿನಗೆ ಗೊತ್ತಾಯಿತು "

"ಅದೊಂದು ದೊಡ್ಡ ಜ್ಞಾನ! —ಕಣ್ಣಿದ್ದವರಿಗೆ ಕಂಡೇ ಕಾಣುವುದು"

"ಆದರೆ ಆ ಕಣ್ಣು ಎಲ್ಲರಿಗೂ ಇರುವುದಿಲ್ಲ ಮೃಣಾಲ!" ಎಂದು ಸ್ವಲ್ಪ ತಡೆದು ಕೇದಾರಬಾಬು "ಆದರೆ ಎಲ್ಲಕ್ಕಿಂತ ಸೋಜಿಗವೆಂದರೆ, ದೇವರು ಎಲ್ಲಿ ಯಾವಾಗ ಹೇಗೆ ಯಥಾರ್ಥ ಆತ್ಮೀಯರನ್ನು ಕೂಡಿಸುವನೆಂಬುದು ತಿಳಿಯುವುದಿಲ್ಲ ಅದಕ್ಕೆ ಕಾರಣಬೇಕಿಲ್ಲ, ಸಂಬಂಧ ಬೇಕಿಲ್ಲ, ಸಮಯ ಬೇಕಿಲ್ಲ ನಿಮಿಷದೊಳಗೆ ಹೇಗೋ ಆಗಿಬಿಡುವುದು ಅವರನ್ನು ಹೃತ್ಪೂರ್ಣವಾಗಿ ಪಡೆದಾಗಲೇ ಇಷ್ಟು ದಿನ ಇಂಥ ಕೊರತೆ ಹೇಗೆ ಸಹನವಾಗಿದ್ದೀತು ಎಂದೆನಿಸುವುದು " ಎಂದರು

" ಅದು ನಿಜ ಅಪ್ಪಾ, ಇಲ್ಲದಿದ್ದರೆ ಈ ಅಡವಿಯಲ್ಲಿ ಬಿದ್ದಿದ್ದ ನಿಮ್ಮ ಮಗಳ ಸಮಾಚಾರ ಯಾರಿಗಿರುತ್ತಿತ್ತು?"

" ಅದು ಹೇಗೆ ತಂಗೀ ಇಷ್ಟು ದಿನ ಅವನ ಅಪ್ಪಣೆಯೇ ಆಗಿರಲಿಲ್ಲ. ಅವನ ಅಪ್ಪಣೆಯಾಗುವುದೇ ತಡ, ಯಾವ ಆತಂಕವೂ ಉಳಿಯಲಿಲ್ಲ, ಯಾವುದೋ ಸೆಳೆತ ನನ್ನನ್ನು ಇಲ್ಲಿ ತಂದು ಬಿಟ್ಟಿತು ಇದು ಕೇವಲ ಒಂದು ತಿಂಗಳ ಪರಿಚಯವೆಂದು ಮಂದಿಗೆ ಕಾಣುತ್ತದೆ. ಆದರೆ ನನಗೆ ನಿಸುತ್ತದ, ಯುಗಯುಗಾಂತರದಿಂದಲೂ ನಿನ್ನ ನೆರಳಲ್ಲಿಯೇ ಕುಳಿತಿರುತ್ತೇನೆ,— ದಿನ-ಮಾಸ-ವರ್ಷಗಳ ಲೆಕ್ಕವೆಲ್ಲಿ?"

ಮೃಣಾಲ ಏನೋ ಹೇಳಬೇಕೆಂದಳು ಆದರೆ ಅವರ ಮೋರೆಯ ಕಡೆ ನೋಡಿದೊಡನೆ ಬಾಯಿಬರಲಿಲ್ಲ ಈ ಮುದುಕನ ಅಂತರಂಗದಲ್ಲಿ ಇಷ್ಟು ದಿನ ಉರಿಯುತ್ತಿದ್ದ ಕಿಚ್ಚು ಈಗ ಹೇಗೋ ನಂದುತ್ತಲಿದೆ ಎಂದು ಅವಳಿಗೆನಿಸಿತು ಅದರ ಕೊನೆಯ ಕುಡಿಯ ನಸುಬೆಳಕಿನಲ್ಲಿ, ಅಚಿಂತನೀಯ

ಸ್ನೇಹ ಅಸೀಮ ಕರುಣೆಯೊಡನೆ ಸಮರಸವಾಗಿ ಎದ್ದು ಕಾಣುತ್ತಲಿತ್ತು

ಯಾರೂ ಮಾತನಾಡಲಿಲ್ಲ ಮೃಣಾಲಳ ಆನತ ದೃಷ್ಟಿ ನೆಲದಲ್ಲಿಯೇ ನೆಲಸಿತು ಕೇದಾರಬಾಬುಗಳೇ ಆ ನೀರವತೆಯನ್ನು ಮುರಿದರು. "ಮೃಣಾಲ ನಾ ಒಂದು ಧರ್ಮ ಬಿಟ್ಟು ಮತ್ತೊಂದನ್ನು ಹಿಡಿದದ್ದಕ್ಕೆ, ಮಂದಿಯ ಮುಂದೆ ಹೋಗಲಿ, ನನ್ನ ಮುಂದಾದರೂ ಜವಾಬು ಕೊಡುವುದು ನನ್ನ ಕರ್ತವ್ಯ ಇಷ್ಟು ದಿನ ಅದನ್ನು ಹೇಗೋ ತಳ್ಳುತ್ತ ಬಂದೆ, ಇನ್ನದು ಅಸಾಧ್ಯ ಧರ್ಮಸಂಬಂಧವಾಗಿ ನನಗೀಗ ತಿಳಿದದ್ದು—"

ಮೃಣಾಲ ಕಿಂಚಿತ್ ಕಣ್ಣೆತ್ತಿ ನೋಡಿದಳು ಕೇದಾರಬಾಬು ಹೇಳಿದರು. "ಇಲ್ಲ ತಂಗೀ ಭಯವಿಲ್ಲ— ಪುನಃ ಪುನಃ ನಿನ್ನ ಹೆಸರೆತ್ತಿ ನಿನ್ನನ್ನು ಲಜ್ಜೆಗೀಡು ಮಾಡುವುದಿಲ್ಲ ಜಗಳ-ಕದನ ವಾದವಿವಾದ ಸ್ಪರ್ಧೆ ಈರ್ಷೆಗಳಿಂದ ಬೇಕಾದದ್ದು ಸಿಕ್ಕಬಹುದು, ಧರ್ಮವೆಂಬ ವಸ್ತು ಮಾತ್ರ ಸಿಕ್ಕದು —ಇದೇ ನಾ ಈಗ ತಿಳಿದ ಸತ್ಯ"

ಮೃಣಾಲ ಅವರ ಮನಸಿನೊಳಗಿನ ಮಾತನ್ನರಿತು ಮೆಲ್ಲನೆ ನುಡಿದಳು. "ಈ ಮಾತು ಸತ್ಯ ಇರಬಹುದು ಅಪ್ಪಾ, ಆದರೆ ಧರ್ಮವನ್ನು ಉತ್ತಮವೆಂದು ನಾ ತಿಳಿದಿದ್ದೇನೆ, ಅದನ್ನು ಸ್ವೀಕರಿಸುವುದಕ್ಕೆ ಜಗಳ-ವಾದವಿವಾದ ಅಗತ್ಯವೆಂದು ನನಗೇನು ಎನಿಸುವುದಿಲ್ಲ"

"ನನಗೆ ಹಾಗೆ ಎನಿಸುತ್ತದೆಂದಲ್ಲ ಆದರೆ ಒಂದೊಂದು ಸಂದರ್ಭದಲ್ಲಿ ಅಗತ್ಯವೇ ಆಗುವುದು ಮೃಣಾಲ ! ನಾವು ಯಾವುದೊಂದು ವಸ್ತುವನ್ನು ಪ್ರೀತಿಯಿಂದ ತ್ಯಜಿಸುವುದಿಲ್ಲ ಏನನ್ನಾದರೂ ತ್ಯಜಿಸಿದರೆ, ಅದಕ್ಕಾಗಿ ಸಂಕುಚಿತವಾದ ಮನಸ್ಸು ಏನು ಮಾಡಿದರೂ ಸರಿಯಾಗುವುದಿಲ್ಲ ಆದಕ್ಕೇ ದೊಡ್ಡ ಕೈಫಿಯತ್ತಿನ ಜವಾಬ್ದಾರಿ ನನ್ನ ಮೇಲೆ ಬಿದ್ದಿದೆ ನೀವು ಮಾತ್ರ ಜನ್ಮತಃ ಬಂದದ್ದನ್ನೇ— ಅದು ಉತ್ತಮವಿರಲಿ, ಅಧರ್ಮವಿರಲಿ— ಅವಲಂಬಿಸಿ ನಡೆದಿದ್ದೀರಿ. ಈ ವ್ಯತ್ಯಾಸವನ್ನಷ್ಟು ಯೋಚಿಸಿ ನೋಡು"

ಮೃಣಾಲ ನಿರುತ್ತರಳಾದಳು ಅವರೂ ಕೆಲಹೊತ್ತು ಸುಮ್ಮನಿದ್ದು ಮತ್ತೆಂದರು. "ಬಹಳ ದಿನದ ಮರೆತು ಹೋದ ವಿಷಯ ಇಂದು ಮತ್ತೆ ಜಾಗೃತವಾಗಿದೆ— ಇಷ್ಟು ದಿನ ಎಲ್ಲಿ ಅಡಗಿದ್ದಿತೋ !"

"ಯಾರ ವಿಷಯ ?"

"ನನ್ನ ವಿಷಯವೇ. ದೊಡ್ಡವನಾಗುವಂಥ ಬುದ್ಧಿಯನ್ನೂ ದೇವರು

ಕೊಡಲಿಲ್ಲ, ದೊಡ್ಡವನೂ ಆಗಲಿಲ್ಲ ನಾನೊಬ್ಬ ಸಾಮಾನ್ಯ, ಯಾವಾಗಲೂ ಸಾಮಾನ್ಯರೊಂದಿಗೇ ದಿನ ಕಳೆದಿದ್ದೇನೆ ನಮ್ಮಲ್ಲಿ ಯಾರು ದೊಡ್ಡವರೋ ಯಾರು ಸಮಾಜದ ಮಸ್ತಕಗಳೋ, ಆಚಾರ್ಯರೋ ಅವರ ಆದೇಶ ಉಪದೇಶಗಳನ್ನು ಭಕ್ತಿಶ್ರದ್ಧೆಗಳಿಂದ ಮನ್ನಿಸುತ್ತ ಬಂದಿದ್ದೇನೆ ಮರೆತು ಹೋಗಿದ್ದ ಅವರ ಹಳೆ ಮಾತುಗಳೆಲ್ಲ ಈಗ ನೆನಪಾಗುತ್ತಿವೆ ನೀ ಎನ್ನುತ್ತೀ— ಧರ್ಮಾಂತರ ಹೊಂದುವುದರಲ್ಲಿ, ಉತ್ತಮವಾದದ್ದನ್ನು ಗ್ರಹಿಸುವುದರಲ್ಲಿ ವಾದಿಸ್ಯಾಟವೇಕೆ ? ಅದರ ಅಗತ್ಯವೇನು ? ಎಂದು. ನಾನೂ ಹಾಗೆಯೇ ತಿಳಿದಿದ್ದೆ, ಹಾಗೆಯೇ ಹೇಳುತ್ತಿದ್ದೆ ಇಷ್ಟು ದಿನ ಆದರೆ ಅಗತ್ಯವಿತ್ತೆಂದು ಈಗೆನಿಸುತ್ತದೆ ಹಿಂದುಗಳಲ್ಲನೇಕರು, ದೇಶವಿದೇಶಗಳಲ್ಲಿ ನಮ್ಮಷ್ಟು ಕ್ರಿಶ್ಚನ್ ಪಾದ್ರಿಗಳು ಕೂಡ ಅವರ ತಲೆಬಗ್ಗಿಸಿಲ್ಲವೆಂದು ಹೇಳುತ್ತಿರುವುದನ್ನು ಅಲ್ಲಗಳೆಯಲಿಕ್ಕಾಗುವುದಿಲ್ಲ ವಾಸ್ತವವಾಗಿ ವಿದೇಶೀಯ ವಿಧರ್ಮೀಯರ ಕೈಯೊಳಗೆ ನಮ್ಮಂಥ ವಿಭೀಷಣರು ಯಾರೂ ಇಲ್ಲ ”

ಮೃಣಾಲ ಅತ್ಯಂತ ಚಂಚಲಳಾದಳು ಅತ್ತ ಗಮನಿಸದೆ ಮುದುಕ ಮಾತನಾಡುತ್ತಿದ್ದರು “ ಮೃಣಾಲ, ಮರ್ಮ ಇಲ್ಲದಿದ್ದರೆ, ನಮ್ಮಲ್ಲಿ ಸರ್ವವಿಷಯಗಳಿಗೂ ಆದರ್ಶರಾದವರು—ಮನುಷ್ಯ ಮಾತ್ರರಿಗೇ ಆದರ್ಶರೆಂದುಕೊಳ್ಳುವವರು— ಧರ್ಮಮಂದಿರಗಳಲ್ಲಿ ನಿಂತು ‘ ರಾಮ ’ನನ್ನು ರೇಮೋ ‘ ಹರಿ ’ಯನ್ನು ಹೋರೇ ‘ ನಾರಾಯಣ ’ನನ್ನು ನಾರಾಣೇ ಎಂದೇಕೆ ಹೇಳುತ್ತಿದ್ದರು ? ದುರ್ಭಾಗ್ಯರು ಅವಘಡದಲ್ಲಿ ಮುಳುಗಿ ಸಾಯಬಾರದೆಂದು ಇಷ್ಟಪಡುತ್ತಿದ್ದರೆ ನಮ್ಮ ಈ ಭದ್ರಘಾಟಿಗೆ ಬರಲಿ, ಎಂದು ಎಲ್ಲರಿಗೂ ಆಹ್ವಾನವಿತ್ತು ಅವರು ಘೋಷಿಸುವುದೇಕೆ ? ಧರ್ಮೋಪದೇಶದ ಈ ಜಾಂಗಟೆಯಿಂದ ನಮ್ಮ ಸಮಾಜದವರೆಲ್ಲರ ರಕ್ತ ಭಕ್ತಿಯಿಂದ ಕಾಯುತ್ತಿತ್ತು, ಶ್ರದ್ಧೆಯಿಂದ ಕ್ರುದ್ಧವಾಗುತ್ತಿತ್ತು. ಆದರೆ ಜೀವನದ ಈ ಸೀಮಾ ಪ್ರಾಂತ್ಯಕ್ಕೆ ಬಂದ ನನಗೆ ಸ್ಪಷ್ಟವಾಗಿ ಮನವರಿಕೆಯಾಗುತ್ತಿದೆ— ಅದರೊಳಗೆ ಉಪದೇಶವೆಂಬುದೇನಿತ್ತೋ ಇತ್ತು, ಆದರೆ ಧರ್ಮದ ಲವಲೇಶವೂ ಇರಲಿಲ್ಲ ”

ಮೃಣಾಲ ವ್ಯಥಿತ ಸ್ವರದಿಂದ ನುಡಿದಳು “ ಅಪ್ಪಾ, ಇದೆಲ್ಲವನ್ನೂ ನನಗೇಕೆ ಹೇಳುತ್ತಿರುವಿರಿ ? ಅವರೆಲ್ಲರೂ ನನಗೆ ಪೂಜ್ಯರು, ವಂದ್ಯರು ! ”

ಮೃಣಾಲ ಹಣೆಮುಟ್ಟಿ ಕೈಜೋಡಿಸಿದಳು ಆ ಭಕ್ತಿಮತಿ ತರುಣಿಯ

ವಿಸನ್ನ ಮುಖವನ್ನು ನೋಡುತ್ತ ಕೇದಾರಬಾಬು ವೈಮರೆತರು ದಾಸಿಯು ಕರೆ ಕೇಳಿ ಅವಳಿದ್ದು ಹೋದರೂ ಅವರಿಗೆಚ್ಚರಿರಲಿಲ್ಲ

ಕಲಹೊತ್ತಿನ ಮೇಲೆ ಮೃಣಾಲ ಬರುತ್ತಲೇ ಕೇದಾರಬಾಬು ಎರಡೂ ಕೈ ಪಸರಿಸಿ ಉದ್ವೇಗದಿಂದ ನುಡಿದರು "ನನ್ನಿಡೀ ಬಾಳು ಹೀಗೆಯೇ ಎರಡನೆಯುವರ ತಪ್ಪುತಡೆಗಳನ್ನು ಆಡಿಕೊಳ್ಳುವುದರಲ್ಲಿಯೇ ಕಳೆಯುವುದೇ ? ಇದರಿಂದ ನನಗೆ ಮುಕ್ತಿ ಇಲ್ಲವೇ ಇಲ್ಲವೆ ತಂಗಿ ?"

ಮೃಣಾಲ, "ಅಪ್ಪಾ, ನಿಮ್ಮ ಸೊಳ್ಳೆಪರದೆಯ ಮೂಲೆ ಹರಿದಿದೆ, ಒಂದಿಷ್ಟು ಸರಿದು ಕೂಡಿರಿ, ಹೊಲಿಯುತ್ತೇನೆ" ಎಂದು ಹೇಳಿ ಸೂಜಿ ದಾರ ತಂದಳು ಮುದುಕ ಹಾಸಿಗೆ ಬಿಟ್ಟದ್ದು ಒತ್ತಟ್ಟಿಗೆ ಕುಳಿತರು. ನೀರವವಾಗಿ ಹೊಲಿಯುತ್ತಲಿದ್ದ ಹುಡುಗಿಯ ಬಾಗಿದ ಮೊಗವನ್ನೇ ನೋಡತೊಡಗಿದರು ಅವಳೇನೋ ಯಾವ ಕಡೆಗೂ ನೋಡದೆ ತನ್ನ ಕೆಲಸದಲ್ಲಿಯೇ ತನ್ಮಯಳಾಗಿದ್ದಳು ಆದರ ನೋಡುತ್ತಿದ್ದ ಅವರ ಕಣ್ಣಲ್ಲಿ ತೀರ ಅಕಾರಣವಾಗಿಯೇ ನೀರು ಬಂದಿತು

ಹೊಲಿಗೆ ಮುಗಿಸಿ ಸಲಕರಣೆಯನ್ನು ಯಥಾಸ್ಥಾನದಲ್ಲಿಟ್ಟು ತಿರುಗಿ ನಿಂತು ಮೃಣಾಲ ಕೇಳಿದಳು "ರಾತ್ರಿ ನೀವೇನು ತೆಗೆದುಕೊಳ್ಳುವಿರಿ ಅಪ್ಪಾ ?"

ನಿಡಿದಾಗಿ ಉಸಿರ್ಗರೆದು ಅಶ್ರುಕರುಣ ಓಷ್ಠಪ್ರಾಂತದಲ್ಲಿ ನಸುನಗೆಯ ಕುರುಹು ತೋರಿ ಕೇದಾರಬಾಬು ಹೇಳಿದರು "ರಾತ್ರಿಯ ತಿನಿಸಿನ ಸಲುವಾಗಿ ಈಗಲೇ ವ್ಯಾಕುಲಗೊಳ್ಳುವ ಅಗತ್ಯವಿಲ್ಲವಮ್ಮಾ ಅದರ ವಿಚಾರ ಆವಾಗಲೇ ಮಾಡಿದರಾಯಿತು ನೀ ಒಂದಿಷ್ಟು ಸ್ವಸ್ಥ ಕುಳಿತುಕೋ ತಂಗೀ !" ಸ್ವಲ್ಪ ತಡೆದು ಮತ್ತೆ ಮಾತನಾಡಿದರು "ನನ್ನೀ ಅನ್ಯಾಯದ ಕೊನೆ ಇಂದೇ ಅಮ್ಮಾ ನನ್ನ ಬಾಯಿಂದ ಇನ್ನು ಯಾರ ಬಗ್ಗೆಯೂ ಅಪಶಬ್ದ ಹೊರಡಲಿಕ್ಕಿಲ್ಲ — ಆದರೆ ನನ್ನಲ್ಲಿ ನೀ ಕೋಪಿಸಿಕೊಳ್ಳಬೇಡ ಮೃಣಾಲ"

ಅವರ ಕಂಠಸ್ವರ ಮೃಣಾಲಗಳನ್ನು ಬೆರಗುವಡಿಸಿತು "ಹೀಗೇಕೆ ಮಾತಾಡುತ್ತೀರಿ, ಅಪ್ಪಾ, ನಾ ಎಂದಾದರೂ ನಿಮ್ಮಲ್ಲಿ ಕೋಪಿಸಿಕೊಂಡದ್ದುಂಟೆ ?" ಎಂದಳು

"ಛೆ ಛೆ, ಎಂದೂ ಇಲ್ಲವಮ್ಮಾ ನೀ ನನ್ನ ತಾಯಿಯಲ್ಲವೆ ? ಎಂದೇ

ಈ ಮುದಿಮಗನ ಎಲ್ಲ ಕಾಟ ಕಷ್ಟಗಳನ್ನೂ ಸಹಿಸಿಕೊಳ್ಳುತ್ತ ಬಂದಿದ್ದೀ. ಆದರೆ ಇಷ್ಟು ದಿನಗಳ ತರುವಾಯ ನನ್ನೆದೆಯು ರಕ್ತಕೊಟ್ಟು ಪಡೆದುಕೊಂಡ ಸತ್ಯವನ್ನು ನಿನಗೆ ತಿಳಿಸುವುದೇ ನನ್ನುದ್ದೇಶ ಹೊರತು, ಯಾರನ್ನೂ ಹಳಿಯುವ ಇಚ್ಛೆ ನನಗಿಲ್ಲ ಧರ್ಮವೆಂಬ ವಸ್ತುವನ್ನು, ನಾವೊಂದು ತಂಡ ಕಟ್ಟಿಕೊಂಡು ಹೊಂಚಿಕೆ-ಹಂಚಿಕೆಯಿಂದ ಹಿಡಿಯಬೇಕೆಂದು ಬಗೆದಿದ್ದೆವು, ಅದು ಅಸಂಭವವೆಂದು ಈಗ ಮನವರಿಕೆಯಾಯಿತು ತನ್ನನ್ನು ಹಿಡಿದಿಟ್ಟುಕೊಳ್ಳದೆ ಅದನ್ನು ಹಿಡಿಯುವುದು ಸಾಧ್ಯವಿಲ್ಲ ಪರಮ ದುಃಖದ ಮೂರ್ತಿಯ ರೂಪದಲ್ಲಿ ಅದು ಎಕ್ಕಟಿಯಾಗಿ ಮಾನವನ ಚರಮವೇದನೆಯು ಎದೆಮೆಟ್ಟಿ ನಿಂತಿತೆಂದರೆ ಆಗದನ್ನು ಗುರುತಿಸಲೇಬೇಕು— ಒಂಚೂರು ತಪ್ಪಿದರಾಯಿತು, ಅದು ಮೋರೆ ತಿರುವಿಕೊಂಡು ಹೋಗಿಬಿಡುವುದು ಅದರಂಥ ದುರ್ಭಾಗ್ಯ ನನ್ನ ಕಡುಹಗೆಗೂ ಬರಬೇಡ ಮೃಣಾಲ!''

ಈವರೆಗೆ ಯಾವ ಪ್ರಸಂಗವನ್ನು ಜತನದಿಂದ ಓರೆಮಾಡುತ್ತ ಬಂದಿದ್ದಳೋ ಅದರ ಸೂಚನೆಯನ್ನು ಕಂಡು ಮೃಣಾಲಳಿಗೆ ವಿಪರೀತ ಸಂಕೋಚವೂ ವೇದನೆಯೂ ಆಯಿತು ಆದರೆ ಏನಾದರೂ ನೆವ ತೆಗೆದು ಕಾಲ್ತೆಗೆಯಲಿಲ್ಲ ಮೌನವಾಗಿ ಕುಳಿತಳು

ಇಷ್ಟು ದಿನ ತಡೆತಡೆದು ಕೇದಾರಬಾಬುಗಳ ಆತುರವೂ ತೀವ್ರವಾಗಿತ್ತು ಈಗವರು ಯಾವುದನ್ನೂ ಗಮನಕ್ಕೆ ತಾರದೆ ಒಂದೇಕತೆ ನಡೆಸಿಯೇ ಇದ್ದರು "ತಂಗೀ, ಒಂದು ವಿಷಯ ಎಷ್ಟುಸಲ ಹೇಳಿದರೂ ನನಗೆ ತೃಪ್ತಿಯಾಗಲೊಲ್ಲದು ಈ ವಿಶಾಲ ಪ್ರಪಂಚದಲ್ಲಿ ನಿನ್ನ ಹೊರತು ನನ್ನವರೆಂಬವರು ಯಾರೂ ಇಲ್ಲ, ಎಂದೂ ಇರಲಿಲ್ಲ ಎನಿಸುತ್ತಿದೆ ಎಂತಲೇ ನನ್ನ ಕೊನೆ ಬಾಳಿನ ಸಮಸ್ತ ಭಾರ, ಸಮಸ್ತ ಹಿತಾಹಿತ ಅದು ಹೇಗೋ ನಿನ್ನ ಮೇಲೆ ಬಿದ್ದಿದೆ ಸಕಲ ವಿಧಿವ್ಯವಸ್ಥೆಗಳ ಸ್ವಾಮಿಯದೇ ಈ ವ್ಯವಸ್ಥೆಯೆಂದು ನನ್ನ ಖಂಡಿತ ಮತ, ಆದುದರಿಂದಲೇ ನನಗಿನ್ನು ಲಜ್ಜೆ ಸಂಕೋಚ ಯಾವುದೂ ಇಲ್ಲ ಮೊದಲು ಕೆಲ ದಿನ ನಿನ್ನ ಕೊರಳಿಗೆ ಬಂದು ಬಿದ್ದನಲ್ಲ ಎಂದು ನನಗೆ ಬಹಳ ಹಿಡಿದು ಬಿಟ್ಟಂತಾಗುತ್ತಿತ್ತು. ಆದರಿಂದು ಆ ಭಾವನೆ ಲವಲೇಶವೂ ಉಳಿದಿಲ್ಲ''

ಮೃಣಾಲ ಮೊಗವೆತ್ತಿ ನಸುನಕ್ಕಳು ಮಾತ್ರ ಕೇದಾರಬಾಬು ಸ್ವಲ್ಪ ಸಂಕೋಚದಿಂದ ಮಾತನಾಡಿದರು "ಆದರೂ ಮನಸು ಸ್ವಲ್ಪ

ಹಿಂಜರಿಯುತ್ತಿದೆ ಮೃಣಾಲ, ಬಾಯಿಗೆ ಮಾತೇ ಬರಲೊಲ್ಲದು"

"ಇರಲಿ ಬಿಡಿರಿ ಅಪ್ಪಾ, ಅದನ್ನು ಹೇಳಬೇಕಾದ ಅಗತ್ಯವಾದರೂ ಏನು ?"

"ಛೆ ಛೆ, ಇನ್ನು ಹೇಳದಿರುವಂತಿಲ್ಲವಮ್ಮಾ ನಿಶ್ಚಯವಾಗಿ ನನಗೆನಿಸುತ್ತದೆ, ಅವಳು ಸುರೇಶನೊಂದಿಗೇ—"

ಈ ಸಂಶಯ ಮೃಣಾಲಳ ಮನವನ್ನೂ ಅನೇಕ ಸಲ ಕುಟುಕಿತ್ತು. ಆದುದರಿಂದ ಅವಳು ತಲೆತಗ್ಗಿಸಿದಳು, ಏನೂ ಮಾತನಾಡಲಿಲ್ಲ ಎಷ್ಟೋ ಹೊತ್ತು ನಿಶ್ಶಬ್ದವಾಗಿತ್ತು ಕೊನೆಗೆ ಕೇದಾರಬಾಬು ಪ್ರಬಲ ಪ್ರಯತ್ನದಿಂದ ಮಾತನಾಡಿದರು "ಒಮ್ಮೆ ಮಹಿಮನನ್ನು ನೋಡಬೇಕೆಂಬಾಸೆ ಮೃಣಾಲ,—ಒಮ್ಮೆ ಅವನ ಮಾತು ಕೇಳಬೇಕೆಂಬಾಸೆ— ಅದಕ್ಕಾಗಿಯೇ ಮನಸಿನೊಳಗೆ ಹಗಲಿರುಳೂ ಕುದಿಯುತ್ತಿದ್ದೇನೆ ಆದರೆ ಒಬ್ಬನೇ ಹೋಗಿ ಅವನ ಮುಂದೆ ಹೇಗೆ ನಿಂತೇನು ?"

ಮೃಣಾಲ ಸಕರುಣ ದೃಷ್ಟಿಯಿಂದ ದುರ್ದೈವಿ ವೃದ್ಧನ ಲಜ್ಜಿತ ಭೀತ ಮುಖವನ್ನು ನೋಡುತ್ತ ನುಡಿದಳು "ಏಕಪ್ಪ ಒಬ್ಬರೇ ಹೋಗುತ್ತೀರಿ ? ಹೋಗುವುದೇ ಆದರೆ ಇಬ್ಬರೂ ಕೂಡಿಯೇ ಹೋಗುವ."

"ನಿಜವಾಗಿ—ಬರುತ್ತೀಯಾ ತಂಗೀ ?"

"ಏಕೆ ಬರುವುದಿಲ್ಲವಪ್ಪಾ? ಅಲ್ಲದೆ, ನಿಮ್ಮೊಬ್ಬರನ್ನೇ ಹೇಗೆ ಕಳಿಸಲಿ? ನೀವು ಎಲ್ಲಿಗೆ ಹೋದರೂ ನಾ ಸಂಗತಿ ಬರುವವಳೇ ನನ್ನನ್ನು ಯಾರೂ ಸಂಗಡ ಕರೆದೊಯ್ಯಲು ಇಷ್ಟಪಡುವುದಿಲ್ಲ ಅಪ್ಪಾ, ನನಗೆಲ್ಲಿಯೂ ಅಡ್ಡಾಡಲು ಆಸ್ಪದವಿಲ್ಲ"

ಮುದುಕ ಏನೂ ಪ್ರತ್ಯುತ್ತರ ಆಡಲಿಲ್ಲ. ಅಂಗೈಯಿಂದ ಮುಖವನ್ನು ಮುಚ್ಚಿಕೊಂಡು ಮೊಂಡೆಯೂರಿ ಬಿದ್ದುಕೊಂಡರು ಅವರಾ ಶುಷ್ಕಶೀರ್ಣ ಶರೀರ ಆ ತುದಿಯಿಂದೀ ತುದಿಯ ವರೆಗೂ ಒಳಗಿನ ಅವ್ಯಕ್ತವೇದನೆಯಿಂದ ಥರಥರ ನಡುಗುತ್ತಲಿತ್ತು. ಮೃಣಾಲ ಹತ್ತಿರವೇ ಕುಳಿತಿದ್ದಳು, ಒಂದೂ ಸಾಂತ್ವನವಚನ ಅವಳ ಬಾಯಿಂದ ಹೊರಡಲಿಲ್ಲ ಏಕಮಾತ್ರ ಪುತ್ರಿಯ ಘೃಣ್ಯತಮ ದುರ್ಗತಿಗಾಗಿ ತಲ್ಲಣಿಸುವ ಪಿತೃಹೃದಯವನ್ನು ಸಂತಯಿಸುವುದಕ್ಕೆ ಶಬ್ದ ಬೇಕಲ್ಲ !

ಕೆಲಹೊತ್ತಿನ ಮೇಲೆ ಸಾವರಿಸಿಕೊಂಡೆದ್ದು ಕುಳಿತು ಕೇದಾರಬಾಬು

"ತಂಗೀ !" ಎಂದರು

ಅವರ ಮೋರೆ ನೋಡಿ ಮೃಣಾಲಳ ಎದೆ ಬಿರಿವಂತಾಯಿತು ಅವಳು ಬಹುಪ್ರಯಾಸದಿಂದ ಕಂಬನಿ ತಡೆದು ಕೇಳಿದಳು "ಏನಪ್ಪಾ?"

"ಸಂಸಾರದಲ್ಲಿ ವ್ಯಥೆಯ ಪರಿಣಾಮ ಇಷ್ಟೊಂದಿದ್ದೀತೆಂದು ನಾ ಭಾವಿಸಿರಲಿಲ್ಲ ಮೃಣಾಲ. ಇದರಿಂದ ಉಳಿದುಕೊಳ್ಳಲು ಎಲ್ಲಿಯೂ ಯಾವ ಹಾದಿಯೂ ಇಲ್ಲವೆ? ಯಾರಿಗೂ ಗೊತ್ತಿಲ್ಲವೆ?"

"ಆದರೆ ಅಪ್ಪಾ, ಮನುಷ್ಯ ಮರಣದುಃಖವನ್ನೂ ಸಹಿಸಬಲ್ಲ!"

"ಎಂದರೆ ನನ್ನ ಪಾಲಿಗೆ ಅವಳು ಸತ್ತಳು ಎಂದು ನೀ ಎನ್ನುವೆಯಲ್ಲವೆ? ಒಂದು ರೀತಿಯಿಂದ ಅದು ನಿಜ ಆದರೆ ಮರಣದ ದುಃಖ ದೊಡ್ಡದಿರುವಷ್ಟೇ ಅದರ ಶಾಂತಿ ಮಾಧುರ್ಯಗಳೂ ಹಿರಿದು, ಎಂದು ನನಗೆನಿಸುತ್ತದೆ. ಆದರಿಲ್ಲಿ ಸಾಂತ್ವನದ ಉಪಾಯ ಎಲ್ಲಿದೆ ಮೃಣಾಲ? ಇದರ ದುಃಸಹ ಗ್ಲಾನಿ, ಅಸಹ್ಯ ಲಜ್ಜೆ ನನ್ನ ಹೃದಯವನ್ನು ತಿನ್ನುತ್ತಿದೆ. ಬಿಡುಗಡೆಗೆ ಹಾದಿಯೇ ಇಲ್ಲ" ಎಂದು ಕಣ್ಣು ಮುಚ್ಚಿ ಕ್ಷಣಕಾಲ ಎದೆಯ ಮೇಲೆ ಕೈಯಿಟ್ಟುಕೊಂಡು ಮತ್ತೆ ಮೆಲ್ಲಮೆಲ್ಲನೆ ನುಡಿದರು "ತಂಗೀ, ಮಕ್ಕಳಿಗೆ ಸಾವು ತರುವವನನ್ನು, ಅವನ ಕಾರ್ಯಕಾರಣ ನಮಗೆ ತಿಳಿಯದೆಂದು, ನಾವು ಕ್ಷಮಿಸುವೆವು ನಾವು—"

ಮೃಣಾಲ ನಡುವೇ ತಡೆದು, "ನಾವೂ ಹಾಗೆ ಮಾಡಬಲ್ಲೆವೆ? ಅದೇನೇ ಇರಲೊಲ್ಲದೇಕೆ,— ಯಾರ ಕಾರ್ಯಕಾರಣ ನಮಗೆ ಗೊತ್ತಾಗುವುದಿಲ್ಲವೊ ಅವರನ್ನು ಕ್ಷಮಿಸುವುದು ಶಕ್ಯವಿಲ್ಲದಿದ್ದರೆ, ಕನಿಷ್ಠಪಕ್ಷ ಮನಸಿನೊಳಗೇ ವಿಚಾರ ಮಾಡಿ ಮಾಡಿ ಅವರನ್ನು ಅಪರಾಧಿಯೆಂದು ತೀರ್ಮಾನಿಸಬಾರದು"

ಮುದುಕ ಬೆಚ್ಚಿದರು ತೀವ್ರದೃಷ್ಟಿಯಿಂದ ಅವಳನ್ನೇ ಏಕಾಗ್ರವಾಗಿ ನೋಡುತ್ತ ಕಲ್ಲಿನ ಹಾಗೆ ಕುಳಿತರು. "ಅಲ್ಲದೆ ದೊಡ್ಡಣ್ಣನ ಬಾಯಿಂದಲೇ ಕೇಳಿದ್ದೇನೆ ಅಪ್ಪಾ,—ಮನಸು ಮಾಡಿದರೆ ಕ್ಷಮಿಸಲಾರದಂಥ ತಪ್ಪು ಜಗತ್ತಿನಲ್ಲಿ ಅತಿವಿರಳ ಎಂದು" ಎಂದಳು ಮೃಣಾಲ

ಕೇದ -ಬಾಬು ಉತ್ತೇಜಿತರಾಗಿ ನೆಟ್ಟಗೆ ಕುಳಿತು "ಈ ಅಪರಾಧವನ್ನು ಕ್ಷಮಿ -ವುದು ಯಾರಿಗಾದರೂ ಎಂದಾದರೂ ಶಕ್ಯವೇ ಮೃಣಾಲ?" ಎಂದರು. ಮೃ -ಣಾಲ ಸುಮ್ಮನಿದ್ದಳು ಅದೇ ತೀವ್ರ ಸ್ವರದಿಂದ ಅವರೆಂದರು:

“ಇಲ್ಲ, ಎಂದೂ ಶಕ್ಯವಿಲ್ಲ ತಂದೆಯಾಗಿ ನಾ ಮಗಳ ದುಷ್ಕೃತಿಯನ್ನು ಕ್ಷಮಿಸುವುದೆಂದೂ ಶಕ್ಯವಿಲ್ಲ ಕ್ಷಮೆಗೆ ತಕ್ಕದ್ದಲ್ಲ, ಕ್ಷಮಿಸುವುದು ಉಚಿತವಲ್ಲ —ಸ್ಪಷ್ಟ ಹೇಳುತ್ತೇನೆ ನಿನಗೆ ”

“ಯೋಗ್ಯ ಅಯೋಗ್ಯ ಎಂಬುದು ವಿಚಾರದ ವಿಷಯ, ಅದಕ್ಕೆ ಕ್ಷಮೆ ಎನ್ನಲಾಗುವುದಿಲ್ಲ ಅಲ್ಲದೆ, ಕ್ಷಮೆಯ ಫಲ ಅಪರಾಧಿಗಷ್ಟೇ ಸಿಕ್ಕುವುದೇ? ಕ್ಷಮಿಸುವವರಿಗೆ ಏನೂ ಸಿಕ್ಕುವುದಿಲ್ಲವೇ ಅಪ್ಪಾ ? ”

ಹುಡುಗಿಯ ಶಾಂತಸ್ನಿಗ್ಧ ವಚನಗಳಿಂದ ಕೇದಾರಬಾಬು ಕ್ಷಣ ಹೊತ್ತು ಬೆರಗುವಡೆದು ಕುಳಿತರು ಬಳಿಕ, “ಇಂಥ ವಿಚಾರ ನನಗೆಂದೂ ಬಂದಿಲ್ಲ ಮೃಣಾಲ ನಿನ್ನಿಂದ ಈಹೊತ್ತು ಒಂದು ನೂತನ ತತ್ವವನ್ನು ತಿಳಿದುಕೊಂಡೆ ತಂಗೀ ನೀ ಹೇಳುವುದು ನಿಜ ಯಾರ ಅಪರಾಧ ಎಷ್ಟು ಎಂಬುದನ್ನು ಬೇಕಾದವರು ವಿಚಾರ ಮಾಡಿಕೊಳ್ಳಲಿ, ನಾ ಮಾತ್ರ ನನ್ನ ಕಡೆ ನೋಡಿಕೊಂಡು ಕ್ಷಮಿಸಿದರಾಯಿತು! ಇದೇ ಅಲ್ಲವೇ ನಿನ್ನ ಉಪದೇಶ?” ಎಂದರು

“ಇಂಥ ಮಾತೆಲ್ಲಾ ಆಡಿ ನನ್ನ ಅಪರಾಧ ಏಕೆ ಹೆಚ್ಚಿಸುತ್ತೀರಿ, ಅಪ್ಪಾ ?” ಎಂದು ಮೃಣಾಲ ಎದ್ದು ನಿಂತು, “ಅವ್ವ ಕರೆಯುತ್ತಿರುವಂತೆ ಕಾಣುತ್ತದೆ” ಎಂದು ಲಗುಬಗೆಯಿಂದ ಹೊರಟುಹೋದಳು

೪೦

ಮೃಣಾಲ ಹೊರಟು ಹೋದರೂ ಕೇದಾರಬಾಬು ತಮ್ಮ ಮಾತಿನ ಗುಂಗಿನಲ್ಲಿಯೆ ತಮಗೆ ತಾವೇ ಹೇಳಿಕೊಳ್ಳುತ್ತಲಿದ್ದರು ‘ಉಳಿದುಕೊಂಡೆ ನಾ ಉಳಿದುಕೊಂಡೆ! ಅವ್ವಾ ನೀ ಉಳಿಸಿದೆ! ದುರ್ಗತಿಯ ದುರ್ಗಮ ಅರಣ್ಯದಲ್ಲಿ ಕಣ್ಣುಕಟ್ಟಿ ಬಿಟ್ಟಂತಿದ್ದೆ, ಸಾವಿನ ಹೊರತು ಮತ್ತಾವುದೂ ಕಾಣದಿತ್ತು, ಆದರೆ ಪಕ್ಕದಲ್ಲಿಯೇ ಇದ್ದ ಮುಕ್ತಿಯ ರಾಜಮಾರ್ಗವನ್ನು ನಿನ್ನ ಹೊರತು ಯಾರು ತೋರುತ್ತಿದ್ದರು? ಕ್ಷಮೆಯ ವಿಚಾರವೇ ನನಗೆ ಬಂದಿರಲಿಲ್ಲ,—ಬಂದರೂ ತಳ್ಳಿಬಿಡುತ್ತಿದ್ದೆ ಉಂಹು, ಸಾಧ್ಯವಿಲ್ಲ, ಮಗಳು ಇಂಥ ದೊಡ್ಡ ತಪ್ಪು ಮಾಡಿರುವಾಗ ತಂದೆಯಾದವನು ಇಂಥ ದೊಡ್ಡ ದಾನ ಮಾಡುವುದು ಅಶಕ್ಯ ಆದರೆ, ಎಲ ಅಂಧಾ, ಎಲ ಮೂಢ, ಎಲ ಕೃಪಣ, ತಂದೆಯೇ ಕೊಡದಿದ್ದುದನ್ನು ಉಳಿದವರು ಹೇಗೆ ಕೊಡುವರು? ಮತ್ತಾಕೆ ಅದರಲ್ಲಿ ಸ್ವೀಕರಿಸುವಳಾದರೂ ಎಷ್ಟು? ನಿನ್ನ ಕ್ಷಮೆಯ ಸರ್ವಾಂಶವೂ

ನಿನ್ನ ಮನೆಗೇ ತಿರುಗಿ ಬರುವುದು! ನಿನ್ನ ಮಗು ಮೃಣಾಲಳ ಈ ತತ್ವವನ್ನು ಕಣ್ಣು ತೆರೆದು ನೋಡು' ಎಂದು ಏನಾದರೂ ನೋಡಲೆಂದೋ ಏನೋ ಅವರು ಕಣ್ತೆರೆದರು ಮೋಡಗವಿದ ಮುಗಿಲಕಡೆ ನೋಡಿ ತನ್ಮಯತೆಯಿಂದ ಎಂದುಕೊಂಡರು 'ನಾ ಕ್ಷಮಿಸಿದೆ, ಕ್ಷಮಿಸಿದೆ! ಸುರೇಶ, ನಿನ್ನ ಕ್ಷಮಿಸಿದೆ! ಅಚಲಾ, ನಿನ್ನ ಕ್ಷಮಿಸಿದೆ! ಪಶುಪಕ್ಷಿಗಳೆ, ಕ್ರಿಮಿಪತಂಗಗಳೆ ಇಲ್ಲಿದ್ದವರನ್ನೆಲ್ಲ ಕ್ಷಮಿಸಿದೆ! ಇಂದಿನಿಂದ ಯಾರ ಬಗ್ಗೆಯೂ ನನ್ನ ಸಿಟ್ಟು ಸೆಡವು ದೂರು ಆರೋಪಗಳಿಲ್ಲ ನಾ ಇಂದು ಮುಕ್ತ, ಸ್ವತಂತ್ರ, ಪರಮಾನಂದ ಮಯ!' ಎಂದೆನ್ನುತ್ತಿದ್ದಂತೆ ಅವರ ಕಣ್ಣು ಅನಿರ್ವಚನೀಯಕರುಣೆಯಿಂದ ಮುಚ್ಚಿಕೊಂಡವು ಎರಡೂ ಕೈ ಜೋಡಿಸಿ ತೊಡೆಯಮೇಲಿಟ್ಟು ಕೊಳ್ಳುತ್ತಲೇ ಮುದ್ರಿತ ನೇತ್ರಪ್ರಾಂತದಿಂದ ಪಿತೃಸ್ನೇಹ ಧಾರೆಗಟ್ಟಿ ಹರಿಯ ತೊಡಗಿತು ಕಂಪಿಸುವ ತುಟಿಗಳಿಂದ ಅಸ್ಫುಟಸ್ವರದಲ್ಲಿ ಮಾತು ಹೊರ ಹೊಮ್ಮಿತು 'ಮಗೂ ಮಗೂ, ನೀ ಎಲ್ಲಿದ್ದೀ? ಒಮ್ಮೆ, ಒಮ್ಮೆ ಮಾತ್ರ ತಿರುಗಿ ಬಾ! ನಾ ನಿನ್ನನ್ನು ಈ ಪ್ರಪಂಚಕ್ಕೆ ತಂದಾತ, ಹೊತ್ತು ಹೊರೆದು ಬೆಳೆಸಿದಾತ— ಮಗೂ, ನಿನ್ನ ಸಮಸ್ತ ಅಪರಾಧ, ಸಮಸ್ತ ಅಪಮಾನ, ಸಮಸ್ತ ಲಾಂಛನಗಳೊಂದಿಗೇ ಇನ್ನೊಮ್ಮೆ ತೊಡೆಯನೇರು ಬಾ ಅಚಲಾ! ನಾವಿನ್ನು ಸಂಘಸಮಾಜದಲ್ಲಿ ಹೋಗುವುದು ಬೇಡ, ಮನೆಯಿಂದ ಹೊರಬೀಳುವುದು ಬೇಡ — ನಾನು ನೀನು ಇಬ್ಬರೇ— '

"ಅಪ್ಪಾ?"

ಅವರು ತಿರುಗಿ ಮೃಣಾಲಳ ಕಡೆ ನೋಡಿದರು ತಮ್ಮನ್ನು ಸಂಯಮಿಸಿಕೊಳ್ಳಲೂ ಪ್ರಯತ್ನಿಸಿದರು ಆದರೆ ಮರುಕ್ಷಣವೇ ನೆಲದ ಮೇಲೆ ಬಿದ್ದು ಮಕ್ಕಳಂತೆ ಅತ್ತುಬಿಟ್ಟರು "ತಂಗೀ, ಮಗೂ, ನನ್ನ ಹೃದಯ ಬಿರಿದು ಹೋಗುತ್ತಿದೆ ಎಲ್ಲರೂ ಅಪನ್ನೆಷ್ಟು ಕಾಡಿದಾರೆ, ನೋಯಿಸಿದ್ದಾರೆ! ಅದಿನ್ನು ಸಹಿಸಲಾರದು!''

ಮೃಣಾಲ ಮಾತನಾಡದೆ, ಹತ್ತಿರ ಹೋಗಿ ಕುಳಿತು ಅವರ ತಲೆಯನ್ನು ತೊಡೆಯ ಮೇಲೆ ತೆಗೆದುಕೊಂಡು ಬೋಳೈಸತೊಡಗಿದಳು ಅವಳ ಕಣ್ಣೊಳಗೂ ನೀರು ಬಂತು. ಕೆಲಹೊತ್ತಿನ ಮೇಲೆ ಕಣ್ತೆರೆದೆದ್ದು ಕುಳಿತು ಕೇದಾರಬಾಬು ನುಡಿದರು "ಮೃಣಾಲ, ಮಹಿಮನಿಗೆ ಕಾಗದ ಬರೆದರೆ ಉತ್ತರ ದೊರೆಯಲಿಕ್ಕಿಲ್ಲವೆ?"

"ಏಕೆ ದೊರೆಯುವುದಿಲ್ಲವಪ್ಪ? ನಾಳೆ-ನಾಡದಿಷ್ಟರೊಳಗೇ ಉತ್ತರ ಬರಬಹುದು"

"ನೀ ಕಾಗದ ಬರೆದಿದ್ದೀಯಾ?"

ಮೃಣಾಲ ಗೋಣಿನಿಂದ ಹೂಂ ಎಂದು ಸೂಚಿಸಿದಳು ಏನೇನು ಬರೆದಿದ್ದೀ ಎಂದು ಕೇಳಲು ಅವರಿಗೆ ಸಂಕೋಚವಾಯಿತು ಹೊರಗಡೆ ನೋಟ ಹೊರಳಿಸಿ, "ಇನ್ನೂ ಹೊತ್ತಿದೆ, ಒಂದಿಷ್ಟು ತಿರುಗಾಡಿ ಬರುತ್ತೇನೆ" ಎಂದು ತೊಡಿಗೆ ಸರಿಪಡಿಸಿಕೊಂಡು ಬಡಿಗೆ ತೆಗೆದುಕೊಂಡು ಒಂದೆರಡು ಹೆಜ್ಜೆ ಹೋಗಿ ತಟ್ಟನೆ ನಿಂತು ಅವರೆಂದರು· "ಆದರೆ ತಂಗೀ—"

"ಏನಪ್ಪ?"

"ನನಗೆ ಭಯವಿದೆ—ಭಯವೇನಲ್ಲ—ಯೋಚನೆ—"

"ಏನು?"

"ಏಕೋ ನನಗೆನಿಸುತ್ತದೆ—ಒಳ್ಳೆಯದು, ನಾವು ಬರುತ್ತೇವೆಂದರೆ ಮಹಿಮ ಬೇಡೆನ್ನುವನೆಂದು ನಿನಗೆನಿಸುತ್ತದೆಯೆ?"

ಈ ಭಯ, ಈ ಯೋಚನೆ ಮೃಣಾಲಳಿಗೂ ಇತ್ತು ಅವಳ ಮನಸಿನಲ್ಲಿ ಈ ಪ್ರಶ್ನೆಯ ಉತ್ತರವೂ ಒಂದು ರೀತಿಯಿಂದ ನಿಶ್ಚಿತವಾಗಿತ್ತು. ಎಂತಲೆ ತಟ್ಟನೆ ಅವಳೆಂದಳು "ಈಗ ಅದರ ಆಗತ್ಯ ನಮಗೇನಪ್ಪ? ಅವನ ವಿಳಾಸ ತಿಳಿದೊಡನೆ ನಾವು ಹೋಗಿಬಿಡುವ ಆಗ ದೊಡ್ಡಣ್ಣ ನಮ್ಮನ್ನು ತಳ್ಳಿಬಿಟ್ಟರೆ ಜಗತ್ತಿನೊಳಗಿನ ಅರಿತುಕೊಳ್ಳಬೇಕಾದ ಅನೇಕ ವಿಷಯಗಳು ತಾವಾಗಿ ತಿಳಿಯುವವು ಮತ್ತಾರನ್ನೂ ಕೇಳಬೇಕಾದ್ದಿಲ್ಲ"

"ಎಂದರೆ, ನೀ ನಿಜವಾಗಿ ನನ್ನೊಂದಿಗೆ ಬರುವೆಯಾ?"

"ನಿಜವಾಗಿ"

* * *

ಸರಿಯಾಗಿ ಇದೇ ಫಾಲ್ಗುನದ ಒಂದು ದಿನ ಅಪರಾಹ್ನದಲ್ಲಿ, ಬಂಗಾಲದ ಹೊರಗೆ ಇನ್ನಿಬ್ಬರು ನರನಾರಿಯರಿಗೆ ಕಣ್ಣೀರು ಅಸಂವರಣೀಯವಾಗಿತ್ತು ಸುರೇಶ ಮುದ್ರಾಂಕಿತವಾದ ದೊಡ್ಡ ಲಕ್ಕೋಟೆಯೊಂದನ್ನು ಅಚಲೆಯ ಕೈಗೆ ಕೊಡುತ್ತ, "ಎಷ್ಟೋ ದಿನ ಕೊಡಬೇಕು ಕೊಡಬೇಕೆನ್ನುತ್ತಿದ್ದೆ, ಸಾಹಸ ಸಾಕಿರಲಿಲ್ಲ. ಅದರಿಂದು ಕೊಡದಿರುವುದಾಗಲಿಲ್ಲ," ಎಂದ

"ಎಂದರೆ ?" ಅಚಲೆ ದ್ವಿಧಾಭಾವದಿಂದ ಕೇಳಿದಳು

ಸುರೇಶ ನಸುನಕ್ಕು ಹೇಳಿದ "ಜಗತ್ತಿನಲ್ಲಿ ನನಗೆ ಸಾಹಸ ಸಾಲದಂಥ ಭಯಂಕರ ಅಶ್ಚರ್ಯ ಮತ್ತೇನಿರಬಹುದೆಂದು ನಿನ್ನ ಯೋಚನೆಯಲ್ಲವೆ ? ಇದರರ್ಥ ಏನಾದರೂ ಇದ್ದಿದ್ದರೆ ಒಂದಿಲ್ಲೊಂದು ದಿನ ಪ್ರಕಟವಾಗುವುದು ಆದರೆ ಅರ್ಥ ತಿಳಿಯದೆಯೇ ನನ್ನಿಂದ ಅನೇಕ ದುಃಖ-ಅಪಮಾನಗಳ ಹೊರೆ ನೀ ಹೊತ್ತುಕೊಂಡಿದ್ದೀ, ಇದನ್ನೂ ಹಾಗೆಯೇ ತೆಗೆದುಕೋ ಅಚಲಾ"

"ಇದರೊಳಗೇನಿದೆ ?" ಎಂದು ಶಾಂತಸ್ವರದಿಂದ ಅಚಲೆ ಕೇಳಿದಳು.

"ನಾ ನಿನ್ನಿಂದ ಇಷ್ಟು ದಿನ ಪಡೆದದ್ದೆಲ್ಲ ದರೋಡೆಯಿಂದ ಆದರೀವೊತ್ತು ಒಂದನ್ನು ಭಿಕ್ಷೆ ಬೇಡುತ್ತೇನೆ· ನೀ ಅದನ್ನು ತಿಳಿಯಲಿಚ್ಛಿಸಬೇಡ" ಎಂದು ಸುರೇಶ ಕೈಜೋಡಿಸಿದ

ಅಚಲೆಗೆ ಏನು ಹೇಳುವುದಕ್ಕೂ ತೋಚಲಿಲ್ಲ ಹೊರಗಿನಿಂದ ಆಳು ಹೇಳಿದ "ಬಾಬೂ, ಇನ್ನು ತಡಮಾಡಿದರೆ ಮುಟ್ಟಲಿಕ್ಕೆ ರಾತ್ರಿಯಾಗುತ್ತದೆ, ದಾರಿಯೊಳಗೆ ಮಳೆಬಂದರೂ ಬಂತೇ ಎಂದು ಎಕ್ಕದವ ಎನ್ನುತ್ತಾನೆ"

"ಈವೊತ್ತು ಮತ್ತೆಲ್ಲಿಗೆ ಹೊರಟಿರಿ ? ಈ ಹೊತ್ತಿನೊಳಗೇ ?" ಎಂದಳು ಅಚಲೆ ಅಚ್ಚರಿಯಿಂದ

"ಮಝೂಲಿಗೆ ಪ್ಲೇಗಿನ ಡಾಕ್ಟರು ಸಿಗದ್ದಕ್ಕೆ ಊರೆಂಬುದು ಮಸಣವಾಗತೊಡಗಿದೆ ಈ ಬಾರಿ ಆರೇಳು ದಿನ ಅಲ್ಲಿ ನಿಲ್ಲಬೇಕಾಗುವುದು—ಅಥವಾ ಯಾರು ಬಲ್ಲರು ? ಕೊನೆತನಕ ಅಲ್ಲಿಯೇ ಇರಬೇಕಾದೀತು" ಎಂದು ನುಡಿದು ಸುರೇಶ ನಸುನಕ್ಕ

ಅಚಲೆ ಅವನ ಮೋರೆ ನೋಡುತ್ತ ನಿಂತಳು ಸುದ್ದಿ ಅವಳಿಗೆ ಸ್ವಲ್ಪ ಸ್ವಲ್ಪ ಗೊತ್ತಿತ್ತು ಏಳೆಂಟು ಹರದಾರಿ ದೂರದ ಕೆಲವೊಂದು ಹಳ್ಳಿಗಳು ಪ್ಲೇಗಿನಿಂದ ಸುಡುಗಾಡಾಗುತ್ತಿವೆಯೆಂದು ಕೇಳಿದ್ದಳು ಪಟ್ಟಣದಿಂದಿಷ್ಟು ದೂರ, ಮಹಾಮಾರಿಯ ಬೀಡಾರದಲ್ಲಿ ದರಿದ್ರರ ಶುಶ್ರೂಷೆಗೆ ಚಿಕಿತ್ಸಕರ ಅಭಾವವಿರುವುದೇನು ವಿಚಿತ್ರವಲ್ಲ ಸುರೇಶ ಗೌಪ್ಯವಾಗಿ ಬಹುಬೇಯ ಔಷಧಗಳನ್ನು ನಾನಾಕಡೆಗಳಿಗೆ ಕಳಿಸುತ್ತಿದ್ದುದೂ ಅವಳಿಗ ತಿಳಿದಿತ್ತು ಅವನು ದೊಡ್ಡನಸುಕಿನಲ್ಲಿಯೇ ಎದ್ದು ಎಲ್ಲಿಗಲ್ಲಿಗೋ ಹೋಗುತ್ತಿದ್ದ; ತಿರುಗಿ ಬರಲಿಕ್ಕೆ ಒಮ್ಮೆ ಸಂಜೆಯಾಗುತ್ತಿತ್ತು, ಒಮ್ಮೆ ರಾತ್ರಿಯಾಗುತ್ತಿತ್ತು

ಮೊನ್ನೆಯಂತೂ ತಿರುಗಿ ಬಂದಿರಲೇ ಇಲ್ಲ ಆದರ ಮನೆಬಿಟ್ಟು, ತನ್ನನ್ನು ಬಿಟ್ಟು ಎಷ್ಟೋ ದಿವಸ ಸಾವಿನ ನಡುವೆ ವಾಸಮಾಡಿಯಾನೆಂದು ಅವಳು ಬಗೆದಿರಲಿಲ್ಲ ಅಂತೆಯೇ ನೀರವವಾಗಿ ಅವನ ಮೋರೆ ನೋಡತೊಡಗಿದಳು 'ಮಹಾ ಪಾಪಿಷ್ಠ, ದೇವರನ್ನು ಒಪ್ಪದವ, ಪಾಪಪುಣ್ಯ ಎಣಿಸದವ, ಏಕಮಾತ್ರ ಮಿತ್ರನ ಮತ್ತವನ ನಿರಪರಾಧಿನಿ ಪತ್ನಿಯ ಸರ್ವನಾಶಗೈಯಲು ಹೇಸದವ—' ಅವನ ಮುಖ ನೋಡಿದಾಗ ಅವಳ ಮನಸ್ಸು ವಿತೃಷ್ಣೆಯಿಂದ ವಿಷವಾಗಿಬಿಡುತ್ತಿತ್ತು ಆದರಿಂದು ಕ್ಷಣ ನೋಡಿದ ಮಾತ್ರಕ್ಕೆ ಅವಳ ಮನಸ್ಸು ವಿಷಭರಿತವಾಗಲಿಲ್ಲ ಆಶ್ಚರ್ಯಪೂರ್ಣವಾಯಿತು. ಅವನ ತುಟಿಯಂಚಿನಲ್ಲಿ ಈಗಲೂ ಮುಗುಳುನಗೆಯಿತ್ತು,— ಅತ್ಯಂತ ಕ್ಷೀಣ— ಆದರೂ ಅಷ್ಟರೊಳಗೇ ಜಗತ್ತಿನೊಳಗಿನ ವೈರಾಗ್ಯವೆಲ್ಲಾ ಅಡಕವಾಗಿರುವಂತೆ ಅವಳಿಗೆ ಕಂಡಿತು ಅವನ ಮುಖದಲ್ಲಿ ಉದ್ವೇಗವಿಲ್ಲ, ಉತ್ತೇಜನವಿಲ್ಲ, ಮೃತ್ಯುಮಧ್ಯದಲ್ಲಿ ಹೋಗಿರಲು ಶಂಕೆಯ ಆಭಾಸಕೂಡ ಇಲ್ಲ ಈ ನಾಸ್ತಿಕ ಘೋರ ಸ್ವಾರ್ಥಪರನಿಗೂ ತನ್ನ ಪ್ರಾಣ ಇಷ್ಟು ಅಗ್ಗವೆ ! ಪ್ರಪಂಚದೊಳಗೆ ಭೋಗದ ಹೊರತು ಮತ್ತೊಂದರಿಯದ ಮನುಷ್ಯನಿಗೆ, ಭೋಗದ ಸಮಸ್ತ ಸಾಧನಗಳಲ್ಲಿ ಮುಳುಗೇಳುತ್ತಿರುವವನಿಗೆ ಬದುಕಿರುವುದೇ ಬೇಸರವಾಗಬೇಕೇ ? ಇಷ್ಟು ಸಹಜವಾಗಿ ಎಲ್ಲವನ್ನೂ ತೊರೆದು ಹೋಗಲು ಹೊರಟುನಿಂತಿದ್ದಾನೆ ! ತಿರುಗಿ ಬರಲಿಕ್ಕೂ ಇಲ್ಲ ! ಇದೇನೇ ಇರಲಿ, ಪರಿಹಾಸ ಮಾತ್ರವಲ್ಲ

ಹೃದಯಕ್ಕೆ ಒಮ್ಮೆಲೆ ಆಘಾತವಾಗಿ ಅಚಲೆ ಚಂಚಲೆಯಾದಳು. ಕೈಯೊಳಗಿನ ಲಕ್ಕೋಟೆಯನ್ನು ತೋರಿಸುತ್ತ, "ಹಾಗಾದರಿದು ನಿಮ್ಮ ಉಯಿಲೊ ?" ಎಂದು ಕೇಳಿದಳು

"ಇದೇ ಈಗ ನೀಡಿದ ಭಿಕ್ಷೆಯನ್ನು ತಿರುಗಿ ಬೇಡುವೆಯಾ ?" ಎಂದು ಸುರೇಶ ಕೇಳಿದ

ಅಚಲೆ ಸ್ವಲ್ಪ ಸುಮ್ಮನಿದ್ದು "ಒಳ್ಳೆಯದು, ಅದನ್ನು ಕೇಳುವುದಿಲ್ಲ. ಆದರೆ ನಾ ನಿಮ್ಮನ್ನು ಹೋಗಗೊಡುವುದಿಲ್ಲ" ಎಂದಳು

"ಏಕೆ ?"

"ನನಗೆ ನೀವು ಏನೇ ಏಕೆ ಮಾಡಲೊಲ್ಲಿರಿ, ನನಗಾಗಿ ನಿಮ್ಮನ್ನು ನಾ ಸಾಯಗೊಡುವುದಿಲ್ಲ"

ಸುರೇಶ ಮಾತನಾಡಲಿಲ್ಲ ಅಚಲೆ ತನ್ನ ಮಾತಿಗೆ ತಾನೇ ನಾಚಿಕೊಂಡು, ಅದನ್ನು ಸ್ವಲ್ಪ ನಯಗೊಳಿಸುವುದಕ್ಕಾಗಿ ಮತ್ತೆ ಹೇಳಿದಳು "ನೀವೆನ್ನಬಹುದು ನಿನಗಾಗಿ ಸಾಯುವಂಥದ್ದು ಏನು ಬಂತು? ಬಡವರಿಗಾಗಿ ಪ್ರಾಣ ಕೊಡಲು ಹೋಗುತ್ತಿದ್ದೇನೆ, ಎಂದು ಆದರೆ ಅದಕ್ಕೂ ನಾ ಬಿಡುವುದಿಲ್ಲ "

ಕೇಳಿ ಸುರೇಶನಿಗೆ ಮಹಿಮನ ನೆನಪಾಯಿತು ಅವನಂತರಾಳದಿಂದ ನಿಟ್ಟುಸಿರೊಂದು ಹೊರಟು ಸ್ತಬ್ಧವಾದ ಕೋಣೆಯನ್ನು ವ್ಯಾಪಿಸಿತು. ಏಕೆಂದರೆ, ಜೀವನದ ಮಮತೆ ತನಗೆಷ್ಟು ತುಚ್ಛ, ತಾನದನ್ನು ಎಷ್ಟು ಸಹಜವಾಗಿ ಬಿಡಬಲ್ಲ ಎಂಬುದಕ್ಕೆ ಒಬ್ಬನೇ ಒಬ್ಬ ಸಾಕ್ಷಿ ಮಹಿಮ ಇಂದಿನ ಯಾತ್ರೆಯೇ ತನ್ನ ಮಹಾಯಾತ್ರೆಯಾದುದಾದರೆ, ಒಂಟಿಗನಾದ ನಿತಾಂತ ಮೌನಿಯಾದ ಅವನು ಮಾತ್ರವೇ, ಸುರೇಶ ಲೋಭದಿಂದಲ್ಲ, ಕ್ಷೋಭದಿಂದಲ್ಲ, ದುಃಖದಿಂದಲ್ಲ, ಜುಗುಪ್ಸೆಯಿಂದಲ್ಲ ಜೀವ ಕೊಟ್ಟುದು—ಸಾವು ಬಂದುದಕ್ಕೆ ಸತ್ತ ಎಂದು ತಿಳಿದುಕೊಳ್ಳುವ

ಅವನ ಕಣ್ಣಲ್ಲಿ ನೀರು ಬರಲು ಹವಣಿಸಿತು ಅದನ್ನು ತಡೆದು ನಸುನಗಲು ಯತ್ನಿಸಿ ನುಡಿದ "ನಾ ಯಾರಿಗಾಗಿಯೂ ಸಾಯ ಬಯಸುವುದಿಲ್ಲ ವ್ಯರ್ಥ ಸುಮ್ಮನೆ ಕೂತುಕೂತು ಬೇಜಾರಾಗಿ ಸ್ವಲ್ಪ ತಿರುಗಾಡಿ ಬರಲು ಹೋಗುತ್ತೇನೆ ಏಕೆ ಸಾಯಲಿ ಅಚಲಾ, ಸಾಯುವುದಿಲ್ಲ "

"ಹಾಗಾದರ ಈ ಉಯಿಲೇಕೆ?"

"ಆದರೆ ಇದು ಉಯಿಲೆಂಬುದಕ್ಕೆ ಪ್ರಮಾಣವಿಲ್ಲ "

"ಇಲ್ಲದಿದ್ದರೆ ಹೋಗಲಿ ನನ್ನೊಬ್ಬಳನ್ನೇ ಬಿಟ್ಟು ಹೋಗುವಿರಾ?"

"ಹೋಗುತ್ತೇನೆ ನಿಜ ಆದರೆ ತಿರುಗಿ ಬರುವುದಿಲ್ಲವೆಂದು ನಿಶ್ಚಯವಾಗಿಲ್ಲ "

'ಆಗಿಲ್ಲ! ಈ ವಿದೇಶದಲ್ಲಿ ನನ್ನನ್ನೊಮ್ಮೆಲೆ ದಿಕ್ಕೇಡಿ ಮಾಡಿ—" ಮಾತಾಡುತ್ತಿದ್ದಂತೆ ಅವಳಿಗೆ ಅಳು ಬಂದುಬಿಟ್ಟಿತು.

ಏಳಲಿಕ್ಕೆ ಹೋದ ಸುರೇಶ ಕುಳಿತುಬಿಟ್ಟ ಅದಮ್ಯವಾದ ಉದ್ವೇಗವನ್ನು ಸಾವರಿಸಿಕೊಂಡು ನುಡಿದ "ಅಚಲಾ, ನಾ ನಿನ್ನ ಸಂಗಾತಿಯಲ್ಲ. ಇಂದೂ ನೀ ಒಂಟಿಗಳು, ಒಂದು ವೇಳೆ ಅಂಥ ಹೊತ್ತು ನಿಜವಾಗಿ ಒದಗಿದರೂ ಇದಕ್ಕಿಂತಲೂ ಹೆಚ್ಚಿನ ದಿಕ್ಕೇಡಿತನ ನಿನಗೆ ಬರುವುದಿಲ್ಲ "

ಅಚಲೆಯ ಕಣ್ಣಿಂದ ಅಶ್ರುಗಳುದಿರುತ್ತಿದ್ದವು ಆ ಅಶ್ರುಪೂರ್ಣ ದೃಷ್ಟಿಯನ್ನೇ ಅವಳು ಸುರೇಶನ ಮುಖದಲ್ಲಿ ನೆಲೆಗೊಳಿಸಿದಳು ಅವಳ ತುಟಿಗಳು ಥರಥರ ನಡುಗತೊಡಗಿದವು ತುಟಿಗಳನ್ನು ಹಲ್ಲಲ್ಲಿ ಹಿಡಿದು ನಡುಕವನ್ನು ತಡೆಯಲು ಹವಣಿಸಿದಳು ಆದರೆ ಭಗ್ನಕಂಠದಿಂದ ಒಮ್ಮೆಲೆ ಅಳು ಒತ್ತರಿಸಿತು "ನನ್ನಿಂದಿನ್ನೂ ನೀವೇನು ಅಪೇಕ್ಷಿಸುವಿರಿ? ನನ್ನ ಹತ್ತಿರ ಇನ್ನಿರುವುದಾದರೂ ಏನು?" ಎಂದೆನ್ನುತ್ತ ಬಾಯಲ್ಲಿ ಸೆರಗಿಟ್ಟು ಕೊಂಡು ಭರಭರನೆ ಹೋಗಿಬಿಟ್ಟಳು

ಆಳು ಮತ್ತೆ ಬಂದು "ಎಕ್ಕದವ—"

"ಒಳ್ಳೇದೊಳ್ಳೇದು, ಅವನಿಗೆ ಸ್ವಲ್ಪ ತಡೆ ಎನ್ನು"

ಸ್ವಲ್ಪ ಹೊತ್ತಿನಲ್ಲಿ ಕೋಚವ್ಯಾನ ಬಂದು "ಗಾಡಿ ತಯಾರಾಗಿ ನಿಂತು ಬಹಳ ಹೊತ್ತಾಯಿತು" ಎಂದು ತಿಳಿಸಿದ

"ಗಾಡಿ ಏತಕ್ಕೆ?"

"ಅವ್ವವರು ಆ ಮನೆಗೆ ಹೋಗುವುದಕ್ಕಾಗಿ ಹೇಳಿದ್ದರು ಆದರೆ ದಾಸಿ ಹೇಳುತ್ತಾಳೆ ಕೋಣೆಯ ಬಾಗಿಲಿಕ್ಕಿದೆ, ಎಷ್ಟು ಕೂಗಿದರೂ ಉತ್ತರ ವಿಲ್ಲವಂತೆ ಗಾಡಿ ಬಿಚ್ಚಿ ಬಿಡಬೇಕೋ ಹೇಗೆ?"

"ಒಳ್ಳಿಯದು, ತಡೆ"

ಆ ಕೋಣೆಯ ಒಳಗಡೆಯ ಬಾಗಿಲು ತೆರೆದಿತ್ತು ಸುರೇಶ ನಿಃಶಬ್ದ ವಾಗಿ ಒಳಗೆ ಹೋಗಿ ಹತ್ತಿರ ಒಂದು ಚೌಕಿಯಲ್ಲಿ ಕುಳಿತ ಆ ಮಲಗುವ ಕೋಣೆ ಇಬ್ಬರದೂ ಅಲ್ಲಿ ಅವನು ಅನಧಿಕಾರ ಪ್ರವೇಶ ಮಾಡಿರಲಿಲ್ಲ ಆದರೂ ಪ್ರಶಸ್ತ ಶುಭ್ರ ಸುಂದರ ಶಯ್ಯೆಯಲ್ಲಿ ಸುಂದರಿ ಬೋರಲು ಬಿದ್ದು ಅಳುತ್ತಿದ್ದುದು ಅವನ ಮನವನ್ನು ಆಕರ್ಷಿಸಲಿಲ್ಲ, ಹೊಡೆದು ತಳ್ಳತೊಡ-ಗಿತು ಅವನು ಬಂದುದು ಅಚಲೆಗೆ ಗೊತ್ತಾಗಲಿಲ್ಲ, ಅವಳು ಅಳುತ್ತಲೇ ಇದ್ದಳು ಸುರೇಶ ಅವಳನ್ನೇ ದಿಟ್ಟಿಸುತ್ತ ವಿಚಾರ ಮಗ್ನನಾದ ಈಗ ಕೆಲದಿನಗಳಿಂದ ಅವನಿಗೆ ತನ್ನ ತಪ್ಪು ಮನವರಿಕೆಯಾಗತೊಡಗಿತ್ತು. ಆದರೆ ಆ ಲುಂಠಿತ ದೇಹಲತೆ, ಆ ವೇದನೆ-ಅವುಗಳ ಸಮ್ಮಿಲನ ಮಾಧುರ್ಯ ಒಂದು ಕ್ಷಣದೊಳಗೇ ಅವನ ಕಣ್ಣೆವೆಗಳನ್ನು ಬೇರ್ಪಡಿಸಿ ಒಗೆದು ಬಿಟ್ಟಿ ತೇನೋ ಚಿಗುರಿನ ತುಾನೆಯಲ್ಲಿ ನಿಂತ ಮಂಜುವನಿ ಪ್ರಭಾತರವಿಯ ರಶ್ಮಿಯಲ್ಲಿ ಹೊಳೆಯುವುದನ್ನು ಕಂಡು, ಅದರ ಅಪರೂಪ ಸೌಂದರ್ಯ

ವನ್ನು ಕೈಲಿ ಹಿಡಿದುಕೊಂಡು ಸವಿಯಬೇಕೆಂದು ಬಯಸುವ ಲೋಭಿ-
ಯಂತೆಯೇ ತಾ ತಪ್ಪು ಮಾಡಿದನೆಂದು ಅವನಿಗೆನಿಸಿತು ಅವನು ನಾಸ್ತಿಕ,
ಆತ್ಮವನ್ನು ನಂಬುವುದಿಲ್ಲ ಯಾವ ಝರಿಯೊಳಗೆ ಅನಂತ ಸೌಂದರ್ಯ
ನಿರಂತರವಾಗಿ ಹರಿಯುತ್ತಿರುವುದೋ ಆ ಅಸೀಮತೆ ಅವನ ಪಾಲಿಗೆ
ಮಿಥ್ಯೆ ಅಂತೆಯೇ ಸ್ಥೂಲದಲ್ಲಿಯೇ ಸಮಸ್ತ ದೃಷ್ಟಿಯನ್ನು ಏಕಾಗ್ರ
ಗೊಳಿಸಿ, ಆ ಸುಂದರ ದೇಹವನ್ನು ವಶಪಡಿಸಿಕೊಂಡರಾಯಿತು, ತನ್ನ
ಬಯಕೆ ತಾನಾಗಿ ಹಣ್ಣಿಸುವುದೆಂದು ಅವನು ನಿಃಸಂದೇಹವಾಗಿ ತಿಳಿದಿದ್ದ.
ಆದರೀಗ ಅವನ ತಪ್ಪಿನ ಮುಗಿಲ ಮಟ್ಟದ ಅರಮನೆ ಪುಡಿಪುಡಿಯಾಯಿತು
ಮಂಜಿನ ಹನಿ ಕೈಲಿ ಹಿಡಿಯುವೆನೆಂಬುದು—ಹಿಡಿದೊಡನೆ ಆರಿಹೋಗು-
ವುದು—ಮಹಾಭ್ರಾಂತಿ ಎಂದು ಅವನಿಗೆ ಹೊಳೆಯಿತು ಹಾಯ್ !
ಯಾವುದಕ್ಕೆ ಪಲ್ಲವಪ್ರಾಂತವೇ ದೇವದತ್ತವಾದ ಸ್ಥಾನವೋ, ಅದನ್ನು
ಐಶ್ವರ್ಯದ ಮರುಭೂಮಿಯಲ್ಲಿ ತಂದು ಕಾಯ್ದುಕೊಳ್ಳುವನೆಂತು ?

ತಿಳಿಯದೆಯೆ ಬಂದ ಕಂಬನಿಯನ್ನು ಮಿಡಿದು, "ಅಚಲಾ !"
ಎಂದು ಕೂಗಿದ ಸುರೇಶ

ಅಚಲೆ ಬೆಚ್ಚಿದಳು ಆದರೆ ಏಳಲಿಲ್ಲ, ಮಾತಾಡಲಿಲ್ಲ. "ನಿನ್ನ
ಗಾಡಿ ಸಿದ್ಧವಿದೆ, ಈವೊತ್ತು ರಾಮಬಾಬುಗಳ ಮನೆಗೆ ಹೋಗುವೆಯಾ ?"
ಎಂದು ಸುರೇಶ ಕೇಳಿದ ಇದಕ್ಕೂ ಉತ್ತರವಿಲ್ಲ ಅವನು ಮತ್ತೆ ನುಡಿದ.
"ಈಗ ಒಲ್ಲೆ ಎನಿಸಿದ್ದರೆ ಕೊರಳು ಹರಿಯಲೊಲ್ಲನೇಕೆ ನನಗೂ ಈವೊತ್ತು
ಹೊರಗೆ ಹೋಗಲಿಕ್ಕಾಗುವಂತೆ ಕಾಣುವುದಿಲ್ಲ ಎಕ್ಕ ತಿರುಗಿ ಕಳಿಸಿ
ಬಿಡುತ್ತೇನೆ" ಎಂದು ಕೂಡುವ ಕೋಣೆಗೆ ಹೊರಟುಹೋದ.

ಅಲ್ಲಿ ಹತ್ತು ಹನ್ನೆರಡು ನಿಮಿಷ ಏನು ಯೋಚಿಸುತ್ತಿದ್ದನೋ
ಅವನದು ಅವನಿಗೇ ಗೊತ್ತಿಲ್ಲ ಸೀರೆಯ ಖಸ್‌ಖಸ್ ಶಬ್ದ ಕೇಳಿ ಸಚೇತನ
ನಾಗಿ ನೋಡಿದ ಇದಿರಿನಲ್ಲಿ ಅಚಲೆ ಕಣ್ಣಿನ ಕೆಂಪನ್ನು ಶಕ್ಯವಿದ್ದಷ್ಟು
ತೊಳೆದುಕೊಂಡು ಧನಿಕ ಗೃಹಿಣಿಗೆ ಯೋಗ್ಯವಾದ ವೇಷದಲ್ಲಿ ಅವಳು
ಬಂದಿದ್ದಳು. "ಅವರ ಕಡೆ ಈವೊತ್ತು ಹೋಗಲೇ ಬೇಕಾಗಿದೆ" ಎಂದಳು.

ಈ ವೇಷ ಭೂಷಣ ತನಗಾಗಿ ಅಲ್ಲ, ಅಲ್ಲಿ ಬಂದಿರುವ ರಾಜ ಅತಿಥಿ
ಗಳ ಸಲುವಾಗಿ ಎಂದು ಸುರೇಶ ಅರಿತುಕೊಂಡ ಆದರೂ ಮಣಿಮೌಕ್ತಿಕ-
ಖಚಿತ ರತ್ನಾಲಂಕಾರಭೂಷಿತ ಸುಂದರ ನಾರಿ ಅವನನ್ನೊಂದು ಕ್ಷಣ

ಮುಗ್ಧಗೊಳಿಸಿದಳು ವಿಸ್ಮಯದಿಂದ ಅವನು ಪ್ರಶ್ನಿಸಿದ "ಹೋಗಲೇ ಬೇಕೇಕೆ ?"

"ರಾಕ್ಷಸಿ ಕಲಕತ್ತೆಯಿಂದ ಜ್ವರ ಕಟ್ಟಿಕೊಂಡೇ ಬಂದಿದ್ದಾಳಂತೆ. ದೊಡ್ಡಪ್ಪನಿಗೂ ನಿನ್ನೆ ಜ್ವರ ಬಂದಿವೆಯಂತೆ "

"ಬಂದಮೇಲೆ ಒಮ್ಮೆಯೂ ನೀನಲ್ಲಿಗೆ ಹೋಗಿಲ್ಲವೆ ? "

"ಇಲ್ಲ "

"ಅವರೂ ಯಾರೂ ಬಂದಿಲ್ಲವೆ ? "

"ಇಲ್ಲ "

"ರಾಮುಬಾಬು ? "

"ಅವರೂ ಇಲ್ಲ "

"ಆಶ್ಚರ್ಯ ! ಒಳ್ಳೆಯದು ಹೋಗು "

"ಅವರದೇನು ನಮ್ಮಷ್ಟು ಆಶ್ಚರ್ಯವಲ್ಲ. ಒಬ್ಬಳಿಗಂತೂ ಜ್ವರ ; ಇನ್ನೊಬ್ಬರಿಗೆ ಬಂದವರನ್ನು ನೋಡಿಕೊಳ್ಳುವುದರಲ್ಲಿ ಪುರಸತ್ತಿಲ್ಲ ನಾವೇ ಹೋಗಬೇಕಾಗಿತ್ತು "

"ಒಳ್ಳೆಯದು ಹೋಗು , ಹೊತ್ತಾಗುಂಟಲೆ ತಿರುಗಿ ಬಾ "

ಕ್ಷಣಕಾಲ ಮೌನವಾಗಿದ್ದು ಅಚಲೆಯೆಂದಳು "ನೀವೂ ಸಂಗತಿ ಬರ್ರಿ "

"ನಾನೇಕೆ ? "

ಅಚಲೆ ಸಿಟ್ಟಿನಿಂದ ನುಡಿದಳು "ನಿಮ್ಮ ಜಡ್ಡಿನ ವಿಷಯ ತಿಳಿಯ ದಿದ್ದರೂ ಡಾಕ್ತರರೆಂದಾದರೂ ಬರ್ರಿ "

"ಒಳ್ಳೆಯದು, ನಡೆ "

ಎಕ್ಕದವ ಪಾಪ, ಯಾವ ಅಪ್ಪಣೆಯೂ ಆಗದುದಕ್ಕೆ ಇನ್ನೂ ನಿಂತೇ ಇದ್ದ ಅವನನ್ನು ನೋಡಿ ಅಚಲೆ ಸುಮ್ಮಸುಮ್ಮನೆ ಸಿಟ್ಟಾಗಿ ಮನೆಯಾಳಿ ನಿಂದ ಅವನ ಕೈಫಿಯತ್ ವಿಚಾರಿಸಿ, ತಕ್ಷಣವೇ ಅವನ ಬಾಡಿಗೆ ಕೊಟ್ಟು ಕಳಿಸಿಬಿಡೆಂದು ಹೇಳಿದಳು ಸುರೇಶನ ಕಡೆ ನೋಡುತ್ತ ಅವನೆಂದ. "ನಾಳೆ— "

ಅದಕ್ಕೆ ಅಚಲೆಯೇ ಉತ್ತರವಿತ್ತಳು "ಬೇಡ, ಬಾಬುಗಳು ಹೋಗುವುದಿಲ್ಲ ಎಕ್ಕಾ ಬೇಕಾಗಿಲ್ಲ "

ಗಾಡಿ ಹತ್ತಿ ಸುರೇಶ ಎದುರಿನ ಆಸನದಲ್ಲಿ ಕುಳಿತುಕೊಳ್ಳುತ್ತಲಿದ್ದ. ಅಚಲೆ ಅವನ ತೋಳು ಜಗ್ಗಿ ಪಕ್ಕದಲ್ಲಿ ಕುಳ್ಳಿರುವಂತೆ ಸೂಚಿಸಿದಳು. ಗಾಡಿ ಹೊರಟಿತು ಯಾರೂ ಮಾತನಾಡಲಿಲ್ಲ ಅಕ್ಕಪಕ್ಕದಲ್ಲಿ ಕುಳಿತು ಒಬ್ಬೊಬ್ಬರು ಒಂದೊಂದು ಕಿಡಿಕಿಯಲ್ಲಿ ನೋಡುತ್ತಲಿದ್ದರು

ತೋಟದ ಬಾಗಿಲು ದಾಟಿ ಹಾದಿಗೆ ಹತ್ತಿದ ಮೇಲೆ ಸುರೇಶ ಮೆಲ್ಲಗೆ ಕೂಗಿದ "ಅಚಲಾ!"

"ಏಕೆ?"

"ಇತ್ತೀಚೆ ನಾನೇನು ಯೋಚಿಸುತ್ತಿದ್ದೇನೆ ಗೊತ್ತೆ?"

"ಇಲ್ಲ"

"ಇಷ್ಟು ದಿನ ಯೋಚಿಸಿದ್ದರ ತೀರ ವಿರುದ್ಧ ನಿನ್ನನ್ನು ಹೇಗೆ ಹೊಂದಲಿ ಎಂದು ಯೋಚಿಸುತ್ತಿದ್ದೆ ಆವಾಗ, ಈವಾಗ ನಿನ್ನನ್ನು ಯಾವ ಉಪಾಯದಿಂದ ಮುಕ್ತವಾಡಲಿ ಎಂದು ಯೋಚನೆ ನಿನ್ನ ಭಾರ ನಾನಿನ್ನು ಹೊರಲಾರೆ"

ಈ ಅಚಿಂತ್ಯಪೂರ್ವ ಮತ್ತು ಅತ್ಯಂತ ನಿಷ್ಠುರ ಆಘಾತದಿಂದ ಕ್ಷಣ ಕಾಲ ಅಚಲೆಯ ಮೈಮನಗಳ ಚೇತನವೇ ಅಡಗಿತು ಅವಳು ಅಸ್ಫುಟ ಸ್ವರದಲ್ಲಿ ನುಡಿದಳು "ನನಗೆ ಗೊತ್ತು ಆದರಿಂದಂತೂ—"

ಸುರೇಶ ಹೇಳಿದ "ಹಾಂ, ನೀವು ಯಾವುದನ್ನು ಪಾಪದ ಫಲವೆನ್ನುವಿರೋ ಅದು ನನ್ನ ತಪ್ಪು ಮನಸಿಲ್ಲದ ದೇಹದ ಭಾರ ಇಷ್ಟು ಅಸಹ್ಯವಾದದ್ದೆಂದು ನಾ ಕನಸಿನಲ್ಲಿಯೂ ಯೋಚಿಸಿರಲಿಲ್ಲ"

ಅಚಲೆ ಮುಖವೆತ್ತಿ ಕೇಳಿದಳು "ನೀವು ನನ್ನನ್ನು ಬಿಟ್ಟು ಹೋಗುವಿರಾ?"

ಸುರೇಶ ನಿಃಸಂದೇಹವಾಗಿ ಉತ್ತರವಿತ್ತ "ಸರಿ, ಹಾಗೇ ಎನ್ನು"

ಈ ನಿಸ್ಸಂಕೋಚ ಉತ್ತರದಿಂದ ಅಚಲೆ ಮೂಕಳಾದಳು ಈತ ಸುರೇಶನೆ! ಇಂದವನಿಗೆ ಅವಳೊಂದು ದುಃಸಹವಾದ ಭಾರ! ಇಂದವನು ಅವಳನ್ನು ಬಿಟ್ಟುಹೋಗಬೇಕೆನ್ನುತ್ತಾನೆ! ಬಾಯಿಂದ ಕೊಂಚವೂ ಅಡ್ಡಿಯಿಲ್ಲದೆ ಆಡುತ್ತಾನೆ!

ಮೋಡಗವಿದ ಸಂಜೆಮುಗಿಲಿನಡಿಯಲ್ಲಿ ನಿರ್ಜನ ಮಾರ್ಗವನ್ನು ಪ್ರತಿಧ್ವನಿಗೊಳಿಸುತ್ತ ಗಾಡಿ ಭರದಿಂದ ಸಾಗಿತ್ತು ಅದರೊಳಗಿದ್ದ ನರನಾರಿ

ಯುರು ಮಾತ್ರ ಅತ್ಯಂತ ಮೂಕರು ಸುರೇಶ ಏನು ಯೋಚಿಸುತ್ತಿದ್ದನೋ ಅವನಿಗೇ ಗೊತ್ತು ಆದರೆ ಅವನಾಡಿದ ಮಾತಿನ ಕಲ್ಪನಾತೀತ ನಿಷ್ಠುರತೆಯನ್ನು ದಾಟಿಹೋಗಿ ಅಚಲೆಯ ಮನಸ್ಸು ನೂತನ ಭಯದಿಂದ ಆವೃತವಾಯಿತು ಸುರೇಶನಿಲ್ಲ— ತಾನೊಬ್ಬಳೇ ಆ ಏಕಾಕಿತೆ ಎಷ್ಟು ಬೃಹತ್ತಾದುದು, ಎಷ್ಟು ಅಪಾರವಾದುದು! ಅದೃಷ್ಟದ ವಿಡಂಬನೆಯಿಂದ, ಸಂಸಾರಸಾಗರದಲ್ಲಿ ತಾನು ಯಾವ ನೌಕೆಯಲ್ಲಿ ಕುಳಿತು ನಡೆದಿದ್ದಾಳೋ ಅದು ಅನಿವಾರ್ಯ ಮೃತ್ಯುಮಧ್ಯದಲ್ಲಿ ಜರ್ಝರಿತವಾಗಿ ಮುಳುಗುತ್ತಿದೆ ಎಂಬುದನ್ನು ಅವಳು ಚೆನ್ನಾಗಿಯೇ ಬಲ್ಲಳು ಆದರೂ ಆ ಅಪರಿಚಿತ ಭಯಂಕರ ಆಶ್ರಯ ತಪ್ಪಿ ತಾನು ದಿಕ್ಕುತೋಚದ ಸಮುದ್ರದಲ್ಲಿ ಬೀಳುವಳೆಂಬ ಕಲ್ಪನೆಯಿಂದ ಅವಳ ಮೈ ನಡುಗಿತು ಇನ್ನು ತನಗೆ ಯಾರೂ ಇಲ್ಲ— ಪ್ರೀತಿಸುವುದಕ್ಕೆ, ಹೀಗಳೆಯುವುದಕ್ಕೆ, ಕಾಯುವುದಕ್ಕೆ ಕೊಲ್ಲುವುದಕ್ಕೆ ಯಾವುದಕ್ಕೂ ಯಾರೂ ಇಲ್ಲ! ಇದನ್ನು ನೆನೆನೆನೆದಂತೆ ಅವಳಿಗೆ ಉಸಿರೇ ನಿಂತಂತಾಯಿತು.

ಅಕಸ್ಮಾತ್ತಾಗಿ ಅವಳ ಅಂಕೆದಪ್ಪಿದ ನಿರ್ಜೀವ ಹಸ್ತ ಸುರೇಶನ ತೊಡೆಯ ಮೇಲೆ ಬಿತ್ತು ಅವನು ಬೆಚ್ಚಿಬಿದ್ದು ನೋಡಿದ ಕೊರಳು ಸರಿಪಡಿಸಿಕೊಂಡು ಅಚಲೆಯೆಂದಳು "ನೀವು ನನ್ನನ್ನಿನ್ನು ಪ್ರೀತಿಸುವುದಿಲ್ಲವೆ?"

ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಸುರೇಶ ಹೇಳಿದ "ಈ ಪ್ರಶ್ನೆಗೆ ಅಷ್ಟು ನಿಃಸಂದೇಹ ಉತ್ತರ ಕೊಡಲಿಕ್ಕೆ ಬರುವುದಿಲ್ಲ ಅಚಲಾ ಅದೇನೇ ಆಗಲಿ, ಈ ವೇತಾಳನ ಭಾರ ಹೊತ್ತುಕೊಂಡು ತಿರುಗುವ ತ್ರಾಣ ನಿಜವಾಗಿಯೂ ನನಗಿಲ್ಲವೆಂವೆನಿಸುತ್ತದೆ"

ಅಚಲೆ ಕೊಂಚಹೊತ್ತು ಮೌನ ತಳೆದು ಮೃದು-ಕರುಣ ಸ್ವರದಿಂದ ನುಡಿದಳು "ನನ್ನ ಮತ್ತೆಲ್ಲಿಗಾದರೂ ಕರೆದುಕೊಂಡು ಹೋಗಿರಿ--"

"ಯಾರೂ ಬಂಗಾಲಿಗಳಿಲ್ಲದಲ್ಲಿಗೇ?"

"ಹಾ, ಲಜ್ಜೆ ಉಸಿರುಸಿರಿಗೂ ನನ್ನನ್ನು ಹಿಂಡದಲ್ಲಿಗೆ—"

"ಅಲ್ಲಿ ನೀ ನನ್ನನ್ನು ಪ್ರೀತಿಸುವೆಯಾ ಅಚಲಾ? ಇದು ನಿಜವೆ?" ಎಂದು ಆಕಸ್ಮಿಕ ಆವೇಗದಿಂದ ಅವಳ ಮುಖವನ್ನು ಎದೆಗೆಳೆದುಕೊಂಡು, ತುಟಿಗಳನ್ನು ಮುತ್ತಿಟ್ಟ

ಅಪಮಾನದಿಂದ ಅಚಲೆಯ ಮೋರೆ ಈ ದಿನವೂ ಕೆಂಪಾಯಿತು; ತುಟಿಗಳು ಚೇಳು ಕುಟುಕಿದಂತೆ ಉರಿದವು ಆದರೂ ಅವಳು ಗೋಣು ಹಾಕಿ ಮೆತ್ತಗೆ ನುಡಿದಳು "ಹಾಂ' ಒಂದು ಕಾಲದಲ್ಲಿ ನಾ ನಿಮ್ಮನ್ನು ಪ್ರೀತಿಸುತ್ತಿದ್ದೆ ಇಲ್ಲಿಲ್ಲ—ಛಿ—ಯಾರಾದರೂ ನೋಡಿಯಾರು" ಎಂದು ತನ್ನನ್ನು ಬಿಡಿಸಿಕೊಂಡು ನೆಟ್ಟಗೆ ಕುಳಿತಳು ಆದರೆ ಅವಳ ಕೈ ಮಾತ್ರ ಸುರೇಶನ ಕೈಯೊಳಗೇ ಇತ್ತು ಅವನದನ್ನು ಸ್ನೇಹದಿಂದ ಕೊಂಚ ಹಿಸುಕಿ ಉಸಿರ್ಗರೆದ

ರಾಮುಬಾಬುಗಳ ಮನೆಯಂಗಳದಲ್ಲಿ ಸುರೇಶ ಗಾಡಿಯಿಂದಿಳಿದು ಅಚಲೆಯನ್ನು ಕೈಹಿಡಿದಿಳಿಸಿದ ಅಚಲೆಯ ದೃಷ್ಟಿ ಮೇಲಣ ಮೊಗ-ಸಾಲೆಯ ಕಡೆಗಿತ್ತು. ರಾಕ್ಷಸಿ ಹಾಸಿಗೆಯಿಂದೆದ್ದು ಬೇರೆ ಹೆಣ್ಣುಮಕ್ಕಳೊಡನೆ ಅಲ್ಲಿ ಬಂದುನಿಂತಿದ್ದಳು ಬಹುದಿನದ ದರ್ಶನದಿಂದ ಸಖಿಗಳಿಬ್ಬರ ಮೊಗದಲ್ಲಿಯೂ ನಗೆ ಚಿಗುರಿತು ರಾಮುಬಾಬು ಕೆಳಗೇ ಇದ್ದರು ಅವರು ಸಾನಂದ ಸಸ್ನೇಹದಿಂದ ಕರೆದರು "ಬಾ, ಬಾ ಮಗೂ ಬಾ"

ಈ ಸುಪರಿಚಿತ ಸ್ವರದ ಆತುರದ ಕರೆಯಿಂದ ಅಚಲೆಯ ದೃಷ್ಟಿ ಮೇಲಿನಿಂದ ಕೆಳಗಿಳಿದು ಮುದುಕನ ಮೇಲೆ ಬಿದ್ದಿತು ಆದರೆ ಅವರ ಪಕ್ಕದಲ್ಲಿಯೇ ನಿಂತಿದ್ದ ಮಹಿಮ! ದೃಷ್ಟಾದೃಷ್ಟಿಯಾಯಿತು ತಿರುಗಿ ಎವೆ ಹಳಚಲಿಲ್ಲ ಅಚಲೆಯ ಮಣಿಮೌಕ್ತಿಕಗಳು ಹಾಗೆಯೇ ಹೊಳೆಯುತ್ತಿದ್ದವು, ಪಚ್ಚೆಮಾಣಿಕ್ಯಗಳ ದೀಪ್ತಿ ಕೊಂಚವೂ ಕುಗ್ಗಲಿಲ್ಲ, ಆದರೆ ಅವುಗಳ ಮಧ್ಯದಲ್ಲಿ ವಿಕಸಿತವಾಗಿದ್ದ ಕಮಲ ನಿಮಿಷದಲ್ಲಿಯೇ ಬಾಡಿ ಬಿದ್ದಿತು

ಸಂಜೆಯ ಮಸಕು ಬೆಳಕಿನಲ್ಲಿ ರಾಮುಬಾಬು ಬೇರೆಯೇ ತಿಳಿದುಕೊಂಡರು ಅಪರಿಚಿತ ಪುರುಷನನ್ನು ಕಂಡು ಲಜ್ಜೆಗೊಂಡಿರಬೇಕೆಂದು ಭಾವಿಸಿ ಅಚಲೆಯ ಆನತ ಲಲಾಟವನ್ನು ಹಿಡಿದೆತ್ತಿ "ಇರಲಿ ತಂಗೀ, ನಮಸ್ಕಾರ ಮಾಡುವುದು ಬೇಡಮ್ಮಾ ನೀ ಮೇಲೆ ಹೋಗು" ಎಂದರು

ಅಚಲೆ ಮಾತನಾಡದೆ ಕಾಲೆಳೆದುಕೊಂಡು ಹೋದಳು ರಾಮುಬಾಬು ಸುರೇಶನಿಗೆ "ಸುರೇಶಬಾಬೂ, ಈತ—"

"ವಿಲಕ್ಷಣ ! ನಾವು ಒಂದೇ ಕ್ಲಾಸಿನ— ಚಿಕ್ಕಂದಿನಿಂದಲೂ ನಾವಿಬ್ಬರೂ—" ಎಂದು ನಗುವ ಯತ್ನದಲ್ಲಿ ಮುಖ ವಿಕಾರಮಾಡಿ ಸುರೇಶ

ನೆಂದ "ಏನು ಮಹಿಮ, ನೀನಕಸ್ಮಾತ್—"

ಆದರ ಮಾತು ಮುಗಿಯುವುದರೊಳಗೇ ಮಹಿಮ ದ್ರುತಗತಿಯಿಂದ ಕೋಣೆಯೊಳಗೆ ಹೊರಟುಹೋದ ಮುದುಕ ಹತಬುದ್ಧರಾಗಿ ಸುರೇಶನ ಮೋರೆ ನೋಡಿದರು ಅವನು ಪ್ರತ್ಯುತ್ತರವಾಗಿ ನಗಲು ಪ್ರಯಾಸಪಟ್ಟ, ಆದರದು ನಿಷ್ಫಲವಾಯಿತು

ಅಟ್ಟದ ಮೆಟ್ಟಲಿಂದ ದೊಡ್ಡ ಸದ್ದಾಗಲು ಇಬ್ಬರೂ ಆ ಕಡೆ ಓಡಿದರು ಅಚಲೆ ಬೋರಲು ಬಿದ್ದಿದ್ದಳು ಅವಳು ಎರಡು ಮೂರು ಪಾವಟಿಗೆ ಮಾತ್ರ ಹತ್ತಿದ್ದಳು, ಅಲ್ಲಿಂದ ಮೂರ್ಛಿತಳಾಗಿ ಬಿದ್ದುಬಿಟ್ಟಿದ್ದಳು

೪೧

ಇಂದಿನ ಈ ಮೂರ್ಛೆ ತಿಳಿದಿರದಿದ್ದರೆ! ಆತ್ಮಹತ್ಯೆಯಂತೂ ಭಯಂಕರ ಆದರಿಂಥ ಶಾಂತಸ್ವಾಭಾವಿಕ ಮೃತ್ಯುಬಂದರ! ಒಮ್ಮೆಲೆ ನಿದ್ದೆ ಹತ್ತಿ ಮಲಗಿಬಿಡಬೇಕು— ತಿರುಗಿ ಎಚ್ಚರವೇ ಆಗಬಾರದು! ಇಷ್ಟು ಸಹಜವಾದ ಸಾವು ಬರುವುದಕ್ಕೆ ಉಪಾಯವೇ ಇಲ್ಲವೆ? ಯಾರೂ ಅರಿಯರೇ? ತಿರುಗಿ ಬರುವಾಗ ಗಾಡಿಯಲ್ಲಿ ಅಚಲೆ ಯೋಚಿಸುತ್ತಿದ್ದುದು ಇದೇ·

ಸುರೇಶ ಆವಳನ್ನು ಮುಟ್ಟಿ ನುಡಿದ "ನೀ ಮತ್ತೆಲ್ಲಿಗಾದರೂ ಹೋಗಬೇಕೆನ್ನುತ್ತಿದ್ದಿ, ಹೋಗುವೆಯಾ?"

"ನಡೆಯಿರಿ"

"ಇನ್ನೆಲ್ಲಿ ಮೋರೆ ತೋರಿಸುವುದೆ ಅಸಾಧ್ಯ"

"ಆದರೆ, ಅವರು ಯಾರಿಗೂ ಏನೂ ಹೇಳಲಿಕ್ಕಿಲ್ಲವೆ?"

ಸುರೇಶ ನಿಟ್ಟುಸಿರು ಕರೆದು ಕ್ಷಣ ಮೌನವಾಗಿದ್ದು, "ಇಲ್ಲ. ಮಹಿಮನನ್ನು ನಾ ಬಲ್ಲೆ ಅವನು ಜುಗುಪ್ಸೆಯಿಂದ ನಮ್ಮ ಕೆಟ್ಟ ಹೆಸರನ್ನು ಕೂಡ ಉಚ್ಚರಿಸಲಾರ" ಎಂದ

ಅವನು ಸಹಜವಾಗಿಯೇ ಮಾತನಾಡಿದರೂ ಅಚಲೆಯ ಮೈಯೆಲ್ಲ ನವಿರೆದ್ದಿತು ಮುಂದೆ ಗಾಡಿ ಮನೆಬಾಗಿಲಿಗೆ ಹೋಗಿ ನಿಲ್ಲುವತನಕ ಇಬ್ಬರೂ ನಿರ್ವಾಕ್ಕಾಗಿದ್ದರು ಸುರೇಶ ಅಚಲೆಯನ್ನು ಜತನದಿಂದ ಇಳಿಸಿ, "ನೀ ಸ್ವಲ್ಪ ನಿದ್ದೆಮಾಡಲು ಯತ್ನಿಸು ಅಚಲಾ ನಾ ಕೆಲವು ಅಗತ್ಯದ ಕಾಗದ ಬರೆಯುವುದಿದೆ' ಎಂದು ತನ್ನ ಓದುಕೋಣೆಗೆ ಹೋದ

ಅಚಲೆ ಮಲಗಿ ವಿಚಾರಮಾಡತೊಡಗಿದಳು ತನಗಿನ್ನೂ ಇಪ್ಪ

ತ್ತೊಂದು ವಯಸ್ಸು ಇಷ್ಟೊಂದು ಮಹಾ ದುರ್ಗತಿಯುಂಟಾಗಲು, ಇಷ್ಟರೊಳಗೇ ತಾನು ಯಾರಿಗೇನು ಅಪರಾಧ ಮಾಡಿರಬಹುದು ? ಈ ವಿಚಾರ ಹೊಸದೇನಲ್ಲ ಅವಾಗ ಈವಾಗ ತನ್ನನ್ನು ತಾನೇ ಹೀಗೆ ಪ್ರಶ್ನಿಸಿಕೊಳ್ಳುತ್ತಿದ್ದಳು, ನೆನಪಿಗೆ ನಿಲುಕಿದಷ್ಟೂ ಹಿಂದಿನ ಸಂಗತಿಗಳನ್ನೆಲ್ಲ ಬಗೆದು ನೋಡಲು ಯತ್ನಿಸುತ್ತಿದ್ದಳು ಈಗ ಅಕಸ್ಮಾತ್ ಮೃಣಾಲಳೊಡನೆ ಒಂದಿನ ನಡೆದ ತರ್ಕ ನೆನಪಾಗಿ, ಅದೇ ಸೂತ್ರ ಹಿಡಿದು ಅವಳ ಇಡೀ ವಿಚಾರ ನಡೆಯಿತು ಅವಳ ವಿವಾಹಿತ ಜೀವನ ಗಂಡನೊಡನೆ ಒಂದು ರೀತಿಯ ವಿರೋಧದಲ್ಲಿಯೇ ಸಾಗಿತ್ತು, ಕೊನೆಗೆ ಕೆಲ ದಿನಗಳು ಮಾತ್ರ ಪತಿ ರುಗ್ಣಶಯ್ಯೆಯಲ್ಲಿದ್ದಾಗ ಅವನನ್ನು ತನ್ನವನನ್ನಾಗಿ ಹೊಂದಿದ್ದಳು ಜೀವನದಲ್ಲಿ ಮತ್ತಾವ ಶಂಕೆಯೂ ಇರಲಿಲ್ಲ, ಮನಸು ನಿಶ್ಚಿಂತ ನಿರ್ಭಯವಾಗಿತ್ತು, ಆಗಿನ ಸ್ನಿಗ್ಧ-ಸಹಜ ನಿರ್ಮಲ ಆನಂದವೆಲ್ಲ ಮೃಣಾಲಳ ದುರ್ಭಾಗ್ಯ-ವೇದನೆಗಳು ಅವಳನ್ನು ನೋಯಿಸುತ್ತಿದ್ದವು ಆಗೊಂದು ದಿನ ಮೃಣಾಲಳನ್ನು ತಬ್ಬಿಕೊಂಡು 'ಅತ್ತಿಗೆ, ನೀನೊಂದು ವೇಳೆ ನಮ್ಮ ಸಮಾಜದವಳಾಗಿದ್ದರೆ, ನಿನ್ನ ಜೀವನವನ್ನು ವ್ಯರ್ಥವಾಗಗೊಡುತ್ತಿರಲಿಲ್ಲ' ಎಂದು ಅಚಲೆ ನುಡಿದಿದ್ದಳು

ಮೃಣಾಲ ನಕ್ಕು 'ಏನು ಮಾಡುತ್ತಿದ್ದೆ ಅಕ್ಕಾ, ಮತ್ತೆ ಮದುವೆ ಮಾಡುತ್ತಿದ್ದೆಯಾ ?' ಎಂದು ಕೇಳಿದ್ದಳು

'ಏಕಾಗಬಾರದು ? ಆದರೆ ಅತ್ತಿಗೆ, ನಿನಗೆ ಕೈಜೋಡಿಸುವೆ, ಮತ್ತೆ ಶಾಸ್ತ್ರದ ಆಧಾರ ತೆಗೆಯಬೇಡ ಆ ಬಗ್ಗೆ ಮಲ್ಲಯುದ್ಧ ಸಾಕಷ್ಟಾಗಿದೆ—ಅದನ್ನು ನೆನೆದರೇ ಭಯವಾಗುತ್ತದೆ' ಎಂದಿದ್ದಳು ಅಚಲೆ

ಅದಕ್ಕೆ ಮೃಣಾಲ ಸಹಾಸ್ಯವಾಗಿಯೇ ಉತ್ತರಕೊಟ್ಟಿದ್ದಳು 'ಭಯವಾಗುವ ವಿಷಯವೆ ಏಕೆಂದರೆ ಅದರ ಏಟು ಯಾವಾಗ ಎಲ್ಲಿ ಬೀಳುವುದೋ ನಿಯಮವಿಲ್ಲ ಆದರೆ ನೀನಿನ್ನೊಂದು ವಿಚಾರ ತಿಳಿದಿಲ್ಲ ಅಕ್ಕಾ, ಅವರು ಕಾದಾಡುವುದು ವ್ಯವಸಾಯವೆಂದು, ಮೈಯೊಳಗೆ ಕಸುವು, ಕೈಯೊಳಗೆ ಕೈದು ಇರುವವೆಂದು ಆದುದರಿಂದಲೇ ಅವರ ಸೋಲುಗೆಲವು ಅವರ ಮಟ್ಟಿಗೇ ಅದರಲ್ಲಿ ನಮ್ಮ ಆಗುಹೋಗು ಇಲ್ಲ ನಮ್ಮನ್ನೇನು ಯಾವ ಪಕ್ಷವೂ ವಿಚಾರಿಸುವುದಿಲ್ಲ'

'ಆದರೆ ವಿಚಾರಿಸಿದರೆ ಏನಾಗುತ್ತಿತ್ತು ?' ಎಂದು ಅಚಲೆ ಪ್ರಶ್ನಿಸಿದ್ದಳು.

‘ಅದು ಸರಿಯಾಗಿ ತಿಳಿಯದವ್ವಾ. ನಿನ್ನಂತೆಯೆ ವಿಚಾರ ಮಾಡ ಬಹುದೂ ಆಗಿತ್ತು, ಅಥವಾ ನಿನ್ನ ಪ್ರಸ್ತಾಪಕ್ಕೆ ಒಪ್ಪಲೂ ಬಹುದಾಗಿತ್ತು, ಇಷ್ಟರೊಳಗೆ ಒಂದು ವರವೂ ಸಿಕ್ಕಬಹುದಾಗಿತ್ತೇನೊ’ ಎಂದು ಮೃಣಾಲ ನಕ್ಕಿದ್ದಳು

ಈ ನಗೆಯಿಂದ ಅಚಲೆ ಕ್ಷುಬ್ಧಳಾಗಿ ಉತ್ತರ ಕೊಟ್ಟಿದ್ದಳು ‘ನಮ್ಮ ಸಮಾಜದ ಮಾತು ಹೊರಟರೆ ನೀ ಅವಜ್ಞೆಯಿಂದ ಮಾತಾಡುತ್ತೀ, ನಾ ಬಲ್ಲೆ ಆದರೆ ನಮ್ಮ ಮಾತು ಬೇಕಾದರೆ ಬಿಡು; ಈ ಬಗ್ಗೆ ಹೋರಾಡು ವವರೆಲ್ಲರೂ ವ್ಯವಸಾಯಿಗಳೇ ಏನು ? ಯಾರೂ ಸತ್ಯಕ್ಕಾಗಿ ಬಡಿದಾಡುವವ ರಿಲ್ಲವೇ ? ’

ಅದಕ್ಕೆ ಮೃಣಾಲ ನಾಲಗೆ ಕಚ್ಚಿಕೊಂಡು ಹೇಳಿದ್ದಳು ‘ಈ ರೀತಿ ಭಾವಿಸುವುದೂ ಪಾಪ ಅಕ್ಕಾ ಆದರೆ, ನಾ ನಾಳೆ ಮುಂಜಾನೆಯೇ ಹೋಗುತ್ತೇನೆ, ಬಿಟ್ಟ ಮತ್ತೆ ಯಾವಾಗಲೋ ! ಹೋಗುವ ಮುಂದೆ ಒಂದಿಷ್ಟು ನಗೆಯಾಡಲೂ ಬಾರದೇ ?’ ಮಾತನಾಡುತ್ತಿದ್ದಂತೆ ಅವಳ ಕಣ್ಣಲ್ಲಿ ನೀರುಬಂದಿತ್ತು ಸಾವರಿಸಿಕೊಂಡು ಗಂಭೀರವಾಗಿ, ‘ಆದರೆ ನನ್ನ ಮಾತು ನಿನಗೆ ತಿಳಿಯಲೊಲ್ಲದವ್ವಾ, ಮದುವೆಯೆಂಬುದು ನಿಮ್ಮಲ್ಲಿ ಒಂದು ಸಾಮಾಜಿಕ ವಿಧಾನ ಮಾತ್ರ ಅಂತೆಯೇ ಅದರ ಬಗ್ಗೆ ಚೆಲೋ ಕೆಟ್ಟ ಎಂದು ವಿಚಾರ ನಡೆಯುವುದು, ಅದರ ಮತಾಮತಗಳು ಯುಕ್ತಿ ತರ್ಕ ಗಳಿಂದ ಬದಲಾಗುವವು ಆದರೆ ನಮ್ಮಲ್ಲಿ ಇದು ಧರ್ಮ. ಪತಿಯನ್ನು ನಾವು ಚಿಕ್ಕಂದಿನಿಂದಲೂ ಈ ರೂಪದಲ್ಲಿಯೇ ಗ್ರಹಿಸುವೆವು ಈ ವಸ್ತು ಸಕಲ ವಿಚಾರ ವಿತರ್ಕಗಳಿಗೆ ಬಾಹಿರವಾದದ್ದು ’ ಎಂದೆಂದಿದ್ದಳು

ಅಚಲೆ ವಿಸ್ಮಯದಿಂದ ಪ್ರಶ್ನಿಸಿದ್ದಳು. ‘ಒಳ್ಳೆಯದು, ಹಾಗಿದ್ದರೆ ಧರ್ಮ ಮನುಷ್ಯನಿಂದ ಬದಲಾಗಲಾರದೊ, ಅತ್ತಿಗ್ಗೆ ?’

ಅದಕ್ಕೆ ಮೃಣಾಲ ಹೀಗೆಂದಿದ್ದಳು ‘ಧರ್ಮದ ಮತಾಮತಗಳು ಬದಲಾಗಬಹುದು ಆದರೆ ಮೂಲ ವಸ್ತು ಬದಲಾಗುವುದೇ ಅಕ್ಕ ? ಅಂತೆಯೇ ಎಷ್ಟು ಕಾದಾಟಗಳಾದರೂ ಆ ಮೂಲ ವಸ್ತು ಇಂದಿಗೂ ಎಲ್ಲ ಜಾತಿಗಳಿಗೆ ಒಂದೇ ಆಗಿ ಉಳಿದಿದೆ ಗಂಡನ ಗುಣದೋಷಗಳ ಬಗ್ಗೆ ನಾವೂ ವಿಚಾರಮಾಡುವೆವು, ಅವರ ಸಂಬಂಧದ ನಮ್ಮ ಮತಾಮತಗಳೂ ಬದಲಾಗುವುದುಂಟು—ನಾವೂ ಮನುಷ್ಯರೇ ಅಕ್ಕಾ. ಆದರೆ ಗಂಡನೇ

ನಮಗೆ ಧರ್ಮ, ಅಂತೆಯೇ ಅವರು ನಿತ್ಯ! ಬದುಕಿದ್ದರೂ ನಿತ್ಯ, ಸತ್ತರೂ ನಿತ್ಯ! ಅವರನ್ನು ನಾವು ಬದಲಿಸಲಾರೆವು '

'ಇದೇ ಸತ್ಯವಾಗಿದ್ದರೆ, ಇಷ್ಟೊಂದು ಅನಾಚಾರವಿರುವುದು ಯಾಕೆ?' ಎಂದು ಅಚಲೆ ಪ್ರಶ್ನಿಸಿದ್ದಳು

ಅದಕ್ಕೆ ಮೃಣಾಲ, 'ಅದು ಇರುವುದೆಂದೇ ಇರುವುದು ಧರ್ಮ ಇಲ್ಲದಾದಾಗ ಅದು ಇರುವುದಿಲ್ಲ ಬೆಕ್ಕು ನಾಯಿಗಳದೇನು ಅನಾಚಾರವಲ್ಲ!' ಎಂದಿದ್ದಳು

ಏನು ಮಾತಾಡಲೂ ತೋಚದೆ ಕ್ಷಣ ಸುಮ್ಮನಿದ್ದು ಅಚಲೆ ಎಂದಿದ್ದಳು 'ನಿಮ್ಮ ಸಮಾಜದ ಶಿಕ್ಷಣ ಇಷ್ಟು ಶ್ರೇಷ್ಠವಿದ್ದದ್ದೇ ಆದರೆ ಆ ಶಿಕ್ಷಣ ಕೊಡುವವರು, ಇಷ್ಟು ಸಂದೇಹ, ಇಷ್ಟು ಸಾವಧಾನ ಪಡುತ್ತಿರುವುದೇತಕ್ಕೆ? ಈ ತೆರದ ಮುಸುಕು, ಈ ತೆರದ ಕಟ್ಟು— ಜಗತ್ತಿನಿಂದ ಮುಚ್ಚಿ ಮರೆಯಲ್ಲಿಡುವುದಕ್ಕೆ ಇಷ್ಟೊಂದು ಭಯಂಕರ ಪ್ರಯತ್ನ—ಏಕೆ? ಪರೀಕ್ಷೆಗೆ ಅವಕಾಶವಿದ್ದಿದ್ದರೆ ಈ ಒತ್ತಾಯದ ಪಾತಿವ್ರತ್ಯದ ಬೆಲೆ ತಿಳಿಯಬಹುದಿತ್ತು '

ಇವಳ ಉತ್ತಾಪಕ್ಕೆ ಬೆರಗಾಗಿ ಮೃಣಾಲ ನಕ್ಕು ಹೇಳಿದ್ದಳು: 'ವಿಧಿವ್ಯವಸ್ಥೆ ಯಾರು ಮಾಡಿಟ್ಟಿದ್ದಾರೋ ಅವರನ್ನೇ ಕೇಳಬೇಕಕ್ಕ ನಾ ತಾಯಿ ತಂದೆಗಳಿಂದ ಕಲಿತದ್ದನ್ನಷ್ಟು ಆಚರಿಸುವವಳು ಆದರೆ ನಾನಿಷ್ಟು ಮಾತ್ರ ಖಂಡಿತ ಹೇಳಬಲ್ಲೆ—ಗಂಡನನ್ನು ಧರ್ಮವೆಂದರಿತು, ಪರಲೋಕವಸ್ತುವೆಂದರಿತು ಗ್ರಹಿಸುವುದೇ— ಅವಳ ಕಾಲಬೇಡಿ ಬೇಕಾದರೆ ಬಿಗಿದಿರಲಿ, ಬೇಕಾದರೆ ತೆಗೆದಿರಲಿ—ಅವಳ ಪರೀಕ್ಷೆ ಎಂದು ತಿಳಿದುಕೋ! ಎಂದು ಸ್ವಲ್ಪ ತಡೆದು ಮತ್ತೆಂದಿದ್ದಳು 'ನನ್ನ ಪತಿಯನ್ನಂತೂ ನೀ ನೋಡಿಯೇ ಇದ್ದೀ ಅವರು ಮುದುಕರು, ದರಿದ್ರರು, ರೂಪಗುಣಗಳೂ ಸಾಮಾನ್ಯ ನಾಲ್ಕು ಜನರಿಗಿಂತ ಹೆಚ್ಚಿಗೇನಿರಲಿಲ್ಲ, ಆದರೂ ಅವರೇ ನನ್ನ ಇಹಕಾಲ, ಅವರೇ ನನ್ನ ಪರಕಾಲ!' ಎಂದು ಕ್ಷಣ ಕಣ್ಮುಚ್ಚಿ—ಬಹುಶಃ ಹೃದಯದಲ್ಲಿ ಅವರನ್ನು ಸಂದರ್ಶಿಸಿ— ತೆರೆದು ಮಾಸಲುನಗೆ ನಕ್ಕು ನುಡಿದಿದ್ದಳು 'ಉಪಮೆ ಸರಿಯಿಲ್ಲದಿರಬಹುದು ಅಕ್ಕಾ, ಆದರೆ ಇದ್ದ ಸಂಗತಿ. ತಂದೆಗೆ ಹೆಗ್ಗಣದಂಥ ಮಕ್ಕಳೇ ಮುದ್ದಂತೆ ಎರಡನೆಯವರ ಸುಂದರ ಸುರೂಪ ಮಕ್ಕಳನ್ನು ನೋಡಿದರೆ ಅವರ ಮನಸಿನೊಳಗೆ ಕ್ಷೋಭವುಂಟಾ

ದೀತು ಅಷ್ಟೆ, ಅದರಿಂದ ಪಿತೃಧರ್ಮ ಲೇಶಮಾತ್ರವೂ ಕುಗ್ಗುವುದಿಲ್ಲ. ಆದರೆ ತನ್ನ ಪಿತೃತ್ವದ ಬಗ್ಗೆ ಸಂಶಯವುಂಟಾದಲ್ಲಿ, ಇಲ್ಲವೆ, ಪಿತೃಧರ್ಮ ಭಂಗವಾದಲ್ಲಿ, ಆ ಸ್ನೇಹದ ಲವಲೇಶವೂ ಸಿಕ್ಕಲಾರದು ಆದರ ನಮ್ಮ ಶಿಕ್ಷಣ-ಸಂಸ್ಕಾರ-ಆಚಾರಗಳೇ ಬೇರೆ ಅಕ್ಕಾ, ನನ್ನ ಈ ಉಪಮೆ ಮತ್ತು ಮಾತು ನಿನಗೆ ತಿಳಿಯಲಿಕ್ಕೂ ಇಲ್ಲ ಆದರೆ ಪತಿಯನ್ನು ಧರ್ಮವೆಂದು ಅಂತರಂಗದಿಂದ ಸ್ವೀಕರಿಸುವ ಶಿಕ್ಷಣ ಪಡೆಯದವಳ ಕಾಲ ಬೇಡಿಗಳು ಕಟ್ಟಿರಲಿ ಬಿಟ್ಟಿರಲಿ, ಅವಳು ತನ್ನ ಸತೀತ್ವ ನೌಕೆ ಎಷ್ಟೇ ಮಹತ್ತರವಾದ ದ್ದೆಂದು ಕಲ್ಪಿಸಿಕೊಂಡಿರಲಿ, ಪರೀಕ್ಷೆಯ ಕಳ್ಳುಸುಕಿನಲ್ಲಿ ಸಿಕ್ಕರೆ ಮುಳುಗುವುದೇ ಅವಳು ತೆರೆಯೊಳಗಿದ್ದರೂ ಮುಳುಗುವಳು, ಹೊರಗಿದ್ದರೂ ಮುಳುಗುವಳು'

ಹಾಗೆಯೇ ಆಯಿತು ಈ ಸತ್ಯ ಅಚಲೆಗಾಗ ಗೊತ್ತಾಗಲಿಲ್ಲ. ಆದರೀಗ ಮೃಣಾಲಳ ಆ ಕಳ್ಳುಸುಕಿನಲ್ಲಿ ಸಿಗುಬಿದ್ದಾಗ ಪೂರ ತಿಳಿಯಿತು, ಆಗವಳು ಪರಿಪರಿಯಿಂದ ಯಾವ ಮಾತನ್ನು ತಿಳಿಯಪಡಿಸಲು ಯತ್ನಿಸುತ್ತಿದ್ದಳೆಂಬುದು ಹೊಳೆಯಿತು ನಿರವರುದ್ಧ ಸಮಾಜದ ಅಬಾಧಿತ ಸ್ವಾತಂತ್ರ್ಯದಲ್ಲಿ ಕಣ್ಣುಕಿವಿ ತೆರೆದುಕೊಂಡೇ ತಾನಿಷ್ಟು ದೊಡ್ಡವಳಾಗಿದ್ದಾಳೆ, ತನ್ನ ಜೀವನವನ್ನು ತಾನೇ ನಿಶ್ಚಿತಪಡಿಸಿಕೊಂಡು ಗ್ರಹಿಸಿದ್ದಾಳೆ, ಎಂಬುದೇ ಅವಳ ಹೆಮ್ಮೆ ಆದರೆ ಅದೊಂದೂ ಪರೀಕ್ಷೆಯ ಕಾಲದಲ್ಲಿ ಉಪಯೋಗಕ್ಕೆ ಬರಲಿಲ್ಲ ಅವಳ ವಿಪತ್ತು ಅತ್ಯಂತಗೌಪ್ಯವಾಗಿ ಮಿತ್ರವೇಷದಿಂದ ಬಂದಿತು, ದೊಡ್ಡಪ್ಪನ ಸ್ನೇಹಶ್ರದ್ಧೆಗಳ ಛದ್ಮರೂಪ ಧರಿಸಿ ಅದು ಬಂದಿತು ಆ ಶುಭಾಧ್ಯಾಯಿ ವೃದ್ಧನ ಸಸ್ನೇಹ ನಿರ್ಬಂಧಾತಿಶಯದಿಂದ ಯಾವ ದುರ್ದಿನದ ರಾತ್ರಿ ಸುರೇಶನ ಹಾಸಿಗೆಗೆ ಹೋಗಿ ಅವಳು ಆತ್ಮಹತ್ಯ ಮಾಡಿಕೊಂಡು ಕುಳಿತಳೋ, ಆಗವಳ ರಕ್ಷಣೆಗೆ ಅತ್ಯಜ್ಯ ಸತೀಧರ್ಮವೊಂದೇ ಇದ್ದಿತು! ಜೀವನದಲ್ಲಿ ಮರಣದಲ್ಲಿ ಇದೇ ಅದ್ವಿತೀಯವೆಂದು ನಿತ್ಯವೆಂದು ಮೃಣಾಲ ಮನಗಾಣಿಸಲು ಹವಣಿಸಿದ್ದಳು ಆದರೆ ಅಂದು ಹೊರಗಿನ ಪರೆಯೇ ದೊಡ್ಡದಾಗಿ ಅವಳ ಧರ್ಮವನ್ನು ಸೋಲಿಸಿಬಿಟ್ಟಿತು ಅವಳ ಆಜನ್ಮ ಶಿಕ್ಷಣಸಂಸ್ಕಾರಗಳು ಅಂತರ್ಯವನ್ನು ತುಚ್ಛೀಕರಿಸಿ, ಕಾರಾಗಾರವೆಂದೆಣಿಸಿ ಹೊರಜಗತ್ತನ್ನೇ ಎಲ್ಲಕ್ಕಿಂತ ಮೇಲ್ಮಟ್ಟಕ್ಕೇರಿಸಿದ್ದವು; ಗುಹೆಯೊಳಗೆ ಗುಪ್ತವಾಗಿರುವ ಅಂತರ್ಯದ ಅವ್ಯಕ್ತ ಧರ್ಮ ಅವಳ ಮನಸಿ

ನಲ್ಲೆಂದೂ ಸಜೀವವಾಗಿ ತಲೆಯೆತ್ತಲಿಲ್ಲ ಆದುದರಿಂದ ಹೊರಗಿನ ಸಮಂಜಸತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಮರ್ಯಾದೆಯ ಬಹಿರ್ವಾಸವನ್ನೇ ಸುತ್ತಿಕೊಂಡಳಲ್ಲದೆ, ಆ ಆವರಣದ ಮೋಹ ತೊರೆದು ತನ್ನ ನಗ್ನಪರಿಚಯ ಮಾಡಿಕೊಡಲು ಅವಳಿಂದ ಮಾತು ಹೊರಡದಾಯಿತು ಆ ದಿನ. 'ದೊಡ್ಡಪ್ಪಾ, ನನಗೆ ಗೊತ್ತಿದೆ ಇಷ್ಟು ದಿನದ ನನ್ನ ಪರ್ವತಪ್ರಾಯ ಮಿಥ್ಯಗಳ ತರುವಾಯ, ಈವೊತ್ತು ನನ್ನ ಸತ್ಯವನ್ನು ಸತ್ಯವೆಂದು ಜಗತ್ತಿನಲ್ಲಿ ಯಾರೂ ನಂಬುವುದಿಲ್ಲ, ನಾಳೆ ನೀವು ಹೇಸಿಕೆಯಿಂದ ನನ್ನ ಮೋರೆ ನೋಡುವುದಿಲ್ಲ, ನಿಮ್ಮ ಸತೀಸಾಧ್ವಿ ಸೊಸೆಯ ಮನೆಯ ಬಾಗಿಲೂ ನನಗಾಗಿ ಮುಚ್ಚಿಬಿಡುವುದು, ನನ್ನ ಕಲಂಕ ಜಗದ್ವ್ಯಾಪ್ತವಾಗುವುದು — ಇದೆಲ್ಲವನ್ನೂ ನಾ ಸಹಿಸುವೆ, ಆದರೆ ನಿಮ್ಮಿಂದಿನ ಭಯಂಕರ ಸ್ನೇಹವನ್ನು ಸಹಿಸಲಾರೆ ಆದರೂ ನನ್ನೀವರೆಗಿನ ಸತಿನಾಮದ ಬದಲು ಇಂದಿನ ಕಲಂಕವೇ ಅಕ್ಷಯವಾಗುವಂತೆ ನನ್ನನ್ನು ಹರಸಿರಿ ದೊಡ್ಡಪ್ಪಾ!' — ಇಷ್ಟೆಲ್ಲ ಅಂದವಳ ಹೊಟ್ಟೆಯಲ್ಲಿ ತುಂಬಿದ್ದ ಮಾತು ಹಾಯ್ ಹಾಯ್, ಏನು ಮಾಡಿದರೂ ಇದಾಗ ಬಾಯಿಂದ ಹೊರಬೀಳಲಿಲ್ಲ ಈ ಹುಣ್ಣಿನ ಮೇಲೆ ಮಹಿಮನ ಆ ಸ್ತಬ್ಧ ನಿಷ್ಠುರ ದೃಷ್ಟಿ ಬರೆಕೊಡುತ್ತಲಿತ್ತು

ಆದರೆ ಯಾವ ದುಃಖಕ್ಕೂ ವಿರಾಮವೆಂಬುದುಂಟು ಈ ರೀತಿ ರಾತ್ರಿ ಅರ್ಧ ಮೀರಿದಾಗ ಕಣ್ಣೀರ ಸೆಲೆ ಬತ್ತಿತು ಒದ್ದೆಗಣ್ಣುಗಳೊಮ್ಮೆ ನಿದ್ದೆಯಿಂದ ಮುದ್ರಿತವಾದವು

ನಿದ್ದೆ ತಿಳಿದೆದ್ದಾಗ ಹೊತ್ತಾಗಿತ್ತು ಕೋಣೆಯ ಬಾಗಿಲು ಸುರೇಶನಿಗಾಗಿ ತೆರೆದೇ ಇತ್ತು ಆದರೆ ಅವನು ಬಂದಿದ್ದನೋ ಇಲ್ಲವೋ ಗೊತ್ತಾಗಲಿಲ್ಲ ಅಚಲೆ ಹೊರಗೆ ಬಂದಾಗ ಆಳು ಹೇಳಿದ "ಬಾಬುಗಳು, ದೊಡ್ಡನಸುಕಿನಲ್ಲಿಯೇ ಮಾಝುಲಿಗೆ ಹೋದರು."

"ಸಂಗಡ ಯಾರಾದರೂ ಹೋಗಿದ್ದಾರೆಯೆ ?"

"ಇಲ್ಲ ನಾ ಹೋಗಬೇಕೆಂದೆ, ಕರೆದುಕೊಂಡು ಹೋಗಲಿಲ್ಲ ಪ್ಲೇಗಿನಲ್ಲಿ ಸಾಯಬೇಕೆಂದರೆ ನಡೆ ಎಂದರು"

"ಅಂತೆಯೆ ನೀ ಹೋಗಲಿಲ್ಲವೆ ? ಕೇವಲ ದಯವಿಟ್ಟು ಎಕ್ಕ ತಂದುಕೊಟ್ಟೆಯಾ ? ನನ್ನ ಎಬ್ಬಿಸಲಿಲ್ಲ ಏಕೆ ?"

ಆಳು ಸುಮ್ಮನಿದ್ದ

ಅಚಲೆ ಕೇಳಿದಳು "ಎಕ್ಕ ತಂದವರು ಯಾರು? ನೀನೆ?"

"ತರುವ ಅಗತ್ಯವಿರಲಿಲ್ಲ ನಿನ್ನೆ ತಿರುಗಿ ಕಳಿಸುವಾಗಲೇ ಈವೊತ್ತು ನಸುಕಿನಲ್ಲಿ ಬರುವಂತೆ ಗುಟ್ಟಾಗಿ ಬಾಬುಗಳೇ ಹೇಳಿದ್ದರು"

ತಾನು ಭಾವಿಸಿರುವಂತೆ ನಿನ್ನೆಯ ಘಟನೆಗೂ ಇದಕ್ಕೂ ಸಂಬಂಧವಿಲ್ಲ, ಮೊದಲೇ ಹೋಗಬೇಕೆಂದು ನಿಶ್ಚಯಿಸಿದ್ದರು, ತನ್ನ ಭಯದಿಂದ ತಡೆದಿದ್ದರು ಎಂದು ಅಚಲೆ ತಿಳಿದುಕೊಂಡಳು "ತಿರುಗಿ ಯಾವಾಗ ಬರುತ್ತಾರ? ಏನಾದರೂ ಹೇಳಿದ್ದಾರೆಯೆ?" ಎಂದು ಕೇಳಿದಳು

"ನಾಡದು ಅಥವಾ ಆಚೆ ನಾಡದು, ಅದರ ಮರುದಿನವಂತೂ ಖಂಡಿತ"

ಅಚಲೆ ಮತ್ತೆ ಪ್ರಶ್ನಿಸಲಿಲ್ಲ ನಿನ್ನೆ ಮೆಟ್ಟಿಲಿಂದ ಬಿದ್ದುದಕ್ಕೆ ಪೆಟ್ಟು ಎಷ್ಟು ಹತ್ತಿತೆಂಬುದು ತಿಳಿದಿರಲಿಲ್ಲ, ಈಗ ಮೈಯೆಲ್ಲವೂ ಖಣಿಖಣಿ ನೋವಾಗಿತ್ತು ಮೇಲೆ ಸಮಾಚಾರ ಕೇಳಿಕೊಳ್ಳಲು ರಾಮಬಾಬು ಬಂದಾರೆಂಬ ಸಂಶಯದಿಂದ ಮನಸಿನೊಳಗೆ ಮುಳ್ಳುಮುರಿದಂತಾಗಿತ್ತು ಮಹಿಮ ಯಾವ ವಿಷಯವನ್ನೂ ರಟ್ಟುಮಾಡುವುದಿಲ್ಲವೆಂಬುದು ಸುರೇಶನಿಗಿಂತಲೂ ಅವಳಿಗೆ ಚೆನ್ನಾಗಿ ಗೊತ್ತು ಆದರೂ ಸರ್ವಪ್ರಕಾರದ ದೈವೀ ಘಟನೆಗಳ ಭಯದಿಂದ ಮನಸ್ಸು ಅತ್ಯಂತ ವಿಪತ್ತಿನ ಸ್ಥಾನವನ್ನು ಎಚ್ಚರಿಕೆಯಿಂದ ಕಾಯುತ್ತಿರುವಂತೆ, ಅವಳ ಇಂದ್ರಿಯಗಳೆಲ್ಲವೂ ಹೊರಬಾಗಿಲಲ್ಲಿ ನಿಂತು ಕಾಯತೊಡಗಿದವು ಹೀಗೆಯೆ ಮುಂಜಾವ ಹೋಯಿತು, ಮಧ್ಯಾಹ್ನ ಹೋಯಿತು, ಸಂಜೆ ಹೋಯಿತು ಇನ್ನು ರಾತ್ರಿ ಅವರು ಬರುವ ಸಂಭವವಿಲ್ಲವೆಂದು ಅವಳು ನಿರುದ್ವಿಗ್ನಳಾಗಿ ಹಾಸಿಗೆಗೆ ಹೋದಳು

೪೨

ನಾಡದು, ಆಚೆನಾಡದು ಅಥವಾ ಅದರ ಮರುದಿನ ಬಾಬು ಖಂಡಿತ ಬರುವರೆಂದು ಆಳು ಹೇಳಿದ್ದ ಆದರೆ ಆ ಮರುದಿನದ ನಿಶ್ಚಿತತೆಯನ್ನು ಇಷ್ಟೇ ದಿನ ಪರೀಕ್ಷಿಸುವಷ್ಟು ಶಕ್ತಿ ಅಚಲೆಯಲ್ಲಿರಲಿಲ್ಲ. ಈ ಮೂರು ದಿನಗಳಲ್ಲಿ ರಾಮಬಾಬು ಒಮ್ಮೆಯೂ ಬಂದಿರಲಿಲ್ಲ ಅವರೆಲ್ಲಿ ಬರುತ್ತಾರೋ ಎಂದು ಅವಳಿಗೆ ಭಯವಾಗುತ್ತಿತ್ತಾದರೂ ಈಗ ಬರದಿರುವುದಕ್ಕೆ ಕಾರಣ ಕಲ್ಪಿಸಿಕೊಂಡು ತಣ್ಣಗಾದಳು ಅವರಿಗೆ ಜಡ್ಡಾಗಿತ್ತು, ಅದು ಮತ್ತೆ ಹೆಚ್ಚಾಯಿತೇನೋ ಎಂಬ ವಿಚಾರವೇ ಅವಳಲ್ಲಿ ಹುಟ್ಟಿರಲಿಲ್ಲ. ಇಂದು

ಮುಂಜಾನೆ ಆ ಮನೆಯ ಆಳು ಬಂದಿದ್ದ, ಆದರೆ ಒಳಗೆ ಬರದೆ ಹೊರಗೆ ಪಾಂಡೇಜಿಯನ್ನು ವಿಚಾರಿಸಿಕೊಂಡು ಹಾಗೇ ಹೋಗಿಬಿಟ್ಟ ಅವನು ಏಕೆ ಬಂದಿದ್ದ, ಏನು ಕೇಳಿಕೊಂಡು ಹೋದ, ಎಂಬುದನ್ನು ಯಾರನ್ನಾದರೂ ಕೇಳುವುದಕ್ಕೂ ಅಚಲೆ ಅಂಜಿಕೊಂಡಳು ಆದರೆ ಆ ತರುವಾಯ ಈ ಮನೆ ಮಾರು, ಈ ಮಂದಿಮಕ್ಕಳು ಎಲ್ಲರನ್ನೂ ಬಿಟ್ಟು ಓಡಿಹೋಗಲೇ ಎಂದವ ಳಿಗೆನಿಸತೊಡಗಿತು

ಆಳನ್ನು ಕರೆದು, "ರಘುವೀರ, ನೀ ಇತ್ತಕಡೆಯ ಮನುಷ್ಯ; ಮಾಝುಲಿ ಗ್ರಾಮವನ್ನು ಬಲ್ಲೆಯಾ ?" ಎಂದು ಕೇಳಿದಳು

"ಬಹಳ ದಿವಸದ ಹಿಂದೆ ಒಮ್ಮೆ ನಿಬ್ಬಣದೊಡನೆ ಹೋಗಿದ್ದೆ ತಾಯೀ."

"ಎಷ್ಟು ದೂರವಿದೆ, ಹೇಳಬಲ್ಲೆಯಾ ?"

"ಆರೇಳು ಹರದಾರಿಗೆ ಕಡಿಮೆಯೇನಿಲ್ಲ"

"ನೀ ನನ್ನ ಸಂಗಡ ಈವೊತ್ತು ಬರುತ್ತೀಯಾ ?"

ರಘುವೀರ ಭಯಂಕರ ಆಶ್ಚರ್ಯದಿಂದ, "ನೀವು ಹೋಗುವಿರಾ ? ಅಲ್ಲಿ ಭಯಂಕರ ಪ್ಲೇಗಿನ ಪಿಡುಗು !" ಎಂದ

"ನಿನಗೆ ಬರಲಿಕ್ಕಾಗದಿದ್ದರೆ, ಮತ್ತಾರನ್ನಾದರೂ ಒಪ್ಪಿಸಬಹುದೇ ? ಅವನಿಗೆ ಕೇಳಿದ ಬಕ್ಷೀಸು ಕೊಡುತ್ತೇನೆ"

ರಘುವೀರ ಲಜ್ಜಿತನಾಗಿ ಹೇಳಿದ "ತಾಯೀ, ನೀವು ಹೋಗಬಲ್ಲಿರಿ, ನಾ ಬರಲಾರನೆ ? ಆದರೆ ಮಾರ್ಗವಿಲ್ಲ, ನಮ್ಮ ದೊಡ್ಡ ಗಾಡಿ ಹೋಗ ಲಾರದು ಎಕ್ಕ ಅಥವಾ ಪಲ್ಲಕ್ಕಿ—ಅವುಗಳಲ್ಲಿ ಯಾವುದರಲ್ಲಿಯೂ ನೀವು ಹೋಗಲಾರಿರಿ ತಾಯೀ"

"ಯಾವುದು ಸಿಕ್ಕದ್ದರಲ್ಲಿ ನಾ ಹೋಗಬಲ್ಲೆ ಆದರೆ ಇನ್ನು ತಡ ಮಾಡಲಾಗದು ರಘುವೀರ ಯಾವುದು ಸಿಕ್ಕದ್ದು ತಕ್ಕೊಂಡು ಬಾ"

ರಘುವೀರ ಹೆಚ್ಚು ತರ್ಕ ಹೂಡದೆ ಒಂದು ಪಲ್ಲಕ್ಕಿ ಹುಡುಕಿತಂದ. ತನ್ನ ಚರಿಗೆ ಕಂಬಳಿಗಳನ್ನು ಬಡಿಗೆಗೆ ಸಿಕ್ಕಿಸಿ ಹೆಗಲಿಗೆ ಹಾಕಿಕೊಂಡು ಪೊರ ಹಲಣಿಯಾದ ಮನೆಯ ಕಡೆ ಜೋಕೆಯೆಂದು ಭೃತ್ಯರಿಗೆ ಹೇಳಿ, ಕೇವಲ ಸುರೇಶನನ್ನೇ ಲಕ್ಷಿಸಿ ಅಚಲೆ ಯಾವುದೋ ಗೊತ್ತಿಲ್ಲದ ಮಾಝುಲಿಯ ಹಾದಿ ಹಿಡಿದಳು ಆಗಲ್ಲಿಯ ಎಲ್ಲ ಸಂಗತಿಗಳೂ ಅವಳಿಗೆ ಅದ್ಭುತ ಸ್ವಪ್ನ ಗಳಂತೆ ಭಾಸವಾದವು ಈ ವಿಚಿತ್ರ ಜಗತ್ತಿನಲ್ಲಿ ಇಂತಹ ಘಟನೆಗಳೂ

ಘಟಿಸುವವೆಂದು ಯಾರು ಭಾವಿಸಬಲ್ಲರು ಎಂದವಳಿಗೆನಿಸಿತು

ಧೂಳ-ಉಸುಕಿನ ಕಾಡು ಹಾದಿ  ಅದೂ ಒಮ್ಮೆ ದೊಡ್ಡ ಬಯಲುಗಳಲ್ಲಿ ಅಸ್ಪಷ್ಟವಾಗಿದ್ದರೆ ಒಮ್ಮೆ ಹಳ್ಳಿಯಲ್ಲಿ ಲುಪ್ತವಾಗಿರುವುದು, ಕಟ್ಟಾಗಿಗಿರುವುದು. ಗೃಹಸ್ಥರ ಅನುಕೂಲದಂತೆಯೋ ಇಚ್ಛೆಯಂತೆಯೋ ಅದರ ಅಗಲ ಹಿಂಕಿರಿದಾಗಿ, ದಿಕ್ಕು ಅದಲುಬದಲಾಗಿ ಹೋಗಿರುವುದು — ಒಮ್ಮೊಮ್ಮೆ ನದಿಯ ದಂಡೆಗುಂಟ, ಒಮ್ಮೊಮ್ಮೆ ಮನೆಯಂಗಳದಲ್ಲಿಯೇ ಹಾಯ್ದಿರುವುದು  ಮೊದಮೊದಲು ಅವಳಿಗೆ ಕುತೂಹಲವೆನಿಸುತ್ತಿತ್ತು  ಕೆಲ ಜನರು ಹೆಣವನ್ನು ಹೊತ್ತುಕೊಂಡು ಹತ್ತಿರವೇ ಹಾಯ್ದುಹೋದರು. ಏತರಿಂದ ಸತ್ತರು, ವಯಸ್ಸೆಷ್ಟಾಗಿತ್ತು, ಯಾರುಯಾರಿದ್ದಾರ ಎಂದು ವಿಚಾರಿಸಬೇಕೆಂದು ಮನಸಿನೊಳಗೆ ಇಚ್ಛೆಯೂ ಆಯಿತು  ಆದರೆ ದಾರಿಯ ದೂರತ್ವ ಹೆಚ್ಚುಹೆಚ್ಚಾದಂತೆ, ಹೊತ್ತು ಇಳಿದಿಳಿದಂತೆ, ಸನಿಯದಿಂದ ದೂರದಿಂದ ರೋದನ ಕಿವಿಗೆ ಬೀಳತೊಡಗಿದಂತೆ ಅವಳ ಮನಸು ಜಡವಾಗತೊಡಗಿತು  ಅವಳಿಗೆ ಬಹಳ ಹೊತ್ತಿನಿಂದ ನೀರಡಿಕೆ ಎನಿಸುತ್ತಲಿತ್ತು  ನದಿಯ ದಂಡೆಯ ದಿನ್ನೆಯ ಮೇಲಿಂದ ನಡೆದ ದಾರಿ ಘಾಟಿನ ಹತ್ತಿರ ಹಾಯಿತು  ಅಲ್ಲಿ ಪಲ್ಲಕ್ಕಿಯನ್ನು ನಿಲ್ಲಿಸಿ ಇಳಿದು, ನೀರಿಗಿಳಿಯುತ್ತಲೆ ಕಿರಿದಂತರದಲ್ಲಿಯೆ ಅರೆಸುಟ್ಟ ಹೆಣಗಳೆರಡು ತಟಿದು ತೇಲುತ್ತಿರುವುದನ್ನು ಕಂಡಳು  ಅವುಗಳ ಬೀಭತ್ಸ ವಿಕೃತಿ ಅವಳ ಮನಸಿಗೆ ಯಾವ ಆಘಾತವನ್ನೂ ಮಾಡಲಿಲ್ಲ  ಅತ್ಯಂತ ಸಹಜವಾಗಿಯೇ ಅವಳು ಕೈಕಾಲು ತೊಳೆದುಕೊಂಡು ನೀರು ಕುಡಿದು ಮೇಲೆ ಬಂದು ಪಲ್ಲಕ್ಕಿಯಲ್ಲಿ ಕುಳಿತಳು. ಇದು ತನಗೆ ಎಂದಾದರೂ ಸಾಧ್ಯವಾದೀತೆಂದು ಅವಳು ಕೆಲಹೊತ್ತಿನ ಹಿಂದೆ ಯೋಚಿಸುವುದೂ ಶಕ್ಯವಿರಲಿಲ್ಲ.

ಮುಂದಿನ ಊರುಗಳು ಹೆಚ್ಚಾಗಿ ಜನಶೂನ್ಯವೇ ಆಗಿದ್ದವು  ಕೆಲವೊಂದು ದುಃಸಾಹಸಿ ವ್ಯಕ್ತಿಗಳ ಹೊರತು ಎಲ್ಲರೂ ಊರು ಬಿಟ್ಟಿದ್ದರು  ಎಲ್ಲಿಯೂ ಸದ್ದಿಲ್ಲ, ಸುಳಿವಿಲ್ಲ, ಎಲ್ಲ ಬಾಗಿಲು ಮುಚ್ಚಿದ್ದವು, ಅಂದಗೆಟ್ಟಿದ್ದವು, ಈ ಗುಡಿಸಲುಗಳು ಕೂಡ ಸಾವು ಅನಿವಾರ್ಯವೆಂದು ಕಣ್ಮುಚ್ಚಿ ನಿರೀಕ್ಷಿಸುತ್ತಿರುವಂತೆ ಎನಿಸುತ್ತಿತ್ತು  ಆ ಮೃತ್ಯುಶಾಸಿತವಾದ ನಿರ್ಜನ ಹಳ್ಳಿಗಳೊಳಗೆ ಹಾಯ್ದು, ನೀರವವಾಗಿ ಸಾಗಿದ ರಘುವೀರನ ಹಾಗೂ ಭೋವಿಗಳ ತ್ರಸ್ತಭೀತ ಪದಕ್ಷೇಪ ಪ್ರತಿಕ್ಷಣಕ್ಕೂ ಅಚಲೆಗೆ ಭೀಕರ ಸುದ್ದಿ

ಬೀರುತ್ತಲಿತ್ತು ಆದರೆ ಅವಳ ಮನಸಿನಲ್ಲಿ ಭಯವಾಗಲಿಲ್ಲ ಇದು ತನಗೆ ಆಜನ್ಮ ಪರಿಚಿತವಾದುದೆಂಬಂತೆ ಅವಳ ಮನಸು ನಿರ್ವಿಕಾರವಾಗಿತ್ತು

ಅವರು ಮಾರ್ಘುಲಿಯನ್ನು ತಲುಪಿದಾಗ ಹೊತ್ತು ಮುಳುಗುತ್ತ ಬಂದಿತ್ತು ಊರು ಮುಟ್ಟುತ್ತಲೆ ತಮ್ಮ ಪಥಶ್ರಮ ಹೋಗಿಬಿಡುವುದೆಂದು ಅಚಲೆ ನಂಬಿದ್ದಳು ಊರಿನ ಕೃತಜ್ಞ ನರನಾರಿಯರು ಓಡಿ ಬಂದು ತಮ್ಮನ್ನು ಗೌರವದಿಂದ ಡಾಕ್ತಾರ ಸಾಹೇಬರ ಕಡೆ ಕರೆದೊಯ್ಯುವರೆಂಬು ದನ್ನೂ ಅಲ್ಲಿ ರೋಗಿಗಳೂ ಅವರ ಆಪ್ತೇಷ್ಟರೂ ತುಂಬಿರುವರೆಂದೂ ಔಷಧೋ ಪಚಾರ ಗದ್ದಲ ನಡೆದಿರುವುದೆಂಬುದನ್ನೂ, ಅದರೊಳಗೆ ತನಗೆ ಯಾವ ಸ್ಥಾನ ಸಿಕ್ಕಬಹುದೆಂಬುದನ್ನೂ ಕೂಡ ಒಂದು ರೀತಿಯಿಂದ ಮನಸಿನಲ್ಲಿ ಚಿತ್ರಿಸಿಕೊಂಡಿದ್ದಳು ಆದರೆ ಹೋಗಿ ನೋಡಿದಾಗ ಕಲ್ಪನೆ ಕಲ್ಪನೆಯೇ— ವಸ್ತುಸ್ಥಿತಿಗೆ ಕೊಂಚವೂ ಸಾಮ್ಯವಿರಲಿಲ್ಲ ದಾರಿಯುದ್ದಕ್ಕೆ ನೋಡುತ್ತ ಬಂದಿದ್ದ ದೃಶ್ಯಗಳಂತೆಯೇ ಆ ದೃಶ್ಯವೂ ಇತ್ತು ಅಲ್ಲಿಯೂ ಓಣಿಯಲ್ಲಿ ಮಂದಿಯಿಲ್ಲ, ಬಾಗಿಲಿಕ್ಕಿದ ಮನೆಗಳು, ಇಲ್ಲಿ ಯಾವಲ್ಲಿ ಸುರೇಶನಿದ್ದಾ ನೆಂಬುದನ್ನು ಹುಡುಕಿಕೊಳ್ಳುವುದೂ ಕಠಿನವಾಗಿತ್ತು

ರಘುವೀರ ಸುತ್ತಾಡಿ ಒಂದು ಅಂಗಡಿಯನ್ನು ಶೋಧಿಸಿದ ಅಂಗಡಿ ಮುದುಕ ಮಳಿಗೆ ಹಾಕುತ್ತಿದ್ದ ತಮ್ಮ ಮಕ್ಕಳು ಮರಿಗಳೆಲ್ಲಾ ಬೇರೂರಿಗೆ ಹೋಗಿರುವರೆಂತಲೂ ತಾವಿಬ್ಬರೇ ಮುದುಕ ಮುದುಕಿ ಅಂಗಡಿ ಬಿಟ್ಟು ಹೋಗಲಾರದೆ ಇದ್ದಾರೆಂತಲೂ ಆತ ಹೇಳಿದ ಡಾಕ್ತಾರ ಬಾಬು ನಂದ ಪಾಂಡೆಯವರ ಮನೆಯಲ್ಲಿರುತ್ತಿದ್ದರು, ಈಗಲೂ ಇದ್ದಾರೋ ಏನು ಮಾಮುದಪುರಕ್ಕೆ ಹೋಗಿದ್ದಾರೋ ಗೊತ್ತಿಲ್ಲ ಎಂದು ಅವನಿಂದ ತಿಳಿಯಿತು

"ಮಾಮುದಪುರ ಎಲ್ಲಿದೆ ?"

"ದಕ್ಷಿಣಕ್ಕೆ ಎರಡುಹರದಾರಿ"

"ನಂದ ಪಾಂಡೆಯವರ ಮನೆ ?"

ಮುದುಕ ಹೊರಗೆ ಬಂದು ದೂರದ ದೊಡ್ಡ ಬೇವಿನಮರ ತೋರಿಸಿ ಹೇಳಿದ "ಇದೇ ಹಾದಿಯಿಂದ ಹೋದರೆ ಕಾಣಿಸುತ್ತದೆ."

ಅವರು ಬೇವನಮರದ ಹತ್ತಿರ ಹೋದಾಗ ಸೂರ್ಯಾಸ್ತವಾಗಿತ್ತು ಮನೆ ದೊಡ್ಡದು ಹಿಂದುಗಡೆ ಇಟ್ಟಿಗೆಯ ಎರಡು ಹಳೆಮನೆಗಳು ಕಾಣು

ತ್ತಿದ್ದವು ಆದರೆ ಬಹುಭಾಗ ಹಂಚಿನದು. ಆವಾರ ಗೋಡೆಯಿಲ್ಲ, ಬಟ್ಟಬಯಲು ಯಜಮಾನ ಬಡವನೆನಿಸುವಂತಿರಲಿಲ್ಲ ಹೊರಗೆ ಮಾತ್ರ ಯಾರೂ ಬರಲಿಲ್ಲ ಅಂಗಳದಲ್ಲಿ ಕಟ್ಟಿದ ತಟ್ಟು ತನ್ನ ಹಸಿವುನೀರಡಿಕೆಯ ಸಂಕಟವನ್ನು ತೋರ್ಪಡಿಸಿ ಅತ್ಯಂತ ಕರುಣಧ್ವನಿಯಿಂದ ಅತಿಥಿಗಳನ್ನು ಸ್ವಾಗತಿಸಿತು

ತಲೆಬಾಗಿಲು ತೆರೆದಿತ್ತು ರಘುವೀರ ಗಟ್ಟಿ ಧೈರ್ಯಮಾಡಿ ಒಳಗೆ ಬಗ್ಗಿ ನೋಡಿದ ಬದಿಯ ಪಡುಸಾಲೆಯಲ್ಲಿ ಸುರೇಶ ಮಂಚದ ಮೇಲೆ ಮಲಗಿದ್ದ. ಹತ್ತಿರದ ಕಂಬಕ್ಕಾತು ಕುಳಿತು ಒಬ್ಬ ಮುದುಕಿ ತೂಕಡಿಸು ತ್ತಿದ್ದಳು

" ಬಾಬೂಜೀ "

ಸುರೇಶ ಕಣ್ತೆರೆದು ಮೊಣಕೈಯೂರಿ ತಲೆಯೆತ್ತಿ ನೋಡಿ, "ಯಾರು, ರಘುವೀರ ? " ಎಂದ

ರಘುವೀರ ಕೈಮುಗಿದು ಹತ್ತಿರ ಹೋಗಿ ನಿಂತ ಆದರೆ ಒಡೆಯನ ರಕ್ತಾಕ್ಷಿ ನೋಡಿ ಅವನ ಬಾಯಿಂದ ಮಾತೇ ಹೊರಡಲಿಲ್ಲ

" ನೀ ಇಲ್ಲಿ ? "

ರಘುವೀರ ಹೊರಗಡೆಗೆ ಬೆರಳು ಮಾಡಿ ನುಡಿದ. ''ತಾಯಿಯವರು–"

ಸುರೇಶ ವಿಸ್ಮಯದಿಂದ ನೆಟ್ಟಗೆದ್ದು ಕುಳಿತು ಕೇಳಿದ " ನಿನ್ನನ್ನು ಕಳಿಸಿದರೇ ? "

" ಇಲ್ಲ, ಅವರೂ ಬಂದಿದ್ದಾರೆ "

ಮಾತು ಸುರೇಶನಿಗೆ ಬೇಗನೆ ಅವಗತವಾಗಲಿಲ್ಲವೇನೋ. ರಘು-ವೀರನ ಮುಖವನ್ನು ನಟ್ಟ ನೋಟದಿಂದ ನೋಡತೊಡಗಿದ ಕೊನೆಗೆ ಕಣ್ಣುಮುಚ್ಚಿ ಮೆಲ್ಲಮೆಲ್ಲನೆ ಮಲಗಿಕೊಂಡ ಮಾತನಾಡಲಿಲ್ಲ.

ಅಚಲೆ ಬಂದು ಮಂಚದ ಮೇಲೆ ಕಾಲ್ದೆಸೆಯಲ್ಲಿ ಕುಳಿತರೂ ಸುರೇಶ ಕಣ್ಮುಚ್ಚಿಕೊಂಡು ಮೌನವಾಗಿದ್ದ. ' ಬಾ ' ಎಂಬ ಶಿಷ್ಟಾಚಾರದ ಮಾತು ಕೂಡ ಇಲ್ಲ ಚಿಕ್ಕಂದಿನಿಂದಲೂ ಅಚ್ಚೆಯಿಂದ ಬೆಳೆದು, ಆವೇಶ ಪ್ರವೃತ್ತಿ ಗಳ ಅಧೀನನಾಗಿಯೇ ಇಷ್ಟು ಆಯುಷ್ಯ ಕಳೆದಿದ್ದ. ಅವುಗಳ ಸಂಯಮ ವನ್ನೇ ಅರಿಯ ಜೀವನದಲ್ಲಿ ಸಂಯಮದ ಮೊದಲ ಪಾಠ ಕಲಿತುದೆಂದರೆ, ತನ್ನ ಮುಖದ ಹಾಸ್ಯವನ್ನು ಧಿಕ್ಕರಿಸಿ ಮಹಿಮ ಊರಿಗೆ ಹೊರಟು

ಹೋದಾಗ. ಆದಿನ ಅವನ ಹೃದಯದಲ್ಲಿ ನೀರವವಾಗಿ ನಡೆದ ವಿಪ್ಲವವನ್ನು ಅಂತರ್ಯಾಮಿ ಮಾತ್ರವೆ ಬಲ್ಲ ಈಗಲೂ ಅವನೇ ನೋಡಿದ-- ಆ ಶಾಂತ ಅಚಂಚಲ ಶರೀರದಲ್ಲೆಲ್ಲ ಎಂತಹ ಬಿರುಗಾಳಿ ಬೀಸುತ್ತಿತ್ತೆಂಬುದನ್ನು ಆಗ ಮಹಿಮನ ಧಿಕ್ಕಾರವನ್ನು ಸಹಿಸಿದಂತೆಯೇ, ಈಗ ತನ್ನ ಉನ್ಮತ್ತ ಆವೇಗದೊಡನೆ ನಿಶ್ಶಬ್ದವಾಗಿ ಹೋರಾಡುತ್ತಿದ್ದ ಅದರ ಲವಲೇಶವನ್ನೂ ಹೊರಗೆ ತೋರಗೊಡಲಿಲ್ಲ

ಹೀಗೆಯೆ ಇನ್ನೆಷ್ಟು ಹೊತ್ತು ಕಳೆಯುತ್ತಿತ್ತೋ ಹೊರಗೆ ಬೋವಿಗಳು ಕರೆದುದಕ್ಕೆ ರಘುವೀರ ಹೋದ ಆ ಸದ್ದಿಗೆ ಸುರೇಶ ಮೆಲ್ಲಗೆ ಕಣ್ಣು ತೆರೆದು, " ನನ್ನ ಚೀಟಿ ಮುಟ್ಟಿತೆ ? " ಎಂದು ಕೇಳಿದ

ಅಚಲೆ ಮುಖವೆತ್ತದೆ ಮೆಲ್ಲಗೆ, " ಇಲ್ಲ '' ಎಂದಳು

" ಚೀಟಿ ಮುಟ್ಟದೆಯೆ ಬಂದೆಯಾ ? ಆಶ್ಚರ್ಯ ! ಏನೇ ಆಗಲಿ ಬಂದದ್ದು ಚೆಲೋ ಆಯಿತು ಒಮ್ಮೆ ನೋಡಿದ ಹಾಗಾಯಿತು '' ಎಂದು ಉತ್ತರಕ್ಕಾಗಿ ಅವಳ ತಗ್ಗಿದ ಮುಖದ ಕಡೆ ಕ್ಷಣ ನೋಡಿ ಮತ್ತೆ ನುಡಿದ: " ನನ್ನಿಂದ ನಿನಗೆ ಬಹಳ ದುಃಖವಾಯಿತು — ಬದುಕಿರುವವರೆಗೂ ಇದು ತಪ್ಪಲಿಕ್ಕೂ ಇಲ್ಲ — ಆದರೆ ಒಂದು ದೊಡ್ಡ ತಪ್ಪಾಯಿತು ಮಹಿಮನನ್ನು ನೀ ಇಷ್ಟೊಂದು ಪ್ರೀತಿಸುತ್ತೀ ಎಂಬುದು ನನಗೆ ತಿಳಿಯಲಿಲ್ಲ , ನನಗೆನಿಸುತ್ತದೆ, ನಿನಗೂ ತಿಳಿದಿರಲಿಕ್ಕಿಲ್ಲ ಅಲ್ಲವೆ ? ''

ಅಚಲೆ ಇದಕ್ಕೂ ನೀರವವಾಗಿ ತಲೆ ತಗ್ಗಿಸಿಕೊಂಡು ಕುಳಿತುದನ್ನು ಕಂಡು ಸುರೇಶನೇ ಮಾತನಾಡಿದ "ಅಲ್ಲದೆ, ಮನುಷ್ಯನ ಮನಸೆಂದರೆ ಸ್ವತಂತ್ರವಸ್ತುವಲ್ಲ, ಇರುವುದೆಲ್ಲ ದೇಹಧರ್ಮವೇ ಎಂದು ನಾ ನಂಬಿದ್ದೆ ಪ್ರೀತಿಯೂ ಅಷ್ಟೆ ನಿನ್ನ ಶರೀರವನ್ನು ಹೇಗಾದರೂ ಗಳಿಸಿಕೊಂಡರೆ ಮನವನ್ನೂ ಹೊಂದುವೆ, ನಿನ್ನ ಪ್ರೇಮವೂ ದುಷ್ಪ್ರಾಪ್ಯವಲ್ಲ—ಯಾರು ಬಲ್ಲರು, ಒಂದುದಿನ ಭಾಗ್ಯ ಸುಪ್ರಸನ್ನವಾಗಬಹುದು, ನಾ ನಿನಗೆ ಸರ್ವಸ್ವವನ್ನೂ ಅರ್ಪಿಸಿದುದಕ್ಕೆ ನೀ ಮನಃಪೂರ್ವಕವಾಗಿ ನನಗೆ ಭಿಕ್ಷೆನೀಡಬಹುದು— ಎಂದುಕೊಂಡಿದ್ದೆ. ಆದರಿನ್ನು ಸಮಯವಿಲ್ಲ, ಅದಕ್ಕಾಗಿ ನಿರೀಕ್ಷಿಸಿಕೊಂಡಿರಲು ನನಗವಕಾಶವಿಲ್ಲ " ಎಂದು ಮೊಣಕೈಯೂರಿ ತಲೆಯೆತ್ತಿ, ಸಂಜೆಯ ಮಸಕು ಬೆಳಕಿನಲ್ಲಿ ಅಚಲೆಯ ಆನತ ಮುಖವನ್ನು ತೀಕ್ಷ್ಣದೃಷ್ಟಿಯಿಂದ ದಿಟ್ಟಿಸತೊಡಗಿದ

ಅವನಾ ಏಕಾಗ್ರದೃಷ್ಟಿ ಅವಳ ನತದೃಷ್ಟಿಯನ್ನು ಆಕರ್ಷಿಸಿ ಎತ್ತಿತು—ನಿಮಿಷಮಾತ್ರ. ಅಚಲೆ ತಕ್ಷಣ ನೋಟ ತಗ್ಗಿಸಿ ಅತ್ಯಂತ ಮೃದುಸ್ವರದಿಂದ ಅತ್ಯಂತ ಲಜ್ಜೆಯಿಂದ ನುಡಿದಳು "ಇಲ್ಲಿಯ ಜನರೆಲ್ಲರೂ ಹೋಗಿಬಿಟ್ಟದ್ದಾರೆ-ನಿಮ್ಮಲ್ಲಿಯ ಕೆಲಸ ಮುಗಿದಿದ್ದರೆ ಮನೆಗೆ—ಅಥವಾ ಇನ್ನೂ ಎಷ್ಟೋ ದೇಶಗಳಿವೆ—ನಡೆಯಿರಿ, ಡಿಹರಿಯಲ್ಲಿ ಇನ್ನೊಂದು ಕ್ಷಣವೂ ನಿಲ್ಲಲಿಕ್ಕಾಗುವುದಿಲ್ಲ"

"ಇದನ್ನು ನನಗಿಂತ ಚೆನ್ನಾಗಿ ಯಾರು ಬಲ್ಲರು ?" ಎಂಬು ಸುರೇಶ ಉಸಿರ್ಗರೆದು ದಿಂಬಿನ ಮೇಲೆ ತಲೆಯಿಟ್ಟು ಒರಗಿಕೊಂಡ ಕೆಲಹೊತ್ತು ಸುಮ್ಮನಿದ್ದು ಮೆಲ್ಲಮೆಲ್ಲಗೆ ಹೇಳಿದ "ಇಂದು ಬೆಳಗ್ಗೆ ಬಹು ಪ್ರಯಾಸದಿಂದ ಎರಡು ಚೀಟಿ ಕಳಿಸಿದೆ, ನಿನಗೊಂದು ಮಹಿಮನಿಗೊಂದು ಅವನು ಇಷ್ಟರೊಳಗೆ ಹೊರಟು ಹೋಗಿರದಿದ್ದರೆ ಬಂದೇ ಬರುವ."

ಅಚಲೆ ಭಯವಿಸ್ಮಯಗಳಿಂದ ಚಕಿತಳಾಗಿ, "ಅವರನ್ನೇಕೆ?" ಎಂದಳು.

"ಈಗ ನನಗೆ ಅವನೊಬ್ಬನದೇ ಅಗತ್ಯವುಂಟು ಚಿಕ್ಕಂದಿನಿಂದಲೂ ಜೀವನದಲ್ಲಿ ಅನೇಕ ಗಂಟುಗಳನ್ನು ಹಾಕುತ್ತ ಬಂದಿದ್ದೇನೆ. ಅವುಗಳನ್ನು ಬಿಚ್ಚುವುದಕ್ಕೆ ಯಾವಾಗಲೂ ಅವನ ಆವಶ್ಯಕತೆಯುಂಟಾಗುತ್ತಿತ್ತು. ಎಂತಲೇ ಈಗಲೂ ಅವನನ್ನು ಕರೆದದ್ದು ಅಷ್ಟು ಧೈರ್ಯ ಪೃಥ್ವಿಯ ಮೇಲೆ ಮತ್ತಾರಿಗೂ ಇಲ್ಲ!"

ಅಚಲೆಯ ಎದೆಯೊಳಗೆ ಕಲಕುಮಲಕಾಗತೊಡಗಿತು. ಆದರೂ ಅವಳು ಮುಖ ತಗ್ಗಿಸಿಕೊಂಡು ಸುಮ್ಮನೆ ಕೇಳಿಕೊಳ್ಳುತ್ತಿದ್ದಳು ಸುರೇಶ ಹೇಳಿದ "ಪತ್ರದಲ್ಲಿ ಬಹುಮಟ್ಟಿಗೆ ಎಲ್ಲ ಬರೆದಿದ್ದೇನೆ, ಓದಿದರೆ ಗೊತ್ತಾಗುವುದು ಆವೊತ್ತು ನಿನ್ನ ಕೈಯೊಳಗೆ ನನ್ನೆಲ್ಲ ಸಂಪತ್ತಿಯ ಉಇಲು ಕೊಟ್ಟೇ ಇದ್ದೇನೆ ಮನಸಿದ್ದರೆ ಕೆಲವಂಶ ನೀನು ತೆಗೆದುಕೊಳ್ಳಬಹುದು ಆದರೆ ತೆಗೆದುಕೊಳ್ಳುವುದಗತ್ಯವಿಲ್ಲವೆಂದು ನನಗೆನಿಸುತ್ತದೆ ಆದರೂ ನಾ ಬದುಕಿದ್ದರೆ ದೀನದುಃಖಿಗಳೇ ಸಮಸ್ತವನ್ನು ಹೊಂದುತ್ತಿದ್ದ ಹಾಗೆ, ಸತ್ತಮೇಲೂ ಅವರೇ ಹೊಂದಲಿ. ನನ್ನ ದೆಂಬುದರೊಡನೆ ನೀನಿನ್ನು ಸಂಬಂಧ ಇಟ್ಟುಕೊಳ್ಳಲೇ ಬೇಡ ಅಚಲಾ, ನೀ ನಿಶ್ಚಿಂತಳಾಗು, ನಿರ್ವಿಘ್ನಳಾಗು, ನನ್ನೆಲ್ಲ ಸಂಬಂಧಗಳಿಂದಲೂ ಸಂಪೂರ್ಣ ಮುಕ್ತಳಾಗು! ಪ್ರಯತ್ನದಿಂದ

ಜಗತ್ತಿನಲ್ಲಿ ಅನೇಕ ದುಃಖಗಳನ್ನು ಸಹಿಸಬಹುದು—ನಾ ಕೊಟ್ಟ ಕಷ್ಟಗಳು ಕೂಡ ಒಂದಿನ ನಿನಗೆ ಸಹ್ಯವಾಗಲಿ!"

ಬಂದಾಗಿನಿಂದಲೂ ಅಚಲೆಯ ಮನಸಿನೊಳಗೆ ಅವನ ನಡೆನುಡಿಗಳಿಂದ ಒಂದು ತರದ ಭಯವಾಗುತ್ತಿತ್ತು. ಕೊನೆಯ ವಾಕ್ಯ ಕೇಳಿ ನಿಜವಾಗಿಯೂ ಭೀತಳಾದಳು. "ನೀವು ಹೀಗೆಲ್ಲ ಏಕೆ ಮಾತಾಡುತ್ತೀರಿ? ಎದ್ದು ಕೂಡಿರಲ್ಲ! ನಾವೀಗಲೇ ಇಲ್ಲಿಂದ ಹೊರಡುವ ಉದ್ಯೋಗ ಮಾಡಿರಿ" ಎಂದಳು.

ಅವಳ ಸಂಶಯ-ಉದ್ವೇಗಗಳನ್ನು ಸುರೇಶ ಲಕ್ಷಿಸಿದನಾದರೂ ಏನೂ ಉತ್ತರ ಕೊಡಲಿಲ್ಲ. ತೂಕಡಿಸುತ್ತಿದ್ದ ಮುದುಕಿ ಎಚ್ಚತ್ತು, 'ಬಾಬೂ, ಒಳಗೆ ಬರುವಿರೋ, ಏನು ದೀಪವನ್ನೇ ಹೊರಗೆ ತರಲೋ?' ಎಂದು ಕೇಳಿದ್ದಕ್ಕೂ ಉತ್ತರ ಕೊಡಲಿಲ್ಲ. ಬಹುಶಃ ಅವನಿಗೆ ತಾಮಸ ಬಂದಿರಬೇಕು. ಉದ್ವಿಗ್ನಳಾದ ಅಚಲೆ ತಿರುಗಿ ಅವನ್ನೇ ಕೇಳುವವಳಿದ್ದಳು. ಸುರೇಶ ಕಣ್ತೆರೆದು ಸ್ವಾಭಾವಿಕವಾಗಿ ನುಡಿದ. "ಇನ್ನೂ ನಿನಗೆ ನನ್ನ ಮುಖ್ಯ ವಿಷಯವನ್ನೇ ಹೇಳಲಿಲ್ಲ, ಅಚಲಾ. ನಾ ಸಾಯುತ್ತಲಿದ್ದೇನೆ. ಬದುಕುವ ಸಂಭವವೇನೂ ಕಾಣುವುದಿಲ್ಲ."

ಪ್ರತ್ಯುತ್ತರವಾಗಿ ಅಚಲೆಯ ಬಾಯಿಂದ ಅಸ್ಫುಟ ಅವ್ಯಕ್ತ ಸ್ವರ ಮಾತ್ರ ಹೊರಟಿತು. ಬಳಿಕ ಅವಳು ಮೂರ್ತಿಯಂತೆ ನಿಸ್ಪಂದಳಾಗಿ ಕುಳಿತಳು. ಸುರೇಶ ಮಾತನಾಡತೊಡಗಿದ. "ನಾ ಮುಂಚೆಯೇ ಉಯಿಲು ಮಾಡಿಟ್ಟಿದ್ದೇನೋ ನಿಜ. ಆದರೆ ನಾ ಬಯಸಿ ಸತ್ತೆನೆಂದು ಯಾರಾದರೂ ಎಂದರೆ, ಅದು ಅನ್ಯಾಯ, ಅದು ಅಸತ್ಯ. ಅದರಿಂದ ನನಗೆ ಮರಣಕ್ಕಿಂತ ಹೆಚ್ಚು ವ್ಯಥೆ. ಪ್ರಯತ್ನದಲ್ಲಿ ನಾನೇನೂ ಕಡಿಮೆ ಮಾಡಿಲ್ಲ. ಆದರೆ ಉಪಯೋಗ ಬೀಳಲಿಲ್ಲ. ಯಾರಾದರೂ ಒಂದು ವೇಳೆ ಕೇಳಿದರೆ, ಜಗತ್ತಿನೊಳಗೆ ನಾಲ್ಕು ಜನ ಸಾಯುವಂತೆಯೇ ಅವರೂ ಸತ್ತರು, ತಪ್ಪಿಸುವುದು ಸಾಧ್ಯವಿಲ್ಲದ್ದಕ್ಕೆ ಸತ್ತರು, ಇಲ್ಲದಿದ್ದರೆ ಅವರಿಗೆ ಸಾಯುವ ಇಚ್ಛೆಯೇನಿರಲಿಲ್ಲ ಎಂದು ನೀ ಹೇಳು. ಮರಣದಲ್ಲಿ ನನ್ನದೇನೋ ಕೈ, ಏನೋ ವಿಶೇಷ ಇದ್ದಿರಬೇಕೆಂದು ಯಾರೂ ಅಪವಾದ ಕೊಡಬಾರದು!"

ಅಚಲೆ ಯಾವ ಮಾತೂ ಆಡಲಿಲ್ಲ. ಆ ಪ್ರಾಯಾಂಧಕಾರದಲ್ಲಿ ಅವಳ ಭಯಾರ್ತ ಮುಖ ಕಾಣದುದರಿಂದ ಅವಳ ವಾಕ್ಶಕ್ತಿಯೇ

ಇಂಗಿಹೋದುದು ಸುರೇಶನಿಗೆ ಗೊತ್ತಾಗಲಿಲ್ಲ ಕ್ಷಣಕಾಲ ತನ್ನನ್ನು ಸುಧಾರಿಸಿಕೊಂಡು ಮತ್ತೆ ಮಾತನಾಡಿದ “ಬರದಿರುವುದಕ್ಕೆ ನನ್ನಿಂದಾಗಲಿಲ್ಲವೆಂದೇ ಅಂದು ನಸುಕಿನಲ್ಲಿ ನಿನಗೆ ತಿಳಿಯದಂತೆ ಓಡಿಬಂದೆ ಬಂದು ನೋಡಿದೆ, ಊರು ಬರಿದೇ ಆಗಿತ್ತು ಈ ಮನೆಯಲ್ಲಿ ಒಬ್ಬ ಆಳು ಸತ್ತಿದ್ದ, ಅವನನ್ನು ಗತಿಗಾಣಿಸದೆಯೇ ಮನೆಯವರೆಲ್ಲರೂ ಹೊರಡಲುದ್ಯುಕ್ತರಾಗಿದ್ದರು ಅವರನ್ನು ತಡೆಯುವುದು ಸಾಧ್ಯವಾಗಲಿಲ್ಲ ನಿಜ, ಆದರೆ ಹೆಣದ ವ್ಯವಸ್ಥೆ ಮಾತ್ರ ಆಯಿತು ತಿರುಗಿ ಬಂದು ನಾನೂ ಊರಿಗೆ ಬಂದು ಬಿಡಬೇಕೆಂದು ಯೋಚಿಸಿದೆ ಆದರೆ ಮಧ್ಯಾಹ್ನದಲ್ಲಿ ಮಾಮುದಪುರದಿಂದ ಹುಡುಗನೊಬ್ಬ ಅಳುತ್ತಳುತ್ತ ಬಂದು ತಾಯಿಗೆ ಜಡ್ಡಾಗಿದೆಯೆಂದು ಹೇಳಿದ ಅವಳಿಗೆ ಶಸ್ತ್ರಕ್ರಿಯೆ ಮಾಡಹೋಗಿ ಈ ಅಪಾಯಕ್ಕೆ ಸಿಕ್ಕದೆ. ಇಂಥ ಅಪರೇಶನ್ ಎಷ್ಟೋ ಮಾಡಿದ್ದೇನೆ ಆದರಲ್ಲಿ ತುಂಬ ಜೋಕೆಯಿಂದಲೇ ಇರುತ್ತೇನೆ ಆದರೆ ಈಸಲ ದೈವವೇ ಚೆನ್ನಾಗಿರಲಿಲ್ಲ ಅಲಗು ಬೊಟ್ಟಿಗೆ ತಾಗಿದ್ದು, ಕೈಯ ರಕ್ತ ತೊಳೆಯುವಾಗಲೇ ಲಕ್ಷ್ಯಕ್ಕೆ ಬಂತು. ಲಗುಬಗೆಯಿಂದ ತಿರುಗಿ ಬಂದು ಮಾಡಬೇಕಾದ್ದೆಲ್ಲ ಮಾಡಿದೆ ಮನೆಗೆ ಬರಲು ಅನುಕೂಲವಿದ್ದರೆ ಬಂದೇಬರುತ್ತಿದ್ದೆ, ನಿಲ್ಲುತ್ತಿದ್ದಿಲ್ಲ ಆದರೆ ನಿರುಪಾಯನಾಗಿದ್ದೆ ನಿನ್ನೆ ರಾತ್ರಿ ಜ್ವರ ಬಂದಿತು ಅದೇತರ ಜ್ವರವೆಂಬುದು ಗೊತ್ತಾಗುತ್ತಲೇ, ಎರಡು ಚೀಟಿ ಬರೆದು ಪ್ರಯಾಸದಿಂದ ಒಬ್ಬನನ್ನು ಹುಡುಕಿ ನಿಮಗಿಬ್ಬರಿಗೂ ಕಳಿಸಿದೆ ”

ಅಚಲೆ ಶೋಕವ್ಯಾಕುಲ ಸ್ವರದಿಂದ, “ಆದರೀಗ ಅನುಕೂಲವಿದೆ ನನ್ನ ಪಲ್ಲಕ್ಕಿಯಲ್ಲಿ ನಿಮ್ಮನ್ನು ಕುಳ್ಳಿರಿಸಿಕೊಂಡು ಹೋಗುವೆವು ಒಂದು ಕ್ಷಣವೂ ಇಲ್ಲಿರುವುದು ಬೇಡ ” ಎಂದಳು

“ಆದರೆ ನೀನು ? ”

“ನಾ ನಡೆದು ಬರುವೆ ನನ್ನ ಚಿಂತೆ ನೀವು ಬಿಡಿರಿ ”

“ನಡೆಯುತ್ತೀ ? ಇಷ್ಟು ಹಾದಿ ? ”

“ನಿಮ್ಮ ಕಾಲಿಗೆ ಬೀಳುವೆ ನೀವು ಒಲ್ಲೆನ್ನಬೇಡಿರಿ ” ಎಂದು ನುಡಿದು ಅಚಲೆ ಅತ್ತುಬಿಟ್ಟಳು

ನಿಮಿಷಮಾತ್ರ ಮೌನವಾಗಿದ್ದು ಸುರೇಶ ನಿಧಾನವಾಗಿ ಹೇಳಿದ:
“ಒಳ್ಳೆಯದು ಹಾಗಾದರೆ ನಡೆ ಆದರೆ ನನಗೆನಿಸುತ್ತದೆ ಇದಿನ್ನು

ಅಗತ್ಯವಿಲ್ಲ "

ಅಚಲೆ ಹೊರಗೆ ಹೋಗಿ ನೋಡಿದಳು. ರಘುವೀರ ಗಿಡದಡಿಯಲ್ಲಿ ಕುಳಿತು ಸುಮ್ಮನೆ ಕಡಲೆ ಮೆಲ್ಲುತ್ತಿದ್ದ "ರಘುವೀರ, ಬಾಬುಗಳಿಗೆ ಬಹಳ ಜಡ್ಡು ಅವರನ್ನೀಕ್ಷಣ ಕರೆದುಕೊಂಡು ಹೋಗಬೇಕು ಬೋವಿಗಳಿಗೆ ಹೇಳು ಅವರೆಷ್ಟು ರೂಪಾಯಿ ಬೇಡುವರೋ ಅದಕ್ಕೂ ಹೆಚ್ಚಾಗಿಯೇ ಕೊಟ್ಟೇನು ಆದರೊಂದಿಷ್ಟು ತಡಮಾಡದೆ ಹೊರಡಬೇಕು "

ಒಡತಿಯ ವ್ಯಾಕುಲ ಕಂಠಸ್ವರ ಕೇಳಿ ಗಾಬರಿಗೊಂಡು ರಘುವೀರ ಎದ್ದು ನಿಂತ "ಆದರೆ ಅವರು ಇಬ್ಬರನ್ನು ಒಯ್ಯಲಾರರು, ಅವ್ವನವರೇ "

"ಇಲ್ಲ, ಇಲ್ಲ, ಇಬ್ಬರನ್ನಲ್ಲ, ನಾ ನಡೆದುಕೊಂಡೇ ಬರುವೆ—ಹೂಂ, ಇನ್ನೊಂದು ಮಿನಿಟೂ ನಿಲ್ಲಲಾಗದು ರಘುವೀರ. ಝಟ್ಟನೆ ಹೋಗು ನೀನು—ಅವರೆಲ್ಲಿ ? "

"ಬಾಡಿಗೆಯ ರೂಪಾಯಿ ತೆಗೆದುಕೊಂಡು ಅವರು ಅಂಗಡಿಗೆ ಹೋಗಿದ್ದಾರೆ, ತಿಂಡಿ ತೆಗೆದುಕೊಳ್ಳಲಿಕ್ಕೆ ನಾ ಈಗ ಹೋಗಿ ಕರೆದುಕೊಂಡು ಬರುತ್ತೇನೆ" ಎಂದೆನ್ನುತ್ತ ರಘುವೀರ ತಿಂದುಳಿದ ಕಡಲೆಗಳನ್ನು ಒಲ್ಲಿಯಲ್ಲಿ ಕಟ್ಟಿಕೊಳ್ಳುತ್ತ ಓಟದ ನಡಿಗೆಯಿಂದ ಹೊರಟುಹೋದ

ಅಚಲೆ ತಿರುಗಿ ಹೋಗಿ ಸುರೇಶನ ತಲೆದಿಂಬು ದಿಸೆಯಲ್ಲಿ ಕುಳಿತಳು. ಅವನ ಹಣೆಯನ್ನು ಮುಟ್ಟಿ ಜ್ವರ ನೋಡಿ ಬೆಚ್ಚಿದಳು ತೊತ್ತು ದೀಪ ಹಚ್ಚಿ ಅನತಿದೂರದಲ್ಲಿ ನೆಲದ ಮೇಲಿಟ್ಟು ಹೋಗಿದ್ದಳು ಅದರ ಅಪರ್ಯಾಪ್ತ ಧೂಮದಿಂದ ಮನೆಯೆಲ್ಲ ಕಲುಷಿತವಾಗಿದ್ದಿತು ಅದನ್ನು ದೂರ ಸರಿಸಲು ಹೋದ ಅಚಲೆಗೆ ಔಷಧದ ಸೀಸೆ ಕಂಡಿತು. "ಇದೇನು ನಿಮ್ಮ ಔಷಧವೇ ? " ಎಂದು ಕೇಳಿದಳು.

"ಹಾಂ, ನನ್ನದೇ ನಿನ್ನೆ ನಾನೇ ಮಾಡಿಟ್ಟೆ, ಆದರೆ ತೆಗೆದುಕೊಳ್ಳಲಾಗಲಿಲ್ಲ ತಾ—"

ಮಾತು ಅಚಲೆಯನ್ನು ತೀವ್ರವಾಗಿ ಆಘಾತಿಸಿತು. ಆದರೆ ಕುಡಿಯದಿದ್ದುದರ ಕಾರಣವನ್ನು ಕುರಿತು ಅವಳು ಮಾತು ಬೆಳೆಸಲಿಚ್ಛಿಸಲಿಲ್ಲ. ಔಷಧ ಕೊಟ್ಟು ಪುನಃ ನೀರವವಾಗಿ ಅವನ ತಲೆದಿಂಬುದಿಸೆಯಲ್ಲಿ ಕುಳಿತಳು. ಬಹಳ ಹೊತ್ತು ಸುರೇಶ ಮೌನವಾಗಿಯೆ ಇದ್ದ. ಆದರೆ ಹೀಗೆ ನಿಃಶಬ್ದವಾಗಿ ಎಂತಹ ಭಯಂಕರ ಯಾತನೆಯನ್ನು ಸಹಿಸಿಕೊಳ್ಳುತ್ತಿದ್ದನೆಂಬು

ದನ್ನು ಅರಿತು ಅಚಲೆಯ ಎದೆ ಒಡೆಯುವಂತಾಯಿತು

ಹೊತ್ತಾಯಿತು—ರಘುವೀರ ಕಾಣಲಿಲ್ಲ ಅವಳು ನಡುನಡುವೆ ಸದ್ದು ಮಾಡದೆ ಎದ್ದು ಹೋಗಿ, ಬಾಗಿಲ ಹೊರಗೆ ಮೋರೆ ಚಾಚಿ, ಕತ್ತಲ ಯಲ್ಲಿ ಕಾಣುವಷ್ಟು ದೂರಕ್ಕೂ ನೋಡಲು ಪ್ರಯತ್ನಿಸುತ್ತಿದ್ದಳು ಎಲ್ಲಿಯೂ ಯಾರ ಸದ್ದು ಸುಳಿವೂ ಇಲ್ಲ. ತನ್ನೀ ಉತ್ಕಂಠೆಯೆಲ್ಲಿ ಸುರೇಶನಿಗೆ ಗೊತ್ತಾಗುವುದೋ ಎಂಬ ಭಯದಿಂದ ಅವಳು ವ್ಯಾಕುಲೆಯೂ ಆದಳು.

ರಾತ್ರಿ ಹೆಚ್ಚುತ್ತ ಬಂತು, ಕಂಬಕ್ಕೆ ಕುಳಿತ ತೊತ್ತಿನ ಗೊರಗೊರಾಟ ಆರಂಭವಾಯಿತು ಹಸಿದ, ನಡೆದು ದಣಿದ ರಘುವೀರ ಕೆಲಸ ಆಗಲಿಲ್ಲ ವೆಂಬುದನ್ನು ಸೂಚಿಸುವ ಮ್ಲಾನಮುಖದಿಂದ ಬಂದು ನಿಂತ ಬೋವಿ ಗಳು ಪಲ್ಲಕ್ಕಿ ತೆಗೆದುಕೊಂಡು ಯಾವಾಗಲೋ ಹೋಗಿ ಬಿಟ್ಟಿದ್ದಾರೆಂದೂ ಎಷ್ಟು ಹುಡುಕಿದರೂ ಸಿಕ್ಕಲಿಲ್ಲವೆಂದೂ ತಿಳಿಸಿದ

ಅಚಲೆ ಮೈಮೇಲೆಚ್ಚರಿಲ್ಲದಂತೆ ವಿಕೃತ ಸ್ವರದಿಂದ ಮತ್ತೆಮತ್ತ ಪ್ರಶ್ನಿಸುತ್ತಿದ್ದಳು— ಅವರು ಯಾವಾಗ ಹೋದರು ? ಯಾವ ಕಡೆ ಹೋದರು ? ಏಕೆ ಹೋದರು ? ನಮ್ಮ ಸರ್ವಸ್ವವನ್ನು ಕೊಟ್ಟರೂ ಇನ್ನೊಂದು ಪಲ್ಲಕ್ಕಿ ದೊರೆಯಲಿಕ್ಕಿಲ್ಲವೆ ?

ರಘುವೀರ ತಲೆತಗ್ಗಿಸಿಕೊಂಡು ಸುಮ್ಮನಿದ್ದ ಈ ನಿದಾರುಣವಾದ ವಿಪತ್ತಿ ತನ್ನ ಅಲಕ್ಷ್ಯದಿಂದಲೇ ಉಂಟಾಯಿತೆಂದು ಅವನು ಅರಿತಿದ್ದ ಅಂತೆಯೇ ಪ್ರಯತ್ನದಲ್ಲಿ ಒಂದು ಚೂರೂ ಕಡಿಮೆ ಮಾಡದೆ ನಿರಾಶನಾದ ಮೇಲೆಯೇ ತಿರುಗಿಬಂದಿದ್ದ.

ಇನ್ನೊಬ್ಬ ಮನುಷ್ಯನೂ ಅವನಂತೆಯೇ ನಿಃಶಬ್ದವಾಗಿ ನಿಶ್ಚಲವಾಗಿ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದ ಈ ಚಂಚಲತೆಯ ಲವಲೇಶವೂ ಅವನಿಗೆ ತಾಗಿರಲಿಲ್ಲವೇನೋ ರಘುವೀರ ಹೊರಟುಹೋದ ಬಳಿಕ ಸಾವಕಾಶವಾಗಿ ಅವನೆಂದ "ವ್ಯಗ್ರಳಾದರೆ ಏನಾಗುವುದು ಅಚಲಾ ' ಅವರು ಸಿಕ್ಕರೂ ಏನೂ ಪ್ರಯೋಜನವಿಲ್ಲ ಇದೇ ಚೆಲೋ—ನನಗಿದೇ ನೆಟ್ಟಗೆ. "

ತಿರುಗಿ ಅಚಲೆ ಮಾತನಾಡಲಿಲ್ಲ ಆ ಅನಂತಪಥ ಪ್ರಯಾಣಿಕನ ತಪ್ತಲಲಾಟದ ಮೇಲೆ ಬಲಗೈಯಿಟ್ಟುಕೊಂಡು ಪಾಷಾಣಪ್ರತಿಮೆಯಂತೆ ಅಚಲೆಯಾಗಿ ಕುಳಿತಿದ್ದಳು

ನಾಲ್ಕೂ ಕಡೆ ಜನಹೀನ ಪುರಿ ಮೃತ್ಯುವಿನಂತೆ ನಿರ್ವಾಕ್ಕಾಗಿದೆ. ಹೊರಗೆ ಗಭೀರ ರಾತ್ರಿ ಗಭೀರತರವಾಗುತ್ತಲಿದೆ ಮೇಲುಗಡೆ ನೀಲ ಆಕಾಶ ಗಾಢವಾಗುತ್ತಲಿದೆ.— ಅದನ್ನು ನಿಟ್ಟಿಸುತ್ತಿದ್ದಂತೆ ಅವಳಿಗೆ 'ಇದರ ಅಗತ್ಯವೇನಿತ್ತು! ಇದರ ಅಗತ್ಯವೇನಿತ್ತು!' ಎಂದೆನಿಸ-ತೊಡಗಿತು

ಅವಳ ಜೀವನ ಕುರುಕ್ಷೇತ್ರವನ್ನು ವ್ಯಾಪಿಸಿ ಇಷ್ಟೊಂದು ಹೇಯವಾದ ಮಹಾಸಂಗ್ರಾಮ ನಡೆದಿದೆಯಲ್ಲ— ಅದರ ಅಗತ್ಯವೇನಿತ್ತು? ಪ್ರಪಂಚದ ಸಮಸ್ತ ಜ್ವಾಲೆಗಳನ್ನು, ಸಕಲ ಹೀನತೆಯನ್ನು, ಸರ್ವಸ್ವಾರ್ಥವನ್ನು ಮುಗಿಸಿಬಿಟ್ಟು ಅದು ಈ ರಾತ್ರಿಯೊಡನೆಯೇ ಕೊನೆಗೊಳ್ಳುವುದೇನು? ಆ ಮೇಲೆ ತನ್ನ ಸಮಸ್ತ ಜೀವನ ಕುರುಕ್ಷೇತ್ರದಂತೆ ಕಡೆತನಕ ಮಸಣವಾಗುವುದೇನು? ಇಲ್ಲಿ ಚಿತೆಯ ದಾಹಚಿಹ್ನ ಕೂಡ ಉಳಿಯಲಾರದೇನು? ಇದೂ ಜಗತ್ತಿನ ಅಗತ್ಯಗಳಲ್ಲೊಂದೇನು?

ಆದರೆ ಈ ಕುರುಕ್ಷೇತ್ರ ಏಕೆ ಆರಂಭವಾಯಿತು? ಯಾರು ಆರಂಭಿಸಿದರು? ತನ್ನ ಸಕಲ ಐಶ್ವರ್ಯ ಸಂಪತ್ತು ಸ್ವಜನಬಾಂಧವರನ್ನು ತ್ಯಜಿಸಿ, ಅತ್ಯಂತ ನಿರುಪಾಯನಾಗಿ ಇಂತು ಸಾಯುತ್ತಲಿರುವ ಈ ಮನುಷ್ಯನೇ ಈ ಮಹಾವಿಪ್ಲವವನ್ನು ಎಬ್ಬಿಸಿದನೆ? ಮತ್ತಾರ ಮನಸಿನೊಳಗೂ ಯಾವ ಲೋಭವೂ ಯಾವ ಮೋಹವೂ ಅವಿತುಕೊಂಡಿರಲಿಲ್ಲವೇ? ಮತ್ತೆ ಯಾರೂ ಯಾವ ಪಾಪವನ್ನೂ ಮಾಡಲಿಲ್ಲವೇ?

ಅವಳೊಮ್ಮೆಗಲೆ ಈ ಯೋಚನೆಯನ್ನು ಕೊಡವಿದಳೆಂಬಂತೆ ಮೈ-ಗೊಡವಿದಳು — ಯಾರೋ ಅವಳ ಕಂಠವನ್ನು ಕೈಯಿಂದೊತ್ತಿ ಅವರೋಧಿಸಿದರೇನೋ! ಅದೇ ಹೊತ್ತಿಗೆ ಸುರೇಶ ನೀರು ಬೇಡಿದ ಅಚಲೆ ಬಗ್ಗಿ ಅವನ ಬಾಯಲ್ಲಿ ನೀರು ಹಾಕಿ ಮತ್ತೆ ಸುಮ್ಮನೆ ಕುಳಿತಳು ಅವಳಿಗೆ ಶ್ರಾಂತಿಯಿಲ್ಲ, ಕ್ಲಾಂತಿಯಿಲ್ಲ, ಕಣ್ಣಿನಿಂದ ನಿದ್ದೆಯ ಆಭಾಸಕೂಡ ಹೊರಟುಹೋಗಿತ್ತು ಆ ಶುಷ್ಕನೇತ್ರಗಳಿಂದ ಮುಗಿಲನ್ನೇ ದಿಟ್ಟಿಸತೊಡಗಿದಳು. ಬಹುಕಾಲದ ಹಿಂದೆ ಅವಳು ಬಹು ಪ್ರಯತ್ನದಿಂದ ಯಾವ ಮಹಾಭಾರತವನ್ನು ಮುಗಿಸಿಬಿಟ್ಟಿದ್ದಳೋ, ಅದರ ದುರಂತದ ಚಿತ್ರಪಟವೊಂದು ಅವಳ ಮನಃಪಟಲದ ಮೇಲೆ ಮೂಡಿತು ಅಲ್ಲಿ ಎಷ್ಟು ನೇತ್ರರು ಹರಿಯುತ್ತಿದ್ದೆ, ಎಷ್ಟು ಅಪರಿಚಿತ ಜನರು ಹೊಡೆದಾಡಿ ಬಡಿದಾಡಿ ಸಾಯುತ್ತಿದ್ದಾರೆ,

—ಎಷ್ಟು ನೂರಾರು ಸಾವಿರಾರು ಚಿತೆಗಳು ಉರಿಯುತ್ತಿವೆ, ಆರುತ್ತಿವೆ—ಅದರ ಹೊಗೆಯಿಂದ ಸ್ವರ್ಗಮರ್ತ್ಯಗಳು ಏಕಾಕಾರವಾಗಿವೆ.

ಕೆಲಹೊತ್ತು ಸುರೇಶ ತಂದ್ರಾಮಗ್ನನಾಗಿರಬೇಕು, ಅವನ ಸದ್ದಿರಲಿಲ್ಲ ಆದರೆ ಈ ರೀತಿ ಸಮಯವೆಷ್ಟು ಕಳೆಯಿತು, ಹೊರಗೆ ಹೊತ್ತು ಹೇಗೆ ಸಾಗಿತು, ರಾತ್ರಿ ಹೇಗೆ ಪ್ರಭಾತದ ಕಡೆಗೆ ಮುಂಬರಿಯುತ್ತಲಿತ್ತು—ಇದಾವುದರ ಕಡೆಗೂ ಅಚಲೆಯ ಅರಿವಿರಲಿಲ್ಲ ಅವಳ ನಿಮೀಲಿತ ನಯನಾಂತಗಳಿಂದ ಜಲಧಾರೆ ಹರಿಯುತ್ತಿತ್ತು, ಅವಳ ಪ್ರಸ್ತ ಹಸ್ತಗಳು ಸುರೇಶನ ತಲೆದಿಂಬಿನ ಮೇಲಿದ್ದವು 'ಹೇ ದೇವರೇ ನಾನು ಅನೇಕ ದುಃಖ-ವ್ಯಥೆಗಳನ್ನು ಅನುಭವಿಸಿದ್ದೇನೆ ಆ ನನ್ನ ದುಃಖ-ವ್ಯಥೆಗಳ ಬದಲಾಗಿ ಇವರನ್ನು ಕ್ಷಮಿಸಿ ನಿನ್ನ ಪದರಿನಲ್ಲಿ ಹಾಕಿಕೋ ನನಗೆ ತಾಯಿಯಿಲ್ಲ, ತಂದೆಯಿಲ್ಲ, ಅಣ್ಣತಮ್ಮಂದಿರಿಲ್ಲ, ಗಂಡನಿಲ್ಲ— ಇಂತಹ ಮಹಾಲಜ್ಜೆಯನ್ನು ಹೊತ್ತುಕೊಂಡು ಇರುವುದಕ್ಕೆ ನನಗಿಂಬಿಲ್ಲ ನಾನೆಷ್ಟು ಅನುಭವಿಸಿದ್ದೇನೆಂಬುದು ನಿನಗೆ ಅರಿಯದುದಲ್ಲ ನನ್ನನ್ನಿನ್ನು ಇರಿಸಬೇಡ, ಪ್ರಭೋ, ನನ್ನನ್ನೂ ನಿನ್ನ ಹತ್ತಿರಕ್ಕೆ ಕರೆದುಕೋ!' ಎಂದವಳು ಮನಸಿನಲ್ಲಿ ಎಂದುಕೊಳ್ಳುತ್ತಿದ್ದಳು ಮನಸಿನೊಳಗೆ ಎಷ್ಟು ತೆರದ ಎಷ್ಟು ಆವೃತ್ತಿಗಳು ಹೊರಟವೋ ಲೆಕ್ಕವಿಲ್ಲ, ಎಷ್ಟು ಕಂಬನಿ ಹರಿಯಿತೋ ಮಿತಿಯಿಲ್ಲ

"ಅವ್ವಾವರೇ!"

ಇನ್ನೂ ಅದೇ ನಸುಕು ಹರಿದಿತ್ತು ಅಚಲೆ ಮೆಟ್ಟಿಬಿದ್ದು ನೋಡಿದಳು ರಘುವೀರ ಯಾರಿಗೋ ಒಳಬರಲಿಕ್ಕೆ ತಲೆವಾಗಿಲು ತೆರೆದು ನಿರೀಕ್ಷಿಸುತ್ತ ನಿಂತಿದ್ದ.

"ಏನು ರಘುವೀರ?" ಎಂದೆನ್ನುವುದರೊಳಗೇ ಅವಳ ಕಣ್ಣಿಗೆ ಬಿದ್ದುದು—ಮಹಿಮ! ಅವಳು ನಡುಗಿದಳು ಮರುಕ್ಷಣವೇ ನೋಟವನ್ನು ನೆಲಕ್ಕಿಳಿಸಿದಳು ಕೊಂಚಹೊತ್ತು ಮಹಿಮನಿಗೆ ಹೊಸತಿಲು ದಾಟಲು ಕಾಲೇಳಲಿಲ್ಲ ಇಲ್ಲಿ ಈರೀತಿ ಮತ್ತವಳ ದರ್ಶನವಾದೀತೆಂದು ಅವನು ಬಗೆದಿರಲಿಲ್ಲ ಪ್ರತಿಕ್ಷಣದಲ್ಲಿ ಅವನು ಮೆಲ್ಲಮೆಲ್ಲನೆ ಹತ್ತಿರಹೋಗಿ ನಿಂತುಕೊಂಡು ಅತ್ಯಂತ ಮೃದುಕಂಠದಿಂದ ಪ್ರಶ್ನಿಸಿದ "ಸುರೇಶ ಈಗ ಹೇಗಿದ್ದಾನೆ?"

ಅಚಲೆ ಮುಖವೆತ್ತಲಿಲ್ಲ ಮಾತನಾಡಲಿಲ್ಲ ಗೋಣುಹಾಕಿ ಇದಾವುದೂ ತನಗೆ ಗೊತ್ತಿಲ್ಲವೆಂಬುದನ್ನು ತಿಳಿಸಲಪೇಕ್ಷಿಸಿದಳು

ಕೆಲನಿಮಿಷ ಸುಮ್ಮನೆ ನಿಂತುಕೊಂಡು ಮಹಿಮ ಸುರೇಶನ ಹಣೆ ಮುಟ್ಟಿ ನೋಡಿದ ಆಗವನು ಕಣ್ದೆರೆದ ಆ ಜ್ಯೋತಿರ್ಹೀನ ರಕ್ತ-ನೇತ್ರಗಳನ್ನು ಕಂಡು ಮಹಿಮನ ಬಾಯಿಂದ ದನಿಯೇ ಹೊರಡದಾಯಿತು.

"ಹೇಗಿದ್ದೀ ಸುರೇಶ?" ಕೆಲಹೊತ್ತಿನ ಮೇಲೆ ಕೇಳಿದ ಮಹಿಮ

"ನೆಟ್ಟಗಿಲ್ಲ —ಹೊರಟಿದ್ದೇನೆ. ನೀ ಬರುತ್ತೀ ಎಂದು ನನಗೆ ಗೊತ್ತಿತ್ತು. —ನನ್ನೆದುರಿಗೆ ಬಂದು ಕೂತುಕೋ"

ಮಹಿಮ ಅವನ ಕಾಲುದಿಸೆಯಲ್ಲಿ ಕುಳಿತು ಮಾತನಾಡಿದ "ಡಿಹರಿಯಲ್ಲಿ ಡಾಕ್ಟರ ಇದ್ದಾರೆ ನನ್ನ ಎಕ್ಕದಲ್ಲಿ—"

ಸುರೇಶ ತಲೆ ಅಲ್ಲಾಡಿಸಿ ಹೇಳಿದ "ಬೇಡ ಬೇಡ, ಅಂಡಲೆಯುವುದು ಬೇಡ —ಕೂಲಿ ವ್ಯರ್ಥಮಾಡಬೇಡ ನನ್ನನ್ನು quietly ಹೋಗಗೊಡು"

"ಆದರೆ ಈಗ—"

"ಹಾಂ, ಈಗ ಎಚ್ಚರವಿದೆ, ಆದರೆ ನಡುನಡುವೆ ಎಚ್ಚರು ತಪ್ಪುವುದು ನನ್ನ ಜೀವನವನ್ನು ದೀನ ದರಿದ್ರರ ಸೇವೆಗೆ ತೊಡಗಿಸುವುದಾಗಲಿಲ್ಲ, ಸಂಪತ್ತಿಯಾದರೂ ಅವರಿಗಾಗಿ ಸಲ್ಲಬೇಕು, ಮಹಿಮ ಅದಕ್ಕೇ ನಿನ್ನನ್ನಿಷ್ಟು ದೂರ ಕರೆಸಿಕೊಂಡು ತೊಂದರೆ ಕೊಟ್ಟೆ, ಹೊರತು, ಸಾಯುವಾಗ ಕ್ಷಮೆಯನ್ನು ಯಾಚಿಸಿ ಕಾವ್ಯವನ್ನು ರಚಿಸುವ ಪ್ರವೃತ್ತಿ ನನಗಿಲ್ಲ"

ಮಹಿಮ ನೀರವವಾಗಿದ್ದ ಸುರೇಶ ಹೇಳುತ್ತಲಿದ್ದ "ಅದನ್ನೆಲ್ಲ ನಾ ನಂಬುವುದಿಲ್ಲ, ಸೇರುವುದೂ ಇಲ್ಲ ಒಂದು ದಿನದ ಕ್ಷಮೆಯ ಮೇಲೆ ನನಗೆ ಲೋಭವೂ ಇಲ್ಲ ಒಳ್ಳೆಯದಿರಲಿ,— ಒಂದು ಉಯಿಲುಂಟು. ಅಚಲೆಗೆ ನಾ ಏನನ್ನೂ ಕೊಟ್ಟಿಲ್ಲ,— ಅವಳ ಅಪಮಾನ ಮಾಡಲು ನನ್ನ ಕೈಯೇಳಲಿಲ್ಲ ಆದರೂ ಆಗತ್ಯವಿದ್ದರೆ ಏನಾದರೂ ಕೊಡು"

ವ್ಯಾಕುಲನಾಗಿ ಮಹಿಮ ಹೇಳಿದ. "ನನ್ನನ್ನೇಕೆ ಮತ್ತಿದರೊಳಗೆ ತೊಡಗಿಸುತ್ತೀ, ಸುರೇಶ?"

"ಕೇವಲ ಇದಕ್ಕಾಗಿಯೇ ನಿನ್ನನ್ನು ಇದರೊಳಗೆ ತೊಡಕಿಸಿಲ್ಲ.

ಯಾವನಿಗೆ ಲೋಭವಿಲ್ಲ, ಯಾವನಿಗೆ ನ್ಯಾಯಾನ್ಯಾಯ ವಿಚಾರ—" ಎಂದು ಸುರೇಶ ಪಕ್ಕನೆ ಮೇಲಕ್ಕೆ ನೋಡಿ, "ನೀನು ಬೆಳತನಕ ಕುಳಿತೇ ಇದ್ದೀ ಅಚಲಾ, ಹೋಗು, ಕೈಕಾಲು ಮೋರೆ ತೊಳೆದುಕೊ ಮುನಿಯಾನ ತಾಯಿ ನಿನಗೆ ಎಲ್ಲವನ್ನೂ ತೋರಿಸುವಳು ಹೋಗು—" ಎಂದ

ಅವಳೆದ್ದು ಹೋದಳು ಸುರೇಶ ಮುಂದುವರಿಸಿದ. "ಒಂದೇ ಒಂದು ವಿಷಯದ ಬಗ್ಗೆ ನನಗೆ ಬಹಳ ದುಃಖವಾಗುತ್ತಿದೆ ಅಚಲೆ ನಿನ್ನನ್ನು ಎಷ್ಟು ಪ್ರೀತಿಸುತ್ತಿದ್ದಳೆಂಬುದು ನನಗೂ ತಿಳಿಯಲಿಲ್ಲ, ನಿನಗೂ ತಿಳಿಯಲಿಲ್ಲ, ಅದು ಅವಳಿಗೂ ತಿಳಿಯಲಿಲ್ಲ ಆ ಪ್ರೇಮ ನಿನ್ನ ದಾರಿದ್ರ್ಯದೊಂದಿಗೆ ಎಂತಹ ತೊಡಕಿನಲ್ಲಿ ಬಿದ್ದಿತೆಂದರೆ— ಹೋಗಲಿ ಇಂತಹ ಸುಂದರ ವಸ್ತುವನ್ನು ನಾ ಮಣ್ಣುಗೂಡಿಸಿ ಬಿಟ್ಟೆ — ನಾನೂ ಪಡೆದುಕೊಳ್ಳಲಿಲ್ಲ ಆದರೆ ಇನ್ನೇನು ಮಾಡುವುದಿದೆ! ಅತ್ತೆಯ್ಯನನ್ನು ನೋಡಿಕೋ— ಅವಳಿಗೆ ಬಹಳ ದುಃಖವಾಗುವುದು "

ಮುದುಕಿ ದಾಸಿ ಔಷಧದ ಸೀಸೆ ತೆಗೆದುಕೊಂಡು ಬಂದು ನಿಂತಳು. "ಒಲ್ಲೆ ಒಲ್ಲೆ, ಇನ್ನು ಔಷಧ ಬೇಡ ಸ್ವಲ್ಪ ನೀರು ಕೊಡು — ಒಂದು ನಾಟಕವನ್ನು ಬರೆಯಲಾರಂಭಿಸಿದ್ದೆ, ಮಹಿಮ, ನನ್ನ ಡ್ರಯಾರಿನಲ್ಲಿದೆ;— ಸಾಧ್ಯವಾದರೆ ಓದು " ಎಂದ ಸುರೇಶ

ಅವನ ಮುಖದ ಕಡೆ ನೋಡುವುದು ಮಹಿಮನಿಗಾಗಿರಲಿಲ್ಲ ಅಧೋಮುಖನಾಗಿ ಕೇಳುತ್ತಲಿದ್ದ ಈಗ ಮೊಗವೆತ್ತಿ ಏನೋ ಮಾತನಾಡಲು ಹವಣಿಸಿದ ಸುರೇಶ ಅವನನ್ನು ತಡೆದು, "ಇರಲಿ ಮಹಿಮ, ಕೊಂಚ ಮಲಗುತ್ತೇನೆ ಊಟ ಉಪಚಾರದ ಎಲ್ಲ ವ್ಯವಸ್ಥೆಯೂ ಇದೆ ಆದರೆ ನಿನಗದು ರುಚಿಸಲಿಕ್ಕಿಲ್ಲ " ಎಂದು ಕಣ್ಣವೆ ಮುದುರಿಕೊಂಡ.

ಮಹಿಮ ಕ್ಷಣಹೊತ್ತು ಸುಮ್ಮನಿದ್ದು ಮೆಲ್ಲನೆ ಕೇಳಿದ· "ನನ್ನ ಕೊನೆಯ ಮಾತನ್ನು ನಡೆಸುವೆಯಾ ಸುರೇಶ ?"

"ಏನು ?"

"ನೀ ದೇವರ ಬೆಗ್ಗೆ ಎಂದೂ ವಿಚಾರಿಸಿಯೇ ಇಲ್ಲ, ಆ ವಿಷಯ—"

"ಅದು ನನಗೆ ಸೇರುವುದಿಲ್ಲ" ಎಂದು ಸುರೇಶ ಮೋರೆ ಮುರಿದು, ಮಗ್ಗಲು ಹೊರಳಿ ಮಲಗಿಕೊಂಡ ಮಹಿಮ ಅತ್ಯಂತ ಪ್ರಯಾಸದಿಂದ ಅದವ್ಯ ದೀರ್ಘಶ್ವಾಸವನ್ನು ಹತ್ತಿಟ್ಟುಕೊಂಡು ನೀರವನಾಗಿಬಿಟ್ಟ.

೪೩

ರಾಮುಬಾಬು ಮನೆಯಲ್ಲಿರಲಿಲ್ಲ. ಮರುದಿನ ಬೆಳಗಿನವರೆಗೆ [illegible] ತಿರುಗಿ ಬಂದು ಮಹಿಮನ ಕಾಗದ ನೋಡುತ್ತಲೇ ತಡಮಾಡದೆ ಹೊರಟು ಬಿಟ್ಟರು ದಾರಿಯುದ್ದಕ್ಕೂ ಕುದುರೆಗಳನ್ನು ಕನಿಕರವಿಲ್ಲದೆ ಅರೆ-ಜೀವವಾಗುವಂತೆ ಹೊಡೆಹೊಡೆದು ಓಡಿಸಿಕೊಂಡು ಬಂದು ಅವರು ಮಾರ್ಘುಲಿಯನ್ನು ತಲುಪಿದಾಗ ಹೊತ್ತು ಮುಳುಗಲಾಗಿತ್ತು ಪೋಲಿಸ ಅಧಿಕಾರಿಗಳೆಂದು ಭಾವಿಸಿ ಅಂಗಡಿಯವ ಸ್ವಯಂ ಏರಿ ತೋರಿಸುತ್ತ ಪಾಂಡೆಯವರ ಮನೆಯ ವರೆಗೆ ಕರೆತಂದು ಬಿಟ್ಟ ಅಚಲೆಯೂ ಬಂದಿದ್ದಾಳೆಂಬುದು ಅವನಿಂದ ತಿಳಿಯಿತು ಬಾಗಿಲು ತೆರೆದಿತ್ತು ಅವರು ಗಾಡಿಯಿಳಿದು ಒಳಗೆ ಕಾಲಿಡುತ್ತಲೇ ವಿಷಯ ತಿಳಿಯಲು ವಿಲಂಬವಾಗಲಿಲ್ಲ ತಾಸಾಗಿತ್ತು ಸುರೇಶ ತೀರಿಕೊಂಡು ಮಂಚದ ಮೇಲೆ ಅಪಾದ ಪರಿವೇಷ್ಟಿತವಾದ ಅವನ ಮೃತದೇಹ, ಕಾಲಕಡೆಗೆ ಕಿರಿದಂತರದಲ್ಲಿ ಸುಮ್ಮನೆ ಕುಳಿತಿದ್ದಳು ಅಚಲೆ

ಅಕಸ್ಮಾತ್ ಕಂಡ ಈ ದೃಶ್ಯ ವೃದ್ಧರಿಗೆ ಅಸಹ್ಯವಾಯಿತು 'ಅಯ್ಯೋ' ಎಂದು ಶೋಕಿಸತೊಡಗಿದರು ಅಚಲೆ ಒಮ್ಮೆ ಮಾತ್ರ ಕಣ್ಣೆತ್ತಿ ನೋಡಿದಳು ತಿರುಗಿ ಹಾಗೆಯೇ ಅಧೋಮುಖಿಯಾಗಿ ನಿಃಶಬ್ದವಾಗಿ ಕುಳಿತು ಬಿಟ್ಟಳು ಈ ಆರ್ತಸ್ವರ ಅವಳ ಕಿವಿಯೊಳಗೆ ಹೊಕ್ಕಿತು, ಬಹುಶಃ ಹೃದಯಕ್ಕೆ ತಲುಪಲಿಲ್ಲವೇನೋ !

ಮಹಿಮ ಮನೆಯೊಳಗೆ ಕಟ್ಟಿಗೆ ಕೂಡಿಸಲು ಹೋಗಿದ್ದ ಅಳುವನ್ನು ಕೇಳಿ ಹೊರಕ್ಕೆ ಬಂದ "ಸುರೇಶ ಈಗ ಸ್ವಲ್ಪ ಹೊತ್ತಿನ ಹಿಂದೆ ಸತ್ತ, ರಾಮುಬಾಬೂ. ನೀವು ಬಂದಿರಿ, ನೆಟ್ಟಗಾಯಿತು ಇಲ್ಲದಿದ್ದರೆ ಒಬ್ಬನಿಗೇ ಬಹಳ ತೊಂದರೆಯಾಗುತ್ತಿತ್ತು," ಎಂದ

ರಾಮುಬಾಬು ಮೌನವಾಗಿ ಕಣ್ಣೊರಸಿಕೊಳ್ಳತೊಡಗಿದರು. ಅವರಿಗೆ ಏನು ಹೇಳಬೇಕು, ಏನು ಮಾಡಬೇಕು, ಈ ಹುಡುಗಿಯ ಎದುರಿಗೇ ಹೇಗೆ ನಿದಾರುಣ ಕಾರ್ಯದಲ್ಲಿ ಸಹಾಯಮಾಡುವುದಕ್ಕೆ ಮುಂದುವರಿಯಬೇಕು ಎಂಬುದೇ ತಿಳಿಯದಾಯಿತು

ಮಹಿಮ ಹೇಳಿದ. "ನದಿ ದೂರವಿಲ್ಲ ರಘುವೀರ ಒಂದಿಷ್ಟು ಕಟ್ಟಿಗೆ ತೆಗೆದುಕೊಂಡು ಹೋಗಿದ್ದಾನೆ, ಇನ್ನೂ ಸ್ವಲ್ಪ ಕಟ್ಟಿಗೆ ಸಿಗುತ್ತವೆ.

ಅವನ್ನೂ ಕಳಿಸಿಬಿಟ್ಟು, ಆ ಮೇಲೆ ನಾವು ಮೂವರೇ ಇದನ್ನು ಒಯ್ಯ ಬೇಕಾಗುವುದು ಈ ಊರೊಳಗೆ ಮತ್ತ್ಯಾರೂ ಇಲ್ಲ, ಇದ್ದರೂ ಬಹುಶಃ ಯಾರೂ ಬಂಗಾಲಿಯ ಶವ ಮುಟ್ಟುವುದಿಲ್ಲ. ”

ರಾಮುಬಾಬುಗಳಿಗೆ ಅದು ಗೊತ್ತಿತ್ತು. ಅಚಲೆಗೆ ಕೇಳಿಸದಂತೆ ಅವರು ಮೆಲ್ಲಗೆ ಕೇಳಿದರು: “ನಾವಿಬ್ಬರು, ಮತ್ತೊಬ್ಬರು ಯಾರು ? ”

“ರಘುವೀರನೂ ಸಹಾಯ ಮಾಡಬಹುದು ” ಮಹಿಮ ಹೇಳಿದ.

ಕೇಳಿ ಮುದುಕ ಹೇಳಿದರು “ಬೇಡ ಬೇಡ, ಏನೇ ಆಗಲಿ, ಹಾಗೆ ಮಾಡಲಾಗದು ಬ್ರಾಹ್ಮಣನ ಶವವನ್ನು ಮತ್ತಾರಿಗೂ ನಾ ಮುಟ್ಟ ಗೊಡುವುದಿಲ್ಲ. ನದಿ ದೂರವಿಲ್ಲವೆಂದ ಮೇಲೆ ನಾವಿಬ್ಬರೇ ಹೇಗಾದರೂ ತೆಗೆದುಕೊಂಡು ಹೋಗಬಹುದು ”

“ಒಳ್ಳೆಯದು, ಹಾಗೇ ಆಗಲಿ.” ಎಂದು ಮಹಿಮ ಪುನಃ ಒಳಗೆ ಹೋಗಿ ಕಟ್ಟಿಗೆ ಕೂಡಿಸತೊಡಗಿದ ರಾಮುಬಾಬು ಪಡುಸಾಲೆಯಲ್ಲಿ ಒತ್ತಟ್ಟಿಗೆ ಕಂಬವನ್ನಾತುಕೊಂಡು ಕುಳಿತುಕೊಂಡರು.

ಅವರಿಗೆ ವಯಸ್ಸಾಗಿದೆ. ತಮ್ಮ ದೀರ್ಘ ಜೀವನದಲ್ಲಿ ಹಲವು ಸಾವುಗಳನ್ನು ಕಂಡಿದ್ದಾರೆ ಅನೇಕ ಗಭೀರ ಶೋಕಗಳೊಳಗಿಂದ ನಿದಾನ ವಾಗಿ ನಡೆದು ಬಂದಿದ್ದಾರೆ ಅವರ ಹೃದಯವೀಣೆಯಲ್ಲಿ ದುಃಸಹ ದುಃಖ ಗಳ ಕರುಣಸ್ವರಗಳ ತಂತ್ರಿಗಳು ಬಿಗಿದಿವೆ ಇಂದಿನೀ ಘಟನೆ ಆ ತಂತಿ- ಗಳಿಗೆ ಆಘಾತಿಸಿ ಅಪಸ್ವರವುಂಟಾಯಿತು ಒಂದು ದಿನ ಈ ಸುರಮೆ ‘ದೊಡ್ಡಪ್ಪಾ’ ಎಂದು ಅವರೆದೆಯಮೇಲೆ ಬಿದ್ದು ಅತ್ತಿದ್ದಳು — ಆ ಚಿತ್ರ ಅವರಿಗೆ ಮರೆತಿರಲಿಲ್ಲ ಇಂದೂ ಅವರ ಪಿತೃಸ್ನೇಹ ಆ ವಸ್ತುವಿನ ಲೋಭದಿಂದ ಒಳಗೊಳಗೇ ಉಕ್ಕಿಬರುತ್ತಿತ್ತೇನೋ ಅವಳನ್ನು ಏನೆಂದು ಸಂತಯಿಸಬೇಕೆಂಬುದು ಅವರಿಗೆ ತಿಳಿಯದಾಯಿತು ಅವಳನ್ನು ಸಚೇತನ ಗೊಳಿಸುವಂತಹದು ಜಗತ್ತಿನೊಳಗೆ ಯಾವುದುಂಟು ಎಂಬುದೂ ಅವರಿಗೆ ಅವಗತವಿಲ್ಲ ಆದರೂ ಅವರ ಶೋಕಾತುರ ಮನಸು, ಮಗಳನ್ನು ಎದೆಗವಚಿಕೊಳ್ಳಬೇಕು, ‘ಎದೆಯೊಡೆದುಕೊಳ್ಳಬೇಡಮ್ಮಾ, ನಾವಿದ್ದೇವೆ’ ಎಂದು ಹೇಳಬೇಕು ಎಂದುಕೊಳ್ಳುತ್ತಿತ್ತು

ಆದರೆ ಆ ಸ್ವರ ಹೊರಟಿತೆಲ್ಲಿ! ಅವರ ಆ ತೃಷ್ಣೆಯನ್ನು ಪೂರಯಿಸಲು ಯಾರೂ ಒಂದಡಿ ಮುಂಬರಿಯಲಿಲ್ಲ! ಸುರಮೆ ಹಾಗೆಯೆ ನೀರವವಾಗಿ

ಇದ್ದಳು, ದೂರತನವು ಅನಾತ್ಮೀಯರೆಂಬಂತೆ ಅವರೂ ಪೃಥಕ್ಕಾಗಿಯೇ ಉಳಿದರು

ಕಷ್ಟವಿಪತ್ತುಗಳಲ್ಲಿ ಅತ್ಯಂತ ದುಚ್ಞೇಯ ವೇದನೆಯ—ಅನಿರ್ವಚನೀಯ ಮರ್ಮಪೀಡೆಯ ಹತ್ತಿರದಿಂದಲೇ ಅವರು ನಡೆದು ಬಂದಿರುತ್ತಾರೆ ಪ್ರಚ್ಛನ್ನ ರಹಸ್ಯದ ಇಂಗಿತ ನಡುನಡುವೆ ಅವರನ್ನು ಚುಚ್ಚುತ್ತಿದ್ದುದೂ ಉಂಟು ಆದರೂ ಅವರೆಂದೂ ಜರ್ಜರಿತರಾಗಲಿಲ್ಲ. ಎಲ್ಲ ಸಂಶಯಗಳನ್ನು ಸ್ನೇಹದ ತೆರೆಯಲ್ಲಿ ಮುಚ್ಚಿಟ್ಟು, ಹೊರಮುಗಿಲನ್ನು ಜಳಜಳವಾಗಿಯೇ ಇಟ್ಟಿದ್ದರು ಆದರಿಂದು ಸದ್ಯೋವಿಧವೆಯ ಆ ಅದೃಷ್ಟಪೂರ್ವ ನಿಷ್ಠುರ ಧೈರ್ಯ ಅವರಿಷ್ಟು ದಿನ ಹುದುಗಿಸಿಟ್ಟಿದ್ದ ಸ್ನೇಹವನ್ನು ಚೂರುಚೂರು ಮಾಡಿತು, ಅವರ ಹೃದಯವನ್ನು ಕಲುಷಿತ ಬಾಷ್ಪಗಳಿಂದ ತುಂಬಿತು

ಸೂರ್ಯ ಮುಳುಗಿದ ಮಹಿಮ ಅಂತಿಂತು ಆಕಡೆಯ ಕೆಲಸ ಮುಗಿಸಿಕೊಂಡು ಬಂದ "ರಾಮುಬಾಬೂ, ಇನ್ನು ತೆಗೆದುಕೊಂಡು ಹೋಗಬಹುದು" ಎಂದು ಅಚಲೆಯ ಕಡೆ ತಿರುಗಿ, "ದೀವಿಗೆ ಹಚ್ಚಿಟ್ಟಿದ್ದೇನೆ ನೀ ಮುನಿಯಾನ ತಾಯಿಯ ಹತ್ತಿರ ಕುಳಿತಿರು ನಾವು ತಿರುಗಿ ಬರಲಿಕ್ಕೆ ಹೆಚ್ಚು ತಡವೇನಾಗಲಿಕ್ಕಿಲ್ಲ," ಎಂದ

ಅಚಲೆ ಮಾತನಾಡಲಿಲ್ಲ ರಾಮುಬಾಬು ತಮ್ಮನ್ನು ತಾವು ಸಾವರಿಸಿಕೊಂಡು ಎದ್ದು ನಿಂತರು ಅಚಲೆಯ ಆನತ ಮುಖದ ಕಡೆ ನೋಡಿ, ರುದ್ಧಸ್ವರವನ್ನು ಸರಿಪಡಿಸಿಕೊಂಡು ಭಗ್ನಕಂಠದಿಂದ ನುಡಿದರು "ತಂಗೀ ಈ ವಿಷಯ ಹೇಳುವಾಗ ನನ್ನೆದೆ ಬಿರಿಯುತ್ತಿದೆ— ಹೆಂಡತಿಯ ಕೊನೆಯ ಕರ್ತವ್ಯವನ್ನು ನೀನೇ ನೆರವೇರಿಸಬೇಕು, ನೀನೇ ಮುಖಾಗ್ನಿ—" ಎಂದೆನ್ನುತ್ತ ಅವರು ಹುಹು ಎಂದು ದುಕ್ಕಿಸಿದರು

ಅಚಲೆ ಶುಷ್ಕಮುಖದಿಂದ, ಶುಷ್ಕದೃಷ್ಟಿಯಿಂದ ಮುದುಕನನ್ನು ದಿಟ್ಟಿಸಿನೋಡುತ್ತ ಸ್ಥಿರವಾಗಿ ನಿಂತಳು ಕ್ಷಣಹೊತ್ತಿನ ತರುವಾಯ ಶಾಂತ ಮೃದು ಸ್ವರದಿಂದ ಮಾತನಾಡಿದಳು "ಮುಖಾಗ್ನಿಯ ಅಗತ್ಯವಿದ್ದರೆ ನಾ ಮಾಡುತ್ತೇನೆ. ಹಿಂದುಧರ್ಮದಲ್ಲಿ ನಿಜವಾಗಿ ಇದಕ್ಕೆ ಫಲವಿರುವುದಾದರೆ ಅದನ್ನು ವ್ಯರ್ಥಗೊಳಿಸುವುದು ನನಗೇನು ಇಷ್ಟವಲ್ಲ. ಆದರೆ ನಾ ಅವರ ಹೆಂಡತಿಯಲ್ಲ!"

ರಾಮುಬಾಬು ವಜ್ರಾಹತರಂತೆ ಇವೆಯಿಕ್ಕದೆ ನೋಡತೊಡಗಿದರು. "ನೀನು ಸುರೇಶನ ಹೆಂಡತಿಯಲ್ಲವೆ ?" ಎಂದು ಕೇಳಿದರು

"ಅಲ್ಲ, ಅವರು ನನ್ನ ಗಂಡ ಅಲ್ಲ !" ಅಚಲೆ ಅದೇ ಅವಿಚಲಿತ ಸ್ವರದಿಂದ ಹೇಳಿದಳು

ನಿಮಿಷದಲ್ಲಿ ಎಲ್ಲ ಘಟನೆಗಳು ರಾಮುಬಾಬುಗಳ ನೆನಪಿಗೆ ಬಂದವು ತಮ್ಮ ಮನೆಯಲ್ಲಿ ಆಸರ ಹೊಂದಿದುದು ಮೊದಲುಗೊಂಡು ಆ ದಿನದ ಮೂರ್ಛೆಯ ತನಕ ಎಲ್ಲವೂ ವಿದ್ಯುದ್ವೇಗದಿಂದ ಅವರ ಮನಸಿನಲ್ಲಿ ತಿರುತಿರುಗಿ ಸುಳಿದವು ಸಂಶಯದ ನೆಳಲು ಕೂಡ ಎಲ್ಲಿಯೂ ಉಳಿಯ ಲಿಲ್ಲ ಈಕೆ ಯಾರು, ಯಾರ ಮಗಳು, ಯಾವ ಜಾತಿ—ವೇಶ್ಯೆಯಿದ್ದರೂ ಇರಬಹುದು— ಇವಳನ್ನು ಮಗಳೆಂದು ಕರೆದೆ, ಇವಳ ಕೈಲಿ ಉಂಡೆ. ಇವಳು ಮಾಡಿದ ಅಡುಗೆಯನ್ನು ದೇವರಿಗೆ ನೈವೇದ್ಯ ಮಾಡಿದೆ ! ಇದನ್ನೆಲ್ಲ ನೆನೆದು ಅವರಿಗೆ ಅಸಹ್ಯವೆನಿಸಿ ಅವರ ಮೈಯೆಲ್ಲ ಬೆವರಿತು

ಅವರು ಮಾತ್ರವಲ್ಲ, ಮಹಿಮನೂ ಸ್ತಂಭಿತನಾಗಿ ನಿಂತುಬಿಟ್ಟಿದ್ದ. ಅವನು ಚಕಿತನಾಗಿ, "ಅದು ಆಗುವ ಸಂಭವವಿಲ್ಲದಿದ್ದರೆ, ನಡೆಯಿರಿ ಕೇದಾರಬಾಬೂ, ನಾವು ತೆಗೆದುಕೊಂಡು ಹೊರಡುವಾ "

'ನಡೆ" ಎಂದು ಮುದುಕ ಸ್ವಪ್ನಚಾಲಿತರಂತೆ ಮುಂಬರಿದರು ಅವರ ಸ್ವಕೀಯ ದುರ್ಘಟನೆಯ ಮುಂದೆ ಉಳಿದೆಲ್ಲ ದುರ್ಘಟನೆಗಳೂ ನೆಳಲಂತೆ ಮ್ಲಾನವಾದವು—ಅವರೆರಡೂ ಕಿವಿಗಳಲ್ಲಿಯೂ ಜಾತಿ ಹೋಯಿತು, ಧರ್ಮ ಹೋಯಿತು, ಈ ಮಾನವಜನ್ಮವೇ ವ್ಯರ್ಥವಾಗಿ ಹೋಯಿತು ಎಂಬ ನಿನಾದವೇ ತುಂಬಿತ್ತು

ಸುರೇಶನ ಅಂತ್ಯೇಷ್ಟಿಕ್ರಿಯೆ ಅಂತೂ ಇಂತೂ ಕೊನೆಗೊಳ್ಳಲು ಹೆಚ್ಚು ವಿಲಂಬವೇನಾಗಲಿಲ್ಲ ಇಡೀ ಸಮಯ ರಾಮುಬಾಬು ಒಂದು ಮಾತೂ ಆಡಲಿಲ್ಲ ತಿರುಗಿ ಬಂದೊಡನೆ ಎಕ್ಕ ತರಲಿಕ್ಕೆ ಅಪ್ಪಣೆ ಕೊಟ್ಟರು

"ನೀವೀಗಲೇ ಹೋಗುವಿರಾ ?" ಎಂದು ಮಹಿಮ ಕೇಳಿದ

"ಹಾಂ. ನಸುಕಿನ ಗಾಡಿಗೆ ಕಾಶಿಗೆ ಹೋಗಬೇಕಾಗಿದೆ ಈಗ ಹೊರಡದಿದ್ದರೆ ಹೊತ್ತಿಗೆ ಮುಟ್ಟಲಿಕ್ಕಾಗುವುದಿಲ್ಲ" ಎಂದರು ರಾಮುಬಾಬು.

ಅವರ ಮನೋಭಾವ ಮಹಿಮನಿಗೆ ಅವಿದಿತವಾದುದಲ್ಲ ಪ್ರಾಯ-ಶ್ಚಿತ್ತಕ್ಕಾಗಿಯೆ ಅವರು ಕಾಶಿಗೆ ಧಾವಿಸುತ್ತಿದ್ದಾರೆಂದು ಅವನು ತಿಳಿದು

ಕೊಂಡ. ಅಂತೆಯೇ ಅತಿಸಂಕೋಚದಿಂದ, "ನಾನು ಪರದೇಶಿ, ಈಕಡೆಯ ದಾವುದೂ ಗೊತ್ತಿಲ್ಲ ದಯವಿಟ್ಟು ಇವರನ್ನು ಕಳಿಸುವುದಕ್ಕೆ ಏನಾದರೂ ವ್ಯವಸ್ಥೆ—" ಅವನ ಮಾತು ಪೂರ್ಣವಾಗಲಿಲ್ಲ ಅಚಲೆಯನ್ನು ಸಂಗಡ ಕರೆದೊಯ್ಯಬೇಕೆಂಬ ಪ್ರಸ್ತಾವದಿಂದ ಮುದುಕ ಕಿಚ್ಚಿನಂತೆ ಭುಗಿಲೆಂದರು. "ದಯೆ? ನಿನ್ನ ತಲೆಗಿಲೆ ಕೆಟ್ಟಿದೆಯೇನು ಮಹಿಮ?"

ಮಹಿಮ ಈ ಪ್ರಶ್ನೆಗೆ ಪ್ರತಿವಾದಿಸಲಿಲ್ಲ ಸಭಯವಾಗಿ ಸವಿನಯವಾಗಿ ನುಡಿದ "ಎರಡುಮೂರು ದಿನ ಇವರ ಊಟ ಆದಂತೆ ಕಾಣುವುದಿಲ್ಲ ಈ ಮೃತ್ಯುಪುರಿಯಲ್ಲಿ ಭಯಾನಕ ಅಸಹಾಯ ಸ್ಥಿತಿಯಲ್ಲಿ ಬಿಟ್ಟು ಹೋಗುವುದು—"

ಈ ಮಾತು ಮುಗಿಸುವುದಕ್ಕೂ ಅವಕಾಶ ಸಿಕ್ಕಲಿಲ್ಲ ಆಚಾರನಿಷ್ಠ ಬ್ರಾಹ್ಮಣನ ಜನ್ಮಗತ ಸಂಸ್ಕಾರಕ್ಕೆ ಆಘಾತವಾದಂತಾಗಿ, ಪ್ರತಿಹಿಂಸೆಯಿಂದ ಕ್ರೂರರಾಗಿ ತೀವ್ರ ಶ್ಲೇಷದಿಂದ ರಾಮಬಾಬು ಮಾತನಾಡಿದರು "ಓ, ನೀನೂ ಬ್ರಾಹ್ಮ! ನನಗೆ ಮರೆತೇ ಹೋಗಿತ್ತು ಆದರೆ ಮಹಾಶಯ, ನೀನೆಂಥ ಮಹಾಬ್ರಹ್ಮಜ್ಞಾನಿಯೇ ಆಗಲೊಲ್ಲೆ, ನನ್ನ ಸರ್ವನಾಶದ ಲೆಕ್ಕ ಹತ್ತಿದ್ದರೆ, ಈ ಕುಲಟೆಯ ಬಗ್ಗೆ ದಯೆ-ಮಾಯೆಯ ಮಾತು ಕೂಡ ಹೊರಡುತ್ತಿದ್ದಿಲ್ಲ ಬಾಯಿಂದ" ಎಂದೆನ್ನುತ್ತ ಹೋಗಿ ಎಕ್ಕ ಏರಿದರು. ಕುಳಿತುಕೊಂಡು ಮತ್ತೆಂದರು— "ಹೋಗಲಿ, ಈಗ ಬ್ರಹ್ಮಜ್ಞಾನದ ಅಗತ್ಯವಿಲ್ಲ ಜೀವ ಉಳಿಸಿಕೊಳ್ಳುವುದಿದ್ದರೆ ಹತ್ತಿ ಕೂಡು ಸ್ಥಳವಿದೆ."

ಮಹಿಮ ನಿಃಶಬ್ದವಾಗಿ ನಮಸ್ಕರಿಸಿದ ಸರ್ವನಾಶದ ಲೆಕ್ಕದ ಬಗ್ಗೆ ದ್ವಂದ್ವವನ್ನೂ ಹೂಡಲಿಲ್ಲ, ಪ್ರಾಣರಕ್ಷಣೆಯ ನಿಮಂತ್ರಣವನ್ನೂ ಸ್ವೀಕರಿಸಲಿಲ್ಲ. ಅವರು ಹೋದಮೇಲೆ ನಿಟ್ಟುಸಿರುಬಿಟ್ಟ ಮಾತ್ರ.

ಸರ್ವನಾಶದ ಲೆಕ್ಕ! ನಿಜ!

ಒಳಗೆ ಕುಳಿತ ಅಚಲೆಗೂ ಹಾಗೆಯೇ ಎನಿಸಿತು ಅವರೇಕೆ ಒಳಗೆ ಬರಲಿಲ್ಲ? ತನ್ನನ್ನು ಒಂದು ಮಾತು ಕೂಡ ಏಕೆ ನುಡಿಸಲಿಲ್ಲ? ಎಂಬುದೆಲ್ಲವೂ ಸ್ಪಷ್ಟವಾಯಿತು

ಇಷ್ಟೊತ್ತು ಸುರೇಶನ ಅನಿವಾರ್ಯ ಮೃತ್ಯು ಭಯಂಕರ ದುಶ್ಚಿಂತೆಯ ಪ್ರಸಂಗವನ್ನು ಸೃಷ್ಟಿಸಿತ್ತು ಅದೀಗ ಉಳಿದಿರಲಿಲ್ಲ ಕ್ಷಿಪ್ರದಲ್ಲಿಯೇ ಮಹಿಮ ಅತ್ಯಂತ ಸಮ್ಮುಖದಲ್ಲಿ, ಅತ್ಯಂತ ಸಮೀಪದಲ್ಲಿ ಬಂದು

ನಿಲ್ಲುವವನು— ಆದರವನಿಗೆ ಓಕೊಡಲು ಅವಳ ಮನಸ್ಸು ಬಯಸಲಿಲ್ಲ. ತನ್ನ ಲಜ್ಜೆಯ ವಿಷಯ ನೆನಸಿಕೊಂಡೊಡನೆ ಅವಳನ್ನು ಕ್ಲಾಂತಿ ಆವರಿಸಿತು.

ಮಹಿಮ ಬಂದು ನೋಡಿದ. ಅವಳು ಕರೋಸಿನ ದೀಪ ಇದಿರಿಗಿಟ್ಟು ಕೊಂಡು ಕುಳಿತಿದ್ದಳು. "ನೀನಿನ್ನೇನು ಮಾಡಬೇಕೆನ್ನುತ್ತೀ ?" ಎಂದು ಕೇಳಿದ

"ನಾನೆ ?" ಎಂದು ಅಚಲೆ ಅವನ ಕಡೆ ನೋಡಿ ಏನು ವಿಚಾರ ಮಾಡಿದಳೋ, ಕೊನೆಗೆಂದಳು. "ನನಗೇನು ತಿಳಿಯಲೊಲ್ಲದು. ನೀವು ಹೇಳಿದಂತೆ."

ಈ ಅಕಲ್ಪಿತ ಉತ್ತರದಿಂದ, ವ್ಯವಹಾರದಿಂದ ಮಹಿಮ ವಿಸ್ಮಿತನಾದ, ಶಂಕಿತನಾದ. ಈ ರೀತಿ ಹಿಂದೆಂದೂ ನೋಡಿರಲಿಲ್ಲ ಅವನು ಆ ದೃಷ್ಟಿ ಎಷ್ಟು ಸರಳ, ಅಷ್ಟು ಸ್ವಚ್ಛ ಅದರೊಳಗಿಂದ ಅವಳ ಹೃದಯದ ಬಹು-ಭಾಗ ಒಳ್ಳೆಯ ನಿಚ್ಚಳವಾಗಿ ಕಂಡಿತು. ಅಲ್ಲಿ ಭಯವಿಲ್ಲ, ಭಾವನೆಯಿಲ್ಲ, ಕಾಮನೆಯಿಲ್ಲ, ಕಲ್ಪನೆಯಿಲ್ಲ— ಗೋಚರಿಸಿದಷ್ಟು ದೂರಕ್ಕೂ ಭವಿಷ್ಯತ್ತಿನ ಆಕಾಶ ನಿರ್ವಿಕಲ್ಪವಾಗಿದೆ ಅದಕ್ಕೆ ಬಣ್ಣವಿಲ್ಲ, ಆಕಾರವಿಲ್ಲ, ಗತಿಯಿಲ್ಲ, ಪ್ರಕೃತಿಯಿಲ್ಲ— ಪೂರ್ಣ ನಿರ್ವಿಕಾರ, ಅತ್ಯಂತ ಶೂನ್ಯ !

ಉಪದ್ರುತ ಅವಮಾನಿತ, ಕ್ಷತವಿಕ್ಷತ ನಾರೀ ಹೃದಯದ ಆ ಚರಮ ವೈರಾಗ್ಯವನ್ನು ಅವನು ಗುರುತಿಸಲಿಲ್ಲ ಒಬ್ಬರ ಅಭಾವ ಇನ್ನೊಬ್ಬರ ಹೃದಯವನ್ನು ಈ ರೀತಿ ನಿರ್ಮಮಗೊಳಿಸಿದೆಯೆಂಬ ಕಲ್ಪನೆಯಿಂದ ಅವನ ಮನಸು ಬಿರಸಾಯಿತು. ಆದರೆ ತನ್ನ ದುಃಖದ ಮೂಲಕ ಜಗತ್ತಿನ ದುಃಖದ ಭಾರವನ್ನು ಹೆಚ್ಚಿಸಲು ಅವನೆಂದೂ ಆಶಿಸುವನಲ್ಲ ; ತನ್ನದು ತನ್ನೊಳಗೆ ಬಚ್ಚಿಟ್ಟುಕೊಂಡೇ ಅವನಿಗೆ ಅಭ್ಯಾಸ. ಅವನು ತನ್ನ ಮನಸಿನ ಬಿರಸು ದನಿಯಲ್ಲೆಲ್ಲಿ ಹೊರಹೊಮ್ಮುವುದೋ ಎಂಬ ಭಯದಿಂದ ಅನ್ಯತ್ರ ಮುಖ ತಿರುಗಿಸಿ ಕ್ಷಣಕಾಲ ಮೌನವಾಗಿದ್ದ. ಆಮೇಲೆ ಸಹಜಸ್ವರದಿಂದ ಮಾತನಾಡಿದ. "ನಾನೇಕೆ ನಿನಗೆ ಹೇಳಬೇಕು ಅಚಲಾ ? ಮತ್ತು ನೀನೇಕೆ ಕೇಳಬೇಕು ಅದನ್ನು ?"

"ಆದರೆ ನಿಮ್ಮ ಹೊರತು ಯಾರೂ ಇಲ್ಲವಲ್ಲ !— ಯಾರೂ ನನ್ನ ಕೂಡ ಇನ್ನು ಮಾತಾಡುವುದಿಲ್ಲ !" ಎಂದು ಅಚಲೆ ಏಕಭಾವದಿಂದ ಅವನ ಮುಖವನ್ನೇ ದಿಟ್ಟಿಸತೊಡಗಿದಳು

“ನನ್ನಿಂದ ಇದನ್ನೇ ಅಪೇಕ್ಷಿಸುವೆಯಾ ?” ಮಹಿಮ ಕೇಳಿದ.

ಇದವಳ ಕಿವಿಯೊಳಗೆ ಹೊಗಲಿಲ್ಲ ಕಾಣುತ್ತದೆ. ಅವಳು ತನ್ನ ಮಾತಿನ ಎಳೆಯನ್ನೇ ಹಿಡಿದು ತನ್ನಷ್ಟಕ್ಕೆ ತಾನು ಮಾತನಾಡತೊಡಗಿದಳು: “ನಿಮ್ಮನ್ನು ಕಳೆದುಕೊಂಡಂದಿನಿಂದ ದೇವರಿಗೆ ನಾನೆಷ್ಟು ಮೊರೆಯಿಟ್ಟೆ, ‘ಭಗವಂತಾ, ನಾನಿನ್ನು ಸಹಿಸೆ—ನನ್ನನ್ನು ಕಟ್ಟಿಕೊಂಡು ಹೋಗು!’ ಎಂದು ಆದರವನು ಕೇಳಲಿಲ್ಲ, ನೀವೂ ಕೇಳಲೊಲ್ಲಿರಿ ನಾನಿನ್ನೇನು ಮಾಡಲಿ!”

ಮಹಿಮ ಏನೊಂದೂ ಉತ್ತರ ಕೊಡದೆ ಹೊರಗೆ ಹೊರಟು ಬಂದ. ಆದರೆ ಆ ನೈರಾಶ್ಯದ ಕಂಠಸ್ವರ, ಆ ನಿರಭಿಮಾನ-ನಿಃಸಂಕೋಚ-ನಿರ್ಲಜ್ಜವಾದ ಉಕ್ತಿ ಅವನ ಚಿತ್ತವನ್ನು ಮತ್ತೆ ಹೊಯ್ದಾಡಿಸತೊಡಗಿತು ಆ ಸ್ವರವನ್ನು ಕಿವಿಯೊಳಗೆ ತುಂಬಿಕೊಂಡೇ ಅಂಗಳದಲ್ಲಿ ಎಡೆಯಾಡುತ್ತ ಮಹಿಮ ವಿಚಾರತನ್ಮಯನಾದ— ‘ಏನು ಮಾಡಬೇಕು! ತನ್ನ ಭಾರವೇ ತನಗೆ ನೀಗಲಾರದ್ದು ಅವಳಿಗೆ, ಅಂಥವಳ ತಲೆಯಮೇಲೆ ಸುರೇಶ ತನ್ನ ಸುಕೃತಿ ದುಷ್ಕೃತಿಗಳ ಗುರುಭಾರವನ್ನು ಹೇರಿ ಹೊರಟು ಹೋಗಿಬಿಟ್ಟ. ಈ ಹೊರೆಯನ್ನವಳು ಎಲ್ಲಿ ಹೋಗಿ ಹೇಗೆ ಇಳಿಸಿಕೊಳ್ಳಬೇಕು?’

ರಘುವೀರ ಅತಿ ಪರಿಶ್ರಮದಿಂದ ಸುದ್ದಿ ತಂದ ಡಿಹರಿಯ ದಾರಿಯಲ್ಲಿ, ಇಲ್ಲಿಂದ ಮೂರು ಹರದಾರಿ ದೂರದಲ್ಲಿ ಸಂತೆ ಕೂಡುವುದು; ಪ್ರಯತ್ನಿಸಿದರೆ ಅಲ್ಲಿ ಗೋಶಕಟ ಸಿಕ್ಕಬಹುದು.

ಮಹಿಮ ಅತ್ಯಂತ ವ್ಯಗ್ರನಾದುದನ್ನು ಕಂಡು ಅವನು ಸಂಕೋಚದಿಂದ ಹೇಳಿದ. “ನಾನೀಗಲೇ ಹೋಗಬಹುದು ಆದರೆ ಇಲ್ಲಿಯವರು ಯಾರೂ ಭಯದಿಂದ ಬರಲೊಪ್ಪುವುದಿಲ್ಲ ಆದರೆ ಅವ್ವಾವರು ಇಷ್ಟು ದಾರಿ—”

ಮಾತು ಅಚಲೆಯ ಕಿವಿಗೆ ಬೀಳಲು ಅವಳು “ನಡೆ” ಎಂದವಳೇ ಏಳಹೋದಳು. ಅವಳ ಕಾಲು ತತ್ತರಿಸಿದವು ಬೀಳುವವಳೇ ಮಹಿಮ ಕೈ ನೀಡಿದ ಅದನ್ನು ಗಟ್ಟಿಯಾಗಿ ಹಿಡಿದು ಸಾವರಿಸಿಕೊಂಡು ನಿಂತಳು. ಆದರೆ ಮಹಿಮನ ಮೈ ಲಜ್ಜೆಯಿಂದ ವಿತೃಷ್ಣೆಯಿಂದ ಸಂಕುಚಿತವಾಗತೊಡಗಿತು ಕೈಯನ್ನು ಬಿಡಿಸಿಕೊಳ್ಳಲು ಯತ್ನಿಸುತ್ತ ಅವನೆಂದ “ಈ-ಪೊತ್ತು ಬೇಡ, ಬಿಡು.”

"ಏಕೆ? ಈಗ ನೀವೇ ಹೇಳಿದಿರಲ್ಲ, ಇಲ್ಲಿ ಉಳಿಯುವುದು ಉಚಿತ ವಲ್ಲವೆಂದು ಮತ್ತೆ ಡಿಹರಿಯಿಂದ ಗಾಡಿ ತಂದು ಹೊರಡುವುದೆಂದರೆ ನಾಳೆ ಹೊತ್ತೇ ಮುಳುಗೀತು"

"ಆದರೆ ನೀನಿಂದು ಬಹಳ ನಿತ್ರಾಣ—"

ಅಚಲೆ ಕೈ ಬಿಡಲಿಲ್ಲ. ಹಾಗೆಯೇ ಗೋಣುಹಾಕಿ ನುಡಿದಳು. "ಇಲ್ಲ, ನಡೆಯಿರಿ ನಾನಿನ್ನು ನಿರ್ಬಲೆಯಲ್ಲ ನಿಮ್ಮ ಕೈ ಹಿಡಿದುಕೊಂಡು, ಎಷ್ಟು ದೂರ ಬೇಕಾದರೂ ನಡೆಯಿರಿ, ಬರುತ್ತೇನೆ"

"ನಡೆ"ಎಂದು ಮಹಿಮ ರಘುವೀರನನ್ನು ಮುಂದೆ ಮಾಡಿಕೊಂಡು ಹೊರಟ ಅವನು ಮನಸಿನೊಳಗೆ ನಿಟ್ಟುಸಿರಿಟ್ಟು, 'ಇದರ ಕೊನೆ ಎಲ್ಲಿ? ಈ ಯಾತ್ರೆ ಮುಗಿಯುವುದು ಯಾವಾಗ? ಯಾವ ರೀತಿ?' ಎಂದು ಸಾವಿರ ಬಾರಿ ಕೇಳಿಕೊಂಡ.

೪೪

ಡಿಹರಿಯ ಮನೆಗೆ ಹೋದ ಬಳಿಕ ಅಚಲೆ ಆ ದೊಡ್ಡ ಪಾಕೀಟನ್ನು ತೆಗೆದು ಕೊಡುತ್ತ ಹೇಳಿದಳು "ಇದು ಅವರ ಉಯಿಲು."

ಮಹಿಮ ಗ್ರಹಣ ಮಾಡಿದ ಇದರೊಳಗೇ ಸುರೇಶನ ಪತ್ರವಿರುವು ದೆಂಬುದು ಅವನಿಗೆ ನೆನಪಾಯಿತು ಪತ್ರದಲ್ಲಿ ಯಾವ ಅಚಿಂತನೀಯ ವಿವರಣೆಯನ್ನು ಬರೆದಿರಬಹುದು, ಯಾವ ದುರ್ಗಮ ರಹಸ್ಯದ ಮಾರ್ಗ ವನ್ನು ತೋರಿಸಿರಬಹುದು ಎಂಬುದನ್ನು ಈ ಕ್ಷಣವೇ ತಿಳಿಯುವುದಕ್ಕೆ ಅವನ ಮನಸಿನಲ್ಲಿ ಬಿರುಗಾಳಿಯೆದ್ದಿತು ಆ ಪ್ರಚಂಡ ಇಚ್ಛೆಯನ್ನು ಶಾಂತಮುಖದಿಂದ ದಮನಿಸಿ ಪಾಕೀಟನ್ನು ಜೇಬಿನಲ್ಲಿಟ್ಟುಕೊಂಡ

"ನೀವು ಡಿಹರಿಯಿಂದ ಇಂದೇ ಹೊರಡುವಿರೊ?" ಅಚಲೆ ಕೇಳಿದಳು.

"ಹಾಂ, ನನಗಿನ್ನು ಇಲ್ಲಿ ನಿಲ್ಲಲಿಕ್ಕೆ ಅನುಕೂಲವಿಲ್ಲ"

"ನಾನು ಕಡೆತನಕ ಇಲ್ಲಿಯೇ ಇರಬೇಕೇನು?"

ಮಹಿಮ ಒಂದು ಮುಹೂರ್ತ ಸುಮ್ಮನಿದ್ದು ಕೇಳಿದ. "ನೀ ಮತ್ತೆಲ್ಲಿಯಾದರೂ ಹೋಗಬೇಕೆನ್ನುತ್ತೀಯೇನು?"

"ನಿನ್ನೆಯಿಂದಲೂ ಇದನ್ನೇ ವಿಚಾರ ಮಾಡುತ್ತಿದ್ದೇನೆ. ಏಲಾಯ ತಿಯ ಕಡೆ ನನ್ನಂಥ ಹತಭಾಗಿನಿಯರಿಗಾಗಿ ಆಶ್ರಮ ಇರುವವೆಂದು ಕೇಳಿ ದ್ದೇನೆ ಅಲ್ಲಿ ಏನಿರುತ್ತದೆಯೋ ಗೊತ್ತಿಲ್ಲ ಈ ದೇಶದಲ್ಲಿ ಅಂಥದೇನಾ

ದರೂ—" ಮಾತನಾಡುತ್ತಿದ್ದಂತೆ ಅವಳ ದೊಡ್ಡ ದೊಡ್ಡ ಕಣ್ಣುಗಳು ಅಶ್ರುಪೂರ್ಣವಾದವು ಇಂದೇ ಮೊದಲು ಅವಳ ಕಣ್ಣಲ್ಲಿ ನೀರು ಕಾಣಿಸಿದವು

ಮಹಿಮನ ಹೃದಯಕ್ಕೆ ಕರುಣಾಸ್ತ್ರ ನಾಟಿತು ಆದರೆ ನಿಧಾನವಾಗಿ ಉತ್ತರವಿತ್ತ. "ನನಗೂ ಗೊತ್ತಿಲ್ಲ ಆದರೂ ಹುಡುಕಿ ನೋಡುತ್ತೇನೆ"

"ಯಾವಾಗಲಾದರೂ ನಿಮಗೆ ಪತ್ರ ಬರೆದರೆ ಉತ್ತರ ಕೊಡುವಿರಲ್ಲವೆ ?"

"ಅಗತ್ಯವಿದ್ದರೆ ಕೊಡುವೆ ಒಳ್ಳೆಯದು, ಗಂಟುಗದಡಿ ಕಟ್ಟಿಕೊಂಡು ಹೊರಡಬೇಕಾದರೆ ತಡವಾಗುತ್ತದೆ ನಾ ಹೋಗುತ್ತೇನೆ."

ಅಚಲೆ ತನ್ನ ಅಂತಿಮ ದುಃಖವನ್ನು ಮನಸಿನೊಳಗೇ ನಿಕ್ಷೇಪವಾಗಿ ಗಂಡನ ಅಡಿಗಳಿಗೆ ಅರ್ಪಿಸಿ, ಅಲ್ಲಿಯೇ ನೆಲದಮೇಲೆ ಹಣೆಯಿಟ್ಟು ನಮಸ್ಕರಿಸಿದಳು ಅವನು ಹೊರಟುಹೋದ ಬಳಿಕ, ಚಾಕಟ್ಟನ್ನು ಹಿಡಿದುಕೊಂಡು ಸುಮ್ಮನೆ ನಿಂತಳು

ದಾರಿಯುದ್ದಕ್ಕೂ ಮಹಿಮನ ವಿಚಾರ ನಡೆದಿತ್ತು· ರಾಮಬಾಬುಗಳ ಮನೆಯಲ್ಲಿ ಇನ್ನೊಂದು ಮುಹೂರ್ತವೂ ಇರಲಾಗುವುದಿಲ್ಲ, ಈ ಊರಲ್ಲಿಯೇ ಒಂದಿನ ತಂಗುವುದೂ ಅಸಂಭವ, ಹೇಗಾದರೂ ಮಾಡಿ ಈ ದೇಶದಿಂದ ತಾನು ಹೊರಟುಹೋಗಲೇ ಬೇಕು ಅಲ್ಲದೆ, ಒಂದೆರಡು ನಿಮಿಷ ಸ್ವಸ್ಥವಾಗಿ ಕುಳಿತು ಈ ಪಾಕೀಟನಲ್ಲಿ ಏನಿದೆ ಎಂಬುದನ್ನು ನೋಡುವುದಕ್ಕೂ, ಕಣ್ಣುಮುಚ್ಚಿ ತನ್ನೊಳಗೆ ತಾನು ನೋಡಿಕೊಳ್ಳುವುದಕ್ಕೂ ತನಗೊಂದು ಏಕಾಂತ ಸ್ಥಳದ ಅಗತ್ಯವಿದೆ

ಅಚಲೆಯನ್ನು ತಾನು ಪ್ರೀತಿಸಿದ ಪ್ರಥಮ ಇತಿಹಾಸ ಈಗ ಅಸ್ಪಷ್ಟವಾಗಿತ್ತು. ಆದರೆ ಈ ಹುಡುಗಿಯನ್ನೇ ಕೇಂದ್ರವಾಗಿಟ್ಟುಕೊಂಡು ಅವನ ಜೀವನದಲ್ಲೆದ್ದ ಬಿರುಗಾಳಿ ಪ್ರಳಯದಂತೆ ಅಸೀಮವಾದುದು, ಉಪಮಾಹೀನವಾದುದು. ಮತ್ತು ನಿಃಶಬ್ದ ಸಹನಶಕ್ತಿಯನ್ನೂ ವಿಧಾತನವನಿಗೆ ಚೊಕ್ಕ ಲೆಕ್ಕಮಾಡಿ ಕೊಟ್ಟಿಲ್ಲ ಅಂತೆಯೇ ಅವನ ಮನೆ ಒಳಗಿಂದಲೂ ಹೊರಗಿಂದಲೂ ಸುಟ್ಟುಹೋದಾಗ, ಅವನಲ್ಲಿಯೇ ನಿಂತು ಭಸ್ಮೀಭೂತನಾದರೂ ಒಂದಿಷ್ಟೂ ಅಗ್ನಿಸ್ಫುಲಿಂಗ ಜಗತ್ತಿನಲ್ಲಿ ಪಸರಿಸಲಿಲ್ಲ ಆದರೆ ಇಂದು ಅವನಾ ಶಕ್ತಿಯ ಕರೆ, ಕೇವಲ ಸಹಿಸುವುದಕ್ಕಾಗಿಯಲ್ಲ—

ಸಾಮಂಜಸ್ಯವನ್ನುಂಟುಮಾಡುವುದಕ್ಕಾಗಿ ಇಂದವನು ತನ್ನ ಆಯು-ವ್ಯಯದ ತಾಳೆ ನೋಡಿಕೊಳ್ಳಲೇಬೇಕಾಗಿದೆ ಈಗವನಿಗೊಂದು ನಿರ್ಜನ ಸ್ಥಾನ ಬೇಕೇ ಬೇಕು

ಮನೆಗೆ ಹೋಗಿ ಮಹಿಮ ಗಂಟುಗದಡಿ ಕಟ್ಟಿಕೊಂಡ ಐದರ ಗಾಡಿಗೆ ಒಂದು ಗಂಟೆ ಸಮಯವಿತ್ತು ರಾಮಬಾಬು ಕಾಶಿಯಿಂದ ಬರುವುದಕ್ಕೆ ತಡವಾಗುವ ಸಂಭವವಿದೆ, ಏಕೆಂದರೆ ನಿಜವಾಗಿಯೂ ಅವರು ಪ್ರಾಯಶ್ಚಿತ್ತ ತೆಗೆದುಕೊಳ್ಳಲು ಹೋಗಿದ್ದಾರೆ— ಅದಾಗದೆ ಜಲಸ್ಪರ್ಶ ಮಾಡುವುದಿಲ್ಲ ಎಂದೇ ಹೋಗಿದ್ದಾರೆ, ಅರ್ಥಾತ್ ಅವರನ್ನು ಕಂಡು ಬೀಳ್ಕೊಂಡು ಹೊಗಡುವುದು ಅಸಂಭವ ಆದುದರಿಂದ ಆ ಕರ್ತವ್ಯವನ್ನು ಸಂಕ್ಷಿಪ್ತ ಪತ್ರದಿಂದ ಮುಗಿಸಬೇಕೆಂದು ಅವನು ಹಾಳೆ-ಲೆಕ್ಕಣಿಕೆ ತೆಗೆದು ಕೊಂಡು ಕುಳಿತ ಒಂದೆರಡು ಸಾಲು ಬರೆಯುವಷ್ಟರೊಳಗೆ ಅವರ ಆ ಕ್ರುದ್ಧ ಮುಖದ ಉಗ್ರ ಉತ್ತಪ್ತ-ವಿದ್ರೂಪಗಳು ಅವನ ಸ್ಮರಣೆಗೆ ಬಂದವು ಅವುಗಳೊಡನೆಯೇ ಇನ್ನೊಂದು ವ್ಯಕ್ತಿಯ ಅಶ್ರುಜಲದಿಂದ ಅವರುದ್ಧ ವಾದ ಅಸ್ಪಷ್ಟ ಕಂಠಸ್ವರದ ಕಾತರ ಪ್ರಾರ್ಥನೆಯೂ ಅವನ ಕಿವಿಯಲ್ಲಿ ಧ್ವನಿಸಿತು ತಂದ್ರೆಯಲ್ಲಿಯ ವೇದನೆಯಂತೆ ಅದು ಎಷ್ಟೋ ಹೊತ್ತು ಅವನ ಚೈತನ್ಯವನ್ನು ಪೂರ್ಣ ಜಾಗ್ರತವಾಗಿಯೂ ಇಡಲಿಲ್ಲ, ನಿದ್ರಿಸಲೂ ಬಿಡಲಿಲ್ಲ,— ಆದರೆ ರಾಮಬಾಬುಗಳ ಆ ಮಾತುಗಳ ಆಘಾತದಿಂದ ಅವನ ಸಮಾಧಿ ಮುರಿಯಿತು

ಆ ಪ್ರಾಚೀನ ವ್ಯಕ್ತಿಯ ಪರಿಚಯ ಅವನಿಗೆ ಬಹಳ ದಿನದ್ದಲ್ಲ ಆದರೆ ಅವರ ದಯೆ, ಅವರ ದಾಕ್ಷಿಣ್ಯ, ಅವರ ಸಭ್ಯತೆ, ಅವರ ಅಕಪಟ ಭಗವದ್ಭಕ್ತಿ, ಅವರ ಧರ್ಮನಿಷ್ಠೆ—ಇವುಗಳ ಬಗ್ಗೆ ಅನೇಕ ಕತೆಗಳನ್ನು ಕೇಳಿದ್ದ ಅವುಗಳೀಗ ಅವನ ರುದ್ಧದೃಷ್ಟಿಯನ್ನು ಅಕಸ್ಮಾತ್ ಬೇರೊಂದು ದಿಕ್ಕಿಗೇ ತಿರುಗಿಸಿದವು

ಇದೇ ಮುದುಕ ಅಚಲೆಯನ್ನು 'ಸುರಮಕ್ಕಾ' ಎಂದು ಕರೆಯು ತ್ತಿದ್ದರು, ಮಗಳೆಂದೇ ತಿಳಿದಿದ್ದರು ಈ ಹುಡುಗಿಯ ಹೊರತು ಮತ್ತಾವ ಪರಗೋತ್ರದವಳ ಕೈಯಿಂದಲೂ ಅವರು ಉಂಡಿರಲಿಲ್ಲ—ಇದನ್ನವರೇ ಸ್ನೇಹಾವೇಶದಲ್ಲಿ ಮಹಿಮನ ಮುಂದೆ ಆಡಿದ್ದರು—ಒಮ್ಮೆಲೆ ಸರ್ವನಾಶ ಅವರಿಗೆ ಯಾವ ದಿಕ್ಕಿನಿಂದ ಬಂದು ಬಡಿಯಿತೆಂಬುದು ಮಹಿಮನ ಅನು

ಮಾನಕ್ಕೆ ನಿಲುಕದಾಯಿತು  ಆದರೆ ಒಂದು ಮಾತನ್ನು ಮಾತ್ರ ಅವನ ಮನಸು ತಿರುತಿರುಗಿ ನುಡಿಯುತ್ತಿತ್ತು—ಅಚಲೆಯ ಅಪರಾಧದ ಬಗ್ಗೆ ಹಿಂದುಗಡೆ ನೋಡುವ. ಆದರೀ ಆಚಾರ ಪರಾಯಣ ಬ್ರಾಹ್ಮಣನ ಧರ್ಮ ಸತ್ಯಧರ್ಮವೇ ? ಒಬ್ಬ ಸಾಮಾನ್ಯ ಯುವತಿಯ ವಂಚನೆಯಿಂದ ಅದು ಮಣ್ಣುಪಾಲಾಗಬೇಕೆ ? ಅತ್ಯಾಚಾರಿಗಳ ಆಘಾತದಿಂದ ತನ್ನನ್ನೂ ಪರರನ್ನೂ ರಕ್ಷಿಸಲಾರದ—ಅದೇಕೆ, ಅದನ್ನು ಮೃತ್ಯುವಿನಿಂದ ರಕ್ಷಿಸುವುದಕ್ಕೇ ಜನ ಸರ್ವಶಕ್ತಿಯನ್ನೂ ಪ್ರತಿನಿತ್ಯ ಉಪಯೋಗಿಸಬೇಕಾಗುತ್ತದಲ್ಲ—ಈ ಧರ್ಮ ಎತರ ಧರ್ಮ ? ಮಾನವ ಜೀವನದಲ್ಲಿ ಇದರ ಪ್ರಯೋಜನವೇನು ? ಸ್ನೇಹದ ಮರ್ಯಾದೆಯನ್ನುಳಿಸದ, ನಿಸ್ಸಹಾಯ ಆರ್ತ ನಾರಿಯನ್ನು ಮೃತ್ಯುಮುಖದಲ್ಲಿ ತಳ್ಳಲು ಹಿಂದುಮುಂದು ನೋಡದ, ಅತಿಶಯ ಸ್ನೇಹಶೀಲ ವೃದ್ಧನನ್ನೂ ಚಂಚಲನನ್ನಾಗಿ, ಇಷ್ಟೊಂದು ನಿಷ್ಠುರನನ್ನಾಗಿ ಮಾಡಿದ ಧರ್ಮ ಎತರ ಧರ್ಮ ? ಇದನ್ನು ಅಂಗೀಕರಿಸಿದವರು ಯಾವ ಸತ್ಯವಸ್ತುವನ್ನು ವಹಿಸುತ್ತಿದ್ದಾರೆ ? .ಧರ್ಮ ಕವಚದಂತೆ ಆಘಾತಗಳನ್ನು ಸಹಿಸುವುದಕ್ಕಾಗಿಯೇ ಇರುವುದು ! ಅದೇ ಅದರ ಕೊನೆಯ ಪರೀಕ್ಷೆ!

ತನ್ನ ಪಲಾಯನವಾದರೂ ಏನು ಮತ್ತೆ ! ಎಂದೊಮ್ಮೆಗೆ ಅವನಿಗೆನಿಸಿತು  ಆದರೆ ಆ ಯೋಚನೆಯನ್ನೇ ಅಷ್ಟೇ ತ್ವರಿತವಾಗಿ ಎರಡೂ ಕೈಗಳಿಂದ ಕಿತ್ತೊಗೆದು ಲೆಕ್ಕಣಿಕೆಯನ್ನೆತ್ತಿಕೊಂಡು  ಆ ಚಿಕ್ಕ ಪತ್ರವನ್ನು ಮುಗಿಸಿ ನಿಲ್ದಾಣಕ್ಕೆ ಹೊರಟ

ಗಾಡಿ ಬಂತು. ಮಹಿಮ ಒಂದು ಡಬ್ಬಿಯ ಬಾಗಿಲು ತೆರೆದು ಏರಲುದ್ಯುಕ್ತನಾದ. ಆಗ ಅದೇ ಬಾಗಿಲಿಂದ ಒಬ್ಬ ಮುದುಕ ಸದ್ಗೃಹಸ್ಥರು ವಿಧವೆ ಹುಡುಗಿಯೊಬ್ಬಳ ಕೈಹಿಡಿದುಕೊಂಡು ಕೆಳಗಿಳಿದರು

"ಇದೇನು, ಮಹಿಮ !" ಎಂದರು ಮುದುಕ.

ಮೃಣಾಲ ಬಾಗಿ ನಮಸ್ಕರಿಸಿ ನುಡಿದಳು· "ಅಣ್ಣಾ, ಎಲ್ಲಿಗೆ ಹೊರಟಿದ್ದೀ ?"

ಇಬ್ಬರೂ ವಿಸ್ಮಯಾಪನ್ನರಾಗಿ ನೋಡುತ್ತಾರೆ —ಮಹಿಮ ಗಾಡಿಯಲ್ಲಿ ಕುಳಿತಿದ್ದ  "ನಾನು ಕಲಕತ್ತೆಗೆ ಹೊರಟಿದ್ದೇನೆ  ಸುರೇಶಬಾಬುಗಳ ಮನೆ ಎಂದು ಹೇಳಿದರೆ ಸಾಕು  ಎಕ್ಕದವರು ಒಯ್ದು ಮುಟ್ಟಿಸುವರು. ಅಲ್ಲಿ ಅಚಲೆ ಇದ್ದಾಳೆ," ಎಂದು ಹೇಳಿದ.

ಕೇದಾರಬಾಬು ದಿಙ್ಮೂಢರಂತೆ ನಟ್ಟನೋಟದಿಂದ ನೋಡುತ್ತ ನಿಂತರು ಮಹಿಮ ಹೇಳಿದ : “ ಸುರೇಶ ತೀರಿಕೊಂಡ ಅಚಲೆ ಆಶ್ರಮದ ವಿಷಯ ಕೇಳಿದಳು ಮೃಣಾಲ, ಆದರೆ ಅದಕ್ಕೆ ನನ್ನಿಂದ ಉತ್ತರ ಕೊಡ-ಲಾಗಲಿಲ್ಲ ನಿನ್ನಿಂದವಳಿಗೆ ಬಹುಶಃ ಉತ್ತರ ಸಿಕ್ಕಬಹುದು. ”

ಮೃಣಾಲ ಅವನನ್ನೇ ದಿಟ್ಟಿಸುತ್ತ ಹೇಳಿದಳು . “ ಸಿಕ್ಕಬಹುದಣ್ಣಾ. ಆದರೆ ನನ್ನ ಸಕಲ ಶಿಕ್ಷಣವೂ ನಿನ್ನಲ್ಲಿಯೇ ಆದದ್ದು ಆಶ್ರಮ ಎನ್ನು ಅಥವಾ ಆಶ್ರಯ ಎನ್ನು, ಅವಳಿಗೆ ಎಲ್ಲುಂಟೆಂಬುದನ್ನು ನಾನು ಅತ್ತಿಗೆಗೆ ತಿಳಿಸಬಲ್ಲೆ. ಅದು ಕೂಡ ನಿನ್ನ ಕೊಡುಗೆಯೇ ”

ಮಹಿಮ ಮಾತನಾಡಲಿಲ್ಲ ಆ ತೀಕ್ಷ್ಣ ದೃಷ್ಟಿಯ ರಮಣಿಯಿಂದ ತನ್ನನ್ನುಳಿಸಿಕೊಳ್ಳಲಿಕ್ಕೆಂದೋ ಏನೋ ಮುಖ ತಿರುಗಿಸಿದ.

ಗಾಡಿ ಸಿಳ್ಳುಹಾಕಿತು. ಮೃಣಾಲ ವೃದ್ಧನ ಜೋಲುಬಿದ್ದ ಬಲಗೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಹೇಳಿದಳು : “ ಅಪ್ಪಾ, ನಾವು ಹೋಗುವ. ”

# ಶಬ್ದ ಪರಿಚಯ

ಅಟೆ : ತಡೆ

ಅಡ್ಡಣಿಗೆ : ಮೂರುಕಾಲಿನ ಚಿಕ್ಕ ಮೇಜು

ಅವಘಡ : ಅಪಘಟನೆ, ಕೆಟ್ಟ ವಿಪತ್ತು

ಅಸಗೊಳ್ಳು : ಅಂಕೆಗೆ ಬರು

ಅಸರಂತ : ಯಾವಾಗಲೂ

ಅಂತರಿಕೆಯಲ್ಲೆ : ಇಷ್ಟರಲ್ಲಿಯೇ

ಇದ್ದಕಿದ್ದವ : ಇದ್ದಕ್ಕಿದ್ದ ಹಾಗೆಯೆ ಎಂಬರ್ಥದಲ್ಲಿ

ಇರಸಲು ಹನಿ : ಗಾಳಿಯಿಂದ ತೂರಿ ಬರುವ ಅಡ್ಡ ಹನಿ

ಇಂರಾಜಿ : ಇಂಗ್ಲಿಷು

ಈಸಿಕೊಳ್ಳು : ಇಸಿದುಕೊಳ್ಳು

ಉಮರು : ಸೆಕೆ

ಎಕ್ಕ : ಒಂಟೆತ್ತಿನ ಬಂಡಿ

ಎಕ್ಕಟಿ : ಏಕಾಕಿ

ಎಟಕು : ನಿಲುಕು

ಎಪ್ಪಿಹಾಕು : ಮೋಸಗೊಳಿಸು

ಒಕಾಲತ್ತು : ವಕೀಲಿಕೆ

ಒಂಚೂರು : ಒಂದು ಚೂರು, ಕೊಂಚ

ಒಗೆತನ : ಸಂಸಾರ

ಕಕಲಾತಿ : ವಾತ್ಸಲ್ಯ

ಕಚ್ಚಿನಿಸು : ಛೀ ಎನಿಸು

ಕತ್ತಲಲ್ಲಿ ತಗಣಿ ಬಿಡು : ಪ್ರಚ್ಛನ್ನ ಉದ್ದೇಶದಿಂದ ಕೆಣಕು

ಕಲಿಕಾತೆ : ಕಲಕತ್ತೆ

ಕಸಕು : ಕಚ್ಚಾ

ಕಾಯಾಸ : ಅನುಮಾನ

ಕೆಂಜಿಗವಾಗು : ಕೆಂಪಾಗು

ಕೇತ್ಲಿ : ಕಿಟ್ಲಿ, ಸೊಂಡಿಲಿನ ಚಹಾ ಪಾತ್ರೆ

ಕೈಗುಟಗೆ : ಹಿರಿಯರ ಕೈಕೆಳಗೆ ಚಿಕ್ಕಪುಟ್ಟ ಕೆಲಸ ಮಾಡಲು ತಕ್ಕ ವಯಸ್ಸಿನ

ಖ್ರಿಸ್ತಾನ್ : ಕ್ರಿಶ್ಚನ್

ಗೊಂಗಡಿ : ಕಂಬಳಿ

ಚತ್ತರಿಗೆ : ಕೊಡೆ

ಚಬ್ಬಿಶ : ಇಪ್ಪತ್ತಾರು

ಚರಿಗೆ : ತಂಬಿಗೆ

ಚಾ : ಚಹ

ಚಾ-ರುಟಿ : ಚಹಾ ಬ್ರೆಡ್ಡು

ಚಾಲುವರಿ : ಪರಿಪರಿಯಿಂದ ಹೇಳಿಕೊಳ್ಳು

ಚೇಯಾರ : ಕುರ್ಚಿ

ಚೌಕಿ : ಕುರ್ಚಿ

ಚಾಕಣಿ : ಮುಚ್ಚಳಿಕೆ

ಜಿಕ್ಕಿಸು . ಮೋಸಮಾಡು
ಟಿಉಶನ್ . ಟ್ಯೂಶನ್
ಡಬ್ಬ : ಹೊಟ್ಟೆ ಕೆಳಗಾಗಿ ಬಿದ್ದ ಅವಸ್ಥೆ
ಡಾಕ್ತ್ರಾರಿ : ಡಾಕ್ಟರಿಕೆ
ಕ್ರುಯಾರ್ ಡ್ರಾಅರ್
ತಕ್ಕೆ : ಒರಗು ದಿಂಬು
ತಂಬಿಗೆ ತೆಗೆದುಕೊಂಡು ಹೋಗು ಮಲವಿಸರ್ಜನೆಗೆ ಹೋಗು
ತಾಲಿ . ತಪ್ಪು
ತೇವ : ಹಸಿ
ತೊರಂಕ್ : ಟ್ರಂಕ್
ದಾವತಿ : ಶ್ರಮ
ದಿಕ್ಕೇಡಿ (ದಿಕ್ಕು+ಗೇಡಿ) : ಗತಿಗೆಟ್ಟ
ಧಪ್ಪಕ್ಕಿ · ಗಡುತರ ಅಕ್ಕಿ, ದೊಡ್ಡಕ್ಕಿ
ನಸುಕಿಲೆ : ನಸುಕಿನಲ್ಲಿ
ಪಂಚೇತಿ : ಪಂಚಾಯತಿ, ವಿಚಾರಣೆ
ಪಾತಾಳಗಡೆ . ಆಳವಾದ ನೀರಿನಲ್ಲಿ ಮುಳುಗಿದ ಒಡವೆಗಳನ್ನು ತೆಗೆಯುವ ಕೊಕ್ಕೆಗಳುಳ್ಳ ಕಬ್ಬಿಣದ ಸಾಧನ
ಪಾಸಟಿ : ಸಮಾನ, ಜೋಡು
ಬಲುಭಾತ ಹೊಸ ಮೊದಲಗಿತ್ತಿಯನ್ನು ಮನೆತುಂಬಿಸಿಕೊಳ್ಳುವಾಗ ಮಾಡುವ ಸಮಾರಂಭ
ಬಡಕಾಟ ಕಟ್ಟಿಗೆಯಂತೆ ಬಡಕಲಾದ
ಬಿಲಿತಿ : ವಿಲಾಯತಿ
ಮಕಾಳ : ಮಂದ
ಮರಕಳಿಸು · ತಿರುಗಿ ಬರು
ಮಳಗೆ ಹಾಕು ಅಂಗಡಿಯ ಬಾಗಿಲು ಇಕ್ಕು (ಮುಚ್ಚು)
ಮಾಟ ಜಾದು
ರಿಣ . ಋಣ, ಉಪಕಾರ ಭಾರ
ರೇಲಿಜ್ : ಕಟಾಂಜನ, ಕಟಕಟೆ
ಲಂತನು : ಲಾಟೀನು, ಕಂದೀಲು
ಲಾಯಿಮ್ ಜೋಸ್ : ಲಿಂಬೆಯ ಪಾನಕ
ಲುಂಠಿತ · ಹೊರಳಾಡುತ್ತಿದ್ದ
ವಾವಿ · ಶರೀರಸಂಬಂಧ
ಸಾಗರಬೀಳು . ಮುಂದಕ್ಕೆ ಬಾಗು
ಸಿಟ್ವು ಸಿಟ್ಟಲಿ : ಸಿಟ್ಟು ಸಿಟ್ಟಿನಿಂದ
ಸಿರನೀ ಒಂದು ಮಿಠಾಯಿ
ಹೆರಲಿ : ಅಪಪ್ರಚಾರ
ಹಾವುಗೆ · ಪಾದುಕೆ
ಹಾಸಪಾತಾಲ : ಆಸ್ಪತ್ರೆ